ವಿತ್ತೀಯ ಕಾರ್ಯಕಲಾಪ

೨೦೦೭-೦೮ ನೇ ಸಾಲಿನ ಆಯವ್ಯಯದ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ :-

ಅಧ್ಯಕ್ಷರು : ಇವತ್ತು ಆಯವ್ಯಯದ ಮೇಲೆ ಚರ್ಚೆ ಮಾಡುವುದಕ್ಕೆ ಒಟ್ಟು ೩೭ ಶಾಸಕರು ಇದ್ದಾರೆ. ಈ ದಿನ ೫ ಗಂಟೆಯೊಳಗೆ ಚರ್ಚೆ ಮುಗಿಯಬೇಕು. ದಯಮಾಡಿ ಪ್ರತಿಯೊಬ್ಬರು ಹತ್ತತ್ತು ನಿಮಿಷ ಮಾತ್ರ ಮಾತನಾಡಿ ಮುಗಿಸಬೇಕು. ಈಗ ಶ್ರೀ. ಕೆ.ಎನ್.ರಾಜಣ್ಣನವರು ಮಾತನಾಡಿ.

ಶ್ರೀ ಕೆ.ಎನ್. ರಾಜಣ್ಣ (ಕ್ಯಾತಸಂದ್ರ) : ಮಾನ್ಯ ಅಧ್ಯಕ್ಷರೇ, ಸಾಮಾನ್ಯವಾಗಿ "ಈ ಕಡೆ ಎಲ್ಲ ಕೈ ಎತ್ತುವವರು". ಹಾಗಾಗಿ ನೀವೆಲ್ಲ ಕುಳಿತುಕೊಳ್ಳಿ, ಆ ಕಡೆ ಅಂದರೆ ವಿರೋಧ ಪಕ್ಷದಲ್ಲಿ ಕುಳಿತವರು ಮಾತನಾಡಲಿ" ಎನ್ನುವ ಮನೋಭಾವ ಸೃಷ್ಟಿಯಾಗಿತ್ತು. ಅದಕ್ಕೆ ತಾವು ತೆರೆ ಎಳೆದು ಚರ್ಚೆಯಲ್ಲಿ ಭಾಗವಹಿಸಲು ನಮಗೂ ಅವಕಾಶ ಮಾಡಿಕೊಟ್ಟಿದ್ದೀರಿ. ಅದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ನಮ್ಮ ಸಮ್ಮಿಶ್ರ ಸರ್ಕಾರವಾದ ಕರ್ನಾಟಕ ಅಭಿವೃದ್ಧಿ ರಂಗವು ಎರಡನೇ ಬಜೆಟ್ ಅನ್ನು ಮಂಡಿಸಿದೆ. ಈ ಆಯವ್ಯಯ, ಸುಧೀರ್ಘವಾದ ಆಯವ್ಯವೆಂದು ಹೇಳಿದರೆ ತಪ್ಪಾಗುವುದಿಲ್ಲ. ಈ ಬಜೆಟ್ ಪುಸ್ತಕದಲ್ಲಿ ಸುಮಾರು ೧೨೬, ೧೨೭ ಪುಟಗಳು ಇವೆ. ಈ ಸುಧೀರ್ಘವಾದ ಆಯವ್ಯಯದಲ್ಲಿ ನಮ್ಮ ಸಾಧನೆಗಳು ಮತ್ತು ಮುಂದೆ ನಮ್ಮ ಸರ್ಕಾರ ಮಾಡತಕ್ಕಂಥದ್ದಕ್ಕೆ ಮಾರ್ಗಸೂಚಿ ಇರತಕ್ಕಂಥದ್ದು, ಅದು ಈ ಆಯವ್ಯಯದಲ್ಲಿ it reflects ಎಂದು ನಾನಂದುಕೊಂಡಿದ್ದೇನೆ. ಮುಂದಿನ ವರ್ಷ ನಾವು ಯಾವ ದಿಕ್ಕಿನಲ್ಲಿ ಕೆಲಸ ಮಾಡುತ್ತೇವೆ, ನಮ್ಮ ಆದ್ಯತೆ ಏನು ಎನ್ನುವುದನ್ನೂ ಕೂಡ ನಮ್ಮ ಸರ್ಕಾರ ಮುಂಡಿಸಿದಂಥ ಆಯವ್ಯಯದಲ್ಲಿ ಸ್ಪಷ್ಟವಾಗಿ ಸೂಚಿಸಲಾಗಿದೆ. ಬಹಳಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡತಕ್ಕಂಥದ್ದರ ಬಗ್ಗೆ ಹೇಳಲಾಗಿದೆ. ಮೊದಲನೆಯದಾಗಿ, ಒಂದು ದಿಟ್ಟವಾದ ನಿಧಾರವೇನೆಂದರೆ ಸಾರಾಯಿ ನಿಷೇಧ ಎನ್ನತಕ್ಕಂಥದ್ದು, ಇನ್ನೊಂದು ಲಾಟರಿ ನಿಷೇಧ. ಸುಮಾರು ೧೯೦೦ ಕೋಟಿಯಷ್ಟು ಸಾರಾಯಿ

ಮೂಲದಿಂದಲೇ ಬರತಕ್ಕಂಥ ಆದಾಯವಾಗಿದೆ. ಸ್ತ್ರೀಶಕ್ತಿ ಸಂಘಗಳು ಮತ್ತು ಇತರೆ ದಲಿತ ಸಂಘಟನೆಗಳು ಇವೆಲ್ಲವುಗಳ ಒತ್ತಾಯದ ಮೇರೆಗೆ ರಾಜ್ಯದ ಜನರ ಹಿತದೃಷ್ಟಿಯಿಂದ ಸರ್ಕಾರದ ಕಡೆಯಿಂದ ಸಾರಾಯಿ ನಿಷೇಧ ಮಾಡಾಗುತ್ತಿದೆ. ಅಬಕಾರಿಯಲ್ಲಿ ಬರತಕ್ಕಂಥ ಆದಾಯದ ಸುಮಾರು ೪೩% ರಷ್ಟು ಅಂದರೆ, ೧೯೦೫ ಕೋಟಿ ಸಾರಾಯಿ ನಿಷೇಧದಿಂದ ಸರ್ಕಾರಕ್ಕೆ ಬರತಕ್ಕಂಥ ಆದಾಯ ಕಡಿತವಾಗುತ್ತದೆ. ಅಷ್ಟಿದ್ದರೂ ಕೂಡ ಸರ್ಕಾರ ದಿಟ್ಟವಾದ ಒಂದು ಹೆಜ್ಜೆಯನ್ನು ಇಟ್ಟಿರತಕ್ಕಂಥದ್ದು ಸ್ವಾಗತಾರ್ಹವಾಗಿದೆ. ಆದರೆ ಈ ಸಾರಾಯಿ ನಿಷೇಧದಿಂದ ಕಳ್ಳಭಟ್ಟಿದಂಥೆ ಹೆಚ್ಚಾಗದ ರೀತಿಯಲ್ಲಿ ಸರ್ಕಾರ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳತಕ್ಕಂಥದ್ದು ಬಹಳ ಮುಖ್ಯವಾಗಿದೆ. ಏಕೆಂದರೆ, ಹಿಂದೆ ಗುಜರಾತ್ ರಾಜ್ಯದಲ್ಲಿ ಸಾರಾಯಿ ನಿಷೇಧವನ್ನು ಮಾಡಿದರಿಂದಾದ ಪರಿಣಾಮವನ್ನು ಅಧ್ಯಯನ ಮಾಡಲಿಕ್ಕೆ ನಮ್ಮ ಹಿಂದಿನ ಸಚಿವರುಗಳು ಕೂಡ ಅಲ್ಲಿಗೆ ಹೋಗಿ ಬಂದು, ಅವರು ಸಹ ಒಂದು ವರದಿಯನ್ನು ಕೊಟ್ಟಿದ್ದು, ಅದು ಕೂಡ ಸರ್ಕಾರದಲ್ಲಿದೆ. ಆ ವರದಿಯ ಹಿನ್ನಲೆಯಲ್ಲಿ ಕಠಿಣವಾದ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಾನು ಸರ್ಕಾರಕ್ಕೆ ಮನವಿ ಮಾಡಲಿಕ್ಕೆ ಬಯಸುತ್ತೇನೆ. ಇನ್ನು ಜಲಸಂಪನ್ಮೂಲ ಇಲಾಖೆ ಬಗ್ಗೆ ಹೇಳುವುದಾದರೆ, ಮಾನ್ಯ ಸಚಿವರಾದ ಶ್ರೀ ಈಶ್ವರಪ್ಪನವರು ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಬಹಳಷ್ಟು ಯೋಜನೆಗಳನ್ನು ಮುಗಿಸತಕ್ಕಂಥ ಒಂದು ದಿಟ್ಟ ನಿರ್ಧಾರವನ್ನು ತೆಗೆದುಕೊಂಡಿದ್ದಾರೆ. ಅದು ಕೂಡ ಸ್ವಾಗತಾರ್ಹವಾಗಿದೆ. ಮಹದಾಯಿ ಯೋಜನೆ ಬಗ್ಗೆ ಕೂಡ, ಆದಷ್ಟು ಜಾಗ್ರತೆ ಮುಗಿಸುವುದಕ್ಕೆ ಅವರು ಯೋಜನೆಯನ್ನು ರೂಪಿಸಿದ್ದಾರೆ. ವಿಶೇಷವಾಗಿ ಭದ್ರಾ, ಮೇಲ್ದಂಡೆ ಯೋಜನೆಗೆ ಕೆ.ಸಿ. ರೆಡ್ಡಿಯವರ ವರದಿಯನ್ವಯ ಸುಮಾರು ೪೧೫೦ ಕೋಟಿ ರೂ.ಗಳ ಖರ್ಚು ಬರುತ್ತದೆನ್ನುವ ಒಂದು ಅಂದಾಜನ್ನು ಮಾಡಿದ್ದಾರೆ. ಅದರ ವೆಚ್ಚ ಇನ್ನೂ ಹೆಚ್ಚಾಗಬಹುದೆಂದು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಆದರೂ ಕೂಡ ಆ ವರದಿಯನ್ವಯ ಸರ್ಕಾರ ಇನ್ನೂ ಕೂಡ ಯಾವುದೇ

ಒಂದು ನಿರ್ದಿಷ್ಟವಾದ ಕಾರ್ಯಕ್ರಮವನ್ನು ಘೋಷಣೆ ಮಾಡಲಿಲ್ಲ ಎಂದು ಹೇಳಬೇಕಾಗುತ್ತದೆ. ಕೆಲವು ಭಾಗದಲ್ಲಿ ಅದಕ್ಕೆ ವಿರೋಧ ಇರಬಹುದು. ವಿರೋಧ ಇದ್ದಂಥ ಸಂದರ್ಭದಲ್ಲಿ ಕೂಡ ೧೦ ಜನರಿಗೆ ಅನನುಕೂಲವಾಗಿ ೯ ಜನರಿಗೆ ಸಹಾಯವಾಗುತ್ತದೆನ್ನುವ ಸಂದರ್ಭ ಇದ್ದಾಗ ನಾವು ೧೦ ಜನರನ್ನು ಸಮಾಧಾನಪಡಿಸಿಯಾದರೂ ಕೂಡ ಆ ಕಾರ್ಯಕ್ರಮವನ್ನು ಜಾರಿ ಮಾಡತಕ್ಕಂಥದ್ದಾಗಬೇಕು. ಈ ಸಂದರ್ಭದಲ್ಲಿ ಮಾನ್ಯ ಈಶ್ವರಪ್ಪನವರಿಗೆ ಮತ್ತೊಮ್ಮೆ ನಾನು ನೆನಪಿಸತಕ್ಕಂಥದ್ದು ಏನೆಂದರೆ, ನಿಮ್ಮ ಅಧಿಕಾರ ಅವಧಿಯಲ್ಲಿ ಈ ಯೋಜನೆಗಳಿಗೆ ತಾತ್ವಿಕವಾದಂಥ ಕೊನೆಯನ್ನು ಕಾಣಲಿಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಹಾಗೆಯೇ ಬಹಳಷು ವರ್ಷಗಳಿಂದ ಇರತಕ್ಕಂಥ ಈ ಭದ್ರಾ ಮೇಲ್ದಂಡೆ ಯೋಜನೆಗೆ ಸಹ, ಸರ್ಕಾರ ಹೆಚ್ಚು ಹಣಕಾಸಿನ ಸೌಲಭ್ಯವನ್ನು ಒದಗಿಸಿ ಆ ಒಂದು ಕಾರ್ಯಕ್ರಮವನ್ನು ರೂಪಿಸಬೇಕು. ಆ ಭದ್ರಾ ಮೇಲ್ದಂಡೆ ಯೋಜನೆ ಕೂಡ Scheme-A ನಲ್ಲಿರತಕ್ಕಂಥ ನೀರಿಗೋಸ್ಕರ ಈಗ project ಮಾಡಿದ್ದಾರೆ. ಕಾಲಾರದಲ್ಲಿ ಕೇವಲ ಕ್ಯಾಲನೂರು ಕೆರೆ ಒಂದಕ್ಕೆ ಮಾತ್ರ ಬರುತ್ತದೆ, ಬೇರೆಯದಕ್ಕೆ ಬರುತ್ತಿಲ್ಲ, ನಮಗೇನೂ ಅನುಕೂಲ ಇಲ್ಲ. ಮಾನ್ಯ ಶ್ರೀರಾಮರೆಡ್ಡಿ ಅದರ ಬಗ್ಗೆ ಹೇಳಲಿಕ್ಕೆ ಹೊರಡುತ್ತಿದ್ದರೆಂದು ತೋರುತ್ತದೆ. ಆದರೆ, ಬಚಾವತ್ ಅವಾರ್ಡ್ ಃ ಸ್ಕೀಂನಲ್ಲಿ ಬರತಕ್ಕಂಥ ಹೆಚ್ಚುವರಿ ನೀರಿನಿಂದ ಹೆಚ್ಚು ಸಹಾಯ ಕೋಲಾರ ಜಿಲ್ಲೆಗೂ ಆಗುತ್ತದೆ ಮತ್ತು ನಮ್ಮ ಜಿಲ್ಲೆಯಲ್ಲೂ ಕೂಡ ಈಗ ಕೈಬಿಟ್ಟಿರತಕ್ಕಂಥ ಪಾವಗಡ ತಾಲ್ಲೂಕಿಗೆ ಕೂಡ ಅದು ಸೇರ್ಪಡೆ ಯಾಗತಕ್ಕಂಥ ಸಾಧ್ಯತೆ ಇದೆ. ಆದ್ದರಿಂದ ಹೆಚ್ಚು ಬರಗಾಲ ಪೀಡಿತ ಪ್ರದೇಶಗಳಲ್ಲಿ ಈ ಯೋಜನೆಯಿಂದ ಸಹಾಯವಾಗುತ್ತದೆ. ಆದ್ದರಿಂದ, ಆದ್ಯತೆ ಮೇಲೆ ಆ ಕಾರ್ಯಕ್ರಮವನ್ನು ರೂಪಿಸಬೇಕೆಂದು ನಾನು ಮತ್ತೊಮ್ಮೆ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಇನ್ನು ಬೇರೆ ಬೇರೆ special vehicles, ಅದು KBJNL ಇರಬಹುದು, ಕರ್ನಾಟಕ ನೀರಾವರಿ ನಿಗಮ ಇರಬಹುದು, ಕಾವೇರಿ ನೀರಾವರಿ ನಿಗಮ ಇರಬಹುದು, ಈ ನಿಗಮಗಳಿಗೆ ಇನ್ನೂ ಹೆಚ್ಚಿನ ಹಣಕಾಸನ್ನು ಒದಗಿಸಬೇಕಾಗುತ್ತದೆ. ಅವರು ಅಲ್ಲಿ market borrowing ಮಾಡುತ್ತಾರೋ, ಅಥವಾ ಬೇರೆ ರೀತಿ ಹಣಕಾಸನ್ನು,

ಸಂಪನ್ಮೂಲಗಳನ್ನು, ಕ್ರೋಢೀಕರಣ ಮಾಡುವ ನಿಟ್ಟಿನಲ್ಲಿ ಅವರಿಗೆ ಹೆಚ್ಚು ಶಕ್ತಿಯನ್ನು ತುಂಬಿ, ಈ ಯೋಜನೆಗಳನ್ನು ಪೂರ್ಣ ಮಾಡಿಸಬೇಕೆಂದು ನಾನು ಸರ್ಕಾರಕ್ಕೆ ತಮ್ಮ ಮೂಲಕ ಒತ್ತಾಯವನ್ನು ಮಾಡುತ್ತೇನೆ. ಹಾಗೆಯೇ, ಸಣ್ಣ ಕೈಗಾರಿಕೆಗಳಿರತಕ್ಕಂಥ ಸಬ್ಸಿಡಿ ಹಣವನ್ನು ಆದಷ್ಟು ಜಾಗ್ರತೆ ಎಲ್ಲ ಪಾವತಿ ಮಾಡುತ್ತೇವೆ ಮತ್ತು ಹೊಸದಾಗಿ brick industry ಇರಬಹುದು, ಬೇರೆ ಬೇರೆ industryಗಳನ್ನು ಏನು ಕೈಬಿಟ್ಟಿದ್ದರೋ ಅದನ್ನೂ ಕೂಡ ನಾವು ಸೇರಿಸಿ ಹಣವನ್ನು ಕೊಡುತ್ತೇವೆಂದು ನಮ್ಮ ಮಾನ್ಯ ಕಟ್ಟಾ ಸುಬ್ರಮಣ್ಯ ನಾಯ್ಡುರವರು ಈ ಹಿಂದೆ ಒಂದು ಸಂದರ್ಭದಲ್ಲಿ ಉತ್ತರ ಕೊಡುತ್ತಾ ಹೇಳಿದ್ದರು. ಇದುವರೆವಿಗೂ ಕೂಡ ಸಣ್ಣ ಕೈಗಾರಿಕೆಗಳ ಸಬ್ಸಿಡಿ ಹಣ ಸಕಾಲಕ್ಕೆ ಸರಿಯಾಗಿ ಪಾವತಿಯಾಗದೇ ಆ ಕೈಗಾರಿಕೆಗಳು ತೊಂದರೆಗೆ ಒಳಗಾಗಿದೆ. ಈ ಹಿನ್ನಲೆಯಲ್ಲಿ ಆ ಸಣ್ಣ ಕೈಗಾರಿಕೆಗಳ ಸಬ್ಸಿಡಿ ಹಣವನ್ನು ಜರೂರಾಗಿ ಆ ಕೈಗಾರಕೆಗಳಿಗೆ ಕೊಡಿಸತಕ್ಕಂಥ ಪ್ರಯತ್ನವನ್ನು ಮಾಡಬೇಕು. ಹಾಗೆಯೇ, ಹಳ್ಳಿಗಾಡಿನಲ್ಲಿ ಮಾಡಿರತಕ್ಕಂಥ poultry farm ಇರಬಹುದು, brick industry ಇರಬಹುದು, ಇವುಗಳ ಬಗ್ಗೆ ಇದೇ ಸದನದಲ್ಲಿ ಸರ್ಕಾರ ಭರವಸೆ ಕೊಟ್ಟಿತ್ತು. ಆದರೆ, ಇದುವರೆವಿಗೂ ಕೂಡ ಅದರ ಬಗ್ಗೆ ಒಂದು ನಿರ್ದಿಷ್ಟವಾದ ಸರ್ಕಾರದ ಆದೇಶ ಹೊರಬರಲಿಲ್ಲ. ಅವರಿಗೆ ಸಬ್ಸಿಡಿ ಹಣ ಸಹ ಬರಲಿಲ್ಲ. ಹೀಗಾಗಿ ಅವರು ಕೂಡ ಇವತ್ತು ಬರುತ್ತದೆ, ನಾಳೆ ಬರುತ್ತದೆ ಎನ್ನುವ ನಿರೀಕ್ಷೆಯಲ್ಲಿಯೇ ಇದ್ದು ಬಹಳ ತೊಂದರೆಗೆ ಒಳಗಾಗಿದ್ದಾರೆ. ಈ ಹಿನ್ನಲೆಯಲ್ಲಿ ಆ ಒಂದು ವಿಚಾರದಲ್ಲಿ ಸದನದಲ್ಲಿ ಕೊಟ್ಟಿರತಕ್ಕಂಥ ಆ ಭರವಸೆಯನ್ವಯ ಸರ್ಕಾರ ಶೀಘ್ರವಾಗಿ ಕ್ರಮವನ್ನು ತೆಗೆದುಕೊಳ್ಳಬೇಕೆನ್ನುವ ಮನವಿಯನ್ನು ಸಹ ಈ ಸಂದರ್ಭದಲ್ಲಿ ಮಾಡಲಿಕ್ಕೆ ಬಯಸುತ್ತೇನೆ. ಇನ್ನು KSFC ಯಲ್ಲಿ ವಿಶೇಷವಾಗಿ ಸುಮಾರು ೫೪ ಕೋಟಿ ಹಣವನ್ನು ಮೀಸಲಿಟ್ಟಿದ್ದಾರೆ. ಇದು ಸ್ವಾಗತಾರ್ಹ ವಾದದ್ದು. ಆದರೆ, ಈ ಹಣ ಯಾರಿಗೆ ದೊರಕಬೇಕೆನ್ನುವ ತೀರ್ಮಾನ ಮಾಡುವ ಸಂದರ್ಭದಲ್ಲಿ, ಯಾರು ತೊಂದರೆಯಲ್ಲಿದ್ದಾರೆ ಅಂಥವರಿಗೆ ಸಹಾಯ ಮಾಡಬೇಕು. ಈಗ ನೇಕಾರರಿಗೆ ೨೫ ಸಾವಿರ ರೂ.ಗಳ ಸಾಲ ಮನ್ನಾ ಮಾಡುತ್ತೇವೆನ್ನುವ ಘೋಷಣೆ ಇದೆ. ನೇಕಾರರು ಯಾರೂ

ಸಹಕಾರ ಸಂಘಗಳಲ್ಲಿ ಸಾಲ ತೆಗೆದುಕೊಂಡಿಲ್ಲ. ಹೆಚಿನಜನ Commercial Bankನಲ್ಲಿ ತೆಗೆದುಕೊಂಡಿರುತ್ತಾರೆ ಮತ್ತು KSFC ಯಿಂದ ಸಾಲ ತೆಗೆದುಕೊಂಡಿದ್ದಾರೆ. Urban Bank ನಿಂದ ತೆಗೆದುಕೊಳ್ಳುವುದಕ್ಕೆ ಸಹ ಅವಕಾಶವಿದೆ. Urban Bankನಿಂದ ತೆಗೆದುಕೊಳ್ಳುವುದಕ್ಕೆ ಸಹ ಅವಕಾಶವಿದೆ. Urban Bank ನಿಂದ ಸಾಲ ತೆಗೆದುಕೊಂಡಿರತಕ್ಕಂಥವರಿಗೆ ಸರ್ಕಾರ ಭರಿಸಿಕೊಡತಕ್ಕಂಥ ಒಂದು ತೀರ್ಮಾನವಿದೆ. ಆದರೆ, KSFC ಯಿಂದಲೇ ಸಾಲ ತೆಗೆದುಕೊಂಡಿರತಕ್ಕ ನೇಕಾರರೇನಿದ್ದಾರೆ ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಅಲ್ಲಿಂದಲೇ ತೆಗೆದುಕೊಂಡಿದ್ದಾರೆ. ಅವರಿಗೇ ಆ ಹಣವನ್ನು ಉಪಯೋಗ ಮಾಡಲು ಸರ್ಕಾರ ಚಿಂತನೆ ಮಾಡಬೇಕಾಗುತ್ತದೆ. ಇವರು ೧೦ ಲಕ್ಷ ರೂಪಾಯಿಗಳವರೆಗೆ ತೆಗೆದುಕೊಂಡಿರುವ ಸಾಲಕ್ಕೆ ನಾವು ಸರಳ ಬಡ್ಡಿಯನ್ನು ಮನ್ನಾ ಮಾಡುತ್ತೇವೆ ಎಂದು ಇದರಲ್ಲಿದೆ. ಆದರೆ, ವಿಶೇಷವಾಗಿ ನೇಕಾರರಿಗೆ ಆದ್ಯತೆಯನ್ನು ಕೊಡಬೇಕು. ಏಕೆಂದರೆ, ಅವರು ಸಾಲ ಎಲ್ಲಿ ಸಿಗುತ್ತದೆಯೋ ಅಲ್ಲಿ ತೆಗೆದುಕೊಳ್ಳುತ್ತಾರೆ. ಸಹಕಾರ ಸಂಸ್ಥೆಯಲ್ಲೇ ಕೊಟ್ಟಿದ್ದರೆ ಅತವಾ Urban Bankನಲ್ಲಿ ಕೊಟ್ಟಿದ್ದರೆ ಅಲ್ಲಿಯೇ ಸಾಲ ತೆಗೆದುಕೊಳ್ಳುತ್ತಿದ್ದರು. ಅಲ್ಲಿ ಸಾಲದ ಲಭ್ಯತೆ ಇಲ್ಲವೆಂದು ಹೇಳಿ KSFCಯಲ್ಲಿ ಅವರು ಸಾಲಕ್ಕೆ ಅರ್ಜಿ ಹಾಕಿ ಸಾಲ ತೆಗೆದುಕೊಂಡಿರುತ್ತಾರೆ. ಆದರೆ ಇವರು ಅಲ್ಲಿ ಸಾಲ ತೆಗೆದುಕೊಂಡರೆನ್ನುವ ಕಾರಣಕ್ಕೋಸ್ಕರ ಅವರು ಈ ಸೌಲಭ್ಯದಿಂದ ವಂಚಿತರಾಗವ ರೀತಿಯಲ್ಲಿ ಈ ಹಣವನ್ನು ಅದಕ್ಕೆ ಉಪಯೋಗ ಮಾಡತಕ್ಕಂಥದ್ದು ಸೂಕ್ತ ಎಂದು ಹೇಳಿ ನಾನು ಈ ಸಂದರ್ಭದಲ್ಲಿ ಸರ್ಕಾರದ ಗಮನಕ್ಕೆ ತರುತ್ತೇನೆ. ಉನ್ನತ ಶಿಕ್ಷಣ, ಪ್ರಾಥಮಿಕ ಶಿಕ್ಷಣ ಇರಬಹುದು, ಇದಕ್ಕೆ ಮೂರನೇ ಒಂದು ಭಾಗದಷ್ಟು ಬಜೆಟ್ ಹಣವನ್ನು ಖರ್ಚು ಮಾಡುತ್ತೇವೆ. ಇಂಥ ಒಂದು ಸಂದರ್ಭದಲ್ಲಿ, ವಿಶೇಷ ವಾಗಿ ನಾವು ಹೆಚ್ಚು ಆದ್ಯತೆಯನ್ನು ಯಾವುದಕ್ಕೆ ಕೊಡುತ್ತಿದ್ದೇವೆಂದರೆ, ನಾನು ಮೊನ್ನೆ ಕೆಲವು ಶಾಲೆಗಳಿಗೆ ಭೇಟಿಯನ್ನು ಕೊಟ್ಟಂಥ ಸಂದರ್ಭದಲ್ಲಿ ನಾವು ೧೦ನೇ ತರಗತಿಯವರೆಗೂ ಸಮವಸ್ತ್ರ, ಪಠ್ಯ ಪುಸ್ತಕ ವಿತರಣೆ ಮಾಡುತ್ತೇವೆ ಎಂದು ಹೇಳಿದರು. ಅವರಿಗೆ ಇಡೀ ವರ್ಷಕ್ಕೆ ಕೊಡುವುದು ಒಂದೇ ಜೊತೆ ಸಮವಸ್ತ್ರ. ವರ್ಷದ ಕೊನೆಯಲ್ಲಿ ಕೊಟ್ಟರೆ, school ಗಳಲ್ಲಿ

Head Masters, Teachers, Driverಅನ್ನು ಕರೆದು ಹರಿದುಹೋಗಿರುವ ಸಮವಸ್ತ್ರವನ್ನು ಸರಿಪಡಿಸುವುದಕ್ಕೆ ಒಬ್ಬನನನ್ನು ಇಡಬೇಕಾಗುತ್ತದೆ. ನಾವು ಎಲ್ಲದಕ್ಕೂ ಹಣವನ್ನು ಖರ್ಚು ಮಾಡುತ್ತೇವೆ. ಬಡ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲಕರವಾಗತಕ್ಕಂಥ ರೀತಿಯಲ್ಲಿ ಸರ್ಕಾರ ಚಿಂತನೆ ಮಾಡತಕ್ಕಂಥದ್ದು ನಮ್ಮ ಗಮನದಲ್ಲಿರುವುದರಿಂದ, ಅವರಿಗೆ ಒಂದು ಜೊತೆ ಕೊಟ್ಟಿದ್ದೀರಿ, ಎರಡು ಜೊತೆ ಸಮವಸ್ತ್ರ ಕೊಡಬೇಕೆಂಬುದು ನನ್ನ ವಾದವಿದೆ. ಈಗ ಶಾಲೆಯ ಕೊನೆಯ ಹಂತದಲ್ಲಿದ್ದೇವೆ. ಮಕ್ಕಳು ಇರುವ ಬಟ್ಟೆಯನ್ನೇ ಸರಿಪಡಿಸಿಕೊಂಡು, ಹಾಕಿಕೊಂಡು ಬರುತ್ತಾರೆ. ನೀವು ವರ್ಷಕ್ಕೆ ರೂ. ೩೫–೪೦ ಕೋಟಿ ರೂಪಾಯಿಗಳನ್ನು ಸಮವಸ್ತ್ರಕ್ಕೆ ಖರ್ಚು ಮಾಡುತ್ತೀರಿ. ಕನಿಷ್ಟ ಎರಡು ಜೊತೆಯಾದರೂ ಕೊಡುತ್ತೇವೆ ಎಂದು ಹೇಳಿದರೆ, ಆ ಮಕ್ಕಳು ಬಹಳ ಸಂತೋಷದಿಂದಿರುತ್ತಾರೆ.

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ರಾಜಣ್ಣವರು ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಅವರು ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರಾಗಿ ಕೆಲಸ ಮಾಡುವಾಗ, ನಮ್ಮ ಕ್ಷೇತ್ರದ ರೈತರಿಗೆ ಕೂಡ subsidy, fees ಕೊಡತಕ್ಕಂಥದ್ದರಲ್ಲಿ ೨–೩ ಕೋಟಿ ರೂಪಾಯಿಗಳ ಸಹಾಯ ಮಾಡಿದ್ದಾರೆ. ಅವರಿಗೆ ತಮ್ಮ ಮೂಲಕ ಕೇಳಿಕೊಳ್ಳುವುದೇನೆಂದರೆ, ಸಾಲ ಮನ್ನಾದಿಂದ, what are the effects ? ಏಕೆಂದರೆ, ಅಪೆಕ್ ಬ್ಯಾಂಕ್‌ನಲ್ಲಿ ಸಹಕಾರ ರಂಗದಲ್ಲಿ ನೀವು ಕೆಲಸ ಮಾಡಿದ್ದೀರಿ. ಇವತ್ತು ಯಾವ ರೀತಿಯಾದ ಪರಿಣಾಮ ಆಗುತ್ತದೆ ಎಂಬುದರ ಬಗ್ಗೆ ಹೇಳಿ. ಅದರ ಬಗ್ಗೆ ಸ್ವಲ್ಪ ವಿಸ್ತಾರ ಮಾಡಿ ಹೇಳಿ, ಸಲಹೆ–ಸೂಚನೆಗಳನ್ನು ಸರ್ಕಾರಕ್ಕೆ ಕೊಡಿ ಮತ್ತು ಇದರಿಂದಾಗುವ ಪರಿಣಾಮಗಳ ಬಗ್ಗೆ ವಿವರಿಸಿದರೆ ಚೆನ್ನಾಗಿರುತ್ತದೆ.

ಶ್ರೀ ಕೆ.ಎನ್.ರಾಜಣ್ಣ : ಬಯಳ ಒಳ್ಳೆಯದು. ಸಾಲ ಮನ್ನಾ ವಿಚಾರದಲ್ಲಿ ಹೆಚ್ಚು ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ. ಅಂತಿಮವಾಗಿ ಪ್ರಸ್ತಾಪ ಮಾಡೋಣವೆಂದು ಇಟ್ಟುಕೊಂಡಿದ್ದೇನಷ್ಟೆ.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ : ಈ ವಿಷಯ ಬಂದಾಗ ಮಾನ್ಯ ರಾಜಣ್ಣನವರ ಜೊತೆ ಸದನದೊಳಗೆ ಮಾತನಾಡುವುದಕ್ಕಿಂತ ಹೆಚ್ಚು ಸದನದ ಹೊರಗೆಡೆ ಶಾಸಕರು ಕುಳಿತಾಗ ಅದರ ಬಗ್ಗೆ ಸಾಕಷ್ಟು ಮಾತನಾಡುತ್ತಾರೆ. ಆಮೇಲೆ ಎಲ್ಲಿ ಮಾತನಾಡುತ್ತೀರಿ ? ಮಾತನಾಡುವುದಿದ್ದರೆ ಈಗಲೇ ಮಾತನಾಡಿ. ಆಮೇಲೆ ಮಾತನಾಡಲು ನಿಮಗೆ time ಎಲ್ಲಿದೆ ? ಈಗ ನಾವು ಬಜೆಟ್ಗೆ ಮಂಜೂರಾತಿ ಕೊಡಬೇಕಾಗಿದೆ.

ಶ್ರೀ ಜೆ.ಸಿ. ಮಾಧಸ್ವಾಮಿ : ನಮ್ಮನ್ನೆಲ್ಲ ಬಿಟ್ಟು ಇವರಿಬ್ಬರೇ ಆಮೇಲೆ ಮಾತನಾಡಿಕೊಳ್ಳುತ್ತಾರೆ.

ಶ್ರೀ ಕೆ.ಎನ್. ರಾಜಣ್ಣ : ನಾನು ಅಪೆಕ್ಸ್ ಬ್ಯಾಂಕ್ ಅಧ್ಯಕ್ಷನಾಗಿ ಕೆಲಸ ಮಾಡತಕ್ಕಂಥದ್ದಕ್ಕೆ ಮಾನ್ಯ ಧರ್ಮಸಿಂಗ್ ರವರ ಸಹಾಯವು ಕೂಡ ಇತ್ತು. ಆದರೆ ಮಾನ್ಯ ಪ್ರಕಾಶ್ ಹುಕ್ಕೇರಿಯವರು ಕೂಡ ೦ಕಬಅ ಸಚಿವರಾಗಿ, ಅವರೊಬ್ಬರು ಸಹಕಾರಿಗಳಾಗಿ ಇದರ ಬಗ್ಗೆ ನಮ್ಮೆಲ್ಲರಿಗಿಂತ ಹೆಚ್ಚು ವಿಚಾರ ಅವರಿಗೆ ಗೊತ್ತಿದೆ. ಆದ್ದರಿಂದ, ಸಹಕಾರ ಸಂಘಗಳಲ್ಲಿ ಸಾಲ ಮನ್ನಾ ಮಾಡುವ ಯೋಜನೆ ಆ ರೀತಿ ಕಡಿಮೆ ಶಕ್ತಿಯ ಹೃದಯವಂತರಿಗೆ ತೀರ್ಮಾನ ತೆಗೆದುಕೊಳ್ಳತಕ್ಕಂಥ ಧೈರ್ಯ ಬರುವುದಿಲ್ಲ. ಹೆಚ್ಚು ಧೈರ್ಯ ವಂತರಿಗೆ ಮಾತ್ರ ಆ ರೀತಿಯ ಗಡನು ತೀರ್ಮಾನವನ್ನು ತೆಗೆದು ಕೊಳ್ಳುವುದಕ್ಕೆ ದೈರ್ಯ ಬರುವುದು. ಆದ್ದರಿಂದ, ಅವರು ತೀರ್ಮಾನ ತೆಗೆದುಕೊಂಡಿದ್ದಾರೆ. ಅದರಲ್ಲಿ ಯಾವ ಮನುಷ್ಯನೂ ಅಷ್ಟೇ. ನಾವು ಕೆಲಸ ಮಾಡಿದರೆ ತಾನೇ ಗೊತ್ತಾಗುವುದು. ನಡೆದರೆ ತಾನೇ ಎಡವಿ ಬೀಳುವುದು. ಸುಮ್ಮನೆ ಕುಳಿತಿದ್ದರೆ ನಾವು ಎಡವಿ ಬೀಳುವ ಪ್ರಶ್ನೆಯೇ ಬರುವುದಿಲ್ಲ. ಹಾಗೆ, working Government ಯಾವುದಿರುತ್ತದೆ, ಅದು ಮಾಡುವ ಕೆಲಸಗಳಲ್ಲಿ ತಪ್ಪು ಒಪ್ಪುಗಳು ಸರ್ವ ಸಾಮಾನ್ಯ. ಆ ತಪ್ಪು ಗಳನ್ನು ತಿದ್ದಿಕೊಂಡು, ಸರಿ ಮಾಡಿಕೊಂಡು ಹೋಗತಕ್ಕಂಥದ್ದು ಎಲ್ಲರ ಗುಣ, ಲಕ್ಷಣವೆಂದು ಹಏಳಿ ತಮಗೆ, ವಿಶೇಷವಾಗಿ ಮಾನ್ಯ ಪ್ರಕಾಶ್ ಹುಕ್ಕೇರಿಯವರಿಗೆ ಜ್ಞಾಪಿಸಲಿಕ್ಕೆ ಬಯಸುತ್ತೇನೆ. ನಾನು uniform ಬಗ್ಗೆ ಹೇಳುತ್ತಿದ್ದೇನೆ. ನಾವು ಮೂರನೇ ಒಂದು ಭಾಗದಷ್ಟು ಹಣವನ್ನು ಬಜೆಟ್

ನಲ್ಲಿ ವಿದ್ಯಾಭ್ಯಾಸಕ್ಕೆ, ಪ್ರಾಥಮಿಕ ಶಿಕ್ಷಣಕ್ಕೆ ಖರ್ಚು ಮಾಡುತತೇವೆ. ಅಷ್ಟಿದ್ದರು ಕೂಡ, ಆ ಮಕ್ಕಳಿಗೆ ವರ್ಷವಿಡೀ ಒಂದೇ ಒಂದು ಜೊತೆ uniform ಕೊಟ್ಟರೆ, ಅವರು ಯಾವ ರೀತಿ ಅದನ್ನು ಶುಭ್ರವಾಗಿ, ಶುಚಿಯಾಗಿಟ್ಟುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ? ಅದನ್ನು ವರ್ಷವಿಡೀ ಉಪಯೋಗ ಮಾಡಲಿಕ್ಕೆ ಸಾಧ್ಯವಾಗುತ್ತದೆಯೇ ? ಆದ್ದರಿಂದ, ಸರ್ಕಾರ ಬಹಳಷ್ಟು ದಿಟ್ಟವಾತಂಥ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಿದೆ. ಆ ರೀತಿ ತೀರ್ಮಾನ ತೆಗೆದುಕೊಳ್ಳತಕ್ಕಂಥ ಸಂದರ್ಭದಲ್ಲಿ ೧-೧೦ನೇ ತರಗತಿಯವರೆಗೆ ಉಚಿತವಾಗಿ ಪಠ್ಯ ಪುಸ್ತಕ ಮತ್ತು ಸಮವಸ್ತ್ರ ವಿತರಣೆ ಮಾಡುತ್ತಿದ್ದೇವೆ. ಕನಿಷ್ಟ ಮುಂದಿನ ಸಾಲಿನಿಂದ ಎರಡು ಜೊತೆ ಸಮವಸ್ತ್ರಗಳನ್ನು ಕೊಡುತ್ತೇವೆ ಎನ್ನುವ ನಿರ್ಧಾರ ಸರ್ಕಾರದ ವತಿಯಿಂದಾಗಬೇಕು ಎನ್ನುವ ಒತ್ತಾಯವನ್ನು ನಾನು ಈ ಸಂದರ್ಭದಲ್ಲಿ ಮಾಡಲಿಕ್ಕೆ ಬಯಸುತ್ತೇನೆ.

ಶ್ರೀಮತಿ ಭಾಗೀರಥಿ ಮರಳಸಿದ್ದನಗೌಡ : ಅವರು ಸಮವಸ್ತ್ರಗಳ ಬಗ್ಗೆ ಮಾತನಾಡುತ್ತಿದ್ದಾರೆ. ಹಿಂದೆ ಅಮಗನವಾಡಿಯ ಮಕ್ಕಳಿಗೆ ಕೂಡ ಒಂದು ಜೊತೆ ಸಮವಸ್ತ್ರ ಕೊಡಬೇಕೆಂಬ ಆದ್ಯತೆಯಿಂದ, ನಾನು ಮಂತ್ರಿಯಾಗಿದ್ದಾಗ ನಾನೊಂದು file ready ಮಾಡಿದ್ದೆ. ಆದರೆ, ಅನಿವಾರ್ಯ ಕಾರಣಗಳಿಂದ ನಾನು ಮಾಡುವುದಕ್ಕಾಗಲಿಲ್ಲ. ಈ ಸಂದರ್ಭದಲ್ಲಿ ಆ ಮಕ್ಕಳಿಗೂ ಕೂಡ ಒಂದು ಒತೆ ಬಟ್ಟೆ ಕೊಟ್ಟರೆ ಸರ್ಕಾರದ ಆಯವ್ಯಯವೇನೂ ಕಡಿಮೆಯಾಗುವುದಿಲ್ಲ ಎಂದು ನಾನು ಭಾವನೆಯನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಕೆ. ಪ್ರಭಾಕರ ಬಂಗೇರ : ನನಗೂ ಕೂಡ ನೆನಪಾಗುತ್ತಿದೆ. ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಬುಲ್ ಬುಲ್ ಮತ್ತು ಸ್ಕೌಟ್ಸವರೂ ಕೂಡ ಇದ್ದಾರೆ. ಜೊತೆಗೆ, ಭಾರತ್ ಸೇವಾ ಧಳ ಎಂ ಒಂದು ವಿಭಾಗವು ಕೂಡ ಇದೆ. ಅವರಿಗು ಕೂಡ ಸಮವಸ್ತ್ರ ವಿತರನೆ ಮಾಡುವ ವ್ಯವಸ್ಥೆಗಳಿಲ್ಲದೇ ಇರುವುದರಿಂದ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಆ ಒಂದು

ಘಟಕಗಳಿಗು ಕೂಡ ಸಮವಸ್ತ್ರವನ್ನು ವಿತರಣೆ ಮಾಡುವಂಥ ಪ್ರಯತ್ನವನ್ನು ಮಾಡಬೇಕೆಂದು ತಮ್ಮ ಮೂಲಕ ವಿನಂತಿಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಲ್. ಧರ್ಮೇಗೌಡ : ಮಾನ್ಯ ಅಧ್ಯಕ್ಷರೆ ...

ಅಧ್ಯಕ್ಷರು : ಏನಿದು, ಅವರು ಮಾತನಾಡುತ್ತಿದ್ದಾರೆ. ಮಧ್ಯದಲ್ಲಿ ಎಲ್ಲ ಸಲಹೆ ಕೊಡಲು ನಿಂತುಕೊಂಡರೆ ಹೇಗೆ.

ಶ್ರೀ ಎಸ್.ಎಲ್. ಧರ್ಮೇಗೌಡ : ಆ ಸಮವಸ್ತ್ರವನ್ನು ಯಾರು ಖರೀದಿ ಮಾಡತುತ್ತಾರೆ ನಾಮ್-ಕೆ-ವಾಸ್ತೆ ಗೋಸ್ಕರ ಸರ್ಕಾರಿ ಶಾಲೆ ಎಂದು ಹೇಳಿ ಸಸ್ತಾ ಆಗಿಹೋಗಿಬಿಟ್ಟಿದೆ. ಎಲ್ಲ ಸದಸ್ಯರು ಅದರ ಬಗ್ಗೆ ಹೇಳುತ್ತಿರುವುದು ಸರಿ ಇದೆ. ಅದನ್ನು ದಯಮಾಡಿ ಸಂಬಂಧಪಟ್ಟರು ಗುಣ ಪಟ್ಟವರು ಕಾಪಾಡಬೇಕು. ನಾಮ್ ಕೆ ವಾಸ್ತೆಗೆ ಬಟ್ಟೆ ಕೊಟ್ಟ ಹಾಗಾಗಬಾರದು. ಅದರಲ್ಲಿ ಎಲ್ಲರೂ, ಸಂಬಂಧಪಟ್ಟಂಥ ಇಲಾಖೆಯವರು ಕೇವಲ percentage ಹೊಡೆಯುವುದಕ್ಕೇ ಕಾಯುತ್ತಿರುವುದು. ದಯವಿಟ್ಟು ಅದರಲ್ಲಿ ಗುಣಮಟ್ಟ ಕಾಪಾಡಲು ನಿರ್ದೇಶನವನ್ನು ತಾವು ಕೊಡಬೇಕು.

ಅಧ್ಯಕ್ಷರು : ಮಾನ್ಯ ರಾಜಣ್ಣನವರೆ, ನೀವು yield ಆಗುತ್ತಾ ಹೋದರೆ ಅದು ಸರಿಯಲ್ಲ. ನೀವು ಸುಮ್ಮನೆ ಕುಳಿತುಕೊಳ್ಳುವುದು, ಅವರು ಮಧ್ಯೆ ಮಾತನಾಡುವುದು, ಆಮೇಲೆ ನಮಗೆ ಸಮಯವಿಲ್ಲವೆನ್ನುವುದು ಏನಿದು ? ಬೇಗ ಮುಗಿಸಿ.

ಶ್ರೀ ಕೆ.ಎನ್.ರಾಜಣ್ಣ : ಹಿರಿಯ ಸದಸ್ಯರು ನಾನು ಹೇಳುವ ವಿಚಾರಕ್ಕೆ ಪೂರಕವಾಗಿ ವಿಚಾರ ಹೇಳಿದಾಗ yield ಆಗದೇ ಇನ್ಯಾವಾಗ yield ಆಗುವುದು ?

ಅಧ್ಯಕ್ಷರು : ಇನ್ನೂ ಬಹಳ ಜನರು ಮಾತನಾಡುವವರಿದ್ದಾರೆ. ಈ ರೀತಿ ಮಧ್ಯದಲ್ಲಿ ಮಾತನಾಡಿದರೆ ಹೇಗೆ ?

ಶ್ರೀ ಕೆ.ಎನ್. ರಾಜಣ್ಣ : ನೀವು ಹೇಗೆ ಹೇಳುತ್ತೀರೋ ಹಾಗೆ. ನಮ್ಮದೇನಿಲ್ಲ.

ಶ್ರೀ. ಜೆ.ಸಿ.ಮಾಧುಸ್ವಾಮಿ : Yield ಆಗದಿದ್ದರೆ ಚರ್ಚೆ ನೀರಸವಾಗುತ್ತದೆ.

ಅಧ್ಯಕ್ಷರು : ನೀರಸವಾಗುತ್ತದೆ. ಆದರೆ ಸಾಯಂಕಾಲ ಆಯಿತೆಂದರೆ ಸಮಯವಿಲ್ಲವೆನ್ನುತ್ತಾರೆ.

ಶ್ರೀ ಎಸ್.ಎಲ್. ಧರ್ಮೇಗೌಡ : ಒಳ್ಳೆಯ ಮಾತು ಹೇಳುವುದಕ್ಕೆ ಒಂದು ಸೆಕೆಂಡ್ ಎದ್ದು ನಿಂತುಕೊಂಡರೆ, objection ಮಾಡುತ್ತೀರಿ. ಸುಮ್ಮನೆ photoದಲ್ಲಿ, ಪೇಪರ್ ನಲ್ಲಿ ಬರಗಬೇಕೆಂದು ದಿವಸ ನಿಂತುಕೊಳ್ಳುವವರಿಗೆ ನೀವು ಸುಮ್ಮನೆ ಇರುತ್ತೀರಿ. ನಾವು ಒಂದು ಸೆಕೆಂಡ್ ಮಾತನಾಡಿದರೆ ರಿಭರಿಜಭಿಣುಂಟಿ ಮಾಡುತ್ತೀರಲ್ಲ, ಸಭಾಧ್ಯಕ್ಷರೆ.

ಶ್ರೀ ಕೆ.ಎನ್. ರಾಜಣ್ಣ : ಈಗಾಗಲೇ ಕೇರಳ ಸರ್ಕಾರದಲ್ಲಿ ದರ್ಜಿಗಳು, ಕುಂಬಾರರು, ಕಮ್ಮಾರರು, ಮಡಿವಾಳರು ಇವರೆಲ್ಲ ಅಸಂಘಟಿತ ಕಾರ್ಮಿಕರು ಎನ್ನುವ ದೃಷ್ಟಿಯಿಂದ ಮಾಡಿರುವ ಹಾಗೆ ತಾವು ಕೂಡ ಒಂದು ಮಂಡಳಿಯನ್ನು ಸ್ಥಾಪನೆ ಮಾಡಲಿಕ್ಕೆ ೩ ಕೋಟಿ ರೂಪಾಯಿ ಇಟ್ಟಿರತಕ್ಕಂಥದ್ದು ಬಹಳ ಸ್ವಾಗತಾರ್ಹವಾದುದು. ಈ ವಿಚಾರದಲ್ಲಿ ಈಗಾಗಲೇ ಸವಿತಾ ಸಮಾಜದ ಜನರ ಅಭ್ಯುದಯಕ್ಕೆ ವಿಶೇಷವಾಗಿ ಒಂದು ಕಾರ್ಯಕ್ರಮವನ್ನು ರೂಪಿಸಿದ್ದೀರಿ. ಈ ಸಮಾಜಗಳಿಗೂ ಕೂಡ ಒಂದು ಕಾರ್ಯಕ್ರಮವನ್ನು ರೂಪಿಸಿ ಅವರೂ ಕೂಡ ಆರ್ಥಿಕವಾಗಿ ಸ್ವಾವಲಂಬನೆಯನ್ನು ಗಳಿಸಿಕೊಳ್ಳತಕ್ಕಂಥ ರೀತಿಯಲ್ಲಿ ಸರ್ಕಾರ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ಮತ್ತು ಅವರ ಅಭ್ಯುದಯುಕ್ತ ಕೂಡ ಹೆಚ್ಚು ಕ್ರಮವನ್ನು ವಹಿಸಬೇಕೆನ್ನುವ ಸಲಹೆಯನ್ನು ಈ ಸಂದರ್ಭದಲ್ಲಿ ಕೊಡಲು ಬಯಸುತ್ತೇನೆ. ಇನ್ನು ಆರೋಗ್ಯ ಇಲಾಖೆಯ ಬಗ್ಗೆ ಹೇಳುವುದಾದರೆ, ನಮ್ಮ ಮಾನ್ಯ ಎಂ.ವೈ.ಪಾಟೀಲ್‌ರವರು ಆಗಲೇ ಹೇಳುತ್ತಿದ್ದರು. ಸುಮಾರು ೨೦ ವರ್ಷಗಳಿಂದ PHC ಯಲ್ಲಿ ಡಾಕ್ಟರ್‌ಗಳೇ ಇಲ್ಲವಂತೆ. ಎಲ್ಲಾ ಕಡೆ ಈ ಸಮಸ್ಯೆ ಇದೆ. ನಮ್ಮ ಕಡೆ ೨೦ ವರ್ಷಗಳು ಅಲ್ಲದಿದ್ದರೂ ೨೦ ತಿಂಗಳುಗಳಿಂದ ಡಾಕ್ಟರ್‌ಗಳು ಇಲ್ಲ. ಹೀಗಾಗಿ ನೀವು ಈ ಒಂದು ಸಿಬ್ಬಂದಿಯನ್ನು ನೇಮಾಕಾತಿ ಮಾಡಿಕೊಳಬೇಕು. ಸಿಬ್ಬಂದಿ

ಯನ್ನು ನೇಮಕತಿ ಮಡಿಕೊಳ್ಳುವಂಥ ಸಂದರ್ಭದಲ್ಲಿ, ಖಾಸಗಿಯಲ್ಲಿ ಜಾಸ್ತಿ ಸಂಭಾವನೆ ದೊರೆಯುತ್ತದೆ, ಇಲ್ಲಿ ಕಡಿಮೆ ಸಂಭಾವನೆ ದೊರೆಯುತ್ತದೆಂದು ಹೆಚ್ಚಾಗಿ ಯಾರು ಇಲ್ಲಿಗೆ ಬರುವುದಕ್ಕೆ ಇಷ್ಟ ಪಡುತ್ತಿಲ್ಲ. ಈ ಹಿನ್ನಲೆಯಲ್ಲಿ ಒಬ್ಬ ಮೆಡಿಕಲ್ ಗ್ರಾಜ್ಯುಯೇಟ್‌ನ್ನು ಸರ್ಕಾರ ತರಬೇಕಾದರೆ, ಲಕ್ಷಾಂತರ ರೂಪಾಯಿ ಅವನ ಮೇಲೆ ನಾವು ಸುರಿಯುತ್ತೇವೆ. ಅಂಥ ಮಕ್ಕಳು, ಯಾರು ನಮ್ಮ ಸರ್ಕಾರಿ ಕೋಟಾದಡಿ ಪ್ರವೇಶ ಪಡೆದು ವಿದ್ಯಾವಂತರಾಗಿ ಹೊರಗೆ ಬರುತ್ತಾರೆ, ಕನಿಷ್ಟ ೪-೫ ವರ್ಷವಾದರೂ ಗ್ರಾಮೀನಭಾಗದಲ್ಲಿ ಕಡ್ಡಾಯವಾಗಿ ಅವನು ಸೇವೆ ಸಲ್ಲಿಸಲೇಬೆಂದೆಂದು ಒಂದು ನಿಯಮವನ್ನು ಏಕೆ ನೀವು ಮಾಡಬಾರದು?

ಡಾ : ವಿ.ಎಸ್.ಆಚಾರ್ಯ : ಮಾನ್ಯ ರಾಜಣ್ಣನವರು ಸರಿಯಾದ ವಿಚಾರವನ್ನು ಹೇಳಿದ್ದಾರೆ. MBBS ಹಂತದಲ್ಲಿ ಸರ್ಕಾರಿ ಕಾಲೇಜುಗಳ ಸ್ಥೂಲ ಲೆಕ್ಕ ಕೊಡಬೇಕಾದರೆ, ಕಳೆದ ವರ್ಷ ನಾಲು ಕಾಲೇಜುಗಳಿಗೆ ೧೧೭ ಕೋಟಿ ರೂಪಾಯಿ ಖರ್ಚು ಆಗಿದೆ. ಒಟ್ಟಾರೆಯಾಗಿ ೪೫೦ admission ಆಗಿದೆ. ಬೆಂಗಳೂರಿನಲ್ಲಿ ೧೫೦ ವಿದ್ಯಾರ್ಥಿಗಳು, ಹೊರಗಡೆ ೩೦೦ ವಿದ್ಯಾರ್ಥಿಗಳು ಇದ್ದಾರೆ. ಒಬ್ಬೊಬ್ಬ ವಿದ್ಯಾರ್ಥಿಗೆ ಸುಮಾರು ೫ ಲಕ್ಷ ೩೦ ಸಾವಿರ ರೂಪಾಯಿ ಖರ್ಚಾಗುತ್ತದೆ. ಹೀಗಾಗಿ ಅವರಿಂದ ರಾಜ್ಯದ ಆರೋಗ್ಯ ಸೇವೆಗೆ, ಕಡ್ಡಾಯವಾಗಿ ಅವರ ಸೇವೆ ಸಲ್ಲಬೇಕೆಂದು ಹೇಳುವ ದೃಷ್ಟಿಯಿಂದ, ಎರಡು ವರ್ಷ MBBS ಹಂತದಲ್ಲಿ ಅವರು ಪಾಸ್ ಆದ ನಂತರ ಮತ್ತು Post Graduation ಆದವರು ಮತ್ತು ಸೀಟ್ ಸಿಕ್ಕಿದವರಿಗೆ ಸ್ವಲ್ಪ ಸೇವಾವಧಿಯನ್ನು ಕಡ್ಡಾಯ ಸೇವಾವಧಿಯನ್ನಾಗಿ ಮಾಡಬೇಕು ಎನ್ನುವ ವಿಚಾರ ಇದೆ. MBBS and Post Graduation ಹಂತದಲ್ಲಿ ಸರ್ಕಾರೀಕಾಲೇಜಿನಲ್ಲಿ ಅಥವಾ ಸರ್ಕಾರದಿಂದ ರಿಯಾಯಿತಿ ಶುಲ್ಕದಲ್ಲಿ ಸೀಟು ಪಡೆದವರು ಕಡ್ಡಾಯವಾಗಿ ಸೇವೆ ಮಾಡಬೇಕು ಎಂದು ಯೋಜನೆಯನ್ನು ತಯಾರು ಮಾಡುತ್ತಿದ್ದೇವೆ. ತಮಿಳುನಾಡಿನಲ್ಲಿ ಇದೆ, ಅದನ್ನು ನೋಡಿಕೊಂಡು ಬಂದಿದ್ದೇವೆ, ಅದೇ ರೀತಿಯಲ್ಲಿ ಇಲ್ಲಿಯೂ ಮಾಡಬೇಕೆನ್ನುವ ಒಂದು ವಿಚಾರ ಇದೆ.

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಮೆಡಿಕಲ್ ಕಾಲೇಜು ಪ್ರಾವೇಶದ ಬಗ್ಗೆ ಮಾನ್ಯ ವೈದ್ಯಕೀಯ ಸಚಿವರು ಹೇಳಿದರು. ನಮ್ಮ ಬೆಳಗಾವಿ ಮೆಡಿಕಲ್ ಕಾಲೇಜ್‌ಗೆ ತಾವು ಸುಮರು ೩೭ ಕೋಟಿ ರುಪಾಯಿ ಹಣ ಬಿಡುಗಡೆ ಮಾಡಿ ಟೆಂಡರ್ ಕರೆದರೂ ಅದು ಇನ್ನೂ ಫೈನಲ್ ಆಗಿಲ್ಲ. ಹೀಗಾಗಿ ಅಲ್ಲಿ ಕಟ್ಟಡ ಅರ್ಧಕ್ಕೆ ನಿಂತಿದೆ. ಭೂ ಸೇನಾ ನಿಗಮದವರು ಕಾಮಗಾರಿಯನ್ನು ಸ್ಥಗಿತಗೊಳಿಸಿ, ಬಿಟ್ಟು ಹೋಗಿದ್ದಾರೆ. ಟೆಂಡರ್ ಪ್ರಕ್ರಿಯೆ ಕೂಡ ಅಲ್ಲಿ ನಿಂತು ಬಿಟ್ಟಿದೆ. ತಾವು ಅಕ್ಟೋಬರ್ ತಿಂಗಳಿನಲ್ಲಿ ಸುಮಾರು ೩೭ಕೋಟಿ ರೂಪಾಯಿ ಹಣ ಬಿಡುಗಡೆ ಮಾಡಿದ್ದರೂ ಮಾರ್ಚ್ ಆದರೂ ಟೆಂಡರ್ ಪ್ರಕ್ರಿಯೆ ಮುಗಿಯಲಿಲ್ಲವೆಂದರೆ, ಮುಂದಿನ ವರ್ಷದಲ್ಲಿ, ಎರಡನೇ ವರ್ಷಕ್ಕೆ ನೀವು ಹೇಗೆ admission ಕೊಡುತ್ತೀರಿ ? ಡೆಲ್ಲಿಯಿಂದ ಕಮಿಟಿ ಬಂದಾಗ, ಅವರು ಸರಿಯಾಗಿ ಕೆಲಸವಾಗಿಲ್ಲವೆಂದು ವರದಿಯನ್ನು ಕೊಟ್ಟರೆ, ಮುಂದಿನ ವರ್ಷದಲ್ಲಿ ಎರಡನೇ ವರ್ಷದ್ದು admisison ಆಗುವುದಿಲ್ಲ. ಸಾಕಷ್ಟು ಆರಿ ತಮ್ಮ ಗಮನಕ್ಕೆ ತಂದಿದ್ದೇವೆ. ಇದು ಬಹಳ ಮಹತ್ವದ ವಿಷಯ, ನಾಳೆ ಜೂನ್ ದಲ್ಲಿ ಎರಡನೇ ವರ್ಷದ ಮಕ್ಕಳ admission ಆಗಬೇಕು. ದಯವಿಟ್ಟು ತಾವು ಇದರ ಬಗ್ಗೆ ಗಮನಹರಿಸಬೇಕು. ಇದಕ್ಕೆ ತಾವು ಉತ್ತರ ಕೊಡಿಸಬೇಕು.

ಅಧ್ಯಕ್ಷರು : ಆಯಿತು ಹುಕ್ಕೇರಿಯವರೆ ಕುಳಿತುಕೊಳ್ಳಿ, ನೀವು ಈಗ ಸಲಹೆ ಕೊಟ್ಟಿದ್ದರಲ್ಲ ಕುಳಿತುಕೊಳ್ಳಿ. ಅವರು departmental grants ವಿಚಾರದಲ್ಲಿ ಮಾತನಾಡುತ್ತಾರೆ ನೀವು ಜನರಲ್ ಬಜೆಟ್ ಬಗ್ಗೆ ಮಾತನಾಡುವಾಗ ಸಣ್ಣ ಸಣ್ಣ ಮಂತ್ರಿಗಳು ಉತ್ತರ ಕೊಡಬೇಕೆಂದರೆ ಹೇಗೆ? ಇದು ಬಜೆಟ್ ಡಿಷಕಷನ್ ಆಗುತ್ತದೆಯೇ ?

(ಅಡಚಣೆ)

ಶ್ರೀ ಎನ್. ಧರ್ಮಸಿಂಗ್ : ಅವರು ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರಾಗಿ ಕೆಲಸ ಮಾಡಿದ್ದಾರೆ. ಮಡಿಕಲ್ ಕಾಲೇಜ್ ತರುವ ವಿಚಾರದಲ್ಲಿ Prime Minister ರವರಿಗೆ ಹೋಗಿ ಮನ್ನಣೆ ತಂದು ಮಾಡಿದ್ದಾರೆ. ಈಗ ೩೭ ಕೋಟಿ ರೂಪಾಯಿಯ ಟೆಂಡರ್ ಇನ್ನೂ ಫೈನಲ್ ಮಾಡತುತ್ತಿಲ್ಲ.

ಅದಕ್ಕೆ ಮಾನ್ಯ ಅಚಾರ್ಯರವರೆ, ಮಣಿಪಾಲ, ಶಿವಮೊಗ್ಗ, ಹಾಸನ ಇಷ್ಟಕ್ಕೆ ತಾವು ಸೀಮಿತವಾಗಿಲ್ಲ. ಉತ್ತರ ಕರ್ನಾಟಕ ಭಾಗಕ್ಕೆ ಸ್ವಲ್ಪ ಲಕ್ಷ್ಯ ಕೊಡಿ. ಆ ಕಡೆಗಳಿಗೆ ನೀವು ಹೋಗಿ ಬರಬೇಕು. ನೀವು ಇಲ್ಲಿ ಮಾತ್ರ ತಿರುಗಾಡಿದರೆ ಹೇಗೆ? ನೀವು ರಾಜ್ಯದ ಮಂತ್ರಿಗಳಾಗಿದ್ದೀರಿ. ಎಲ್ಲಾ ಕಡೆಗೆ ಹೋಗಬೇಕು. ಅವರು ಈಗತಾನೆ ಹೇಳಿದರು, ಇನ್ನು ಕೂಡ ಟೆಂಡರ್ ಫೈನಲೈಜ್ ಮಾಡುತ್ತಿಲ್ಲವೆಂದರೆ, ಏನು ರಿವ್ಯೂ ಮಾಡುತ್ತೀರಿ ? ಏನು ನೋಡುತ್ತೀರಿ ?

ಡಾ: ವಿ.ಎಸ್. ಆಚಾರ್ಯ : ನಾನು ಬೆಳಗಾವಿಗೆ ಅನೇಕ ಸಾರಿ ಹೋಗಿದ್ದೇನೆ. ಮೆಡಿಕಲ್ ಕಾಲೇಜ್ ತನಿಖೆ ಮಾಡಲಿಕ್ಕೆ ಪ್ರಗತಿ ಪರಿಶೀಲನೆ ಮಾಡಲಿಕ್ಕೆ ಹೋಗಿದ್ದೇನೆ. ಈಗ ಮಾನ್ಯ ಸದಸ್ಯರು ಹೇಳಿದ್ದು ಹದಿನೈದು ದಿವನಸ ಹಿಂದಿನ ಮಾತು. ಆದರೆ, ನಮ್ಮ ಬೆಳಗಾವಿ ಕಾಲೇಜಿನ ಮೊದಲನೇ ಹಂತದ್ದು ಎಲ್ಲಾ ಕರೆಕ್ಟ್ ಆಗಿದೆ. ಎರಡನೇ ಹಂತದ ಕಾರ್ಯಕ್ರಮ ಟೆಂಡರ್ process ನಲ್ಲಿ ೧೫ ದಿವಸ ಲೇಟಾಗಿದ್ದು, ನಿಜ. ಆದರೆ ಈಗ ಅದು ಒಪ್ಪಿಗೆಯಾಗಿದ್ದು ಕೆಲಸ ಮಾಡಲಿಕ್ಕೆ ಆದೇಶವನ್ನು ಕೊಟ್ಟಿದ್ದೇವೆ. ವಿದ್ಯಾರ್ಥಿಗಳಿಗೆ ಎರಡನೇ ವರ್ಷಕ್ಕೆ ಮುಂದುವರೆಯಲು ತೊಂದರೆಯಾಗದ ಹಾಗೆ ನಾವು ಎಲ್ಲಾ ವ್ಯವಸ್ಥೆಯನ್ನು ಮಾಡುತ್ತೇವೆ. ಕಟ್ಟಡ ಸಹ ಸಕಾಲದಲ್ಲಿ ಆಗುತ್ತದೆ. ಮಂಡ್ಯ ಮತ್ತು ಹಾಸನದಲ್ಲಿ ಯಾವ ರೀತಿಯಾಗುತ್ತದೆ. ಆ ತರಹ ಇಲ್ಲಿಯೂ ಆಗುವ ಹಾಗೆ ನೋಡಿಕೊಳ್ಳುತ್ತೇವೆ.

(ಅಡಚಣೆ)

ಶ್ರೀ ಪ್ರಕಾಶ್ ಬಿ. ಹುಕ್ಕೇರಿ : ಅಲ್ಲಿ ಟೆಂಡರ್ ಕ್ಲಿಯರ್ ಮಾಡಿ ಕೆಲಸ ಮಾಡಿ ಕೊಡಿ.

ಅಧ್ಯಕ್ಷರು : ತಾವು ಕುಳಿತುಕೊಳ್ಳಿ, ಬಜೆಟ್ ಚರ್ಚೆಯ ಮೇಲೆ ಆ ರೀತಿ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ.ಎನ್.ರಾಜಣ್ಣ : ಸರ್ಕಾರದ ನೀತಿಗೆ ಸಂಬಂಧಿಸಿದ ಸಲಹೆಯನು ಕೊಡುತ್ತೇನೆ ಒಬ್ಬ MBBS_ ವಿದ್ಯಾರ್ಥಿಯನ್ನು ಓದಿಸಲಿಕ್ಕೆ

ಸರ್ಕಾರದಿಂದ ಸುಮಾರು ಐದು ಲಕ್ಷ ಖರ್ಚು ಬರುತ್ತದೆ. ಆದುದರಿಂದ, ತತ್ ಕ್ಷಣವಾಗಿ ಒಂದು ನಿಯಮವನ್ನು ಮಾಡಿ, ಕಡ್ಡಾಯವಾಗಿ ಅವರು ಗ್ರಾಮೀಣ ಭಾಗದಲ್ಲಿ ಇಷ್ಟು ವರ್ಷಗಳ ಕಾಲ ಸೇವೆ ಸಲ್ಲಿಸಬೇಕೆಂದು ಮಾಡಬೇಕೆನ್ನುವ ಸಲಹೆಯನ್ನು ನಾನು ಕೊಟ್ಟಿದ್ದೆ. ಅದಕ್ಕೆ ಸರ್ಕಾರ ಒಪ್ಪಿದೆ. ಮಾನ್ಯ ಆಚಾರ್ಯರವರು ಸ್ವತ ಃ ವೈದ್ಯರಾಗಿರುವುದರಿಂದ ಡಾಕ್ಟರ್‌ಗಳ ಅವಶ್ಯಕತೆ ಜನರಿಗೆ ಎಷ್ಟು ಇದೆ ಎಂಬುದು ಅವರಿಗೆ ಗೊತ್ತಿದೆ. ಅವರು ಈ ವಿಚಾರಕ್ಕೆ ಸ್ಪಂದಿಸಿರುವುದರಿಂದ ನಾನು ನಿಮ್ಮ ಪರವಾಗಿ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ಮಧ್ಯೆ ಬೇರೆ ಬೇರೆ ಅಸ್ಪತ್ರೆಗಳಲ್ಲಿ ಔಷಧಿಗಳು ಇಲ್ಲ. ಗ್ರಾಮೀಣ ಭಾಗದಲ್ಲಿ ಸಾಮಾನ್ಯವಾಗಿ ಹಾವು ಕಡಿದರೆ, ನಾಯಿ ಕಡಿದರೆ, ಔಷಧಿಗಳು ಇಲ್ಲ. ಆಸ್ಪತೆಗಳಲ್ಲಿ ಆ ಔಷಧಿಯೇ ಸರಿಯಾಗಿ ಇರುವುದಿಲ್ಲ. ಡಾಕ್ಟರ್ ರವರನ್ನು ಕೇಳಿದರೆ, ನಾವು ಒಂದು ವೈಯಲ್ ಎರಡು ವೈಯಲ್ ಇಟ್ಟುಕೊಂಡಿರುತ್ತೇವೆ ಅದರ ಮೇಲೆ, ನಮಗೆ ಇಡುವುದಕ್ಕೆ ಆಗುವುದಿಲ್ಲ, ಹಾಗೆ ಹೀಗೆ ಎಂದು ಹೇಳುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ ಒಬ್ಬರಿಗೆ ಹಾವು ಕಡಿಯಬೇಕು, ಇಬ್ಬರಿಗೆ ಹಾವು ಕಡಿಯಬಾರದು ಎಂದು ನಿಯಮ ಏನಾದರು ಮಾಡಿಕೊಂಡಿದ್ದಾರೋ ಎಂದು ನನಗೆ ಗೊತ್ತಿಲ್ಲ. ಪ್ರತಿ ದಿನ ಬೆಳಿಗ್ಗೆ ಪತ್ರಿಕೆಯಲ್ಲಿ ಬಹಳಷ್ಟು ಕಡೆ ಈ ಹಾವಿನ ಕಡಿತದಿಂದ ಸಾವಿನ ಸುದ್ದಿಯನ್ನು ಓದುತ್ತೇವೆ, ಸಾಯುವುದಕ್ಕೆ ಕಾರಣ ಅವರಿಗೆ ಸೂಕ್ತ ಸಮಯದಲ್ಲಿ ಚಿಕಿತ್ಸೆ ಕೊಡುವುದಕ್ಕೆ ಸಾಧ್ಯವಾಗದೇ ಇರುವುದು. ಕೃಷಿ ಕಾರ್ಮಿಕರು ಹೆಚ್ಚಾಗಿ ಹಾವು ಕಡಿತಕ್ಕೆ ಒಳಗಾಗ ತಕ್ಕಂಥವರು. ಆದುದರಿಂದ, ಹಾವಿನ ಕಡಿತಕ್ಕೆ ಒಳಗಾಗಿರತಕ್ಕಂಥ ಜನಗಳಿಗೆ ಚಿಕಿತ್ಸೆಯನ್ನು ಕೊಡತಕ್ಕಂಥ ಔಷಧಿಯನ್ನು ಕಡ್ಡಾಯವಾಗಿ ಆಸ್ಪತ್ರೆಗಳಲ್ಲಿ ಇಡತಕ್ಕಂಥದ್ದಕ್ಕೆ ಸರ್ಕಾರದವರು ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕೆಂದು ನನ್ನ ಒತ್ತಾಯ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಅಂಗವಿಕಲರಿಗೆ ಟ್ರೈಸಿಕಲ್ ಅನ್ನು ಕೊಡುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ಏನು ಮಾಡಿದ್ದಾರೆಂದರೆ, ಅದನ್ನು ತೆಗೆದುಕೊಂಡು ಹೋಗಿ ಯಾವುದೋ NGO ಗೆ ಕೊಟ್ಟಿದ್ದಾರೆ. ಅವರ ಹತ್ತಿರ ದುಡ್ಡು ಇಲ್ಲ, ಸರಿಯಾಗಿ ಅವರು ಕೆಲಸದವರಿಗೆ ಸಂಬಳವನ್ನೇ ಕೊಡುತ್ತಿಲ್ಲ.

ಉದಾಹರಣೆಗೆ ನನ್ನ ಕ್ಷೇತ್ರದಲ್ಲಿ ಸುಮಾರು ನೂರಕ್ಕೆ ಹೆಚ್ಚಿನ ಜನರಿಗೆ ಅಂಗವಿಕಲರಿಗೆ ಟ್ರೈಸಿಕಲ್ ಅನ್ನು ಹಂಚುವುದಕ್ಕೆ ಸಾಧ್ಯವಾಗಿಲ್ಲ. ಕಾರಣ ಏನೆಂದರೆ, ಈ ಇಲಾಖೆಯಲ್ಲಿ ಕೇಳಿದರೆ, ಇಲ್ಲ ಅದು ಬೇರೆ NGO ಗಳಿಗೆ ಕೊಟ್ಟಿದ್ದಾರೆ, ಅವರೇ ಮಾಡಬೇಕೆಂದು ಹೇಳುತ್ತಾರೆ. ಅವರು ಯಾವ NGO ನೋ, ಏನೋ, ನಮಗೆ ಗೊತ್ತಿಲ್ಲ. ಹೀಗಾಗಿ ಇಲಾಖೆವತಿಯಿಂದ ಟ್ರೈಸಿಕಲ್‌ನ್ನು ವಿತರಿಸುವಂಥ ಮೊದಲು ಏನು ವ್ಯವಸ್ಥೆಯಿತ್ತು, ಮತ್ತೆ ಅದನ್ನು ಜಾರಿ ಮಾಡಿಬೇಕು, ಯಾರಿಗೆ ಕೊಟ್ಟಿದ್ದಾರೆ ಅವರಿಂದ ಪುನಃ ವಾಪಸ್ ತೆಗೆದುಕೊಂಡು ಆ ಅಧಿಕಾರವನ್ನು ಸರ್ಕಾರ ಇಟ್ಟುಕೊಂಡು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದಲೇ ಅದನ್ನು ಮೊದಲಿನಂತೆ ನಡೆಸಬೇಕೆಂದು ನನ್ನ ಸಲಹೆ. ಸಮಾಜ ಕಲ್ಯಾಣ ಇಲಾಖೆಯ ವಿಚಾರದಲ್ಲಿ ಒಂದು ಮಾತು ಹೇಳುತ್ತೇನೆ. ಈ ಬಗ್ಗೆ ಇವತ್ತು ಶ್ರೀಮತಿ ಶಕುಂತಲಾ ಶೆಟ್ಟಿಯವರ ಪ್ರಶ್ನೆಯೂ ಇದೆ. ಅವರು ಈ ವರ್ಷದ ಟಾರ್ಗೆಟ್ ಬಗ್ಗೆ ಕೇಳಿದ್ದಾರೆ. ೨೦೦೨-೦೩ ನಿಂದ ಇಲ್ಲಿಯವರೆಗೆ ಆಗಿರತಕ್ಕಂಥ prograess ಏನು ಇದೆ, ಆ ಬಗ್ಗೆ evaluation ಆಗಬೇಕು. ಇದರಿಂದಾಗಿ ಅವರಿಎ ಏನು ಲಾಭವಿದೆ ? ಅವರ ಪರಿಸ್ಥಿತಿ ಮೊದಲು ಹೇಗೆ ಇತ್ತು, ಇವೆಲ್ಲಾ ಆದ ಮೇಲೆ ಎಷ್ಟು ಅಭಿವೃದ್ಧಿ ಆಗಿದೆ? ನಿಜಕ್ಕೂ ಅವರಿಗೆ ಲಾಭ ಆಗಿದೆಯೂ ಎನ್ನತಕ್ಕಂಥ ಒಂದು evaluation ಅನ್ನು ಸರ್ಕಾರದವತಿಯಿಂದ ಮಾಡಿಸತಕ್ಕಂಥದ್ದು ಅಥವಾ ಬೇರೆ ಯಾವುದಾದರು ಒಂದು independent agency ಯಿಂದ ಮಾಡಬೇಕಾಗುತ್ತದೆ. ಇದರಲ್ಲಿ ಸುಮಾರು ಹಣವನ್ನು ಕೊಡುತ್ತಿದ್ದಾರೆ. ಅಂದರೆ, ಸುಮಾರು ೧೦೦ ಕೋಟಿ Pooled amount ಸೇರಿ ಪರಿಶಿಷ್ಟ ಜಾತಿಯವರಿಗೆ, ೧೮.೫ ಕೋಟಿ, ಪರಿಶಿಷ್ಟ ಪಂಗಡದವರಿಗೆ ೭ ಕೋಟಿ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ೧೦ ಕೋಟಿ ಸೇರಿ ಸುಮಾರು ೫೦-೬೦ ಕೋಟಿ ರೂಪಾಯಿಗಳನ್ನು ಕೊಡಲಾಗುತ್ತಿದೆ. ನಾವು ಇಷ್ಟೊಂದು ಹಣ ಕೊಡತಕ್ಕಂಥ ಸಂದರ್ಭದಲ್ಲಿ ಸಂಬಂಧಪಟ್ಟಂಥ ಫಲಾನುಭವಿಗಳಿಗೆ ಅದರ ಪೂರ್ಣ ಲಾಭವಾಗ ಬೇಕಾಗುತ್ತದೆ. ನಾನು ಕೂಡ ಬಹಳ ಹತ್ತಿರದಿಂದ ಜನರ ಪರಿಸ್ಥಿತಿಯನ್ನು ನೋಡಿದ್ದೇನೆ. ಗಂಗಾ ಕಲ್ಯಾಣ ಯೋಜನೆಯಲ್ಲಿ ಸಾಕಷ್ಟು ಅವ್ಯವಹಾರ

ನಡೆಯುತ್ತಿವೆ. ಇದರಲ್ಲಿ ಒಂದು ಮೀಟರ್ ಬೋರ್‌ವೆಲ್ ಡ್ರಿಲ್ ಮಾಡುವುದಕ್ಕೆ ೨೪೦ ರೂಪಾಯಿ ತೆಗೆದುಕೊಳ್ಳುತ್ತಾರೆ. ಇದರ ಬಗ್ಗೆ ತಮಗು ಕೂಡ ಅನುಭವ ಇದೆ. ಮತ್ತೆ ನಾವು ಕೂಡ ಬೋರ್ವೆಲ್ ಕೊರೆಸಿರುತ್ತೇವೆ. ಆದ್ದರಿಂದ ಅದನ್ನೇ ನಾವು ಊರಿನಲ್ಲಿ ಮಾಡಿಸಿದರೆ. ೧ ಮೀಟರ್‌ಗೆ ಸುಮಾರು ೧೨೦, ೧೫೦, ೧೬೦ ರೂಪಾಯಿಗೆ ಕೊರೆಯತಕ್ಕಂಥವರು ಇದ್ದಾರೆ. ಆದರೆ, ಇವರು ೨೫೦ ರಿಂದ ೨೬೦ ಚಾರ್ಜ್ ಮಾಡುತ್ತಾರೆ. ಮತ್ತೆ ನಿಗದಿ ಮಾಡಿರುವ ೩೫ ಸಾವಿರ ರೂಪಾಯಿಗಿಂಥ ಹೆಚ್ಚು ಕೊರೆಯುವುದಕ್ಕೆ ಆಗುವುದಿಲ್ಲವೆಂದು ಇವರು ಇಲ್ಲಿಂದಲೇ ಬರಿಸಿ ಕಳುಹಿಸಿ ಕೊಡುತ್ತಾರೆ. ಸುಮಾರು ೩೦೦ ಅಡಿಯವರೆಗೆ ಕೊರೆಯಬೇಕು ಅದರ ಮೇಲೆ ಕೊರೆಯುವಂತಿಲ್ಲವೆಂದು ಹೇಳುತ್ತಾರೆ. ಇದು ನೋವಾಟರ್ ನೋ ಮನಿ ಸ್ಕೀಂ ಆಗಿದೆ. ಈ ರೀತಿಯಾಗಿದ್ದರೂ ಕೂಡ ೩೫ ಸಾವಿರ ರೂಪಾಯಿಗಳನ್ನು ನಿಗದಿ ಮಾಡಿ ೩೦೦ ಅಡಿಗಿಂಥ ಹೆಚ್ಚು ಕೊರೆಯಬಾರದೆಂದು ಹೇಳುತ್ತಾರೆ. ೩೦೦ ಅಡಿಗೆ ಇವತ್ತಿನ ದಿವಸ ನೀರು ಸಿಗುತ್ತಿಲ್ಲ. ಕೋಲಾರ ಜಿಲ್ಲೆಯಲ್ಲಿ ೭೦೦ ರಿಂದ ೮೦೦ ಅಡಿವರೆಗೆ ಬೋರ್‌ವೆಲ್ ಕೊರಿಸಿದರೆ ನೀರು ಸಿಗಬಹುದು. ಆದ್ದರಿಂದ, ಅವಯಜ್ಞಾನಿಕವಾಗಿ ಈ ಒಂದು ಕಾರ್ಯಕ್ರಮವನ್ನು ಜಾರಿ ಮಾಡತಕ್ಕಂಥ ವ್ಯವಸ್ಥೆ ಮಾಡಿದ್ದಾರೆ. ಇದರ ಒಂದು ಲಾಭ ಫಲಾನುಭವಿ ಗಳಿಗೆ ಆಗುವುದಿಲ್ಲ. ಆದರೆ, ಸರ್ಕಾರದ ಹಣ ಮಾತ್ರ ಖರ್ಚಾಗುತ್ತಿದೆ. ಆದ್ದರಿಂದ, ಗಂಗಾ ಕಲ್ಯಾಣ ಯೋಜನೆಗೆ ಸಂಬಂಧಪಟ್ಟಂತೆ ನನ್ನ ಸಲಹೆ ಏನೆಂದರೆ, ಈಗ ನಡೆಯುತ್ತಿರುವ ಅವ್ಯವಹಾರಗಳನ್ನು ತಪ್ಪಿಸಲಿಕ್ಕೆ ಮತ್ತು ಫಲಾನುಭವಿಗಳಿಗೆ ಅನುಕೂಲವಾಗಬೇಕೆಂಬುದು ನಮ್ಮ ಅಭಿಪ್ರಾಯವಾಗಿದೆ. ಆದ್ದರಿಂದ, ಈಗ ಆಶ್ರಯ ಮನೆಗಳನ್ನು ಕಟ್ಟುವಾಗ ಮನೆಗಳ ಪ್ರೋಗ್ರೆಸ್ ನೋಡಿ ಮೂರ್‍ನಾಲ್ಕು ಸಾರಿ ಬಿಲ್‌ಗಳನ್ನು ಕೊಡುವಂತೆ ಇಲ್ಲಿಯು ಕೂಡ ಅದೇ ರೀತಿಯಾಗಿ ಆಯಾ ಫಲಾನುಭವಿಗಳಿಗೆ ನೇರವಾಗಿ ಹಣವನ್ನು ಕೊಡತಕ್ಕಂಥ ವ್ಯವಸ್ತೇ ಮಾಡಿದಾಗ ಮಾತ್ರ ಫಲಾನುಭವಿಗಳು ಅದರ ಲಾಭವನ್ನು ಪಡೆಯುವುದಕ್ಕೆ ಸಾಧ್ಯವಾಗುತ್ತದೆ. ಈ ರೀತಿ ಮಾಡಿದಾಗ, ಅವರುಗಳು ಈ ಮಧ್ಯವರ್ತಿಗಳಿಂದ ದೂರವಾಗಬಹುದು. ಇಲ್ಲದಿದ್ದರೆ

ಏನಾಗುತ್ತೆಂದರೆ, ಅವರು ಕೊಡುವ ಮೋಟರ್ ೧೦ ಸಾವಿರ ರೂಪಾಯಿ ಬಾಳುವುದಿಲ್ಲ, ಅವು ೩೫ ಸಾವಿರ ರೂಪಾಯಿ ಬೆಲೆ ನಿಗದಿ ಮಾಡಿ ಅವರಿಗೆ ಕೊಡುತ್ತಾರೆ. ಮತ್ತೆ ಸ್ಟಾರ್ಟರ್ ೨೦೦೦ ರೂಪಾಯಿ ಬಾಳುವುದಿಲ್ಲ, ಆದರೆ ಅದಕ್ಕೆ ೬ ಸಾವಿರ ರೂಪಾಯಿ ನಿಗದಿ ಮಾಡುತ್ತಾರೆ. ಹಾಗೆಯೇ ಒಂದು ಲೆಂಗ್ ಪೈಪ್ ೭೦೦-೮೦೦ ರೂಪಾಯಿ ಬಾಳುವುದಿಲ್ಲ. ಆದರೆ, ಅದಕ್ಕೆ ೧೨೦೦-೧೩೦೦ ರೂಪಾಯಿ ಚಾರ್ಜ್ ಮಾಡುತ್ತಾರೆ. ಈ ರೀತಿ ಯಾಗಿ ಅವರು ಬಡವರ ಹೆಸರಿನಲ್ಲಿ ಹಣವನ್ನು ಲೂಟಿ ಮಡುತ್ತದ್ದಾರೆ. ಆದ್ದರಿಂದ ಇದನ್ನು ತಪ್ಪಿಸಬೇಕಾದರೆ, ಮನೆಗಳನ್ನು ಕಟ್ಟುವವರಿಗೆ ಹೇಗೆ ಹಂತ ಹಂತವಾಗಿ ಹಣವನ್ನು ಪಾವತಿ ಮಾಡುತ್ತೇವೆಯೋ, ಅದೇ ರೀತಿಯಾಗಿ ಈ ಹಣವನ್ನು ಕೂಡ ಹಂತ ಕೂಡ ಹಂತ ಹಂತವಾಗಿ ಪಾವತಿ ಮಾಡತಕ್ಕಂಥ ವ್ಯವಸ್ಥೆ ಮಾಡಬೇಕೇಂದ ಸರ್ಕಾರದ ಮೇಲೆ ನಾನು ಒತ್ತಾಯ ಮಾಡುತ್ತೇನೆ. ಈಗ ಸಹಕಾರ ಸಂಘಗಳ ಸಾಲದ ವಿಚಾರದ ಬಗ್ಗೆ ಹೇಳುವುದಾದರೆ, ಹಿಂದೆ ಮಾನ್ಯ ಎಸ್.ಎಂ.ಕೃಷ್ಣರವರ ನೇತೃತ್ವದಲ್ಲಿ ಕೂಡ ೧೨೭.೫ ಕೋಟಿ ರೂಪಾಯಿಗಳಷ್ಟು ಬಡ್ಡಿಯನ್ನು ಮಾನ್ನಾ ಮಾಡಿರತಕ್ಕಂಥ ಒಂದು ನಿದರ್ಶನ ಇದೆ. ಮಾನ್ಯ ವಿಶ್ವನಾಥ್‌ರವರು ಸಹಕಾರ ಸಚಿವರಾಗಿದ್ದು ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯ ಮಂತ್ರಿಯಗಿದ್ದಂಥ ಸಂದರ್ಭದಲ್ಲಿ, ಬಡ್ಡಿ ಮನ್ನಾ ಮಾಡಿದಂಥ ೧೨೭.೫ ಕೋಟಿ ರೂಪಾಯಿಗಳು ಅಂದರೆ, ೨೦೦೨-೦೩ ನೇ ಸಾಲಿನದು ಕೂಡ, ನೆನ್ನೆ ದಿವಸ ಮಂಡಿಸಿದ ಪೂರಕ ಅಂದಾಜಿನಲ್ಲಿ ಸೇರಿದೆ. ಆಗಿನ ಬಾಕಿ ಹಣವನ್ನು ಈ ಸರ್ಕಾರ ಕೊಟ್ಟಿದೆ. ಒಟ್ಟಾರೆ ನಮ್ಮ ಸರ್ಕಾರದ ಶೇರು ಹಣ ಈ ಒಂದು ಸಹಕಾರಿ ಆಂದೋಲನದಲ್ಲಿದ್ದರೆ, ಅದು ಬ್ಯಾಂಕ್ಗಳಲ್ಲಿರಬಹುದು. ಆದರೆ, ಅದು ಮೂರು ಕೋಟಿಗೂ ಮೀರಿಲ್ಲ. ಅಲ್ಲಿರತಕ್ಕಂಥ ಪೂರ್ಣ ಹಣವೆಲ್ಲಾ ಡೆಪಾಸಿಟರ್‌ಗಳಿದ್ದು. ಬೇರೆ ಸಂಸ್ಥೆಗಳಲ್ಲಿ ಡೆಪಾಸಿಟ್ ಇಟ್ಟರೆ ೧% ಹೆಚ್ಚಿಗೆ ಬಡ್ಡಿ ಕೊಡುತ್ತಾರೆಂಬ ಆಸೆಯಿಂದ ಇಲ್ಲಿ ದುಡ್ಡು ಇಟ್ಟಿರುತ್ತಾರೆ. ಈ ಒಂದು ಹಣದಿಂದ ಸಾಲ ಕೊಟ್ಟಿರತಕ್ಕಂಥದಾಗಿದೆ. ಈಗಾಗಲೇ ಹಿಂದೆ ಮಾನ್ಯ ಎಸ್.ಎಸ್.ಪಾಟೀಲ್‌ರವರು ಸಹಕಾರ ಸಚಿವರಾಗಿದ್ದಾಗ ಮತ್ತು ಮಾನ್ಯ ನಾಣಯ್ಯನವರು ಕಾನೂನು ಸಚಿವರಾಗಿದ್ದರೆ ಮತ್ತೆ ಮಾನ್ಯ

ಸಿದ್ಧರಾಮಯ್ಯನವರು ಹಣಕಾಸಿನ ಸಚಿವರಾಗಿದ್ದಂಥ ಸಂದರ್ಭದಲ್ಲಿ ಈ ಮೂರು ಜನ ಬಾಂಬೆಗೆ ಹೋಗೆ ಸರ್ಕಾರದ ಪರವಾಗಿ ಒಂದು ಮುಚ್ಚಳಿಕೆಯನ್ನು ಬರೆದುಕೊಟ್ಟಿದ್ದಾರೆ. ಅದೇನೆಂದರೆ, ಸರ್ಕಾರ ಮುಂದೆ ಯಾವುದೇ ರೀತಿಯ ಸವಲತ್ತುಗಳನ್ನು ಮತ್ತು ಸೌಲಭ್ಯಗಳನ್ನು ರೈತರಿಗೆ ಕೊಡತಕ್ಕಂಥ ಸಂದರ್ಭದಲ್ಲಿ ನಾವು ಬಜೆಟ್‌ನಲ್ಲಿ ಪ್ರಾವಿಜನ್ ಮಾಡಿಕೊಳ್ಳುತ್ತೇವೆಂದು, ತಾವುಗಳು ಅಲ್ಲಿಗೆ ಹೋಗಿ ಬರೆದುಕೊಟ್ಟು ಬಂದಿದ್ದೀರಿ ಈ ಒಂದು ಪರಿಸ್ಥಿತಿ ಇರುವಾಗಿ ಈ ಸಾರಿಯ ಮುಂಗಡ ಪತ್ರದಲ್ಲಿ ಇದಕ್ಕೆ ಸುಮಾರು ೧೯೫೦ ಕೋಟಿ ರೂಪಾಯಿ ಖರ್ಚಾಗುತ್ತದೆಂದು ಅಂದಾಜು ಮಾಡಿದ್ದರು ಕೂಡ, ಇದು ಇನ್ನೂ ಹೆಚ್ಚಾಗುತ್ತದೆಂಬುದು ನನ್ನ ಭಾವನೆ. ಆದ್ದರಿಂದ ಈಗ ಕೇವಲ ೫೦೦ ಕೋಟಿ ಇಡತಕ್ಕಂಥದ್ದು ಸರಿಯಲ್ಲ. ಏಕೆಂದರೆ, ಈ ಸಂಸ್ಥೆಗಳು ನಾಳೆ ದಿವಸ ತೊಂದರೆಗೆ ಒಳಗಾಗುತ್ತವೆ. ಸಂಸ್ಥೆಗಳು ತೊಂದರೆಗೆ ಒಳಗಾಗುತ್ತವೆಂದು ರೈತರಿಗೆ ಸಾಲ ಮನ್ನಾ ಮಾಡಬೇಡಿ ಎಂದು ನಾನು ಹೇಳುತ್ತಿಲ್ಲ ಆದರೆ, ಆ ಒಂದು ಸಂಸ್ಥೆಗಳು ಮತ್ತು ಡಿಪಾಸಿಟರ್ ಗಳ ಹಿತದೃಷ್ಟಿಯಿಂದ, ಮುಂಗಡ ವಾಗಿ ಹಣವನ್ನು ಸರ್ಕಾರ ಪಾವತಿ ಮಾಡಬೇಕು. ಈಗ ಕೊಟ್ಟಿರುವ ೫೦೦ ಕೋಟಿ ರೂಪಾಯಿಗಳು ಸಾಕಾಗುವುದಿಲ್ಲವೆಂದು ಪತ್ರಿಕೆಗಳಲ್ಲಿಯೂ ಬಂದಿದೆ. ಮತ್ತೆ ಇಲಾಖೆಯಗಳು ಯಾವ್ಯಾವ ತರಹದ ಬಿಲ್‌ಗಳನ್ನು ಟ್ರಷರಿಗೆ ಎಷ್ಟು ದಿವಸಗಳ ಒಳಗಡೆ ಸಬ್‌ಮಿಟ್ ಮಾಡಬೇಕೆಂಬುದರ ಬಗ್ಗೆ ಆರ್ಥಿಕ ಇಲಾಖೆಯ ಆದೇಶ ಕೂಡ ಇದೆ. ಈ ಒಂದು ಆದೇಶದ ಅನ್ವಯ ಅವರು ಅದನ್ನು ರೆಫ್ಯೂಸ್ ಮಾಡಿದ್ದಾರಷ್ಟೆ. ಅಂದರೆ, ೧೫ನೇ ತಾರೀಖಿನ ದಿವಸ ಯಾವ ಬಿಲ್ ಬರಬೇಕೆಂದು ಮತ್ತು ೨೦ನೇ ತಾರೀಖಿನ ದಿವಸ ಯಾವ ಬಿಲ್ ಬರಬೇಕೆಂಬುದರ ಬಗ್ಗೆ ಮೊದಲೇ ಕಂಪ್ಯೂಟರ್ ನಲ್ಲಿ ಪ್ರೋಗ್ರಾಮ್ ಮಾಡಿರುತ್ತಾರೆ. ಆದ್ದರಿಂದ ಲೇಟ್ ಆಗಿ ಬಿಲ್ ಸಬ್‌ಮಿಟ್ ಮಾಡಿದರೆ, ಅಲ್ಲಿ ಬಿಲ್‌ನ್ನು ಅಕ್ಸೆಪ್ಟ್ ಮಾಡುವುದಿಲ್ಲ. ಹಾಗಾಗಿ ಅದು ರೆಫ್ಯೂಸ್ ಆಗಿದೆಯಷ್ಟೆ. ಆದ್ದರಿಂದ ಆ ಹಣವನ್ನು ಆದಷ್ಟು ಜಾಗ್ರತೆ ಅವರಿಗೆ ಕೊಡಿಸತಕ್ಕಂಥ ವ್ಯವಸ್ಥೆ ಮಾಡಬೇಕು. ಮತ್ತೆ ಈಗ ಬಜೆಟ್ ಮೇಲೆ ಕಾರಿಜೆಂಡಮ್ ಬಂತು ಅದರಲ್ಲಿಯೂ ೨೫ ಸಾವಿರ ರೂಪಾಯಿ

ಇದ್ದಂಥದನ್ನು ೫೦ ಸಾವಿರ ರೂಪಾಯಿಗೆ ಎಂದು ಹೇಳಲಾಗಿದೆ. ಅಂದರೆ ೫೦ ಸಾವಿರ ತೆಗೆದುಕೊಂಡಿರುವವರಿಗೆ ೨೫ ಸಾವಿರ ರೂಪಾಯಿ ನೋಡಿ ಬಿಡತಕ್ಕಂಥವನ್ನು ಮಾಡಲಾಗಿದೆ. ಯಾವುದೇ ರೈತ ಎಷ್ಟೇ ಸಾಲ ತೆಗೆದುಕೊಂಡಿದ್ದರೂ ಅವರಿಗೆ ೨೫ ಸಾವಿರ ರೂಪಾಯಿ ಮತ್ತು ಬಡ್ಡಿ ಹಣವನ್ನು ಮನ್ನಾ ಮಾಡಿಕೊಡಬೇಕೆಂಬ ನಮ್ಮ ಮತ್ತು ವಿರೋಧಪಕ್ಷದವರ ಒತ್ತಾಯ ಸರ್ಕಾರದ ಮೇಲೆ ಇದೆ. ಆದ್ದರಿಂದ ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ರೈತರ ಪರವಾಗಿ ಮತ್ತು ಇಲ್ಲಿರತಕ್ಕಂಥ ಎಲ್ಲಾ ಸದಸ್ಯರ ಒತ್ತಾಯದ ಪ್ರಕಾರ, ಸರ್ಕಾರ ಉತ್ತರ ಕೊಡುವಂತಹ ಸಂದರ್ಭದಲ್ಲಿ ಸ್ಪಂಧಿಸುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಯಾವುದೇ ರೈತ ೧,೨ ಲಕ್ಷ ಅಥವಾ ಎಷ್ಟೇ ಲಕ್ಷ ಸಾಲ ತೆಗೆದುಕೊಂಡಿದ್ದರೂ ಅವರಿಗೆ ೨೫ ಸಾವಿರ ಸಾಲದ ಹಣ ಮನ್ನಾ ಮಾಡಬೇಕು. ಈಗ ಸರ್ಕಾರ ಮಾಡಿರತಕ್ಕಂಥದು ಸ್ವಾಗತಾರ್ಹ. ಬಜೆಟ್ ಪುಸ್ತಕ ಮೊದಲನೇ ಪುಟದಲ್ಲಿ ಸರ್ವರಿಗೂ ಸಮಪಾಲು ಮತ್ತು ಸಮಬಾಳು ನೀಡುವ ದಿಕ್ಕಿನಲ್ಲಿ ಎಂದು ಹೇಳಿದ್ದೀರಿ. ಆದ್ದರಿಂದ ಇದಕ್ಕೆ ಸಂಬಂಧಪಟ್ಟಂತೆ ನನ್ನ ಮೂಲಭೂತವಾದ ಪ್ರಶ್ನೆ ಏನೆಂದರೆ, ಸರ್ಕಾರದಲ್ಲಿರತಕ್ಕಂಥ ಹಣಕ್ಕೆ ಹಕ್ಕುದಾರರು ಯಾರು ? ಈ ರಾಜ್ಯದಲ್ಲಿರತಕ್ಕಂಥ ಪ್ರತಿಯೊಬ್ಬ ಪ್ರಜೆ ಕೂಡ ಅದಕ್ಕೆ ಹಕ್ಕುದರ ನಾಗಿರುತ್ತಾನೆ. ಇವತ್ತಿನ ದಿವಸ ಈ ರಾಜ್ಯದಲ್ಲಿ ಸುಮಾರು ೭೦ ಲಕ್ಷ ರೈತ ಕುಟುಂಬಗಳು ಇವೆ. ೭೦ ಲಕ್ಷ ರೈತ ಕುಟುಂಬಗಳನ್ನು ಲೆಕ್ಕಕ್ಕೆ ತೆಗೆದು ಕೊಂಡು, ಇವತ್ತಿನ ದಿವನ ರೈತ ಸಹಕಾರ ಸಂಸ್ಥೆಯಲ್ಲಿ ಸಾಲ ಮಾಡಿರತಕ್ಕಂಥದರಲ್ಲಿ ೨೫ ಸಾವಿರ ರೂಪಾಯಿಗಳನ್ನು ಬಿಟ್ಟಿದ್ದೇವೆಂದು ತಾವು ಹೇಳಿದರು ಕೂಡ, ಇದು ಕೇವಲ ೧೪ ಲಕ್ಷ ರೂಪಾಯಿಗಳಷ್ಟೆ. ಉಳಿದ ರೈತರಲ್ಲಿ ಕೆಲವರು ಕಮರ್ಷಿಯಲ್ ಬ್ಯಾಂಕ್‌ನಲ್ಲಿ ಮತ್ತೆ ಕೆಲವರು private money lender ಕಡೆಯಿಂದ ಸಾಲ ತೆಗೆದುಕೊಂಡಿರುತ್ತಾರೆ. ಇನ್ನು ಕೆಲವು ಜನರಿಗೆ ಎಲ್ಲೆಲ್ಲಿ ಅನುಕೂಲವಿರುತ್ತದೆಯೋ ಅಂಥ ಕಡೆ ಸಾಲ ತೆಗೆದುಕೊಂಡಿರುತ್ತಾರೆ. ಆದ್ದರಿಂದ ಇಲ್ಲಿ ಸಾಲ ತೆಗೆದುಕೊಂಡಿರತಕ್ಕಂಥ ರೈತರಿಗೆ ತಾವು ಏನು ಮಾಡುತ್ತೀರಿ ? ಏಕೆಂದರೆ, ಈ ಸರ್ಕಾರದ ಎಲ್ಲಾ ಹಕ್ಕುದಾರರಿಗೆ ಸಮಾನವಾಗಿ ..

ಅಧ್ಯಕ್ಷರು : ತಾವು ಈಗಾಗಲೇ ಹೆಚ್ಚಿನ ಸಮಯ ಮಾತನಾಡಿದ್ದೀರಿ, ಬೇಗ ಮುಗಿಸಬೇಕು.

ಶ್ರೀ ಕೆ.ಎನ್.ರಾಜಣ್ಣ : ಇದು ಬಹಳ ಮುಖ್ಯವಾದ ವಿಚಾರ. ಇದರ ಬಗ್ಗೆ ಇನ್ನೂ ಹೇಳುವುದು ಇದೆ.

ಅಧ್ಯಕ್ಷರು : ಸ್ವಾಮಿ ತಾವು ಹೇಳುತ್ತಾ ಹೋದರೆ ಗಂಟೆಗಟ್ಟಲೆ ಮಾತನಾಡುತ್ತಾ ಹೋಗುತ್ತೀರಿ. ಮಾತನಾಡುವುದಕ್ಕೆ ನಿಮ್ಮ ಹತ್ತಿರ ಸರಕುಗಳಿವೆ. ನಾನು ಎಲ್ಲರಿಗೂ ಅವಕಾಶ ಕೊಡಬೇಕಲ್ಲವೆ ?

ಶ್ರೀ ಕೆ.ಎನ್.ರಾಜಣ್ಣ : ಸರ್ಕಾರದಲ್ಲಿ ತೀರ್ಮಾನ ತೆಗೆದು ಕೊಂಡಿರತಕ್ಕಂಥದರ ಬಗ್ಗೆ ಇನ್ನೂ ಪರಿಣಾಮಕಾರಿಯಾಗಿ ಹೆಚ್ಚು ಜನರಿಗೆ ಸಹಾಯವಾಗುವಂಥ ಸಲಹೆಗಳನ್ನಾದರು ನಾವು ಮಾಡಬೇಕಲ್ಲವೆ ? ಪ್ರಾರಂಭದಲ್ಲಿ ಅದು ಸರಿಯಾದ ರಸ್ತೆಯಲ್ಲಿ ಬರಲಿಲ್ಲ ಎನ್ನತಕ್ಕಂಥದು ನಮ್ಮ ಸರ್ಕಾರದ ಚಿಂತನೆಯಾಗಿದೆ. ಈಗ ನಾವು ಹೇಳುವುದೇನೆಂದರೆ, ಸುಮಾರು ೩೨ ವರ್ಷಗಳ ಹಿಂದೆ ಎಷ್ಟು ಬರಗಾಲ ಇತ್ತಿಂಬುದರ ಬಗ್ಗೆ ಮತ್ತು ಎಷ್ಟು ಮಳೆ ಕಡಿಮೆಯಾಗಿದೆ ಎಂಬ ಅಂಕೆ-ಅಂಶ ನಮ್ಮ ಮುಂದೆ ಇದೆ. ಮಳೆ ಆಶ್ರಯದಲ್ಲಿ ಯಾರು ಬೆಳೆ ಬೆಳೆಯುತ್ತಾರೋ ಅವರಿಗೆ ನಷ್ಟವಾಗಿರುತ್ತದೆ. ಇಂತಹವರು ಸಾಲ ತೆಗೆದುಕೊಂಡಿರತಕ್ಕಂಥದನ್ನು ಪೂರ್ಣವಾಗಿ ವಜಾ ಮಾಡತಕ್ಕಂಥದು ಅಥವಾ ಸಾಲ ಮನ್ನಾ ಮಾಡತಕ್ಕಂಥ ನೀತಿ ಬರಬೇಕಾಗಿತ್ತು. ಆದರೆ, ಇಲ್ಲಿ ಕಾಫಿ ಪ್ಲಾಂಟರ್‌ಗಳಿಗೂ ಮತ್ತು ೩-೪ ಸಾವಿರ ಕೋಟಿ ಖರ್ಚು ಮಾಡಿ ಡ್ಯಾಂ ಕಟ್ಟಿ ವರ್ಷಕ್ಕೆ ಎರಡೆರಡು ಬೆಳೆ ಭತ್ತ ಬೆಳಯತಕ್ಕಂಥವರ ಸಾಲವನ್ನು ಮನ್ನಾ ಮಾಡುತ್ತೇವೆಂದು ಹೇಳಿದ್ದು, ಇದಕ್ಕೆ ಸಂಬಂಧಪಟ್ಟಂತೆ, ಸರ್ಕಾರದ ನೀತಿಯ ಬಗ್ಗೆ ಪ್ರಶ್ನೆ ಮಾಡಿದರೆ, ಉತ್ತರ ಏನು ಹೇಳಬೇಕು ಎಂಬ ಬಗ್ಗೆ ನಾನು ಅವರಲ್ಲಿ ಕೇಳುತ್ತಿದ್ದೇನೇ ಹೊರತು ಬೇರೆ ಏನು ಕೇಳುತ್ತಿಲ್ಲ. ನಮ್ಮ ಭಾಗದಲ್ಲಿ ಇನ್ನೂ ಚಿಂತಾಜನವಾದ ಪರಿಸ್ಥಿತಿ ಇದೆ. ನಾವು ಬರಗಾಲ ಪೀಡಿತ ಪ್ರದೇಶದಲ್ಲಿ ಬರುವಂತಹ ಮಧುಗಿರಿ ಸಬ್ ಡಿವಿಜನ್ ನಲ್ಲಿ ಬರುತ್ತೇವೆ. ನಮ್ಮಲ್ಲಿ ಜಮೀನು ಇಲ್ಲದೇ ಇರುವವರು ಮನೆಯಲ್ಲಿರುವಂತಹ ಮಕ್ಕಳನ್ನು ಅಡ

ಇಟ್ಟು ಸಾಲವನ್ನು ತೆಗೆದುಕೊಂಡಿರುತ್ತಾರೆ. ಅವರು ಮಾಡಿರುವ ಸಾಲವನ್ನು ಯಾರು ತೀರಿಸುತ್ತಾರೆ ?

ಅಧ್ಯಕ್ಷರು : ಅವರ ಕಡೆಗೆ ಯಾರೂ ನೋಡುವುದಿಲ್ಲ.

ಶ್ರೀ. ಕೆ.ಎನ್. ರಾಜಣ್ಣ : ಅವರನ್ನು ಯಾರೂ ಕೇಳುವುದಿಲ್ಲ.

ಅಧ್ಯಕ್ಷರು : ಅವರ ಬಗ್ಗೆ ಏತಕ್ಕೆ ಮಾತನಾಡುತ್ತೀರಿ, ಬಿಡಿ.

ಶ್ರೀ. ಕೆ.ಎನ್. ರಾಜಣ್ಣ : ಹಾಗೆಯೇ SC/ST Development Corporation ನಿಂದ ೫ ರಿಂದ ೧೦ ಸಾವಿರ ರೂಪಾಯಿಗಳ ಸಾಲವನ್ನು ತೆಗೆದುಕೊಂಡಿದ್ದಾರೆ. ಅವರಿಗೆ ಮನೆ ಇಲ್ಲ. ಏನು ಇಲ್ಲದಿದ್ದರೂ ಜೀವನ ವನ್ನು ಮಾಡುತ್ತಾರೆ. ಅವರು ಮಾಡಿರುವಂತಹ ಸಾಲವನ್ನು ಯಾರು ತೀರಿಸುತ್ತಾರೆ? ಬರೀ ಕಾಫಿಪ್ಲಾಂಟರ್ಸ್ ಮತ್ತು ಕಬ್ಬು ಬೆಳೆಯುವವರು, ೨-೨ ಬೆಳೆ ಭತ್ತವನ್ನು ಬೆಳೆಯುತ್ತಾರೆ. ಇವರಿಗೆಲ್ಲಾ ಸಾಲವನ್ನು ಮನ್ನಾ ಮಾಡು ತ್ತೀರಿ. ಇವರಿಗೆ ಏಕೆ ಸಾಲವನ್ನು ಮನ್ನಾ ಮಾಡಬಾರದು, ಇವರು ಪಾಪ ಮಾಡಿದ್ದಾರೆ, ಎನ್ನುವಂತಹ ಮಾತು ಕೇಳಿ ಬರುತ್ತಿದೆ. ಅದನ್ನು ಕೈಡ ಸರ್ಕಾರದವರು ಗಮನದಲ್ಲಿಟ್ಟುಕೊಳ್ಳಬೇಕು.

ಅಧ್ಯಕ್ಷರು : ಮಾನ್ಯ ರಾಜಣ್ಣನವರೇ, ಇನ್ನು ಎಷ್ಟು ಹೊತ್ತು ಮಾತನಾಡುತತೀರಿ ?

ಶ್ರೀ ಕೆ.ಎನ್. ರಾಜಣ್ಣ : ಇನ್ನು ಕಡೆಯದಾಗಿ ಹೇಳುವುದಾದರೆ, ಪೇಜ್ ನಂಬರ್ : ೧೮ ಓದುತ್ತೇನೆ. ಯಾವುದಕ್ಕೆ ಏನೇನು ಆದ್ಯತೆಯನ್ನು ನಾವು ಕೊಡುತ್ತೇವೆಂದು ೧೬,೧೭,೧೮ ರಲ್ಲಿ ತಿಳಿಸಿದ್ದೇವೆ. ಇದರಲ್ಲಿ ಕ್ಷೌರಿಕ ಅಂಗಡಿಗಳನ್ನು ಮೇಲ್ದರ್ಜೆಗೇರಿಸುವುದಕ್ಕೆ ೧೦ ಸಾವಿರ ರೂಗಳನ್ನು ಕೊಡುತ್ತೇವೆ. ಕುಂಬಾರರುಗಳಿಗೆ, ಬಡಿಗಿಗಳಿಗೆಲ್ಲಾ ಪ್ರತ್ಯೇಕವಾದ ಕಲ್ಯಾಣ ಮಂಡಳಿ ರಚನೆ ಮಾಡುತ್ತಿರುವುದು ಸಂತೋಷ. ವೃದ್ಧಾಪ್ಯ ವೇತನ ಮತ್ತು ವಿಧವಾ ವೇತನ ೨೦೦ ರೂಪಾಯಿಗಳಿಂದ ೪೦೦ ರೂಪಾಯಿಗಳಿಗೆ ಹೆಚ್ಚಳ ಮಾಡುತ್ತಿರುವುದು, ಇವೆಲ್ಲವು ಬಹಳ ಒಳ್ಳೆಯ ಕಾರ್ಯಕ್ರಮಗಳು. ಬಡವರಿಗೆ ಹಾಗೂ ಯಾರು ದುರ್ಬಲ ವರ್ಗದವರು ಇದ್ದಾರೆ ಅವರಿಗೆ

ಮಡುವಂತಹದ್ದು. ಬೆಳಗಾವಿಯಲ್ಲೂ ಕೂಡ ೨೫೦ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಸುವರ್ಣ ವಿಧಾನಸೌಧ ನಿರ್ಮಾಣ ಮಾಡುತ್ತೇವೆನ್ನುವುದು, ಇವೆಲ್ಲವು ಕೂಡ ನಮ್ಮ ಸರ್ಕಾರದ ಸಾಧನೆಗಳಾಗಿವೆ. ಹಾಗು ಡಾ. ನಂಜುಡಪ್ಪನವರ ಶಿಫಾರಸ್ಸಿನ ಪ್ರಕಾರ ನಾವು ಹಿಂದುಳಿದ ತಾಲ್ಲೂಕುಗಳಿಗೆ ೧೫೦೦ ಕೋಟಿ ರೂಪಾಯಿಗಳ ವಿಶೇಷ ಅನುದಾನ ಕೊಡುತ್ತಿರುವುದು. ಏನು ಮಾಮೂಲಿನಂತೆ ಕೊಡುತ್ತಿರುವಂತಹ ಅನುದಾನವಿದೆ, ಅದಲ್ಲದೆ ಅಡಿಷನಲ್ ಆಗಿ ಕೊಡುತ್ತಿರುವುದು. ಇದಕ್ಕಾಗಿ ಸಹ ನಮ್ಮ ಸರ್ಕಾರಕ್ಕೆ ಶಹಭಾಷಗಿರಿಯನ್ನು ಮಾನ್ಯ ವಾಟಾಳ್ ನಾಗರಾಜ್ ಹಾಗು ಶ್ರೀ ಜೆ.ಸಿ.ಮಾಧುಸ್ವಾಮಿಯವರು ಕೊಡಬೇಕು. ವಿರೋಧ ಪಕ್ಷದವರು ಎಂದು ಬರೀ ಟೀಕೆ ಮಾಡುವುದಲ್ಲ. ಒಳ್ಳೆಯ ಕೆಲಸ ಮಾಡಿರುವುದಕ್ಕಾಗಿಯಾದರೂ ಶಹಭಾಷಗಿರಿಯನ್ನು ಕೊಡಬೇಕು.

ಶ್ರೀ ಜೆ.ಸಿ.ಮಾಧುಸ್ವಾಮಿ : ನೀವು ಅಲ್ಲಿ ನಿಂತುಕೊಂಡು ನಮಗಿಂತ ಹೆಚ್ಚು ಟೀಕೆಗಳನ್ನು ಮಡಿದ್ದೀರಿ. ಆದರೆ ಈಗ ನಮಗೆ ಹೇಳುತ್ತಿದ್ದೀರಿ.

ಅಧ್ಯಕ್ಷರು : ಮಾನ್ಯ ರಾಜಣ್ಣವರು ಅವರು ನಮ್ಮ ಸ್ನೇಹಿತರೆಂದು ಹೇಳಿದರೆ ನೀವು ಎದ್ದು ನಿಂತು ಕೊಂಡು ಮಾತನಾಡುವುದೇ ?

ಶ್ರೀ ಕೆ.ಎನ್.ರಾಜಣ್ಣ : ಸ್ತ್ರೀಶಕ್ತಿ ಸಂಘಟನೆಗಳಿಗೆ ೪ ಪರ್ಸೆಂಟ್ ನಲ್ಲಿ ಹಣವನ್ನೂ ಬಡ್ಡಿ ವಿಧಿಸುವಂತಹದ್ದನ್ನು ಮಾಡಿದ್ದೀರಿ. ಅಮೃತ ಯೋಜನೆಯಲ್ಲಿ ೫೦ ಸಾವಿರ ರೂಪಾಯಿಗಳನ್ನು ಮಹಿಳೆಯರಿಗೆ ಹಸುಗಳನ್ನು ಖರೀದಿಸಲು ವಿತರಣೆ ಮಾಡುವಂತಹದ್ದು, ಇವೆಲ್ಲವು ನಮ್ಮ ಸರ್ಕಾರದ ಸಾಧನೆಗಳು. ಪೆಜ್ ನಂ : ೧೮ ರಲ್ಲಿ ಮಾನ್ಯ ಯಡಿಯೂರಪ್ಪನವರು ನೋಡುತ್ತಾರೆಂದು ಅಂದುಕೊಳ್ಳುತ್ತೇನೆ. ೫.೦೦ ಓಟಿ ರೂಪಾಯಿಗಳ ವೆಚ್ಚದಲ್ಲಿ ಬಸವಣ್ಣನವರ ಜನ್ಮಸ್ಥಳ ಇಂಗಳೇಶ್ವರ ಮತ್ತು ಬಸವಣ್ಣವನರ ಪತ್ನಿ ಗಂಗಾಬಿಕೆಯವರ ಮುಕ್ತಿ ಸ್ಥಳ, ಕೂಡಲಸಂಗಮ ಮಾದರಿಯಲ್ಲಿ ಅಭಿವೃದ್ದಿ, ಮತ್ತು ಪೇಜ್ ನಂ ೪೨ ಮತ್ತು ೪೩ ರಲ್ಲಿ ಇದು ಏನು ಎಂದು ನನಗೆ ಗೊತ್ತಾಗುತ್ತಿಲ್ಲ. ಜಗಜ್ಯೋತಿ ಬಸವೇಶ್ವರ ಜನ್ಮಸ್ಥಳ – ಇದರ ಅಭಿವೃದ್ಧಿಗೆ ೨ ಕೋಟಿ ರೂಪಾಯಿಗಳು ಹಗೆ ಮುಂದೆ ಬಂದರೆ

ಗಂಗಾಬಿಕೆ ಐಕ್ಯ ಮುಂಟಪ ಅಭಿವೃದ್ಧಿಗೆ ೫ ಕೋಟಿ ರೂಪಾಯಿಗಳು ನೀವು ಅಲ್ಲಿಟ್ಟುರುವಂತಹದ್ದು ಒಟ್ಟು ಸೇರಿ ೫ ಕೋಟಿ ರೂಪಾಯಿಗಳು ಎಂದು ಅಂದುಕೋಮಡಿದ್ದವು. ಈ ೪೨ ಪೇಜ್ ನಲ್ಲಿ ಪುನಃ ಇದು ರಿಪೀಟ್ ಆಗಿದೆ. ಇದರಲ್ಲಿ ಯಾವುದು ಸರಿ, ಯಾವುದು ತಪ್ಪು ಎನ್ನುವುದರ ಬಗ್ಗೆ ತಾವು ಉತ್ತರವನ್ನು ಕೊಡುವಾಗ ಹೇಳಬೇಕು. ಈಗ ಹೇಳದಿದ್ದರೂ ಪರವಾಗಿಲ್ಲ. ಹಾಗೆಯೇ ಮಾನ್ಯ ಯಡಿಯೂರಪ್ಪನವರೆ, ಬೂಕನಕೆರೆ ನಿಮ್ಮ ಜನ್ಮಸ್ಥಳವಾಗಿರುತ್ತದೆ. ನಮ್ಮ ರಾಜ್ಯಕ್ಕೆ ಒಬ್ಬ ಹೋರಾಟಗಾರರನ್ನು ಕೊಟ್ಟಂತಹ ಊರು. ತಾವು ಆ ಬೂಕನಕೆರೆಯನ್ನು ಅಭಿವೃದ್ಧಿ ಮಾಡುವ ಬಗ್ಗೆ ನಮ್ಮದೇನು ಆಕ್ಷೇಪಣೆ ಇಲ್ಲ. ಅದಕ್ಕಾಗಿ ೧ ಕೋಟಿ ರೂಪಾಯಿ ಗಳನ್ನು ಕೊಟ್ಟಿದ್ದೀರಿ. ಕುವೆಂಪು ಗುರುಗಳಾದ ಶ್ರೀ ಟಿ.ಎಸ್.ವೆಂಕಣ್ಣನವರ ಜನ್ಮಸ್ಥಳ ಚಿತ್ರದುರ್ಗದ ಥಳುಕು ಗ್ರಾಮದ ಅಭಿವೃದ್ಧಿಗಾಗಿ ೧.೫ ಲಕ್ಷ ರೂಪಾಯಿಗಳು ಎಂದು ಹೇಳಿದ್ದೀರಿ. ಇದು ೧.೫ ಕೋಟಿಯೋ ಅಥವಾ ೧.೫ ಲಕ್ಷವೋ ಗೊತ್ತಾಗುತ್ತಿಲ್ಲ. ೧.೫ ಕೋಟಿ ರೂಪಾಯಿಗಳಾದರೆ, ನ್ಯಾಯವನ್ನು ದೊರಕಿಸಿಕೊಟ್ಟಿದ್ದೀರೆಂದು ಅಂದುಕೊಳ್ಳಬಹುದು. ೧.೫ ಲಕ್ಷವಾದರೆ ಆ ವಿಚಾರವನ್ನು ಬಜೆಟ್ನಲ್ಲಿ ಪ್ರಸ್ತಾಪ ಮಾಡಿದರೆ ಅದು ನಾಚಿಕೆಯಾಗುತ್ತದೆ.

ಅಧ್ಯಕ್ಷರು : ಅವರು ಕೊಡುತ್ತಾರೆ. ನಾನು ಬೇರೆಯವರನ್ನು ಕರೆದು ಮಾತನಾಡಿ ಎಂದು ಹೇಳುವುದು ಬೇಡ. ದಯಮಾಡಿ ತಾವು ಬೇಗನೆ ಮುಗಿಸಿ ಬಿಡಿ. ಬಹಳ ಜನರು ಮಾತನಾಡುವವರು ಇದ್ದಾರೆ.

ಶ್ರೀ ಕೆ.ಎನ್.ರಾಜಣ್ಣ : ವಾನು ಒಂದೆರಡು ನಿಮಿಷ ಮಾತನಾಡುತ್ತೇವೆಂದರೆ ನೀವು ಹೀಗೆ ಹೇಳಿದರೆ ಹೇಗೆ ? ನೀವು ಅವರ ಕಡೆಗೆ ಬೆಂಬಲವನ್ನು ಕೊಡುತ್ತೀರಿ.

ಅಧ್ಯಕ್ಷರು: ಈ ಕಡೆ ಮತ್ತು ಆ ಕಡೆಯವರು ಮಾತನಾಡಬೇಕಲ್ಲವೇ? ನಿಮಗೆ ಮಾತನಾಡುವುದಕ್ಕೆ ಬಹಳ ಸಮಯವನ್ನು ಕೊಟ್ಟಿದ್ದೇನೆ. ದಯಮಾಡಿ ತಾವು ಕ್ಲೋಸ್ ಮಾಡಿ.

ಶ್ರೀ ಕೆ.ಎನ್. ರಾಜಣ್ಣ : ನೀವು ಬೈಯುವವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡುತ್ತೀರಿ. ಒಳ್ಳೆಯ ಕೆಲಸ ಮಾಡಿದವರಿಗೆ ಹೇಳಬೇಕೆಂದು ಹೇಳಿದರೆ ಅವರಿಗೆ ಅವಕಾಶವನ್ನು ಕೊಡುವುದಿಲ್ಲ.

ಅಧ್ಯಕ್ಷರು : ನೀವು ಹೇಳುವುದಕ್ಕೆ ನಾನು ಅವಕಾಶವನ್ನು ಕೊಟ್ಟಿದ್ದೇನೆ. ನೀವು ಅದನ್ನು ಸರಿಯಾಗಿ ಬಳಸಿಕೊಳ್ಳಲಿಲ್ಲ. ಬೇಗನೆ ತಾವು ಮುಗಿಸಿ.

ಶ್ರೀ ಕೆ.ಎನ್. ರಾಜಣ್ಣ : ತುಮಕೂರಿನ ಮಠದದು ೧೦ ಕೋಟಿ ರೂಪಾಯಿಗಳನ್ನು ಕೊಡುವಂತಹದ್ದು ಇದೆ. ಪೇಜ್ ನಂ.೪೨ ಮತ್ತು ೧೮ ಕ್ಕೆ difference ಇದೆ. ಅಲ್ಲಿ ಏನು ಹೇಳುತ್ತೀರಿ ಅಂದರೆ ಶತಾಯುಷಿ ಸಿದ್ಧಗಂಗಾ ಶ್ರೀಗಳ ಜನ್ಮ ಶತಮಾನೋತ್ಸವ ಸರ್ಕಾರದಿಂದ ಆಚರಣೆ ದಾಸೋಹಭವನ ನಿರ್ಮಾಣ ಹಾಗೂ ಇತರ ಅಭಿವೃದ್ಧಿ ಕಾರ್ಯಗಳಿಗೆ ೧೦ ಕೋಟಿ ರೂಪಾಯಿಗಳು ಹೇಳುತ್ತೀರಿ. ಪೇಜ್ ನಂ: ೪೨ ರಲ್ಲಿ ತುಮಕೂರಿನ ಸಿದ್ಧಗಂಗಾ ಕ್ಷೇತ್ರದಲ್ಲಿ ವಿದ್ಯಾರ್ಥಿ ನಿಲಯಗಳ ನೈರ್ಮಲ್ಯ ಮತ್ತು ಮೂಲಸೌಕರ್ಯಗಳನ್ನು ನಿರ್ಮಿಸಲು ೧೦ ಕೋಟಿ ರೂಪಾಯಿಗಳು ಎಂದು ಹೇಳುತ್ತೀರಿ. ಇದು ಒಂದಕ್ಕೊಂದು ನಿಮ್ಮಲ್ಲಿಯೇ ವ್ಯತ್ಯಾಸವಿರುತ್ತದೆ. ಇದರಲ್ಲಿ ನಮ್ಮ ಗುರೂಜಿಯವರಿಗೆ ಜ್ಞಾನೋದಯವಾಗಿರುವ ಭ್ರಾ ಜಲಾಶಯದ ಅಜುಬಾಜಿನಲ್ಲಿ ಅಭಿವೃದ್ಧಿ ಮಾಡತಕ್ಕಂತಹ ಕಾರ್ಯಕ್ರಮಗಳನ್ನು ರೂಪಿಸಿದ್ದೀರಿ. ಈ ಒಂದು ಸಿದ್ಧಗಂಗಾ ಮಹಾಸ್ವಾಮಿಜಿಯವರು ಇದ್ದಾರೆ. ಅವರ ಹುಟ್ಟೂರಾದಂತಹ ಊರಿನಲ್ಲಿ ಈ ೧೦ ಕೋಟಿ ರೂಪಾಯಗಳನ್ನು ಅವರ ಹೆಸರಿನಲ್ಲಿ ಮಾಡಿದರೆ ಒಳ್ಳೆಯದು.

ಶ್ರೀ ಬಿ.ಎಸ್.ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು) : ಸಿದ್ಧಗಂಗಾ ಶ್ರೀಗಳಿಗೆ ೧೦೦ ವರ್ಷ ತುಂಬಿದಂತಹ ಸಂದರ್ಭದಲ್ಲಿ ನಾವೇ ಒಂದು ದೊಡ್ಡ ಸನ್ಮಾನ ಸಮಾರಂಭವನ್ನು ವಿಧಾನಸೌಧದ ಮುಂಭಾಗದಲ್ಲಿ ಇಟ್ಟುಕೊಂಡಿದ್ದೆವು. ಇವತ್ತು ೧೦ ಕೋಟಿ ರೂಪಾಯಿಗಳನ್ನು ಕೊಟ್ಟಿರುವುದು ಏಕೆಂದರೆ ಒಂದನೇ ಸಿದ್ಧಗಂಗಾದಲ್ಲಿ ೧೦ ಸಾವಿರ ಮಕ್ಕಳಿಗೆ ಶಿಕ್ಷಣವನ್ನು

ಕೊಡುವುದು, ಅನ್ನದಾಸೋಹ ಮಾಡುವಂತಹ ಆ ಸ್ಥಳದಲ್ಲಿ ಅಲ್ಲಿ ಬೇಕಾಗಿರುವಂತಹ ಒಳಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ವ್ಯವಸ್ಥೆ, ಮತ್ತು ಶರೀಗಳ ನೆನಪಿಗಾಗಿ ಒಂದು ಭವನ – ಈ ಎಲ್ಲವೂ ಸೇರಿ ೧೦ ಕೋಟಿ ರೂಪಾಯಿಗಳಾಗುತ್ತದೆ. ಇದು ಅಲ್ಲಿಯ ಕ್ಷೇತ್ರದ ಅಭಿವೃದ್ಧಿಗಾಗಿ ಕೊಡುತ್ತಿರುವಂತಹ ಹಣವಾಗಿದೆ. ಸ್ವಾಮಿಗಳು ಸಹ ಕೇಳಿರಲಿಲ್ಲ. ಅವರು ಬೇಡವೆಂದರೆ ಅದರ ಅಗತ್ಯವು ಸಹ ಇರಲಿಲ್ಲ. ನಾನು ಕೊಟ್ಟಿರುವಂತಹ ೧೦ ಕೋಟಿ ರೂಪಾಯಿಗಳು ಈ ಉದ್ದೇಶಕ್ಕಾಗಿ ಮಾತ್ರ ಅಲ್ಲಿ ಹಣ ಏನು ಇದೆ, ಅದು ಅಭಿವೃದ್ಧಿಗೆ ಮತ್ತು ಮಕ್ಕಳಿಗೆ ಬೇಕಾಗಿರುವಂತಹ ಅನುಕೂಲತೆಗಳನ್ನು, ಕುಡಿಯುವ ನೀರಿನ ಅನುಕೂಲತೆಗಳನ್ನು ಮಾಡಿಕೊಡುವುದಕ್ಕೋಸ್ಕರ, ರಸ್ತೆ ಅಭಿವೃದ್ಧಿಗೋಸ್ಕರ ಒಳಚರಂಡಿ ಅಭಿವೃದ್ಧಿಗೋಸ್ಕರ ಮಾತ್ರ.

ಶ್ರೀ ಜೆ.ಸಿ.ಮಾಧುಸ್ವಾಮಿ : ಅವರ ಹೆಸರಿನಲ್ಲಿ ತುಮಕೂರಿನಲ್ಲಿ ಆಸ್ಪತ್ರೆಯನ್ನು ಕಟ್ಟಿದ್ದಾರೆ, ಆ ಕಟ್ಟಡ ಕೆಲಸ ಸುಮಾರು ೫-೬ ವರ್ಷಗಳಿಂದ ಹಾಗೆಯೇ ನಿಂತುಹೋಗಿದೆ. ಸ್ವಾಮೀಜಿಯವರನ್ನು ಸ್ಮರಣೆ ಮಾಡಬೇಕೆಂದರೆ, ಸಿದ್ದಗಂಗಾ ಆಸ್ಪತ್ರೆಯನ್ನು ಕಂಪ್ಲೀಟ್ ಮಾಡುವುದಕ್ಕೆ ಏನಾದರೂ ಕ್ರಮವನ್ನು ತಾವಗ ತೆಗೆದುಕೊಳ್ಳಬೇಕು. ತುಮಕೂರಿನಲ್ಲಿ ಹೀಗೆ ಎಲ್ಲರೂ ಸೇರಿಕೊಂಡು ಅದನ್ನು ಶುರುಮಾಡಿ ೫-೧೦ ವರ್ಷಗಳಾಗಿದೆ. ಅದರ ಬಗ್ಗೆ ತಾವು ಆಲೋಚನೆಯನ್ನು ಮಾಡಬೇಕು.

ಶ್ರೀ ಕೆ.ಎನ್.ರಾಜಣ್ಣ : ನಾನು ಆ ಪಂಚಾಯಿತಿಯಲ್ಲಿ ಛೇರ್ಮನ್ ಕೆಲಸವನ್ನು ಮಾಡಿರುವವರು. ಹಳ್ಳಿಯ ವಿದ್ಯಾರ್ಥಿಯಾಗಿ ಆ ಸ್ಕೂಲ್ ನಮ್ಮ ಮನೆಗೆ ೧.೬ ಕಿ.ಮೀ ದೂರದಲ್ಲಿದೆ. ಆ ಪಂಚಾಯಿತಿಯು ನಮಗೂ ಸೇರಿದೆ. ಅಲ್ಲಿಗೆ ಏನು ಬೇಕು ಮತ್ತು ಬೇಕಾಗಿಲ್ಲವೆಂದು ನಿಮಗೆಲ್ಲರಿಗಿಂತಲೂ ಹೆಚ್ಚು ಮಾಹಿತಿ ನನ್ನ ಹತ್ತಿರ ಇದೆ. ಈ ೧೦ ಕೋಟಿ ರೂಪಾಯಿಗಳು ಏನು ಇದೆ. ಅದು ಅವರ ಜನ್ಮಸ್ಥಳವಾಗಿದೆ. ಗ್ರಾಮೀಣ ಭಾಗದಲ್ಲಿ ಅವರ ಹೆಸರಿನಲ್ಲಿ ಒಂದು ಸುಸಜ್ಜಿತವಾದ ಶಾಲೆಯನ್ನು ಮಾಡಬೇಕು. ಇದು ಅವರು ಹುಟ್ಟಿದಂತಹ ಊರಾಗಿದೆ. ಅವರು ಹುಟ್ಟಿದಂತಹ ಊರಾದ

ವಿರೂಪಾಪುರ ಮಾಗಡಿ ತಾಲ್ಲೂಕಿನಲ್ಲಿ ಏನಿದೆ, ಕೋಲೂರು ಹೋಬಳಿ ಅದು ಮಾನ್ಯ ಸದಸ್ಯರಾದ ಶ್ರೀ ಬಲಕೃಷ್ಣರವರ ಕ್ಷೇತ್ರವಾಗಿದೆ. ನಮ್ಮ ತಾಲ್ಲೂಕಿನ ಬಾರ್ಡರ್ ಆಗಿದೆ. ಅಲ್ಲಿ ಇದನ್ನು ಮಾಡಿದರೆ ಹೆಚ್ಚು ಜನರಿಗೆ ಉಪಯೋಗವಾಗುತ್ತದೆ. ಇದನ್ನು ಬಿಟ್ಟು ಬೇರೆ ಯಾವುದನ್ನು ಅಲ್ಲಿ ಮಾಡಬಾರದು. ಸರ್ಕಾರದ ಪತ್ರಗಳಲ್ಲಿ ದೇವದಾಸಿಯರ ಮಕ್ಕಳು ಎಂದದು ಬರುತ್ತಿರುತ್ತದೆ. ಹಾಗೆ ಹೇಳಿದರೆ ಅದು ಮಕ್ಕಳಲ್ಲಿ ಕಟ್ಯ ಪರಿಣಾಮವನ್ನು ಬೀರುತ್ತದೆ. ಅದ್ದರಿಂದ ನೀವು ಮಕ್ಕಳಿಗೆ ಯಾವುದೇ ಬೆನಿಫಿಟ್ ನ್ನು ಕೊಡಲಿ ಅಥವಾ ಬಿಡಲು ಆ ಹೆಸರನ್ನು ಬರೆಯಬಾರದು. ದೇವದಾಸಿಯರ ಮಕ್ಕಳು ಎಂದರೆ ಆ ಮಕ್ಕಳ ಮನಸ್ಸಿನ ಮೇಲೆ ಏನು ಪರಿಣಾಮವಾಗುತ್ತದೆ. ಬೇಕಾದರೆ ಬಡಮಕ್ಕಳು ಅತವಾ ಅನಾಥ ಮಕ್ಕಳು ಎಂದು ಬರೆದುಕೊಳ್ಳಿ. ದೇವದಾಸಿಯರ ಮಕ್ಕಳು ಇಂದು ಪದೇ ಪದೇ ಸರ್ಕಾರದ ಕಡತಗಳಲ್ಲಿ ಬಾರತ ರೀತಿಯಲ್ಲಿ ಪರ್ಯಾಯ ಪದ ಯಾವುದಾದರೂ ಉಪಯೋಗ ಮಾಡಬೇಕು ಎಂದು ಹೇಳುತ್ತೇನೆ.

ಶ್ರೀ . ಜಿ.ವಿ.ಶ್ರೀರಾಮರೆಡ್ಡಿ : ಮಹಾರಾಷ್ಟ್ರದಲ್ಲಿ ದೇವದಾಸಿಯರಿಗೆ ಪ್ರತಿ ತಿಂಗಳು ಮಾಸಾಶನ ಕೊಡುತ್ತಾರೆ. ದಯವಿಟ್ಟು ಆ ರೀತಿಯಲ್ಲಿ ಇಲ್ಲು ಕೂಡ ಜಾರಿಗೆ ತಂದರೆ ಅವರಿಗೆ ಒಳ್ಳೆಯದಾಗುತ್ತದೆ. ಮಾನ್ಯ ಸದಸ್ಯರಾದ ರಾಜಣ್ಣನವರು ಹೇಳಿರುವುದು correct ಆಗಿದೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಅಲ್ಲಿಯ ಶಾಲೆಯಲ್ಲಿ ನಾವೆಲ್ಲರೂ ಓದಿ ಬಂದಿದ್ದೇವೆ. ನೀವು ಒಂದು ಟೈಮ್ ಕೊಟ್ಟಿರುವುದು ನಾವೆಲ್ಲರೂ appreciate ಮಾಡುತ್ತೇವೆ. ಜೊತೆಗೆ ಆ ಶಾಲೆಯನ್ನು Grant-in Aid ಗೆ ಸೇರಿಸಬೇಕು. ಅವರು ಏನು ಮಕ್ಕಳನ್ನು ಓದಿಸುತ್ತಿದ್ದಾರೆ., ಆ ಶಾಲೆ ಮತ್ತು ಹಾಸ್ಟೆಲನ್ನು Grant in Aid ಗೆ ಸೇರಿಸದೇ ಹೋದರೆ one time measure ನಿಂದ ಏನು ಪ್ರಯೋಜನವಾಗುವುದಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ನಾವೆಲ್ಲರೂ ಅಲ್ಲಿಗೆ ಹೋದಾಗ ನಾವು ಅದನ್ನು Grant in Aid ಸೇರಿಸಬೇಕೆಂದು ಒತ್ತಾಯವನ್ನು ಮಾಡುತ್ತೇವೆ. ದಯವಿಟ್ಟು ಅದನ್ನು ತಾವು ಪರಿಗಣನೆಗೆ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಮಾನ್ಯ ರಾಜಣ್ಣನವರೇ, ಬೇಗನೆ ಮುಗಿಸಿ.

ಶ್ರೀ. ಕೆ.ಎನ್.ರಾಜಣ್ಣ : ನಾನು ನೋಡಿದ ಹಾಗೆ ೨೦೦೩–೦೪ರ ಸಿಎಜಿ ರಿಪೋರ್ಟಿನಲ್ಲಿ ನಾನು ಒಂದು ಕಡೆ ಓದಿದ್ದೇನೆ. ಸುಮಾರು ಜಿಲ್ಲಾ ಪಂಚಾಯಿತಿಗಳಲ್ಲಿ ಅಧಿಕೃತವಾದ ಅಂಕ ಸಂಖ್ಯೆಗಳಲ್ಲಿ ಸುಮಾರು ೧೬೬೯ ಕೋಟಿ ರೂಪಾಯಿಗಳ ಹಣ unspent ಇದೆ. ಇಲ್ಲಿ ಸುಮಾರು ೩೦೦೦ ಕೋಟಿ ರೂಪಾಯಿಗಳು ಇರುತ್ತದೆ.

ಅದರ ಬಗ್ಗೆ ಸರ್ಕಾರದವರು ಗಮನ ಹರಿಸಿ ಆ ಒಂದು ಹಣವನ್ನು ಕುಡಿಯುವ ನೀರಿಗೆ ಬರಗಾಲ ಇರತಕ್ಕಂಥ ಸಂದರ್ಭದಲ್ಲಿ ಅದನ್ನು ಉಪಯೋಗ ಮಾಡುವಂಥದ್ದಕ್ಕೆ ಸರ್ಕಾರ ಭರಿಸ ಬೇಕೆಂದು ಹೇಳುತ್ತೇನೆ. ನಿಜವಾಗಿಯೂ ನಮ್ಮ ಸರ್ಕಾರ ಒಳ್ಳೆಯಜ ಬಜೆಟ್ ಅನ್ನು ಕೊಟ್ಟಿದೆ. ಈ ಬಜೆಟ್ ಇವರೆಲ್ಲಾ ತಿಳಿದುಕೊಂಡಿರುವ ಹಾಗೆ ಚುನಾವಣೆ ಬಜೆಟ್ ಅದು ಇದು ಎಂದು ಏನಿಲ್ಲ. ಚುನಾವಣೆ ಇರಲಿ, ಇಲ್ಲದಿರಲಿ, ಪ್ರತಿವರ್ಷವೂ ಇಂತಹ ಬಜೆಟ್ ಅನ್ನು ಅಭಿವೃದ್ಧಿ ರಂಗದ ಸರ್ಕಾರ ನೀಡುತ್ತದೆ. ಇನ್ನು ಮುಂದೆಯೂ ಮಾನ್ಯ ಯಡಿಯೂರಪ್ಪನವರು ಕೂಡ ೨೦ ತಿಂಗಳು ಮುಖ್ಯಮಂತ್ರಿಗಳಾಗಿರುತ್ತಾರೆ ಅದರಲ್ಲಿ ಯಾವುದೇ ಅನುಮಾನ ಇಟ್ಟುಕೊಳ್ಳಬೇಕಾಗಿಲದಲ. ಆದುದರಿಂದ ಇಂಥ ಒಂದು ಒಳ್ಳೆಯ ಬಜೆಟ್ ಅನ್ನು ನಾನು ಸ್ವಾಗತಿಸಿ, ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಎಸ್.ಎಸ್.ಪಾಟೀಲರು ಮಾತನಾಡಿ.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) : ಅಧ್ಯಕ್ಷರೇ , ಮಾನ್ಯ ಸದಸ್ಯರುಗಳಾದ ಮಾಧುಸ್ವಾಮಿಯವರು, ಶ್ರೀರಾಮರೆಡ್ಡಿಯವರು, ರಾಜಣ್ಣನವರು ಹೇಳಿದರು, ದೇವದಾಸಿ ವಿಮೋಚನಾ ಸಂಸ್ಥೆ ಅಥಣಿಯಲ್ಲಿದೆ. ಇಡೀ ದೇಶದಲ್ಲೇ ಪ್ರಥಮವಾದ ಸಂಸ್ಥೆಯದು ದೇವದಾಸಿ ಮಕ್ಕಳಿಗೆ ಇವತ್ತು ಪುಕ್ಕಟೆಯಾಗಿ ಶಿಕ್ಷಣವನ್ನು ಕೊಡುವುದಕ್ಕೆ ಇರುವ ಸಂಸ್ಥೆ, ಮಾನ್ಯ ಯಡಿಯೂರಪ್ಪನವರು ಒಂದೂವರೆ ಕೋಟಿ ರೂಪಾಯಿಗಳನ್ನು ಕೊಟ್ಟಿದದಕ್ಕೆ ಧನ್ಯವಾದಗಳು. ಆ ಸಂಸ್ಥೆಯನ್ನು Grant in Aid ಗೆ

ಸೇರಿಸಬೇಕು ಪುಕ್ಕಟೆಯಾಗಿ ಕೊಡುತ್ತದ್ದಾರೆ. ಎಲ್ಲಾ ಹೊರದೇಶಗಳಿಂದ ಕೂಡ, ಆ ಸಂಸ್ಥೆಗೆ ಹಣವನ್ನು ಇವತ್ತು ಕೊಡುತ್ತಿದ್ದಾರೆ. ತಾವು ಆದಷ್ಟು ಬೇಗನೆ ಇದೇ ವರ್ಷದಲ್ಲಿ ಆ ಸಂಸ್ಥೆಯನ್ನು ಅನುದಾನಕ್ಕೆ ಒಳಪಡಿಸ ಬೇಕೆಂದು ತಮ್ಮ ಮೂಲಕ ಒತ್ತಾಯಿಸುತ್ತೇನೆ.

ಸನ್ಮಾನ್ಯ ಅಧ್ಯಕ್ಷರೇ, ಬಜೆಟ್ ಮೇಲೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಂಥ ತಮಗೆ ವಂದನೆಗಳನ್ನು ಸಲ್ಲಿಸಿ, ಬಹುಶಃ ನಾನು ಈ ಬಾರಿ ವಚನಗಳನ್ನು ಹೇಳಬಾರದೆಂದು ಮಾಡಿದ್ದೆ, ಆದರೆ ನಿನ್ನೆ ಎಲ್ಲರೂ ವಚನಗಳನ್ನು ಹೇಳಿ ಎಂದು ಹೇಳಿದರು. ಆದರೂ ನಮಗೆ ಬಹುಶಃ ನಮ್ಮ ಮಾನ್ಯ ಶ್ರೀರಾಮರೆಡ್ಡಿಯವರು ಹಿಂದೆ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ಬಿ.ಜೆ.ಪಿ ಯವರನ್ನು ಬಯ್ಯಲಿಕ್ಕೆ ಹೋಗಿ ಎಲ್ಲಾ ರಾಜಕೀಯದವರು ಸೇರಿ ಧರ್ಮವನ್ನು ಹಾಳು ಮಾಡಿ ಬಿಟ್ಟಿರಿ ಎಂದೇನೋ ಬಯ್ದರು. ನಿಜವಾಗಿ ರಜಕೀಯದಲ್ಲಿ ಧರ್ಮ ಬೇಕು. ಧರ್ಮದಿಂದ ರಾಜಕೀಯ ಮಾಡಿದರೆ ಮಾತ್ರ ನಮ್ಮ ಬಜೆಟ್ ಎಲ್ಲಾ ಉದ್ದಾರವಾಗುತ್ತದೆ. ಆ ಕಾರಣದಿಂದ ಇವತ್ತು ಶರಣರು, ದಾಸರು, ಸಂತರು ಹೇಳಿದಂಥ ಮಾತುಗಳನ್ನು ಕೂಡ ಮೊದಲು ಉಲ್ಲೇಖ ಮಾಡುತ್ತೇವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಧರ್ಮಸಿಂಗ್ ರವರು ಈ ಸಿದ್ದಾಂತವನ್ನು ಒಪ್ಪುತತಾರೆಯೇ ? ಅವರು ಒಪ್ಪುತ್ತಾರೆಯೇ ಕೇಳಿ. ಕಾಂಗ್ರೆಸ್ ಸಿದ್ದಾಂತ ಇದನ್ನು ಒಪ್ಪುತ್ತದೆಯೇ.

ಶ್ರೀ ಎಸ್.ಎಸ್.ಪಾಟೀಲ್ : ನೀವು ಹೇಳಿದ್ದು ಬೇರೆ, ನಾನು ಹೇಳುವುದು ಬೇರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಹೇಳಿದದು ಬಿಡಿ, ಕಾಂಗ್ರೆಸ್ ಸಿದ್ದಾಂತ ನೀವು ಹೇಳಿದ್ದನ್ನು ಒಪಪುತ್ತದೆಯೇ ? ಅಷ್ಟೇ ನಾನು ಕೇಳುವುದು.

ಶ್ರೀ ಎಸ್.ಎಸ್.ಪಾಟೀಲ್ : ಹೌದೌದು, ಒಪ್ಪುತ್ತದೆ, ಖಂಡಿತವಾಗಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಧರ್ಮಸಿಂಗ್‌ರವರು ಇದನ್ನು ಹೇಳಬೇಕು.

ಶ್ರೀ ಎಸ್.ಎಸ್. ಪಾಟೀಲ್ : ಬಸವಾದಿ ಶಿವಶರಣರ ತತ್ವಗಳ ಹಿನ್ನಲೆಯಲ್ಲಿ ಕಾಂಗ್ರೆಸ್ ನಡೆಯುತ್ತಿರುವುದು. ತುಳಿದವರನ್ನೆಲ್ಲಾ ಮೇಲೆತ್ತಿಕೊಂಡು ಬಂದದ್ದೇ ಕಾಂಗ್ರೆಸ್, ಎಲ್ಲರನ್ನೂ ಸಮಾನವಾಗಿ ಕಾಣುವುದೇ ಕಾಂಗ್ರೆಸ್.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಉತ್ತರ ಕೊಡುತ್ತಿಲ್ಲ. ನನ್ನ ಪ್ರಕಾರ ಧರ್ಮ ಎಂದರೆ, ನನ್ನ ದೃಷ್ಟಿಯಲ್ಲಿ ದೊಡ್ಡ ದೊಡ್ಡ ಗುರುಗಳ, ಅನುಭವಿಗಳ ಮಾತು ಎಂದರೆ, ಧರ್ಮ ಎಂದರೆ ಕರ್ತವ್ಯ, ಆ ಕರ್ತವ್ಯವೇ ಬೇಡ, ಧರ್ಮವೇ ಬೇಡವೆಂದು ಹಏಳಿದರೆ ಬಹುಶಃ ಅದಕ್ಕೆ ಮಾನ್ಯ ಶ್ರೀರಾಮರೆಡ್ಡಿಯವರು ಮಾನ್ಯ ಧರ್ಮಸಿಂಗ್‌ರವರು ವಿರೋಧ ಮಾಡುತ್ತಾರೆಂದು ನನಗೇನೂ ಅನ್ನಿಸುವುದಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ನೀವು ಹೇಳಿದ ಪ್ರಕಾರ ಧರ್ಮ ಕರ್ತವ್ಯವಾದರೆ ನಮ್ಮದೇನೂ ವಿರೋಧವಿಲ್ಲ. ಅದು ಜಾತಿಯಾಧಾರ, ಆದರೆ ಮಾತ್ರ ವಿರೋಧ.

ಶ್ರೀ ಎಸ್.ಎಸ್. ಪಾಟೀಲ್ : –

ಬಿಡು ಬಾಹ್ಯದೊಳು ಡಂಭವ ಮಾನಸದೊಳ –
ಗೆಡೆವಿಡದಿರು ಶಂಭುವ
ಒಡಲೊಳು ವಂಚಿಸಿ ಹೊರಗೆ ನೀ ಕೀರ್ತಿಯ
ಪಡೆದರೆ ಶಿವ ನಿನಗೊಲಿವನೆ ಮರಳೆ
ಜನ ಮೆಚ್ಚಿ ನಡೆಕೊಂಡರೇನುಂಟು ಲೋಕದಿ
ಮನ ಮೆಚ್ಚಿ ನಡಕೊಂಬುವುದೆ ಚೆಂದವು
ಜನರೇನು ಬಲ್ಲರು ಒಳಗಾಗೊ ಕೃತ್ಯದ

ಮನವರಿಯದ ಕಳ್ಳತನವಿಲ್ಲವಲ್ಲಾ
ಜನರು ಮೆಚ್ಚುತೆ ನಿನ್ನ ಕೈಲಾಸಕೊಯ್ಯರೆ
ಜನನ ಮೆಚ್ಚಿ ದಿರೆ ಶಿವ ಬಿಡುತಿಹನೇ
ಜನರಿಲ್ಲಿ ನಿನ್ನನ್ನು ದೊಡ್ಡಾತನೆಂದರೆ
ಚಿನುಮಯ ಶಿವನೆಲ್ಲಿ ಅರಿಯನೆ ಮರುಳೇ
ಮನದೊಳು ಶಿವ ತಾನು ಮನೆ ಮಾಡಿಕೊಂಡಿಹ
ಮನ ಮೆಚ್ಚಿ ನಡೆದರೆ ಶಿವ ಮೆಚ್ಚುವ
ಮನಕಂಜಿ ನಡೆಯದೆ ಜನಕಂಜಿ ನಡೆದರೆ
ಮನದಾಣ್ಮ ಗುರುಸಿದ್ಧ ಮರೆಯಾಗೊನಲ್ಲ

ಇದನ್ನು ಸರ್ಪಭೂಷಣ ಶಿವಯೋಗಿಗಳು ಹೇಳುತ್ತಾರೆ, ಅಧ್ಯಕ್ಷರೇ, ಸನ್ಮಾನ್ಯ ಅಧ್ಯಕ್ಷರೇ, ತಾವು ಇದನ್ನು ದಯವಿಟ್ಟು ಕೇಳಬೇಕು,

ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನ್ನಿಕ್ಕಿ,
ಹರದ ಕುಳ್ಳಿರ್ದ ನಮ್ಮ ಮಹದೇವ ಶೆಟ್ಟಿ
ಒಮ್ಮನವಾದರೆ ಒಡನೆ ನುಡಿವನು ;
ಇಮ್ಮನವಾದರೆ ನುಡಿಯನು
ಕಾಣಿಯ ಸೋಲ, ಅರ್ಧ ಕಾಣಿಯ ಗೆಲ್ಲ !
ಜಾಣ ನೋಡವ್ವಾ, ನಮ್ಮ ಕೂಡಲ ಸಂಗಮ ದೇವ !

ಎಂದು ಹೇಳುತ್ತಾರೆ.

ಕಾಂಚನವೆಂಬ ನಾಯ ನಚ್ಚಿ,

ನಿಮ್ಮ ನಾನು ಮರೆದೆನಯ್ಯಾ !

ಕಾಂಚನಕ್ಕೆ ವೇಳೆಯಲ್ಲದೆ, ಲಿಂಗಕ್ಕೆ ವೇಳೆಯಿಲ್ಲಾ !

ಹಡಿಕೆಗೆ ಮೆಚ್ಚಿದ ಸೊಣಗ

ಅಮೃತದ ರುಚಿಯ ಬಲ್ಲುದೆ ಕೂಡಲ ಸಂಗಮದೇವ ?

ನಮಗೇನು ಕಾಂಚನದ ಬಗ್ಗೆ ಹೇಳುತ್ತಾರೆಂದರೆ, ಭರಷ್ಟಾಚಾರಿಗಳ ಬಗ್ಗೆ ಏನು ಹೇಳುತ್ತಾರೆಂದರೆ, ಹಡಿಕೆಗೆ ಮೆಚ್ಚಿದ ಸೊಣಗ ಎಂದರೆ ಭ್ರಷ್ಟಚಾರಿಗಳಿಗೆ ಎಲುಬು ಕಡಿಯುವ ನಾಯಿ ಎಂದು ಹೇಳುತ್ತಾರೆ ಶರಣರು. ಇದರಿಂದ ಬಹಳಷ್ಟು ಜನಕ್ಕೆ ಬೇಜಾರಾಗಬಹುದು,

ನಾರಿ ಪರರ ಉಪಕಾರಿ,

ಸಕಲರ ಹಿತಕಾರಿ,

ಮುನಿದರೆ ಆ ನಾರಿಯೇ ಮಾರಿ ಸರ್ವಜ್ಞ

ಯಡಿಯೂರಪ್ಪನವರೇ , ಇದು ನಿಮಗೆ ಹೇಳುತ್ತಿದ್ದೇನೆ.

ಸುಣ್ಣವಿಲ್ಲದ ವೀಳ್ಯೆ, ಬಣ್ಣವಿಲ್ಲದ ಮದುವೆ,

ಹೆಂಗಳಿಲ್ಲದ ಮನೆವಾರ್ತೆ ,

ಅನುದಿನ ಭಂಗ ಹಣ ಯಡಿಯೂರೇಶ.

ನಿಮ್ಮ ಮಂತ್ರಿ ಮಂಡಲ ಹಾಗಿದೆ, ಮಾನ್ಯ ರಾಜಣ್ಣ, ಹಾಗೆ ಕೇಳುತ್ತಿಲ್ಲ, ನಿಮ್ಮ ಚಿತ್ರವೇನು ?

ಶ್ರೀ ಕೆ.ಎಸ್.ರಾಜಣ್ಣ : ಅನುಮಾನ ಏನು ಬರುತ್ತಿದೆಯೆಂದರೆ, ಮಾನ್ಯ ವಾಟಾಳ್ರವರು ಹೇಳಿದರು.

ಶ್ರೀ ಎಸ್.ಎಸ್. ಪಾಟೀಲ್: ನಿಮ್ಮ ಮಂತ್ರಿಮಂಡಲದ ಚಿತ್ರವೇನು? ನಿಮ್ಮ ಮಂತ್ರಿಮಂಡಲದಲ್ಲಿ ಇವತ್ತು ಹೆಣ್ಣು ಮಕ್ಕಳಿಲ್ಲ. ಇಲ್ಲ ಒಬ್ಬರೂ ಇಲ್ಲ, ಇದು ಮಹಿಳಾ ವಿರೋಧಿ ಸರ್ಕಾರವೆಂದು ಹೇಳಲಿಕ್ಕೆ ಏನು ಅಡ್ಡಿಯಿಲ್ಲ. ಒಬ್ಬರೂ ಇಲ್ಲ. ಇದೊಂದು ದುರಂತ ಇದನ್ನು ಹೊಸದಾಗಿ ನೋಡಿದ್ದೇವೆ ಇಡೀ ನಮ್ಮ ಕರ್ನಾಟಕದ ಇತಿಹಾಸದಲ್ಲಿ ಹೆಣ್ಣು ಮಕ್ಕಳಿಲ್ಲದಂಥ ಮಂತ್ರಿಮಂಡಲ ನೋಡಿದರೆ, ಅದು ಮಾನ್ಯ ಕುಮಾರಸ್ವಾಮಿಯವರ ನೇತೃತ್ವದ ಸಮ್ಮಿಶ್ರ ಸರ್ಕಾರದ ಮಂತ್ರಿಮಂಡಲ ಎಂದು ಬಹಳ ನೊಂದ ಮನಸ್ಸಿನಿಂದ, ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ ಅಧ್ಯಕ್ಷರೇ,

ಲಿಂಗವಿಲ್ಲದ ಪೂಜೆ, ಗಂಗೆಯಿಲ್ಲದ ತೋಟ,

ಹೆಂಗಳಿಲ್ಲದ ಮನೆವಾರ್ತೆ

ಅನುದಿನ ೦ಗ ಕಾಣ ಸರ್ವಜ್ಞ ಎಂದು ಹೇಳುತ್ತಾನೆ,

ಹಾಗಾಗಿದೆ ನಿಮ್ಮ ಪರಿಸ್ಥಿತಿ, ಅದು ದಿನವೂ ನಿಮ್ಮ ಗುದ್ದಟವಾಗಿದೆ. ನಿಜವಾಗಿ ನೀವು ಇವತ್ತು ಹೆಣ್ಣುಮಕ್ಕಳನ್ನು ಎಲ್ಲಿ ದೂರವಿಡುತ್ತೀರೋ, ನಿಶ್ಚಿತವಾಗಿ ನಿಮಗೆ ದೇವರು ಎಂದೆಂದೂ ಒಳ್ಳೆಯದು ಮಾಡಲಿಕ್ಕೆ ಸಾಧ್ಯವಿಲ್ಲ. ಇಲ್ಲಿ ಹೇಳುತ್ತಾರೆ, ಯತ್ರ ನಾರಿ ಪೂಜ್ಯಂತೇ, ತತ್ರಸ್ಯ ದೈವೇತಾ ನಿರ್ವಸತಿ, ಎಲ್ಲಿ ಹೆಣ್ಣುಮಕ್ಕಳನ್ನು ಪೂಜಿಸುತ್ತಾರೋ ಅಲ್ಲಿ ದೇವರು ಇರುತ್ತಾನೆ, ಇದನ್ನು ಕೂಡ ತಾವೆಲ್ಲಾ ತಿಳಿದುಕೊಳ್ಳಬೇಕಾಗುತ್ತದೆ.

ಮಂಕುತಿಮ್ಮನ ಕಗ್ಗದಲ್ಲಿ ಡಿ.ವಿ.ಜಿಯವರು ಹೇಳುತ್ತಾರೆ,

ಸರಕಾರ ಹರಿಗೋಲು, ತೆರೆಸುಳಿಗಳತ್ತತ್ತ,

ಸುರೆಕುಡಿದರು ಕೆಲವರು ಹುಟ್ಟು ಹಾಕುವರು,

ಬಿರುಗಾಳಿ ಬೀಸುವುದು, ಜನರೆದ್ದು ಕುಣಿವುದು

ಇರುವುದರಲ್ಲಿ ಅಚ್ಚರಿಯೇನು ಮಂಕುತಿಮ್ಮ

ಆ ಪರಿಸ್ಥಿತಿ ನಿಮ್ಮದಾಗಿದೆ. ಇನ್ನು ಅಧ್ಯಕ್ಷರೇ, ಗಾಂಧೀಜಿ ಕೆಲವು ಮಾತನ್ನು ಹೇಳುತ್ತಾರೆ, ನಿಜವಾಗಿ ಇದನ್ನೆಲ್ಲಾ ನಾನು ಅಚರಣೆಗೆ ತಂದು

ಕೊಂಡರೆ ಖಂಡಿತವಾಗಿಯೂ ಇವತ್ತು ನಿಮ್ಮ ಬಜೆಟ್ ಉಪಯೋಗವಾಗುತ್ತದೆ. ಗಾಂಧೀಜಿ ಇಲ್ಲಿ ಹೇಳುತ್ತಾರೆ, ಅಹಿಂಸೆಯೇ ಪರಮಧರ್ಮ, ಹಿಂಸೆಯೆಂದರೆ ಶಕ್ತಿಹೀನರ ಆಯುಧ, ಅಹಿಂಸೆಯೇ ಬಲಿಷ್ಠರ ಅಸ್ತ್ರ, ನಾವೆಲ್ಲರೂ ಹುಚ್ಚರೇ ಆಗಿರುವಾಗ ಯಾರನ್ನು ಹುಚ್ಚರೆಂದು ಕರೆಯುವುದು. ಜೇಬನ್ನು ಸೇರುವ ಪ್ರತಿಯೊಂದು ಕಾಸು ಹೇಗೆ ಬಂತೆದು ಅನ್ವೇಷಿಸುವಾಗ ಹೊಸ ಹೊಸ ಪಾಠಗಳು ಕಾಣುತ್ತವೆ. ಇದರ ಮುಂದಿನದ್ದನ್ನು ಮಾನ್ಯ ಯಡಿಯೂರಪ್ಪನವರು ಕೇಳಬೇಕು.

"ಬಿತ್ತಲೆ ಇದ್ದವನಿಗೆ ಬಟ್ಟೆ ಕೊಟ್ಟು ಅವಮಾನಿಸುವುದೇಕೆ ? ಭಾರಿ ಕೆಲಸ ನಾವೆಲ್ಲಾ ಮಾಡಿದ್ದೇವೆ, ಸೈಕಲ್ ಕೊಟ್ಟಿದ್ದೇವೆ, ಅದನ್ನು ಕೊಟ್ಟಿದ್ದೇವೆ, ಇದನ್ನು ಕೊಟ್ಟಿದ್ದೇವೆಂದು ಎಲ್ಲಾ ಹೇಳುತ್ತಾರೆ. ಆದರೆ ಗಾಂಧೀಜಿ ಹೇಳುವುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು,

" ಬೆತ್ತಲೆ ಇದ್ದವನಿಗೆ ಬಟ್ಟೆ ಕೊಟ್ಟು ಅವಮಾನಿಸುವುದೇಕೆ, ಅದರ ಬದಲು ಅವನಿಗೆ ಕೆಲಸವನ್ನು ಕೊಟ್ಟು ಬಂದ ಉತ್ಪನ್ನದಿಂದ ಆತ ಬಟ್ಟೆ ತೊಟ್ಟುಕೊಳ್ಳುವಂತಾಗಬೇಕು. ತಾಯಿ ನುಡಿಯನ್ನು ಮರೆತರೆ, ತಾಯಿಯನ್ನೆ ಮರೆತಂತೆ, ಮಧ್ಯ ಮನುಷ್ಯನನ್ನು ಉನ್ಮತ್ತನನ್ನಾಗಿಸಿದರೆ ಅಹಂಕಾರ ಆತನನ್ನು ಸದಾಕಾಲ ಮತ್ತನನ್ನಾಗಿ ಮಾಡುತ್ತದೆ. " ಅಧ್ಯಕ್ಷರೇ, ತಾವೇ ಒಂದು ಪುಸ್ತಕ ತೆಗೆಸಿದ್ದೀರಿ.

ಶ್ರೀ ಕೆ.ಎನ್. ರಾಜಣ್ಣ : ಮಾನ್ಯ ಪಾಟೀಲರೆ, ಒಂದು ನಿಮಿಷ, ನಮ್ಮ ಪಾಟೀಲರು ಬಹಳ ಒಳ್ಳೆಯ ಬಸ್ವ ಸಾಹಿತ್ಯ, ಸರ್ವಜ್ಞನ ತ್ರಿಪದಿಗಳನ್ನು ಬಹಳ ಚೆನ್ನಾಗಿ ಹೇಳಿದ್ದಾರೆ. ಆದರೆ ಈ ಬಸವ ಸಾಹಿತ್ಯ ಕೇಳುವಾಗ ಏನು ಇಲ್ಲಿ ಹರಿಕಥೆ ನಡೆಯುತ್ತದೆಯೋ ಅಥವಾ ಬಜೆಟ್ ಮೇಲೆ ಚರ್ಚೆ ನಡೆಯುತ್ತದೆಯೋ ಎಂಬ ಭಾವನೆ ಬರಲಿಕ್ಕೆ ಸಾಧ್ಯವಿದೆ. ಆದರೆ ಅಧ್ಯಕ್ಷರೆ, ಇಷ್ಟೆಲ್ಲಾ ಹೇಳುತ್ತಾರಲ್ಲಾ, ನಾವು ವಿಧಾನಸೌಧದ ಒಳಗಡೆ ಬರುವಾಗ " ಸರ್ಕಾರಿ ಕೆಲಸ ದೇವರ ಕೆಲಸ " ಎಂಬ ವಾಕ್ಯವನ್ನು ಕೆಂಗಲ್‌ಹನುಮಂತಯ್ಯನವರು ಬರೆಸಿದ್ದಾರೆ. ಒಳಗಡೆಯಿರುವ ಅಧಿಕಾರಿಗಳು

ಸರ್ಕಾರಿ ಕೆಲಸ ದೇವರ ಕೆಲಸ, ದೇವರು ಮಾಡುತ್ತಾನೆ, ನಾನೇಕೆ ಮಾಡಬೇಕು ಎಂದು ಬಿಟ್ಟರೆ ಗತಿ ಏನಾಗುತ್ತದೆ ಹೇಳಿ.

ಶ್ರೀ ಎಸ್.ಎಸ್.ಪಾಟೀಲ್ : - ಹಾಗಾದರೆ ಕೆಂಗಲ್ ಹನುಮಂತಯ್ಯನವರು ಬರೆಸಿರುವುದು ತಪ್ಪು ಎಂದು ಹೇಳುವಿರಾ ? ನೀವು ಹೇಳುವ ಮಾತು ಆ ರೀತಿ ಅರ್ಥ ಬರುತ್ತದೆ. ಇಲ್ಲಿ ರಾಜ್ಯ ವ್ಯವಸ್ತೇಯ ಉಗಮ ಧ್ಯೇಯ ಮತ್ತು ಕರ್ತವ್ಯ ಎನ್ನುವ ಆಡಳಿತಗಾರರಗೆ ಆಚಾರ ಸಂಹಿತೆ ಪುಸ್ತಕ ಕಳುಹಿಸಲಾಗಿದೆ. ಎಲ್ಲಾ ಶಾಸಕರಿಗೂ ಈ ಪುಸ್ತಕ ಬಂದಿದೆ. ಬಹಳ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ, ಪಾಪ ಇವನ್ನೆಲ್ಲಾ ನಾವು ಓದಬೇಕಾಗುತ್ತದೆ. ಅದರಂತೆ ನಡೆಯುವ ಪ್ರಯತ್ನವನ್ನು ಮಾಡೋಣ. ಹಾಗೆ ನಡೆಯುತ್ತೆ\ಏವೆ ಎಂದು ಕೊಳ್ಳುವುದ್ಕಕಿಂತ ಕನಿಷ್ಠ ಆ ಪ್ರಯತ್ನ ವನ್ನಾದರೂ ಮಾಡಿದರೆ, ಕನಿಷ್ಠವಾಗಿ ನಮ್ಮದೇನೂ ೧೭,೦೦೦-೦೦ ಕೋಟಿ ರೂಪಾಯಿಗಳಿವೆ, ನಮ್ಮ ಪ್ಲಾನ್ನಲ್ಲಿ ಅದರಲ್ಲಿ ೯೦% ಆದರೂ ಜನರಿಗೆ ಹೋಗಿ ಮುಟ್ಟುತ್ತದೆ. ಇಲ್ಲಿ ಭರತಗೆ ರಾಮ ಹೇಳುತ್ತಾನೆ. "ಭರತ, ಧಮ?ದ ನಿಯಮಗಳು ಪ್ರಕೃತಿಯ ನಿಯಮಗಳಂತೆ ಬದಲಾಯಿಸಲು ಅಸಾಧ್ಯ. ಧರ್ಮವು ಇದು ಸರಿ ಮತ್ತು ನೀನು ಹಾಗೆಯೇ ನಡೆದುಕೊಳ್ಳತಕ್ಕದ್ದು ಎಂದು ಹೇಳಿದಾಗ, "ಅಡ್ಡದಾರಿಯನ್ನು ಹುಡುಕುವುದು" ತಪ್ಪು ರತ, ರಾಜ್ಯದ ಅಧಿಕಾರ ವಿಷವಿದ್ದಂತೆ. ಅದನ್ನು ಚಲಾಯಿಸುವುದಕ್ಕೂ ಹಾಗೂ ಆ ವಿಷದಿಂದ ರಕ್ಷಿಸಿಕೊಳ್ಳಲೂ ಪರಮಾತ್ಮನ ಕೃಪೆ ಬೇಕು. ಧರ್ಮಕ್ಕೆ ಶರಣು ಹೋಗುವುದೊಂದರಿಂದಲೇ ಅರ್ಥಾತ್ ಧರ್ಮ ಆಚರಣೆಯಿಂದಲೇ ಪರಮಾತ್ಮನ ಕೃಪೆ ದೊರೆಯುತ್ತದೆ. ಆದರೆ ಯಾರು ಕೇವಲ ಅಧಿಕಾರವೇ ಸರ್ವಸ್ವವೆಂದು ತಿಳಿಯುತ್ತಾರೋ ಅವರ ನಾಶ ನಿಶ್ಚಿತ.

ಯಾವ ಪದ್ಧತಿಯ ಸಕಾರದಲ್ಲೇ ಆಗಲಿ ರಾಜಕೀಯ ಅಧಿಕಾರವನು ಚಲಾಯಿಸುವ ಎಲ್ಲ ವ್ಯಕ್ತಿಗಳಿಗೂ ರಾಮನ ಮೇಲ್ಕಂಡ ಬುದ್ಧಿವಾದ ಅನ್ವಯವಾಗುತ್ತದೆ. ಇದರ ಅರ್ಥವೆಂದರೆ, ಯಾವ ರೀತಿ ವಿದ್ಯಚ್ಛಕ್ತಿಯಿರುವ ತಂತಿಯನ್ನು ಮುಟ್ಟಿ ಕೆಲಸ ಮಾಡಲು ರಬ್ಬರಿನ ಕೈಚೀಲ

ಧರಿಸುತ್ತಾರೋ ಹಾಗೆ ಯಾರು ರಾಜ್ಯ ಶ್ಕತಿಯನ್ನು ಚಲಾಯಿಸುತ್ತಾರೋ ಅವರು ಧರ್ಮದ ಕೈಚೀಲವನ್ನು ಧರಿಸಬೇಕು. ಇಲ್ಲದಿದ್ದರೆ ರಾಜ್ಯದ ಅಧಿಕಾರ ಮಾರಕವಾಗಬಹುದು. ರಾಜಧರ್ಮದ ಈ ನಿಯಮಗಳೇ ಮಹಾತ್ಮಾಗಾಂಧಿಯವರ ರಾಮರಾಜ್ಯದ ಕಲ್ಪನೆಯಾಗಿತ್ತು. ಇದು ಮಹಾತ್ಮಾ ಗಾಂಧೀಜಿಯವರ ಕಲ್ಪನೆಯಾಗಿತ್ತು, ಎಂಬ ಮಾತನ್ನು ಕೂಡ ಇಲಿ ಹೇಳುತ್ತಿದ್ದಾರೆ. ಇನ್ನೊಂದು ಮಹತ್ವದ ವಿಷಯವನ್ನು ಇದರಲ್ಲಿ ಹೇಳುತ್ತಿದ್ದಾರೆ ಅಧ್ಯಕ್ಷರೇ,

ರಾಜರಿಗಾಗಿ ಮಾಡಿದ ನಿಯಮಗಳು ಇತರರಿಗೂ ಅನುಕರಣೀಯ:

" ರಾಜ್ಯ ವ್ಯವಸ್ಥೆಯ ಅಧಿಕಾರವನ್ನು ಚಲ?ಆಯಿಸುವ ಪ್ರಧನಮಂತ್ರಿ ಮುಖ್ಯಮಂತ್ರಿಗಳು ಇತರ ಉನ್ನತ ಅಧಿಕಾರಿಗಳು, ಶಾಸಕರು, ಇವರೆಲ್ಲರಿಗೂ ಅನ್ವಯವಾಗುತ್ತವೆ. ಮುಖ್ಯವಾಗಿ ಇಂತಹ ಪದವಿಗಳಲ್ಲಿ ಅಸೀನರಾಗಿರುವವರು ಮಾದ್ಯಪಾನ ಮಾಡಬಾರದು. ಅನೈತಿಕ ಲೈಂಗಿಕ ಸುಖಕ್ಕೆ ಬಲಿಬೀಳಬಾರದು. ಸರ್ಕಾರೀ ಹಣದಲ್ಲಿ ಅನವಶ್ಯಕ ಪ್ರವಾಸ ಮಾಡಬಾರದು ಮತ್ತು ಇತರರ ಬಗ್ಗೆ ಕ್ರೂರತನದಿಂದ ವರ್ತಿಸಬಾರದು."

ಆಮೇಲೆ ಮುಂದೆ ಏನು ಹೇಳುತ್ತಾರೆ ಕೇಳಿ, ಮಾನ್ಯ ಯಡಿಯೂರಪ್ಪನವರೇ, ಈ ಕಡೆ ಲಕ್ಷ್ಯ ಕೊಡಿ, ಇದನ್ನು ಕಿವಿಗೆ ಹಾಕಿಕೊಳ್ಳೋಣ, ಬಿಡಿ ಆಮೇಲೆ ಮಾತನಾಡಿ.

"ಕಾಯಾ, ವಾಚಾ, ಮನಸಾ ಶುದ್ಧರಾದ, ನ್ಯಾಯವಾಗಿ ದ್ರವ್ಯ ಸಂಪಾದನೆ ಮಾಡುವ ಗುಣವುಳ್ಳ ಮಂತ್ರಿಗಳನ್ನೇ ನೇಮಿಸಿಕೊಳ್ಳಬೇಕು,"

ಸನ್ಮಾನ್ಯ ಅಧ್ಯಕ್ಷರೆ, ಇಲ್ಲಿ ಗಾಂಧೀಜಿ ಎಲ್ಲಾ ರಾಜಕಾರಣಿಗಳನ್ನು ಎಚ್ಚರಿಸಲಿಕ್ಕೆ ಹೇಳುತ್ತಾರೆ. ಎಲ್ಲಾ ಧರ್ಮಗಳನ್ನು ನಾವು ನನಸು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಕಳೆದ ೫೮ ವರ್ಷಗಳಿಂದ ಇವೆಲ್ಲವನ್ನೂ ನನಸು ಮಾಡಿಬಿಟ್ಟಿದ್ದೇವೆ. ನಾವು ಭ್ರಷ್ಟಾರಾಗುವುದರ ಜೊತೆಗೆ ಜನರನ್ನು ಭ್ರಷ್ಟರನ್ನಾಗಿಸಿದ್ದೇವೆ. ಈಗ ಈ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುವುದು ಅಷ್ಟು ಸರಳವಾದ ಮಾತಿಲ್ಲ. ಬಹುಶಃ ಅದಕ್ಕಾಗಿಯೇ ನಮ್ಮ

ಮಾನ್ಯ ಯಡಿಯೂರಪ್ಪನವರು ಬಹುಶಃ ಹೋದ ಸಲ ನೀವು ಇಲ್ಲಿ ನಿಮ್ಮ ಆದ್ಯತೆಯ್ಲಿ ಹೇಳಿದ್ದಿರಿ, ಏನು, "ಎಲ್ಲಾ ಮಟ್ಟದಲ್ಲೂ ಭ್ರಷ್ಟಾಚಾರ ನಿಯಂತ್ರಣ" ಈ ಮಾತನ್ನು ಹೇಳಿದ್ದೀರಿ, ಆದರೆ ಈ ಸಲ ಆಮಾತನ್ನು ಬಿಟ್ಟುಬಿಟ್ಟಿದ್ದೀರಿ ಬಹುಶಃ ಭ್ರಷ್ಟಾಚಾರದ ನಿಯಂತ್ರಣವಾಗಿದೆಯೇ ? ಅಥವಾ ಮಾಡಲಿಕ್ಕೆ ಸಾಧ್ಯವಾಗಿಲ್ಲವೇ ಸುಮ್ಮನೆ ಆಗುವುದಿಲ್ಲ, ಇದನ್ನೇಕೆ ಹೇಳಬೇಕು ಎಂದು ಬಿಟ್ಟಿದ್ದೀರೋ, ಏನೋ ಎಂದು ನನಗೆ ಸಂಶಯವಿದೆ. ಆದ್ದರಿಂದ ದೆಯವಿಟ್ಟು ಆ ಮಾತನ್ನು ಹೇಳಬೇಕು. ಅದು ಆಗಲಿ, ಹೋಗಲಿ, ಅದರ ಪ್ರಯತ್ನದಲ್ಲಾದರೂ ನಾವಿರಬೇಕು. ಈ ಸಾರಿ ಈ ಭ್ರಷ್ಟಾಚಾರವೆಂಬ ಶಬ್ಧವನ್ನು ತೆಗೆದುಬಿಟ್ಟಿದದೀರಿ. ನಿಮ್ಮ ಮೊದಲನೆ ಆದ್ಯತೆಯಲ್ಲಿರುತ್ತದೆ. ಯಾವಾಗಲೂ ರಾಜ್ಯಪಾಲರು ಮೊದಲಿಗೆ ಭಾಷಣ ಮಾಡುವಾಗ ಹೇಳುತ್ತಾರೆ, ಬಜೆಟ್ಟಿನಲ್ಲಿಯೂ ಹೇಳುತ್ತೀರಿ, ಆದರೆ ಈ ಸಲ ಆ ಭ್ರಷ್ಟಾಚಾರ ಎಂಬ ಶಬ್ದವನ್ನೇ ಕೈಬಿಟ್ಟಿದ್ದೀರಿ ; ಆ ಶಬ್ದವೇ ಹೋಗಿ ಬಿಟ್ಟಿದೆ. ಎಲ್ಲಾ ಹಂತಗಳಲ್ಲಿಯೂ ಭ್ರಷ್ಟಾಚಾರ ನಿಯಂತ್ರಣ ಮಾಡುತ್ತೇವೆಂಬ ಮಾತೇನು ಇತ್ತಲ್ಲ ಅದನ್ನು ತೆಗೆದು ಬಿಟ್ಟಿದ್ದೀರಿ ಈ ಸಲ. ಈ ಬಜೆಟ್ಟಿನಲ್ಲಿ ಹೇಳಿಯೇ ಇಲ್ಲ. ಬಹುಶಃ ಅದರ ನಿಯಂತ್ರಣವಾಗಿದೆ ಎಂದು ತಿಳಿದುಕೊಂಡಿರೋ ಅಥವಾ ನಿಮ್ಮ ಕೈಯಲ್ಲಿ ಆಗಲಿಲ್ಲವೋ, ಇದು ಸಾಧ್ಯವೇ ಇಲ್ಲ ಸುಮ್ಮನೆ ಏಕೆ ಹೇಳುತ್ತಾ ಹೋಗಬೇಕೆಂದು ಬಿಟ್ಟರೋ ಎಂದು ಇಲ್ಲಿ ಂಶಯ ಬರುತ್ತದೆ. ಇಲ್ಲಿ ಗಾಂಧೀಜಿಯವರು ಹೇಳುತ್ತಾರೆ, "ಮಂತ್ರಿ ಪದವಿಗಳು ಸೇವೆಗೆ ದಾರಿ, ಯಾರನ್ನೂ ಅದಕ್ಕೆ ಆರಿಸಲಾಗುವುದು, ಅವರು ಆ ಸೇವೆಯನ್ನು ಸಂತೋಷದಿಂದ ಮಾಡಬೇಕು, ತಮ್ಮ ಪರಿಪೂರ್ಣ ಶಕ್ತಿಯಿಂದ ಮಾಡಬೇಕು ; ಅಂತೆಯೇ ಆ ಪದವಿಗಾಗಿ ಎಂದೂ ಕಿತ್ತಾಡಬಾರದು. " ಮಾನ್ಯ ಯಡಿಯೂರಪ್ಪನವರೆ, ಇನ್ನು ಆರು ತಿಂಗಳಲ್ಲಿ ಏನಾಗುತ್ತದೋ ನೋಡೋಣ. ಪಾಪ ನೀವು ಮುಖ್ಯ ಮಂತ್ರಿಗಳಾಗಿ ನಾನಂತೂ ಪರಮಾತ್ಮನಲ್ಲಿ ಬಯಸುತ್ತೇನೆ. ಏಕೆಂದರೆ ತಾವು ಬಹಳ ಹೋರಾಟ ಮಾಡುತ್ತಿರುವವರು. ಬಹುಶಃ ಮಾನ್ಯ ರಾಜಣ್ಣನವರು ಹಾಗೆಲ್ಲಾ ಏನು ಮಾಡುವುದಿಲ್ಲ ಎಲ್ಲಾ ಕೊಡುತ್ತೇವೆಂದು ಹೇಳಿದ್ದಾರೆ, ಬಹುಶಃ ಹಾಗೆ ಮಾಡಲಿಕ್ಕಿಲ್ಲವೆಂದು ನನಗೂ ಅನ್ನಿಸುತ್ತದೆ. ಅದಕ್ಕೆ ತಾವು

ಮುಖ್ಯಮಂತ್ರಿಗಳಾಗಿ, ನಾವೇನು ನಿಮ್ಮ ಸರ್ಕಾರ ಬಿದ್ದುಹೋಗಲಿ, ನಾವು ಬರಬೇಕು ಎನ್ನುವುದಿಲ್ಲ. ನಾವು ಜನರ ಆಶೀರ್ವಾದ ಇದ್ದರೆ ಬರುತ್ತೇವೆ, ಇಲ್ಲದಿದರೆ ನೋಡೋಣ. ಮುಂದೇನಾಗುತ್ತದೋ, ನೀವು ಚೆನ್ನಾಗಿ ನಡೆಸಿದರೆ ಸಾಕು, ಇವೆಲ್ಲಾ ಏನು ಹೇಳುತತೇವೆ, ಇದರಂತೆ ನಡೆದರೆ ಸಾಕು, ಇಲ್ಲಿ ಏನು ಹೇಳುತ್ತಾರೆ, "ಕಿತ್ತಾಡಬಾರದು, ಜನ ನಿಮ್ಮನ್ನು ಆರಿಸಿರುವುದು ಸರಳತೆ, ಧೈರ್ಯ, ಪ್ರಮಾಣಿಕತೆ ಹಾಗು ಕಾರ್ಯಕ್ಷಮತೆಗಳಲ್ಲಿ ಮಿಕ್ಕ ಅಭ್ಯರ್ಥಿಗಳಿಗಿಂತ ನೀವು ಶ್ರೇಷ್ಠರು ಎಂದು ಹಾಗಾಗಿ ಜನತೆಗಾಗಿ ಇರುವವರು ನೀವು ಅವರಿಗೆ ಸೇರಿದವರು. ನೀವು ಆಡಳಿತ ಸೂತ್ರ ಹಿಡಿದು ಗರ್ವಿಸದಿರಿ, ಕೋಟ್ಯಾಂತರ ಹಣ ವಿಲೇವಾರಿ ಆಗಿರುತ್ತದೆ, ಮೈಯೆಲ್ಲಾ ಎಚ್ಚರವಾಗಿರಬೇಕು. " ಇಲ್ಲಿ ಹೇಳುತ್ತಾರೆ, ಅದು ಭಾರತದ ಬಡಜನರ ಹಣ, ನೀವು ಆಡಿದ ಮಾತನ್ನು ಮರೆಯಲೇಬಾರದು. ಅದನ್ನೇ ಬಸವಣ್ಣ ನವರು ಹೇಳುತ್ತಾರೆ.

ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು
ನುಡಿದರೆ ಸ್ಫಟಿಕದ ಸಲಾಖೆಯಂತಿರಬೇಕು
ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು
ನುಡಿಯೊಳಗಾಗಿ ನಡೆಯದಿದ್ದರೆ
ಕೂಡಲಸಂಗಮ ದೇವನೆಂತೊಲಿವನಯ್ಯ ?

ಇಲ್ಲೊಂದು ಮಾತು ಮಾನ್ಯ ಯಡಿಯೂರಪ್ಪನವರೇ, ನಿಮ್ಮ ಮಂತ್ರಿಮಂಡಲದ ಬಗ್ಗೆ ಬರೆಯುತ್ತಾರೆ, ನೇರವಾಗಿ ನೋಡಿ ಅದರು ಎಷ್ಟು ಸತ್ಯವೋ ಏನೋ ಎಂದು ನೀವು ಮನಸ್ಸು ಹಗುರಮಾಡಿಕೊಂಡು ನೋಡಿ, " ರಾಜ್ಯ ಸಕಾ?ರಕ್ಕೆ ಒಂದು ವರ್ಷ ತುಂಬಿದೆ, ಈ ಸಂದರ್ಭದಲ್ಲಿ ಮಂತ್ರಿಗಳ ಕಾರ್ಯವೈಖರಿಯನ್ನು ಪಕ್ಕಕ್ಕಿಟ್ಟು, ಸರ್ಕಾರದ ಸಾಧನೆಯನ್ನು ಅಳೆಯಲಾಗದು, ಏಕೆಂದರೆ ಸರ್ಕಾರದ ತೇರು ಮುಂದೆ ಸಾಗಲಿ, ಮಂತ್ರಿಗಳು ಕೆಲಸ ಮಾಡಬೇಕು, ಆದರೆ ಈಗ ಆಗಿರುವುದಾದರೂ ಏನು ?

"ಕೇಳಿ ಮುಂದೆ ಹೇಳುತ್ತಾರೆ", ತಮ್ಮ ತಮ್ಮ ಇಲಾಖೆಗಳಲ್ಲಿ ಆಗಿರುವ ಕೆಲಸ, ಆಗಬೇಕಾಗಿರುವ ಕೆಲಸಗಳ ಬಗ್ಗೆ ಅಧಿಕಾರಿಗಳ ಸಭೆ ಕರೆದು ಸಮಾಲೋಚನೆ ನಡೆಸುವವರ ಸಂಖ್ಯೆ ಬೆರಳಣಿಕೆಯಷ್ಟು, ಜನರ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಬೇಕೆಂಬ ಚಿತ್ತ ಆಗಿಹೋಗಿದೆ. ಕೆಲವರಿಗಂತೂ ಮಂತ್ರಿಯಾಗಿ ತಾವು ಮಾಡಬಹುದಾದ್ದು ಏನು ಎಂಬುದರ ಅರಿವೇ ಇಲ್ಲದೆ ಪ್ರತಿಯೊಂದಕ್ಕೂ ಮುಖ್ಯಮಂತ್ರಿ, ಉಪಮುಖ್ಯಮಂತ್ರಿಯವರ ಮೇಲೆ ಅವಲಂಬಿಸಿದ್ದಾರೆ. C.M., D.C.M. ಅವರನ್ನು ಮೆಚ್ಚಿಸಬೇಕೆಂದು ಹೀಗೆ ಮಾಡುತ್ತಾರೋ ಅಥವಾ C.M., D.C.M ರವರೇ ಅವರನ್ನು ನಿಯಂತ್ರಣದಲ್ಲಿಟ್ಟಿದ್ದಾರೋ ಎಂಬ ಅನುಮಾನಗಳಿಗೆ ಅವರ ವರ್ತನೆ ಆಸ್ಪದ ಕೊಡುತ್ತವೆ. ಇಲ್ಲಿ ಮಂತ್ರಿಗಳ ಬಗ್ಗೆ ನಿಮ್ಮ ಕ್ಯಾಬಿನೆಟ್ ಗ್ಗೆ ನೇರವಾಗಿ ಬರೆಯುತ್ತಾರೆ, ಅದನ್ನು ತಾವು ಪರಿಶೀಲನೆ ಮಾಡಿ.

ಮೊದಲನೆಯದಾಗಿ ಕೃಷಿ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ನಾವು ಬಡ್ಡಿ ಮ್ಹಾ; ಅಸಲು ಮನ್ನಾ ಮಾಡಿದಿರ, ಬಹುಶಃ ಇದರಿಂದ ರೈತ ಉದ್ಧಾರವಾಗುತ್ತಾನೆಂದು ನಮಗೇನೂ ಕಂಡುಬಂದಿಲ್ಲ, ಇಲ್ಲಿಯವರೆಗೆ ನಮ್ಮ ಅನುಭವದ ಮೇಲೆ. ನಾವು ಇದ್ದಾಗ ೧೩೭ ಕೋಟಿ ರೂಪಾಯಿಗಳನ್ನು ಮನ್ನಾ ಮಾಡಿದ್ದೇವೆ, ಅದಕ್ಕಿಂತ ಹಿಂದೆ ನಮ್ಮ ರಾಮಕೃಷ್ಣ ಹೆಗಡೆ ಸಾಹೇಬರು ಇದ್ದಾಗಲೂ ಮಾಡಿದ್ದರು ತಾವು ಕೂಡ ಸುಮಾರು ೧೯೦೦ ಕೋಟಿ ರೂಪಾಯಿಗಳನ್ನು ಮನ್ನಾ ಮಾಡುತ್ತಿದ್ದೀರಿ. ಇದರಿಂದ ರೈತರ ಸಮಸ್ಯೆ ಬಗೆಹರಿಯುವುದೇನು ? ಇದೀಗ ಇರುವಂಥ ಪ್ರಶ್ನೆ. ಈ ಬಜೆಟ್ಟಿನಲ್ಲಿ ಕೆಲವು ಒಳ್ಳೆಯ ಅಂಶಗಳಿವೆ, ಎಲ್ಲವನ್ನು ಟೀಕೆ ಮಾಡಲಿಕ್ಕಾಗುವುದಿಲ್ಲ. ನಮ್ಮ ಸಾರಾಯಿ ನಿಷೇಧ ಮಾಡಿದರು. ನಂಜುಂಡಪ್ಪ ವರದಿಯನ್ನು ಜಾರಿಗೆ ತರುವಂಥ ಪ್ರಯತ್ನವನ್ನು ಮಾಡಿದ್ದಾರೆ. ಕೆಲವು ಅಲ್ಲಲ್ಲಿ ಒಳ್ಳೆಯ ಕೆಲಸಗಳಿಗೆ ಹಣ ಕೊಟ್ಟಿದ್ದಾರೆ, ಅದು ಒಳ್ಳೆಯದು. ಆದರೆ ದೂರಾಲೋಚನೆ ಇಲ್ಲ, ಈ ಒಂದು ಬಜೆಟ್ಟಿನಲ್ಲಿ ದೂರದೃಷ್ಟಿಯಿಲ್ಲ, ಶಾಶ್ವತವಾದ ಪರಿಹಾರ ಇಲ್ಲಿ ಎಲ್ಲೂ ಇಲ್ಲ. ರೈತರ ಸಮಸ್ಯೆಗಳನ್ನು ಶಾಶ್ವತವಾಗಿ ಪರಿಹಾರ ಮಾಡುವಂಥ ಯಾವೊಂದು ಯೋಜನೆ ಕೂಡ ಈ ಬಜೆಟ್ಟಿನಲ್ಲಿ ಕಾಣುತ್ತಿಲ್ಲ. ರೈತರ ಬಡ್ಡಿ ಮನ್ನಾದಿಂದ

ಎಷ್ಟು ಜನ ರೈತರಿಗೆ ಅನುಕೂಲವಾಗುತ್ತದೆ. ಈ ರಾಜ್ಯದಲ್ಲಿ ಸುಮಾರು ೬೮.೦೦ ಲಕ್ಷ ಜನ ರೈತರಿದ್ದಾರೆ. ಈ ರೀತಿ ಅಸಲು ಮತ್ತು ಬಡ್ಡಿ ಮನ್ನಾದಿಂದ ಎಷ್ಟು ಜನ ರೈತರಿಗೆ ಸಹಾಯವಾಗುತ್ತದೆ. ಇಲ್ಲಿ ಕೂಡ ಚರ್ಚೆಯಾಗಬೇಕಾಗಿದೆ, ಸಾಮಾನ್ಯವಾಗಿ ಎಲ್ಲಾ ರೈತರಿಗೆ ಏನು ಸಮಸ್ಯಗಳಿವೆ, ಪರಿಹಾರ ನೀಡವಂಥ ಯೋಜನೆಗಳು ಈ ಬಜೆಟ್ಟಿನಲ್ಲಿ ಬರಬೇಕಾಗಿತ್ತು, ಅದರ ಬಗ್ಗೆ ಯಾವುದೇ ಕಲ್ಪನೆಯೂ ಇಲ್ಲ. ಕೇವಲ ಅಸಲು ಮತ್ತು ಬಡ್ಡಿ ಮನ್ನಾ ಮಾಡಿದ್ದೇವೆಂದರೆ ನಾವು ಆಗಿನಿಂದ ಹಿಂದಿನಿಂದ ಮಾಡಿ ಬಂದಿದ್ದೇವೆ. ರಾಮಕೃಷ್ಣ ಹೆಗಡೆಯವರ ಸರ್ಕಾರ ದಿಂದಲೂ ಮಾಡುತ್ತಾ ಬಂದಿದ್ದೇವೆ. ಹೋದ ಸಲ ಕೂಡ ಮಾಡಿದ್ದೀರಿ, ಈಗಲೂ ಕೂಡ ಮಾಡಿದ್ದೀರಿ. ಆದರೂ ಕೂಡ ಇವತ್ತಿಗೂ ಕೂಡ ರೈತರ ಸಮಸ್ಯೆ ಬಗೆಹರಿದಿಲ್ಲ. ಇವತ್ತು ಕೂಡ ರೈತರು ವಿಷ ತೆಗೆದುಕೊಂಡು ಸಾಯುತ್ತಿದ್ದಾರೆ. ನನಗೆ ಕಣ್ಣೀರು ಬರುತ್ತದೆ, ಕೇವಲ ಒಂದು ತಿಂಗಳಿನಲ್ಲಿ ನನ್ನ ಕ್ಷೇತ್ರದಲ್ಲಿ ನಾಲು ಕನ ರೈತರು ಈಗಾಗಲೇ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ; ಇದರಿಂದ ನೋವು ಅನ್ನಿಸುತ್ತದೆ.

ಅಧ್ಯಕ್ಷರು : ಅದಕ್ಕೆ ನಿಮ್ಮ ಸಲಹೆಯೇನು ಹೇಳಿ.

ಶ್ರೀ ಎಸ್.ಎಸ್. ಪಾಟೀಲ್ : ಹೇಳುತ್ತೇನೆ. ಇದು ಎಷ್ಟು ರೈತರಿಗೆ ಆಗುತ್ತದೆ ಅಂದರೆ ೬೮,೮೩,೮೫೬ ರೈತಕುಟುಂಬಗಳು ನಮ್ಮ ರಾಜ್ಯದಲ್ಲಿವೆ. ಇದರಿಂದ ಎಷ್ಟು ರೈತರಿಗೆ ಸಹಾಯವಾಗುವುದು ? ೨೫,೦೦೦ ರೂಪಾಯಿಗಳನ್ನು ಮಾಡಿ, ೫೦,೦೦೦ ರೂಪಾಯಿಗಳನ್ನು ಮಾಡಿ ಅಥವಾ ಅಷ್ಟೂ ಮನ್ನಾ ಮಾಡಿ. ಎಲ್ಲ ಬ್ಯಾಂಕ್ ಗಳಲ್ಲಿನ ಸಲ ಮನ್ನಾ ಮಾಡಿದರೂ ೧೦,೧೫,೨೦ ಸಾವಿರ ಕೋಟಿ ಆಗಬಹುದು. ಅದನ್ನು ಮಾಡಿದರೂ ಎಲ್ಲ ರೈತರಿಗೆ ಆಗುವುದಿಲ್ಲ. ಮನ್ನಾ ಆದ ರೈತರೂ ಉದ್ಧಾರವಾಗುವುದಿಲ್ಲ, ಉಳಿಕೆ ರೈತರದೂ ಬಹಳ ತೊಂದರೆ ಪರಿಸ್ಥಿತಿ. ಇದನ್ನೆಲ್ಲ ಕೂಡಿದರೂ ೮ ಲಕ್ಷ ರೈತರಾಗುತ್ತಾರೆ. ಅಂದರೆ ಇನ್ನು ೬೦ ಲಕ್ಷ ರೈತರಿಗೆ ಯಾವ ಸಹಾಯವೂ ಇಲ್ಲ. ಇದರಿಂದ ಏನೂ ಅನುಕೂಲವಾಗುವುದಿಲ್ಲ. ಆಮೇಲೆ ಈ ಮನ್ನಾ ವಿಚಾರ ಹಿಂದಿನಿಂದಲೂ ನೋಡಿದ್ದೇನೆ. ನಾನು ಸಚಿವ

ನಾಗಿದ್ದಾಗಲೂ ೧೫೦ ಕೋಟಿ ರೂಪಾಯಿ ಆ ಕಾಲಕ್ಕೆ ಮನ್ನಾ ಮಾಡಿದೆವು. ಆದರೆ ಇವತ್ತಿಗೂ ರೈತರು ಉದ್ಧಾರವಾಗಿಲ್ಲ. ರೈತರ ಸಾವು ತಪ್ಪಿಲ್ಲ. ಈ ಕಾರಣದಿಂದ ಇಡೀ ರಾಜ್ಯದ ರೈತರಿಗೆ ಆಗುವಂಥ ಒಂದು ಯೋಜನೆ ನಾವು ತರದೇ ಹೋದರೆ, ಇದು ಕೇವಲ ರಾಜ್ಯ ಸರ್ಕಾರ ಮಾಡಬೇಕು ಅಂತ ಖಂಡಿತ ನಾನು ಹೇಳುವುದಿಲ್ಲ. ರಾಜ್ಯ ಕೇಂದ್ರ ಸರ್ಕಾರಗಳು ಸೇರಿ ಮಾಡಬೇಕಾಗುತ್ತದೆ. ಕೇಂದ್ರ ಸರ್ಕಾರದ ಮೇಲೆ ಹಾಕದೆ ನಮ್ಮ ಕೈಲಿ ಎಷ್ಟಾಗುವುದೋ ಅಷ್ಟು ಮಾಡಬೇಕು. ಒಂದು ದುರ್ದೈವದ ಮಾತು ; ಬಹಳ ನೊಂದು ನಾನು ಹೇಳುತ್ತೇನೆ. ಕೇಂದ್ರ ಸರ್ಕಾರಕ್ಕೆ ಯಾರು ಸಲಹೆ ಕೊಟ್ಟಿರೋ ಏನೋ, ಎಲ್ಲಿ ೧೦ ರೈತರು ಸಾಯುತ್ತಾರೋ ಅಲ್ಲಿ package ಮಾಡುತ್ತಾರಂತೆ. ಮುಂಡರ್ಗಿಯಲ್ಲಿ ಅದು ಸಾಯೋದಕ್ಕೆ ಪ್ರೋತ್ಸಾಹವಾಗಿದೆ. ಬಹಳ ಕಷ್ಟವಿದ್ದ ಮುಂಡರ್ಗಿ ತಾಲೂಕಿಗೆ ಆ ಪ್ಯಾಕೇಜಿಲ್ಲ. ಗದಗ ಜಿಲ್ಲೆಗೆ ಆ package ಇಲ್ಲ. ಎಲ್ಲಿ ಸಾಯುತ್ತಾರೋ ಅಲ್ಲಿಗೆ package ಅನ್ನುವುದು ಬಹಳ ತಪ್ಪು ನಿರ್ಣಯ. ನಿಜವಾಗಿ ರೈತರಿಗೆ ಸಮಸ್ಯೆ ಇರುವ ಕಡೆ ಪರಿಹಾರ ಕೊಡಬೇಕೆ ಹೊರತು ೧೦ ಮಂದಿ ಸತ್ತ ಕಡೆ ಕೊಟ್ಟರೆ ಅದು ಉಳಿದವರಿಗೆ ಪ್ರೋತ್ಸಾಹವಾಗುತ್ತದೆ. ಆದ್ದರಿಂದ ರಾಜ್ಯದ ಎಲ್ಲ ರೈತರಿಗಾಗಿ package ಮಾಡಬೇಕು. ಅಥವಾ ಎಲ್ಲೆಲ್ಲಿ ಬರಗಾಲವಿದೆ ಅಲ್ಲಿಗೆ ಅನ್ವಯಿಸಿದರೆ ಮಾತ್ರ ರೈತರ ಸಮಸ್ಯೆ ಬಗೆಹರಿಯುತ್ತದೆ. ಇದಕೊಂದೇ ಮೂಲ ಉಪಾಯ ನಾನು ಹೇಳುವುದು, crop insurance ಅಂತ ಇದೆ. ರಾಜ್ಯ, ಕೇಂದ್ರ ಸರ್ಕಾರಗಳು ಕೂಡಿ ರೈತರಿಗೆ ಮಾಡಿದ ಒಂದು ಮೋಸ ಅದು. ಹಿಂದಿನಿಂದ ಅಸೆಂಬ್ಲಿಯಲ್ಲೂ ಹೇಳಿಕೊಳ್ಳುತ್ತಾ ಬಂದಿದ್ದೇನೆ. Threshold yield ಅಂತೆ. ಉದಾಹರಣೆಗೆ ಮುಂಡರ್ಗಿ ತಾಲೂಕಿನದು ಹೇಳುತ್ತೇನೆ. ಎರಡು ಸಲ ನಾವು insurance ತೆಗೊಂಡೆವು. ಒಂದು ಹೆಕ್ಟೇರ್ ಗೆ ೫೦ ಕೆ ಜಿ ಜೋಳ ಉತ್ಪನ್ನ ಬಂದರೆ insurance ಸಿಕ್ಕುವುದಿಲ್ಲ. ಒಂದು ಕ್ವಿಂಟಾಲ್ ಬೀಜ ಹಾಕುತ್ತೇವೆ. ಆ ಬೀಜದಷ್ಟು ಇಳುವರಿ ಬಂದರೂ insurance ಸಿಕ್ಕುವುದಿಲ್ಲ ಅಂತ ನಿಮಗೆ ಕಾಯಿದೆ ಮಾಡಿಟ್ಟರೆ, ಇದ್ಯಾವ insurance ? ಆ ಕಾರಣದಿಂದ ಸರಿಯಾದ insurance ಕೊಡಬೇಕು. ಒಂದು ಎಕರೆಗೆ ಜೋಳ ಎಷ್ಟು

ಬರುತ್ತದೆ, ಶೇಂಗ ಎಷ್ಟು ಬರುತ್ತದೆ ಹತ್ತಿ ಎಷ್ಟು ಬರುತ್ತದೆ ಅಂತ ಕೃಷಿ ಇಲಾಖೆಯೊಳಗೆ ಅಂಕಿ ಅಂಶ ಇದೆ. ಆ ಪ್ರಮಾಣಕ್ಕಿಂತ ಕಡಿಮೆ ಬಂದರೆ ಅದನ್ನು ತುಂಬಿಕೊಡುವಂತಹ insurance ಆದರೆ ಇವರು ಯಾವ ಸವಲತ್ತೂ ಕೊಡುವುದು ಬೇಡ. ರೈತರ ಅಸಲು ಬಡ್ಡಿ ಮನ್ನಾ ಬೇಡ. ಈಗ ಕರೆಂಟಿಗೆ ಸಬ್ಸಿಡಿ ಏನು ಕೊಟ್ಟಿದ್ದೀರಿ ಅದೆಲ್ಲ ಸೇರಿ ರೈತಿಗೆಂದು ೪ ಸಾವಿರ ಕೋಟಿ ಕೊಟ್ಟಂತಾಗುತ್ತದೆ. ಕೆಲವೇ ರೈತರಿಗೆ ಅನುಕೂಲ ವಾಗುತ್ತದೆ. ಆ ಕಾರಣದಿಂದ ವಿಮೆ ಪದ್ಧತಿ ಬದಲಾಗಬೇಕು. ಬೆಳೆ ವಿಮೆ ಜತೆಗೆ ಬೆಲೆ ವಿಮೆ ಕೂಡ ಆಗಬೇಕು. ಬೆಲೆ ಕಡಿಮೆಯಾದಾಗ ತುಂಬಿ ಕೊಡುವಂತಾಗಬೇಕು. ಇದರ ಬಗ್ಗೆ ನಾನು ಮಂತ್ರಿಯಿದ್ದಾಗ ದೇವೇಗೌಡರು ಪ್ರಧಾನಿಯಿದ್ದಾಗ ಒಂದು ಟಪಾಲು ಬರೆದಿದ್ದೆ. ಎಲ್ಲರಿಗೂ ಬರೆದೆ. ದುರ್ದೈವದಿಂದ ಅದು ಜಾರಿಯಾಗಲಿಲ್ಲ, ದೇವೇಗೌಡರೂ ಮಾಡಬೇಕೆಂದು ಮನಸು ಮಾಡಿದ್ದರು. ಆದರೆ ಅವರ ಸರ್ಕಾರ ಬಿದ್ದುಹೋಯಿತು ; ಮುಂದೆ ಯಾರೂ ಲಕ್ಷ್ಯ ಕೊಡಲಿಲ್ಲ. ಇದಕ್ಕೆಂದು ಕೇಂದ್ರ ಸರ್ಕಾರ ಪ್ರತಿ ಬಜೆಟ್ ನಲ್ಲಿ ೨೦ ಸಾವಿರ ಕೋಟಿ ತುಂಬಿಡಬೇಕು. ಇವತ್ತು ಲೆಕ್ಕಹಾಕಿದರೆ ನಾವು ೪ ರಿಂದ ೫ ಸಾವಿರ ಕೋಟಿ ರೈತರಿಗಾಗಿ ಕೊಡುತ್ತಿದ್ದೇವೆ. ೧೯೫೦ ಕೋಟಿ ಮನ್ನಾಕ್ಕೆ, ರೈತರ ಪಂಪ್ ಸೆಟ್ ಸಬ್ಸಿಡಿ ಅಂತ ೨ ಸಾವಿರ ಕೋಟಿ ; ಹೀಗೆ. ಅದರಿಂದ ಏನೂ ಉಪಯೋಗವಾಗಿಲ್ಲ. ಕೇಂದ್ರ, ರಾಜ್ಯ ಎರಡೂ ಸೇರಿ ೧೦ ಸಾವಿರ ಕೋಟಿಗೆ provision ಮಾಡಿಕೊಂಡರೆ, ಎಲ್ಲ ತಾಲೂಕು ಎಲ್ಲ ಕ್ಷೇತ್ರಗಳೂ ಬರ ಬೀಳುವುದಿಲ್ಲ. ಎಲ್ಲೆಲ್ಲಿ ಬರ ಬೀಳುತ್ತದೆ ಆ ರೈತರಿಗೆ ಸಂಪೂರ್ಣ ಲುಕ್ಸಾನು ತುಂಬಿ ಕೊಡುವಂತಾದರೆ ನೀವು ಅವನಿಗೆ ಖಂಡಿತ ಬಂಡಿ ಕೊಡುವುದೂ ಬೇಡ, ಎತ್ತು ಕೊಡುವುದೂ ಬೇಡ, ಅವನೇ ಖರೀದಿ ಮಾಡಿ ಕೊಳ್ಳುತ್ತಾನೆ. ಗಾಂಧೀಜಿ ಹೇಳಿದ್ದೇ ಇದನ್ನು. ರೈತನಿಗೆ ಬರೀ ಅಂಗಿ ಅರಿವೆ ಕೊಡಿಸುವುದಕ್ಕೆ ಹೋಗಬೇಡಿ. ಕೊಡುವುದು ತಪ್ಪು ಅಂತ ಹೇಳುವುದಿಲ್ಲ ಕೆಲವು ಸಲ ಅನಿವಾರ್ಯವಾಗಿ ಮಾಡಬೇಕಾಗುತ್ತದೆ. ಆದರೆ ಬಡವರೇ ತಮ್ಮ ಮಕ್ಕಳಿಗೆ ಸೈಕಲ್ ಕೊಡಿಸುವಂತಹ ಶಕ್ತಿ ತುಂಬುವ ಯೋಜನೆಗಳು ಈ ಬಜೆಟ್ ನಲ್ಲಿಲ್ಲ. ೧೦-೨೦ ವರ್ಷಕ್ಕೆ ದೂರದೃಷ್ಟಿ ಯೋಜನೆ ಹಾಕಿಕೊಂಡು

ಕಾರ್ಯಪ್ರವೃತ್ತರಾಗ ಬೇಕಾಗುತ್ತದೆ. ಆದರೆ ಇವತ್ತಿನ ಸಾಲ ಮನ್ನಾ ದಿಂದ ಯಾವ ರೈತರೂ ಉದ್ಧಾರವಾಗುವುದಿಲ್ಲ. ಆಮೇಲೆ ಇನ್ನೊಂದು ದೊಡ್ಡ ಹೊಡೆತ, ಎಲ್ಲ ಸಹಕಾರ ಸಂಸ್ಥೆಗಳೂ ಮುಳುಗಿಹೋಗುತ್ತವೆ. ನೋವಿನಿಂದ ಹೇಳುತ್ತೇನೆ, ನಾನೇ ಮಂತ್ರಿಯಾಗಿದ್ದಾಗ ೧೩೬ ಕೋಟಿ ರೂಪಾಯಿಗಳ ಬಡ್ಡಿ ಮನ್ನಾ ಮಾಡಿದ್ದೆ. ಎಷ್ಟು ವರ್ಷಗಳಲ್ಲಿ ತುಂಬಿದೆವು ಅದನ್ನು ? ನನ್ನ ಮಂತ್ರಿಗಿರಿ ಹೋಗಿ ಇಲ್ಲಿ ವಿರೋಧ ಪಕ್ಷದಲ್ಲಿ ನಾನು ಕೂತು ಕೃಷ್ಣರಿಗೆ ಒಂದು ಪ್ರಶ್ನೆ ಹಾಕಿ ಅವರಿಂದ ಬೈಯಿಸಿಕೊಂಡು ಅವರು ೬ ಕೋಟಿ ರೂಪಾಯಿಗಳನ್ನು ತುಂಬದರು. ಈಗಲೂ ಇವರ ಇನ್ನೂ ೪೦೦-೫೦೦ ಕೋಟಿ ರೂಪಾಯಿಗಳು ಕೊಡಬೇಕು. ಇದನ್ನು ಮಾಡಿದರೆ ರೈತರು ಪಾವತಿ ಕೊಟ್ಟ ಕೂಡಲೇ ಜಮಾ ಆಗುವಂತೆ ಮಾಡಬೇಕು. ಇಲ್ಲದೇ ಹೋದರೆ ಸಹಕಾರ ಸಂಸ್ಥೆಗಳು ಮುಚ್ಚಿಹೋಗುತ್ತವೆ, ಆ ವೈದ್ಯನಾಥನ್ ಸಮಿತಿ ವರದಿಯಾದರೂ ಆರಿಗೆ ತರುವ ಪ್ರಯತ್ನ ಮಾಡಿ. ಎಲ್ಲ ಮಂತ್ರಿಗಳಿಗೆ ಈ ಬಗ್ಗೆ ಹೇಳಿಕೊಳ್ಳುತ್ತಾ ಬಂದಿದ್ದೇನೆ, ನಾನು ಸಚಿವರಾಗಿದ್ದಾಗ ಆ ವರದಿ ಇನ್ನೂ ಬಂದಿರಲಿಲ್ಲ. Cleansing the balance sheet ಅಂತಕೇಂದ್ರ ಸರ್ಕಾರದವರು ಅದಕ್ಕೆ ದುಡ್ಡು ತೆಗೆದಿಟ್ಟಿದ್ದಾರೆ. ನೀವೂ ನಮ್ಮ ಬಜೆಟಿನಲ್ಲಿ ೧೦೦ ಕೋಟಿ provision ಮಾಡಿದರೆ ಸಾಧಾರಣ ಎಲ್ಲ ಸಹಕಾರ ಸಂಸ್ಥೆಗಳಲಿರುವ gap ಹೋಗುತ್ತದೆ. ಲಾಸ್ ಹೋಗುತ್ತದೆ, ಕೇಂದ್ರ ಸರ್ಕಾರದಿಂದ ಸಾವಿರ ಕೋಟಿ ನಮಗೆ ಬರುತ್ತದೆ. ಈಗ ಕೊಟ್ಟಿರುವುದರಲ್ಲೇ ನೀವು ಎಲ್ಲೆಲ್ಲಿ ತೆಗೆದು ೧೦೦ ಕೋಟಿ ರೂಪಾಯಿಗಳು ಮಾಡಬಹುದು ಅಂತ ಹೇಳುತ್ತೆನೆ. ನೀವು ನಿಮ್ಮ ಅಧಿಕಾರಿಗಳನ್ನು ಕೂರಿಸಿಕೊಂಡು ಇದೇ ಬಜೆಟ್ ನಲ್ಲೇ ವೈದ್ಯನಾಥನ್ ಸಮಿತಿ ವರದಿ ಜಾರಿಗೆ ಕೊಡುವ ದೃಷ್ಟಿಯಿಂದ ಕನಿಷ್ಟ provision ಮಾಡಿ, ಒಂದು ಉದಾಹರಣೆ ಹೇಳುತ್ತೇನೆ, ಬೆಳಗಾವಿಯಲ್ಲಿ ವಿಧಾನಸೌಧ ಕಟ್ಟಲೆಂದು ೨೫೦ ಕೋಟಿ ರೂಪಾಯಿಗಳು ಇಟ್ಟಿದ್ದೀರಿ. ಒಂದು ವರ್ಷದಲ್ಲಿ ಅದೇನು ಖರ್ಚಾಗಿ ಹೋಗುವುದಿಲ್ಲ. ಆದರಿಂದ ತೆಗೆದು ಇಂಥಾದ್ದಕ್ಕೆಲ್ಲ ಇಡಿ. ಇನ್ನು ಕೊಟ್ಟಿರುವ ಕೆಲವದರಿಂದಲೂ ತೆಗೆದಿಡಲು ಸಾಧ್ಯವಿದೆ. ಈ ರೀತಿಯಾಗಿ ನೀವು ವೈದ್ಯನಾಥನ್ ವರದಿ ಜಾರಿಗೆ ತರದಿದ್ದರೆ, ಈಗಲೂ

ಯಾವ ಪರಿಸ್ಥಿಗೆ ಇದೆ ನೋಡಿ. ರಾಜ್ಯದ ಎಲ್ಲ DCC banks ಏನು ಪರಿಸ್ಥಿತಿ ಇದೆ ? Land bank ಇಲ್ಲವೇ ಇಲ್ಲ. ಸುಮ್ಮನೆ ಲೆಕ್ಕಕ್ಕಿದೆ, ನಮ್ಮ primary land banks ನಲ್ಲಿ ೧೦೦-೨೦೦ ಕೋಟಿ ರೂಪಾಯಿಗಳು loss, gap ಇದೆ. ಇವತ್ತಿಗೇ ಅವರದ್ದು ಇನ್ನೂ ೧೨೦ ಕೋಟಿ ತುಂಬಿಲ್ಲ ನೀವು. ಈಗಾಗಲೇ ನೀವು ಹೇಳಿರುವುದರಿಂದ ಯಾರು land bnak ಗಳಿಗೆ ಸಾಲ ಪಾವತಿ ಮಾಡಿಲ್ಲ. ವಿರೋಧ ಪಕ್ಷಗಳೆಲ್ಲ ಮಾನ್ಯ ಯಡಿಯೂರಪ್ಪನವರ ಮೇಲೆ ಒತ್ತಡ ತಂದು ನಮ್ಮ ಸಾಲವನ್ನೂ ಮನ್ನಾ ಮಾಡಿಸುತ್ತಾರೆ ಎಂಬುದೇ ಜನರ ತಲೇಲಿದೆ. ಆ ಕಾರಣದಿಂದ ಅದನ್ನೂ ತುಂಬಬೇಕು. ನಮ್ಮ Land Bank, Apex Bank ಮತ್ತು ನಮ್ಮ DCC Bank ಗಳು ಉಳಿಯಬೇಕೆಂದರೆ ಖಂಡಿತವಾಗಿ ಆ ವೈದ್ಯನಾಥನ್ ಕಮಿಟಿ ರಿಪೋರ್ಟ್‌ನ್ನು ತರಿಸಿಕೊಳ್ಳಿ. ಅದನ್ನು ಜಾರಿಗೆ ಕೊಡಿ. ಆಮೇಲೆ ಸಹಕಾರಿ ಸಂಸ್ಥೆಗಳನ್ನು ಸ್ವಾಯತ್ತತೆ ಆಗುವಂತೆ ಮಾಡಿ. ನಾನು ಹಿಂದೆ ಹೇಳಿದ್ದೆ. ಬಹುಶಃ ನಾನು ಮಂತ್ರಿಯಾಗಿದ್ದಾಗ ಎಲ್ಲ nomination ತೆಗೆದಿದ್ದೆ. ಮತ್ತೆ ನಮ್ಮ ಸರ್ಕಾರ ಇದ್ದಾಗ. ನಾನು ಇಲ್ಲದ ದಿವಸ ಸುಗ್ರೀವಾಜ್ಞೆಯನ್ನು ಹೊರಡಿಸಿ ಮತ್ತು nomination ಅನ್ನು ಹಾಕಿದರು. ಏನಾಗಿದೆ, ಈ ಸಹಕಾರಿ ಸಂಸ್ಥೆಗಳು ಆಡಳಿತ ಪಕ್ಷದ ಶಾಸಕರ ಕೈಗೊಂಬೆಯಾಗಿದೆ. ಯಾವುದು ಆಡಳಿತ ಪಕ್ಷ ಇರುತ್ತೆ, ಆ ಶಾಸಕರು ಇನ್ನೊಬ್ಬರನ್ನು ತೆಗೆದು ಅದನ್ನು ಕೈಗೆ ತೆಗೆದುಕೊಳ್ಳಬೇಕೆಂದು ಸಾಮಾನ್ಯವಾಗಿ ನಡೆಯುತ್ತದೆ. ಇದು ಸಾಮಾನ್ಯ, ಇತ್ತ ಇದ್ದಾಗ ನಾವು ಮಾತನಾಡುತ್ತೇವೆ. ಅತ್ತ ಇದ್ದಾಗ ನೀವು ಮಾತನಾಡುತ್ತೀರಿ. ಇದು ನಡೆದು ಬಂದಂಥದ್ದು. ಹೀಗಾಗಿ ಸಹಕಾರಿ ಸಂಸ್ಥೆಗಳೆಲ್ಲಾ ಹಾಳಾಗಿ ಹೋಗಿದೆ. ಅವುಗಳಿಗೆ ಸ್ವಾಯತ್ತತೆಯೇ ಇಲ್ಲ. ಆ ಸ್ವಾಯತ್ತತೆಯನ್ನು ಕೊಡಬೇಕೆಂದರೆ ವೈದ್ಯನಾಥನ್ ಕಮಿಟಿ ರಿಪೋರ್ಟ್ ಜಾರಿಗೆ ಕೊಡಿ. ಆ nomination ಅನ್ನು ತೆಗೆಯಿರಿ. ಚುನಾಯಿತ ಪ್ರತಿನಿಧಿಗಳು ಯಾರೇ ಬರಲಿ, ಬರುತ್ತಾರೆ. ಆ ರೀತಿಯಾಗಿ ಮಾಡಿದರೆ ಖಂಡಿತವಾಗಿ ಸಹಕಾರಿ ಸಂಸ್ಥೆಗಳು ಉಳಿಯುತ್ತವೆ. ಸಹಕಾರಿ ಸಂಸ್ಥೆಳು ಉಳಿಯದಿದ್ದರೆ ನಿಮ್ಮ ಯೋಜನೆಗಳೆಲ್ಲ ಹಾಳಾಗಿ ಹೋಗುತ್ತವೆ. ರೈತರಿಗೆ ನೀವು ಸಾಲವನ್ನು ಕೊಡಿಸುವುದಕ್ಕಾಗುವುದಿಲ್ಲ. ಕೃಷಿ ಬಗ್ಗೆ ೨% ಎಂದು

ಹೇಳಿದ್ದೀರಿ. ಮತ್ತೆ ನಾನು ಹೇಳಲು ಹೋಗುವುದಿಲ್ಲ. ೨% ಇನ್ನು ಅಭಿವೃದ್ಧಿ ದರ ಆಗಿಲ್ಲದಿದ್ದರೆ ನೀವೇನೊ ಹೆಚ್ಚು ಮಾಡಬೇಕೆಂದು ಇಟ್ಟುಕೊಳ್ಳುತ್ತೀರಿ, ದುರ್ದೈವದಿಂದ ಖಂಡಿತವಾಗಿ ನೀವು ಇನ್ನು ಮುಂದೆ ರೈತರಿಗೆ ಸಾಲವನ್ನು ಕೊಡುವುದಕ್ಕಾಗುವುದಿಲ್ಲ. ಎಲ್ಲ ಸಹಕಾರಿ ಸಂಸ್ಥೆಗಳು ಮುಳುಗೆಇ ಹೋಗುತ್ತವೆ ಇನ್ನು ಐದು ವರ್ಷದಲ್ಲಿ, ಈ ಹತ್ತೊಂಭತ್ತೂವರೆ ನೂರು ಕೋಟಿ ಬಹುಶಃ ನನಗನಿಸುತ್ತದೆ, ಈ ವರ್ಷದಲ್ಲಿ ನೀವು ಅದನ್ನು ತುಂಬುವುದಿಲ್ಲ. ಅದನ್ನು ಹೇಎ ಹೊಂದಿಸುತ್ತೀರೊ ಅದು ಬಹಳ ದೊಡ್ಡ ಕೆಲಸ. ಎರಡು ಸಾವಿರ ಕೋಟಿ ರುಫಾಯಿ ತೆಗೆದಿದ್ದೀರಿ. ಎಲ್ಲಿ ತೆಗೆದಿದ್ದೀರಿ ? ಇವರು ಹಾಗೆ ಮಾಡೇ ಇಲ್ಲ. ಗಾಂಧೀಜಿ ಹೇಳಿದ ಸಂಪೂರ್ಣ ಪಾನ ನಿರೋಧ ಜಾರಿಗೆ ತಂದರೆ ಮಾತ್ರ ಅವತ್ತು ಆಗುತ್ತದೆ. ಹಿಂದೊಮ್ಮೆ ನಾನು ವಿನೋದವಾಗಿ ಹೇಳಿದ್ದೆ. ಪಾನ ನಿರೋಧವನ್ನು ಮೊದಲು ನಮ್ಮ ಶಾಸಕರ ಭವನಕ್ಕೆ ತನ್ನಿ. ಮೊದಲು ಅಲ್ಲಿಗೆ ಜಾರಿ ಯಾಗಬೇಕು. ಆಮೇಲೆ ರಾಜ್ಯಕ್ಕೆ ಸಂಪೂರ್ಣವಾಗಿ ತರೋಣ. ನಮ್ಮದು ಶಾಸಕರ ಭವನದಲ್ಲಿ ಹಣೆಬರಹವನ್ನು ನೋಡಬೇಕು. ಎಲ್ಲೆಲ್ಲಿಂದಲೊ ಬರುತ್ತಾರೆ. ಉಗುಳುವುದು, ಅದನ್ನೆಲ್ಲ ನೋಡಬೇಕು. ಶಾಸಕರ ಭವನದ ಪರಿಸರ ಹಾಳಾಗಿ ಹೋಗಿದೆ. ನಿಷೆಯಲ್ಲಿ ಬರುತ್ತಾರೆ. ಮೊನ್ನೆ ಒಬ್ಬ ಬಂದು ಅದರಲ್ಲಿ ನನ್ನನ್ನು ಹಾದುಹೋಗಿಬಿಟ್ಟ. ಆಗ ನಾನು ಪಕ್ಕಕ್ಕೆ ಸರಿದೆ. ಮತ್ತೆ ಹೊಡೆದರೆ ಏನು ಮಾಡುವುದೆಂದು ನಾನೇ ಸರಿದೆ. ಈ ಪರಿಸ್ಥಿತೆ ಆಗಿದೆ. ನೀವು ಕೂಡ ಶಾಸಕರ ಭವನದಲ್ಲಿ ಓರಾಡಬೇಕು. ಶಾಸಕರ ಭವನಕ್ಕೆ ಕುಡುಕರು ಬರಬಾರದು. ಮೊದಲು ನಾವು ಶಾಸಕರುಗಳು ಕುಡಿಯುವುದನ್ನು ಬಿಡಬೇಕು. ನಾನು ಎಲ್ಲ ಇಟ್ಟುಕೊಂಡು, ಮಂದಿಗೆ ಏನು ಹೇಳಬೇಕು ? ಮೊದಲು ನಾವು ಶುದ್ಧಿ ಇದ್ದರೆ ಇನ್ನೊಬ್ಬರಿಗೆ ಹೇಳಲು ಆಗುತ್ತದೆ. ಇವತ್ತಿನ ದಿವಸ ವಿಧಾನಸಭೆಗಳು ನಡೆಯತಕ್ಕ ರೀತಿ ನೋಡಿದರೆ ನಮಗೆ ಬಹಳ ನೋವಾಗಿದೆ. ಇದರಲ್ಲಿ ಆಡಳಿತ ಪಕ್ಷದವರದೂ ತಪ್ಪಿದೆ. ನಮ್ಮ ವಿರೋಧ ಪಕ್ಷದವರದೂ ತಪ್ಪಿದೆ. ನಾನು ಇಲ್ಲವೆಂದು ಹೇಳುವುದಿಲ್ಲ. ಮೊನ್ನೆ ಮಕ್ಕಳು ಅಣುಕು ವಿಧಾನಸಭೆಯನ್ನು ಮಾಡಿ ನಮಗೆಲ್ಲ ಬುದ್ದಿ ಹೇಳಿ ಹೋಗಿದ್ದಾರೆ. ಅಷ್ಟು ಚೆನ್ನಾಗಿ ನಡೆಸಿ ಆ

ಮಕ್ಕಳು ಹೇಗೆ ವಿಧಾನಸಭೆಯನ್ನು ನಡೆಸಬೇಕು ಎಂದು ಹೇಳಿದ್ದಾರೆ. ಮಾನ್ಯ ಪ್ರಕಾಶ್ ಅವರು ಹೋಗಿದ್ದರು ಎಂದು ಕಾಣುತ್ತಿದೆ. ಅದು ಪೇಪರ್‌ನಲ್ಲಿ ಬಂದಿತ್ತು. ಬಹಳ ಚೆನ್ನಾಗಿ ನಮಗೆಲ್ಲ ಮಾರ್ಗದರ್ಶನ ಮಾಡಿ ಹೋಗಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನೀವು ಕುಡಿಯುವುದನ್ನು ಬಿಟ್ಟರೆ ಸಾಕು ಎನ್ನುತ್ತೀರಲ್ಲ, ಇನ್ನೇನು ಬಿಡಬೇಕು ಎಂದು ಹೇಳಿ.

ಶ್ರೀ ಎಸ್.ಎಸ್.ಪಾಟೀಲ್ : ಮೊದಲು ಎಲ್ಲ ಹೇಳಿದ್ದೇನೆ.

ಶ್ರೀ ಕೆ.ಆರ್.ರಮೇಶ್ ಕುಮಾರ್ : ಜೆ.ಹೆಚ್. ಪಟೇಲರು ಹೇಳಿದ ಕತೆ ನೆನಪಿದೆಯೇ ? ಕುಡಿಯುವುದು ಮತ್ತೊಂದು ಮತ್ತೊಂದು ಬಹಳ ಹಾನಿಕಾರಕ ತಪ್ಪು. ಇದು ಯಾವುದನ್ನು ಮಾಡದೇ ಅತ್ಯಂತ ಕೆಟ್ಟವನಾಗಿರುವದಕ್ಕೂ ಸಾಧ್ಯವಿಲ್ಲ. ಇದೇ ಸದನದಲ್ಲಿ ಪಟೇಲರು ಒಬ್ಬ ಸ್ವಾಮೀಜಿ ಕತೆಯನ್ನು ಹೇಳಿದರು. ನೀವು ಹೇಳುತ್ತೀರೊ ನಾನು ಕತೆಯನ್ನು ಹೇಳಲೊ ? ಹೊಳೆಯ ಪಕ್ಕದಲ್ಲಿ ಒಬ್ಬರು ಸ್ವಾಮೀಜಿ ಇರುತ್ತಾರೆ. ಅವರ ಹತ್ತಿರ ನಾಲ್ಕು ಜನ ಶಿಷ್ಯರು ಇರುತ್ತಾರೆ. ಆ ಹೊಳೆ ತುಂಬಿ ಹೆಚ್ಚು ಪ್ರವಾಹ ಬಂದಿರುತ್ತದೆ. ಒಬ್ಬಳು ಹೆಣ್ಣುಮಗಳು ಅಲ್ಲಿ ಅಳುತ್ತಿರುತ್ತಾಳೆ. ಆಕೆ ನನ್ನನ್ನು ಹೇಗಾದರೂ ಮಾಡಿ ಹೊಳೆಯನ್ನು ದಾಟಿಸಿ ಎಂದು ಗೋಳಾಡುತ್ತಾಳೆ. ಆ ಹೆಣ್ಣುಮಗು ನಾನು ಹೊಳೆ ದಾಟಬೇಕು. ನಮ್ಮ ತಾಯಿಗೆ ಆರೋಗ್ಯ ಚೆನ್ನಾಗಿಲ್ಲವೆಂದು ಹೇಳುತ್ತಾಳೆ. ಸ್ವಾಮೀಜಿ ಅವರ ಶಿಷ್ಯರಿಗೆ ಆ ಕೆಲಸವನ್ನು ಒಪ್ಪಿಸುತ್ತಾರೆ. ನೀವು ಏನಾದರೂ ಮಾಡಿ ಆ ಹೆಣ್ಣುಮಗುವನ್ನು ಹೊಳೆ ದಾಟಿಸಿ ಬನ್ನಿ ಎಂದು ಹೇಳುತ್ತಾರೆ. ಅವರು ಬಹಳ ನಿಷ್ಠಾವಂತರು. ಶಿಷ್ಯರಾಗಿ ಅವರಿಗೆ ಬೇರೆ ಆಲೋಚನೆ ಏನೂ ಇಲ್ಲ. ಗುರು order ಮಾಡಿದರು ಎಂದು ಹೇಳಿ ಆ ಹೆಣ್ಣುಮಗುವನ್ನು ಕರೆದುಕೊಂಡು ಹೋಗಿ ಹೊಳಡಯನ್ನು ದಾಟಿಸಿ ವಾಪಸ್ ಬರುತ್ತಾರೆ. ಸ್ವಾಮೀಜಿ ಅವರನ್ನು ಬಿಟ್ಟು ಬಂದಿರಾ ಎಂದು ಕೇಳಿದ್ದಕ್ಕೆ ಬಿಟ್ಟು ಬಂದೆವು ಎಂದು ಹೇಳುತ್ತಾರೆ. ನೆಮ್ಮದಿಯಾಗಿ ಬಿಟ್ಟುಬಂದಿರಾ ಎಂದಿದ್ದಕ್ಕೆ ಬಿಟ್ಟುಬಂದೆವು ಎನ್ನುತ್ತಾರೆ. ನೀರು ಬಹಳ ಇತ್ತಾ ಎಂದಿದ್ದಕ್ಕೆ ಇಲ್ಲ ಸ್ವಾಮಿ ಇಲ್ಲಿಗೆ ಬರುತ್ತಿತ್ತು ಎನ್ನುತ್ತಾರೆ.

ಆಕೆಗೆ ಎಲ್ಲಿಯವರೆಗೂ ಬರುತ್ತಿತ್ತು. ಆಕೆಗೆ ನೀರು ಎಲ್ಲಿಯವರೆಗೂ ಬರುತ್ತಿತ್ತು. ನೀವು ಹೇಗೆ ಹಿಡಿದುಕೊಂಡಿರಿ ? ಹಿಡಿದು ಕೊಂಡಾಗ ನಿಮಗೇನಾಯಿತು? ಆಕೆ ಹೇಗೆ ಪ್ರತಿಕ್ರಿಯಿಸಿದಳು ? ಇವರೇನು ಊಹೇನೆ ಮಾಡಿರಲಿಲ್ಲ ಪಾಪ,. ಈ ಎಲ್ಲ ಕೆಟ್ಟ ಆಲೋಚನೆಗಳು ಕೂಡ ಸ್ವಾಮೀಜಿ ಮನಸ್ಸಿನಲ್ಲಿದ್ದವು. ಅವನು ಕುಡಿಯುವುದೂ ಇಲ್ಲ. ತಿನ್ನುವುದೂ ಇಲ್ಲ. ಎಂಥ ದೊಡ್ಡ ಮನುಷ್ಯ ಸ್ವಾಮೀಜಿ ಲೆಕ್ಕ ಹಾಕಿಕೊಳ್ಳಿ. ಇಂಥವರು ಬಹಳ ಜನ ಇದ್ದಾರೆ. ಮಾನ್ಯ ಎಸ್.ಎಸ್.ಪಾಟೀಲರೆ, ಪಾಪ, ಹೇಳಿದ ಕೆಲಸವನ್ನು ಹೆಗಲ ಮೇಲೆ ಹೊತ್ತುಕೊಂಡು ಆಕೆಯನ್ನು ಹೊಳೆ ದಾಟಿಸಿ ಅವರು ಶಿಷ್ಯರಾದರು. ಒಂದು ವೇಳೆ ಅಪಕೀರ್ತಿ ಬರುವುದು ಇದ್ದರೆ ಹೆಚ್ಚುಕಡಿಮೆ ಯಾಗಿ ಅವರಿಗೆ ಬರುತ್ತಿತ್ತು. ಇವನು ಸ್ವಾಮಿಯಲ್ಲವೇ? ಎಲ್ಲಾ ಗಲೀಜನ್ನು ಮನಸಿನಲ್ಲಿಟ್ಟುಕೊಂಡು, ತಲೆಯಲ್ಲಿಟ್ಟುಕೊಂಡು ದೊಡ್ಡ ಮನುಷ್ಯನಾಗುವುದು ಸ್ವಾಭಾವಿಕ. ಅದರಿಂದ ಇವೆಲ್ಲ ಅಭ್ಯಾಸಗಳು ಅಷ್ಟೆ. ಅದರ ದುಷ್ಪರಿಣಾವು ಸಮಾಜದ ಮೇಲೆ ಹೇಗೆ ಆಗುತ್ತದೆ ಎಂದು ನಾವು ಲೆಕ್ಕ ಹಾಕಬೇಕಾಗುತ್ತದೆ. ಹಿಟ್ಲರ್ ಕುಡಿಯುತ್ತಿರಲಿಲ್ಲ. ಅತ್ಯಂತ ದೊಡ್ಡ ಮಾನವ ಶತ್ರು, ಇಡೀ ಮಾನವ ಇತಿಹಾಸದಲ್ಲಿ ಹಿಟ್ಲರ್ ಯಾರು ಇದ್ದಾನೆ, ಅವನು ಕುಡಿಯುತ್ತಿರಲಿಲ್ಲ. ಹಾಗೆಂದು ನಾವು ಅವನನ್ನು ಆರಾಧನೆ ಮಾಡುವುದ ಕ್ಕಾಗುತ್ತದೆಯೇ ?

ಶ್ರೀ ವಾಟಾಳ್ ನಾಗರಾಜ್ : ಕುಡಿಯುವುದಕ್ಕೆ ಸಂಪೂರ್ಣ ಪರಮಾನಗಿಯನ್ನು ಕೊಟ್ಟಂತೆ ಆಯಿತು, ನಮ್ಮ ರಮೇಶ್ ಕುಮಾರ್ ಅವರು ಮಾನ್ಯ ಎಸ್.ಎಸ್.ಪಾಟೀಲರೇ ನಿಮಗೆ ಅರ್ಥವಾಯಿತಲ್ಲ,

ಶ್ರೀ ಎಸ್.ಎಸ್.ಪಾಟೀಲ್ : ನಿಮ್ಮದು ಅವರಿಗೆ ಗೊತ್ತು, ಅವರದು ನಿಮಗೆ ಗೊತ್ತು, ನಿಮ್ಮಿಬ್ಬರ ನಡುವೆ ಅದು ಮಂದಿಗೆ ಗೊತ್ತಾಗುವುದಿಲ್ಲ.

ಶ್ರೀ ಆರ್.ರಮೇಶ್ ಕುಮಾರ್ : ನಾನು ವಾಸ್ತವಾಂಶವನ್ನು ಹೇಳಿದೆ. ಈಗ ನೀವು ಕುಡಿಯುವುದಿಲ್ಲ. ಅಂದ ಮಾತ್ರಕ್ಕೆ ನೀವು ದೊಡ್ಡ ಮನುಷ್ಯರಾ ? ನಿಮಗೆ ನೀವು ಅಂದುಕೊಳ್ಳುವುದಾದರೆ ನಮ್ಮದೇನೂ ಆಕ್ಷೇಪಣೆ ಇಲ್ಲ. ನಾಲ್ಕು ಜನ ಸೇರಿ ನಾವು ಹೇಳಬೇಕಲ್ಲ. ನೀವೆಲ್ಲ

ಒಪ್ಪಿಕೊಳ್ಳುತ್ತೀರಾ ? ಕುಡಿಯುವವರೆಲ್ಲ ಅಯೋಗ್ಯರಾ ? ಅದು instinct, habit ಅಷ್ಟೇ ?

ಶ್ರೀ ಎಸ್.ಎಸ್. ಪಾಟೀಲ್ : ನಿಜವಾಗಿಯೂ ನಾವು ಈ ಸಂದರ್ಭದಲ್ಲಿ ಜೆ.ಹೆಚ್.ಪಟೇಲರನ್ನು ನೆನೆಸಿಕೊಳ್ಳಬೇಕು. ಅವರು ಒಪ್ಪಿಕೊಳುತ್ತಿದ್ದರು. ಆದರೆ ಇದನ್ನು ಇನ್ನೊಬ್ಬರು ಮಾಡಬರದೆಂದು ಹೇಳಿ ಅವರಿಗೆ ಬುದ್ಧಿ ಹೇಳುತ್ತಿದ್ದರು. ಅದನ್ನು ಬಿಡಿಸುವ ಪ್ರಯತ್ನ ಮಾಡುತ್ತಿದ್ದರು. ಈ ಪಾನ ನಿರೋಧ ಜಾರಿಗೆ ತರಬೇಕೆಂದು ಪ್ರಯತ್ನ ಮಾಡಿದವರಲ್ಲಿ ಅವರೇ ಮೊದಲಿಗರು. ದುರ್ದೈವದಿಂದ ಆ ವೇಳೆಗೆ finance ಕಷ್ಟ ಇತ್ತು ಎಂದು ಹೇಳಿದರು. ನನಗೆ ಅವರು ಹೇಳುವರು, ಎಸ್.ಎಸ್.ಕರೆಕ್ಟ್ ಅಪ್ಪ, ಯುವಕರನ್ನೆಲ್ಲ ನಾವು ಸುಧಾರಿಸಬೇಕು. ನಾವು ಏನೊ ಒಂದು ಕಾರಣಕ್ಕೆ ಹೀಗೆ ಆಗಿದ್ದೇವೆ. ಆದರೆ ಇದು ನಿಜವಾಗಿ ತಪ್ಪು ಎಂದು ಅವರು ಹೇಳುತ್ತಿದ್ದರು. ಇದರಿಂದ ಅವರ ಒಳ್ಳೆಯ ಗುಣವನ್ನು ನಾವು ತಿಳಿದುಕೊಳ್ಳ ಬೇಕಾಗುತ್ತದೆ. ಇನ್ನು ಕೆಲವು ಹೇಳಿದ್ದರು. ನೀವು ಅದನ್ನು ಹೇಳಿ. ಸಾಕು, ಇನ್ನು ಬಜೆಟ್ ಮೇಲೆ ಮಾತನಾಡುತ್ತೇನೆ. ಬಹುಶಃ ಈ ಒಂದು ಬಜೆಟ್ ಏನಿದೆಯಲ್ಲ, ಅವರು ಮಾಡಿದ್ದಾರೆ, ಎಲ್ಲವನ್ನೂ ನಾವು ಅನ್ನುವುದಕ್ಕಾಗು ವುದಿಲ್ಲ. ದೂರದೃಷ್ಟಿ ಇಲ್ಲ. ಶಾಶ್ವತವಾದ ಪರಿಹಾರವೇನೂ ಇಲ್ಲ ಇದರಲ್ಲಿ. ಶಾಶ್ವತವಾದ ಬರಗಾಲ ಪರಿಹಾರಕ್ಕೆ ಇಲ್ಲಿ ಏನು ಇಟ್ಟಿದ್ದೀರಿ ? ಶಾಶ್ವತವಾಗಿ ಬರಗಾಲ ಪರಿಹಾರ ಮಾಡಬೇಕೆಂದರೆ ಮೊದಲು ನಮಗೆ ಅರಣ್ಯ ಬೇಕು. ಅರಣ್ಯಕ್ಕೆ ದುಡ್ಡು ಇಟ್ಟಿಲ್ಲ. ೧೪೮ ಕೋಟಿ ರೂಪಾಯಿಗಳು ಇಟ್ಟಿದ್ದಾರೆ. ಅರಣ್ಯೀಕರಣಕ್ಕೆ ನಾವು ಗಮನವನ್ನು ಕೊಡದಿದ್ದರೆ, ಖಂಡಿತವಾಗಿಯೂ ಈ ಪರಿಸ್ಥಿತಿ ಎಂದೆಂದೂ ಸುಧಾರಿಸುವುದಕ್ಕೆ ಸಾಧ್ಯವಿಲ್ಲ. ಒಂದು ಗಿಡ ಬೆಳೆಸಬೇಕೆಂದರೆ ಅದಕ್ಕೆ ೬೦ ವರ್ಷ ಬೇಕು. ಸುಮ್ಮನೆ ಹುಡುಗಾಟ ಅಲ್ಲ. ಆ ಕಾರಣಕ್ಕಾಗಿ ಅರಣ್ಯಕ್ಕಾಗಿ ಮಾನ್ಯ ಯಡಿಯೂರಪ್ಪನವರೆ ಇದರಲ್ಲಿ change ಮಾಡಿ. ಅದಕ್ಕೆ ಹೆಚ್ಚು ಹಣವನ್ನು ಇಡಿ. ದಯವಿಟ್ಟು ಅರಣ್ಯ ಬೆಳೆಸಲು ಕ್ರಮವನ್ನು ಕೈಗೊಳ್ಳಿ. ಇಲ್ಲಿ ಅರಣ್ಯದ ಬಗ್ಗೆ ಏನೂ ಇಲ್ಲ. ಆದರೆ ಒಂದು ದುರಂತ ಎಂದರೆ ಮೊನ್ನೆ ಇಲ್ಲಿ ನನಗೆ ತಂದುಕೊಟ್ಟರು. ನಮ್ಮ ಸ್ವಾಮಿಗಳ ಮೇಲೆ ಕೇಸನ್ನು ಹಾಕಿದ್ದಾರೆ, ಅರಣ್ಯ ಬೆಳೆಸಲು

ಪ್ರಮುಖವಾದ ಪಾತ್ರವನ್ನು ವಹಿಸಿದಂಥ ಸ್ವಾಮಿಗಳು ಅವರು. ನನಗೆ ಗೊತ್ತಿದೆ. ಮೊನ್ನೆ ನಮ್ಮ ಗದಗಿಗೆ ಗಿಡ ಬೇಕೆಂದು ಎರಡು ಕಾಗದವನ್ನು ಕೊಟ್ಟಿದ್ದಕ್ಕೆ ಎರಡು ಕೋಡು ತೆಂಗಿನ ಗಿಡಗಳನ್ನು ಕಳುಹಿಸಿದ್ದಾರೆ. ಅಲ್ಲಿಂದ ಪುಕ್ಕಟಿಯಾಗಿ ಕೊಟ್ಟಿದ್ದಾರೆ. ಕೋಟಿ ಗಿಡವನ್ನು ಬೆಳೆಸ ಬೇಕೆಂದು ಇಚ್ಚಿಸಿದ ಸ್ವಾಮಿಗಲು, ನನಗೆ ಅನಿಸುತ್ತದೆ, ವಿದ್ಯಾ ಸಂಸ್ಥೆಯಲ್ಲಿ ಏನೊ ಅತಿಕ್ರಮಣ ಮಾಡಿದ್ದಾರೆ, ಅದಕ್ಕೆ ಹಾಕಿದ್ದಾರೆ ಎಂದು ಕೇಳಿದ್ದೇನೆ. ಇದರಲ್ಲಿ ಎಲ್ಲ ನೋಡಿದೆ. ಅದನ್ನು ತರಿಸಿದ್ದೆ. ಇದು ಸುಳ್ಳೋ ಖರೆಯೋ ಎಂದು ಎಲ್ಲಿ ನೋಡಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳೂ ಹೇಳಿದ್ದಾರೆ, ಅದೇನು ಸುಳ್ಳಾಗಿದ್ದರೆ ಅದರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ, ಆ ಮಾತು ಬೇರೆ. ಅವರು ಒಂದು ಸಕಾರ ಮಾಡತಕ್ಕ ಕೆಲಸವನ್ನು ಮಾಡುತ್ತಿದ್ದಾರೆ. ನಮ್ಮ ಸಿದ್ದಗಂಗಾ ಸ್ವಾಮಿಗಳಿಗೆ ಯತ್ತು ಕೋಟಿ ರೂಪಯಿಗಳನ್ನು ಕೊಟ್ಟಿದ್ದೃಎ. ನಿಜವಾಗಿ ಅದನ್ನು ನಾವು appreciate ಮಾಡಬೇಕಾಗುತ್ತದೆ. ಆದರೆ ನಮ್ಮ ಆದಿ ಚುಂಚನಗಿರಿ ಜಗದ್ಗುರುಗಳು ಅವರು ಅರಣೀಕರಣ ಮಾಡುವ ಕೆಲಸ ನಮಗೆಲ್ಲರಿಗೂ ಮಾರ್ಗದರ್ಶನ. ಸರ್ಕಾರ ಮಾಡುವ ಹೆಚ್ಚಿನ ಕೆಲವನ್ನು ಅವರು ಮಾಡುತ್ತಿದ್ದಾರೆ. ಅವರೇನೊ ಎಜುಕೇಷನ್ ಸೊಸೈಟಿಯಲ್ಲಿ ನಾಲ್ಕು ಎಕರೆ ಅತಿಕ್ರಮಣ ಮಾಡಿಲ್ಲವೆಂದು ಅವರು ಹೇಳುತ್ತಾರೆ. ಒಂದು ವೇಳೆ ಅತಿಕ್ರಮಣ ಮಾಡಿದ್ದರೂ ಆ ಸ್ವಾಮಿಗಳನ್ನು ಬಿಟ್ಟುಬಿಡಿ ಎನ್ನುವ ಪೈಕಿ ಅಲ್ಲ. ಆದರೇ ಅವರೇ ನಾವೇನೂ ಮಾಡಿಲ್ಲವೆಂದು ಹೇಳಿದ್ದಾರೆ. ಅವರು ಅದನ್ನು ಮಾಡಲಿಕ್ಕೆ ಸಾದ್ಯವೇ ಇಲ್ಲ. ಆದರೆ ಎಜುಕೇಷನ್ ಸೊಸೈಟಿ ಮಾಡ ಬೇಕೆಂದು ಒಂದು ಎಕರೆ, ಎರಡು ಎಕರೆ ಆಗಿದ್ದರೂ ಸಹಿತ ಅವರ ಮೇಲೆ ಕೇಸ್ ಹಾಕಿರುವುದು ಬಹಳ ತಪ್ಪು. ಅದು ಒಂದು ಎಜುಕೇಷನ್ ಸೊಸೈಟಿ. ಅದು ಅವರ ಮನೆಯದು, ಮಠದ್ದು ಅಲ್ಲ, ಕೇಸ್ ಹಾಕಿರುವುದನ್ನು ನಾನು ನೋಡಿದೆ. ಅರಣ್ಯೀಕರಣದ ದೃಷ್ಟಿಯಿಂದ ನಾನು ಹೇಳುತ್ತೇನೆ, ಖಂಡಿತವಾಗಿ ಹಾಗೊಂದು ವೇಳೆ ಕೇಸನ್ನು ಹಾಕಿದ್ದರೂ ಕೂಡ ಅದು ಬಹಳ ತಪ್ಪು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಧದ ಬಗ್ಗೆ ಹೇಳುವುದಾದರೆ, ನೀವು ಮಹಿಳೆ ಮತ್ತು ಮಕ್ಕಳ

ಕಲ್ಯಾಣದ ಬಗ್ಗೆ ಹೇಳತಕ್ಕಂಥವರು. ಅಧ್ಯಕ್ಷ್ರೆ, ಇತ್ತೀಚೆಗೆ,. ಮಹಿಳೆಯರ ಮೇಲೆ ದೌರ್ಜನ್ಯ ಹೆಚ್ಚಾಗಿದೆ. ಸನ್ಮಾನ್ಯ ಪ್ರಕಾಶ್ ಸಾಹೇಬರೆ, ನಮ್ಮ ಗದಗದಲ್ಲಂತೂ ಹೆಣ್ಣು ಮಕ್ಕಳು ಸಂಜೆಯಾದ ಕೂಡಲ walking ಹೋಗುವಂತಿಲ್ಲ ! ಅವರ ತಾಳಿ, ಸರ ಕಿತ್ತುಕೊಂಡು ಹೋಗುವುದು ಸೇರಿದಂತೆ ಇವತ್ತು ಮಹಿಳೆಯರ ಮೇಲೆ ದೌರ್ಜನ್ಯ ಹೆಚ್ಚಾಗಿ ಬಿಟ್ಟಿದೆ. ಅದಕ್ಕೋಸ್ಕರ ನಿಶ್ಚಿತವಾಗಿ ಅವರುಗಳ ರಕ್ಷಣೆಗೆ ಕ್ರಮ ಕೈಗೊಳ್ಳಬೇಕೆಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಹಿಳೆಯರಿಗೆ ಬಜೆಟ್ ನಲ್ಲಿ provision ಮಾಡಿರುವುದು ಬಹಳ ಕಡಿಮೆಯಾಗಿದೆ. ಅದರಲ್ಲೂ ಇವತ್ತು ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿಗಗಿ ಹೆಚ್ಚಿನ ರೀತಿಯಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಜೊತೆಗೆ, ಬೀದಿ ಮಕ್ಕಳು ಅಡ್ಡಾಡುತ್ತಿವೆ. ಆ ಕಾರಣಕ್ಕಾಗಿ ಮಹಿಳೆಯರಿಗೆ ಹೆಚ್ಚಿನ ಒತ್ತು ನೀಡಬೇಕೆಂಬ ಮಾತನ್ನು ಹೇಳುತ್ತೇನೆ. ಇನ್ನು SC/ST ಗೆ ನೀವು ದುಡ್ಡು ಕೊಟ್ಟು ಏನೇನೋ ಮಾಡುತ್ತೇವೆಂದರೂ ನಾನು ಇವತ್ತು ಒಂದು ಪ್ರಶ್ನೆ ಹಾಕಿದ್ದೇಎನೆ, ಬಂದಿದೆ, ರಾಜ್ಯದಲ್ಲಿ ಇವತ್ತಿನವರೆಗೂ ಅಸ್ಪೃಶ್ಯತಾ ಆಚರಣೆ ನಿಂತಿಲ್ಲ. ಅದು ರಾಜ್ಯದ ಎಲ್ಲಾ ಕಡೆಗಳಲ್ಲಿಯೂ ಜಾರಿಯಲ್ಲಿದೆ. ಆ ಕಾರಣ ದಿಂದ ಅದನ್ನು ನಿಲ್ಲಿಸುವುದಕ್ಕೆ ಏನು ಕ್ರಮಗಳನ್ನು ಕೈಗೊಂಡಿದ್ದೀರಿ ಎಂದು ಕೇಳಿರುವುದಕ್ಕೆ ಬರೀ ಕೇಸ್ ಹಾಗಿದ್ದೇವೆ. ಇತ್ಯಾದಿಯಾಗಿ ಹೇಳುತ್ತಾರೆ. ಅದರಿಂದ ಅಸ್ಪೃಶ್ಯತೆ ಹೋಗಿಲ್ಲ. ಸಾಮರಸ್ಯ ಬೆಳೆಸಬೇಕು. ಜನರಿಗೆ ತಿಳಿವಳಿಕೆ ಮೂಡಿಸಬೇಕು. ಆ ಬಗ್ಗೆ ಇವರಿಗೆ ಕಲ್ಪನೆ ಇಲ್ಲ. ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲೂ ತಿಳಿವಳಿಗೆ ಕೊಡುವಂತಹ ಸಂಘಗಳನ್ನು ಬೆಳಸಬೇಕು. ಎಲ್ಲರಲ್ಲೂ ಸಾಮರಸ್ಯ ಬೆಳೆಸತಕ್ಕಂಥ ಸಂಘಗಳನ್ನು ಬೆಳೆಸಿ ಮೊದಲನೆಯ ದಾಗಿ ಅವರಿಗೆ ಈ ಅಸ್ಪೃಶ್ಯತಾ ಆಚರಣೆ ನಿಲ್ಲಿಸುವಂತಹ ವ್ಯವಸ್ಥೆ ಯಾಗಬೇಕು. ಅದರ ಬಗ್ಗೆ ಸರ್ಕಾರ ಇವತ್ತು ಹೆಚ್ಚಾಗಿ ಗಮನ ಹರಿಸಿಲ್ಲ. ಆ ಕಾರಣಕ್ಕಾಗಿ ಅಲ್ಲಲ್ಲಿ ಸಮಿತಿಗಳನ್ನು ಮಾಡಿ ಆ ಅಸ್ಪೃಸ್ಯತಾ ಆಚರಣೆ ಯನ್ನು ಕೂಡ ನಿಲ್ಲಿಸುವಂತಹ ಪ್ರಯತ್ನ ಮಾಡಬೇಕೆಂಬ ಮಾತನ್ನು ಹೇಳುತ್ತೇನೆ. ಇನ್ನು ಗಂಗಾ ಕಲ್ಯಾಣ ಯೋಜನೆ. ಬಹುಶಃ ನಾವು ನೋಡುತ್ತೇವೆ. ಗಂಗಾ ಕಲ್ಯಾಣಕ್ಕಾಗಿ ಹೆಚ್ಚು ರೊಕ್ಕ ಇಟ್ಟಿದ್ದೇವೆಂದು

ಹೇಳುತ್ತೀರಿ. ಆದರೆ, ಈಗ ನೀವು ಇಟ್ಟಿರುವಂತಹ ೬೦,೦೦೦ ರೂಪಾಯಿಗಳು ಅದಕ್ಕೆ ಸಾಕಾಗುವುದಿಲ್ಲ. ಆ ಕಾರಣದಿಂದ ಗಂಗಾ ಕಲ್ಯಾಣ ಯೋಜನೆಯನ್ನು ಸಂಪೂರ್ಣವಾಗಿ ಸರ್ಕಾರದ ವೆಚ್ಚದಿಂದಲೇ ಮಾಡಿ ಅವರಿಗೆ ನೀರು ಒದಗಿಸುವಂತಹ ವ್ಯವಸ್ಥೆ ಮಾಡಿಕೊಡಬೇಕು. ಇಲ್ಲದಿದ್ದರೆ, ಕೊಡುವ ಹಣ ಸಾಲುವುದಿಲ್ಲ. ೧ ಲಕ್ಷ ರೂಪಾಯಿಗಳು ಸಾಲುವುದಿಲ್ಲ. ಮೊನ್ನೆ ಒಂದು ಲಕ್ಷ ರುಪಾಯಿಗಳೂ ಮಾಡಿದ್ದಾರೆ, ಹೌದು ಸಾಲುವುದಿಲ್ಲ. ಆ ಕಾರಣದಿಂದ ಸರ್ಕಾರದ ವೆಚ್ಚದಿಂದ ಸಂಪೂರ್ಣವಾಗಿ ಆ ಯೋಜನೆಯನ್ನು ಪೂರ್ಣಗೊಳಿಸಿ ಅವರ ಉಪಯೋಗಕ್ಕೆ ಕೊಡುವಂತಹ ವ್ಯವಸ್ಥೆಯಾಗಬೇಕು. ಇಲ್ಲದಿದ್ದರೆ. "No water No Money" ಎಂದು ಹೇಳಿಬಿಟ್ಟಿರಿ. ನಾವು ಮಂಜುಊರು ಮಾಡಿಕೊಡುತ್ತೇವೆ. ಆತ ಅಲ್ಲಿ ಬರುತ್ತಾನೆ. ಬಂದು ನೋಡಿ ಏನು ಹೇಳುತ್ತಾನೆಂದರೆ, "೫,೦೦೦ ಕೊಟ್ಟರೆ ಹೊಡೀತೀನಿ, ೬,೦೦೦ ಕೊಟ್ಟಿರೆ ಹೊಡೀತೀನಿ " ಎಂದು ಅವರ ಕಡೆಯಿಂದ ದುಡ್ಡು ವಸೂಲು ಮಾಡುತ್ತಾನೆ. ಈ ಕಾರಣದಿಮದ ದಯವಿಟ್ಟು ತಾವು ಆ SC/ST ವರಿಗು ಕೂಡ ಅನುಕೂಲ ಕಲ್ಪಿಸಿಕೊಡಬೇಕು. ಇನ್ನು ಆರೋಗ್ಯ. ಆರೋಗ್ಯ ಕ್ಷೇತ್ರದಲ್ಲಿ ಯಾವುದೇ ಒಂದು ಹೊಸ PHC ಯನ್ನೂ ನೀವು ಮಾಡಿಲ್ಲ. ಇಂದಾವದರೂ ಹೊಸ PHC ಕೊಡಬೇಕಲ್ಲ ? ನಮ್ಮ ಕಡೆ ಇಲ್ಲವೇ ಇಲ್ಲ. ಎಲ್ಲೋ ದೂರದಲ್ಲಿವೆ. ಜನಸಂಖ್ಯೆ ಆಧಾರದ ಮೇಲೆ ನೀವು ಕೊಡುವುದಾದರೆ, ಕೊಡಗಿಗೆ ನೀವು ಒಂದೂ PHC ಯನ್ನೂ ಕೊಡುವುದಕ್ಕಾಗುವುದಿಲ್ಲ. ಎಲ್ಲೋ ದೂರ ದೂರದಲ್ಲಿರುತ್ತವೆ. ನಮ್ಮಲ್ಲಿ ಒಂದನ್ನೂ ಕೊಡುವುದಕ್ಕಾಗುವುದಿಲ್ಲ. ಆ ಕಾರಣದಿಂದ ಹೊಸ PHC ಮಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಉಳಿದಂತೆ, ಏಡ್ಸ್, ಇತ್ಯಾದಿ ಬಹಳ ಗಂಭೀರ ಪರಿಸ್ಥಿತಿಯಲ್ಲಿದೆ. ಅದನ್ನೂ ಕೂಡ ಮಾಡಬೇಕು. ಅನಂತರ, ಪಶುಸಂಗೋಪನೆ. ಪಶು ಸಂಗೋಪನಾ ಮಂತ್ರಿಗಳು. ಅವರನ್ನು ಇತ್ತಕಡೆ ಕುಳಿತುಕೊಳ್ಳುವಂತೆ ಹೇಳಿ. ಮಾನ್ಯ ಪಶು ಸಂಗೋಪನಾ ಮಂತ್ರಿಗಳೇ, ಬನ್ನಿ.

ಅಧ್ಯಕ್ಷರು : ತಾವು ಹೇಳಬೇಕಾದ್ದನ್ನೆಲ್ಲಾ ಅರ್ಥ ಸಚಿವರಿಗೆ ಹೇಳಿ.

ಶ್ರೀ ಎಸ್.ಎಸ್.ಪಾಟೀಲ್ : ಇರಲಿ, ಅವರೂ ಸ್ವಲ್ಪ ಕೇಳಬೇಕಲ್ಲ ? ಅವರ ಹತ್ತಿರ ಹೋಗಿ ಕುಳಿತುಕೊಂಡು ಮಾಡಬೇಕಲ್ಲ. ಕೆಲವರು ಯಾರ್‍ಯಾರು ಹೋಗಿ ಅವರ ಹತ್ತಿರ ಕುಳಿತುಕೊಂಡಿದ್ದಾರೆ, ಇವರು ಅಂತಹವರಿಗೆಲ್ಲಾ ದುಡ್ಡು ಕೊಟ್ಟಿದ್ದಾರೆ. That is wrong ಅದು ಕೂಡ ನಿಮ್ಮದು ಅಲ್ಲಿ ತಪ್ಪಾಗಿದೆ. ನೀವು ಆ ರೀತಿ ಬಜೆಟ್ ಮಾಡಬಾರದು. ಯಾವ್ಯಾವ ಮಂತ್ರಿಗಳು ನಿಮ್ಮ ಮುಂದೆ ಅಡ್ಡಾಡಿದ್ದಾರೋ, ಅವರುಗಳು ಕೆಲಸ ಮಾಡಿಕೊಂಡು ಹೋಗಿದ್ದಾರೆ. ಇದನ್ನು ನೋಡಿದರೆ ನನಗೆ ಕಾಣುತ್ತದೆ, ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇದು ಪದ್ಧತಿಯಲ್ಲ. ಈ ಪದ್ಧತಿಯಲ್ಲಿ ನೀವು ತಪ್ಪಿದ್ದೀರಿ. ಈ ಪದ್ಧತಿ ಸರಿಯಲ್ಲ. ಎಲ್ಲಾ ಇಲಾಖೆಗಳಿಗು ಕೂಡ, ಎಲ್ಲರಿಗು ಕೂಡ ಸಮನಾಗಿ ಎಲ್ಲೆಲ್ಲಿ ತೊಂದರೆ ಇದೆ, ಏನಿದೆ ಎಂಬುದನ್ನು ತಿಳಿದುಕೊಂಡು ಮಾಡಬೇಕಾಗಿತ್ತು. Horticulture ಇರಬಹುದು, ಇನ್ನೊಂದು ಇರಬಹುದು. ನಿಜವಾಗಿಯೂ ಅದನ್ನೆಲ್ಲವನ್ನೂ ಹೇಳಿಕೊಂಡು ಹೋದರೆ time ಸಾಕಾಗುವುದು. ಸಮಯ ಇದ್ದಿದ್ದರೆ ವಿವರವಾಗಿ ಹೇಳುತ್ತಿದ್ದೆ. ರೈತರಿಗೆ ಏನು ಸೂತ್ರಗಳು , ಎಂಬುದನ್ನೆಲ್ಲಾ ಹೇಳುತ್ತಿದ್ದೆ. ಆದರೆ, ದುರ್ದೈವದಿಂದ, ಈ ಬಜೆಟ್ ದೂರದೃಷ್ಟಿ ಇಲ್ಲ. ಶಾಶ್ವತ ಪರಿಹಾರ ಯೋಜನೆಗಳಾದ ಕುಡಿಯುವ ನೀರನದು, ಇನ್ನೊಂದು, ಮತ್ತೊಂದು. ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರು ಮಾತನಾಡುವ ಮುನ್ನ ಈಗ ಏನೇನು ಮಾಡಿಲ್ಲವೋ, ಅವೆಲ್ಲವನ್ನೂ ಹೇಳಿ ಎಂದು ನಿನ್ನೆ ಹೇಳಿದಿರಿ. ಬಹುಶಃ ನಿಮಗೆ ಹೇಳಬೇಕಾದರೆ, ೮-೧೦ ಒಳ್ಳೆಯ ಯೋಜನೆಗಳನ್ನು ಹೋದ ಸಲ ನೀವು ಮಾಡಲಿಲ್ಲ. ಅವನ್ನೆಲ್ಲಾ ಲಿಸ್ಟ್ ಮಾಡಿ ಇಟ್ಟುಕೊಂಡಿದ್ದೆ. ಒಂದು ಉದಾಹರಣೆ ಹೇಳಬೇಕೆಂದರೆ, ನೀವು ೫೦,೦೦೦ ಕೃಷಿ ಹಒಂಡಗಳನ್ನು ಹೇಳಿದ್ದಿರಿ. ಶಾಶ್ವತ ಬರಗಾಲ ಯೋಜನೆ, ಕುಡಿಯುವ ನೀರಿನ ಯೋಜನೆ. ಇವತ್ತು ಎಲ್ಲಿಯೂ ಕುಡಿಯುವುದಕ್ಕೆ ನೀರಿಲ್ಲ. ಅದನ್ನು ನೀವು ಜಾರಿಗೆ ತರಲಿಲ್ಲ. ೫೦,೦೦೦ ಕೃಷಿ ಹೊಂಡಗಳನ್ನು ಹೇಳಿದ್ದಿರಿ. ಶಾಶ್ವತ ಬರಗಾಲ ಯೋಜನೆ, ಕುಡಿಯುವ ನೀರಿನ ಯೋಜನೆ. ಇವತ್ತು ಎಲ್ಲಿಯೂ ಕುಡಿಯುವುದಕ್ಕೆ ನೀರಿಲ್ಲ. ಅದನ್ನು ನೀವು ಜಾರಿಗೆ ತರಲಿಲ್ಲ. ೫೦,೦೦೦ ಕೃಷಿ ಹೊಂಡಗಳನ್ನು

ಕೊಡುತ್ತೇವೆಂದ ಕೂಡಲೇ ನಾವೆಲ್ಲರೂ ಬಹಳ ಸಂತೋಷಪಟ್ಟಿದ್ದೆವು. ಆದರೆ, ಕೊಡಲಿಲ್ಲ. ನೀರು ಬೇಕಾದರೆ, ಬೆಳೆಸಬೇಕು. ಮಳೆ ಆಗಿಯೇ ಆಗುತ್ತದೆ. ಮಳೆಯೇ ಬರದಿದ್ದರೆ ಹೇಗೆ ಮಾಡುವುದು ? ಮಳೆ ಆಗಿಯೇ ಆಗುತ್ತದೆ, ದೇವರು ಕೊಡುತ್ತಾನೆ. ಆದರೆ, ನಿಮಗೆ ಅದರ ಬಗ್ಗೆ ಯೋಜನೆಯೇ ಇಲ್ಲ. ಅದಕ್ಕಾಗಿ ಹಣವನ್ನೂ ಇಟ್ಟಿಲ್ಲ. ಅದಕ್ಕೆ ಸರಿಯಾದ ವ್ಯವಸ್ಥೆಯನ್ನೂ ಮಾಡಲಿಲ್ಲ. ಇದೆಲ್ಲವೂ ಇರುವುದರಿಂದ ಖಂಡಿತ ವಾಗಿಯೂ ತಾವು ಮಾಡಬೇಕು. ಇನ್ನು ಬಯಲು ಸೀಮೆ ಪ್ರದೇಶಭಿವೃದ್ಧಿ ಮಂಡಳಿ ಬಗ್ಗೆ ಹೇಳಿಬಿಡುತ್ತೇನೆ. ಸನ್ಮಾನ್ಯ ಯಡಿಯೂರಪ್ಪನವರೆ, ಬಹುಶಃ ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯನ್ನು ತೆಗೆದುಬಿಡಿ. ಇಲ್ಲದಿದ್ದರೆ, ನಮಗೆ ದುಡ್ಡನ್ನಾದರೂ ಕೊಡಿ. ನಾವು ಹೇಳಿದ್ದೇವೆ. ಹಿಂದೆ ಕೂಡ ಸತ್ಯಾಗ್ರಹ ಕೂರುವುದಕ್ಕೆ ಹೊರಟೆವು. ಎಲ್ಲಾ ಕೊಟ್ಟೆವು. ಪುನಃ ೨೨ ಕೋಟಿ ಕೊಟ್ಟೆವು ಎಂದು ಹೇಳುತ್ತೀರಿ. ನನ್ನನ್ನು ಕೇಳಿದರೆ, ೭೪ ತಾಲ್ಲೂಕು ಗಳು ಆ ಮಂಡಳಿ ವ್ಯಾಪ್ತಿಯೊಳಗೆ ಬರುತ್ತವೆ. ಬಯಲುಸೀಮೆ ಪ್ರದೇಶಾಭಿ ವೃದ್ಧಿ ಮಂಡಳಿಯು ಅಭಿವೃದ್ಧಿಯಾಗಲಿಲ್ಲವೆಂದರೆ, ಈ ರಾಜ್ಯ ಅಭಿವೃದ್ಧಿ ಯಾಗುವುದಕ್ಕೆ ಸಾಧ್ಯವಿಲ್ಲ. ಅಂತಹುದರಲ್ಲಿ ಆ ಮಂಡಳಿಗೆ ಕಡಿಮೆ ದುಡ್ಡು ಇಡುತ್ತೀರಿ. ಈ ಮಂಡಳಿಗೆ ೨೨ ಕೋಟಿ ಕೊಡುತ್ತೇವೆಂದರೆ, ಅದು ಸರಿಯಲ್ಲ. ಕನಿಷ್ಠವೆಂದರೂ ಒಂದು ತಾಲ್ಲೂಕಿಗೆ ಒಂದು ಕೋಟಿ ರೂಪಾಯಿ ಯನ್ನಾದರೂ ಕೊಡಬೇಕು. ಈ ರೀತಿ ಕೊಟ್ಟರೆ ೭೪ ಕೋಟಿ ರೂಪಾಯಿ ಗಳಾಗುತ್ತದೆ. ಕಡಿಮೆ ಮಾಡಿ, ಯಾವುದಾದರೊಂದನ್ನು ತೆಗೆಯಿರಿ. ಕೆಲವು voteಗಾಗಿ ಮಾಡಿದ್ದೀರಲ್ಲ, ಅದರಲ್ಲಿವೆ, ನೋಡಿದ್ದೇನೆ. ಅದರಲ್ಲಿ ಕೆಲವು voteಬೇಕಲ್ಲ. ಅದನ್ನು ತಾವು ಹುಡುಕಿಕೊಂಡಿದ್ದೀರಿ. 'ಎಸ್.ಎಸ್.ಪಾಟೀಲ್ ಹೊಗಳಲಿ, ಟೀಕೆ ಮಾಡಬಾರದು' ಎಂದು ಅದರಲ್ಲಿ ತಾವು ಇಟ್ಟಿದ್ದೀರೆಂಬುದು ನನಗೆ ಗೊತ್ತಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ನನಗೆ ಹೇಳುತ್ತಿದ್ದೀರಿ. ಇವತ್ತು ನಮ್ಮ ಸರ್ಕಾರವಿದೆ. ನೀವು ಹೇಳಬೇಕು. ನಾನು ಅದನ್ನು ಕೇಳುವುದಕ್ಕೆ ಸಿದ್ಧನಿದ್ದೇನೆ. ಈ ರೀತಿ ಹೇಳುವಂತಹ ನೀವು ಅಧಿಕಾರದಲ್ಲಿದ್ದಾಗ ಎಷ್ಟೆಷ್ಟು ಇಟ್ಟಿದ್ದಿರಿ ಎಂಬ ಅಂಕೆ ಅಂಶಗಳನ್ನು ಹೇಳಿ. ಕೊನನೇ ಪಕ್ಷ ನಾನು ೨೨

ಕೋಟಿ ಕೊಟ್ಟಿರಬಹುದು. ನೀವು ಹೇಳಿದ್ದು ಸರಿ. ಕಳೆದ ಐದಾರು ವರ್ಷಗಳಲ್ಲಿ ನೀವೆ ಅಧಿಕಾರದಲ್ಲಿದ್ದಾಗ ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ಬಗ್ಗೆ ಏಕೆ ಯೋಚನೆ ಮಾಡಲಿಲ್ಲ ? ಡಾ:ನಂಜುಂಡಪ್ಪನವರ ವರದಿ ಬಗ್ಗೆ ಏಕೆ ಯೋಚನೆ ಮಾಡಲಿಲ್ಲ. ಪ್ರವಾಸೋದ್ಯಮದ ಬಗ್ಗೆ ಏಕೆ ಯೋಚನೆ ಮಾಡಲಿಲ್ಲ ? ನಾನು ಎಲ್ಲದಕ್ಕೂ ಹಂಚಿದ್ದೇನೆ. ಕೆಲವು ಕಡಿಮೆ – ಜಾಸ್ತಿಯಾಗಿರಬಹುದು. ಆದರೆ, ನಾನು ಯಾರಿಗೂ ಅನ್ಯಾಯ ಮಾಡಿಲ್ಲ. ಹಣಕಾಸಿನ ಇತಿಮಿತಿಗಳಲ್ಲಿ ಎಷ್ಟು ಸಾಧ್ಯವಿದೆಯೋ, ಅಷ್ಟನ್ನು ಪ್ರಾಮಾಣಿಕವಾಗಿ ಒದಗಿಸಿಕೊಡುವುದಕ್ಕೆ ನಾನು ಪ್ರಯತ್ನ ಮಾಡಿದ್ದೇನೆ.

ಶ್ರೀ ಎಸ್.ಎಸ್. ಪಾಟೀಲ್ : ನನ್ನನ್ನು ಕೇಳಿದರೆ, ಇದೇ ನೀವು ಮಾಡಿರವು ತಪ್ಪು. "ನೀವು ಮಾಡಿಲ್ಲ. ನಾವು ಮಾಡಿದ್ದೇವೆ." ಎಂದು ಇದನ್ನು ನೀವು ಪ್ರತಿಯೊಂದಕ್ಕೂ ಹೇಳುತ್ತೀರಿ. ನೀವು ಮಾಡಿದ್ದೀರೇನು ? ಅದು ಸರ್ಕಾರ. ನಾವು ಮಾಡಿ ತೋರಿಸಿದದೇವೆಂದು ಹೇಳಿ. ಈಗ ೨೨ ಕೋಟಿ ಇಟ್ಟಿದ್ದೀರಿ. ಹಿಂದೆ ಅಷ್ಟೂ ಇಟ್ಟಿರಲಿಲ್ಲ. ಆ ಮಾತು ಬೇರೆ. ಆದರೆ, ನಾನು ಹೇಳುತ್ತಿರುವುದು, ಕನಷ್ಟ ಒಂದು ಕೋಟಿ ರೂಪಾಯಿ ಕೊಡಿ. ದಯವಿಟ್ಟು ಈ ಸಲ ಒಂದೊಂದು ಕೋಟಿ ಕೊಡಿ. ಕನಿಷ್ಟ ನೀವು ಒಂದೊಂದು ಕೋಟಿ ಕೊಡದಿದ್ದರೆ, ನಾವಂತೂ ಈ ಸಲ ಮಾತನಾಡಿ ಕೊಂಡಿದ್ದೇವೆ. ಖಂಡಿತವಾಗಿಯೂ ಸತ್ಯಾಗ್ರಹ ಮಾಡುತ್ತೇವೆ. ನಾನು ಯಾವಾಗಲೂ ಸತ್ಯಾಗ್ರಹ ಮಾಡಿಲ್ಲ. ಈ ವಿಷಯಕ್ಕೆ ಸಂಬಂಧಿಸಿದಂತೆ ಮಾತ್ರ ಸತ್ಯಾಗ್ರಹ ಮಾಡತುತ್ತೇನೆ. ಇಲ್ಲದಿದ್ದರೆ, ಅದು ಎಂದಿಗೂ ಅಭಿವೃದ್ಧಿಯಾಗುವುದಿಲ್ಲ. ದಯವಿಟ್ಟು ಹಣ ತೆಗೆದು ಕೊಡಿ. ನನ್ನನ್ನು ಕೇಳಿದರೆ, ಹಿಂದೆ ಕೊಟ್ಟಿಲ್ಲ. ನಾನು ಈಗ ೨೨ ಕೋಟಿ ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ. ಮುಂದೆ ಬೇಕಾದರೆ ನಿಮ್ಮನ್ನು ಹೊಗಳುತ್ತೇವೆ. ಇಲ್ಲವೆಂದು ಹೇಳುವುದಿಲ್ಲ ಒಳ್ಳೆಯದನ್ನು ಮಾಡಿದರೆ ನಾನು ಹೊಗಳುತ್ತೇನೆ, ಇಲ್ಲದ್ದನ್ನು ಬೈಯುತ್ತೇನೆ. ಈಗ ೫೦,೦೦೦ ರೂಪಾಯಿಗಳನ್ನು ಕೃಷಿ ಹೊಂಡಕ್ಕೆ ಕೊಡಲಿಲ್ಲ. ಸುಮ್ಮಸುಮ್ಮನೆ ನೀವು ಅದನ್ನೇಕೆ ಇಟ್ಟಿರಿ? ಸುಮ್ಮನೆ ಏಕೆ ಅದನ್ನೆಲ್ಲಾ ಮಾಡಬೇಕು ? ಇನ್ನು ಬಹಳವಿದೆ. ಆದರೆ, ಅಧ್ಯಕ್ಷರು ಸಮಯವಿಲ್ಲವೆಂದು ಹೇಳುತ್ತಿದ್ದಾರೆ. ನೀವು ಏನೇನು ಮಾಡಿಲ್ಲವೆಂಬುದರ

ಬಗ್ಗೆ ೫೦ ಉದಾಹರಣೆಗಳನ್ನು ಈಗ ಹೇಳುತ್ತೇನೆ. ಆಗಬೇಕಾದ ಒಳ್ಳೆಯ ಯೋಜನೆಗಳನ್ನು ನೀವು ಬಜೆಟ್‌ನಲ್ಲಿ ಇಟ್ಟು ಮಾಡಿಲ್ಲ. ಈಗೇನು ನೀವು ಎಲ್ಲವನ್ನೂ ಇಟ್ಟಿದ್ದೀರಿ. ನೀವು ಅದನ್ನೆಲ್ಲಾ ಮಾಡುತ್ತೀರೆಂಬ ವಿಶ್ವಾಸ ನಮಗೆ ಬರುತ್ತಿಲ್ಲ. ಈ ಕಾರಣದಿಂದ ನಾನು ಹೇಳುತ್ತಿದ್ದೇನೆ. ರೈತರಿಗೆ ೧೯೦೦ ಕೋಟಿ ಎಂದು ಹೇಳುತ್ತೀರಿ. ನೀವು ಎಲ್ಲರಿಗೂ ೨೫,೦೦೦ ಮಾಡಿದರೂ ಕೂಡ ಅದು ೧೯೦೦ ಕೋಟಿ ಆಗುವುದಿಲ್ಲ. ನಾನು ಲೆಕ್ಕ ತರಿಸಿದ್ದೇನೆ. ಅದು ೧೫೦೦ ಕೋಟಿ ಆಗುತ್ತದೆಯೇ ಹೊರತು ಅದು ೧೯೦೦ ಕೋಟಿ ಆಗುವುದಿಲ್ಲ. ಲೆಕ್ಕ ತರಿಸಿ, ಲೆಕ್ಕ ಹೇಳಿ. ನಾಳೆ ಉತ್ತರ ಹೇಳುವ ಮುನ್ನ ಲೆಕ್ಕ ಹೇಳಿ, ಆಗುವುದಿಲ್ಲ. ಸುಮ್ಮನೆ ಏನೋ ತಪ್ಪು ಲೆಕ್ಕ ಕೊಟ್ಟಿದ್ದಾರೆ.

ಅಧ್ಯಕ್ಷರು : ಮಾನ್ಯ ಪಾಟೀಲರೆ, ಸರ್ಕಾರದ ಅಂಕೆ ಅಂಶಗಳನ್ನೇ ನೀವು dispute ಮಾಡಿದರೆ, ಅದನ್ನೇ ಸುಳ್ಳು ಎಂದರೆ ಹೇಗೆ ? ಹಾಗಾದರೆ, ಈಗ ಸರ್ಕಾರ ಹೇಳಿದ್ದೆಲ್ಲಾ ಸುಳ್ಳು ಎಂದು ಜನರು ತಿಳಿದುಕೊಂಡು ಬಿಡುತ್ತಾರೆ.

ಶ್ರೀ ಎಸ್.ಎಸ್.ಪಾಟೀಲ್ : ಇಲ್ಲ ಸರ್, ನಾನು ಹಆಗೆ ಹೇಳುವುದಿಲ್ಲ. ಈಗ ೧೯೦೦ ಕೋಟಿ ಎಂದು ಹೇಳುತ್ತಾರಲ್ಲ. ಅಷ್ಟು ಆಗುವುದಿಲ್ಲ. ನನ್ನ ಕಡೆ ಅಂಕ ಇದೆ, ತರಿಸಿದ್ದೇನೆ. ೧೫೦೦ ಕೋಟಿಯಿಂದ ೧೬೦೦ ಕೋಟಿವರೆಗೂ ಆಗುತ್ತದೆ.

ಅಧ್ಯಕ್ಷರು : ನೀವು ಎಲ್ಲಿಂದ ತರಿಸಿದ್ದೀರಿ ?

ಶ್ರೀ ಎಸ್.ಎಸ್.ಪಾಟೀಲ್ : ನಾನು ಅಪೆಕ್ಸ್ ಬ್ಯಾಂಕ್ , ಲ್ಯಾಂಡ್ ಬ್ಯಾಂಕ್‌ನಿಂದ ತರಿಸಿದ್ದೇನೆ. ಅವರು ಎಲ್ಲಿಂದ ತರಿಸುತ್ತಾರೋ, ನಾನೂ ಅಲ್ಲಿಂದಲೇ ತರಿಸಿದ್ದೇನೆ.

ಅಧ್ಯಕ್ಷರು : ಅವರು ಎಲ್ಲಿಂದ ತರಿಸಿದ್ದಾರೆ ?

ಶ್ರೀ ಎಸ್.ಎಸ್.ಪಾಟೀಲ್ : ಅಷ್ಟೂ ಆಗುವುದಿಲ್ಲ, ಇನ್ನೂ ಕಡಿಮೆಯಾಗುತ್ತದೆ.

ಅಧ್ಯಕ್ಷರು : ಅವರು ಯಾರಿಂದ ತರಿಸಿದ್ದಾರೆ ?

ಶ್ರೀ ಎಸ್.ಎಸ್.ಪಾಟೀಲ್ : ಅದಕ್ಕೆ ನಾವೇನು ಮಾಡೋಣ ?

ಅಧ್ಯಕ್ಷರು : ಅಂದರೆ, ಅಧಿಕಾರಿಗಳು ನೀವು ಕೇಳಿದಾಗ ಒಂದು ತರಹ figures ಕೊಡುವುದು. ಅವರು ಕೇಳಿದಾಗ ಮತ್ತೊಂದು ತರಹದ figures ಕೊಡುತ್ತಾರೇನು ? ಆ ತರಹ ಏನಾದರೂ ಇದ್ದರೆ, ಅದರ ಬಗ್ಗೆ ಒಂದು ತನಿಖೆಯಾಗಬೇಕು.

ಶ್ರೀ ಎಸ್.ಎಸ್. ಪಾಟೀಲ್ : ಕೆಲವು ಸಲ ಏನು ಮಾಡುತ್ತಾರೆಂದರೆ, ಹೆಚ್ಚು ಹೇಳಿ ಮತ್ತೆ ಉಳಿಸಿಕೊಳ್ಳುವುದಕ್ಕೆ ಮಾಡುತ್ತಾರೆ. ಆನಂತರದ ಪರಿಸ್ಥಿತಿಯನ್ನು ನಿಮಗೆ ಹೇಳುತ್ತೇನೆ.

ಅಧ್ಯಕ್ಷರು : ಆ figures ಅನ್ನೇ ನೀವು dispute ಮಾಡಿದರೆ ಹೇಗೆ ?

ಒಬ್ಬ ಮಾನ್ಯ ಸದಸ್ಯರು : ಅವರು ಏನು ತರಿಸಿದ್ದಾರೆ, ಅದನ್ನು ಕೊಡುವುದಕ್ಕೆ ಹೇಳಿ ೧೫೦೦ ಕೋಟಿ ಆಗಿದೆಯಲ್ಲ, ಅವರ ಪ್ರಕಾರ ಯಾವ ಲೆಕ್ಕ ಮಾಡಿದ್ದಾರೆ? ತಾವು ತರಿಸಿದ್ದನ್ನು ಕೊಡಿ.

ಶ್ರೀ ಎಸ್.ಎಸ್.ಪಾಟೀಲ್ : ನೋಡಿ, ೧೬೦೦ ಕೋಟಿಗಿಂತಲೂ ಹೆಚ್ಚಾಗುವುದಿಲ್ಲ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ : ಮಾನ್ಯ ಎಸ್.ಎಸ್.ಪಾಟೀಲರು ಒಂದು ಮಾತನ್ನು ಹೇಳಿದರು. ಅದಕ್ಕಾಗಿ ಸ್ವಲ್ಪ ಹೇಳುತ್ತೇನೆ. ಹಿಂದಿನ ಸರ್ಕಾರಗಳು ಏನು ಬಡ್ಡಿ ರಿಯಾಯಿತಿಯನ್ನು ಕೊಟ್ಟಿದ್ದರಲ್ಲ ಅದರ figuresನ್ನು ನೀವು ನೀವು ತರಿಸಿಕೊಂಡಿಲ್ಲವೆಂದು ಕಾಣುತ್ತದೆ. ಎಸ್.ಎಂ.ಕೃಷ್ಣ ಸರ್ಕಾರದಲ್ಲಿ ಏನು ಬಡ್ಡಿ ಇತ್ತು, ಅದರ ಅಂಕ ಅಂಶವನ್ನು ನೀವು ತರಿಸಿಕೊಂಡಿಲ್ಲ. ಆದ್ದರಿಂದ figures ನಲ್ಲಿ ವ್ಯತ್ಯಾಸವಾಗಿರಬಹುದು.

ಶ್ರೀ ಎಸ್.ಎಸ್.ಪಾಟೀಲ್ : ನಮ್ಮ ಶಾಸಕ ಮಿತ್ರರು ಅಪೆಕ್ಸ್ ಬ್ಯಾಂಕಿನ ನಿರ್ದೇಶಕರು. ನಾನು ನಮ್ಮದನ್ನೂ ಇಲ್ಲಿ ಹೇಳಿದ್ದೆನೆ. ನಮ್ಮಲ್ಲೂ

ಕೃಷ್ಣರವರು ಇಲ್ಲಿ ಮುಖ್ಯಮಂತ್ರಿಯಾಗಿದ್ದಾಗ ೧೩೬ ಕೋಟಿ ತುಂಬದೆಯೇ ತಾನೇ ಪ್ರಶ್ನೆ ಹಾಕಿ ತುಂಬಿಸಿಸಲು ಹೇಳಿದ್ದೇನೆ. ಈಗ ನೀವು ೧೯೦೦ ಕೋಟಿ ರೂಪಾಯಿಗಳೆಂದು ಹೇಳುತ್ತೀರಲ್ಲಾ, ಇದರಿಂದ ಅಪೆಕ್ಸ್ ಬ್ಯಾಂಕಿನವರು ಇನ್ನೂ ಹಾಳಾಗಿ ಹೋಗುತ್ತಾರೆ. ಅವರು ಸರಿಯಾಗಿ ಅದನ್ನು ತುಂಬದಿದ್ದರೆ ಅಪೆಕ್ಸ್ ಬ್ಯಾಂಕು, ಲ್ಯಾಂಡ್ ಬ್ಯಾಂಕು, ನಮ್ಮ ಸೊಸೈಟಿಗಳು ಯಾವುವೂ ಉಳಿಯುವುದಿಲ್ಲ. ರೈತರಿಗೆ ಎಲ್ಲೂ ಸಾಲ ಸಿಗುವುದಿಲ್ಲ. ನಿಮ್ಮ ಕೃಷಿ ಅಭಿವೃದ್ಧಿಆಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದೆನೆ. ನನ್ನದನ್ನೂ ನಾನು ಇಟ್ಟುಕೊಳ್ಳುವುದಿಲ್ಲ. ನಾವೇನು ಎಲ್ಲಾ ಮಾಡಿಹೋಗಿದ್ದೇವೆ, ನಾವು ಎಲ್ಲವನ್ನೂ ತುಂಬಿ ಹೋಗಿದ್ದೇವೆಂದು ಹೇಳುವುದಿಲ್ಲ. ಮಾನ್ಯ ಯಡಿಯೂರಪ್ಪನವರು ಹಿಂದೆ ನಿಮ್ಮ ಸರ್ಕಾರದಲ್ಲಿ ಕೊಟ್ಟಿದ್ದಿರಾ ಎಂದಿದ್ದಕ್ಕೆ ನಾನು ಕೊಟ್ಟಿಲ್ಲವೆಂದು ಹೇಳಿದೆ. ನಾವು ಕೊಟ್ಟಿಲ್ಲವೆಂದು ನೀವೂ ಕೊಡಬಾರದೇ ಎಂಬುದು ನನ್ನ ವಾದ. ಈ ಕಾರಣದಿಂದ ತಾವು ಅದನ್ನು ಕೊಬೇಕೆಂದು ವಿನಂತಿಸುತ್ತೇನೆ. ನಮ್ಮ ಸಿ.ಎಂ. ಚೂಂಚಯ್ಯಮಠ್, ಡಾಕ್ಟರ್‌ರವರ ಬಗ್ಗೆ ಮಾನ್ಯ ಎಂ.ಪಿ.ಪ್ರಕಾಶ್‌ರವರೇ, ತಮಗೂ ಗೊತ್ತಿದೆ, ಅವರು ನಿಜವಾಗಿ ಹೋರಾಟ ಮಾಡಿದವರು. ಅವರು ನಮ್ಮ ಮುಂಡರ್ಗಿಯ ಮಾಜಿ ಶಾಸಕರು. ಅವರು ಇಡೀ ತಮ್ಮ ದೇಹವನ್ನು ಎಲ್ಲೂ ಕೊಡಬಾರದುದೆಂದು ದಾನ ಮಾಡಿ ಮಾದರಿಯಾಗಿ ಹಓದರು. ಹೈದ್ರಾಬಾದ್ ಮೂವ್‌ಮೆಂಟ್‌ನಲ್ಲಿ ಹೆಚ್ಚು ಮುಂಚೂಣಿಯಲ್ಲಿ ಹೋರಾಟ ಮಾದಿದಂತವರು. ಆದ್ದರಿಂದ, ಅವರ ಹೆಸರಿನಲ್ಲಿ ಮುಂಡರ್ಗಿಯಲ್ಲಿಂದು ಭವನವನ್ನು ನಿರ್ಮಾಣ ಮಾಡಲು ಹಣ ಬಿಡುಗಡಿ ಮಾಡಲು ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಕಲಕಪ್ಪ ಗುರುಶಾಂತಪ್ಪ ಬಂಡಿ : ತಾವೂ ಅದೇ ದಾರಿಯಲ್ಲಿ ನಡೆಯಬೇಕೆಂದು ನನ್ನ ವಿನಂತಿ.

ಶ್ರೀ ಎಸ್.ಎಸ್.ಪಾಟೀಲ್ : ನೋಡಿ ಅವರು ಏನು ಹೇಳುತ್ತಿದ್ದಾರೆ ? ಆ ಬಡ್ಡಿ ನನ್ನ ಮಗನಿಗೇನಾಗಿದೆ ಎಂದರೆ, ಇಲ್ಲಿ ಮಗ ಎಂದು ಹೇಳಬಾರದು, ಆದರೆ, ಶಾಸಕ ಮಗ ಎಂದು ಹೇಳುತ್ತೇನೆ. ಆತನ ಸ್ಥಿತಿ

ಏನಾಗಿದೆ ಎಂದರೆ ಡಿಲಿಮಿಟೇಷನ್ ನಿಂದಾಗಿ ತಂದೆಯೇ ಮಗನ ವಿರುದ್ಧ ನಿಲ್ಲುವಂತಾಗಿದೆ. ಈ ಕಷ್ಟದಲ್ಲಿ ಮಾತನಾಡುತ್ತಿದ್ದಾನೆ. ಮುಂದೆ ಏನು ನಿರ್ಣಯ ಮಾಡುತ್ತಾರೋ ಅನಂತರ ನೋಡೋಣ. ಹಂಪಿ ಉತ್ಸವದ ಬಗ್ಗೆ ನಿಮ್ಮೆಲ್ಲರಿಗೂ ಹೇಳಿಕೊಂಡಿದ್ದೆ. ಎಲ್ಲದಕ್ಕೂ ತೆಗೆದಿಟ್ಟಿದ್ದೀರಿ. ಆದರೆ, ಹಂಪಿಯ ಲಕ್ಕುಂಡಿಗೆ ಏನು ತೆಗೆದಿಟ್ಟಿಲ್ಲ. ಹಂಪೆ ಬಿಟ್ಟರೆ ಲಕ್ಕುಂಡಿಯೇ ಇರುವುದು. ಅದರ ಅಭಿವೃದ್ದಿಯನ್ನೇ ಮಾಡುವುದಿಲ್ಲ. ಲಕ್ಕುಂಡಿಯಲ್ಲಿ ೧೦೧ ಬಾವಿ, ೧೦೧ ಗುಡಿಗಳಿದೆ. ತಾವು ಹೋದ ಸಲ ಬಂದಿರಲಿಲ್ಲ. ಈ ಸಲ ನಿಮ್ಮನ್ನು ಕರೆದುಕೊಂಡು ಹೋಗುತ್ತೇನೆ, ಬನ್ನಿ. ಚಾಲುಕ್ಯರ ಕಾಲದ ಅತ್ತಿವೊಬ್ಬೆಯ ಸ್ಥಾನವಿದೆ. ಆಕೆ ಆಳಿದಂತಹ ಸ್ಥಾನ. ಅಲ್ಲೇ ಅತ್ತಿಮೊಬ್ಬೆಯ ಪ್ರಶಸ್ತಿಯನ್ನೂ ಕೊಡುತ್ತಾರೆ. ಈ ಲಕ್ಕುಂಡಿಯ ಅಭೀವೃದ್ಧಿಗೆ ನಿಮಗೆಲ್ಲಾ ಮೊದಲೇ ಕೇಳಿಕೊಂಡಿದ್ದೆ, ನಿಮಗೆಲ್ಲಾ ಪತ್ರವನ್ನೂ ಬರಿದಿದ್ದೆ. ಪ್ರವಾಸೋದ್ಯಮ ಮತ್ತು ಕನ್ನಡ ಸಂಸ್ಕೃತಿ ಸಚಿವರಿಗೂ ಹೇಳಿದ್ದೆ. ಆದರೆ, ಅದಕ್ಕೇನು ದುಡ್ಡನ್ನು ಇಟ್ಟಿಲ್ಲ. ಈ ವರ್ಷ ಲಕ್ಕುಂಡಿ ಉತ್ಸವವನ್ನು ಮಾಡುವುದೇ ಇಲ್ಲ. ದಯವಿಟ್ಟು ಅಲ್ಲಿಗೆ ಒಂದು ಕೋಟಿಯಾದರೂ ಹಣವನ್ನು ಕೊಟ್ಟು ಆ ಊರಿನ ಅಭಿವೃದ್ಧಿಯನ್ನು ಮಾಡಬೇಕು. ಅದೊಂದು ಉತ್ತಮ ಪ್ರವಾಸಿತಾಣ. ಆದರೂ ಇದಕ್ಕೆ ಹೆಚ್ಚು ಒತ್ತು ಕೊಡುತ್ತಿಲ್ಲ. ತಾವು ಅದಕ್ಕೆ ಹಣವನ್ನು ಕೊಡಬೇಕು. ಚಿಕ್ಕ ನೀರಾವರಿಗೆ ೬೦೦-೭೦೦ ಕೋಟಿ ಇಟ್ಟಿದ್ದೀರಿ. ಆದರೆ, ಅದು ಸಾಕಾಗುವುದಿಲ್ಲ. ಅದಕ್ಕೆ ಕನಿಷ್ಟ ೧೫೦೦ ಕೋಟಿಯಾದರು ಬಜೆಟ್ನಲ್ಲಿ ಪ್ರವಿಜನ್ ಮಾಡಿ ಕೊಡಬೇಕು. ಅವರು ಬಜೆಟ್ನಲ್ಲಿ ಬಹಳ ಬೇಡಿಕೊಂಡಿದ್ದಾರೆ. ಆದರೆ, ಅಷ್ಟು ಆಗುವುದಿಲ್ಲ. ಅಲ್ಲಿ ಕೊಟ್ಟೆ ಇಲ್ಲಿ ಕೊಟ್ಟೆ, ಅದೊಂದು ೫೦ ಕೋಟಿ ರೂಪಾಯಿಗಳು ಇದೊಂದು ೨೫ ಕೋಟಿ ರೂಪಾಯಿಗಳು ಎಂದು ಬಹಳ ಹೇಳಿಕೊಂಡಿದ್ದೀರಿ. ಅದನ್ನೆಲ್ಲಾ ಸೇರಿಸಿದರೆ ೧೦೦ ಕೋಟಿಯಾಗುತ್ತದೆ. ಆದರೆ ಈ ಬಜೆಟ್‌ನಲ್ಲಿ ದೂರದೃಷ್ಟಿ ಇಲ್ಲ. ಬಜೆಟ್‌ನಲ್ಲಿ ಶಾಶ್ವತವಾದ ಪರಿಹಾರ ಬೇಕು. ಇವರ ಬೆಳವಣಿಗೆ ಕೂಡ ಬಹಳ ಕಡಿಮೆ ಇದೆ. ಹೋದ ಸಲದ Plan 15 ಸಾವಿರ ಕೋಟಿ ರೂಪಾಯಿಗಳು ಇತ್ತು. ಈ ಸಲ ೧೭ ಸಾವಿರ ಕೋಟಿ ರೂಪಾಯಿಗಳು ಇದೆ. ಅಂದರೆ ೪೮%

growth ಇತ್ತು. ಮೊದಲನೆಯ ಸಲ ಮಾನ್ಯ ಸಿದ್ದರಾಮಯ್ಯನವರನ್ನು ಕೂಡಿ ಮಾನ್ಯ ಧರ್ಮ್‌ಸಿಂಗ್‌ರವರೇನು ಬಜೆಟ್ ಮಾಡಿದರು ಆಗ ೪೮% growth ಆಗಿತ್ತು. ಈ ಸಲ ಅದು ೮% ಗೆ ಇಳಿದಿದೆ. ಕೇವಲ ೧೭ ಸಾವಿರ ಕೋಟಿ ರೂಪಾಯಿಗಳ ಪ್ಲಾನ್ ಆಗಿದೆ. ನಿಮ್ಮ growth ಕೂಡ ಕಡಿಮೆಯಾಗಯಿತು. ಬೆಳವಣಿಗೆಯ ದರವೂ ಕಡಿಮೆಯಾಗಿದೆ. ಕೃಷಿಗೆ ೩-೪ % ಹಣವನ್ನು ಇಟದ್ದೀರಿ. ಆದರಿಂದ ಎಂದೂ ಅಭಿವೃದ್ಧಿಯಾಗಲು ಸಾಧ್ಯವಿಲ್ಲ. ಹಿಂದೆ ಕೃಷ್ಣರವರ ಸರ್ಕಾರವಿದ್ದಾಗ ಪಂಚಾಯಿತಿಗೆ ೫ ಲಕ್ಷ ರೂಪಾಯಿಗಳು ಕೊಡುವುದನ್ನು ಹೇಳಿದ್ದರು. ಅದರ ಬಗ್ಗೆ ಬಜೆಟ್‌ನಲ್ಲಿ ಸುದ್ದಿಯೇ ಇಲ್ಲವಲ್ಲ? ಏನು ಮಾಡುತ್ತಾರೊ ಗೊತ್ತಿಲ್ಲ. ನೀವು ಅದರಲ್ಲಿ ದುಡ್ಡನ್ನೇ ಇಟ್ಟಿಲ್ಲ. ತಾವು ಕೊಡುವುದಾದರೆ ಉತ್ತರದಲ್ಲಿ ಹೇಳಿ. ಆದರೆ, ಅದಕ್ಕೆ ದುಡ್ಡು ಇಲ್ಲ. ಅಧಿಕಾರ ವಿಕೇಂದ್ರೀಕರಣದಲ್ಲೂ ನೀವು ಬಹಳ ಹಿಂದೆ ಬಿದ್ದೀರಿ. ಅಧಿಕಾರ ವಿಕೇಂದ್ರಿಕರಣದಲ್ಲಿ ನಿನ್ನೆ ನಿಮ್ಮ ಕಾಂಗ್ರೆಸ್ಸವರು ಒಪ್ಪುವುದಿಲ್ಲವೆಂದು ಎಲ್ಲರೂ ನಮ್ಮ ಡಾಕ್ಟರ್ ಮೈಮೇಲೆ ಬಿದ್ದುಬಿಟ್ಟಿದ್ದಿರಿ. ಅಧಿಕಾರ ವಿಕೇಂದ್ರೀಕರಣವನ್ನು ನಾವು ಒಪ್ಪಿಕೊಂಡು ಬಂದಿದ್ದೇವೆ. ಆದರೆ, ಅದರಲ್ಲೇನಾದರೂ ದೋಷಗಳಿದ್ದರೆ ತಿದ್ದುಪಡಿಯನ್ನು ಮಾಡಬೇಕೇ ಹೊರತು, ಅದನ್ನು ಮುಚ್ಚಿ ಬಿಡುತ್ತೇನೆ ಎಂಬುದನ್ನು ನಾನು ಒಪ್ಪುವುದಿಲ್ಲ. ಅದರಲ್ಲಿ ದೋಷಗಳಿದೆ ಎಂಉಬುದನ್ನು ನಾವು ಒಪ್ಪುತ್ತೇವೆ. ಈ ಲೆಕ್ಕ ನೋಡಿದರೆ, ಇವರು ಪಂಚಾಯಿತಿಗಳಿಗೆ ಹೆಚ್ಚು ಹಣವನ್ನು ಬಿಡುಗಡೆ ಮಾಡುವ ಲಕ್ಷಣ ಕಾಣುವುದಿಲ್ಲ. ಪಂಚಾಯಿತಿಗಳಿಗೆ ನೀವು ಇದರಲ್ಲಿ ದುಡ್ಡನ್ನು ಇಟ್ಟಿಲ್ಲ. ಕೃಷ್ಣರವರು ೫ ಲಕ್ಷ ರೂಪಾಯಿಗಳು ಮಾಡಿದ್ದರು ; ನೀವು ಕನಿಷ್ಟ ೧೦ ಲಕ್ಷ ರೂಪಾಯಿಗಳು ಮಾಡಬೇಕಾಗಿತ್ತು. ಕೃಷ್ಣರವರು ಇಟ್ಟಂಥ ಬೆಳವಣಿಗೆಯನ್ನು ನೀವು ಇವತ್ತು ಲೆಕ್ಕ ಮಾಡಿದರೆ ಕನಿಷ್ಟ ೧೦ ಲಕ್ಷ ರೂಪಾಯಿಗಳು ಇಡಬೇಕಾಗಿತ್ತ. ನೀವು ೧೦ ಲಕ್ಷ ರೂಪಾಯಿಗಳು ಇಡಲಿಲ್ಲ. ನಿಮಗೆ ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಅಷ್ಟೊಂದು ವಿಶ್ವಾಸ ಕಾಣುತ್ತಿಲ್ಲ. ನಿಮ್ಮ ಬಡಿದಾಟವನ್ನು ನೋಡಿದರೆ ಖಂಡಿತವಾಗಿ ನಿಮಗೆ ಅದರ ಮೇಲೆ ವಿಶ್ವಾಸವಿಲ್ಲವೆಂದು ನನಗೆ ಅನ್ನಿಸುತ್ತಿದೆ. ತಪ್ಪಿದ್ದರೆ ದೋಷವನ್ನು ತಿದ್ದಬೇಕು. ಕೆಲವು ದೋಷಗಳಿದೆ. ಸರಿಯಾಗಿ ಗ್ರಾಮ

ಸಭೆಗಳಾಗುವುದಿಲ್ಲ. ಗ್ರಾಮ ಸಭೆ ಹೇಎ ಕೆಲಸ ಮಾಡಬೇಕು ಎಂಬುದನ್ನು ಮಾಡಿ . ಅಲ್ಲಿ ಬ್ರಷ್ಟಾಚಾರ ನಡಿಯುತ್ತದೆ. ಅದು ನಡೆಯದಂತೆ ಹೇಗೆ ಮಾಡಬೇಕು ಎಂಬುದನ್ನು ಪ್ರಯತ್ನ ಮಾಡಿ. ಆದರೆ, ಅಧಿಕಾರ ವಿಕೇಂದ್ರೀಕರಣವನ್ನು ಮೊಟಕುಗೊಳಿಸುತ್ತೇವೆಂದರೆ ಸರಿಯಾಗದಂತಹ ಮಾತು. ತಾವು ಒಬ್ಬ ಅನುಭವಿ ಮಂತ್ರಿಗಳಿದ್ದೀರಿ, ಅದನ್ನು ಹೇಗೆ ಸುಧಾರಿಸಬೇಕು ಎಂಬ ಬಗ್ಗೆ ಪ್ರಯತ್ನ ಮಾಡಿ. ಅದನ್ನು ಬಿಟ್ಟು ಅದರ ಅಧಿಕಾರವನ್ನು ಮೊಟಕುಗೊಳಿಸತಕ್ಕೆ ಪ್ರಯತ್ನವನ್ನು ತಾವು ಮಾಡಬಾರದು. ಅಧ್ಯಕ್ಷರೆ, ತಾವು ನನಗೆ ಈ ದಿವಸ ಮಾತನಾಡಲು ಅವಕಾಶ ಮಾಡಿಕೊಟ್ಟಿರಿ. ಆದರೆ, ಹೇಳುವುದು ಇನ್ನೂ ಬಹಳ ಇತ್ತು. ಆದರೆ, ಎಲ್ಲರೂ ಮಾತನಾಡಬೇಕಾಗಿದೆ. ನಾನೇ ಎರಡು ತಾಸು ಮಾತನಾಡಿದರೆ ಸರಿಯಲ್ಲ. ನಾನು ಮಾತನಾಡಲು ಪ್ರಾರಂಭ ಮಾಡಿ ಈಗಲೇ ಅರ್ಧ ತಾಸಾಯಿತು.

ಅಧ್ಯಕ್ಷರು : ನಿಮ್ಮ ವಚನಗಳೆಲ್ಲವನ್ನೂ ಹೇಳಿದ್ದೀರಿ. ಆ ವಚನಗಳೆಲ್ಲವನ್ನು ಅರ್ಥ ಮಾಡಿಕೊಂಡು ಯಾರು ಕೇಳುತ್ತಾರೆ ? ವಚನವನ್ನು ಕೇಳುವವರಿದ್ದರೆ ಹೇಳಬಹುದು.

ಶ್ರೀ ಎಸ್.ಎಸ್. ಪಾಟೀಲ್ : ಅದು ನಿಮಗೆ ಲಾಗುವುದು. ಅದು ನಿಮ್ಮ ಮೇಲೆಯೇ ಇದೆ. ನೀವು ಪರಮಾತ್ಮನ ಸ್ವರೂಪದಲ್ಲಿ ಕೂರಬೇಕು ಎಂಬುದು ನನ್ನ ವಾದ. ಕೊನೆಯದಾಗಿ ಒಂದು ವಚನವನ್ನು ಹೇಳುತ್ತೇನೆ. " ಧರಣಿಯಮೇಲೊಂದು ಹಿರಿದಪ್ಪ ಅಂಗಡಿಯನ್ನಿಕ್ಕಿ ಹರಿದಕುಳ್ಳಿದ್ದ ಮಹದೇವಶೆಟ್ಟೆ, ಒಮ್ಮನವಾದರೆ ನುಡಿದ ಹಿಮ್ಮನವಾದರೂ ನುಡಿಯ ಕಾಣೆಯ ಸೊಲ್ಲ ಜಾಣೆಯ ಗೆಲ್ಲ" ಆ ರೀತಿ ನಡೆಯಬೇಕು ತಾವು. ಇದನ್ನೇ ತಮಗೆ ಹೇಳಿಕೊಳ್ಳುತ್ತಿದ್ದೇನೆ. ಹಾಗೆಯೇ ತವು ನಡೆಯುತ್ತಿದ್ದೀರಿ. ಆದರೆ, ನಿನ್ನೆ ಧಡಕ್ಕನೆ ಒಂದನ್ನು ಅಂದುಬಿಟ್ಟಿರಿ. ನನಗೇ ಏಕೆ ಈ ಮಾತನ್ನು ಅಂದರು ಎಂದು ಅನ್ನಿಸಿತು. ಕಾಂಗ್ರೆಸ್ ನವರಿಗೆ ಕೇಂದ್ರ ಸರ್ಕಾರಕ್ಕೆ ಟೀಕೆ ಮಾಡಿದರೆ ಸಿಟ್ಟೇ ಬರುತ್ತದೆ ಎಂದಾಗ ತಾವು ಅದಕ್ಕೆ ಸೇರಿಕೊಂಡುಬಿಟ್ಟಿರಿ. ತಮ್ಮ ಬಾಯಲ್ಲಿ ಆ ಶಬ್ದ ಬರಬಾರದು. ನಿಮಗೆ

ನಾವೆಲ್ಲಾ ಸಮಾನ. ಇಬ್ಬರೂ ನಿಮಗೆ ಒಂದೇ ರೀತಿ. ಯಾರದ್ದು ತಪ್ಪಿದೆ ಅವರನ್ನು ಹೊರಕ್ಕೆ ಹಾಕಿ ನಾನು ಬೇಡವೆಂದು ಹವಿಳುವುದಿಲ್ಲ. ಹೇಗೇಗೋ ನಡೆಯಬೇಕೆಂದು ನಾನು ಹೇಳುವುದಿಲ್ಲ. ಆದರೆ, ನಿನ್ನೆ ಆ ವಿಷಯ ತಮ್ಮ ಬಾಯಲ್ಲಿ ಏಕೆ ಬಂತೊ? ತಮ್ಮ ಮೇಲಿರುವ ತಕ್ಕಡಿಯಂತೆ ತಾವು ಇಲ್ಲಿ ನಡೆದುಕೊಳ್ಳಬೇಕು. ಬಸವಣ್ಣನವರ ವಚನಗಳನ್ನು ಹೇಳಿ ನಾವೆಲ್ಲರೂ ಆ ದಿನೆಯಲ್ಲಿ ನಡೆಯುವಂತಹ ಪ್ರಯತ್ನ ಮಾಡೋಣ. ಅಂತಹ ಸದ್ಬುದ್ಧಿ ನಮ್ಮೆಲ್ಲರಿಗೂ ಕೊಡಲಿ ಇಂದು ಹೇಲಿ ಮತ್ತೊಮ್ಮೆ ತಮಗೆ ವಂದಿಸಿ ನನ್ನೆರಡು ಮಾತನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಜಿ.ಎಸ್.ಗಡ್ಡದೇವರ ಮಠ (ಕಿರಹಟ್ಟಿ) : ಗದಗ್ ಜಿಲ್ಲೆಯ ನಮ್ಮ ಭಾಗದ ಬಗ್ಗೆ ಹಿರಿಯರಾದ ಮಾನ್ಯ ಎಸ್.ಎಸ್.ಪಾಟೀಲರು ಅನೇಕ ವಿಷಯಗಳನ್ನು ಹೇಳಿದರು. ನಾನು ಹೆಚ್ಚು ವಿಷಯಗಳನ್ನು ಮಾತನಾಡುವುದಿಲ್ಲ. ಅನೇಕ ಮಠಗಳ ಜೀರ್ಣೋದ್ಧಾರಕಾಗಿ ಸ್ವಾಮಿಗಳು ಹುಟ್ಟಿದಂತಹ ಗ್ರಾಮಗಳ ಅಭಿವೃದ್ಧಿಗಾಗಿ ಹಣವನ್ನು ಕೊಟ್ಟಿರುವುದಕ್ಕೆ ಮಾನ್ಯ ಅರ್ಥ ಸಚಿವರನ್ನು ಹೃದಯಪೂರ್ವಕವಾಗಿ ಸ್ವಾಗಸುತ್ತೇವೆ. ನಮ್ಮ ಭಾಗದಲ್ಲಿ ಪಂಚಾಕ್ಷರಿ ಗವಾಯಿಗಳ ಅಂಧಾಶ್ರಮ ಒಂದು ಇದೆ. ಅಂಧರದ್ದೇ ಒಂದು ಜಾತಿ. ಈ ರಾಜ್ಯದಿಂದಷ್ಟೇ ಅಲ್ಲ, ಎಲ್ಲಾ ಪ್ರದೇಶಗಳಿಂದ ಅಂಧ ಮಕ್ಕಳು ಯಾರು ಸಮಾಜಕ್ಕೆ ಹೊರೆಯಾಗಿದ್ದಾರೆ ಅಂಥ ಮಕ್ಕಳನ್ನು ಆ ಮಠದೊಳಗೆ ಬಿಟ್ಟರೆ ಅವರ ಜೀವನಕ್ಕೆ ಬೆಳಕು ಕೊಡುವ ಉಪಯುಕ್ತವಾದ ಕೆಲಸವನ್ನು ಆ ಶ್ರೀಮಠ ಮಾಡಿಕೊಂಡು ಬಂದಿದೆ. ಮಾನ್ಯ ಉದಾಸಿಯವರು ನಮ್ಮ ಸಹಾಯಕ್ಕೆ ಬರುತ್ತಾರೆಂದು ನಾನು ಭಾವಿಸುತ್ತೇನೆ. ಪಂಚಾಕ್ಷರ ಗವಾಯಿಗಳನ್ನು ಈ ಸಮಾಜಕ್ಕೆ ಕೊಟ್ಟಂತಹ ಕೀರ್ತಿ ಹಾನಗಲ್ ತಾಲ್ಲೂಕಿನ ಕಾಡುಸಿದ್ಧಕೊಪ್ಪದ್ದು. ಅಂತಹ ಪಂಚಾಕ್ಷರ ಗವಾಯಿಗಳ ಅಂಧಾಶ್ರಮ ಏನಿದೆ, ಅಲ್ಲಿನ ಪುಟ್ಟ ಅಜ್ಜಯ್ಯನವರನ್ನು ನಮ್ಮ ಭಾಗದ ಎಲ್ಲಾ ಪ್ರದೇಶದ ಜನರು 'ನಡೆದಾಡುವ ದೇವರು' ಎಂದೇ ಕರೆಯುತ್ತಾರೆ. ೯೩ ವರ್ಷ ವಯಸ್ಸು ತುಂಬಿದಂತಹ ಪುಟ್ಟಜ್ಜಯ್ಯನವರ ಆ ಮಠಕ್ಕೆ ಬಜೆಟ್ ಮೇಲಿನ ಚರ್ಚೆಗೆ ತಾವು ಉತ್ತರ ಕೊಡುವಂತಹ ಸಂದರ್ಭದಲ್ಲಿ ಸಹಾಯ

ಮಾಡುತ್ತೇನೆ ಎಂಬ ಆಶ್ವಾಸನೆಯನ್ನು ಕೊಡಬೇಕೆಂದು ನಾನು ತಮ್ಮ ಮೂಲಕ ನಿವೇದನೆ ಮಾಡಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಎಸ್.ಎಸ್.ಪಾಟೀಲ್ : – ಮಾನ್ಯ ಅಧ್ಯಕ್ಷರೆ, ನಾನು ಆಗಲೇ ಹೇಳುವುದನ್ನು ಮರೆತಿದ್ದೆ. ನಮ್ಮ ಶಿರಹಟ್ಟಿಯ ಫಕೀರೇಶ್ವರ ಮಠ ಮತ್ತು ಶಿಶುನಾಳ ಷರೀಫರ ಮಠಗಳಿಗು ಕೂಡ ಸರ್ಕಾರ ಸಹಾಯ ಮಾಡಬೇಕು. ಆ ಎರಡೂ ಮಠಗಳು ಕೋಮು ಸೌಯಾರ್ದತೆ ಸಾರುವ ಮಠಗಳಾಗಿವೆ. ದಯವಿಟ್ಟು ಅವುಗಳಿಗೂ ಸಹಾಯ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಚಿಕ್ಕನಗೌಡ್ರ ಸಿದ್ದನಗೌಡ್ರ ಈಶ್ವರಗೌಡ : – ಮಾನ್ಯ ಅಧ್ಯಕ್ಷರೆ, ಆ ಕಡೆಗೆ ಕುಳಿತಿರುವವರೆಲ್ಲಾ ದೇವಸ್ಥಾನ ಅಥವಾ ಮಠಗಳಿಗೆ ಹಣ ಸಹಾಯ ಮಾಡುವುದನ್ನು ನಿನ್ನೆ ವಿರೋಧ ಮಾಡಿದ್ದರು. ಆದರೆ ಇವತ್ತು ಅವರೇ ಇನ್ನಷ್ಟು ಮಠ–ಮಾನ್ಯಗಳಿಗೆ ಕೊಡಿ ಎಂದು ಕೇಳುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಕುಮಾರ್ ಬಂಗಾರಪ್ಪನವರೆ, ಈಗ ತಾವು ಮಾತನಾಡಿ. ಬೇಗ ಮಾತನಾಡಿ ಮುಗಿಸಿ. ಇನ್ನೂ ಹಲವರಿಗೆ ಮಾತನಾಡಲು ಅವಕಾಶ ಕೊಡಬೇಕಾಗಿದೆ.

[ಗೊಂದಲ]

ಶ್ರೀ ಚಿಕ್ಕನಗೌಡ್ರ ಸಿದ್ದನಗೌಡ್ರ ಈಶ್ವರಗೌಡ : ಮಾನ್ಯ ಅಧ್ಯಕ್ಷರೆ, ಶಿರಹಟ್ಟಿಯ ಶಾಸಕರಾದ ಮಾನ್ಯ ಗಡ್ಡೆ ದೇವರಮಠರವರು ಏನು ಹೇಳಿದರು...

[ಗೊಂದಲ]

ಅಧ್ಯಕ್ಷರು : ನಾನು ಈಗಾಗಲೇ ಮಾನ್ಯ ಕುಮಾರ್ ಬಂಗಾರಪ್ಪನವರನ್ನು ಮಾತನಾಡಲು ಕರೆದಿದ್ದೇನೆ. ಸುಮ್ಮನೆ ಮಧ್ಯೆ ಮಧ್ಯೆ ಎದು ನಿಂತು ಏಕೆ ಮಾತನಾಡುತ್ತೀರಿ ? ಇನ್ನೂ ಬಹಳ ಜನ ಮಾತನಾಡುವವರಿದ್ದಾರೆ. ನೀವು ಏಕೆ ಹೀಗೆ ಮಾಡುತ್ತೀರಿ ? ಇವತ್ತು ಸಂಜೆ ೫ ಗಂಟೆಯೊಳಗೆ ಚರ್ಚೆ ಮುಗಿದು ಮಾನ್ಯ ಸಚಿವರು ಉತ್ತರ ಕೊಡಬೇಕಾಗಿದೆ. ೧೫-೨೦ ನಿಮಿಷಗಳಿಗೆ ಸೀಮಿತವಾಗಿ ಮಾನ್ಯ ಸದಸ್ಯರು ಮಾತನಾಡಿದರೆ ಎಲ್ಲರಿಗೂ ಮಾತನಾಡಲು ಅವಕಾಶ ಸಿಗುತ್ತದೆ. ಎಲ್ಲರೂ ಈ ತರಹ ಮಾಡಿದರೆ ಹೇಗೆ ? ಮಾನ್ಯ ಕುಮಾರ್ ಬಂಗಾರಪ್ಪನವರೆ, ಈಗ ತಾವು ಮಾತನಾಡಿ, ದಯಮಾಡಿ ೧೫ ನಿಮಿಷಗಳಲ್ಲಿ ತಮ್ಮ ಭಾಷಣ ಮುಗಿಸಿ.

[ಗೊಂದಲ]

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು : - ಮಾನ್ಯ ನಾಗರಾಜ್‌ರವರೆ, ದಯಮಾಡಿ ಕುಳಿತುಕೊಳ್ಳಿ. ಇವರು ಮಾತನಾಡಿದ ಮೇಲೆ ನಿಮಗೂ ಅವಕಾಶ ಕೊಡುತ್ತೇನೆ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಎಸ್.ಕುಮಾರ್ ಬಂಗಾರಪ್ಪ [ಸೊರಬ] : ಮಾನ್ಯ ಅಧ್ಯಕ್ಷರೆ, ೨೦೦೭-೦೮ನೇ ಸಾಲಿನ ಆಯವ್ಯಯದ ಮೇಲೆ ಚರ್ಚೆ ಮಾಡಲು ಮತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ಈ ಆಯವ್ಯಯ ಸಂಪೂರ್ಣವಾಗಿ ರಾಜಕೀಯವಾಗಿ ಚಿಂತನೆ ಮಾಡಿರತಕ್ಕಂಥ ಮತ್ತು ಮುಂದೆ ಬರತಕ್ಕಂಥ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಮಂಡನೆ ಮಾಡಿರತಕ್ಕಂಥ ಆಯವ್ಯಯವಾಗಿದೆ. ರಾಜ್ಯದ ಸರ್ವಾಂಗೀಣ ಅಭಿವೃದ್ಧಿ ಅಥವಾ ಅನೇಕ ಕ್ಷೇತ್ರಗಳಿಗೆ ಬೇಕಾಗಿರತಕ್ಕಂಥ ಅಭಿವೃದ್ಧಿಯ ಚಿಂತನೆಯನ್ನು ಇಟ್ಟುಕೊಂಡು ಮಂಡಿಸಿರತಕ್ಕ ಆಯವ್ಯಯ ಇದಲ್ಲ. ಯಾವುದೇ ಒಂದು ಸರ್ಕಾರ ೫ ವರ್ಷ, ೧೦ ವರ್ಷ ಅಥವಾ ೨೫ ವರ್ಷದ ಮುಂದಾಲೋಚನೆಯಲ್ಲಿ ತನ್ನದೇ ಆಗಿರತಕ್ಕಂಥ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಬೇಕೆಂಬ

ಉದ್ದೇಶದಿಂದ ಮಂಡಿಸಿದಂತಹ ಆಯವ್ಯಯ ಇದಲ್ಲ. ನಾನು ಈ ಶಾಸನಸಭೆಗೆ ಬಂದು ೧೧ ವರ್ಷಗಳಾಯಿತು. ಈ ೧೧ ವರ್ಷಗಳಲ್ಲಿ ವಿರೋಧ ಪಕ್ಷದಿಂದ ಆರಂಭಿಸಿ, ಆಡಳಿತ ಪಕ್ಷದಲ್ಲಿ ಕೆಲವು ವರ್ಷಗಳಿದ್ದು, ಮತ್ತೆ ವಿರೋಧ ಪಕ್ಷಕ್ಕೆ ನಾನು ಬಂದಿದ್ದೇನೆ. ಈ ೧೦-೧೧ ವರ್ಷಗಳ ಕಾಲದಲ್ಲಿ ಒಂದು ತಿಂಗಳು ಕೂಡ ಬಿಡದೆ ಪರತಿ ತಿಂಗಳು ನಮ್ಮ ತಾಲ್ಲೂಕಿನ ಮತ್ತು ಜಿಲ್ಲೆಯ KDP meeting ಗಳಿಗೆ ಜಾಜರಾಗಿ ನಾವು ಸರ್ಕಾರದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇವೆ. ವಿಶೇಷವಾಗಿ ನಾವು ನಮ್ಮ ನಮ್ಮ ತಾಲ್ಲೂಕು ಮತ್ತು ನಮ್ಮ ನಮ್ಮ ಜಿಲ್ಲೆಗಳಲ್ಲಿ ಹಾಗೂ ರಾಜ್ಯದಲ್ಲಿ ಆಗಿರತಕ್ಕ ಅಭಿವೃದ್ಧಿಯನ್ನು ಹೋಲಿಸಿ ನೋಡಿದರೆ, ನಾನಾ ರಾಜಕೀಯ ಪಕ್ಷಗಳಿಂದ ಬಂದರೂ ಕೂಡ, ರಾಜಕೀಯದ ಬೆನ್ನಿನಲ್ಲಿ ನಾವು ಅಭಿವೃದ್ಧಿಯನ್ನು ಕಾಣಬೇಕು ಎಂಬ ದೃಷ್ಟಿಯಿಂದ ಚುನಾವಣೆಗೆ ಸೀಮಿತವಾಗಿ ನಾವು ನಮ್ಮ ರಾಜಕೀಯವನ್ನು ಮಾಡುತ್ತಿದ್ದೇವೆ. ಹೊರತು, ಆಯವ್ಯಯದಲ್ಲಿ ರಾಜಕೀಯ ಮಾಡತಕ್ಕಂಥದ್ದು ಯಾವಾಗಲೂ ಕೂಡ ಆಗಿರಲಿಲ್ಲ. ಇವತ್ತು ಎರಡು ರಾಜಕೀಯ ಪಕ್ಷಗಳ ಸಮ್ಮಿಶ್ರ ಸರ್ಕಾರದಲ್ಲಿ, ಸರ್ಕಾರದ ಅಂಗ ಪಕ್ಷವಾಗಿರತಲ್ಲಂಥ ಜೆ.ಡಿ[ಎಸ್] ಆಗಲೇ ತಮ್ಮ ವಾದವನ್ನು ವಿವಾದ ರೂಪವಾಗಿ ತಂದು ಇವತ್ತು ಈ ಬಜೆಟ್ ಅನ್ನು 'ಇದು ಬಿ.ಜೆ.ಪಿ. ಬಜೆಟ್' ಎಂದು ಈಗಾಗಲೇ ಪ್ರತಿಬಿಂಬಿಸಿರತಕ್ಕಂಥದ್ದು ಪತ್ರಿಕೆಗಳಲ್ಲಿ ಮತ್ತು ಮಾಧ್ಯಮಗಳಲ್ಲಿ ವರದಿ ಯಾಗಿದೆ. ಇವತ್ತು ಈ ಬಜೆಟ್ ಮೇಲೆ ಮಾತನಾಡುವಾಗ ವಿಶೇಷವಾಗಿ ನಾನು ನೀರಾವರಿ ಇಲಾಖೆ ಮೇಲೆ concentrate ಮಾಡಿ ಮಾತನಾಡ ಬಯಸುತ್ತೇನೆ. ಅದರಲ್ಲೂ ಮೊದಲಿಗೆ ನಾನು ಸಣ್ಣ ನೀರಾವರಿ ಇಲಾಖೆ ಬಗ್ಗೆ ಮಾತನಾಡುವುದರಿಂದ ನನ್ನ ಭಾಷಣವನ್ನು ಶುರು ಮಾಡುತ್ತೇನೆ. ಸಣ್ಣ ನೀರಾವರಿ ಇಲಾಖೆಯಲ್ಲಿ ನಾವು ಅನೇಕ ವರ್ಷಗಳಿಂದ ಕಾರ್ಯಕ್ರಮಗಳನ್ನು ಹಾಕಿಕೊಂಡು ಬಂದಿದ್ದೇವೆ. ತನ್ನಷ್ಟಕ್ಕೆ ತಾನೇ ನಡೆಯತಕ್ಕಂಥ ಈ ಸಣ್ಣ ನೀರಾವರಿ ಇಲಾಖೆಯ ಕೆರೆಗಳ ಬಗ್ಗೆ ಮತ್ತು ಕಾಲುವೆಗಳ ಬಗ್ಗೆ ನಾವು ಹೆಚ್ಚು ಗಮನ ಹರಿಸಬೇಕಾಗಿದೆ. ನಮ್ಮ ನಿಸಾರ್ ಅಹ್ಮದ್‌ರವರು ಕೆರೆಗಳ ಬಗ್ಗೆ ಒಂದು ಮಾತನ್ನು ಹೇಳುತ್ತಾರೆ. ಒಂದು ಕೆರೆ

ಒಂದು ಊರಿಗೆ ಅಥವಾ ಒಂದು ಗ್ರಾಮಕ್ಕೆ ಮುತ್ತೈದೆಯ ಕುಂಕುಮದ ಬೊಟ್ಟು ಇದ್ದ ಹಾಗೆ ಎಂದು ಅವರು ಹೇಳಿದ್ದಾರೆ. ಒಂದು ಹೆಣ್ಣುಮಗಳಿಗೆ ಒಂದು ಕುಂಕುಮ ಹೇಗೆ ಶೋಭೆಯನ್ನು ತರುತ್ತದೋ, ಹಾಗೆ ಒಂದು ಕೆರೆ ಒಂದು ಊರಿಗೆ ಶೋಭೆ ಇದ್ದ ಹಾಗೆ. ಅದು ಸಂಪೂರ್ಣವಾಗಿ ತಮ್ಮ ಊರಿನ ಅಭಿವೃದ್ಧಿಯನ್ನು ತೋರಿಸುತ್ತಾ ಬರುತ್ತದೆ. ಆ ಕೆರೆಯನ್ನು ಎಷ್ಟು ಅಚ್ಚುಕಟ್ಟಾಗಿ ಇಟ್ಟುಕೊಂಡಿರುತ್ತಾರೋ, ಊರು ಅಷ್ಟೇ ಅಚ್ಚುಕಟ್ಟಾಗಿ ಇರುತ್ತದೆ ಎನ್ನತಕ್ಕಂಥ ಮಾತು ಇದೆ. ಸಾವಿರಾರು ವರ್ಷಗಳ ಹಿಂದೆ ರಾಜ ಮಹಾರಾಜರು ಕಟ್ಟಿಸಿದಂತಹ ಕೆರೆಗಳು ಇವತ್ತು complete ಆಗಿ ಎಲ್ಲಾ ಹೂಳು ತುಂಬಿಕೊಂಡಿವೆ, ಕಾಲುವೆಗಳೆಲ್ಲಾ ಒತ್ತುವರಿ ಆಗಿದೆ. ನಾವು ಹೆಚ್ಚು ಕಡಿಮೆ ಎಲ್ಲಾ ಕಾಡನ್ನೂ ಕೂಡ ಕಡಿದಿದ್ದರಿಂದ ಬರತಕ್ಕಂಥ ಎಲ್ಲಾ ಮಣ್ಣು ಕೆರೆಗಳಲ್ಲಿ ತುಂಬಿಕೊಂಡಿದೆ. ಇದರಿಂದಾಗಿ ಯಾವುದೇ ಕಾರ್ಯಕ್ರಮಗಳನ್ನು ಮಾಡದೆ ಇರತಕ್ಕಂಥ ಪರಿಸ್ಥಿತಿಗೆ ನಾವು ಬಂದಿದ್ದೇವೆ. ಅದಕ್ಕೆ ಬಹಳ ಜ್ವಲಂತವಾಗಿರತಕ್ಕಂಥ ಉದಾಹರಣೆ ಎಂದರೆ, ಅತಿ ಹೆಚ್ಚು ಕೆರೆಗಳು ಇರತಕ್ಕಂಥ ಕೋಲಾರ ಜಿಲ್ಲೆ. ಸಮೀಕ್ಷೆಯೊಂದರ ಪ್ರಕಾರ ಇನ್ನು ೪೫-೫೦ ವರ್ಷಗಳಲ್ಲಿ ಕೋಲಾರ ಜಿಲ್ಲೆ ಮರಳುಗಾಡು ಆಗುತ್ತದೆ. ಏಕೆಂದರೆ under ground water recharge ಆಗಿದೆ, ನೀರು ಸಂಪೂರ್ಣವಾಗಿ ನಮ್ಮ ಕೈ ಬಿಟ್ಟು ಹೋಗಿದೆ. ಯಾವ ಮರಕ್ಕೂ ಕೂಡ ತನ್ನ ತಾಯಿ ಬೇರಿಗೆ ನೀರು ಸಿಗದೇ ಇರತಕ್ಕಂಥ ಪರಿಸ್ಥಿತಿ ಬಂದಿದೆ. ಮನುಷ್ಯ ನಿರ್ಮಾಣ ಮಾಡಿರತಕ್ಕಂಥ ಕಾಡಿನ ಬಗ್ಗೆ ಮಾತ್ರ ನಾವು ಪ್ರಸ್ತಾಪ ಮಾಡುತ್ತೇವೆಯೆ ಹೊರತು, ನಮಗೆ ದೈವದತ್ತವಾಗಿ ಬಂದಿರತಕ್ಕಂಥ ಕಾಡನ್ನು ನಾವು ಉಳಿಸಿ ಕೊಳ್ಳಬೇಕು ಅಥವಾ ಅದನ್ನು ಉಳಿಸಿ ಕೊಂಡು ನಮ್ಮ ಪ್ರಗತಿಯನ್ನು ಕಾಣಬೇಕು ಎನ್ನತಕ್ಕಂಥ ಉದ್ದೇಶ ನಮಗ್ಯಾರಿಗೂ ಕೂಡ ಇಲ್ಲ. ಇವತ್ತೇನು ಅಲ್ಪ ಸ್ವಲ್ಪ ಕಾಡು ಅಲ್ಲಿ ಇಲ್ಲಿ ಉಳಿದುಕೊಂಡಿದೆಯೋ, ಅದರ ಬಗ್ಗೆ ನಾವು ಚರ್ಚೆ ಮಾಡಬೇಕೆಂದರೆ, ಆಯವ್ಯಯದಲ್ಲಿ ಅದಕ್ಕೆ ಒಂದು ನಯಾ ಪೈಸೆಯನ್ನು ಕೂಡ ಕೊಟ್ಟಿಲ್ಲ. ಇವತ್ತು ಎಲ್ಲೆಲ್ಲಿ ಕಾಡು ಇದೆಯೋ ಅದನ್ನು ಉಳಿಸಿಕೊಳ್ಳುವುದಕ್ಕೆ ನಾವು ಹಣಕಾಸು ಕೇಳಿದರು ಕೂಡ ಇವತ್ತು ಅನೇಕ ದೃಷ್ಟಿಯಿಂದ ನಮಗೆ ಹಣಕಾಸನ್ನೂ ಕೊಡದಿರತಕ್ಕಂಥ ಪರಿಸ್ಥಿತಿ

ಎದುರಾಗಿದೆ. ಇವತ್ತು ನಮ್ಮ ರಾಜ್ಯದಲ್ಲಿ ಸುಮಾರು ೩೬ ಸಾವಿರ ಕೆರೆಗಳಿವೆ. ಮಾನ್ಯ ಎಸ್.ಎಂ.ಕೃಷ್ಣರವರ ನೇತೃತ್ವದ ಸರ್ಕಾರ ಇದ್ದಾಗ World Bank ನೆರವಿನಿಂದ ಕೆರೆಗಳ ಹೂಳು ತೆಗೆಯತಕ್ಕಂಥ ವಿಶೇಷ ಕಾರ್ಯಕ್ರಮವನ್ನು ರೂಪಿಸಾಗಿತ್ತು. ನೀರು ಬಳಕೆದಾರರ ಸಂಘಗಳ ಮೂಲಕ ರೈತರ ಸಹಭಾಗಿತ್ವದಲ್ಲಿ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಬೇಕೆಂದು World Bank ನವರು ಹೇಳಿದ್ದರು. ಆ ಕಾರ್ಯಕ್ರಮ ತನ್ನಷ್ಟಕ್ಕೆ ತನೇ ಕುಂಠಿತವಾಯಿತು. ಈಗ ಆ ಕಾರ್ಯಕ್ರಮ ಏನಾಯಿತು ಎಂಬ ಬಗ್ಗೆ ಕೂಡ ಮಾಹಿತಿ ಇಲ್ಲವಾಗಿದೆ. ಇವತ್ತು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೇ. ಮಾನ್ಯ ಉಪ ಮುಖ್ಯಮಂತ್ರಿಗಳು ಸಣ್ಣ ನೀರಾವರಿ ಇಲಾಖೆಯನ್ನು handle ಮಾಡುತ್ತಿದ್ದಾರೆ. ಇವತ್ತು ಅದರ ಜವಾಬ್ದಾರಿಯನ್ನು ಅವರು ವಹಿಸಿಕೊಂಡಿದ್ದಾರೆ. ನೀವು ನೀರಾವರಿ ಇಲಾಖೆಗೆ ಎಷ್ಟು ಹಣವನ್ನು ಕೊಡುತ್ತೀರೋ, ಅದರ ಇಂತಿಷ್ಟು percentage ಹಣವನ್ನು ಸಣ್ಣ ನೀರಾವರಿ ಇಲಾಖೆಗೆ ಕೊಡುತ್ತೇನೆ ಎಂದು ಹೇಳಬೇಕು. ಸಣ್ಣ ನೀರಾವರಿ ಇಲಾಖೆಗೆ ಕಳೆದ ವರ್ಷ ಕೊಟ್ಟಿದ್ದಕ್ಕಿಂತ ಹೆಚ್ಚು ಹಣವನ್ನು ಈ ವರ್ಷ ಕೊಟ್ಟಿದ್ದೇನೆ ಎಂದು ನೀವು ಹೇಳಬಹುದು. ಆದರೆ ಅದು ನಮಗೆ ಬೇಡ. ವಿಶೇಷವಾಗಿ ನೀರಾವರಿ ಇಲಾಖೆಗೆ ನೀವು ಏನೊಂದು ಹಣವನ್ನು ಕೊಡುತ್ತೀರೋ, ಅದರಲ್ಲಿ ಶೇಕಡ ೨೫% ನ್ನು ಸಣ್ಣ ನೀರಾವರಿ ಇಲಾಖೆಗೆ ಕೊಡಬೇಕು. ಅದು ಇಡೀ ರಾಜ್ಯಕ್ಕೆ ಎಲ್ಲದಕ್ಕೂ ಅನ್ವಯಿಸುವಂತೆ ಕೊಡಬೇಕು ಎನ್ನುವಂತಹ ವಿನಂತಿಯನ್ನು ನಾನು ಮಾಡುತ್ತೇನೆ. ಇದು ಬಹಳ ವರ್ಷಗಳಿಂದ ಇರತಕ್ಕಂಥ ನಮ್ಮ ಬೇಡಿಕೆಯಾಗಿದೆ. ನೀರಾವರಿ ಇಲಾಖೆಯಲ್ಲಿ ನಾವು ಹತ್ತಾರು ವರ್ಷಗಳ ಕಾಲ ಕಾರ್ಯಕ್ರಮವನ್ನು ಮಾಡುತ್ತಾ ಹೋಗುತ್ತೇವೆ. ನಮಗೆ ಹತ್ತಾರು ವರ್ಷಗಳ ಕಾರ್ಯಕ್ರಮ ಬೇಡ. ಆರು ತಿಂಗಳು, ಒಂದು ವರ್ಷದಲ್ಲಿ ನಾವು ನೂರಾರು ಎಕರೆ ಜಮೀನನ್ನು ನೀರಾವರಿ ಮಾಡಬಹುದು. ಅಲ್ಲೇ ಇರತಕ್ಕಂಥ ರೈತರ ಸಹಭಾಗಿತ್ವದಲ್ಲಿ ಸಹ ನಾವು ನೀರಾವರಿಯನ್ನು ಕಲ್ಪಿಸಬಹುದು. ಅಂತಹ ಕೆರೆಗಳ ಅಭಿವೃದ್ಧಿಗೆ ಅದು ಸಣ್ಣ ನೀರಾವರಿ ಕೆರೆ ಆಗಿರಬಹುದು, ದೊಡ್ಡ ಹೊಂಡ ಇರಬಹುದು ಅಥವಾ ತಾಲ್ಲೂಕು

ಪಂಚಾಯಿತಿ / ಜಿಲ್ಲಾ ಪಂಚಾಯಿತಿ ಕೆರೆ ಇರಬಹುದು, ಇದರ ಬಗ್ಗೆ ನಾವು ಹೆಚ್ಚು ಗಮನ ಕೊಡತಕ್ಕಂಥದ್ದು ಬಹಳ ಅವಶ್ಯಕತೆ ಇದೆ. ಇವತ್ತು ತಾಲ್ಲೂಕು ಪಂಚಾಯಿತಿ / ಜಿಲ್ಲಾ ಪಂಚಾಯಿತಿ ಕೆರೆಗಳೆಲ್ಲವನ್ನೂ ಗ್ರಾಮ ಪಂಚಾಯಿತಿಗೆ hand over ಮಾಡಿದ್ದೇವೆ. ಅವುಗಳ ನಿರ್ವಹಣೆಯನ್ನು ಅವರೇ ಮಾಡಬೇಕೆಂದು ನಾವು ಕಾನೂನು ಮಾಡಿದ್ದೇವೆ. ಕೆರೆಗಳಲ್ಲಿ ಸಿಗುವ ಮೀನು ಎಲ್ಲವನೂ ಕೂಡ ಅಲ್ಲೇ ಹರಾಜು ಹಾಕಿಕೊಂಡು, ನೀವೇ ಆದಾಯ ಮಾಡಿಕೊಂಡು, ಕೆರೆಗಳ ನಿರ್ವಹಣೆಯ ಜವಾಬ್ದಾರಿಯನ್ನು ನೀವೇ ಹೊರಬೇಕೆಂದು ನೀವು ಮಾಡಿದ್ದೀರಿ. ಆದರೆ ಮೂಲಭೂತವಾಗಿ ಎಲ್ಲಿ ಸಮಸ್ಯೆಗಳಿವೆಯೋ, ಅವುಗಳ ನಿವಾರಣೆ ನೀವು ಹಣಕಾಸನ್ನೇ ಕೊಡಲಿಲ್ಲವೆಂದರೆ ಕಷ್ಟವಾಗುತ್ತದೆ.. ಹಣಕಾಸಿನ ನೆರವಿಲ್ಲದೆ ರೈತರಾಗಲಿ ಅಥವಾ ಮತ್ತೊಬ್ಬರಾಗಲಿ ನಮ್ಮ ಕೆರೆ ಕಟ್ಟೆಗಳನ್ನು ಉದ್ಧಾರ ಮಾಡುವುದ ಕ್ಕಾಗುವುದಿಲ್ಲ. ನಮ್ಮ ನೀರನ್ನು recharge ಮಾಡುವುದಕ್ಕೂ ಆಗುವುದಿಲ್ಲ. ಕಾವೇರಿ ಭಾಗದಲ್ಲಿ ಇರತಕ್ಕಂಥ ಕೆರೆಗಳ ಹೂಳು ತೆಗೆಯುವ ನಮ್ಮ ಕಾರ್ಯಕ್ರಮಕ್ಕೆ ತಮಿಳುನಾಡಿನವರು Central Water Commission ಮೂಲಕ objections ತಂದು, ನಮ್ಮ ಹೂಳು ತೆಗೆಯುವ ಕಾರ್ಯಕ್ರಮವನ್ನು ಜಾರಿಗೊಳಿಸುವುದಕ್ಕೆ ಬಿಡಲಿಲ್ಲ. ಅದೇ ರೀತಿಯ ಅನೇಕ ಕಾಯ್ಕ್ರಮಗಳಿಗೆ ತಮಿಳುನಾಡಿನವರು objections ತಂದು ಅವುಗಳನ್ನೆಲ್ಲಾ ತಡೆಹಿಡಿದರು. ಬಚಾವತ್ ಅವಾರ್ಡ್‌ನಲ್ಲಿ ಹಂಚಿಕೆ ಮಾಡಿದ ನೀರಿನ ಉಪಯೋಗವಾಗಿಲ್ಲ ಎಂಬ ಕಾರಣ ನೀಡಿ ಅದೇ ರೀತಿಯ ತಡೆಯನ್ನು ಅಲ್ಲೂ ಕೂಡ ತಂದು ಸಮಸ್ಯೆ ಉಂಟು ಮಾಡಬಹುದು. ಇಲ್ಲಿ ಕಾಮಗಾರಿಗಳನ್ನು ಮಾಡುವುದಕ್ಕೆ ಈ ತರಹದ ಸಮಸ್ಯೆಗಳಿವೆ. ಇವತ್ತು ನಾವು ದಿವಂಗತ ದೇವರಾಜ ಅರಸ್ ರವರನ್ನು ಇಲ್ಲಿ ನೆನಸಬೇಕಾಗುತ್ತದೆ. ಯಾವುದೇ ಕೇಂದ್ರ ಸರ್ಕಾರಕ್ಕೆ ಅಥವಾ ಕೇಂದ್ರದ ಕಾನೂನಿಗೆ ಅವರು care ಮಾಡದೆ ನೀರಾವರಿ ಯೋಜನೆಗಳಿಗೆ ನಮ್ಮ ರಾಜ್ಯ ಸರ್ಕಾರದ ಬೊಕ್ಕಸದಿಂದ ಹಣ ಹಂಚಿಕೆ ಮಾಡಿ ಕೆರೆಯಿಂದ ಹಿಡಿದು ದೊಡ್ಡ ದೊಡ್ಡ major irrigation ವರೆಗೆ ಅವತ್ತು ಯೋಜನೆಗಳನ್ನು ಅನುಷ್ಠಾನ ಗೊಳಿಸಿದರು. ಇವತ್ತು ಕೂಡ ನಾವು ಯಾರ ಮೇಲೂ ಅವಲಂಬಿತ

ವಾಗದೆ, ರಾಜ್ಯದ ಬೊಕ್ಕಸದಿಂದಲೆ ಹಣ ಹೊಂದಿಸಿಕೊಂಡು, ಕಾಮಗಾರಿಗಳನ್ನು ಅನುಷ್ಠಾನಗೊಳಿಸಬೇಕೆಂದು ನಾನು ವಿನಂತಿ ಮಾಡುತ್ತೇನೆ. ತಾವು ನಮಗೆ ಅನೇಕ ಕಾರ್ಯಕ್ರಮಗಳನ್ನು ಕೊಡುತ್ತಾ ಬಂದಿದ್ದೀರಿ.

ದಂಡಾವತಿಗೆ ವಿಶೇಷವಾಗಿ ೨೦೦ ಕೋಟಿ ರೂಪಾಯಿಗಳನ್ನು ತಾವು ಇದರಲ್ಲಿ ಪ್ರಸ್ತಾಪ ಮಾಡಿದ್ದಿರಿ. ೨೦೦ ಕೋಟಿ ರೂಪಾಯಿಗಳಲ್ಲಿ ನಮ್ಮ ಸೋರಬ ತಾಲ್ಲೂಕಿಗೆ ೨೫ ಕೋಟಿ ರೂಪಾಯಿಗಳನ್ನು ಮಂಜೂರಾತಿ ಮಾಡಿದ್ದಿರಿ ಎಂಬುದಿದೆ. ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದಿಷ್ಟ, ಏತಕ್ಕೆ ತಾವು ಎಷ್ಟು ಆತುರದಿಂದ ಕಾರ್ಯಕ್ರಮಗಳನ್ನು ಬಜೆಟ್‌ನಲ್ಲಿ ಹಾಕತಕ್ಕಂತಹ ಪ್ರಸಂಗಗಳನ್ನು ಮಾಡುತ್ತಿರೊ ನಮಗೆ ಗೊತ್ತಿಲ್ಲ. ಏಕೆಂದರೆ, ೧೯೭೪ ನೇ ಸಾಲಿನಲ್ಲಿ ಇದೆಲ್ಲವು ಕೂಡ ಬಂದಿತ್ತು. ೧೯೮೪ ರಲ್ಲಿ ಇದೆಲ್ಲವು ಕೂಡ ಸರ್ವೆ ಆಗಿತ್ತು, ೧೯೯೦ ರಲ್ಲಿ ಸರ್ವೇ ಆಗಿಬಿಟ್ಟು ಛೀಫ್ ಇಂಜಿನಿಯರ್ ಇದನ್ನು ಮಾಡುವುದಕ್ಕೆ ಬರುವುದಿಲ್ಲ, ಫೀಸಿಬಿಲಿಟಿ ಇಲ್ಲ, ಏಕೆಂದರೆ ಕ್ಯಾಚ್ಮೆಂಟ್ ಶರಿಯವಲ್ಲ, ೨೦೦-೩೦೦ ಫೀಟ್ ಲೂಸ್ ಸಾಯಿಲ್ ಇದೆ, ಇದಕ್ಕೆ ಫೌಂಡೇಶನ್ ಸಿಗುವುದಿಲ್ಲ, ಇಲ್ಲಿ ಬಹಳಷ್ಟು ಅನಾಹುತಗಳಾಗುತ್ತದೆ ಎಂದು ಅವರ ರಿಪೋರ್ಟ್ ಕೊಟ್ಟಿದ್ದರೂ ತಾವು ತಮ್ಮ ಆಯವ್ಯಯದಲ್ಲಿ ಯಾವುದೇ ಮಾಹಿತಿ ಇಲ್ಲದಂತೆ ೨೦೦ ಕೋಟಿ ರೂಪಾಯಿಗಳ ಪ್ರಸ್ತಾಪ ಮಾಡಿದ್ದಿರಿ. ನಾನು ಡಂಡಾವತಿ ಮುಂದುಗಡೆ ಇರುವವರಿಗೆ ನೀರಾವರಿ ಮಾಡುವುದಕ್ಕೆ ಈಗಾಗಲೇ ಕಾರ್ಯಕ್ರಮಗಳನ್ನು ಮಾಡಲಾಗಿದೆ. ತಾವೇನು ೨೦೦ ಕೋಟಿ ರೂಪಾಯಿಗಳನ್ನು ಕೊಡುತ್ತಿರಿ, ನಮಗೆ ೨೦೦ ಕೋಟಿ ರೂಪಾಯಿಗಳು ಬೇಡ. ೧೨೫ ಕೋಟಿ ರೂಆಯಿಗಳನ್ನು ಕೊಡಿ. ಸೊರಬ ತಾಲ್ಲೂಕಿನ ೯೫% ನೀರಾವರಿ ಇದ್ಯಾವುದು ಯೋಜನೆ ಇಲ್ಲದಂತೆ, ರೈತರ ಯಾವುದೇ ಒಂದು ಇಂಚು ಜನೀನು ಮುಳುಗಡೆಯಾಗದಂತೆ ನಾವು ನೀರಾವರಿಯನ್ನು ಮಾಡುತ್ತೇವೆ. ಈಗಾಗಲೇ ನಾವು ಹತ್ತು -ಹನ್ನೆರಡು ವರ್ಷಗಳಿಂದ ಕಾರ್ಯಕ್ರಮಗಳನ್ನು ಮಾಡಿಟ್ಟಿದೇವೆ. ಮುಡಿ ಏತ ನೀರಾವರಿ ಇರಬಹುದು, ಮುಗುರಿ ಏತ ನೀರಾವರಿ ಇರಬಹುದು, ಚಾನಲ್ಗಳಿರಬಹುದು, ದಂಡಾವತಿ ಇರಬಹುದು.

ಶ್ರೀ ಬಿ.ಎಸ್.ಯಡಿಯೂರಪ್ಪ [ಉಪ ಮುಖ್ಯಮಂತ್ರಿ] : ಬಹಳ ಮಹತ್ವವಾದ ವಿಷಯವನ್ನು ತಾವು ಪ್ರಸ್ತಾಪ ಮಾಡುತ್ತಿದ್ದಿರಿ ; ಉತ್ತರ ಕೊಡುವ ಸಮಯದಲ್ಲಿ ಉತ್ತರವನ್ನು ಕೊಡುತ್ತೇನೆ. ದಂಡಾವತಿ ಯೋಜನೆ ಬಹಳ ವರ್ಷಗಳಿಂದ ನೆನೆಗುದಿಗೆ ಬಿದ್ದಿದೆ. ದಂಡಾವತಿ ಯೋಜನೆಯನ್ನು, ನಾನು ವಿಧಾನಸಭೆಗೆ \ಬರುವುದಕ್ಕಿಂತ ಮುಂಚೆ, ಇಲ್ಲಿ ವಿಧಾನ ಸೌಧದಲಿರುವ ಮುಖ್ಯಮಂತ್ರಿಗಳ ಕಚೇರಿಯ ಮುಂದೆ ತಯಾರಾದ ದೊಡ್ಡ ಯೋಜನೆಯನ್ನು ಬಂದು ಹೋಗುವವರು ನೋಡುವುದಕ್ಕೆ ಇಟ್ಟಿದ್ದರು. ಯಾವುದೋ ಕಾರಣಕ್ಕೆ ಅದು ಮುಂದಕ್ಕೆ ಹೋಯಿತು. ತಾವು, ೧೨೫ ಕೋಟಿ ರೂಪಾಯಿಗಳನ್ನು ಕೊಡಿ, ಸೊರಬ ತಾಲ್ಲೂಕನ್ನು ನೀರಾವರಿ ಮಾಡುತ್ತೇನೆಂದು ಹೇಳಿದಿರಿ. ನೀವೇ ನೀರಾವರಿ ಸಚಿವರಾಗಿದದಿರಿ. ನಮ್ಮ ಶಿಕಾರಿ ಪುರ ತಾಲ್ಲೂಕಿನ ಕಲ್ಲು ಒಡ್ಡರು, ಯಾವುದೊ ಒಂದು ಹತ್ತು ಹಳ್ಳಿಗಳಿಗೆ ತೊಂದರೆಯಾಧರೆ ನೂರು ಹಳ್ಳಿಗಳಿಗೆ. ಅನುಕೂಲ ವಾಗುವುದಾದರೆ ಅದನ್ನು ಮಾಡಬೇಕಾಗುತ್ತದೆ. ಅದೆ ರೀತಿ ಈ ಯೋಜನೆಯ ಬಗ್ಗೆಯ ಕೂಡ ನಾನು ನಿಮ್ಮ ಜೊತೆಯಲ್ಲಿ ಮಾತ ನಾಡುತ್ತೇನೆ. ಆದುದರಿಂದ ಮೂರಕ್ಕೆ ತೊಂಬೆತ್ತು ಜನ ರೈತರಿಗೆ ಅನುಕೂಲ ವಾಗುವ ಯೋಜನೆ ಬೇಕೆನ್ನುವುದಾದರೆ ತರಾತುರಿಯಲ್ಲಿ ಆ ಕೆಲಸವನ್ನು ಕೈಗೊಳ್ಳೋಣ, ಒಳ್ಳೆಯದೇನು, ಕೆಟ್ಟದೇನೆಂಬುದನ್ನು ಸರ್ವೆ ಮಾಡಿಸೋಣ. ನನ್ನ ಆದ್ಯತೆ ಅದು ಶಿವಮೊಗ್ಗ ಜಿಲ್ಲೆಯ ಬೇರೆ ಬೇರೆ ಕಾರಣಕ್ಕೋಸ್ಕರ ಶಿಕಾರಿಪುರದ ತಾಲ್ಲೂಕಿನ ಕಲ್ಲೊಡ್ಡು ಇರಬಹುದು, ನಿಮ್ಮ ಯೋಜನೆ ಇರಬಹುದು, ಇದನ್ನು ಮಾಡಬೇಕೆನ್ನುವ ಹಂಬಲವಿಟ್ಟುಕೊಂಡಿದ್ದೇನೆ. ಆದುದರಿಂದ ರೈತರಿಗೆ ಅನುಕೂಲವಾಗುವುದಾದರೆ ಮಾಡೋಣ, ಇಲ್ಲವೆಂದರೆ ನಾವು ನೀವು ಚರ್ಚೆ ಮಾಡೋಣ. ಆದರೆ, ನನಗನಿಸುತ್ತದೆ, ಆ ಯೋಜನೆ ನೂರಕ್ಕೆ ನೂರು ಈ ಯೋಜನೆ ಫಲಪ್ರದವಾಗುತ್ತದೆ, ರೈತರಿಗೆ ಅನುಕೂಲವಾಗುತ್ತದೆ. ಬೇರೆ ಬೇರೆ ಕಾರಣಕ್ಕೆ ಕೈಬಿಟ್ಟಿತು ಈ ಸಾರಿ ಮಾಡಬೇಕೆನ್ನುವ ರಾಜಕೀಯ ಇಚ್ಛಾಶಕ್ತಿಯನ್ನು ಇಟ್ಟುಕೊಂಡು ಆ ಪ್ರಸ್ತಾವನೆಯನ್ನು ಕೊಟ್ಟಿದ್ದೇನೆ.

ಶ್ರೀ ಎಸ್.ಕುಮಾರ್ ಬಂಗಾರಪ್ಪ : ರಾಜಕೀಯ ಇಚ್ಛಾಶಕ್ತಿಯ ಮೇಲೆಯೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದಾದರೆ, ಇದು ರಾಜಕೀಯ ಆಗುತ್ತಾ ಹೋಗುತ್ತದೆಯೆ ಹೊರತು, ಇದು ಅಭಿವೃದ್ಧಿ ನೀರಾವರಿ ಯಾಗುವುದಕ್ಕೆ ಸಾಧ್ಯವಾಗುವುದಿಲ್ಲ. ತಾವು ಈ ಕಾರ್ಯಕ್ರಮವನ್ನು ರಾಜಕೀಯ ದೃಷ್ಟಿಯಿಂದ ನೋಡತಕ್ಕಂತಹ ಅವಶ್ಯಕತೆ ಇಲ್ಲ. ಕಂಪ್ಲೀಟ್ ಆಗಿ ಚೀಫ್ ಎಂಜಿನಿಯರ್ ರೆಕಾರ್ಡ್ ಮಾಡಿ ರಿಜೆಕ್ಟ್ ಮಾಡಿ, ಇದು ನಾಟ್ ಫೀಸಿಬಲ್ ಎಂದು ಹೇಳಿರತಕ್ಕಂತಹದ್ದನ್ನು ಈ ರೀತಿಯಾಗಿ ಆಯವ್ಯಯದಲ್ಲಿ ಮಂಡನೆ ಮಾಡುತ್ತೇವೆನ್ನುವುದಾದರೆ, ನೀವು ಹೇಳಬೇಕು, ನಾವು ಇದಕ್ಕಿಂತ ಮುಂಚೆ ಸುಮಾರು ೨೫೦ ಕೋಟಿ ರೂಪಾಯಿಗಳಿಗೆ ನಮ್ಮ ನಮ್ಮ ಜಿಲ್ಲೆಯ ತಾಲ್ಲೂಕಿನ ಕಾರ್ಯಕ್ರಮಗಳನ್ನು ಕೊಟ್ಟಿದ್ದೊ ಅದಕ್ಕೆ ಏತಕ್ಕೆ ಹಣ ಕೊಡಲಿಲ್ಲ.

ಅಧ್ಯಕ್ಷರು : ಒಬ್ಬ ಚೀಫ್ ಎಂಜಿನಿಯರ್ ಫೀಸಿಬಲ್ ಎನ್ನುತ್ತಾರೆ ; ಇನ್ನೊಬ್ಬ ಚೀಫ್ ಎಂಜಿನಿಯರ್ ನಾಟ್ ಫಿಸೀಬಲ್ ಎನ್ನುತ್ತಾರೆ, ಅವರು ಎಂಜಿನಿಯರಿಂಗ್ ಓದಿರುತ್ತಾರೆ. ಇವರೂ ಇಂಜಿನಿಯರಿಂಗ್ ಓದಿರುತ್ತಾರೆ.

ಶ್ರೀ ಎಸ್.ಕುಮಾರ್ ಬಂಗಾರಪ್ಪ : ಒಬ್ಬ Engineer, if he tells and if it is not feasible ಎಂದರೆ, that means that Engineer is not fit for the Department. He is not fit for the post. If he says ; a project is not feasible, that means you have to take action against that Engineer who has not giving proper directions to the Government and to the people.ಅಧ್ಯಕ್ಷರೆ, ಯಾವುದಾದರು ಒಂದು ತೀರ್ಮಾನ ಆಗಬೇಕಲ್ಲ ? ಒಂದು ಇಂಜಿನಿಯರ್ ಅದವರು ತಪ್ಪು ಮಾಡಿದ್ದಾರೆಂದು ಹೇಳಬೇಕು. ಇಲ್ಲವೆಂದರೆ, ಜನ ಈ ನೀರಾವರಿ ಯೋಜನೆಯನ್ನು ವಿರೋಧ ಮಾಡತಕ್ಕಂತಹದ್ದು, ಅಥವಾ ದಂಡಾವತಿ ಮುಂದಿರುವವರು ನೀರಾವರಿ ಕೇಳತಕ್ಕಂತಹವರಿಗೆ ನಾವು ಯಾವ ರೀತಿಯಾದ ಸೂಕ್ತ ಕಾಯಕ್ರಮವನ್ನು ಹಾಕಿಕೊಳ್ಳಬೇಕು ? ಈ ಕಾರ್ಯಕ್ರಮಕ್ಕೆಂದೆ, ಅಥವಾ ಈ ಭಾಗದ

ರೈತರಿಗೆಂದೆ ನೀರಾವರಿ ಯೋಜನೆ ಮಾಡುವಾಗ ಪ್ರಧಾನ ಮಂತ್ರಿಗಳ ಸಂಕಷ್ಟ ನಿಧಿಯಲ್ಲಿ ಯಾವ ಹಣಕಸು ಇದೆ, ಅದಕ್ಕೆ ೧೪ ಕೋಟಿ ರೂಪಾಯಿಗಳನ್ನು ನಾವು ಇದರಲ್ಲೆ ತೆಗೆದು ಇಟ್ಟಿದ್ದೇವೆ. ಇದರಲ್ಲೆ ತೆಗೆದು ಇಟ್ಟುಬಿಟ್ಟು ಇದೆ ರೈತರಿಗೆ ನೀರಾವರಿ ಯೋಜನೆ ಮಾಡಬೇಕೆಂದು, ೧೪,೦೦೦ ಎಕರೆಗೆ ನೀರಾವರಿ ಮಾಡಬೇಕೆಂದು ಮಾಡಿದ್ದೇವೆ. ಮಾಡಿದ ಮೇಲೂ ಈ ತರಹದ್ದೆ ಕಾರ್ಯಕ್ರಮಗಳನ್ನು ಮಾಡುತ್ತೇವೆನ್ನುವುದಾದರೆ, ಇದು ಯಾವ ರೀತಿಯಾಗಿ ಹೋಗಿ ಮುಂದಕ್ಕೆ ನಿಲ್ಲುತ್ತದೆಯೊ ?

ಶ್ರೀ ಬಿ.ಎಸ್.ಯಡಿಯೂರಪ್ಪ : ಒಂದು ದಿವಸ ನಾನು ನಿಮ್ಮನ್ನು ಕರೆದು ನಿಮ್ಮೊಡನೆ ಸಮಾಲೋಚನೆ ಮಾಡಿ, ಅಧಿಕಾರಿಗಳನ್ನು ಕೂರಿಸಿಕೊಂಡು ಮುಂದೇನು ಮಾಡಬೇಕೆನ್ನುವುದನ್ನು ಯೋಚನೆ ಮಾಡೋಣ ; ಮುಂದಿನ ವಿಷಯಕ್ಕೆ ಹೋಗಿ.

ಶ್ರೀ ಎಸ್.ಕುಮಾರ್ ಬಂಗಾರಪ್ಪ : ಮಾನ್ಯ ಉಪ ಮುಖ್ಯಮಂತ್ರಿಗಳು ಎಲ್ಲರನ್ನು ನಾನು ಕೂರಿಸಿ ಮಾತನಾಡಿ ನಾನು ಮುಂದಿನ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಹೇಳಿರುವುದು ಬಹಳ ಸಂತೋಷ. ಆದರೆ, ಅದೇ ಕೆಲಸವನ್ನು ಬಜೆಟ್ ಮಾಡುವುದಕ್ಕಿಂತ ಮುಂಚೆಯೆ ಮಾಡಬೇಕಾಗಿತ್ತು. ಏಕೆಂದರೆ ಬಜೆಟ್ ನಲ್ಲಿ ಬಂದಿರುವುದೆ ಗೊಂದಲಕ್ಕೆ ಕಾರಣವಾಗಿದೆ. ಇವಾಗ ಸೋಮವಾರ ಒಂದು ಸ್ಟ್ರೈಕ್ ಮಾಡುತ್ತಿದ್ದಾರೆ. ಈ ಗೊಂದಲಗಳಿಗೆ ಹೋಗತಕ್ಕಂತಹ ಅಗತ್ಯಗಳಿಲ್ಲ. ಇದರ ನಡುವೆ ಅನಿವಾರ್ಯವಾಗಿ ಪ್ರಜೆಕ್ಟ್‌ಗೆ ಪ್ರಾಜೆಕ್ಟ್ ಗೆ ೧೯ ಹಳ್ಳಿಗಳು ಬರುತ್ತವೆ. ಆದರೆ ಅಲ್ಲಿ ಪ್ರಂಟ್ ಮಾಡಿಕೊಂಡು ಬಿಟ್ಟು ೪೭ ಹಳ್ಳಿಗಳಿಗೂ ಗೊಂದಲ ಹಚ್ಚಿ, ಎಲ್ಲರನ್ನು ಆತಂಕದಲ್ಲಿಟ್ಟುಬಿಟ್ಟು, ಯಾರು ಅಲ್ಲಿ ಜಮೀನನ್ನು ಮಾರುವಂತಿಲ್ಲ. ಯಾರು ನೀರಾವರಿ ಮಾಡುವಂತಿಲ್ಲ ಎನ್ನುವ ಲೆಕ್ಕದಲ್ಲಿ ಬರುತ್ತದೆ. ಈಗ ಕ್ಯಾಚ್ ಮೆಂಟು ಕೂಡ ಇಲ್ಲ. ಮಳೆಯ ಪ್ರಮಾಣವೆ ಇಲ್ಲ. ಆಗಲೇ ಮಳೆಯ ಪ್ರಮಾಣವಿಲ್ಲವೆಂದು, ಕ್ಯಾಚ್ ಮೆಂಟ್ ಇಲ್ಲವೆಂದು, ಫೀಸಿಬಿಲಿಟಿ ಇಲ್ಲವೆಂದು ಬಿಟ್ಟಿರತಕ್ಕಂಹದ್ದು. ಈಗ ಮಳೆ ತುಂಬಾ ಕಡಿಮೆಯಾಗಿರತಕ್ಕಂತಹ ಪ್ರಮಾಣದಲ್ಲಿ ನಾವು ನೀರಾವರಿ

ಯೋಜನೆಯನ್ನು ಮಾಡುತ್ತೇವೆನ್ನುವುದಾದರೆ, ತಾವೇನು ಈಗ ನಾವೆಲ್ಲಾ ಕುಳಿತುಬಿಟ್ಟು ಮಾತನಾಡೋಣವೆಂದು ಒಂದು ಆಶ್ವಾಸನೆಯನ್ನು ಕೊಟ್ಟಿದ್ದಿರಿ, ಇದರ ಬಗ್ಗೆ ನಾನು ಸ್ವಾಗತವನ್ನು ಕೂಡ ಮಾಡುತ್ತೇನೆ. ಆದರೆ ಈ ತರಹದ ಕಾರ್ಯಕ್ರಮವನ್ನು ಮಾಡಬೇಕಾದರೆ, ನಾವು ಅನೇಕ ಕಾರ್ಯಕ್ರಮಗಳನ್ನು ಕೊಟ್ಟಿದ್ದೇವೆ ಸುಮಾರು ೨೨-೨೩ ಬ್ಯಾರೇಜ್ ಗಳನ್ನು ಕೊಟ್ಟಿದ್ದೇವೆ. ಇದೆ ನೀವು ಅಂಬ್ಳಿಗೊಳ್ಳ ಪ್ರಾಜೆಕ್ಟ್ ಮಾಡಬೆಕಾದರೆ, ಗೋಡಬಳೆ ಗೇಟ್ ಅನ್ನು ಹಾಕಬೇಕಾದರೆ, ನಾವು ತಮ್ಮದಕ್ಕೆ ನಾವೇ ಕರೆದುಕೊಂಡು ಹೋಗಿಬಿಟ್ಟು ಗೋಡಬಳೆ ಗೇಟ್ ಅನ್ನು ಹಾಕಿದ್ದೇವೆ. First time in Karnataka. ಎಲ್ಲು ಕೂಡ ಆ ಮೆಕಾನಿಸಂ ನಲ್ಲಿ ಗೋಡಬಳೆ ಗೇಟ್ ಅನ್ನು ಯಾರು ಕೂಡ ಮಾಡಿರಲಿಲ್ಲ. ನಾನೆ ಸಣ್ಣ ನೀರಾವರಿ ಸಚಿವರಾಗಿದ್ದಾಗ, ತಮ್ಮ ಜೊತೆಯಲ್ಲಿಯೆ ಹೋಗಿ ಆ ಕಾರ್ಯಕ್ರಮಗಳನ್ನು ಮಾಡಿ ಎಂಪಿ ಸಾಹೇಬರು, ನಾವು ನೀವು, ಆಗೀನ ಶಾಸಕರಾದ ಮಹಾಲಿಂಗಪ್ಪನವರೆಲ್ಲಾ ಸೇರಿ ಮಾಡತಕ್ಕಂತಹ ಪ್ರಸಂಗ ಕೂಡ ಬಂತು. ಹಾಗಾಗಿ ನಾವು ಕಾರ್ಯಕ್ರಮವನ್ನು ಮಾಡಬೇಕಾದರೆ, ಇದರ ಸಾಧಕ ಬಾಧಕಗಳನ್ನು ನೋಡಿ ಮಾಡತಕ್ಕಂತಹದ್ದು ಬಹಳವಿದೆ ನನ್ನ ಮಾತು. ವಿಶೇಷವಾಗಿ ಸಣ್ಣ ನೀರಾವರಿ ಇಲಾಖೆಗೆ ಯಾವುದು ಡಾರ್ಕ್ ಮತ್ತು ಗ್ರೇ ಏರಿಯಾ ಎಂದು ನಾವು ಕರ್ನಾಟಕದಾದ್ಯಂತ ಕಾರ್ಯಕ್ರಮ ಗಳನ್ನು ಹಮ್ಮಿಕೊಂಡಿದ್ದೇವೆ. ಅದಕ್ಕೆ ವಿಶೇಷವಾದ ಒತ್ತು ಕೊಡತಕ್ಕಂತಹ ಅವಶ್ಯಕತೆ ಇದೆ. ಅದು ಬೀದರ್, ರಾಯಚೂರು, ಚಿತ್ರದುರ್ಗ, ಅಥವಾ ಕೋಲಾರ, ತುಮಕೂರು ಜಿಲ್ಲೆ ಇರಬಹುದು, ಇಲ್ಲೆಲ್ಲಾ ಅಂಡರ್ ಗ್ರಂಡ್ ವಾಟರ್ ಕಂಪ್ಲೀಟ್ ಆಗಿ ಹೋಗುತ್ತಿದೆ. ಮಲೆನಾಡು ಭಾಗಕ್ಕೆ ತೊಂದರೆ ಯಾಗುತ್ತಿದೆ. ಮನೆನಾಡು ಭಾಗದಲ್ಲಿ ೨೦-೩೦ ಅಡಿ ನಾವು ಬಾವಿಯನ್ನು ತೆಗೆದುಕೊಂಡು ನೀರನ್ನು ತೆಗೆದುಕೊಳ್ಳದೆ ಇರತಕ್ಕಂತಹವರು, ಈಗಾಗಲೆ ೨೫೦-೪೦೦ ಅಡಿಯವರೆಗೆ ಬೋರ್‌ವೆಲ್ ಕೊರೆದರು ನೀರು ಬರದಿರುವ ಪರಿಸ್ಥಿತಿ ಇದೆ. ನಮ್ಮ ಕಾಡುಗಳು, ಪ್ರತಿ ಸಾರಿ ಕೂಡ ನಮ್ಮ ವಾತಾವರಣದ ಮೇಲೆ ಎರಡನೆ ಬೆಳೆಯನ್ನು ನಾವು ತೆಗೆಯುತ್ತಿದ್ದೆವು. ನಮಗೆ ಜೌಳು ನೀರು ಅಂದರೆ, ಸಿಪೇಜ್ ವಾಟರ್ ಏನು ಬರುತ್ತಿತ್ತು, ಆ

ನೀರು ನಮಗೆ ೧೫ ದಿವಸಗಳಿಗಿಂತ ಹೆಚ್ಚಿಗೆ ಬರುವುದಿಲ್ಲ. ಇನ್ನು ಕೋಲಾರ ಪರಿಸ್ಥಿತಿ ಏನಾಗಿರಬಹುದು ಅಥವಾ ತುಮಕೂರು, ಚಿತ್ರದುರ್ಗಾ ಜಿಲ್ಲೆಗಳ ಪರಿಸ್ಥಿತಿ ಏನಾಗಿರಬಹುದು ಎಂಬುದನ್ನು ಸ್ವಾಭಾವಿಕವಾಗಿ ಅರ್ಥ ಮಾಡಿಕೊಳ್ಳಬಹುದು. ಹೀಗಾಗಿ ನಾವು ಇದರ ಬಗ್ಗೆ .ಹೆಚ್ಚಿನ ಒತ್ತನ್ನು ಕೊಡತಕ್ಕಂತಹ ಅವಶ್ಯಕತೆ ಇದೆ. ಇನ್ನು ಕರಾವಳಿ ಭಾಗಕ್ಕೆ ಸಂಬಂಧಿಸಿ ದಂತೆ ಇಲ್ಲಿರುವ ಆ ಭಾಗದ ಅನೇಕ ಶಾಸಕರು ತಮ್ಮ ಹತ್ತಿರ ಬಂದು ಮನವಿಯನ್ನು ಸಲ್ಲಿಸಿದರು. ಪಶ್ಚಿಮ ವಾಹಿನಿ ಯೋಜನೆ, ಸುಮಾರು ೧೪೦೦ ಬ್ಯಾರೇಜ್‌ಗಳು ೧೪೦೦ ಸ್ಣ ಸಣ್ಣವಕ್ಕೆ ನಮ್ಮ ಬಂಗಳೂರಿನಿಂದ ಕಾರವಾರದವರೆಗು ಒಂದು ಪ್ರಾಜೆಕ್ಟ್ ಮಾಡಿಟ್ಟಿದ್ದೇವೆ. ಎಲ್ಲವು ಸಣ್ಣ ಬ್ಯಾರೇಜ್‌ಗಳು ನಾವು ಎಲ್ಲರ ಸಭೆಯನ್ನು ಕರೆದು ಮಾಡಿರುವ ಒಂದು ಪ್ರಾಜೆಕ್ಟ್.

ಶ್ರೀ ಕೆ.ಜಯಪ್ರಕಾಶ ಹೆಗ್ಡೆ : ಮಾನ್ಯ ಬಂಗಾರಪ್ಪನವರೇ, ಬಹಳ ಒಳ್ಳೆಯ ಕಾರ್ಯಕ್ರಮವನ್ನು ಮಾಡಿದ್ದರು. ಎಲ್ಲಾ ಪ್ರೋಗ್ರಾಂ ಎಲ್ಲಾ ಪ್ರಾಜೆಕ್ಟ್ ರಿಪೋರ್ಟ್ಸ್ ರೆಡಿ ಇದೆ. ಅದು ಕಾರ್ಯರೂಪಕ್ಕೆ ಬರಲಿಲ್ಲ. ಸರ್ಕಾರ ಬದಲಾದ ಕೂಡಲೆ ಕಾರ್ಯಕ್ರಮ ಬದಲಾಗಬಾರದೆಂಬುದಕ್ಕೆ ಅದೊಂದು ನಿದರ್ಶನ. ನಮ್ಮಲ್ಲಿ ಮೇಜರ್ ಇರಿಗೇಷನ್ ಯಾವುದು ಇಲ್ಲ. ಮೈನರ್ ಇರಿಗೇಷನ್ ನಲ್ಲಿ ಪಶ್ಚಿಮವಾಹಿನಿ ಕಾರ್ಯಕ್ರಮವನ್ನು ಮಡಿ ಎಲ್ಲಾ ಉಪ್ಪು ನೀರು ತಡೆಯಲು ಅಣೆಕಟ್ಟುಗಳನ್ನು ಕಟ್ಟಿದರೆ ನಮ್ಮ ಸಮಸ್ಯೆ ಪರಿಹಾರವಾಗುತ್ತದೆ. ಈ ಮೇಜರ್ ಇರಿಗೇಷನ್ ಗೆ ಬೇಕಾಗುವಷ್ಟು ಹಣ ಬೇಕಾಗಿಲ್ಲ. ೨೦೦-೩೦೦ ಕೋಟಿ ರೂಪಾಯಿಗಳಲ್ಲಿ ಇಡೀ ಕಾರವಾರದಿಂದ ಉಲ್ಲಾಳದವರೆಗೆ ಮೂರು ಜಿಲ್ಲೆಯಲ್ಲಿ ಮಾಡಬಹುದು.

ಶ್ರೀ ಎಸ್.ಕುಮಾರ್ ಬಂಗಾರಪ್ಪ : ಬಹಳ ಉತ್ತಮವಾಗಿರಕ್ಕಂತಹ ಪರಿಸರಕ್ಕೆ ಹಾನಿಯಾಗದಿರತಕ್ಕಂಹದ್ದು, ಯಾವುದು ಕೂಡ ಮುಳುಗಡೆ ಯಾಗದಿರತಕ್ಕಂತಗದ್ದು, ಎಲ್ಲದಕ್ಕು within six months to one year ಆಗುತ್ತದೆ. ಪೂರ್ಣ, ಮಂಗಳೂರಿನಿಂದ ಕಾರವಾರದವರೆಗೆ, ಕುಡಿಯುವ ನೀರಿನ ಸಮಸ್ಯೆಯಾಗುವುದಿಲ್ಲ, ರೈತರಿಗೆ ನೀರಾವರಿ ಸಮಸ್ಯೆಯಾಗುವುದಿಲ್ಲ.

ಪರಿಸರದ ಯಾವ ಗೊಂದಲಗಳು ಬರುವುದಿಲ್ಲ. ಎಲ್ಲು ಕೂಡ ಯಾವುದೆ ರೀತಿಯ ಸಮಸ್ಯೆ ಇಲ್ಲದಿರುವ ಒಂದು ಯೋಜನೆ ಪಶ್ಚಿಮವಾಹಿನಿ. ಸುಮಾರು ೨೦೦೦ TMC ಅಷ್ಟು ನೀರು, ಬರಿ ಮಳೆಯಿಂದ ಕರಾವಳಿಯ ಪಶ್ಚಿಮ ಭಾಗಕ್ಕೆ ಬೀಳುತ್ತದೆ. ೨೩೦೦ TMC ಅಷ್ಟು ನೀರು ಪೂರ್ವ ಭಾಗಕ್ಕೆ ಬೀಳುತ್ತದೆ. ೨೩೦೦ TMC ಅಷ್ಟು ನೀರೇನು ಬೀಳುತ್ತದೆ, ಅದು ಕಾವೇರಿ ಬೇಸಿನ್, ಕೃಷ್ಣಾ ಬೇಸಿಸ್, ಗೋದಾವರಿ ಬೇಸಿನ್ ಆಮೇಲೆ ಈ ಕಡೆಯ ಮೇಲಿನ ಪ್ರದೇಶಕ್ಕೆ ಬೀಳುತ್ತದೆ. ಈ ನೀರಿಗೆ ನಾವು ಜಗಳ ಮಾಡುತ್ತಲೇ ಇದ್ದೇವೆ. ಆದರೆ ೨೦೦೦ TMCಅಷ್ಟು ನೀರೇನು ಬೀಳುತ್ತದೆ, ಆ ಯಾವ ನೀರನ್ನು ನಾವು ಹಿಡಿಯುವುದಕ್ಕಾಗುವುದಿಲ್ಲ. ಆದರೆ ೪೩ TMC ಅಷ್ಟು ನೀರನ್ನು ಈ ಪ್ರಾಜೆಕ್ಟ್ ನಿಂದ ಹಿಡಿಯುವುದಕ್ಕೆ ಸಾಧ್ಯವಿದೆ. ಅಲ್ಲಿಂದ ಸಂಪೂರ್ಣವಾಗಿ ಕರಾವಳಿ ಭಾಗದ ಎಲ್ಲಾ ಗ್ರೌಂಡ್ ವಾಟರ್ ಕೂಡ ರಿಚಾರ್ಜ್ ಮಾಡಬಹುದು. ನಾನು ಮಾನ್ಯ ಉಪಮುಖ್ಯಮಂತ್ರಿ ಗಳಲ್ಲಿ ಬಹಳ ವಿನಂತಿ ಮಾಡಿಕೊಳ್ಳುತ್ತೇನೆ, ಆ ಪ್ರಾಜೆಕ್ಟ್‌ಗೆ ಫಸ್ಟ್ ಫೇಸ್ ನಲ್ಲಿ ಮಿನಿಮಂ ೧೦೦ ಕೋಟಿ ರೂಪಾಯಿಗಳನ್ನು ಕೊಡಿ.

ಅಲ್ಲಿರತಕ್ಕಂತಹ ಕರಾವಳಿ ಭಾಗದ ಎಲ್ಲ ರೈತರಿಗೂ ಅನುಕೂಲ ವಾಗುತ್ತದೆ. ಕೊಳವೆ ಬಾವಿಗಳಲ್ಲಿ ನೀರಿಲ್ಲ ನೀರಿಲ್ಲ ಎಂದು ಹೇಳಿ ನಾವು ಬರೀ ಕೊಳವೆ ಬಾವಿಗಳನ್ನೇ ತೆಗೆಸಿಕೊಂಡು ರಂದ್ರ ಮಾಡುತ್ತಿದದೇವೆ ಹೊರತು ನಮಗೆ ನೀರು ಸಿಗುವುದಿಲ್ಲ. ಮಂಗಳೂರಿನಲ್ಲಿ ಮೆಶಿನ್ ಕೆಟ್ಟು ಹೋಗಿದ್ದರಿಂದ ಇಡೀ ಮಂಗಳೂರು ೨-೩ ದಿನ ನೀರಿಲ್ಲದೆ ಒದ್ದಾಡಿತು. ಇನ್ನು ಕರಾವಳಿ ಭಾಗದಲ್ಲಿ complete ಆಗಿ ಪ್ರತಿ ಸಲ ಪ್ರತಿಯೊಂದು ಮಳೆಗಾಲದಲ್ಲಿ, ಒಂದೊಂದು ಸೀಸನ್‌ಗೆ ಒದ್ದಾಡುತ್ತಾರೆ. ದಯಮಾಡಿ ನಾನು ಮಾನ್ಯ ಉಪಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಪಶ್ಚಿಮ ವಾಹಿನಿಗೆ ೧೦೦ ಕೋಟಿ ರೂಪಾಯಿಗಳನ್ನು ದಯಮಾಡಿ ಕೊಡಿ. ಏಕೆಂದರೆ, it is such a wonderful project. ನಮ್ಮ ಮಾನ್ಯ ಜಯಪ್ರಕಾಶ್ ಹೆಗ್ಡೆಯವರೆ, ನಾನು ನಮ್ಮ ಮಾನ್ಯ ಉಪ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳಳುತ್ತೇನೆ, ೨೫೦ crores project, the entire area of Karavali will be irrigated. Not only that,

ಕುಡಿಯುವ ನೀರಿನ ಯಾವ ಸಮಸ್ಯೆಯೂ ಕರಾವಳಿ ಭಾಗಕ್ಕೆ ಬರುವುದಿಲ್ಲ. ಪರಸರದ ಯಾವ ಹಾನಿಯೂ ಇಲ್ಲ. ಆರು ತಿಂಗಳುಗಳಲ್ಲಿ ಒಂದು ವರ್ಷ ಈ project complete ಮುಗಿದು ಹೋಗುತ್ತದೆ. Rs. 256 crores for the entire project.

ಶ್ರೀ ಜಯಪ್ರಕಾಶ್ ಹೆಗ್ಡೆ ಕೆ : ಮಾನ್ಯ ಉಪ ಮುಖ್ಯಮಂತ್ರಿಗಳು ದಯವಿಟ್ಟು ಕೇಳಬೇಕು. ಕಮಿಟಿಯವರು ಬಂದಿದ್ದರು, ನಮ್ಮಲ್ಲಿ ಒಂದು ಉಪ್ಪು ನೀರಿನ ಅಣೆಕಟ್ಟು ನೀಲಾವರದಲ್ಲಿ ಮಾಡಿದ್ದೇವೆ. ಅದನ್ನು ನೋಡಿದ ಮೇಲೆ ನಬಾರ್ಡ್‌ನವರು ಅದಕ್ಕೆ finance ಮಾಡಲಿಕ್ಕೆ ಪ್ರಾರಂಭ ಮಾಡಿದ್ದಾರೆ. ಅದೊಂದು master piece. ನಿಮ್ಮ ಅಧಿಕಾರಿಗಳನ್ನು ಕರೆದು ತೋರಿಸಿ. ಪಶ್ಚಿಮ ಮುಖವಾಗಿ ಹರಿಯುವಂತಹ ಎಲ್ಲ ನದಿಗಳಿಗೆ ಅಣೆಕಟ್ಟುಗಳನ್ನು ಮಾಡಿದರೆ ಸಿಹಿ ನೀರು ಸಮುದ್ರಕ್ಕೆ ಹೋಗುವುದಿಲ್ಲ. ಉಪ್ಪು ನೀರು ಒಳಗಡೆ ಭಾಗಕ್ಕೆ ಬರುವುದಿಲ್ಲ. ಬಹಳ ಒಳ್ಳೆಯ ಒಂದು ಕಾರ್ಯಕ್ರಮ. ದಯವಿಟ್ಟು ಇದಕ್ಕೆ ಹೆಚ್ಚು ಹಣವನ್ನು ಕೊಡಬೇಕು.

ಶ್ರೀ ಕುಮಾರ್ ಬಂಗಾರಪ್ಪ : ಇದನ್ನು ಮಾಡಿ ಇಟ್ಟು ಸುಮಾರು ಆರೇಳು ವರ್ಷಗಳಾದವು. ಇದಕ್ಕೆ technical operations ಸ್ವಲ್ಪ ಬೇಕಾಗಿತ್ತು. ಆದರೆ ಅದಾದ ಮೇಲೆ ಸುಮಾರು ೧೦ ಕೋಟಿ ರೂಪಾಯಿಗಳನ್ನು ಮಧ್ಯದಲ್ಲಿಯೇ ರಿಲೀಸ್ ಮಾಡಿದೆವು. ಆದರೆ ಆ ಹಣಕಾಸನ್ನು ಖರ್ಚು ಮಾಡಲಿಲ್ಲ. ಹೋದ ವರ್ಷ ಕೂಡ ಸುಮಾರು ಒಂದು ಕೋಟಿ ರೂಪಾಯಿ, ಎರಡು ಕೋಟಿ ರೂಪಾಯಿಗಲನ್ನು ಕೊಟ್ಟ ಹಾಗೆ ಮಾಡಿ, ಸುಮ್ಮನೆ ಪಶ್ಚಿಮ ವಾಹಿನಿ ಪ್ರಾರಂಭ ಮಾಡಿದ್ದೇವೆ ಎನ್ನತಕ್ಕಂತಹ ವಾದದ ಮೇಲೆ ಮಾಡಿದರೇ ಹೊರತು ಆ ಕಾರ್ಯಕ್ರಮ ವನ್ನು ಅನುಷ್ಠಾನಕ್ಕೆ ತರಲಿಲ್ಲ. ಕರಾವಳಿ ಭಾಗದ ಎಲ್ಲಾ ಕುಡಿಯುವ ನೀರಿನ ಸಮಸ್ಯೆಗಳಿಗೆ ಇರುವ ಒಂದೇ ಒಂದು ಉತ್ತರ ಎಂದರೆ, ಪಶ್ಚಿಮ ವಾಹಿನಿಯ ಕಾರ್ಯಕ್ರಮವನ್ನು ಅನುಷ್ಠಾನ ಮಾಡುವುದು ಬಹಳ ಉತ್ತಮ. ರೈತರಿಗೂ ಮತ್ತು ನಾಗರಿಕ ಬಂಧುಗಳಿಗೂ ಎಲ್ಲ ಟೌನ್‌ಷಿಪ್‌ಗಳಿಗೂ ಅನುಕೂಲವಾಗುತ್ತದೆ ಎಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

ಇದಲ್ಲದೆ ನಮ್ಮ ಗ್ರಾಮೀಣ ಪ್ರದೇಶಕ್ಕೆ ಆಸ್ಪತ್ರೆಗಳನ್ನು ಒದಗಿಸುವ ಬಗ್ಗೆ ನಮ್ಮ ಮಾನ್ಯ ಎಸ್.ಎಸ್.ಪಾಟೀಲರು ಮಾನಾಡುವ ಸಂದರ್ಭದಲ್ಲಿ ಹೇಳಿದರು. ಕೇಂದ್ರ ಸರ್ಕಾರ ಮತ್ತು ರಾಜ್ಯ ಸಕಾರ ಜನಸಂಖ್ಯೆ ಆಧಾರದ ಮೇಲೆ ಮ್ಯಾಚಿಂಗ್ ಗ್ರ್ಯಾಂಟ್ ಮೇಲೆ ಆಸ್ಪತ್ರೆಗಳನ್ನು ಮಂಜೂರಾತಿ ಮಾಡುತ್ತಾರೆ. ಏಕೆಂದರೆ, we hav ealready reached the phase. ಯಾವುದೇ ಕಾರಣಕ್ಕೂ ನಮಗೆ ಹೊಸ ಆಸ್ಪತ್ರೆಗಳನ್ನು ಮಂಜೂರು ಮಾಡುವುದಿಲ್ಲ. We already crossed over our target. ಈಗ ಇರತಕ್ಕಂತಹ ಆಸ್ಪತ್ರೆಗಳು ಏನಿದೆ, ಅವುಗಳನ್ನು ಅಪ್ ಗ್ರೇಡ್ ಮಾಡುವುದಕ್ಕೆ ನಮಗೆ ಸವಲ್ಪ ಅನುಕೂಲ ಮಾಡಿಕೊಡಿ. ಉದಾಹರಣೆಗೆ ಆನಪಟ್ಟಿ ತಮಗೆ ಗೊತ್ತಿದೆ. ಎಷ್ಟು capacity ಇದೆ ಎಂದು ತಮಗೆ ಗೊತ್ತಿದೆ. ಸೊರಬ ಟೌನ್ನಿಗಿಂತಲೂ ಆನವಟ್ಟಿ is 3-4 times more powerful, commercially ಮತ್ತು ಜನಸಂಖ್ಯೆ ಆಧಾರದ ಮೇಲೆ ಕೂಡ ಮುಂದಿದೆ. ಅಲ್ಲಿ ಆಸ್ಪತ್ರೆ ಇಲ್ಲದೆ, ಯಾವುದೋ ಒಂದು Primary Health ನಲ್ಲಿ ಒಬ್ಬ Doctor ಮತ್ತು ಒಂದು ನರ್ಸ್ ಇದ್ದಾರೆ. ಮಾನ್ಯ ಆರೋಗ್ಯ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ರೂರಲ್ area ಗಳಿಗೆ ಬಹಳ potential ಇರತಕ್ಕಂತಹ ಕಡೆ ಆಸ್ಪತ್ರೆಗಳನ್ನು ಕೊಡಬೇಕು ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಕೂಡ ಗೊತ್ತು. ಆನವಟ್ಟಿ ಎಂಬ area ದಲ್ಲಿ, ಸುಮಾರು ಮಾನ್ಯ ದಿವಂಗತ ಜೆ.ಹೆಚ್. ಪಟೇಲರ ಕಾಲದಿಂದಲೂ, ನಾನು ಪ್ರಯತ್ನ ಮಾಡುತ್ತಿದ್ದೇನೆ. ಒಂದು ಆಸ್ಪತ್ರೆಯನ್ನು upgrade ಮಾಡ ಬೇಕೆಂಬ ವಿಷಯ ಇದೆ. ಇದು ನಮ್ಮ ತಾಲ್ಲೂಕಿಗೆ ಮಾತ್ರ ಸೀಮಿತವಾಗಿ ಮಾತನಾಡುತ್ತಿಲ್ಲ. ಎಲ್ಲೆಲ್ಲಿ ನಿಮಗೆ ಜನಸಂಖ್ಯೆಗೆ ಅನುಗುಣವಾಗಿ Primary Health Centrer ಗಳನ್ನು upgrade ಮಾಡಬೇಕಾಗಿದೆ, ಸಮಸ್ಯೆಗಳು ಎಲ್ಲಿ ಹೆಚ್ಚಾಗಿವೆ, ಅಂತಹ ಕೆಗಳಲ್ಲಿ ನೀವು ಅವುಗಳನ್ನು upgrade ಮಾಡಬೇಕು. Government of India ದವರು ಆಸ್ಪತ್ರೆಗಳನ್ನು ಮಾಡುವುದಕ್ಕೆ ನಮಗೆ ಈಗ permission ಕೊಡುವುದಿಲ್ಲ. Atleast, within your limits, you try to upgrade those hospitals. Atleast, Doctors ಆದರೂ ಬರಲಿ, ನರ್ಸ್‌ಸ್ ಇಲ್ಲವೆಂದರೂ ಪರವಾಗಿಲ್ಲ. ಇಲ್ಲಿ ೧೦ ರಿಂದ

೨೦ ಸಾವಿರ ಜನಸಂಖ್ಯೆ ಇರುವ ಕಡೆಗಳಲ್ಲಿ ನಮಗೆ ಒಬ್ಬರು ಅಥವಾ ಇಬ್ಬರು ನರ್ಸ್‌ಗಳನ್ನು ಇಟ್ಟುಕೊಂಡು ಒಬ್ಬರು ಸಿಂಗಲ್ doctor ಇಟ್ಟುಕೊಂಡು handle ಮಾಡತಕ್ಕಂತಹ ಪರಿಸ್ಥಿತಿ ಬರುತ್ತಿದೆ. ಅದರ ಬಗ್ಗೆ ನಾನು ತಮಗೆ ಮಾಹಿತಿ ಕಳುಹಿಸಿ ಕೊಟ್ಟಿದ್ದೇನೆ. ಆನವಟ್ಟಿ ಒಂದು ಉದಾಹರಣೆ ಇದ್ದರು ಕೂಡ ರಾಜ್ಯಾದ್ಯಂತ ಎಲ್ಲಾ ಕಡೆಯೂ ಗ್ರಾಮ ಪಂಚಾಯಿತಿಗಳು ಈಗಾಗಲೇ ಜನಸಂಖ್ಯೆ ಆಧಾರದ ಮೇಲೆ ಗ್ರಾಮ ಪಂಚಾಯಿತಿ ಮಟ್ಟವನ್ನು ಕ್ರಾಸ್ ಮಾಡಿ ಹೋಗಿದೆ. They have already become urbanized. ಎಲ್ಲವು ಕೂಡ ೧೦ ರಿಂದ ೧೫ಸಾವಿರ ಜನಸಂಖ್ಯೆಯನ್ನು ಕ್ರಾಸ್ ಮಾಡಿಕೊಂಡು ಹೋಗಿರತಕ್ಕಂತಹ ಗ್ರಾಮ ಪಂಚಾಯಿತಿಗಳೇನಿವೆ ಇವುಗಳು ಸಮಸ್ಯೆಗೆ ಸಿಕ್ಕಿ ಕೊಂಡು ಆಸ್ಪತ್ರೆಗಳಿಲ್ಲ, ಪಶು ವೈದ್ಯಕೀಯ ಆಸ್ಪತ್ರೆಗಳಿಲ್ಲ ; ಗ್ರಾಮ ಪಂಚಾಯಿತಿಗಳಿಗೆ ಬರತಕ್ಕಂತಹ ಹಣದಿಂದ urbanization ಮಾಡುವುದಕ್ಕೆ ಬರುವುದಿಲ್ಲ.. UGD ಮಾಡುವುದಕ್ಕೆ ಬರುವುದಿಲ್ಲ, KWSS programmes ಮಾಡುವುದಕ್ಕೆ ಬರುವುದಿಲ್ಲ. ಈ ತರಹ ಗ್ರಾಮಪಂಚಾಯಿತಿಗಳನ್ನು ನಾವು ಅರ್ಬನೈಸೇಷನ್ ಮಾಡಲಿಲ್ಲವೆಂದರೆ ೨೦೨೦ ರವರೆಗೆ ನಮ್ಮಲ್ಲಿರತಕ್ಕಂತಹ about 65 to 70% of our Gram Panchayats will be urbanized. Urbanize ಅಂದರೆ, we will have to provide drinking water, UGD facilities ಮಾಡಬೇಕು. Tax ಜಾರಿ ಮಾಡಬೇಕು. ಅರ್ಬನ್‌ಗೆ ಕೊಡುವಂತಹ ಎಲ್ಲ facilities update ಮಾಡಬೇಕು. ಈ ಗ್ರಾಮ ಪಂಚಾಯಿತಿಗಳು ನಮ್ಮ delimitations ಏನು ನಡೆಯುತ್ತಿದೆ, ಇದಾದ ತಕ್ಷಣ those programmes will be completely changed. ಈ ಗ್ರಾಮ ಪಂಚಾಯಿತಿಗಳಿಗೆ ನಾವೇನು ಐದು ಲಕ್ಷ ಕೊಡುತ್ತೇವೆ, ೧೦ ಲಕ್ಷ ಕೊಡುತ್ತೇವೆಂದರೆ, ಈ ಗ್ರಾಮ ಪಂಚಾಯಿತಿಗಳು ಆ ಅನುದಾನದಲ್ಲಿ ಕೆಲಸಗಳನ್ನು ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ಅಲ್ಲಿಯ ಜನಸಂಖ್ಯೆ ಈಗಾಗಲೇ cross ಆಗಿ ಹೋಗಿದೆ. ಈಗ ಅದರಿಂದ income ಬರುತ್ತಿದೆ. ಆ income ಕೂಡ ಸರ್ಕಾರದವರು ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ. ಏಕೆಂದರೆ ಆಯಾ ಗ್ರಾಮ ಪಂಚಾಯಿತಿಯ ಜನಸಂಖ್ಯೆಯ ಅನುಗುಣವಾಗಿ

ಅಲ್ಲಿ income ಜನರೇಟ್ ಆಗುತ್ತಿದೆ. ವಾಣಿಜ್ಯವಾಗಿ ಮತ್ತು ಆರ್ಥಿಕವಾಗಿ ಮುಂದುವರೆದಿದೆ. ಆ ತರಹ ಪರಿಸ್ಥಿತಿಯಲ್ಲಿ ನಾವು ಅಲ್ಲಿ ಆಸ್ಪತ್ರೆಗಳನ್ನು ಕೊಡದೆ ಇರುವುದರಿಂದ ಬಹಳ ಸಮಸ್ಯೆಗಳಾಗಿವೆ. ಹಾಗಾಗಿ ಇದಕ್ಕೂ ಹೆಚ್ಚಿನ ಒತ್ತನ್ನು ಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ. PLD bank ಗೆ ಈಗೇನು ಸಲ ಮನ್ನಾ ಮತ್ತು ಬಡ್ಡಿ ಮನ್ನಾ ಮಾಡಿ ೨೫,೦೦೦ ರೂಪಾಯಿ ಮಂಜೂರು ಮಾಡಿದ್ದಾರೆ, ಮಾನ್ಯ ಅಧ್ಯಕ್ಷರೆ, ನಮ್ಮ land development banks, most of them, have become commercial banks. ಹೇಗೆಂದರೆ, ಎಲ್ಲದಕ್ಕು ಕೂಡ, ನಮ್ಮ tractor ಮತ್ತು vehicle ಗಳಿಗೆ ಇದಕ್ಕೆ ಹಣಕಾಸನ್ನು ಕೊಡುತ್ತಾರೆ ವಿನಃ ರೈತರ ಸಾಲಕ್ಕೆ ಯಾರು ಕೂಡ ಕೊಡುತ್ತಿಲ್ಲ. PLD bank ಗಳು ಲಕ್ಷ ಇದರ ಮೇಲೆ ಯಾರಿಗು ಕೂಡ ಅನುಕೂಲವಾಗುವುದಿಲ್ಲ. PLD bank ಹೆಸರು ಇರುವುದು ರೈತರ ಹೆಸರಿನ ಮೇಲೆ, ಈ ಸಾಲ ಮನ್ನಾ ಕಾರ್ಯಕ್ರಮಗಳು ಹೇಗಿವೆ ಎಂದರೆ ಒಂದು ಟೋಪಿ ತೆಗೆದು ಇನ್ನೊಬ್ಬರಿಗೆ ಟೋಪಿ ಹಾಕುವುದು. ಈ ತರಹದ ಬೆಳವಣಿಗೆಗಳಾಗುತ್ತವೆ ಹೊರತು, ಇದರಿಂದ ಸಾಲ ಮನ್ನಾ ಕಾರ್ಯಕ್ರಮದಲ್ಲಿ ಮಾನ್ಯ ಎಸ್.ಎಸ್.ಪಾಟೀಲರು ಹೇಳಿದ ಹಾಗೆ ಸುಮಾರು ೬೦ ರಿಂದ ೬೭ ಲಕ್ಷ ಜನ ಇರತಕ್ಕಂತಹ ಕಡೆ ಸುಮಾರು ಆರು ಲಕ್ಷದ ಚಿಲ್ಲರೆ ಜನಗಳಿಗೆ ಮಾತ್ರ ಅನುಕೂಲವಾಗುತ್ತದೆ. ರೈತರು ಯಾರಿಗೂ ಕೂಡ ಕೈ ಚಾಚುವುದಿಲ್ಲ. ನಾವು ಸರಿಯಾಗಿ ಅವರಿಗೆ ನೀರಾವರಿ, ವಿದ್ಯುತ್, ರಸ್ತೆಗಳು ಮತ್ತು ಮಾರ್ಕೆಟಿಂಗ್ ಇದನ್ನು ನಾವು ಪ್ರಾಮಾಣಿಕವಾಗಿ ಮಾಡಿಕೊಟ್ಟರೆ, ಉಳಿದಿರತಕ್ಕಂತಹ ಶಾಲೆಗಳನ್ನು ಅವರೇ ಮಾಡಿಕೊಳ್ಳುತ್ತಾರೆ. ಆರ್ಥಿಕವಾಗಿ ಅವರು ಮುಂದೆ ಬರುತ್ತಾರೆ. ಎಲ್ಲ ವ್ಯವಸ್ಥೆಯನ್ನು ಅವರು ಮಾಡುವುದಕ್ಕೆ ಬರುತ್ತಾರೆ. ಆದರೆ ನಾವೇನು ಮಾಡುತ್ತೇವೆಂದರೆ,ಎಲ್ಲವನ್ನೂ ನಾವು ಒಂದು ಲೈನ್ ನಲ್ಲಿ ಹಿಡಿದು ಕೊಂಡಿದ್ದೇವೆ. ಬಜೆಟ್‌ನಲ್ಲಿ ಎಲ್ಲ populistic programmes ಗಳನ್ನು ಮಾಡಿಕೊಮಡು, ಆ programmes ನಲ್ಲಿ ಸಬ್ಸಿಡಿ ಕೊಡುವುದು, ಮಾಡುವುದು ಮಾಡುತ್ತಿದ್ದಾರೆ. ಆದರೆ basic ಆಗಿ ಎಲ್ಲಿ ನೀರಾವರಿ ಮಾಡಬೇಕು, ರೈತರಿಗೆ ನಾವು ಉದ್ದಾರ ಮಾಡಬೇಕೋ ನೀರಾವರಿಗೆ ದುಡ್ಡು

ಕೊಡಿ. ಈ ಸಾರಿ ನೀವು ನೀರಾವರಿಯ ಅನುದಾನದಲ್ಲಿ ೧೩೦೦ ಕೋಟಿ ರೂಪಾಯಿಗಳನ್ನು ಕಟ್ ಮಾಡಿದ್ದೀರಿ. ಏಕೆ ಕಡಿಮೆ ಮಾಡಬೇಕಾಗಿತ್ತು ? Escalation ಆಗಿದೆ, inflation ಆಗಿದೆ, S.R ಗಳು ಬದಲಾವಣೆ ಆಗಿವೆ ಎಲ್ಲವೂ ಬದಲಾವಣೆ ಆದರು ಕೂಡ ನೀವು entire revenue ಮೇಲೆ ನೀವು out lay ಅನ್ನು ಜಾಸ್ತಿ ಮಾಡಿದೇವೆಂದು ಹೇಳುತ್ತಿದ್ದೀರಿ ಹೊರತು, inflation ಮತ್ತು SR rate ಬದಲಾವಣೆ ಮಾಡಿರುವುದನ್ನು ನೀವು considerationಗೆ ತೆಗೆದುಕೊಳ್ಳುತ್ತಿಲ್ಲ. ೨ ಲಕ್ಷ ರೂಪಾಯಿಗಳಲ್ಲಿ ಒಂದು ಕಿ.ಮೀ ರಸ್ತೆ ಆಗುತ್ತಿತ್ತು ಅದನ್ನು ಬಿಟ್ಟಿದ್ದೀರಿ. ಈಗ ಒಂದೊಂದು ಕಿ.ಮಿ. ರಸ್ತೆ ಮಾಡುವುದಕ್ಕೆ ನಿಮಗೆ ೮ ರಿಂದ ೧೦ ಲಕ್ಷ ರೂಪಾಯಿಗಳು ಬೇಕು. ಏಕೆಂದರೆ, ನಮ್ಮ ರೂರಲ್ ರೋಡ್ಗಳೇನಿವೆ, ಮಿನಿಮಮ್ ೧೫ ರಿಂದ ೨೦ ಟನ್‌ನ ಟ್ರಕ್‌ಗಳು ಓಡಾಡುತ್ತವೆ. ಸೈಕಲ್ ಹೋಯಿತು, ಸ್ಕೂಟರ್ ಹೋಯಿತು ಅಥವಾ ಎತ್ತಿನ ಗಢಿ ಹೋಯಿತು – ಅಷ್ಟಕ್ಕೆ ಮಾತ್ರ ಸೀಮಿತವಾದ ರೋಡ್‌ಗಳನ್ನು ಮಾಡಿದರೆ ಸಾಲುವುದಿಲ್ಲ. ಹಾಗಾಗಿ ನಾವು ಮಾಡತಕ್ಕಂತಹ ಕೆಲಸಕಾರ್ಯಗಳಿಗೆ ವಿಶೇಷವಾಗಿ ಗ್ರಾಮೀಣ ಪ್ರದೇಶದ ರಸ್ತೆಗಳಿಗೆ ನಾವು ಮಾಡಬೇಕೆಂದರೆ, ನಾವು ಮೂಲಭೂತವಾಗಿ ರೈತರಿಗೆ ಬೇಕಾದಂತಹ ಮಾರ್ಕೆಟಿಂಗ್, ಅದಕ್ಕೆ ಬೇಕಾದ ಆವರ್ತ ನಿಧಿಗೆ ಬೇಕಾದಂತಹ ಹಣಕಾಸನ್ನು ನಾವು ಒದಗಿಸಬೇಕು. ರೈತರಿಗೆ ಬೇಕಾದಂತಹ ನಮ್ಮ ಸರ್ಕಾರದಿಂದ National Agricultural Policy ಎನ್ನತಕ್ಕಂತಹ ಒಂದು ಸೂಕ್ತವಾದ guidelines ಮಾಡಿದ್ದಾರೆ. ಇದರ ಬೇಸಿಸ್ ಮೇಲೆ ಈಗ Government of India ಕೂಡ ಇದನ್ನು ಮಾದರಿಯಾಗಿಟ್ಟುಕೊಂಡು Agricultural Policy ಮಾಡುತ್ತಿದೆ ಎನ್ನತಕ್ಕಂಥದ್ದು ಕೂಡ ಕೇಳಿದ್ದೇನೆ. Agricultrual Policy ಮಾಡಬೇಕಾದರೆ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಸೂಕ್ತವಾದ ಒಂದು Agricultrual Policy ಮಾಡಿಕೊಂಡು ಅದು ಎಲ್ಲಾ ರಾಜ್ಯಗಳಿಗೂ ಅನ್ವಯಿಸುವ ರೀತಿಯಲ್ಲಿ ಮಾಡಬೇಲು. ಏಕೆಂದರೆ ಪ್ರಾಂತೀಯವಾಗಿ ಕರ್ನಾಟಕಕ್ಕೆ ಅನ್ವಯಿಸುವಂತಹ ಪಾಲಿಸಿ ಮಹಾರಾಷ್ಟ್ರಕ್ಕೆ ಅನ್ವಯಿಸುವುದಿಲ್ಲ. ಮಹಾರಾಷ್ಟ್ರಕ್ಕೆ ಅನ್ವಯಿಸಿದ್ದು West Bengal ಗೆ ಅನ್ವಯಿಸುವುದಿಲ್ಲ. ಈ

ತರಹದ ಸಮಸ್ಯೆಗಳೇನಿವೆ, ಅದೆಲ್ಲವನ್ನೂ ಮಾಡತಕ್ಕಂಥದ್ದು ಬಹಳ ಅವಶ್ಯವಿದೆ. ವಿಶೇಷವಾಗಿ ಹೇಳುವಂಥದ್ದು ಕೇಂದ್ರ ಸರ್ಕಾರದಿಂದ ನಮಗೆ ಬಹಳಷ್ಟು ಹಣಕಾಸು ಬಂದಿದೆ. ಹಾರ್ಟಿಕಲ್ಚರ್ ಮೆಶಿನ್ ಗಳು ಬಂದಿವೆ, ರೈತರ ಸಂಕಷ್ಟ ನಿಧಿ ಮೇಲೆ ಬಂದಿವೆ, ಕುಡಿಯುವ ನೀರಿಗೆ ಬಂದಿದೆ. ಈ ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಟಾನ ಮಾಡುವುದರಲ್ಲಿ ಪದೇ ಪದೇ ರಾಜ್ಯ ಸರ್ಕಾರ ಮತ್ತು ನಾವುಗಳು ಎಡವುತ್ತಿದ್ದೇವೆ. ಇಷ್ಟೆಲ್ಲಾ ಹಣಕಾಸು ಬಂದಿದ್ದರು ಕೂಡ, ರೈತರಿಗೆ ಮತ್ತು ಬಡವರಿಗೆ ಬೇಕಾದಂತಹ ಕಾರ್ಯಕ್ರಮಗಳನ್ನು ನಾವೇನು ಅನುಷ್ಟಾನ ಮಾಡುವುದಕ್ಕೆ ಹೊರಡ ಬೇಕೆಂದಿದ್ದೇವೋ ಅಲ್ಲಿ ಯಥಾ ಪ್ರಕಾರ ಪ್ರತಿ ವರ್ಷ ಕೂಡ ನಮ್ಮ ಬಯಲು ಸೀಮೆ ಮತ್ತು ಅರೆ ಬಯಲು ಸೀಮೆ ಪರಿಸ್ಥಿತಿಯಿಂದ ಒಂದೊಂದು ತಾಲ್ಲೂಕಿನಿಂದ ೨೫ರಿಂದ ೩೦ ಸಾವಿರ ಜನ ಗುಳೆ ಹೋಗುತ್ತಿದ್ದಾರೆ.

ಎಲ್ಲಿಗೆ? ಕಾಫಿ ಸೀಮೆಗೆ ಹೋಗುತ್ತಾರೆ ಅಥವಾ ಘಟ್ಟದ ಕೆಳಗಡೆ ಹೋಗುತ್ತಾರೆ ಅಥವಾ ಗೋವಾಕ್ಕೆ, ಮಹಾರಾಷ್ಟ್ರಕ್ಕೆ ಹೋಗಿ ಕೆಲಸ ಮಾಡಿಕೊಂಡು ಬರುತ್ತಾರೆ. ಈ ತರಹದ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರದ ಕಾರ್ಯಕ್ರಮಗಳನ್ನು ಸಂಪೂರ್ಣವಾಗಿ ಅನುಷ್ಠಾನ ಮಾಡುವುದಕ್ಕೆ ರಾಜ್ಯ ಸರ್ಕಾರ ಸಂಪೂರ್ಣವಾಗಿ ಮುಂದೆ ಬರಬೇಕೆಂದು ವಿನಂತಿಯನ್ನು ಮಾಡುತ್ತೇನೆ. ತಾವು ೧೫ ನಿಮಿಷಗಳ ಕಾಲವನ್ನು ನನಗೆ ಮಾತನಾಡಲು ಕೊಟ್ಟಿದ್ದಿರಿ. ೧೫ ನಿಮಿಷಗಳಿಗೆ ನನ್ನ ಮಾತುಗಳನ್ನು ಸೀಮಿತಗೊಳಿಸುತ್ತೇನೆ. ಇನ್ನೂ ಅನೇಕ ವಿಷಯಗಳು ಹೇಳುವಂಥದ್ದು ಇದ್ದರು ಕೂಡ ನಾನು ಸಣ್ಣ ನೀರಾವರಿ ಬಗ್ಗೆ ಹೆಚ್ಚು ಮಾತನಾಡಿದ್ದೇನೆ. ಭಾರಿ ನೀರಾವರಿ ಬಗೆ ಸಮಯದ ಅಭಾವದಿಂದ ನಾನು ಯಾವುದೇ ಪ್ರಸ್ತಾವನೆಯನ್ನು ಮಾಡುವುದಿಲ್ಲ. ಆದರೆ ಕಾವೇರಿ ಬೇಸಿನ್ ನಲ್ಲಿ ಇರತಕ್ಕಂಥ ಮೇಜರ್ ಇರಿಗೇಶನ್ ವಿಚಾರವಾಗಿ ತಮಿಳುನಾಡು ಅನೇಕ ಗೊಂದಲಗಳನ್ನು ಹಾಕಿ ನಮಗೆ ಏನು ಅಡ್ಡಿಪಡಿಸುತ್ತಿದ್ದಾರೆ, ಆ ರೀತಿಯ ಅವರ ಯಾವುದೇ ಗೊಂದಲಕ್ಕೂ ಕರ್ನಾಟಕ ಸರ್ಕಾರ ಗಮನ ಕೊಡದೇ ನಮ್ಮ ರೈತರಿಗೆ ಬೇಕಾಗಿರತಕ್ಕಂಥ ಕಾರ್ಯಕ್ರಮವನ್ನು ಕರ್ನಾಟಕ ರಾಜ್ಯದ ಎಲ್ಲಾ

ಮೂಲೆಗಳಲ್ಲಿಯು ಕೂಡ ಹಾಕಿಕೊಳ್ಳಬೇಕೆಂದು ವಿನಂತಿಯನ್ನು ಮಾಡಿಕೊಳ್ಳುತ್ತಾ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ವಾಟಾಳ್ ನಾಗರಾಜ್ ರವರೆ, ತಾವು ಈಗ ಮಾತನಾಡುತ್ತೀರಿ ?

ಶ್ರೀ ವಾಟಾಳ್ ನಾಗರಾಜ್ : ನಾನು ಮಾತನಾಡುತ್ತೇನೆ. ಈಗ ಪ್ರಾರಂಭ ಮಾಡಿ ಮಧ್ಯಹ್ನ ಮುಗಿಸುತ್ತೇನೆ.

ಅಧ್ಯಕ್ಷರು : ಆ ರೀತಿ ಆಗುವುದಿಲ್ಲ. ಎಲ್ಲರಲ್ಲೂ ನನ್ನ ವಿನಂತಿ ಏನೆಂದರೆ ಈ ಅಧಿವೇಶನದಲ್ಲಿ ಎಲ್ಲರೂ ಕಡಿಮೆ ಅವಧಿಯನ್ನು ತೆಗೆದುಕೊಂಡು ಮಾತನಾಡಿ ಮುಗಿಸಬೇಕು. ಏಕೆಂದರೆ ಬಹಳ ಜನ ಮಾತನಾಡುವವರು ಇದ್ದಾರೆ. ಆದುದರಿಂದ ಈಗ ನೀವು ಮಾತನಾಡಿ ; ಬೇಗನೆ ಮುಕ್ತಾಯ ಮಾಡಿ.

ಶ್ರೀ ಧರ್ಮಸಿಂಗ್ : – ಮಾನ್ಯ ಅಧ್ಯಕ್ಷರೇ, ಈಗ ದೇಶಪಾಂಡೆಯವರು ಮಾತನಾಡಲು ಅವಕಾಶ ಮಾಡಿಕೊಡಿ. ನೀವು ವಾಟಾಳ್ ನಾಗರಾಜ್ ರವರಿಗೆ ಬೇಗ ಮಾತನಾಡಿ ಮುಗಿಸಿ ಎಂದು ಎಷ್ಟು ಹೇಳಿದರು ಕೂಡ ಅವರು ಯಾವಾಗ ಮಾತನ್ನು ಮುಗಿಸಬೇಕು ಎಂದುಕೊಂಡಿರುತ್ತಾರೋ ಆಗಲೇ ಅವರು ಮುಗಿಸುವುದು. ಅದಕ್ಕೇ ನಾನು ಹೇಳುತೇನೆಂದರೆ ಈಗ ದೇಶಪಾಂಡೆಯವರು ಮಾತನಾಡಿ ಮುಗಿಸಿ ಬಿಡುತ್ತಾರೆ. ಅವರಿಗೆ ಮಾತನಾಡುವಂತೆ ತಾವು ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರ, ದಯವಿಟ್ಟು ಅದು ಆಗೊಲ್ಲ. ಈಗ ನಾನೇ ಮಾತನಾಡುತ್ತೇನೆ.

ಅಧ್ಯಕ್ಷರು : ಈಗ ಒಂದು ಕೆಲಸ ಮಾಡೋಣ. ಇವರಿಬ್ಬರೂ ಈಗ ಮಾತನಾಡುವುದು ಬೇಡ. ಹಿಂದಿನ ಬೆಂಚ್ನವರಿಗೆ ಮಾತನಾಡಲು ಅವಕಾಶ ಮಾಡಿಕೊಡುತ್ತೆನೆ.

ಶ್ರೀ ಹೆಚ್.ಡಿ. ಬಸವರಾಜ್ : ಮಾನ್ಯ ಅಧ್ಯಕ್ಷರೆ, ಇದು ಒಳ್ಳೆಯ ನಿರ್ಣಯ. ಈ ನಿರ್ಣಯವನ್ನು ನಾವು ಸ್ವಾಗತಿಸುತ್ತೇವೆ. ಅದೇ ಪ್ರಕಾರ ನಮಗೆ ಅವಕಾಶ ಮಾಡಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಧರ್ಮಸಿಂಗ್ : – ಮಾನ್ಯ ಅಧ್ಯಕ್ಷರೆ, ಈಗ ಆರ್.ವಿ ದೇಶಪಾಂಡೆಯವರು ಮಾತನಾಡಿಬಿಡುತ್ತಾರೆ. ಮಾನ್ಯ ಯಡಿಯೂರಪ್ಪ ನವರನ್ನು ತಾವು ಕರೆಸಿ.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರು ಈಗ ಇಲ್ಲ. ಅವರನ್ನು ಕರೆಸುತ್ತೇನೆ. ಅವರು ಬಂದಮೇಲೆ ಮಾನ್ಯ ದೇಶಪಾಂಡೆ ಯವರು ಮಾತನಾಡಲಿ. ಈಗ ಹಿಂದೆ ಕುಳಿತಿರುವವರಿಗೆ ಅವಕಾಶ ಕೊಡುತ್ತೆನೆ. ಮಾನ್ಯ ಬಸವರಾಜುರವರೆ, ತಾವು ಮಾತನಾಡಿ, ಬೇಗ ಮಾತನಾಡಿ ಮುಗಿಸಬೇಕು.

ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಅಧ್ಯಕ್ಷರೆ, ೨೦೦೭–೦೮ ರ ಆಯವ್ಯದ ಮೇಲೆ ಇದುವರೆವಿಗೂ ನಮ್ಮ ಹಿರಿಯ ನಾಯಕರುಗಳು ಬೇಕಾದಷ್ಟು ವಿಚಾರಗಳನ್ನು ತಿಳಿಸಿದ್ದಾರೆ. ಅವರು ತಿಳಿಸಿ ರುವಂಥ ವಿಚಾರಗಳಲ್ಲಿ ಒಂದು ನನ್ನ ಮನಸ್ಸಿಗೆ ಬಹಳ ನೋವಾಯಿತು. ಇಷ್ಟು ವರ್ಷಗಳಲ್ಲಿ ಈ ರಾಜ್ಯ ಕಂಡರಿಯದಂಥ ಮತ್ತು ಕೇಳರಿಯದಂಥ ಒಂದು ಬಜೆಟ್‌ನ್ನು ಅರ್ಥ ಸಚಿವರು ಮಂಡನೆ ಮಾಡಿದಾಗ ಆ ಮಂಡನೆಗೆ ವ್ಯಾಪಕವಾದಂಥ ಬೆಂಬಲವನ್ನು ಕೊಡುವಂಥ ವಿಚಾರದಲ್ಲಿ ಏಕೆ ಇವರು ತುಂಬಾ ತಾರತಮ್ಯ ಅನುಸರಿಸುತ್ತಿದ್ದಾರೆಂಬುದು ನನಗೆ ಅರ್ಥವಾಗುತತಿಲ್ಲ. ಬಹುಶಃ ನಿಮ್ಮ ಕಾಲದಲ್ಲಿ, ನಾನು ಪ್ರತಿಪಕಷದವರನ್ನು ನೇರವಾಗಿ ಕೇಳುತ್ತಿದ್ದೇನೆ. ಅವರ ಕಾಲದಲ್ಲಿ ಇಂಥ ಯಾವುದಾದರೂ ಒಂದು ಬಜೆಟ್ ಮಂಡನೆಯಾಗಿದೆಯೆ ಎನ್ನುವಂಥದ್ದನ್ನು ಸ್ವಲ್ಪ ಅವರು ವಿಮರ್ಶೆ ಮಾಡಿದರೆ ನಿಜಕ್ಕೂ ನಾವು ಸಂತೋಷ ಪಡಬಹುದಾಗಿತ್ತು. ನಮ್ಮ ಕಾಲದಲ್ಲಿ ಇಷ್ಟು ಆಗಿತ್ತು ಇನ್ನೂ ಇಷ್ಟನ್ನು ನೀವು ಮಾಡೇಕಾಗಿತ್ತು ಎನ್ನುವಂಥ ಒಂದು ವ್ಯವಸ್ಥೆಯಲಿ ಅವರೇನಾದರೂ ಚರ್ಚೆಯನ್ನು ಮಾಡಿದ್ದರೆ, ನಾನು ಬಹಳಷ್ಟು ಸಂತೋಷ ಪಡುತ್ತಿದದೆ. ಇವೊತ್ತಿನ ಆಯವ್ಯದ ಮುಖ್ಯಾಂಶಗಳ ಕಡೆ

ನೋಡೋಣ. ಮಾನ್ಯ ಅಧ್ಯಕ್ಷರೆ, ನಾನು ಮಾತನಾಡುವಾಗ ಮಧ್ಯೆ ಮಧ್ಯೆ ಬೇರೆಯವರು ಮಾತನಾಡಿ ನನ್ನ ಮಾತಿನ ಧಾಟಿಯಿಂದ ಹೊರಬರುವಂತೆ ಮಾಡು ಪ್ರಯತ್ನ ಮಾಡಬಹುದು. ಆದಕಾರಣ ತಾವು ನಮ್ಮ ರಕ್ಷಣೆಗೆ ಬರಬೇಕು. ಮಾನ್ಯ ಅಧ್ಯಕ್ಷರೆ, ರೈತರು ಸಹಕಾರಿ ಸಂಸ್ಥೆಗಳಿಂದ ಪಡೆದಿರುವಂಥ ಸಾಲದ ಮನ್ನಾ ಬಗ್ಗೆ ನಾನು ಒಂದು ವಿಚಾರವನ್ನು ಹೇಳಬಯಸುತ್ತೇನೆ. ಏಕೆಂದರೆ ರೈತರ ಬಗೆ ಬಹಳಷ್ಟು ಮಾತುಗಳನ್ನು ಹೇಳುವುದನ್ನು ನಾವು ಕೇಳಿದ್ದೇವೆ. ಪ್ರತಿಪಕ್ಷದವರು ರೈತರ ಬಗ್ಗೆ ಬಹಳಷ್ಟು ಕಾಳಜಿಯನ್ನು ತೋರಿಸಿದ್ದಾರೆ. ನಮ್ಮ ದೇಶದ ಬೆನ್ನೆಲುಬಾಗಿರುವ ರೈತರಿಗೆ ಬಹಳಷ್ಟು ಒಳ್ಳೆಯದನ್ನು ಮಾಡಬೇಕು ಎನ್ನುವ ಮಾತುಗಳನ್ನು ಹೇಳಿದ್ದಾರೆ. ಒಂದು ಹಂತದಲ್ಲಿ ಹಿಂದೆ ನಮ್ಮ ರಾಜ್ಯದಲ್ಲು ಕೂಡ ರೈತರು ಆತ್ಮಹತ್ಯೆಯನ್ನು ಮಾಡಿಕೊಳ್ಳುವಂಥ ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದರು. ಅದನ್ನು ಮನಗಂಡಂಥ ಸನ್ಮಾನ್ಯ ಶ್ರೀ ಯಡಿಯೂರಪ್ಪನವರು ಮತ್ತೆ ಮಾನ್ಯ ಕುಮಾರಸ್ವಾಮಿಯವರು, ಇವರಿಬ್ಬರು ಕೂಡ ರೈತರಿಗೆ ಒಂದು ಶಾಶ್ವತವಾದಂಥ ಪರಹಾರವನ್ನು ಕಲ್ಪಸಬೇಕೆಂಬ ಹಿನ್ನಲೆಯಲ್ಲಿ, ಆ ಒಂದು ಉದ್ದೇಶದಿಂದ ರೈತರು ಪಡೆದಂಥ ಸಹಕಾರಿ ಸಾಲದಲ್ಲಿ ೨೫ ಸಾವಿರ ರೂಪಾಯಿಗಳ ಸಾಲವನ್ನು ಏನು ತೆಗೆದುಕೊಂಡಿದ್ದನೋ ಆ ಸಾಲವನ್ನು, ಸಂಪೂರ್ಣ ಅಸಲನ್ನು ಮನ್ನಾ ಮಾಡುವುದರ ಜೊತೆಗೆ ಬಡ್ಡಿಯನ್ನೂ ಸಹ ಮನ್ನಾ ಮಾಡುವುದರ ಮೂಲಕ ರಾಜ್ಯದಲ್ಲಿ ರೈತರಿಗೆ ಒಂದು ಹೊಸ ಆಯಾಮವನ್ನು ತೋರಿಸುವಂಥ ಒಂದು ಕೆಲಸವನ್ನು ಮಾಡಿದ್ದಾರೆ. ಅದನ್ನು ನಾವೆಲ್ಲರೂ ಸೇರಿ ಮುಕ್ತಕಂಠದಿಂದ ಪ್ರಶಂಸಿಸಬೇಕಾಗಿದೆ. ಇದಷ್ಟೇ ಅಲ್ಲ, ೨೫ ಸಾವಿರ ರೂಪಾಯಿಗಳಿಗೂ ಮೇಲ್ಪಟ್ಟು ಏನಾದರು ಅವರು ಸಾಲವನ್ನು ಪಡೆದಿದ್ದರೆ ೫೦ ಸಾವಿರದವರೆಗೆ ಅವರು ಪಡೆದಿರುವಂಥ ಸಾಲಕ್ಕೆ ಬಡ್ಡಿಯನ್ನೂ ಮನ್ನಾ ಮಾಡುವಂಥದ್ದನ್ನು ಸಪ್ಲಿಮೆಂಟರಿ ಬಜೆಟ್‌ನಲ್ಲ ನಮ್ಮ ಮಾನ್ಯ ಯಡಿಯೂರಪ್ಪನವರು ಘೋಷಣೆ ಮಾಡಿದ್ದಾರೆ. ಅದನ್ನು ಕೂಡ ನಾವು ಪ್ರಶಂಸಿಸಬೇಕು. ಇದರ ಜೊತೆಗೆ ಇವೊತ್ತು ಕೃಷಿ ಸಾಲ ತೆರಗೆದುಕೊಳ್ಳುವುದನ್ನು ಮುಂದುವರಿಕೆ ಮಾಡುವುದರ ಜೊತೆಗೆ ಶೇಕಡ ೪ ಬಡ್ಡಿ ದರದಲ್ಲಿ ಕೃಷಿ ಸಾಲವನ್ನು

ಮುಂದುವರೆಸುವ ಕಾರ್ಯಕ್ರಮವನ್ನು ಸನ್ಮಾನ್ಯ ಆರ್ಥಿಕ ಮಂತ್ರಿಗಳು ಮಾಡಿದ್ದಾರೆಂದರೆ, ನಾವು ಪ್ರಶಂಸೆ ಮಾಡುವುದು ಬೇಡವೆ ? ಅದರ ಜೊತೆಗೆ ಇವೊತ್ತು ನೇಕಾರರು, ಮೀನುಗಾರರು ಕೂಡ ಬಹಳಷ್ಟು ರೀತಿಯಲ್ಲಿ ಕಷ್ಟದ ಪರಿಸ್ಥಿತಿಯನ್ನು ಎದುರಿಸುತ್ತಿದ್ದರು, ದುರ್ಬಲ ಪರಿಸ್ಥಿತಿಗಳನ್ನು ಎದುರಿಸುತ್ತಿದ್ದರು. ಅವರಿಗು ಕೂಡ ಒಂದು ಸಾಂತ್ವನವನ್ನು ಹಏಳಬೇಕೆಂದು ಹೇಳಿ ಯಾರು ಆ ಒಂದು ವರ್ಗದಲ್ಲಿ ೨೫ ಸಾವಿರದವರೆಗೆ ಸಾಲವನ್ನು ಪಡೆದುಕೊಂಡಿದ್ದಾರೋ, ಅವರಿಗು ಕೂಡ ಆ ಸಾಲವನ್ನು ಮನ್ನಾ ಮಾಡುವಂಥದ್ದು ಮತ್ತು ಬಡ್ಡಿಯನ್ನೂ ಕೂಡ ಮನ್ನಾ ಮಾಡುವಂಥದ್ದು, ಅದರ ಜೊತೆಗೆ ಅವರು ೨೫ಸಾವಿರಕ್ಕಿಂತ ಹೆಚ್ಚಿನ ಹಣದ ಸಾಲವನ್ನದು ಪಡೆದುಕೊಂಡಿದ್ದರೆ ಆ ಸಾಲಕ್ಕೆ ಆಗಿರುವ ಬಡ್ಡಿಯನ್ನು ಮನ್ನಾ ಮಾಡುವಂಥದ್ದನ್ನು ಮಾಡಿದ್ದಾರೆ. ಈ ಒದು ವಿಚಾರದಲ್ಲಿ ನಾವು ಆರ್ಥಿಕ ಮಂತ್ರಿಗಳನ್ನು ಮತ್ತು ಈ ಸರ್ಕಾರವನ್ನು ನಾವು ಪ್ರಶಂಸೆ ಮಾಡಲೇ ಬೇಕಾಗಿದೆ. ಅದರ ಜೊತೆಗೆ ಒಂದು ಮುಖ್ಯವಾಗಿ ನಾವು ಹೇಳುತ್ತಿದ್ದೆವು, ಸ್ತ್ರೀ ಶಕ್ತಿ ಮತ್ತು ಇತರ ಸ್ವಸಹಾಯ ಗುಂಪುಗಳಿಗೆ ಉತ್ತೇಜನ ಕೊಡಬೇಕು ಆ ಉತ್ತೇಜನವನ್ನು ಅವರಿಗೆ ಯಾವ ರೀತಿ ಕೊಡಬೇಕೆನ್ನುವ ವಿಚಾರದಲ್ಲಿ ಯಾರೂ ಮಾಡದೇ ಇರುವಂಥ ಒಂದು ಸಾಧನೆಯನ್ನು ಈ ನಮ್ಮ ಸರ್ಕಾರ ಮಾಡಿದೆ ಎನ್ನುವಂಥ ವಿಚಾರವನ್ನು ನಾನು ಈ ಸಂಧರ್ಬದಲ್ಲಿ ನಾನು ಹೇಳಲೇ ಬೇಕಾಗುತ್ತಿದೆ. ಶೇಕಡ ೪ರ ಬಡ್ಡಿ ದರದಲ್ಲಿ ಸಾಲವನ್ನು ಕೊಡುವಂಥ ಒಂದು ದಿಟ್ಟ ಹೆಜ್ಜೆಯನ್ನು ಇಟ್ಟಂಥ ಈ ಸರ್ಕಾರಕ್ಕೆ ನಾವು ಪ್ರಶಂಸೆ ಮಾಡಬೇಕೆ ಅಥವಾ ಟೀಕೆ ಮಾಡಬೇಕೆ ಎನ್ನುವಂಥದ್ದನ್ನು ನಾವು ವಿಆರ ಮಡಬೇಕಾಗಿದೆ. ಇಲ್ಲಿ ನಾವು ಎಷ್ಟೇ ಟೀಕೆ ಮಾಡಿದರೂ ಒಂದು ಮಾತು ಕಟುಸತ್ಯ ಎನ್ನುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇಡೀ ರಾಜ್ಯದಲ್ಲಿ ಈ ಒಂದು ಬಜೆಟ್ ಬಗ್ಗೆ ಪ್ರಶಂಸನೀಯವಾದಂಥ ಮಾತುಗಳು ಹೊರಬರುತ್ತಿದೆ. ಇವೊತ್ತು ರಾಜ್ಯದ ಜನತೆ ಸಂಪೂರ್ಣವಾಗಿ ಈ ಸರ್ಕಾರದ ಮೇಲೆ ವಿಶ್ವಾಸ ಇಡಬೇಕಾದರೆ ಸರ್ಕಾರ ತಮ್ಮ ಪರವಾಗಿ ನಿಂತಿದೆ, ಬಡವರ ಪರವಾದಂಥ ಸರ್ಕಾರ, ರೈತರ ಪರವಾತಂಥ ಸರ್ಕಾರ ಮತ್ತು ಸ್ತ್ರೀಶಕ್ತಿಗಳನ್ನು ಬಲಪಡಿಸುವಂಥ

ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವಂಥ ಸರ್ಕಾರ ಎನ್ನುವಂಥ ಮಾತುಗಳನ್ನು ನಾವು ಹೊರಗಡೆ ಹೋದಾಗ ಎಲ್ಲರಿಂದಲೂ ಕೇಳುವಂಥದ್ದನ್ನು ನಾವು ನೋಡುತ್ತಿದ್ದೇವೆ. ಈ ಒಂದು ವಿಚಾರದಲ್ಲಿ ಇವೊತ್ತು ನಾನು ಈ ಸರ್ಕಾರವನ್ನು ಪ್ರಶಂಸೆ ಮಾಡುವುದರ ಜೊತೆಗೆ ಇನ್ನೊಂದು ಮಾತನ್ನು ನಾನು ಹೇಳಬೇಕಾಗಿದೆ. ಇವೊತ್ತು ಸಾರಾಯಿ ಮಾರಾಟ ನಿಷೇಧ, ಇದು ಸಾಮಾನ್ಯ ಸರಳ ವಿಚಾರವಲ್ಲ, ಅಧ್ಯಕ್ಷರೆ. ಇದರಲ್ಲಿ ರಾಜ್ಯದ ಬೊಕ್ಕಸಕ್ಕೆ ಬೇಕಾದಷ್ಟು ಹಣ ಬರುತ್ತಿತ್ತು. ಈ ನಿಷೇಧದಿಂದಾಗಿ ಸರ್ಕಾರಕ್ಕೆ ನಷ್ಟವಾಗುವುದನ್ನು ಲೆಕ್ಕಿಸದೇ ಇವೊತ್ತು ಸಾರಾಯಿ ಮಾರಾಟವನ್ನು ನಿಷೇಧ ಮಾಡಿದ್ದಾರೆ ಎಂದರೆ ಇದೊಂದು ದಿಟ್ಟಹೆಜ್ಜೆ.

ಇಂತಹ ಒಂದು ದಿಟ್ಟ ಹೆಜ್ಜೆ ಇಟ್ಟಿರುವಂತಹ ಈ ಒಂದು ಸಕಾರಕ್ಕೆ ಪ್ರಸಂಶನೀಯವಾದ ಮಾತನ್ನು ಹೇಳುವುದು ಒಳ್ಳೆಯದು. ಈ ಸಾರಾಯಿ ಮಾರಾಟ ನಿಷೇಧದ ಬಗ್ಗೆ ಬಂದಾಗ ಈ ಸದನದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರ ಹೆಸರನ್ನು ಹೇಳಬೇಕಾಗುತ್ತದೆ. ಅವರು ಹಲವಾರು ಬಾರಿ ಗಟ್ಟಿತನ, ಎದೆಗಾರಿಕೆ ಇದ್ದರೆ ಈ ಸಾರಾಯಿ ನಿಷೇಧ ಮಾಡುತ್ತೀರಾ ಈ ಸದನದಲ್ಲಿ ಕೇಳಿದ್ದಾರೆ. ಆ ರೀತಿ ಸದನದಲ್ಲಿ ಕೇಳುವಂತಹ ಸಂದರ್ಭದಲ್ಲಿ ಅದಕ್ಕೆ ಸಮರ್ಥವಾದ ಉತ್ತರವನ್ನು ಕೊಡುವಂತಹ ಕೆಲಸವನ್ನು ಬೇರೆಯವರು ಮಾಡಿದರೋ ಇಲ್ಲವೋ, ಆದರೆ ಈ ನಮ್ಮ ಸರ್ಕಾರ ಸಾರಾಯಿ ನಿಷೇಧವನ್ನು ಮಾಡುವುದರ ಮೂಲಕ ದಿಟ್ಟತನದ ಉತ್ತರ ಕೊಟ್ಟಿದೆ. ಬಡಜನರ, ಅದರಲ್ಲೂ ಕೂಲಿಗಾರರ ಆರೋಗ್ಯದ ಹಿತದೃಷ್ಟಿ ಇಂದ ಇವತ್ತು ಸಾರಾಯಿ ಮಾರಾಟ ನಿಷೇಧ ಮಾಡಿದೆ. ಪ್ರತಿ ನಿತ್ಯ ನಾವು ಕೇಳುತ್ತಿದ್ದೆವು ; ಹಳ್ಳಿಗಳಲ್ಲಿ ಸ್ತ್ರೀಶಕ್ತಿ ಸಂಘಗಳು ಮತ್ತು ಸ್ವಸಹಾಯ ಗುಂಪಿನವರು ಹೋರಾಟ ಮಾಡುತ್ತಿದ್ದರು. ಮನೆಯಲ್ಲಿ ಸಂಪಾದನೆ ಮಾಡಿದಂತಹ ದುಡ್ಡನ್ನೆಲ್ಲಾ ಲಾರಿ ಮೇಲೆ ತೊಡಗಿಸುವುದರ ಮೂಲಕ ನಮ್ಮ ಮನೆಗಳನ್ನು ಸಂಪೂರ್ಣವಾಗಿ ಕಡೆಗಾಣಿಸಿದ್ದಾರೆ. ಆದುದರಿಂದ ಯಾವುದೇ ಕಾರಣಕ್ಕೂ ಈ ಒಂದು ರಾಜ್ಯದಲ್ಲಿ ಲಾಟರಿ ನಿಷೇಧವಾಗಬೇಕೆಂದು ಬಹಳಷ್ಟು ಜನರ ಹಂಬಲವಾಗಿತ್ತು. ಅದರ ಬಗ್ಗೆ ದಿಟ್ಟವಾದಂತಹ ನಿರ್ಧಾರವನ್ನು ಕೈಗೊಂಡಿದ್ದಾರೆ. ಹಾಗಾಗಿ ಇವತ್ತು

ರಾಜ್ಯದಲ್ಲಿ ಲಾಟರಿ ನಿಷೇಧವಾಗಿದೆ. ನಾನು ಇನ್ನೊಂದು ವಿಚಾರವನ್ನು ಹೇಳಲೇಬೇಕಾಗಿದೆ. ವೃದ್ಯಾಪ್ಯ ವೇತನ, ವಿಧವಾ ವೇತನ, ಅಂಗವಿಕಲ ವೇತನ ಎಂದು ಮಾಸಿಕ ೨೦೦ ರೂಪಾಯಿ ಇತ್ತು. ಅದನ್ನು ೪೦೦ ರೂಪಾಯಿಗೆ ಏರಿಸುವಂತಹ ಹೆಚ್ಚುಗಾರಿಕೆಯನ್ನು ಹಾಗೂ ಅವರಿಗೆ ಭದ್ರತೆಯನ್ನು ಒದಗಿಸುವಂತಹ ಕೆಲಸವನ್ನು ಮಾಡಿದ್ದಾರೆಂದರೆ ಈ ಸರ್ಕಾರವನ್ನು ಪ್ರಶಂಸೆ ಮಾಡುವುದು ಬೇಡವೇ ? ಅದರ ಬಗ್ಗೆ ಕೂಡ ನಾನು ಪ್ರತಿಪಕ್ಷ ನಾಯಕರು ಹಾಗೂ ಗೌರವಾನ್ವಿತ ಸದಸ್ಯರಲ್ಲಿ ಮನವಿ ಮಾಡುತ್ತಿದ್ದೇನೆ, ಇವತ್ತು ಮಂಡನೆ ಮಾಡಿರುವಂತಹ ಆಯವ್ಯಯದಲ್ಲಿ ಏನು ಮುಖ್ಯಾಂಶಗಳನ್ನು ಕೊಟ್ಟಿದ್ದಾರೆ ಅದನ್ನು ಸ್ಥೂಲವಾಗಿ ಪರಿಗಣನೆ ಮಾಡಿ ಆರ್ಥಿಕ ವಲಯದಲ್ಲಿ ಬಹಳಷ್ಟು ಜನರಿಗೆ ಲಭ್ಯವಾಗುವಂತಹ, ಉಪಯೋಗವಾಗುವಂತಹ ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದಾರೆ. ಆದುದರಿಂದ ಈ ಒಂದು ಆಯವ್ಯಯವನ್ನು ಸ್ವಾಗತಿಸಿ. ಇದರಲ್ಲಿ ಇನ್ನೇನಾದರೂ ಹೆಚ್ಚಿಗೆ ಬೇಕಾಗಿದೆ ಮತ್ತು ಇನ್ನು ಕೂಡಿಸುವಂತಾದ್ದು ಇದೆ ಎನ್ನುವಂತಹ ನಿಮ್ಮ ಸಲಹೆಗಳು ಏನಿದೆ, ಅದನ್ನು ಮುಕ್ತ ಕಂಠದಿಂದ ಹೇಳುವಂತಾದದು ಮಾಡಿ. ಆದರೆ ಈಗ ಮಾಡಿರುವಂತಹ ಆಯವ್ಯಯ ವನ್ನು ನೀವು ಸಮಗ್ರವಾಗಿ ಪರಿಶೀಲನೆಗೆ ಅಥವಾ ಪರಿಷ್ಕಾರಕ್ಕೆ ಒಳಪಡಿಸದೆ ಸ್ವಾಗತಿಸುವುದರ ಮೂಲಕ ಅನುಮೋದನೆ ಕೊಡಬೇಕು ಎಂದು ಮಾನ್ಯ ಅಧ್ಯಕ್ಷರ ಮೂಲಕ ಗೌರವಾನ್ವಿತ ಸದಸ್ಯರಲ್ಲಿ ಕೇಳಿಕೊಳ್ಳುತ್ತಿದದೇನೆ. ಇವತ್ತು ನಮ್ಮ ಸರ್ಕಾರ ಒಳ್ಳೆಯ ಕೆಲಸ ಮಾಡುತ್ತಿದೆ. ಅದರ ಬಗ್ಗೆ ನಮ್ಮ ಆರ್ಥಿಕ ಮಂತ್ರಿಗಳು ಸಂಪೂರ್ಣವಾಗಿ ತಿಳಿಸಿದ್ದಾರೆ. ಇದರ ಜೊತೆಗೆ ಸರ್ಕಾರದಲ್ಲಿ ಕೂಡ ಕೆಲವು ಲೋಪಗಳು ಇರುವುದನ್ನು ಕೂಡ ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಾದಂತಹ ಉದಾಸಿಯವರು ಉತ್ತಮವಾದಂತಹ ಕೆಲಸವನ್ನು ಮಾಡುತ್ತಿದ್ದಾರೆ. ಅವರ ಇಲಾಖೆಯಲ್ಲಿ ಕೂಡ ಉತ್ತಮವಾದಂತಹ ಅಧಿಕಾರಿಗಳು ಇದ್ದಾರೆ. ಆದರೆ ಇನ್ನು ಕೆಲವು ಗ್ರಾಮಗಳಲ್ಲಿ ಸುವರ್ಣ ಗ್ರಾಮೋದಯ ಕಾರ್ಯಕ್ರಮಗಳು ಅನುಷ್ಠಾನವಾಗಬೇಕಾಗಿದೆ. ಈ ವಿಚಾರದ ಬಗ್ಗೆ ನಾನು ಸರ್ಕಾರಕ್ಕೆ ಕೇಳಿ ಕೊಳ್ಳುವುದೇನೆಂದರೆ ಅಧಿಕಾರಿಗಳು ಈ ಯೋಜನೆಯನ್ನು ಆದಷ್ಟು

ಶೀಘ್ರವಾಗಿ ಕಾರ್ಯಗತ ಮಾಡಿ, ಆ ಯೋಜನೆಯ ಲಭ್ಯತೆ, ಯಾವ ಗ್ರಾಮಗಳನ್ನು ಸುವರ್ಣ ಗ್ರಾಮ ಕಾರ್ಯಕ್ರಮದ ಅನುಷ್ಠಾನದ ಅಡಿಯಲ್ಲಿ ಆಯ್ಕೆ ಮಾಡಿಕೊಂಡಿದ್ದೇವೆ. ಆ ಗ್ರಾಮಗಳಿಗೆ ದೊರಕುವಂತಹ ಕೆಲಸವನ್ನು ಮಾಡುವುದಕ್ಕೆ ಮತ್ತು ಮಾಡಿಸುವಂತಹ ಜವಾಬ್ದಾರಿಯನ್ನು ಆ ಅಧಿಕಾರಿಗಳ ಮೇಲೆ ಮಾಡುವಂತಹ ಕೆಲಸವನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ರಸ್ತೆ ಸುಧಾರಣೆ ಬಗ್ಗೆ ನಾನು ಹೇಳಬೇಕಾಗುತ್ತದೆ. ಈ ಸರ್ಕಾರ ಸಾಕಷ್ಟು ಹಣವನ್ನು ರಸ್ತೆ ಸುಧಾರಣೆಗೆ ಕೊಟ್ಟಿದೆ. ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಕೆಲವು ಅಧಿಕಾರಿಗಳು ಒಂದು ರೀತಿಯಲ್ಲಿ ಬಹಳಷ್ಟು ಉದಾಸೀನ, ಒಂದು ರೀತಿಯಲ್ಲಿ ತಾರತಮ್ಯ ಧೋರಣೆ ಮತ್ತು ಜವಾಬ್ದಾರಿತನ ಇಲ್ಲದೆ ಇರುವುದರಿಂದ ಇವತ್ತು ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಇದರ ಬಗ್ಗೆ ನನ್ನ ತಾಲ್ಲೂಕಿನಲ್ಲಿ ಹೇಳುವುದಾದರೆ, ಅಂತರ್ ರಾಜ್ಯ ರಸ್ತೆಯಾಗಿರುವಂತಹ ಮಾಕೂಟ ರಸ್ತೆ, ಅದು ಸುಮಾರು ೨೯ ಕಿ.ಮೀ ಇದೆ. ಅದರ ಒಂದು ಪರಿಸ್ಥಿತಿಯನ್ನು ನಾನು ಯಾವ ಭಾಷೆಯಲ್ಲಿ ಹೇಳಬೇಕೆಂದು ಅರ್ಥವಾಗುತ್ತಿಲ್ಲ. ಈಗಾಗಲೇ KRDCLನವರು ಒಂದು ಆದೇಶವನ್ನು ನೀಡಿದರು. ಆ ಆದೇಶದಲ್ಲಿ ೧೦೦ ಲಕ್ಷ ರೂಪಾಯಿ ಹಣವನ್ನು ತೆಗೆದುಕೊಂಡು ರಸ್ತೆ ಸರಿಪಡಿಸುವುದಕ್ಕೆ ಕೆಲಸವನ್ನು ಮಾಡಬೇಕು ಎಂದು ಇದ್ದರೂ ಕೂಡಲ್ಲಿರುವಂತಹ Executive Engineer ಸರಿಯಾಗಿ ಕೆಲಸವನ್ನು ಮಾಡದೇ ಇದ್ದುದರಿಂದ ಇವತ್ತು ಪರಿಸ್ಥಿತಿ ತೀರಾ ಉಲ್ಬಣವಾಗುತ್ತಿದೆ. ಇವತ್ತು ಈ ಅಪರಾಧದಿಂದ, ಈ ಅಧಿಕಾರಿಯ ಧೋರಣೆಯಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತಿದೆ. ಆ ಅಧಿಕಾರಿಯ ಹೆಸರನ್ನು ನಾನು ಹೇಳುವುದಕ್ಕೆ ಇಚ್ಚೆಪಡದೇ ಇದ್ದರೂ, ಲೋಕೋಪಯೋಗಿ ಇಲಾಖೆಯಲ್ಲಿರುವಂತಹ Executive Engineer ಎನ್ನುವುದನ್ನು ಮಾತ್ರ ಇಲ್ಲಿ ಉಲ್ಲೇಖ ಮಾಡುತ್ತಿದ್ದೇನೆ. ಅಂತಹ ಅಧಿಕಾರಿಗಳ ಮೇಲೆ ಸರ್ಕಾರ ಏನಾದರೂ ಸೂಕ್ತ ಕ್ರಮ ಕೈಗೊಂಡಿತು ಎಂದರೆ, ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಇಲ್ಲವೆಂದರೆ ಆ ಭಾಗದಲ್ಲಿರುವಂತಹ ಜನರ ಒಂದು ಆಗ್ರಹ, ಧರಣಿ, ಪ್ರತಿಭಟನೆ ಮೂಲಕ ಸರ್ಕಾರಕ್ಕೆ ಕೆಟ್ಟ ಹೆಸರು ಬರುವಂತಹ ಸಂಭವ ಇರುವುದರಿಂದ ಅಧಿಕಾರಿಗಳನ್ನು ಜಾಗೃತರನ್ನಾಗಿ ಮಾಡಲು ಈ

ಸರ್ಕಾರ ಏನು ಕ್ರಮ ಕೈಗೊಳ್ಳಬೇಕು ಆ ರೀತಿ ಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ. ಇನ್ನೊಂದು ಕಡಂಗ ಕದನೂರ ಎನ್ನುವಂತಾದ್ದು. ಕೇವಲ ೬ ಕಿ.ಮೀ ಉದ್ದದ ರಸ್ತೆ ಇದೆ. ಈ ಆರು ಕಿ.ಮೀ ಉದ್ದದ ರಸ್ತೆಯನ್ನು ಸರಿಪಡಿಸುವುದಕ್ಕೆ ಅಲ್ಲಿನ Executive Engineer ಆಗಿರುವಂತಹ, ಆ ಭಾಗದಲ್ಲಿ ರಸ್ತೆ ಸಂಚಾರ ಮಾಡುತ್ತಿದ್ದಂತಹ ಬಸ್ಸುಗಳ ನಿಲುಗಡೆಯಿಂದ ಸಾಗರಿಕರಿಗೆ ತುಂಬಾ ತೊಂದರೆಯಾಗಿದೆ. ಅದನ್ನು ಕೂಡ ತಪ್ಪಿಸುವಂತಹ ಕೆಲಸವನ್ನು ಈ ಸರ್ಕಾರ ಮಾಡಬೇಕಾದರೆ, ಈ ಅಧಿಕಾರಿ ಮೇಲೆ ಕ್ರಮವನ್ನು ಕೈಗೊಳ್ಳಬೇಕು. ಆ ಅಧಿಕಾರಿ ಕೆಲಸ ಮಾಡಲಿಲ್ಲವೆಂದರೆ, ಅಧಿಕಾರಿಯನ್ನು ಬೇರೆ ಕಡೆಗೆ ವರ್ಗಾವಣೆ ಮಾಡಿರುವಂತಹ ಕೆಲಸವನ್ನು ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಅದೇರೀತಿ ಕೊನೆಯದಾಗಿ ಒಂದು ವಿಚಾರವನ್ನು ನಾವು ಹೇಳಬೇಕಾಗಿದೆ. ಇವತ್ತು ಗಿರಿಜನರಿಗೆ ಸಂಬಂಧಿಸಿದಂತೆ ಕೋಟ್ಯಾತರ ರೂಪಾಯಿ ಹಣವನ್ನು ಈ ಸರ್ಕಾರ ಮಂಜೂರು ಮಾಡಿದೆ. ಆದರೆ ಆ ಯೋಜನೆಯಲ್ಲಿ ಮಂಜೂರಾಗಿರುವಂತಹ ಹಣ ಈ ಗಿರಿಜನರಿಗೆ ತಲುಪಿಸುವಂತಹ ವಿಚಾರದಲ್ಲಿ ಅಧಿಕಾರಿಗಳ ಅಸಡ್ಡೆಯಿಂದ, ಅಧಿಕಾರಿಗಳ ಪಕ್ಷಪಾತದಿಂದ, ಅಧಿಕಾರಿಗಳ ಬ್ರಷ್ಟಾಚಾರದಿಂದ ಇವತ್ತು ಆ ಹಣ ತಲುಪುತ್ತಿಲ್ಲ. ಇವತ್ತು ಜಿಲ್ಲಾಪಂಚಾಯತ್‌ನಲ್ಲಿ ಒಬ್ಬ ಅಧಿಕಾರಿ ವಿರುದ್ದ ITDP officer ಆಗಿದ್ದಂತಹ ಸತ್ಯನಾರಾಯಣ್ ವಿರುದ್ಧ CoD ತನಿಖೆ ಆಗಬೇಕು ಎಂದು ನಿರ್ಣಯವನ್ನು ಕಳುಹಿಸಿದರು ಕೂಡ, ಇವತ್ತು ಆ ಒಂದು ವ್ಯಕ್ತಿಯ ಮೇಲೆ ಯಾವುದೇ ನಿರ್ಣಯವನ್ನು ಕೈಗೊಂಡಿಲ್ಲ. ಇದು ಕೊಡಗು ಜಿಲ್ಲೆಯಲ್ಲಿ ನಡೆಯುತ್ತಿರುವಂತಹ ಅನ್ಯಾಯದ ಪರಮಾವಧಿ ಎಂದರೆ ತಪ್ಪಾಗಲಾರದು. ಈ ಒಂದು ವಿಚಾರದಲ್ಲಿ ಮಾನ್ಯ ಸಮಾಜ ಕಲ್ಯಾಣ ಸಚಿವರನ್ನು ನಾನು ಪ್ರಸಂಶೆ ಮಾಡುತ್ತೇನೆ. ಅವರು ಉತ್ತಮವಾದಂತಹ ಕೆಲಸವನ್ನು ಮಾಡುತ್ತಿದ್ದಾರೆ. ಅದೇ ರೀತಿ ಕಾರ್ಯದರ್ಶಿಯವರಾದ ಆಗವಾನೆಯವರು ಕೆಲಸವನ್ನು ಮಾಡುತ್ತಿದ್ದಾರೆ. ಆದರೆ ದುರ್ದೈವ ಏನೆಂದರೆ ಈ ರೀತಿ ಅಕ್ಷಮ್ಯ ಅಪರಾಧ ಬ್ರಷ್ಟಾಚಾರ ಮಾಡಿರುವಂತಹ ವ್ಯಕ್ತಿಗೆ ಅಲ್ಲಿನ ಜಿಲ್ಲಾಪಂಚಾಯಿತಿನಲ್ಲಿ CEO ಆಗಿರುವಂತಹವರು ಕೂಡ ಒಂದು

ರೀತಿಯಲ್ಲಿ ಸಾಮೀಲಾಗಿರುವುದರಿಂದ ಅಲ್ಲಿ ಬ್ರಷ್ಟಾಚಾರ ಜಾಸ್ತಿಯಾಗುತ್ತಿದೆ. ಆ ಗಿರಿಜನರಿಗೆ ಕೊಡಬೇಕಾಗಿದಂತಹ ಹಣ ಅವರಿಗೆ ತಲುಪುತ್ತಿಲ್ಲ. ಏಕೆಂದರೆ ಬಸವರಾಜು ಅವರು ಸರ್ಕಾರದ ಪ್ರಸಂಶೆಯನ್ನು ಮಾಡಿದರು ಬಾಕಿ ವಿಚಾರವನ್ನು ಹೇಳಲಿಲ್ಲವೆನ್ನುವಂತಹ ಮಾತು ಬೇಡ. ಕೆಲವು ವಿಚಾರದಲ್ಲಿ ನಮ್ಮ ಸರ್ಕಾರ ಕೂಡ ಕೆಲವು ಅಧಿಕಾರಿಗಳಲ್ಲಿ ಜಾಗ್ರತೆಯನ್ನು ತರಬೇಕು ಎನ್ನುವ ಮನೋಯಿಚ್ಚೆಯಿಂದ ನಾನು ಹೇಳುತ್ತಿದ್ದೇನೆ. ನಮ್ಮಲ್ಲಿ ಇರುವಂತಹ ಎಲ್ಲಾ ಮಂತ್ರಗಳು ಉತ್ತಮವಾದ ಕೆಲಸಗಳನ್ನು ಮಾಡುತ್ತಿದ್ದಾರೆ. ಅದರಲ್ಲಿ ಎರಡು ಮಾತಿಲ್ಲ, ಆದರೆ ಅಧಿಕಾರಿಗಳ ಒಂದು ಬೇಜವಾಬ್ದಾರಿತನ ಮುಂದುವರೆಯದೆ ಇರುವ ಹಾಗೆ ಮಾಡಬೇಕು ಎಂದು ಸರ್ಕಾರಕ್ಕೆ ಹೇಳುತ್ತಾ, ತಾವು ನನಗೆ ಆಯ್ಯಯದಲ್ಲಿ ಮಾತನಾಡುವುದಕ್ಕೆ ಅವಕಾಶವನ್ನು ನೀಡಿದ್ದೀರಿ. ಇವತ್ತು ಆಯವ್ಯಯವನ್ನು ಏನು ಮಂಡನೆ ಮಾಡಿದ್ದೀರಿ, ಇದರಿಂದ ಎಲಲ್ರಿಗೂ ಅನುಕೂಲವಾಗುತ್ತದೆ. ಇದನ್ನು ಸ್ವಾಗತಿಸಬೇಕು ಎಂದು ಕೇಳಿಕೊಂಡು ನನಗೆ ಮಾತನಾಡುವುದಕ್ಕೆ ಅವಕಾಶ ನೀಡವಂತಹ ತಮಗೆ ವಂದಿಸಿ ನನ್ನ ಮಾತನ್ನು ಮಗಿಸುತ್ತೇನೆ.

ಅಧ್ಯಕ್ಷರು : ಈಗ ಮಾನ್ಯ ದೇಶಪಾಂಡೆಯವರೆ ಮಾಡತನಾಡುತ್ತೀರಾ ? ೨.೩೦ ಗಂಟೆಯವರೆಗೂ ಮಾತನಾಡಿ. ನಿಮ್ಮ ಕಡೆಯಲ್ಲಿ ಇನ್ನು ಮಾತನಾಡುವವರು ೨೦ ಜನ ಇದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಗೌರಾನ್ವಿತ ಉಪ ಮುಖ್ಯಮಂತ್ರಿಗಳಿಗೆ ಒಂದು ಒಳ್ಳೆಯ ಬಂಗಾರದಂಥ ಅವಕಾಶ ಈ ಮುಂಗಡ ಪತ್ರವನ್ನು ಮುಂಡೆ ಮಾಡುವುದಕ್ಕೆ ಇತ್ತು. ಆದರೆ ಆ ಅವಕಾಶವನ್ನು ಅವರು ಕಳೆದುಕೊಂಡಿದ್ದಾರೆ. ಒಂದು ರಾಜಕೀಯ ಪಕ್ಷವಾದ ನಂತರ ಚುನಾವಣೆಗಳು ಮತ ಪರಿವರ್ತನೆಯನ್ನು ಗಮನದಲ್ಲಿ ಇಡಬಾರದು ಎಂದು ಹೇಳುವುದಿಲ್ಲ. ಆದರೆ ಏನಾಗಿದೆ ಎಂದರೆ ಕೇವಲ ಚುನಾವಣೆ ಬರುತ್ತಿದೆ, ಆ ಚುನಾವಣೆಗೆ ನಾವು ಸಿದ್ಧತೆ ಮಾಡಬೇಕು ಎಂದು ಹಲವಾರು ನಿರ್ಣಯಗಳು ರಾಜ್ಯದ ಆರ್ಥಿಕ ವ್ಯವಸ್ತೇಯ ವಿರುದ್ಧ ಈ ಸರ್ಕಾರ ತೆಗೆದುಕೊಂಡಿದೆ. ಎರಡು ಪಕ್ಷಗಳ ಸಮ್ಮಿಶ್ರ ಸರ್ಕಾರದಲ್ಲಿ

ಇದ್ದಂತಹ ಸ್ಪರ್ಧೆ. ಅದು ಅವರವರ ಹೇಳಿಕೆಯಿಂದ, ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಸಾಲ ಮನ್ನಾ ಮಾಡುತ್ತೇವೆಂದು ಹೇಳಿದರು. ಆಗ ಮಾನ್ಯ ಉಪ ಮುಖ್ಯಮಂತ್ರಿಗಳು ಜವಾಬ್ದಾರಿಯಿಂದ ಹೇಳಿದರು. ಅವರು, ಹಾಗೆ ಹೇಳುವುದಕ್ಕಾಗುವುದಿಲ್ಲ, ಎಲ್ಲಾ ವಿಚಾರ ಮಾಡಬೇಕೆಂದು ಜವಾಬ್ದಾರಿಯಾಗಿ ಹೇಳಿದರು. I welcome the statement. ಅರಾಕ್ ನಿಷೇಧ ಮಾಡುತ್ತೇವೆ, ಲಾಟರಿ ನಿಷೇಧ ಮಾಡುತ್ತೇವೆ, ಇದೆಲ್ಲಾ ಒಳ್ಳೆಯದು. ಆದರೆ ಇದರ consequences ಏನು ? ಎಷ್ಟು Financial strain exchequer ಮೇಲೆ ಆಗಬಹುದು. ಇದನ್ನು ತಡೆದುಕೊಳ್ಳುವ ಶಕ್ತಿ ರಾಜ್ಯಸರ್ಕಾರದ exchequer ಗೆ ಇದೆಯೇ ? ಸಂಪನ್ಮೂಲಗಳನ್ನು ಬಳಸಿದಾಗ, ನಾವು ಖರ್ಚು ಮಾಡಬಹುದು, ಆದರೆ ಇವತ್ತು ಪದೇ ಪದೇ ಮಾನ್ಯ ಮುಖ್ಯಮಂತ್ರಿಯವರು, ನನಗೆ Planning Commission ನವರು Certificateಅನ್ನು ಕೊಟ್ಟಿದ್ದಾರೆಂದು ಹೇಳುತ್ತಾರೆ. ನಿಜ, ಕೊಟ್ಟಿದ್ದಾರೆ. ಆದರೆ ಆದರ ಶೇರನ್ನು ಈ ಸರ್ಕಾರ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಈಗ ತೆಂಗಿನಮರವನ್ನು ನೆಟ್ಟದ ನಂತರ , ಅದರಲ್ಲಿ ೨ ತಿಂಗಳು, ೩ ತಿಂಗಳು, ಅಥವಾ ೧ ವರ್ಷದಲ್ಲಿ ಫಲ ಬರುವುದಿಲ್ಲ. ಆ ಫಲ ಬರಬೇಕಾದರೆ ಸಾಕಷ್ಟು ಸಮಯ ಬೇಕು. ಹಲವಾರು ಸರ್ಕಾರಗಳು successive Governmentಬಂದು ಹೋಗಿದೆ. ಇಲ್ಲಿ ನಾನು ಈ party ಸರ್ಕಾರ, ಆ party ಸರ್ಕಾರವೆಂದು ಹೇಳುತ್ತಾ ಇಲ್ಲ. Successive Governments ಸರಿಯಾಗಿ Finance ಅನ್ನು manage ಮಾಡಿದರೆಂದು ಹೇಳಿ, ಕೇಂದ್ರ ಸರ್ಕಾರದ Planning Commission ಹಲವಾರು ಬಾರಿ, ನೀವು Financial Management ಅನ್ನು ಬಹಳ ಚೆನ್ನಾಗಿ ಮಾಡಿದ್ದೀರೆಂದು ಪ್ರಶಸ್ತಿಯನ್ನು ಕೊಟ್ಟಿದ್ದಾರೆ. ಅದನ್ನು ಈ ಸರ್ಕಾರಕ್ಕೂ ಕೊಟ್ಟಿದದಾರೆ, ಹಿಂದಿನ ಸರ್ಕಾರಕ್ಕೂ ಕೊಟ್ಟಿದ್ದಾರೆ. ಇವತ್ತು buoyancy in tax collections ನಲ್ಲಿ ನಿಮಗೆ ಏನು grade ಕೊಡುವುದಿಲ್ಲವೆಂದು ಹೇಳುವುದಿಲ್ಲ. ನಿಮಗೆ ನಾನು total credit ಕೊಡುವುದಿಲ್ಲ. Industrial growth is 14.4%. ಹಾಗಾಗಿ ಇಡೀ ದೇಶದಲ್ಲಿ ಇವತ್ತು buoyancy in tax collection ಏನು ಇದೆ. ಕೇವಲ ಕರ್ನಾಟಕ ಅಲ್ಲ,

Central Government 45%, 58% customs, excise, income tax compare ಮಾಡಿದರೆ, ನಿಮ್ಮದು ಹೆಚ್ಚೇನೂ ಇಲ್ಲ. Yes, if you compare, Karnataka is one State which is financially well managed. ಆದರೆ ಎಲ್ಲವನ್ನು ನಾನೇ ಮಾಡಿದೆನೆಂದರೆ ತಪ್ಪಾಗಬಹುದು. ಹಾಗಾಗಿ ಇದರ ಗೌರವ successive Chief Minister ಗೆ ಹೋಗಬೇಕು. ಇವತ್ತು ನಾನು ಹೇಳಿದೆ, Industrial output 14.4 growth. ಭಾರತ ದೇಶ 9.2 GDP ಮಾಡುತ್ತಿದೆ. ಕರ್ನಾಟಕ ಕೂಡ ಪ್ರಗತಿ ಮಾಡುತ್ತಿದೆ. ಆದರೆ ಇದರ ಪ್ರಗತಿಯ ಲಾಭ ಯಾವ ವರ್ಗಕ್ಕೆ ಹೋಗಬೇಕಾಗಿತ್ತೋ, ಆ ಪ್ರಮಾಣದಲ್ಲಿ ಹೋಗಿಲ್ಲವೆಂದು ನಾವು ಒಪ್ಪಿಕೊಳ್ಳಬೇಕಾಗಿದೆ. ಇದು ಹಳ್ಳಿಗಳಿಗೆ ಹೋಗಬೇಕಾಗಿದೆ, ರೈತರಿಗೆ ಹೋಗಬೇಕಾಗಿದೆ, ಕೂಲಿಕಾರರಿಗೆ ಹೋಗಬೇಕಾಗಿದೆ, ನಿರುದ್ಯೋಗಿ ಯುವಕ ರಿಗೆ ಯೋಗಬೇಕಾಗಿದೆ. ಆ ಲಾಭ ಹೋಗಬೇಕಾದರೆ, ನಮ್ಮ ನಿಮ್ಮ ಪ್ರಯತ್ನ ವಿರಬೇಕಾಗುತ್ತದೆ. ಇವತ್ತು ನನಗೆ ಗೊತ್ತಿಲ್ಲ. ನಿಮ್ಮ internal ವ್ಯವಹಾರದಲ್ಲಿ ಅವರು ಇದ್ದಾರೆ. ಆದರೆ ರಾಜ್ಯದ ಇತಿಹಾಸದಲ್ಲಿ This is the first time the budget is presented without a Principal Secretar to the Finance Department. ನಾನು೨೫ ವರ್ಷಗಳು ಈ ಸದನದಲ್ಲಿ ಕೆಲಸ ಮಾಡಿದ್ದೇನೆ. ರಾಜ್ಯದ ಮುಂಗಡ ಪತ್ತದ ವಿಚಾರದಲ್ಲಿ ಏಕೆ ಇಲ್ಲ ? ಯಾವುದು ಇಲ್ಲ ? That is a different issue. Principal Secretary will have overall view of the department. Atleast budget timeನಲ್ಲಿ Principale Secretary to Finnance ಅವರನ್ನು ಉಪಮುಖ್ಯಮಂತ್ರಿಯವರು ಇಟ್ಟುಕೊಂಡರೆ, ಅದರ ಲಾಭ ವಾಗುತ್ತಿತ್ತೆಂದು ಭಾವಿಸುತ್ತೇನೆ. ಇದರ ಅರ್ಥ Financeನಲ್ಲಿ ಕೆಲಸ ಮಾಡುವ ಬೇರೆ ಅಧಿಕ್ಕಾರಿಗಳಿಗೆ ಅರ್ಹತೆ ಇಲ್ಲವೆಂದು ನಾನು ಹೇಳುತ್ತಾ ಇಲ್ಲ. ಇವತ್ತು ನನ್ನ ದೃಷ್ಟಿಯಿಂದ ರೈತರ ವಿಚಾರ ನಿಮಗೆ ಪ್ರೀತಿಯ ವಿಷಯ, ಆದರೆ Finance ನಿಮಗೆ ಅಷ್ಟು ಪ್ರೀತಿಯ ವಿಷಯವಲ್ಲ. Finance ವಿಷಯದಲ್ಲಿ ಬಹಳ ಶಿಸ್ತನ್ನು ಇಟ್ಟುಕೊಂಡು ಹೋಗ ಬೇಕಾಗುತ್ತದೆ. ಆ ಶಿಸ್ತನ್ನು ಯಾವ ಪ್ರಕಾರ ಇಟ್ಟುಕೊಂಡು ಹೋಗ

ಬೇಕಾಗುತ್ತದೆಂದರೆ, ಅದರ ಬಗ್ಗೆ ಸಂವಿಧಾನದಲ್ಲಿ ಹೇಳಿದ್ದಾರೆ, ಮತ್ತೆ Fiscal Responsibility Act ನಲ್ಲೂ ಹೇಳಿದ್ದಾರೆ. ಈ ಬಜೆಟ್ ಮಾಡುವಾಗ ನಿಮಗೆ mostly ಸಂವಿಧಾನದ ಪುಸ್ತಕವನ್ನು ಯಾರು ತೋರಿಸಿಲ್ಲ. ನೀವು ನೋಡುವ ಪ್ರಯತ್ನ ಮಾಡಿಲ್ಲವೆಂದು ನಾನು ಭಾವಿಸುತ್ತೇನೆ. ನೀವು ಬಜೆಟ್ ಅನ್ನು ಏನು ಔಡಿಞಜಟಿಣ ಮಾಡುತ್ತೀರಿ ಅದು Article 202 ಪ್ರಕಾರ ನೀವು ಬಜೆಟ್ ಅನ್ನು ಏನು Present ಮಾಡುತ್ತೀರಿ ಅದು According to that Article, the Governor shall in respect of every financial year cause to lay before both the Houses of the Legislature of the State an Annual Financial Statement, ಮತ್ತು Article 202 ರಿಂದ 209 ರವರೆಗೆ, 209ರಲ್ಲಿ ಯಾವ ಪ್ರಕಾರ Fiscal Responsibility ಮಾಡಬೇಕು, ಯಾವ ಪ್ರಕಾರ ಇರಬೇಕು, fiscal discipline ಯಾವ ಪ್ರಕಾರ Appropriation Bill ಗಳನ್ನು pass ಮಾಡಿಕೊಳ್ಳಬೇಕು, ಇದರ ಬಗ್ಗೆ ವಿವರ ಇದೆ, Article 208ರಲ್ಲಿ ಇದು ಯಾವ ಪ್ರಕಾರ ಮಾಬೇಕು, ಯಾವ ಪ್ರಕಾರ regulate ಮಾಡಬೇಕು, ಎಂಬ ಉಲ್ಲೇಖವಿದೆ ಹಾಗಾಗಿ ರಾಜ್ಯಕ್ಕೆ ಉಜ್ವಲ ಭವಿಷ್ಯವಿರಬೇಕು ರಾಜ್ಯ ಪ್ರಗತಿಪರದಲ್ಲಿ ಇರಬೇಕೆಂದು ಹೇಳಿ, ಗೌರವಾನ್ವಿತ ಎಸ್.ಎಂ.ಕೃಷ್ಣರವರು, ರಾಜ್ಯದ ಮುಖ್ಯಮಂತ್ರಿ ಯಾಗಿದ್ದಾಗ, ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಕಾಯದೆ ೨೦೦೦ರಲ್ಲಿ ಜಾರಿಗೆ ಬಂತು. ಇದನ್ನು ಮಾನ್ಯ ಬಿ.ಎಸ್.ಯಡಿಯೂರಪ್ಪನವರು ನೋಡಿಲ್ಲ. ಈ Act ನಲ್ಲಿ ಹಲವಾರು ನಿರ್ಬಂಧಗಳು ಹಾಕಿದ್ದಾರೆ. ಇದನ್ನು ತಾವು ದಯಮಾಡಿ ನೋಡಬೇಕು. ನಾನು ನಿಜವಾಗಿ ಹೇಳುತ್ತೇನೆ, In the interest of State, I did not raise any point of order, otherwise, I could have raised a point of order on the day he presented the budget. ಯಾವ ದಿವಸ ಬಜೆಟ್ ಅನನು ಮಂಡನೆ ಮಾಡಿದ್ದೀರಿ, ಅದೇ ದಿವಸ ನಾನು point of order ಅನ್ನು raise ಮಾಡುತ್ತಾ ಇದ್ದೆ. ಆದರೆ ಅದು ಸರಿಯಲ್ಲ, ಒಂದು ಬಜೆಟ್ ನಲ್ಲಿ ರಾಜ್ಯದ ಹಿತವಿರುತ್ತದೆಂದು ಆ ರೀತಿ ಮಾಡಿಲ್ಲ. ನಾನು ತಮ್ಮ ಗಮನಕ್ಕೆ

ತರುತ್ತಿದ್ದೇನೆ. Section 3 ಅನ್ನು ತಮ್ಮ ಗಮನಕ್ಕೆ ತಂದರೋ ಇಲ್ಲವೋ ಗೊತ್ತಿಲ್ಲ. The State Government shall, in each financial year cause to lay before both the Houses of the Legislature, a medium-term fiscal plan along with the annual budget. ನೀವು ಬಜೆಟ್ ಏನು ಮಂಡನೆ ಮಾಡಿದಿರಲ್ಲಾ, ಅದರ ಜೊತೆಗೆ ನಿಮ್ಮ Fiscal Plan ಇರಬೇಕಾಗಿತ್ತು. It "shall" ನಾನು ಕೇಳುತ್ತೇನೆ, ನೀವು ಏಕೆ ಮಾಡಿಲ್ಲ? ಮಾಡಬೇಕಾಗಿತ್ತು ಏಕೆಂದರೆ ಇಲ್ಲಿ ನಿಮಗೆ ಅವಕಾಶವಿಲ್ಲ. ನೀವು ಬಜೆಟ್ ಅನ್ನು ಬಿಡುಗಡೆ ಮಾಡುವಾಗ, ನೀವು ಇದನ್ನು ಇಡಬೇಕಾಗಿತ್ತು, ತಾವು ಇಟ್ಟಿಲ್ಲ, ನಿಮ್ಮ ಅಧಿಕಾರಿಗಳು ಹೇಳುತ್ತಾರೆ, ನೀವು vote on account ತೆಗೆದುಕೊಳ್ಳುತ್ತಿದ್ದೀರಿ. ಇದನ್ನು August ತಿಂಗಳಲ್ಲಿ ಕೊಡಿಯೆಂದು. ನೀವು ಇದನ್ನು budget present ಮಾಡುವಾಗ ಇಡಬೇಕು shall ಎಂದು ಇದೆ. ಹಾಗಾಗಿ ಇದರ ಮೇಲೆ ಏನು ಪರಿಣಾಮ ವಾಗಿದೆಯೆಂದರೆ, ಇದರಲ್ಲಿ ನಿಮ್ಮ rolling plan ಇರಬೇಕಾಗುತ್ತದೆ. ನೀವು ೪ ವರ್ಷಗಳ rolling plan ಅನ್ನು ಕೊಡಬೇಕಾಗುತ್ತದೆ. ಯಾವ ರೀತಿಯಿಂದ ನೀವು revenue expect ಮಾಡುತ್ತೀರಿ? ಯಾವ ರೀತಿಯಿಂದ ನೀವು expenditure ಮಾಡುತ್ತೀರಿ ? ಇದರ ಬಗ್ಗೆ the medium term plan shall set forth a four year rolling plan/ target for prescribed fiscal indicators, the specifications underlying assumptions. Rolling plan ಏನು ಇದೆ, ತೋರಿಸಿ. Mid-term plan ಇಲ್ಲ, rolling plan ಇಲ್ಲ, How this budget can be valid in law ? ಇದರ ಬಗ್ಗೆ ನಿಮ್ಮ ಗಮನಕ್ಕೆ ಬಂದಿಲ್ಲವೆಂದರೆ, ನಿಮ್ಮ Senior Officers ತಮ್ಮ ಗಮನಕ್ಕೆ ತರಬೇಕಾಗಿತ್ತು. ತಾವು ಇಲ್ಲಿ ವಿರೋಧಪಕ್ಷದ ನಾಯಕರಾಗಿ ಇದದಾಗ, ಈ ಕಾಯದೆ pass ಆಗಿತ್ತು. ಇದರ ಬಗ್ಗೆ ಚರ್ಚೆಯಲ್ಲಿ ಭಾಗವಹಿಸಿರಬಹುದು. IPlease understand, I don't want to go by practise. I am debating. ಒಬ್ಬ ಮರ್ಡರ್ ಮಾಡಿದ ನೀವು ಮಾಡಿದಿರೆಂದು ಹೇಳುವುದಕ್ಕೆ ಬರುವುದಿಲ್ಲ. ಕಾಯದೆ ಇದೆ. I am reading the law. Let us discuss. We

are debating in the House. Nobody raised it then. You have to admit honourably that it is a mistake and in future such mistakes will not be committed. ಏಕೆಂದರೆ, balance between revenue receipts and expenditure ಗೊತ್ತಾಗ ಬೇಕಾಗುತ್ತದೆ. ಅದರ ಪ್ರಕಾರ ನಿಮ್ಮ ಆಗುತ್ತದೆ. As a Finance Minister ಈ ಕಾಯದೆ ಪ್ರಕಾರ review ಮಾಡಬೇಕಾಗುತ್ತದೆ. ಆ review ಅನ್ನು ನೀವು ಯಾವಾಗ ಮಾಡಿದಿರಿ? ಇದು ಗೌರವಾನ್ವಿತ ಸದಸ್ಯರ ಗಮನಕ್ಕೆ ಬರಬೇಕಾಗುತ್ತದೆ. These are all mandatory procedures. ಇದನ್ನು ನಾನು ರಾಜಕೀಯವಾಗಿ ಲಾಭ ಪಡೆದು ಕೊಳ್ಳುವುದಕ್ಕೆ ಹೇಳುತ್ತಿಲ್ಲ. Constitution ಏನು ಕಾಯದೆ, ಕಾನೂನು ? Fiscal Responsibility Act ನಲ್ಲಿ ಹೇಳಿದ್ದಾರಲ್ಲಾ, ಅದನ್ನು ನಾನು ನಿಮಗೆ ಹೇಳಲಿಲ್ಲೆ ಪ್ರಯತ್ನ ಮಾಡುತ್ತಿದ್ದೇನೆ. Karnatka Fiscal Responsibility Act ಇದು ೨೦೦೨ರ ಆಗಸ್ಟ್ ನಲ್ಲಿ ಜಾರಿಗೆ ಬಂತು. ಮಾನ್ಯ ಶ್ರೀ ಅಶೋಕ್‌ರವರೆ, ಇದರಲ್ಲಿ ಕಳೆದ ೫೦ ವರ್ಷಗಳ ಪ್ರಶ್ನೆ ಬರುವುದಿಲ್ಲ. ಕೇವಲ ೪-೫ ವರ್ಷಗಳಾಗಿದೆ. ಹಾಗಾಗಿ, financial system ಗೆ ಬರಬೇಕು ; financial system ಗೆ stability ಬರಬೇಕು ; ಅನ್ನು ನಾವು reduce ಮಾಡಿ within four years 3% ತಂದು, ನಂತರ ಅದನ್ನು nil ಗೆ ತರಬೇಕೆನ್ನುವ ಆ guidelines ಅನ್ನು ತಂದ ಮಸೂದೆ ಯಾಗಿದೆ. ಆ ಮಸೂದೆಯನ್ನು ಮನಸ್ಸಿಗೆ ಬಂದಾಗ ಸದನದ ಮುಂದೆ ಇಡುತ್ತೇನೆ, ಅದೇ ಇದೆ ಎಂದರೆ ಅದಕ್ಕೆ ನನ್ನ ಹತ್ತಿರ ಉತ್ತರವಿಲ್ಲ. ಕಾಯದೆಯಂತೆ ಮಾಡಬೇಕಾದರೆ, ಕಾಯದೆ, ಕಾನೂನಂತೆ ಹೇಳಬೇಕಾದರೆ, ನಾನು ಇಷ್ಟೇ ಹೇಳುತ್ತೇನೆ. ನಿಮ್ಮ ಜವಾಬ್ದಾರಿ more leagal ಇದ್ದು you should have seen that the medium term fiscal plan was presented to this august House along with the budget.

ಡಾ: ವಿ.ಎಸ್.ಆಚಾರ್ಯ : fiscal responsibiliteis, fiscal deficit ಎಷ್ಟಿರಬೇಕೆಂಬುದರಲ್ಲಿ, ಮಧ್ಯಮಾವಧಿ, ಧೀರ್ಘಾವಧಿ, <u>plan</u>

ಏನಿರಬೇಕೆಂಬ ಬಗ್ಗೆ those things have been addressed in the budget sppech. Para No.25,21 ನೋಡಿ.

ಶ್ರೀ ಆರ್.ವಿದೇಶಪಾಂಡೆ : ನಾವು ಒಪ್ಪಿದ್ದೇವೆ. ಆದರೆ, let us not get confused. I am reading Section 3 which ays that Medium Term Fiscal Plan to be laid before the Legislature. The State Governemnt shall in each financial year lay before both Houses a medium term fiscal plan along with the Annual Budget. You have presented the Annual Budget.

ಡಾ: ವಿ.ಎಸ್. ಆಚಾರ್ಯ : ಮಾನ್ಯ ಅಧ್ಯಕ್ಷರೆ, ಈಗತಾನೆ ರಾಜಸ್ವ ಕೊರತೆ ಏನಾಯಿತು ಎಂದು ಕೇಳಿದರು. ಶೇಕಡ ೩ ಕ್ಕಿಂತ ಕಡಿಮಡ ಇದೆಯೆಂದು ಹೇಳುವಂಥದ್ದನ್ನು para no.25 ರಲ್ಲಿ ಹೇಳಿದ್ದೇವೆ. ಆಮೇಲೆ debt servicing ನ position is also convenient. ಎಷ್ಟು ಸಾಲವಿದೆ ? ಈ ವರ್ಷ ತೆಗೆದುಕೊಂಡಿರುವಂಥದ್ದು ಎಷ್ಟು ? ಅದೆಷ್ಟರೊಳಗಿದೆ. ಈಗ medium term plan ಅನ್ನು present ಮಾಡುವಂಥದ್ದು ಏನಿದೆ, ನಾವು ಹೇಳುವುದೇನೆಂದರೆ, this budget is going to come into force from 1st April onwards.

ಶ್ರೀ ಆರ್.ವಿ.ದೇಶಪಾಂಡೆ : ಈ ಬಜೆಟ್‌ನಲ್ಲಿ ಏನಿದೆ, ಏನಿಲ್ಲ I will come to it afterwards. ಆದರೆ, ಪ್ರಶ್ನೆ ಏನಿದೆ ಅಂದರೆ, budget ಮಾಡುವಾಗ medium term fiscal plan ಅದರ ಜೊತೆ ಎರಡೂ ಮನೆಗೆ ತಾವು present ಮಾಡಬೇಕಿತ್ತೆಂದು ಕಾಯದೆ ಹೇಳುತ್ತದೆ. ಹಿಂದೆ ಯಾರೂ ಮಾಡಿಲ್ಲ, ಹಾಗಾಗಿ, ನಾನು ಮಾಡಿಲ್ಲವೆನ್ನುವುದು ಸರಿಯಲ್ಲ. I would have done wrong. ತಾವು improve ಮಾಡಿಕೊಳ್ಳಬೇಕಲ್ಲವೇ ? ಹಾಗಾಗಿ ನಾನು ನಿಮ್ಮ ಗಮನಕ್ಕೆ ತಂದೆ. ಮುಖ್ಯವಾಗಿ Fiscal. Responsibility Act ಅನ್ನೇನು ನಾವು ಪಾಸ್ ಮಾಡಿದ್ದೇವೆ, it is a landmark event in the history of the State. ಯಾವ ಪ್ರಕಾರ

borrowings ಮೇಲೆ restrictions ಇರಬೇಕು, ಯಾವ ಪ್ರಕಾರ deficit ಅನ್ನು ನಾವು ಕಡಿಮೆ ಮಾಡಬೇಕು, ಯಾವ ಪ್ರಕಾರ ನಮ್ಮ revenue deficit ಅನ್ನು nil ಮಾಡಬೇಕು ಎಂಬ ಬಗ್ಗೆ ಅದರಲ್ಲಿ guidelines ಇದೆ. ನಾವು guidelines ತೆಗೆದುಕೊಳ್ಳುವುದಿಲ್ಲ. I want to just throw that to the winds ಎಂದು ಹೇಳಿದರೆ ಯಾರೂ ಏನೂ ಮಾಡಲಿಕ್ಕಾಗುವುದಿಲ್ಲ. ಆ ತರಹದ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. Medium Term Fiscal Plan ನ objectives ಏನು ಹೇಳುತ್ತದೆ ? ನಿಮ್ಮ objectives ಏನು? Budget is different . Medium Term Fiscal Plan is different. I request you to pleae read that Act which I am referring. ಅಲ್ಲಿ ನಿಮ್ಮ ಸರ್ಕಾರದ objectives ಏನು ? Evaluation ಮಾಡಬೇಕಾಗುತ್ತದೆ. ಮಾನ್ಯ ಗೌರವಾನ್ವಿತ ಉಪಮುಖ್ಯಮಂತ್ರಿಗಳು ಪ್ರತಿ ಇಲಾಖೆಯನ್ನು review ಮಾಡಿ, ಅದರ evaluation, target ಏನಿತ್ತು ಆ target achieve ಆಯಿತೇ ಇಲ್ಲವೇ ಎಂದು ನೋಡಬೇಕು. That evaluation should available to the Members for discussion and enlighten the position. Tartget ಎಲ್ಲ ಕಡೆ achieve ಆಗುತ್ತದೆಂದು ನಾನು ಹೇಳುವುದಿಲ್ಲ. ನಾವು ಅಧಿಕಾರದಲ್ಲಿದ್ದಾಗ ಎಲ್ಲ target achieve ಮಾಡಿದ್ದೇವೆಂದು ನಾನು ವಾದ ಮಾಡುತ್ತಿಲ್ಲ.

ಶ್ರೀ ಆರ್.ಅಶೋಕ್ : ಮಾನ್ಯ ದೇಶಪಾಂಡೆಯವರು ಪದೇ ಪದೇ ೨೦೦೩ರ ಕಾಯದೆ ಪ್ರಕಾರ ಬಜೆಟ್ ಬಗ್ಗೆ ಸರ್ಕಾರ ಈ ತರಹ ಮಾಡಬೇಕಾಗಿತ್ತೆಂದು ಎಂದು ಹೇಳಿದರು. ೨೦೦೩ ರಲ್ಲಿ ಅಧಿಕಾರದಲ್ಲಿದ್ದಂಥವರೆಲ್ಲ ಇದೇ policy ಯನ್ನನುಸರಿಸಿಕೊಂಡು ಬಂದಿದ್ದಾರೆಯೇ ? ಯಾವ ರೀತಿ ಬಜೆಟ್ ಮಂಡನೆ ಮಾಡುತ್ತಾರೆ ? ಮತ್ತೊಂದು ಮಾತನ್ನೇನು ಹೇಳಿದರೆಂದರೆ,

ಆರ್. ವಿ. ದೇಶಪಾಂಡೆ : ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರ ಕೊಡುವಾಗ ಹೇಳುತ್ತಾರೆ. ನಾನು ಕೇವಲ ಕಾಯದೆ ಬಗ್ಗೆ

ಹೇಳುತ್ತಿದ್ದೇನೆ. Hon'ble Mr. Ashok, you are an young legislator.

ಶ್ರೀ ಆರ್. ಅಶೋಕ್ : ನೀವೂ ಇದೇ ಕಾಯದೆಯಡಿಯಲ್ಲಿ ಕೆಲಸ ಮಾಡಿದ್ದೀರಲ್ಲವೇ? ನಾವು ಸರಿ ಮಾಡಿದ್ದೇವೆ, ನೀವೂ ಸರಿ ಮಾಡಿ ಎಂದು ಹೇಳುವುದು ಸರಿ ಇರುತ್ತದೆ. ನಾವು ಮಾಡಿಲ್ಲ. ನೀವು ಮಾಡಿ ಎಂದು ಹೇಳುವುದು ಎಷ್ಟು ಸರಿ ಎಂದು ಕೇಳಬೇಕಾಗುತ್ತದೆ.

ಶ್ರೀ ಹಂಪನ ಗೌಡ ಬಾದರ್ಲಿ : ನೀವೂ ಅದೇ ತಪ್ಪನ್ನು ಮಾಡಬೇಡಿ ಎಂದು ದೇಶಪಾಂಡೆಯವರು ಹೇಳಿದ್ದಾರೆ. ಅವರು ಹೇಳಿಯೇ ಇಲ್ಲವೆಂದು ಹೇಳಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ನಿಮಗೆ ಇನ್ನೂ ಒಳ್ಳೆಯ future ಇದೆ. I have got every right to advise. ನಾನು ಹೇಳುವುದು ಸರಿಯಾಗಿದೆ. ನೀವು ತಪ್ಪು ಮಾಡಿದ್ದೀರಿ. ನಾನು ಹಾಗೇ ಮಾಡುತ್ತೇನೆಂದು ಹೇಳಬೇಡಿ. ನಾನು ಕಾಯದೆ ಹೇಳಿದ್ದೇನೆ. ಮಾನ್ಯ ದೇಶಪಾಂಡೆಯವರೆ, ನೀವು ಕಾಯದೆ ಹೇಳಿದ್ದೀರಿ. ಅದು ತಪ್ಪು ಎಂದು ಬೇಕಾದರೆ ಹೇಳಿ. But you have no choice.

ಶ್ರೀ ಆರ್. ಅಶೋಕ್ : ಅದನ್ನೇ ನಿಮ್ಮವರಿಗೆ ನೀವು ಹೇಳಬೇಕಾಗಿತ್ತಲ್ಲವೇ ? ನಿಮ್ಮ party ಯವರಿದ್ದರಲ್ಲವೇ ?

ಶ್ರೀ ಬಿ.ಎಸ್.ಯಡಿಯೂರಪ್ಪ (ಉಪ ಮುಖ್ಯಮಂತ್ರಿ) : ನಿಮ್ಮ ಸಲಹೆಯನ್ನು ಸ್ವಾಗತ ಮಾಡುತ್ತೇನೆ. ನಮ್ಮ ಕಾಂಗ್ರೆಸ್‌ನ ಸ್ನೇಹಿತರು ಅಧಿಕಾರದಲ್ಲಿದ್ದಾಗ ತಪ್ಪು ಮಾಡುವುದು ನಿಮ್ಮ ಜನ್ಮ ಸಿದ್ಧ ಹಕ್ಕೆಂದು ತಿಳಿದು ಕೊಂಡಿದ್ದೀರಿ. ನಾವು ತಿದ್ದಿಕೊಳ್ಳಬೇಕೆಂದು ಹೇಳುತ್ತಿದ್ದೀರಿ, ಮುಂದೆ ಅದನ್ನು ಸರಿಪಡಿಸುವ ಪ್ರಯತ್ನ ಮಾಡೋಣ. ಉತ್ತರ ಕೊಡಬೇಕಾದರೆ, ನಾನು ಅದಕ್ಕೆ ಸುದೀರ್ಘವಾದ ಉತ್ತರ ಕೊಡುತ್ತೇನೆ.

ಶ್ರೀ ದಿನೇಶ್ ಗುಂಡೂರಾವ್ : ಹಿಂದಿನ ಸಕಾರಗಳು ಯಾವ್ಯಾವು ತಪ್ಪು ಮಾಡಿದೆ ಎಂಬ ಬಗ್ಗೆ ಚರ್ಚೆ ಬೇಡ. ಸರ್ಕಾರ ಎಲ್ಲವನ್ನೂ ಸರಿ

ಮಾಡಿದೆಯೇ ? ಎಲ್ಲ ಸರ್ಕಾರಗಳವರೂ ತಪ್ಪು ಮಾಡಿಯೇ ಮಾಡುತ್ತಾರೆ. ಅದನು ಮುಂದೆ ಸರಿಪಡಿಸಿಕೊಂಡು ಹೋಗತಕ್ಕಂಥ ಒಂದು ಪ್ರಕ್ರಿಯೆಯನ್ನು ನಾವು ಮಾಡೋಣ.

ಶ್ರೀ ಆರ್.ವಿ. ದೇಶಪಾಂಡೆ : Fiscal, it is a very difficult subject. ನಾವಿಲ್ಲಿ ಹೇಳಬೇಕಾದರೆ, we have taken some pains. ಹಾಗಾಗಿ ಇದೇಕೆ ಬೇಕು , state of recent economic trends, future prospects ಏನಿದೆ? ಇಂಥ ಹಲವಾರು ವಿಚಾರಗಳು mid term fiscal plan ನಲ್ಲಿ ಬರುತ್ತದೆ. ಹಾಗಾಗಿ, ೨೦೦೨ನೇ ಇಸವಿಯಲ್ಲಿ ಈ ಕಾನೂನು ಪಾಸ್ ಆದಾಗ "shall" ಎಂದು ಮಾಡಿದ್ದೀರಿ. ನಾನು ಓದಿದ್ದು ಕಾಯದ ಕಾನೂನು. ಅದಕ್ಕೆ ನಿಮಗಿಲ್ಲ, ಹಿಂದಿನ ಸರ್ಕಾರಗಳು did not present mid term fiscal plan along with budget, ಹಾಗೆ ನಾವು ಮಾಡಿದ್ದೇವೆಂದು ಹೇಳುವುದಾದರೆ okay. But that is not correct. I would only say, ಇಲ್ಲಿ ಬಹಳ ದೊಡ್ಡ blunder ಸರ್ಕಾರದ ಕಡೆಯಿಂದ ಆಗಿದೆ.

ಡಾ: ವಿ.ಎಸ್. ಆಚಾರ್ಯ : ಮಾನ್ಯ ದೇಶಪಾಂಡೆಯವರೆ, ಈ ರಾಜ್ಯದಲ್ಲಿ ಜೂನ್ ೨೦೦೨ರ ನಂತರ ಪ್ರತಿ ವರ್ಷ ಜೂನ್ ಸಮಯಕ್ಕೆ ಇದನ್ನು lay ಮಾಡುತ್ತಿದ್ದೇವೆ. ಇದರಲ್ಲಿ ೨೦೦೭-೦೮ಕ್ಕೆ ಸಂಬಂಧಪಟ್ಟಂತ projection ಅನ್ನು ಈ ೨೦೦೬ ರಿಂದ ೨೦೧೦ ವರೆಗೆ ಕೊಟ್ಟಿದ್ದೇವೆ. ಇದು ಈ ವರ್ಷ ಇದಕ್ಕೂ ಹೊಂದಿಕೊಂಡಿರುವಂಥ future projections ಇದೆ. ತಾವು ದಯವಿಟ್ಟು ನೋಡಿ. Statement of compliance, ಅದೂ ಇದೆ. ಏನು ಬಜೆಟ್ನೊಟ್ಟಿಗೆ ಕೊಡಬೇಕೆಂದು ಹೇಳುವಂಥದ್ದಿದೆ, ೨೦೦೬ ರಿಂದ ೨೦೧೦ ರವರೆಗೆ ಕಳೆದ ವರ್ಷದ ಜೂನ್ ನಲ್ಲಿ ಕೊಟ್ಟಿದ್ದೇವೆ. ಪ್ರತಿ ವರ್ಷ ಜೂನ್ ನಲ್ಲಿ update ಮಾಡಿ ಕೊಡಬಹುದು.

ಶ್ರೀ ಆರ್. ವಿ. ದೇಶಪಾಂಡೆ : Finance ನಲ್ಲಿ ನೀವು expert ಎಂದು ಹೇಳುವುದಿಲ್ಲ. ಯಾರಾದರೂ experts ಇದ್ದರೆ ಅವರನ್ನು ಕೇಳಿ tell me today or tomorrow. If I am wrong, I apologize.

This is a rolling plan for 2006-2010 and this is for te year 2006. This budget is for 2007-08. Medium Term Fiscal Plan was required for 2007-08. Compliance ಎಂದು ಹೇಳುತ್ತೀರಲ್ಲ, first page compliance ನಲ್ಲಿದೆ. The compliance is here. Compliance ನಲ್ಲಿ ಏನಿದೆ ? This 2006-2010 Medium Term Fiscal Plan is tabled before the Legislature in compliance with Section 3 of the Karnataka Fiscal Responsibility Act. " This is for the year 2006. Not for 2007. ಪ್ರತಿ ವರ್ಷ ಮುಂಗಡ ಪತ್ರದ ಜೊತೆ ಇದನ್ನು ಇಡಬೇಕೆಂದಿದೆ. This is the law. Let us not waste more time on that.ನಾನು ಹೇಳಿದ್ದೇನೆ. ಅದರ ಬಗ್ಗೆ ಉಪ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ನಿಮ್ಮ Section 6 ಪ್ರಕಾರ ನಿಮ್ಮ policies and objectives should be consistent with the Medium Term Fiscal Plan and also the Medium Term Fiscal Plan for 2006-2010. ಅವು ಇವೆಯೇ ? ಅವು ಇಲ್ಲ. If you go through the medium term fiscal plan, ಅವು ಇಲ್ಲ. ಇವತ್ತು ಒಂದು ಬಜೆಟ್ present ಮಾಡಬೇಕಾದರೆ ಸಂವಿಧಾನ ಮತ್ತು Fiscal Responsibility Act is a Gita, a Bible and a Quran for a Finance Minister. ಆ ಕಾಯದೆ, ಕಾನೂನುಗಳ ಚೌಕಟ್ಟಿನಲ್ಲಿ ಅವರು Budget present ಮಾಡಬೇಕೆ ವಿನಾ ಎಲ್ಲ ಬೆರೆಸಿ Budget present ಮಾಡಲಿಕ್ಕಾಗುವುದಿಲ್ಲ. ಹಾಗಾಗಿ ಇದು legal impediment, and it is chalanged in the court of law,...

ಶ್ರೀ ಬಿ.ಎಸ್. ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು) : ತಾವು ಕೆಲವು ಸಲಹೆ ಕೊಟ್ಟಿದ್ದೀರಿ. ಕಳೆದ ಹತ್ತಾರು ವರ್ಷಗಳಿಂದೇನು practice ಮಾಡುತ್ತಿದ್ದೇವೆ ಮತ್ತೆ ನೀವು ಪೂರ್ಣ ಬಜೆಟ್ ಬಗ್ಗೆ ಚರ್ಚೆ ಮಾಡುವಂಥ ಕಾಲದಲ್ಲಿ ನೀವು ಹೇಳಿರುವುದನ್ನು ನಾವು ಗಮನಿಸುತ್ತೇವೆ. ಅದು ನಿಮಗೆ ಗೊತ್ತಿದೆ, ನಾನೇನೂ ಅದರ ಬಗ್ಗೆ ಹೇಳಬೇಕಾದ ಅಗತ್ಯವಿಲ್ಲ. ನಾನೇನು ನಿಮ್ಮಿಂದ ನಿರೀಕ್ಷೆ ಮಾಡುತ್ತಿದ್ದೇನೆಂದರೆ ಕಳೆದ ಬಜೆಟ್ ನಲ್ಲಿ ಏನು ಕೊರತೆಯಾಯಿತು ? ಈ ಬಜೆಟ್ ನಲ್ಲಿ ನಿಮ್ಮ ಸಲಹೆಗಳೇನು ? ಅದರ ಬಗ್ಗೆ ಹೇಳಿ ನಿಮ್ಮ ಅನುಭವ ಹಂಚಿಕೊಂಡರೆ ಕೈಗಾರಿಕೆ, ಬೇರೆ ಕ್ಷೇತ್ರಗಳ ಬಗ್ಗೆ ಹೇಳಿದರೆ ನನಗೆ ಅನುಕೂಲವಾಗುತ್ತದೆ.

ಶ್ರೀ ಆರ್. ವಿ. ದೇಶಪಾಂಡೆ : ಇದನ್ನು ತಮ್ಮ ಗಮನಕ್ಕೆ ತಂದೆ. At least, ನಿಮ್ಮ officers ಇದನ್ನು ಕೊಡಬೇಕಾಗಿತ್ತು ಎಂದು ಹೇಳ ಬೇಕಾಗುತ್ತದೆ. ನಾನೇಕೆ ಹೇಳುತ್ತಿದ್ದೇನೆಂದರೆ ಇವತ್ತು budget provision for public debt for the year 2006-07 is Rs. 3229.11 crores ಇತ್ತು. Revised estimate for public debt is Rs. 4,387.52 crores. ರೂ. ೬೫೮ ಕೋಟಿ public debt ಹೆಚ್ಚಾಗಿದೆ. ೧೭.೬೪% ಹೆಚ್ಚಾಗಿದೆ. ಇದೊಂದು ಹಣಕಾಸಿನ ವ್ಯವಸ್ಥೆಯಲ್ಲಿ normal departure ಅಲ್ಲ. ಈ departure ಬಗ್ಗೆ ನಿಮ್ಮ department ಅನ್ನು ನೀವು review ಮಾಡಿದ್ದರೆ ಇದೇಕಾಗುತ್ತಿದೆ ಎಂದು ಗೊತ್ತಾಗುತ್ತಿತ್ತು. Buoyancy ಇದೆ, tax collection ಹೆಚ್ಚಾಗಿದೆ. ಎಂದು ಹೇಳುತ್ತೀರಿ. ಹಾಗಾದರೆ, ನಿಮ್ಮ estimate ಏನಿತ್ತು, ಅದಕ್ಕಿಂತ ೬೦೪ ಕೋಟಿ ರೂಪಾಯಿ public debt ಏಕೆ ಹೆಚ್ಚಾಯಿತು. ಅದರ ಬಗ್ಗೆ ನಿಮ್ಮಿಂದ explanation ಬರಬೇಕಲ್ಲವೇ ? ನೀವು ನಿಮ್ಮ department ಅನ್ನು review ಮಾಡಿದ್ದರೆಏಕೆ ಈ ಸರ್ಕಾರ ಕೇಳಿದ್ದಕ್ಕಿಂತ ಹೆಚ್ಚಿನ ಹಣವನ್ನು ಸಾಲದ ರೂಪದಲ್ಲಿ ತೆಗೆದುಕೊಂಡಿದೆ ಎಂದು ಇಡೀ ಸದನಕ್ಕೆ ಗೊತ್ತಾಗುತ್ತಿತ್ತು. That exercise has not been done. ನಾನೊಂದು ಸಣ್ಣ ಉದಾಹರಣೆ ಕೊಡುತ್ತೇನೆ. ಅದರ ಪರಿಣಾಮ ಏನೆಂದು ಹೇಳುತತೇನೆ. ೨೦೦೬-೦೭ ಕ್ಕೆ ಮಾನ್ಯ ಉಪಮುಖ್ಯಮಂತ್ರಿಗಳ Taxes on sales and trade ನೀವು estimate ಮಾಡಿದ್ದು Rs.

12,430.10 crore. Revised estimate under this Head is Rs. 12,380.31 crore. So, there is a shortfall of Rs. 60 crores. ಏಕೆ? Buoyancy ಎಂದು ಹೇಳುತ್ತಿದ್ದೀರಿ Excise ನಲ್ಲಿ ಹೆಚ್ಚಾಗಿದೆ. Stamp and Registration ನಲ್ಲಿ ಹೆಚ್ಚಾಗಿದೆ. Tax on sales and trade ೬೦ ಕೋಟಿ ರೂಪಾಯಿ ಏಕೆ ಕಡಿಮೆಯಾಯಿತು ? ಇದನ್ನು ನೀವು review ಮಾಡಿದ್ದರೆ, ಎಲ್ಲಿ ತಪ್ಪಾಗಿದೆ ಎಂದು ನಿಮಗೆ ಗೊತ್ತಾಗುತ್ತಿತ್ತು. You would have improved the position. Why this has to come down to Rs. 60 crore ? ಅದೇ ಪ್ರಕಾರ, Goods and passengers, budget estimate ೨೦೦೬-೨೦೦೭ಕ್ಕೆ Rs. 1,155.37 crores ಇತ್ತು. The revised estimate is Rs. 1,095.63 crores. ಇಲ್ಲಿ ರೂ. ೬೦ ಕೋಟಿ ಹಣವೆಂದು ನಾನು ಹೇಳುವುದಿಲ್ಲ Shortfall ಏಕಾಯಿತು ? I have emphasized on your own Annual Finance Statement. Annual Finance Statement ನೋಡಿಯೇ ಹೇಳುತ್ತಿದ್ದೇನೆ, ಏಕೆ public debt ಹೆಚ್ಚಾಯಿತು ? ಏಕೆ shortfall ಆಯಿತು ? ಒಂದು ವೇಳೆ, ನೀವು ಈ department ಅನ್ನು review ಮಾಡಿದ್ದರೆ ಮತ್ತು ಆ review ಲಾಭವನ್ನು ಈ ಮನೆಗೆ ಕೊಟ್ಟಿದ್ದರೆ, it was likely you are safe, Bureaucracy always want to dictate. ಹಾಗಾಗಿ, ಇವತ್ತು ಈ ಒಂದು ತಪ್ಪಿನಿಂದ ಆರ್ಥಿಕ ವ್ಯವಸ್ಥೆಯೇ ಕೆಡುವ ಸ್ಥಿತಿ ಬಂದಿದೆ ಎಂದು ನಾನು ಭಾವಿಸಿದ್ದೇನೆ. ಗೌರವಾನ್ವಿತ ಉಪ ಮುಖ್ಯಮಂತ್ರಿಗಳು ಹಣಕಾಸಿನ ಬಗ್ಗೆ ತಮ್ಮ ಮನಸ್ಸಿಗೆ ಬಂದ ಹಾಗೆ ಮಾಡಿದ್ದಾರೆಯೇ ವಿನಾ ಕಾಯದೆ, ಕಾನೂನಿನಂತೆ ಗಮನಹರಿಸಿಲ್ಲ ಎನ್ನುವ ಆಪಾದನೆ ಮಾಡಿದರೂ ತಪ್ಪು ತಿಳಿದುಕೊಳ್ಳಬಾರದು. ಮಾನ್ಯ ಯಡಿಯೂರಪ್ಪನವರೆ, Fiscal Managemtn Principles ಎಂದಿರುತ್ತದೆ. Section-4 of Fiscal Responsibility act, Sub section 3 (ಅ) ಪ್ರಕಾರ, it is necessary to reduce the revenue deficit to nil within four financial years beginning from Arpil 2002 to Aril 2006." Hon'ble Mr. Prakash, we have to bring the

revenue deficit to nil. ಆ ದೃಷ್ಟಿಯಿಂದ ಒಂದು ಒಳ್ಳೆಯ ಕಾರ್ಯಕ್ರಮ ಆಗಿದೆ. Similarly, Clause 4, Sub-section ೩ ಏನು ಹೇಳುತ್ತದೆ. Reduce the Revenue deficit as a percentage to Gorss State Domestic Product (GSDP) in each of the Financial Year beginning from 1st April 2002 in a manner the system which goes, set out in Clause-A. ಅಂದರೆ, reduce fiscal deficit to not more than 3% of the estimated GSDP within a period of four Financial Years beginning from the year 2002. ಅಂದರೆ, ನಾವು ನಮ್ಮ fiscal deficit ಏನಿದೆ, we should try to curtail it below 3%. ತಾವು ತಮ್ಮ budget speech ನಲ್ಲಿ ಏನು ಹೇಳಿದಿರಿ ಎಂದರೆ, "Revenue Surplus and Fiscal Deficit for 2006-07 RE is Rs.2831.54 Crore and Rs.5371.85 Crore which is 1.46% and 2.77% of the GSDP. The Revenue Surplus and Fiscal Deficit for 2007-08 BE is Rs.1626.66 Crore and Rs.6304.98 Crore respectively which is 0.74% and 2.87% of the GSDP. This is as per the Karnataka Fiscal Responsibility Act, 2002." ತಾವು ರೆಫರ್ ಮಾಡಿದಿರಿ. ಇವತ್ತು ಏನಾಗಿದೆ, Fiscal Deficit 2006-07 ರಲ್ಲಿ ೨.೭೭% ಇತ್ತು. ಈ ಬಜೆಟ್ ಸ್ಪೀಚ್ ಪ್ರಕಾರ ೨೦೦೬-೦೭ರಲ್ಲಿ revised estimate ಪ್ರಕಾರ Fiscal Deficit is 2.77% of GSDP. ಈಗ ಗೌರವಾನ್ವಿತ ಉಪ ಮುಖ್ಯಮಂತ್ರಿಗಳು ಹೇಳಿದ್ದಾರೆ, ೨೦೦೭-೦೮ ರಲ್ಲಿ ೨.೮೭% ಆಗಿದೆ ಎಂದು ಹೇಳಿದ್ದಾರೆ. ಹೇಗೆ ಆಗಲಿಕ್ಕೆ ಸಾಧ್ಯ ? It will cross 3%, according to me ಮುಖ್ಯವಾಗಿ ತಾವು ಏನು ಹೇಳಿದಿರಿ, Excise, Arrack ಅನ್ನು abolish ಮಾಡಿದಿರಿ. ನಿಮಗೆ total revenue ಬಂದಿದ್ದು ರೂ. ೪೪೦೦ ಕೋಟಿ. Arrack Revenue was Rs.1905 Crores. You are estimating a loss of about Rs. 1100 Cores, ಮುಂದಿನ ವರ್ಷ ೩೩೦೦

ಕೋಟಿ ಆದಾಯ ಆಗಬಹುದು ಎಂದು ತಮ್ಮ ಬಜೆಟ್ ನಲ್ಲಿ ಹೇಳಿದಿರಿ. You are anticipating that you will lose Rs. 1100 Crore because of arrack abolition. Acording to me, it will be more but not less. No. 2, ನೀವು ಏನು ಹೇಳಿದಿರಿ, Share of Central Taxes is expected to go up, according to the Finance Minister. Page 106 ಪ್ರಕಾರ ೫೦೦೯ ಕೋಟಿಯಿಂದ ೬೩೦೦ ಕೋಟಿ. An increase of 25.75% ಮಾನ್ಯ ಉಪ ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರು budget speech ನಲ್ಲಿ ನನಗೆ ಕೇಂದ್ರ ಸರ್ಕಾರದಿಂದ ಮುಂದಿನ ವರ್ಷ ೧೨೯೧ ಕೋಟಿ ರೂಪಾಯಿ ಹೆಚ್ಚು ಬರಬಹುದು ಎನ್ನುವ ಒಂದು ಅಂದಾಜನ್ನು ಮಾಡಿದ್ದಾರೆ. ಹೀಗಾಗಿ, ಏನು ಹೇಳಿದಿರಿ ಎಂದರೆ ನನಗೆ 25.75% Share of Central Taxes ಬರುತ್ತದೆಂದು ಹೇಳಿದಿರಿ. What does the Union Finance Minister say? Union Finance Minister Mr. Chidambaram says that in 2006-07, Centre will give to the State as their Share of Taxes and Rs. 1m,20,377 Crores in 2007-08 this amount will increase to Rs.1,40,450 Crores Besides, total grant includes both plan and non plan to States and Union Territories will incerease from 19,525 crores in 2006-07 to Rs. 1,06,987 Crores in 2007-08. ಇವರ ಪ್ರಕಾರ calculation ಹಾಕಿದರೆ you are going to get 17-18%. This calculation shows that Karnataka may get 18%. ನಾನು ಒಪ್ಪುತ್ತೇನೆ, Karnataka is the best managed State, you may get 19%. ನಿಮ್ಮ ಬಜೆಟ್ ಸೊಈಚ್ ಪ್ರಕಾರ ನಿಮಗೆ ಕನಿಷ್ಟ ರೂ ೪೦೦ ರಿಂದ ೫೦೦ ಕೋಟಿ ಖೋತಾ ಆಗುತ್ತದೆ. ನಂತರ Loan waiver. ಮಾನ್ಯ ಉಪ ಮುಖ್ಯ ಮಂತ್ರಿಗಳು ಮೊನ್ನೆ ೨೩ ರಂದು ತಮ್ಮ statement ಕೊಡುವಾಗ Loan waiver ನಿಂದ ರೂ.೧೯೫೦ ಕೋಟಿ ರೂಪಾಯಿ ನಮ್ಮ ಮೇಲೆ ಬರ್ಡನ್ ಬರಬಹುದು ಎಂದು ಹೇಳಿದ್ದಾರೆ. ಬಜೆಟ್ ನಲ್ಲಿ ಇಟ್ಟಿದ್ದು ರೂ

೫೦೦ ಕೋಟಿ. ಬಜೆಟ್ ನಲ್ಲಿಟ್ಟಿದ್ದು ೫೦೦ ಕೋಟಿ ಪ್ಲಸ್ ನಮ್ಮದು ಒತ್ತಾಯ ಇದೆ. Finance Minister ಮೇಲೆ ಮತ್ತು ಈ ಸರ್ಕಾರದ ಮೇಲೆ, ಎಲ್ಲಾ ರೈತರ ಸಾಲ ಮನ್ನಾ ಮಾಡಿ ಎನ್ನುವ ಒತ್ತಾಯ ಇದೆ. So, we have to see, what your reaction is.ಇಲ್ಲಿ ನಿಮಗೆ ಪುನಃ ರೂ.೧೪೦೦ ಕೋಟಿ ಖೋತಾ ಆಗುತ್ತದೆ. ಲಾಟರಿ ಅಬಾಲಿಶ್ ಮಾಡಿದಿರಿ. ಆದರಿಂದ ರೂ.೨೫೦ ಕೋಟಿ ರೂಪಾಯಿ ಹೋಗುತ್ತದೆ. Pay Commission ನನಗೆ extract figures ಗೊತ್ತಿಲ್ಲ. ನನ್ನ calculation ಪ್ರಕಾರ ನಿಮಗೆ ೧೩೫೦ ಕೋಟಿ ರೂಪಾಯಿ ಭಾರ ಬರುತ್ತಿದೆ. ನೀವು Interim relief ಕೊಟ್ಟಿದ್ದೀರಿ, ಅದು ಬಿಟ್ಟರೆ ರೂ.೯೫೦ ಕೋಟಿ, it will be the liability because of the Pay Commission from 1st April. ಇದೆಲ್ಲಾ ನೋಡಿದರೆ, Fiscal deficit is likely to cross more than 3% of the GSDP. ಹಾಗಾದರೆ, ನೀವು ಎಲ್ಲಾ factors study ಮಾಡಿಲ್ಲ. ಕನಿಷ್ಠ ರೂ. ೪೫೦೦ ರಿಂದ ೫೦೦೦ ಕೋಟಿ ರೂಪಾಯಿ ಖೋತಾ will be there. ಹೀಗಾಗಿ this is a very important issue. You may be making a breach of the Fiscal Responsibility Act. You will be ruining the financial position of the State which has been created after a lot of efforts. ಬಹಳ ಕಷ್ಟಪಟ್ಟು ಹಲವಾರು Finance Ministers, ಹಲವಾರು Chief Ministers ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿದ್ದಾರೆ. The Finance Minister has led us to a trap now. ಹೀಗಾಗಿ ಇದಲ್ಲಾ obligation ಇದೆ, ನೀವು ಮಾಡಬೇಕು. ಮಾಡಬೇಕಾದರೆ ಹಣ ಬೇಕು. ಹೀಗಾಗಿ, Fiscal Responsibility Act, ಇದೊಂದು ಗೀತಾ, ಬೈಬಲ್ ಅಥವಾ ಖುರಾನ್ ಎಂದು ನಿಮ್ಮ ಕಣ್ಣು ಮುಂದೆ ಇಟ್ಟು ನೀವು ಮಾಡಿದ್ದರೆ ಬಹುತೇಕ ಈ ಪರಿಸ್ಥಿತಿಗೆ ಬರುತ್ತಿರಲಿಲ್ಲ. ಹೀಗಾಗಿ ಈ ಬಜೆಟ್ ಏನು ಇದೆ, it is going to lead the State to a major financial crisis. ಕರ್ನಾಟಕ, ಇಡೀ ದೇಶದಲ್ಲಿ ಒಳ್ಳೆಯ financially managed state ಎಂದು

ಅನ್ನಿಸಿಕೊಳ್ಳುತ್ತದೆ. A stage is coming very shortly. I don't blame. Ihave no such intention. I want Mr. yediyurappa's budget be fully implemented. ಅದರ ಲಾಭ ಆಗಬೇಕೆನ್ನುವ ನನ್ನ ಇಚ್ಛೆ ಇದೆ. ಆದರೆ ನನಗೆ ಸ್ವಲ್ಪ knowledge ಇದೆ, ಆ knowledge ಪ್ರಕಾರ it is going to ruin the financial position of the state. ಊಟವಾದ ನಂತರ ಮುಂದುವರಿಸುತ್ತೇನೆ.

ಅಧ್ಯಕ್ಷರು : ಮಾನ್ಯ ಕಂದಾಯ ಸಚಿವರಾದ ಜಗದೀಶ್ ಶೆಟ್ಟರ್ ರವರು ವಿಧಾನ ಸೌಧದ ಬ್ಯಾಕ್ವೆಟ್ ಹಾಲ್ ನಲ್ಲಿ ಭೋಜನಕೂಟವನ್ನು ಏರ್ಪಾಡು ಮಾಡಿದ್ದಾರೆ. ಎಲ್ಲರೂ ದಯಮಾಡಿಸಬೇಕೆಂದು ವಿನಂತಿ ಮಾತುತ್ತೇನೆ. ಈಗ ಸದನವನ್ನು ೩-೦೦ ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಹ್ನ ೨ ಗಂಟೆ ೭ ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ೩-೦೦ ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)

ವಿಷಯ ೨೦೦೭-೨೦೦೮ ರಲ್ಲಿ ಸಾಲಿನ ಆಯವ್ಯಯದ ಮೇಲೆ ಮುಂದುವರೆದ ಸಾಮಾನ್ಯ ಖರ್ಚೆ

(ಸಭೆಯ ೩ ಗಂಟೆ ೧೦ ನಿಮಿಷಕ್ಕೆ ಪ್ರಾರಂಭವಾಯಿತು.

ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

ಅಧ್ಯಕ್ಷರು : ಮಾನ್ಯ ದೇಶಪಾಂಡೆಯವರೆ, ದಯವಿಟ್ಟು ಬೇಗನೆ ಮುಗಿಸಿ.

ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಗೌರವಾನ್ವಿತ ಹಣಕಾಸಿನ ಸಚಿವರು ಏನು ಸಂವಿಧಾನದಲ್ಲಿ ಮತ್ತು Fiscal Responsibility Act ನಲ್ಲಿ statutory obligations ಏನಿತ್ತು, ಅವನ್ನು ಗಾಳಿಗೆ ತೂರಿಸಿ, ಅವರು ಸಾಕಷ್ಟು violationsನ್ನು ಮಾಡಿದ್ದಾರೆ. ನಾನು ಆಗಲೇ ಹೇಳಿದಹಾಗೆ, ಅವರ fiscal deficit ಏನು ೨೦೦೬-೦೭ ಕ್ಕೆ revised estimate ೨.೭೭ ಇತ್ತು, ಅದನ್ನು ಕಡಿಮೆ ಮಾಡುವುದನ್ನು

ಬಿಟ್ಟು, ಈ ವರ್ಷ average projection ೨.೮೭ ತೋರಿಸಿದ್ದಾರೆ. ನನಗೆ ಯಾವ ರೀತಿಯಿಂದ ಹಲವಾರು ಭರವಸೆಗಳು, ಘೋಶಣೆಗಳು ಮಾಡಿದ್ದಾರೆ, adequate provision. ಮಾಡಿಲ್ಲ. Resources mobilization ಸಾಕಷ್ಟು ಕ್ಲಷ್ಟ ಆಗಬಹುದು. ಆಗಬಹುದು. ಹಾಗಾಗಿ ಇದು Fiscal Responsibility Actನ breach ಮಾಡಿದ್ದಾರೆ. It will cost 3% of the GSDP. ಹೇಳುತ್ತಿದ್ದೀರಿ, ನಾನು ನ್ಯಾಯಾಲಯದಲ್ಲಿ ಅಥವಾ Constitutional resort ನ್ನು ತಎಗೆದುಕೊಂಡರೆ this budget can be watched, talked and barreled to receive massive legal and constitutional reproach. ಏಕೆಂದರೆ ಏನು ಸಂವಿಧಾನದಲ್ಲಿ ಹೇಳಿದ್ದಾರೆ Fiscal Responsibility Act ನಲ್ಲಿ ಏನು ಹೇಳಿದ್ದಾರೆ, ಆ ಪ್ರಕಾರ ಬಜೆ ಇಲ್ಲಿ ಮಾಡನೆ ಆದರೆ ಅದು ಆರ್ಥಿಕ ಶಿಸ್ತನ್ನು ಉಕ್ಷಣೆ ಮಾಡಿದಹಾಗೆ ಆಗುತ್ತದೆ. ಮತ್ತು ರಾಜ್ಯದ ಆರ್ಥಿಕ ಪರಿಸ್ಥಿತಿಯು ಸಹ ಅದರಿಂದ ಕಂಡು ಹಿಡಿಯಬೇಕು. ಇವತ್ತು ನೀರಾವರಿಯ ಬಗ್ಗೆ ಮತನಾಡುವಾಗ provision ಎಷ್ಟು ಮಾಡಿದ್ದಾರೆಂದು ನಾನು ಕೇಳುತ್ತೇನೆ. ಆ ಬಗ್ಗೆ ವಿವರ ಕೇಳುವುದಕ್ಕೆ ಹೋಗುವುದಿಲ್ಲ. ಆದರೆ Finance Minister ರವರು ಇದನ್ನು clarify ಮಾಡಬೇಕು. ಪ್ರತಿ ವರ್ಷದ ಬಗ್ಗೆ ತಾವು ನೋಡಬೇಕು. ೧೯೯೭-೯೮ ನೇ ಇಸವಿಯಿಂದ average irrigated area ರಾಜ್ಯದಲ್ಲಿ ೭೦ ಸಾವಿರದಿಂದ ಏಕರೆಯಾಗಿದೆ. ಇದರಲ್ಲಿ ಬಹಳ ಆಶ್ಚರ್ಯ ಕಾಣುತ್ತದೆ. ೨೦೦೫-೦೬ರಲ್ಲಿ ಇದು major & medium ನೀರಾವರಿಗಳು ೨೧.೯೭ ಇತ್ತು, ೨೦೦೭ ರಲ್ಲಿ ರೂ. ೨೩.೭೮ ತೋರಿಸಿದ್ದಾರೆ. ೨ ಲಕ್ಷದ ೬ ಸಾವಿರ ಹೆಕ್ಟರ್ ನೀರಾವರಿಯೂ ಆ ವರ್ಷದಲ್ಲಿ ಆಗುತ್ತದೆಂದು ಮಾನ್ಯ ಅರ್ಥ ಸಚಿವರು ಈ economic survey ನಲ್ಲಿ ಹೇಳಿದ್ದಾರೆ. Average ಪ್ರತಿವರ್ಷ ೭೦-೭೫ ಸಾವಿರ ಆಗುವಾಗ ಇದು ೨ ಲಕ್ಷದ ೬ ಸಾವಿರ ಎಕರೆಗೆ average ಎಂದು ಹೇಳಿದ್ದಾರೆ. ಇದರ ಬಗ್ಗೆ ಮಾನ್ಯ ಅರ್ಥ ಸಚಿವರು ಬೆಳಕು ಚೆಲ್ಲಬೇಕು. ಇದು ಸಾಧ್ಯವಿಲ್ಲ. ೧೨ ರಿಂದ ೧೫ ವರ್ಷ average ಇದ್ದು ಅದಕ್ಕಿಂತ ಇವತ್ತು ೩ ಪಟ್ಟು ಹಎಚ್ಚು ನೀರಾವರಿಯಾಗುತ್ತಿದೆ ಎಂದು ತಮ್ಮ figures

ಹೇಳುತ್ತದೆ. ಅದೇ ಪ್ರಕಾರ ನೀರಾವರಿ ಮತ್ತು flood control ಗೆ ಕಳೆದ ವರ್ಷ ೪೪೪೩.೨೦ ಕೋಟಿ ರೂಪಾಯಿಗಳು ಇಟ್ಟರೆ, ಈ ವರ್ಷ ೩೧೪೫.೭೭ ಕೋಟಿ ರೂಪಾಯಿಗಳು ಇಟ್ಟಿದ್ದಾರೆ, ಅಂದರೆ ಕಳೆದ ವರ್ಷಕ್ಕಿಂತ ೨೯ ವರ್ಷಕ್ಕಿಂತ ೨೯ ಪರ್ಸೆಂಟ್ ಇಡಿಮೆ provision ನೀರಾವರಿಯನ್ನು ಮಾಡಿದ್ದಾರೆ. ಇವತ್ತು ರಾಯದ ಪ್ರಗತಿಯಾಗಬೇಕಾದರೆ ಒಂದು ಕಡೆ ಮೂಲಭೂತ ಸೌಕರ್ಯಗಳು ಬೇಕು, ಮತ್ತೊಂದು ಕಡೆ ಮಾನವಸಂಪನ್ಮೂಲಗಳು ಸಹ ಬೇಕಾಗುತ್ತದೆ. ಮೂಲಭೂತ ಸೌಕರ್ಯ ಗಳಿಗೆ ನೀರಾವರಿ, ವಿದ್ಯುಚ್ಛಕ್ತಿ ರೋಡ್ ಗಳು, ಏರ್ ಪೋರ್ಟ್‌ಗಳು ಬೇಕು. Agricultural produciton 2% ಇದೆ. Production ತಮ್ಮ ಬಜೆಟ್ ನಲ್ಲಿ ೨% ಗಿಂತ ಕಡಿಮೆ ಇದೆ ಅದನ್ನು ತಾವು ಒಪ್ಪಿಕೊಂಡಿದ್ದೀರಿ. ಇಂತಹ ಪರಿಸ್ಥಿತಿಯಲ್ಲಿ, ನೀರಾವರಿಯನ್ನು ಹೆಚ್ಚು ಮಾಡುವುದಕ್ಕೆ ನಿಮ್ಮ ಕಡೆಯಿಂದ ಪ್ರಯತ್ನ ಆಗಿಲ್ಲ. ತಾವು ವಿಫಲರಾಗಿದ್ದೀರೆಂದು ನಾನು ಹೇಳುತ್ತಿದ್ದೇನೆ. ಯಾವ ಸರ್ಕಾರದಲ್ಲಿ ಮಾನ್ಯ ಸಿದ್ದರಾಮಯ್ಯನವರು ಹಣಕಾಸಿನ ಸಚಿವರಾಗಿದ್ದರು, ಪ್ರತಿ ವರ್ಷ ವಿದ್ದಯಚ್ಛಕ್ತಿ ಮೂಲಭೂತ ಸೌಕರ್ಯಗಳು ಮತ್ತು ನೀರಾವರಿ ಇದಕ್ಕೆ ಹೆಚ್ಚಿನ ಸಜೆಷನ್ ಏನು ? social sectorಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಡುತ್ತಾ ಬಂದಿದ್ದಾರೆ. ಇವತ್ತು ಮುಖ್ಯವಾಗಿ ವಿದ್ಯುತ್‌ನ್ನು ತೆಗೆದುಕೊಳ್ಳಿ ; ೨೦೦೫-೦೬ ರಲ್ಲಿ Rs. 853.92 crores provision ಇತ್ತು. ಅದು plan sie 13.68 ಇತ್ತು. ೨೦೦೬-೦೭ರಲ್ಲಿ Rs.1711.75 crores. ಅದು ೧೦.೫೯% ಇದೆ. ೨೦೦೭-೦೮ರಲ್ಲಿ ಅದು Rs. 2102.12 crores ಇದೆ. ೧೧.೮% ಅಂದರೆ ೨೦೦೫-೦೬ ರಲ್ಲಿ ತಾವು ಏನು power sector ಗೆ provision ಮಾಡಿದ್ದೀರಿ. ಅದಕ್ಕಿಂತ ಕಡಿಮೆ ಈ ವರ್ಷ ಇದೆ. ಆರೂವರೆ ಪ್ರತಿಶತ inflation ತೆಗೆದುಕೊಂಡರು ಸಹ .ಎಷ್ಟೊಂದು ಕಡಿಮೆಯಾಗಬಹುದು, ಇದರ ಬಗ್ಗೆ ಅಂದಾಜನ್ನು ನಾವು ಮಾಡಬೇಕಾಗಿದೆ. ಇವತ್ತು ಇಡೀ ರಾಜ್ಯದೆಲ್ಲ ಬರಗಾಲವಿದೆ ; ಒಂದು ಕಡೆ ಅತಿವೃಷ್ಟಿಯಿಂದ ಪವರ್ ಸ್ಟೇಶನ್ ಗಳು ಹಾಳಾಗಿದೆ.. Power situation ಬಗ್ಗೆ ಮಾನ್ಯ ಅಧ್ಯಕ್ಷರೆ ತಮಗೆ ಗೊತ್ತು. ಬಹಳ power problem ಇದೆ. ಎಲ್ಲಾ ಕಡೆಗಳಲ್ಲೂ load shedding

ಇದೆ. ಇವತ್ತು ಪ್ರತಿ ಜಿಲ್ಲೆ ಹಾಗೂ ಬೆಂಗಳೂರಿನಲ್ಲಿ ಎಲ್ಲಾ ಕಡೆ load shedding ಪ್ರಾರಂಭವಾಗಿದೆ. ರೈತರಿಗೆ ಕಷ್ಟವಾಗಿದೆ. ಕೈಗಾರಿಕೆಗಳಿಗೆ ಹಾಗೂ ಸಣ್ಣಸಣ್ಣ ಕೈಗಾರಿಕೆಗಳಿಗೆ ಕಷ್ಟವಾಗಿದೆ. ವಿದ್ಯಾರ್ಥಿಗಳಿಗೂ ಸಹ ಕಷ್ಟವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಮಾನ್ಯ ಅರ್ಥ ಸಚಿವರು ಈ ಬಗ್ಗೆ ಹೆಚ್ಚಿನ ಗಮನವನ್ನು ಕೊಟ್ಟಿಲ್ಲ. ಇವತ್ತು ತಾವು ವಿದ್ಯುತ್ತನ್ನು ಖರೀದಿ ಮಾಡಬೇಕಾಗುತ್ತದೆ. ಅದರ ಬಗ್ಗೆ ಬಹಳ ಚರ್ಚೆಯಾಯಿತು. ಕ್ಯಾಬಿನೆಟ್ ಉಪ ಸಮಿತಿಯ ಸ್ಥಾನಕ್ಕೆ ರಾಜೀನಾಮೆಯನ್ನು ಕೊಡುವಂತಹ ಪರಿಸ್ಥಿತಿ ಬಂತು. ನಿಮ್ಮ ಬಜೆಟ್ ನಲ್ಲಿ ಈ ವರ್ಷ ಇಷ್ಟೊಂದು ವಿದ್ಯುತ್ ಖೋತಾ ಇದ್ದಾಗ ಬೇರೆ ಬೇರೆ ರಾಜ್ಯದಿಂದ, central grid ನಿಂದ private companies ಗಳಿಂದ ವಿದ್ಯುತ್ತನ್ನು ಖರೀದಿ ಮಾಡಬೇಕಾಗುತ್ತದೆ. Where is the provision? ಇದಕ್ಕೆ ಹಣ ಎಲ್ಲಿದೆ ? ಅದಕ್ಕೆ ಹಣವನ್ನು ಇಟ್ಟಿರುವುದಿಲ್ಲ. ಅದೇ ಪ್ರಕಾರ ಮಾನ್ಯ ಅಧ್ಯಕ್ಷರೆ, ಇವತ್ತು transmission loss 27.4% ಇದೆ. ೨೦೦೬-೦೭ ರಲ್ಲಿ transmission loss ಅನ್ನು ಕಡಿಮೆ ಮಾಡುವುದಕ್ಕೆ, transmission loss ಅಂದರೆ ಕಳ್ಳತನ , distribution loss ಇದನ್ನು ಮಾಡುವುದಕ್ಕಾಗಿ ಸರ್ಕಾರದಿಂದ ಏನು ಪ್ರಯತ್ನ ಆಗಲಿಲ್ಲ. ಇವತ್ತು ಮೀಟರ್ಸ್, ೪೬% installation ಆಗಬೇಕು. ಹಾಗಾಗಿ ಅಧಿಕಾರಿಗಳು ಏನು ಹೇಳುತ್ತಾರೆ. ನಾವು ಇದ್ದಾಗ, ನಾವು-ನೀವು ಇದ್ದಾಗ ನೀವು ಅವರ ಮಾತುಗಳನ್ನು ಕೇಳಿಕೊಂಡು ಹೊರಟಿದ್ದೀರಿ. ವಿದ್ಯುತ್ ಕ್ಷೇತ್ರದಲ್ಲಿ ಇವತ್ತು installing capacity ಇಲ್ಲ. ವ್ಯಯಕ್ತಿಕ ವಿದ್ಯುತ್‌ನ್ನು ನೀವು installing capacityಗೆ add ಮಾಡಬೇಕು, ಅದು ಏನೂ ಇಲ್ಲ hydel ನಲ್ಲಿ thermal nuclear ನಲ್ಲಿ ನೀವು ಏನು ಮಾಡಿದ್ದೀರಿ ? ಅದರ ಬಗ್ಗೆ ಯಾವುದು ಈ ಬಜೆಟ್ ನಲ್ಲಿ ಇಲ್ಲ. ಮುಂದೆ ಏನು ಮಾಡುತ್ತೀರೆಂದು ಸಹ ಇದರಲ್ಲಿ ಇಲ್ಲ. ಇವತ್ತು ಕೈಗಾರಿಕೆಗಳು ಮತ್ತು ಸಣ್ಣ ಸಣ್ಣ ಕೈಗಾರಿಕೆಗಳು ಬೆಳೆಯಬೇಕು. ನಿಮ್ಮ ಕಡೆ ಏಕೆ ಕೈಗಾರಿಕೆಗಳು ಬರುತ್ತಿಲ್ಲ. ನಾನು ನಿಮ್ಮನ್ನು ಬಹಳ ವಿನಯದಿಂದ ಕೇಳುತ್ತಿದ್ದೇನೆ. ತಾವು ಬೇಜಾರು ಮಾಡಿಕೊಳ್ಳಬಾರದು. ಇದರಲ್ಲಿ ಒಂದು manufacturing unit ಇದೆ ಎಂದು ಹೇಳಿ. ಇಲ್ಲಿ ಐಟಿ ಮತ್ತು ಬಿಟಿ

ಬೆಳೆಯುತ್ತಿದೆ. ಅದು ನಮ್ಮ ನಿಮ್ಮಿಂದಲ್ಲ. ಅವರು ಅವರ ಶಕ್ತಿಯಿಂದ ಬೆಳೆಯುತ್ತಿದ್ದಾರೆ. ಅದಕ್ಕೆ ಅವರು ಹೈದರಾದ್ ಮತ್ತು ಚೈನ್ನೈ ಕಡೆಗೆ ಹೋಗುತ್ತಿದ್ದಾರೆ. manufacture ಬಗ್ಗೆ ಹೇಳಿ automobile industry ಬಂದಿದೆಯೇ, Steel plant ಬಂದಿದೆ, Cement plant ಯಾವುದಾದರೂ ಬಂದಿದೆಯೇ, ಹೇಳಿ. ೧ ಲಕ್ಷ ಕೋಟಿ irrigation ಬಂದಿದೆ. ೨ ಲಕ್ಷ ಕೋಟಿ ಬಂದಿದೆ ಎಂದು ತಾವು ಹೇಳಬಹುದು. On the ground, ಒಂದು manufacturing unit ಪ್ರಾರಂಭವಾಗಿಲ್ಲ. It is our substance, 30 ರಿಂದ ೫೦ ಲಕ್ಷ ಆಗಿರಬಹುದು. Steel sector, cement sector, automobile sector, engineering sector, ಇದರ ಬಗ್ಗೆ ಹೇಳಬೇಕು. ಇವರು projectನ್ನು ಕಳೆದುಕೊಂಡರು, ಇಲ್ಲಿ ಧಾರವಾಡ ಜಿಲ್ಲ ಮಂತ್ರಿಗಳು ಇಲ್ಲ. ನಾನು Revenue Minister ರವರಿಗೆ ಹೇಳಿದ್ದೇ. ಧಾರವಾಡದಲ್ಲಿ TELCO ಬರಬೇಕೆಂದು ಹೇಳುತ್ತಾರೆ. ಹಾಗಾಗಿ ತಾವು ಈ ಬಗ್ಗೆ ತಿಳಿದುಕೊಳ್ಳಬೇಕಾಗಿದೆ. ಕೈಗಾರಿಕೆಗಳು ಬಂದಾಗ ಸಣ್ಣದು ಆಗಲಿ ದೊಡ್ಡದಾಗಲಿ ವ್ಯಪಾರವು ಬೆಳೆದಾಗ ರಾಜ್ಯವು ಪ್ರಗತಿಯಾಗುವುದು ಸಾಧ್ಯವಾಗುತ್ತದೆ. ಸಣ್ಣ ಕೈಗಾರಿಕೆಗಳು, ಗುಡಿ ಕೈಗಾರಿಕೆಗಳು, ಕೃಷಿ ಪ್ರಧಾನವಾದ ಕೈಗಾರಕೆಗಳು. ಇದಕ್ಕೆ ತಾವು ಯಾವ ರೀತಿಯಾದ ಪ್ರಯತ್ನವನ್ನು ಮಾಡಿದ್ದೀರಿ ? ಒಂದು industry ಯ ಬಗ್ಗೆ ಹೆಸರನ್ನು ತಾವು ಹೇಳಬೇಕು. ಹಾಗಾಗಿ ಇವತ್ತು ಮಾತುಗಳು, ಪೊಳ್ಳು ಘೋಷಣೆಗಳು, ಪೊಳ್ಳು ಫಿಗರ್ ಗಳು ಇಷ್ಟೆ ಬರುತ್ತಿದೆಯೇ ವಿನಾ constructive approach ಸರ್ಕಾರಕ್ಕಿಲ್ಲ. Feasible and constructive ನಮ್ಮ ಕಣ್ಣಿಗೆ ಏನು ಕಾಣಿಸುತ್ತಿಲ್ಲ. ಕಣ್ಣಿಗೆ ಏನು ಕಾಣಿಸಬೇಕು, ಅದು ಕಣ್ಣಿಗೆ ಕಾಣಿಸಿಲ್ಲ. ಇವತ್ತು ಮುಖ್ಯವಾಗಿ ಈ Power sector ನಲ್ಲಿ ನಮ್ಮ per capita domestic consumption of electricity. Andhra Pradesh ದಲ್ಲಿ ೯೯.೬೧ megawatt ಇದೆ. ಗೋವಾದಲ್ಲಿ ೨೦೬.೫೬ megawatt ಇದೆ. ಕರ್ನಾಟಕದಲ್ಲಿ ಕೇವಲ megawatt ೮೯.೧೮ ಆಗಿದೆ. ಮಹಾರಾಷ್ಟ್ರದಲ್ಲಿ ೧೨೪.೦೨ megawatt ಇದೆ. ಕೇರಳಾದಲ್ಲಿ ೧೨೯.೭೯ megawatt ಇದೆ. All

India figure is 87.77 ಇದೆ. ನಾವು ಬಾಟಮ್ ನಲ್ಲಿ ಅಲ್ ಇಂಡಿಯಾ ಫಿಗರ್ ನಲ್ಲಿ ಇದ್ದೇವೆ. Goa is 220.26 Kerala 129, Maharashtra 124, Andhra 100 ಹಾಗಾಗಿ ತಾವು ಈ ಬಗ್ಗೆ ವಿಚಾರವನ್ನು ಮಾಡಬೇಕು. After all, we are all responsible. I am just enlightening what is the position.

ಶ್ರೀ ಆರ್. ವಿ. ದೇಶಪಾಂಡೆ (ಮುಂದು) ನಾವು ಟೀಕೆ ಮಾಡಲಿಕ್ಕೆ ನಿಂತಿಲ್ಲ. I am trying to enlighteen the Government. Per capital consumption ಎಷ್ಟು ಕಡಿಮೆ ಆಗಿದೆ ನೋಡಿ. Per capita industrial power consumption all India average 126.14 ಇದೆ. ನಮ್ಮ ಆಂಧ್ರ ಪ್ರದೇಶ ೧೪೬.೭೪, ಗೋವ ೬೯೩.೧೨, ಮಹಾರಾಷ್ಟ್ರ ೨೨೫.೧೪ , ತಮಿಳುನಾಡು ೨೯೫.೨೫. ಕರ್ನಾಟಕ ಕೇವಲ ೧೧೭.೨೦ which is less than all India figure. ಹಾಗಾಗಿ ನಾನು ಹೇಳುತ್ತೇನೆ. ಮಾನ್ಯ ಅರ್ಥ ಸಚಿವರಿಗೆ ಹೀಗೆ, ಹಾಗೆ ನೀವು ಬಜೆಟ್ಟಿನಲ್ಲಿ ಅನೌನ್ಸ್ ಮೆಂಟ್ ಮಾಡುವುದಕ್ಕಿಂತ power generation, infrastructure ಗೆ ಹಣ ಕೊಟ್ಟಿದ್ದರೆ ಚೆನ್ನಾಗಿತ್ತು.

ಶ್ರೀ ಎಂ.ಪಿ.ಪ್ರಕಾಶ್ : ಬಹಳ ವರ್ಷಗಳ ಕಾಲ ಕೈಗಾರಿಕಾ ಸಚಿವರಾಗಿ ತಾವು ಕೆಲಸ ಮಾಡಿದ್ದೀರಿ. ಗೋವಾವನ್ನು ನಮ್ಮ ಜೊತೆಗೆ ಹೋಲಿಸಲಿಕ್ಕಾಗುವುದಿಲ್ಲ, ಏಕೆಂದರೆ ಪ್ರಶ್ನೆ ಏನಾಗಿದೆಯೆಂದರೆ ನಾವು ಕೇಂದ್ರ ಸರ್ಕಾರದಿಂದ ಸುಶೀಲ್ ಕುಮಾರ್ ಶಿಂಧೆರವರು ಕೊಡುತ್ತೇವೆಂದರೂ ಒಂದು ಕಡೆಗೆ ಪರಿಸರದ ಕಾಟ, ಏನು ಮಾಡುತ್ತೇವೆಂದು ಹೋದರು ಕೂಡ ಉತ್ತರ ಕನ್ನಡ ಜಿಲ್ಲೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೇ ಇವನ್ನು ಮಾಡಬೇಕು. ಅಲ್ಲಿ ಪಾಪ ಅವರದ್ದೇ ಆದಂಥ ಸಮಸ್ಯೆಗಳಿವೆ, ಬೇಡ್ತಿ ಮಾಡಬೇಕೆಂದು ಹೇಳಿದೆವು, ತಮ್ಮ ಕಾಲದಿಂದ ತಾವು ಎಷ್ಟೆಲ್ಲಾ ಪ್ರಯತ್ನ ಮಾಡಿದಿರಿ, ಮಾನ್ಯ ರಾಮಕೃಷ್ಣ ಹೆಗಡೆಯವರ ಕಾಲದಿಂದಲು ಕೂಡ ಬೇಡ್ತಿ ಬಗ್ಗೆ ಇವತ್ತಿಗೂ ನಾವು ಏನು ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ, ಚಿಕ್ಕ

ಮಗಳೂರು, ಇವನ್ನು ಬಿಟ್ಟರೆ ಬೇರೆ ನಿಮ್ಮ ಕಣ್ಣಿಗೆ ಕಾಣುವುದಿಲ್ಲ ಎನ್ನುವಂಥ ಪ್ರಶ್ನೆ ಇದೆ.

ಶ್ರೀ ಬಸವರಾಜ ರಾಯರೆಡ್ಡಿ : ಕಾವೇರಿ ಬೇಸಿನ್ ನಲ್ಲಿ ೬೦೦ MW ಮಾಡಬಯುದು. ಅದರ ಬಗಗೆ ಗಮನ ಹರಿಸಿ. ಜುರಾಲಾದಲ್ಲಿ ೨೧೦ MW ನಮಗೆ ಬರಬೇಕು. ೮೧೦ MW ಅಲ್ಲಿ ಬರಬೇಕು. ನಾರಾಯಣಪುರ ಕ್ರೆಸ್ಟ್ ಗೇಟ್‌ನಲ್ಲಿ ೧೦೦೦ MW ಮಾಡುವುದಕ್ಕೆ ಸಾಧ್ಯತೆ ಇದೆ. ಅದು ತಮಗೆ ಗೊತ್ತಿದೆ. ಇಲ್ಲೆಲ್ಲಾ ಪರಿಸರದ ಸಮಸ್ಯೆ ಅಲ್ಲ. ಸಮಸ್ಯೆ ಇರುವುದು ಅಂತರ ರಾಜ್ಯ ಸಮಸ್ಯೆ ಆ ಬಗ್ಗೆ ತಾವು ಕುಳಿತು ಮಾತನಾಡಿದರೆ ಸಾಧ್ಯತೆ ಇದೆ.

ಶ್ರೀ ಎಂ.ಪಿ.ಪ್ರಕಾಶ್ : ತಾವು ಹೇಳಿರತಕ್ಕಂಥಾದ್ದು ನಿಜವಾಗಿಯು ಕೂಡ ಪವರ್ ಕನ್ಸಮ್ಷನ್ ಮೇಲೆ ನಮ್ಮ ಇಂಡಸ್ಟ್ರಿಯಲ್ ಗ್ರೋತ್ ಮತ್ತೊಂದು ಸಿಗುತ್ತದೆ. It is a good yardstick. I fully agree with you. ಆದರೆ ನಿಮ್ಮ ಕಾಲದಲ್ಲಿ ಏನು ತೊಂದರೆಗಳಿದ್ದವು . ಈಗಲೂ ಅದೇ ತೊಂದರೆಗಳಿವೆ,

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಪ್ರಕಾಶ್‌ರವರೆ, ಮಾನ್ಯ ಯಡಿಯೂರಪ್ಪನವರು ಏನು ಹೇಳಿದರು, "ನಾನು ಆರ್ಥಿಕ ಪರಿಸ್ಥಿತಿಯನ್ನು ಬಹಳ ಸುಧಾರಿಸಿದ್ದೇನೆ. ಅಂದರೆ ನಮ್ಮ ಕಾಲದಲ್ಲಿ ನಾವು ಹಾಳು ಮಾಡಿದ್ದೆವು, ಒ.ಕೆ., ನಾವು ಹಾಳು ಮಾಡಿದ್ದಕ್ಕೆ ಇಲ್ಲಿ ಒಂದು ಕುಳಿತಿದ್ದೇವೆ. ಮುಂದಿನ ಬಾರಿ ನೀವು ಒಳ್ಳೆಯದು ಮಾಡಿ ಅಲ್ಲೇ ಕುಳಿತುಕೊಳ್ಳಿ, ನಾವು ಇಲ್ಲೇ ಕುಳಿತುಕೊಳ್ಳುತ್ತೇವೆ. ಆದರೆ ಪ್ರಶ್ನೆ ಏನಿದೆಯೆಂದರೆ ನಿಮಗೆ ಅವಕಾಶ ಸಿಕ್ಕಿದೆಯೆಲ್ಲಾ, ಹಣ ಇದೆಯೆಂದು ಹೇಳುತ್ತೀರಲ್ಲಾ, ಅದನ್ನು ಸದುಪಯೋಗ ಮಾಡಿಕೊಳ್ಳಿ. ಟ್ರಾನ್ಸ್ ಮಿಷನ್ ಲಾಸ್ ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಿ. ಪ್ರೈವೇಟ್ ಸೆಕ್ಟರ್ ಗೆ encourage ಮಾಡಿ. ಸರ್ಕಾರದಿಂದ ಎಷ್ಟು provide ಮಾಡಲಿಕ್ಕೆ ಸಾಧ್ಯ ?

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ : ಮಾನ್ಯ ಪ್ರಕಾಶ್ ರವರೇ, ಈಗ ಪ್ರಾಜೆಕ್ಟ್ಸ್ sanction ಮಾಡುತ್ತೀರಿ. sanction ಆಗುವುದಕ್ಕಿಂತ

ಮುಂಚೆಯೇ, ಪಬ್ಲಿಕ್ ಹಿಯರಿಂಗ್ ಮಾಡಿದರೆ ಪರ ವಿರೋಧ ಎಲ್ಲಾ ತೀರ್ಮಾನ ಆದ ಮೇಲೆ, ಪ್ರೊಸೆಸ್ ಸ್ಟಾರ್ಟ್ ಆಗುತ್ತದೆ. ಒಂದು ವೇಳೆ ನೀವು ತೀರ್ಮಾನ ಮಾಡಿ ಮಾಡುವುದು ಎಂದಾದರೆ you should go ahead, any project anywhere in the state. ಅದರಲ್ಲಿ ಹಿಂದೆ ಮುಂದೆ ಮಾಡುವಂಥ ಪ್ರಶ್ನೆ ಬರಬಾರದು. ಒಂದು ಸಲ ನೀವು ಮುಂದೆ ಹೋಗುವುದು ಎಂದಾದ ಮೇಲೆ ಅದನ್ನು ಸ್ವಲ್ಪ ಕಡೆ ಹಿಡಿಯುವುದು ಪುನಃ ಪ್ರಾರಂಭ ಮಾಡುವುದು ಪುನಃ ತಡೆಹಿಡಿಯುವುದು ಆಗಬಾರದು, ಒಂದು ಸಲ ಪ್ರಾರಂಭ ಆದ ಮೇಲೆ you should see that it is completed. ಆ ಪರಿಸ್ಥಿತಿಗೆ ಹೋಗಬೇಕು ನೀವು.

ಶ್ರೀ ಆರ್. ವಿ. ದೇಶಪಾಂಡೆ : ಹಾಗಾಗಿ ಮಾನ್ಯ ಅಧ್ಯಕ್ಷರೆ, ಈಗ ನಾನು ವಿದ್ಯುಚ್ಛಕ್ತಿ ಬಗ್ಗೆ ಹೇಳಿದೆ ಈಗ ನಾವು ಆರೋಗ್ಯಕ್ಕೆ ಹೋಗುವುದು, ಆರೋಗ್ಯ ಸೋಷಿಯಲ್ ಸೆಕ್ಯುರೆಟಿ ಮತ್ತು ಶಿಕ್ಷಣ ಇಲ್ಲೇನಾಗಿದೆ, ಈ social security ನಲ್ಲಿ ನಾವು ಪರ್ ಕ್ಯಾಪಿರ್ಟ ೨೦೦೪-೦೫ ರಲ್ಲಿ ರೂ. ೨೦.೩೨. ಪೈಸೆ ಖರ್ಚು ಮಾಡುತ್ತಿದ್ದೆವು, .That has gone upto ರೂ.೨೩೦.೯೬ ಪೈಸೆ in 2005-06. It has come down to Rs.3.75 paise in 2006-07. ಅದೇ ತರಹ ನಿಮ್ಮ ಹೆಲ್ತ್ ಕೇರ್ ನಲ್ಲಿ ಅದು ೩೧೯-೦೦ ರೂ. ಗಳಿತ್ತು. ಅದು ೩೮೭.೦೦ ರೂ. ಆಗಿದೆ. ಈಗ ರೂ.೪೪೧.೫೦ ಆಗಿದೆ. So you have to increase the allocation. ಹಾಗಾಗಿ ಶಿಕ್ಷಣದಲ್ಲಿ I don't know, if the figure is wrong, Finance Department ನವರು ನೋಡಬೇಕು. ಶಿಕ್ಷಣದಲ್ಲಿ ಪರ್ ಕ್ಯಾಪಿಟಾ ಎಕ್ಸ ಪೆಂಡೀಚರ್ ೨೦೦೪-೦೫ ರೂ. ೮,೧೬೩.೩೫ ಪೈಸೆ, ೨೦೦೫-೦೬ ರಲ್ಲಿ ರೂ. ೮೯೧.೧೭ ಪೈಸೆ, ೨೦೦೬-೦೭ ರಲ್ಲಿ ರೂ.೯೮೩.೧೭ ಪೈಸೆ. How can it come down from 8,000 to 800? ಬೇಕಿದ್ದರೆ ಎಕನಾಮಿಕ್ ಸರ್ವೆ ಮಾಡಿಸ್ಸಿ, Either the figure is wrong or there is some allocation problem. ಹಾಗಾಗಿ ಆರೋಗ್ಯ, ಸೊಷಿಯಲ್ ಸೆಕ್ಯುರಿಟಿ ಮತ್ತು ಶಿಕ್ಷಣ ಈ ಮೂರು ಇಲಾಖೆಗಳಲ್ಲಿ ಪರ್ ಕ್ಯಾಪಿಟಾ ಎಕ್ಸಪೆಂಡೀಚರ್ ಹೆಚ್ಚಾಗಬೇಕಾಗುತ್ತದೆ.

ಮಾನ್ಯ ರಾಷ್ಟ್ರಪತಿಗಳು ಇಲ್ಲಿಗೆ ಬಂದಾಗ ಹೇಳಿದ್ದರು, ಮೊದಲನೆಯದು ಆರೋಗ್ಯ, ಪ್ರೈಮರಿ ಎಜುಕೇಷನ್, ಹಾಗಾಗಿ ತಾವು ಹೈಸ್ಕೂಲ್ಸ್ ಕೊಟ್ಟಿರಿ, ಸಂತೋಷ ಈ ಸಾರಿ ೨೦೦ ಕೊಟ್ಟಿದ್ದೀರಿ ಸಂತೋಷ ಕೊಡಿ, ಆದರೆ ಎಲ್ಲೆಲ್ಲಿ ಕೊಟ್ಟಿದ್ದೀರಿ ಅಲ್ಲಿ infrastructure provide ಮಾಡಿ. ಶಾಲಾ ಕೊಠಡಿಗಳನ್ನು ಕೊಡಿ, ಅವರಿಗೆ ಕುಡಿಯಲಿಕ್ಕೆ ನೀರು ಕೊಡಿ, ಸರ್ವ ಶಿಕ್ಷಣ ಅಬಿಯಾನದಲ್ಲಿ ನಿಮಗೆ ಅವಾರ್ಡ್ ಬಂದಿದೆ, ಸರ್ವ ಶಿಕ್ಷಣ ಅಭಿಯಾನ ದಲ್ಲಿ ಮುಂಚೆ ೭೫-೨೫ ಇತ್ತು, ಈಗ ೫೦% burden is on the state Government. ಇಂಥ ಪರಿಸ್ಥಿತಿಯಲ್ಲಿ ಹೈಸ್ಕೂಲುಗಳನ್ನು ಮಂಜೂರು ಮಾಡಿದ್ದೀರಿ, ಶಿಕ್ಷಕರು ಬೇಕಲ್ಲವೇ? ಕೋಣೆಗಳು ಬೇಕು, ೫೦೦ ಹೈಸ್ಕೂಲ್ಸ್ ಕೊಟ್ಟರೆ ಹೇಗೆ? I appriciate it. But, ಅಲ್ಲಿ ಶಾಲೆಗಳು ಇರಬೇಕಲ್ಲವೇ, ಕೋಣೆಗಳು ಇರಬೇಕಲ್ಲವೇ, ಶಿಕ್ಷಕರು ಇರಬೇಕಲ್ಲವೇ, what is the use of sanctioning? ಯಾರಿಗೆ ಸಮಾಧಾನ ಮಾಡಲಿಕ್ಕೆ ಕೊಟ್ಟಿದ್ದು ? ಹಾಗಾಗಿ ಯಾವ ಮೂಲಭೂತ ಸೌಕರ್ಯಗಳು, ಜ್ಯೂನಿಯರ್ ಕಾಲೇಜುಗಳಿಗಿರಬಹುದು, ಹೈಸ್ಕೂಲ್ಸ್ ಇರಬಹುದು, ಸ್ಯಾಕ್ಷನ್ ಮಾಡಿದಾಗ ಅದಕ್ಕೆ sufficient infrastructure, man power, ಒದಗಿಸಬೇಕು. ಆ ರೀತಿ ಒದಗಿಸಿರುವುದು ಯಾವುದು ನಮ್ಮ ಕಣ್ಣಿಗೆ ಕಾಣುತ್ತಿಲ್ಲ ಮಾನ್ಯ ಉಪಮುಖ್ಯಮಂತ್ರಿಗಳು ಈ ಬಗ್ಗೆ ರಿಪ್ಲೈನಲ್ಲಿ ಹೇಳಬೇಕು ಎಂದು ನಾನು ಒತ್ತಾಯಿಸುತ್ತೇನೆ.

ಶ್ರೀ ವಿ.ಎಸ್. ಆಚಾರ್ಯ : ನಮ್ಮ ಸರ್ಕಾರ ಬಂದ ನಂತರ ಎರಡು ವರ್ಷ, ಅದೂ ಈ ವರ್ಷ ಇನ್ನಷ್ಟು ದಾಖಲೆ ರೂಪದಲ್ಲಿ social sectors ಆದಂಥ education, health ಗೆ ಅತಿ ಹೆಚ್ಚು ಅಲೋಕೇಷನ್ ಕೊಟ್ಟಿದೆ, ನೀವು ಪ್ಲಾಸ್ ಪ್ರೋಗ್ರಾಮ್ ಅನ್ನು ನೋಡಿಕೊಂಡು ಹೇಳಿದರೂ , ಅದು ಶಿಕ್ಷಣಕ್ಕೆ, ಆರೋಗ್ಯಕ್ಕೆ ಪ್ಲಾಸ್ ಪ್ರೋಗ್ರಾಮ್‌ನಲ್ಲಿ ಭರಿಸಲಿಕ್ಕೆ ಸಾಕಾಗುವುದಿಲ್ಲ, ಏಕೆಂದರೆ ನಾನ್ ಪ್ಲಾನ್ನಲ್ಲಿ ಬಹುತೇಕ expenditure ಆಗುವಂಥಾದ್ದು. ೯೮% ಶಿಕ್ಷಣದ ಹೆಡ್ ನಾನ್ ಪ್ಲಾನ್‌ದು. ನಿಮಗೆ ಗೊತ್ತಿದೆ. ಹಾಗಾಗಿ ಹಾಗಿದ್ದರೂ ಫಸ್ಟ್ ಟೈಮ್ ಕಳೆದ ಬಾರಿ ರೂ. ೫,೦೦೦ ಕೋಟಿ ಮಾರ್ಕ್ ಅನ್ನು ಶಿಕ್ಷಣ ಕ್ಷೇತ್ರದಲ್ಲಿ ನಾವು ದಾಟಿದ್ದೇವೆ.

ಈ ವರ್ಷ ಮತ್ತೆ ರೂ. ೫೦೦-೦೦ ಕೋಟಿ ರೂಪಾಯಿಗಳ ಹೆಚ್ಚಿಗೆ, ತಮಗೆ ಗೊತ್ತಿದೆ. ೧೯೮೭ ರಲ್ಲಿ it was the present situation. ಈಗ ನಾವು ೧೯೮೭-೯೭ ರವರೆಗೆ ಗ್ರಾಂಟ್ ಇನ್ ಏಡ್ ಗೆ ತರುತ್ತಿದ್ದೇವೆ. ಸುಮಾರು ರೂ.೧೨೮.೦೦ ಕೋಟಿ. ಉಳಿದವರಿಗೆ ಮೊನ್ನೆ ೨೦೦೬ ರವರೆಗೆ ಬಂದವರಿಗೂ ಬ್ಲಾಕ್ ಗ್ರಾಂಟ್ ಸಿಸ್ಟಮ್ ಮಾಡಿ ಒಂದು ರೂ. ೫೦,೦೦ ಕೋಟಿ ಮತ್ತು ಆರೋಗ್ಯ ಕ್ಷೇತ್ರದಲ್ಲಿ, first time last year, ಲಾಸ್ಟ್ ಟೈಮ್ ರೂ. ೧,೫೦೦ ಕೋಟಿ ದಾಟಿತ್ತು. ಈ ವರ್ಷ ೨೦೦೦ ಕೋಟಿ ರೂಪಾಯಿಗಳವರೆಗೆ ಬರುತ್ತಿದ್ದೇವೆ. ನಿಮ್ಮ ಬುಕ್ ನಲ್ಲಿ ಪ್ಲಾನ್ ಪ್ರೋಗ್ರಾಮ್ ಪ್ರಕಾರವೇ ರೂ. ೧೨೮೩.೦೦ ಕೋಟಿಗಳು ಹೋದ ವರ್ಷವಾದರೆ, ಈ ವರ್ಷ ೧೬೦೦-೦೦ ರೂ. ಕೋಟಿ ರೂ. ಗಳು ಇದೆ. ಇದೆಲ್ಲಾ ಫಿಗರ್ಸ್ ಇಟ್ಟುಕೊಂಡು, ಪರ್ ಕ್ಯಾಪಿಟಾ ಮುಂದೆ ಹೋಗಿಲ್ಲವೆಂದರೆ ಹೇಗೆ?

ಶ್ರೀ ಆರ್. ವಿ. ದೇಶಪಾಂಡೆ : This Economic Survey report is provided by the Government, Finance Department. I am depending on this report ಇದು ಸರಿಯಲ್ಲ ವೆಂದರೆ ಅದನ್ನು ವಿತ್‌ಡ್ರಾ ಮಾಡಿ. But this is the report provided to me. ಈಗ ಎಕ್ಸೈಸ್ ಎಕ್ಸೈಸ್‌ನಲ್ಲಿ ಅರ್ರ್‍ಯಾಕ್ ಅಬಾಲಿಷ್ ಮಾಡಿದ್ದೀರಿ, ಸಂತೋಷ, ಸ್ತ್ರೀ ಶಕ್ತಿ ಗುಂಪುಗಳು ಕೇಳಿದ್ದಾರೆ, ನಮಗೆ ಗೊತ್ತಾಗಬೇಕು. ಮಾನ್ಯ ಯಡಿಯೂರಪ್ಪನವರೇ ..

ಶ್ರೀ ಬಿ.ಎಸ್.ಯಡಿಯೂರಪ್ಪ : ನೀವು ಅಬಾಲಿಷ್ ಮಾಡುವ ಅಗತ್ಯವಿಲ್ಲವೆಂದು ಹೇಳುತ್ತೀರಾ ? ನಿಮ್ಮ ಅಭಿಪ್ರಾಯವನ್ನು ನೇರವಾಗಿ ಹೇಳಿಬಿಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ನೀವು ಮಾಡುವುದಿಲ್ಲ ಎಂದಿದ್ದಿರಿ, ನೀವು ಒಂದು ಕಡೆ ನಿಮ್ಮ ಲೆಜಿಸ್ಲೇಚರ್ ಪಾರ್ಟಿ ಸಭೆ ಆದ ತಕ್ಷಣ ನಿಮ್ಮ ಎಂ.ಎಲ್.ಎ ಗಳು ಡಿಮ್ಯಾಂಡ್ ಮಾಡಿದ ಮೇಲೆ ನೀವು ಅದನ್ನು re-think ಮಾಡುತ್ತೇನೆಂದು ಹೇಳಿದ್ದಿರಿ. ಸಿ.ಎಂ. ರವರು next day ನಾವು

ಮಾಡೇ ಮಾಡುತ್ತೇವೆಂದಿದರು. ಆಗ ನಿಮ್ಮ ಗೊಂದಲವೇ ನಮಗೆ ಗೊತ್ತಾಗಲಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ : ಇಷ್ಟಾದರೂ ನೀವು ಒಪ್ಪುತ್ತಿರ ಎಂದುಕೊಂಡಿದ್ದೆ. ಅಂದು ಸಾರಾಯಿಗೆ ಸಂಬಂಧಪಟ್ಟಂತೆ ಹತ್ತಾರು ಸಾವಿರ ಜನರೇನು ಸಭೆ ಸೇರಿದ್ದರೋ ಆ ಸಭೆಗೆ ನಾನು ಧೈರ್ಯವಾಗಿ ಹೋದೆ. ಇನ್ನು ಮೂರು ದಿವಸಕ್ಕೆ ನಾವು ಬಜೆಟ್ ಮಂಡನೆ ಮಾಡಬೇಕು. ಆ ಸಭೆಯಲ್ಲಿ ಸಾರಾಯಿ ರದ್ದುಮಾಡುತ್ತೇನೆಂದು ಹೇಳಲು ಆಗುತ್ತದೆಯೇ ? ನಾನು ಆ ಸಭೆಯಲ್ಲಿ ಇದನ್ನು ಪರಿಶೀಲನೆ ಮಾಡುತ್ತಿದ್ದೇನೆ. ಇದರಿಂದ ತೊಂದರೆಯಾಗುವ ನೌಕರರ ಬಗ್ಗೆ ಚಿಂತನೆ ಮಾಡುತ್ತೇನೆ. ಯಾರ ಶ್ರಮದಿಂದ ಅನೇಕ ಜನರೇನು ಕೋಟ್ಯಾಧಿಪತಿಗಳಾಗಿದ್ದಾರೆ. ಅವರು ಸಹ ಇಲ್ಲಿ ದುಡಿದವರಿಗೆ ರಕ್ಷಣೆ ಕೊಡಲು ಹಾಕಬೇಕಾಗುತ್ತದೆ. ನಾವು ಏನೇನು ಬೇಕೋ ಅದನ್ನು ಮಾಡುತ್ತೇವೆಂದು ಸ್ಪಷ್ಟವಾಗಿ ಹೇಳಿಬಂದಿದ್ದೇನೆ. ಆ ಸಭೆಯಲ್ಲಿ ನಾನು ಇದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದರೆ, ಬಜೆಟ್ ಗೆ ಮೂರು ದಿವಸವಿತ್ತು ಎಂದು ನೀವಿಲ್ಲಿ ತರಾಟೆಗೆ ತೆಗೆದುಕೊಳ್ಳುತ್ತಿದ್ದಿರಿ. ಸಾರಾಯಿ ಬಗ್ಗೆ ಸಾಲ ಮನ್ನಾ ಬಗ್ಗೆ ಕಳೆದ ಎರಡು ದಿನದಿಂದ ಚರ್ಚೆ ನಡೆಯುತ್ತಲೇ ಇದೆ. ನಾನು ಮುಖ್ಯಮಂತ್ರಿಗಳು ಮಾತನಾಡುತ್ತಲೇ ಇದ್ದೇವೆ. On line lottery ಬಗ್ಗೆ ಸಹ ನಾವೇನು ಹೇಳಿದ್ದೆವೋ ಅದನ್ನು ಕಾರ್ಯರೂಪಕ್ಕೆ ತಂದಿದ್ದೇವೆ.

ಶ್ರೀ ಆರ್.ವಿ.ದೇಶಪಾಂಡೆ : ನೀವು ಮತ್ತು ಮುಖ್ಯಮಂತ್ರಿಗಳಿಬ್ಬರೇ ಮಾತನಾಡುತ್ತಿದ್ದಿರಿ. ಕ್ಯಾಬಿನೇಟ್ ನಲ್ಲಿ ಮಾತನಾಡುತ್ತಿರಲಿಲ್ಲ !

ಆದುದರಿಂದ ಸಾರಾಯಿ ನಿಷೇಧ ಮಾಡಿದ್ದು ಸಂತೋಷ. ಆದರೆ, ಪ್ರಶ್ನೆಯೇನಿದೆ ಎಂದರೆ ಒಂದೂವರೆಯಿಂದ ಎರಡು ಲಕ್ಷ ಜನ unemployed ಆಗುತ್ತಾರೆ. ಅದರ ಬಗ್ಗೆ ನಿಮ್ಮ ಬಜೆಟ್ ನಲ್ಲಿ ಏನೂ ಇಲ್ಲ. What is the rehabilitation programme for these people ಎಂದು ನನ್ನನ್ನು ಕೇಳಬೇಡಿ. ಒಂದು ಕಡೆ ರೈತರಿಗೆ ಸಲ ಮನ್ನಾ ಮಾಡಿ ಅವರ ಆಶೀರ್ವಾದ ಪಡೆಯುತ್ತಿದ್ದೀರಿ. ಮತ್ತೊಂದು ಕಡೆ

ಎರಡು ಲಕ್ಷ ಜನರು unemployed ಆಗುತ್ತಿದ್ದಾರೆ. Rehabilitation ಮಾಡುವ ಬಗ್ಗೆ ನಿಮ್ಮ ಬಜೆಟ್‌ನಲ್ಲಿ ಯಾವುದಾದರೂ programme ಇರಬೇಕಾಗಿತ್ತು. ಆ programme ಇಲ್ಲವೆಂದರೆ ನೀವು ಅದನ್ನು ತೆಗೆದುಕೊಂಡು ಬರಬೇಕಾಗುತ್ತದೆ. ಸಾರಾಯಿಯನ್ನು ನಿಷೇಧ ಮಾಡಿದಿರಿ. ಯಾರ pressure ಇತ್ತು ? ಸ್ತ್ರೀಶಕ್ತಿ ಗುಂಪು, social obligation ಒತ್ತಡ ಇತ್ತು. ಸಂತೋಷ. ಈಗ ನನಗೇನು ಭಯವಿದೆಯೆಂದರೆ ನೀವು revenue generate ಮಾಡುವುದಕ್ಕೆ ಹಳ್ಳಿ ಹಳ್ಳಿಗೆ ಅಂಗಡಿಗೆ ಸಿ.ಎಲ್.೨ ಕೊಡುತ್ತೀರಿ. In place of arrack ಆ ಸಿ.ಎಲ್ ೨ ಅಂಗಡಿಗೆ ಕೊಟ್ಟಾಗ ಯಾವ ಆಸರೆಯನ್ನು ಸ್ತ್ರೀಶಕ್ತಿಯಿಂದ ತೆಗೆದುಕೊಳ್ಳಲು ಪ್ರಯತ್ನ ಪಡುತ್ತಿರೋ ಅದು ಹೋಗುತ್ತದೆ. ಆದುದರಿಂದ ಎಂಬುದು what is your policy on this ಗೊತ್ತಾಗಬೇಕಾಗಿದೆ. ಒಂದು ಕಡೆ ಸಾರಾಯಿ ಅಂಗಡಿಯನ್ನು ಬಂದ್ ಮಾಡಿ ಮತ್ತೊಂದು ಕಡೆ ಸಿ.ಎಲ್.ಒ. ಲೈಸೆನ್ಸ್ ನೀಡಿ ಪ್ರತಿಯೊಂದು ಹಳ್ಳಿಯಲ್ಲಿ ನೀವು ಅಂಗಡಿಗಳನ್ನು ಪ್ರಾರಂಭ ಮಾಡುತ್ತೀರ ಎಂದು ಕೇಳುತ್ತಿದ್ದೇನೆ. ಇದರಲ್ಲಿ ಏನೂ ಇಲ್ಲ ; old wine in new bottle. ಸಾರಾಯಿಯನ್ನು ನಿಷೇಧ ಮಾಡಿ ಈಗ ಸಿ.ಎಲ್.ಒ. ಲೈಸೆನ್ಸ್ ಅನ್ನು ಕೊಡುತ್ತಾರೆ. Costly liquor ಅನ್ನು ಕುಡಿಯಿರೆಂದು ಹೇಳುತ್ತಾರೆ. ಕಳ್ಳಭಟ್ಟಿ ಹೆಚ್ಚಾಗುತ್ತದೆ. ಹಾಗಾಗಿ you have to have a comprehensive policy. ಸಾರಾಯಿಯನ್ನು ನಿಷೇಧ ಮಾಡಿದ್ದು ಸಂತೋಷ, Rehabilitation programme, basic liquor ಆಗಬಾರದು. ಅದರ ಬಗ್ಗೆ ತಮ್ಮ programme ಏನು? ಸಿ.ಎಲ್.ಒ ಲೈಸೆನ್ಸ್ ಹೆಚ್ಚು ಕೊಡಬಾರದು. ಇದನ್ನು ನೀವು ಗಮನದಲ್ಲಿಟ್ಟು ಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ this exercise will have no meaning ಇನ್ನೂ ರೈತರ ಸಾಲ ಮನ್ನಾ ಬಗ್ಗೆ ಹೇಳುವುದಾದರೆ, ಕರ್ನಾಟಕ ರಾಜ್ಯದಲ್ಲಿ ೭೦.೭೯ ಲಕ್ಷ ರೈತರ ಕುಟುಂಬಗಳಿವೆ. ನಮ್ಮ ಕರ್ನಾಟಕ ರಾಜ್ಯದ loan outstanding ಇವತ್ತು ರೂ. ೮,೩೦೨.೪೯ ಕೋಟಿ ಇದೆ. ಆರ್.ಆರ್.ಬಿ., ವಾಣಿಜ್ಯ ಬ್ಯಾಂಕುಗಳು ಮತ್ತು ಸಹಕಾರಿಗಳು. ಇದರಲ್ಲಿ ೧೫ ಲಕ್ಷದ ೩೫ ಸಾವಿರದ ೫೮೮೫ ಜನ ರೈತರು

defaulters ಇದ್ದಾರೆ. ಸಹಕಾರಿ ಕ್ಷೇತ್ರದಲ್ಲಿ ೭ ಲಕ್ಷದ ೯ ಸಾವಿರದ ೨೨೦ ರೈತರು defaulters ಇದ್ದಾರೆ. ಇವತ್ತು ಮಾನ್ಯ ಯಡಿಯೂರಪ್ಪನವರ period ನಲ್ಲಿ ೧.೪.೨೦೦೬ ರಿಂದ ೩೧.೧೨.೨೦೦೬ರಲ್ಲಿ ಹೊಸ ಸಾಲ, ಈ ರಾಜ್ಯದಲ್ಲಿ ಕೊಟ್ಟಿದ್ದು, ೧೬ ಲಕ್ಷದ ೬೩ ಸಾವಿರದ ೫೬೩ ಕುಟುಂಬಗಳಿಗೆ ೭ ಸಾವಿರದ ೪೫೫.೯೪ ಸಾಲ ಕೊಟ್ಟಿದ್ದಾರೆ. ಇದರಲ್ಲಿ ವಾಣಿಜ್ಯ ಬ್ಯಾಂಕುಗಳು, ಆರ್.ಆರ್.ಬಿ ಗಳು ಸಹಕಾರಿ ಸಂಘಗಳು ಇದೆ. ನೀವು benefit ಕೊಟ್ಟಿದ್ದು ೨೫ ಸಾವಿರದವರೆಗೆ ಸಾಲ ಮನ್ನಾ ಮಾಡಿದದು, ೫೦ ಸಾವಿರ ಸಾಲವನ್ನೇನು ತೆಗೆದುಕೊಂಡಿದ್ದಾರೆ ಅದರಲ್ಲಿ ಮಾರ್ಚ್ ಒಳಗೆ ಯಾರು ಹಣವನ್ನು ತುಂಬುತ್ತಾರೆ ೨೫ ಸಾವಿರದವರೆಗೆ ರಿಯಾಯಿತಿ ಕೊಟ್ಟರಿ. ಯಾರು ೫೦ ಸಾವಿರಕ್ಕಿಂತ ಜಾಸ್ತಿ ಸಾಲ ತೆಗೆದುಕೊಂಡಿದ್ದಾರೆ ಅಥವಾ overdues ಏನಿದೆ, ಅವರು ೩೧ರೊಳಗೆ ಅಸಲು ಪಾವತಿ ಮಾಡಿದರೆ, ಬಡ್ಡಿ, ದಂಡದ ಬಡ್ಡಿಯಲ್ಲಿ ರಿಯಾಯಿತಿಯನ್ನು ಕೊಟ್ಟಿದ್ದೀರಿ. ಆಧರಿಂದ ಏನು ಪರಿಣಾಮವಾಗಿದೆ ಎಂಬುದನ್ನು ನೋಡಬೇಕಲ್ಲ. ಅರ್ಥ ಸಚಿವರು ಮುಂದಿನ ವರ್ಷದ ಮುಂಗಡ ಪತ್ರದಲ್ಲಿ ಇದಕ್ಕೆ ರೂ. ೫೦೦ ಕೋಟಿ ಇಟ್ಟಿದ್ದಾರೆ. ಅವರು ೨೩ನೇ ತಾರೀಖು ಕೊಟ್ಟ statement ನಲ್ಲಿ ಅದರ ಭಾರ ರೂ. ೧೯೫೦ ಕೋಟಿ ಬರಬಹುದು ಎಂಬ ಅಂದಾಜನ್ನು ಹೇಳಿದ್ದಾರೆ. ಈಗ co-operative sector ನಲ್ಲಿ short term and medium terms loans defaulted ರೂ.೫೭೨ ಕೋಟಿ ಇದೆ. Loan term ನಲ್ಲಿ ರೂ. ೨೬೪ ಕೋಟಿ ಇದೆ. Total principal Rs.842 cores interest Rs.499 crores ಇದೆ. ಅಂದರೆ ರೂ.೧೩೪೧ ಕೋಟಿ defaulted overdue loans ಇದೆ. on 31.12.2006 in co-operative field ಮತ್ತು ಇದರಲ್ಲಿ total farmers involved are ೭ ಲಕ್ಷದ ೨೦ ಸಾವಿರ. ಈ ಜನರಿಗೇನು ನೀವು ರಿಯಾಯಿತಿ ಕೊಟ್ಟರಿ ? ಅವರು ೩೧ರ ಒಳಗಾಗಿ principal ನ್ನು ತುಂಬಿದರೆ ಅವರ ಬಡ್ಡಿ ಮತ್ತು ದಂಡದ ಬಡ್ಡಿಯನ್ನು ರಿಯಾಯಿತಿ ಮಾಡುತ್ತೇನೆಂದು ಹೇಳಿದ್ದೀರಿ. ಮಾನ್ಯ ಯಡಿಯೂರಪ್ಪರವರ announcement ಪ್ರಕಾರ ೨೫ ಸಾವಿರ ರಿಯಾಯಿತಿ ಕೊಟ್ಟಿರುವ ಲಾಭ

೫ ಲಕ್ಷದ ೯೫ ಸಾವಿರ ಜನರಿಗೆ ಸಿಗುತ್ತಿದೆ. ಮಾಡುತ್ತೇನೆಂದು ಹೇಳಿದ್ದೀರಿ. ಮಾನ್ಯ ಯಡಿಯೂರಪ್ಪರವರ announcement ಪ್ರಕಾರ ೨೫ ಸಾವಿರ ರಿಯಾಯಿತಿ ಕೊಟ್ಟಿರುವ ಲಾಭ ೫ ಲಕ್ಷದ ೯೫ ಸಾವಿರ ಜನರಿಗೆ ಸಿಗುತ್ತಿದೆ. ೫೦ ಸವಿರ ಸಾಲ ತೆಗೆದುಕೊಂಡಿರುವವರಿಗೇನು ೨೫ ಸಾವಿರದವರೆಗೆ ರಿಯಾಯಿತಿ ಕೊಟ್ಟಿದ್ದೀರಿ ಅದು ಇನ್ನೂ ಸ್ವಲ್ಪ ಹೆಚ್ಚಾಗುತ್ತದೆ. ಒಟ್ಟು liability Rs.922 plus Rs.311 croes total Rs.1233 ಕೋಟಿಯಾಗುತ್ತದೆ. Loan waiver, in addition, interest liability ಬರುತ್ತದೆ. ಈಗ ಪ್ರಶ್ನೆ ಏನಿದೆ ಎಂದರೆ, ಈ ಸಾಲ ಮನ್ನಾ ಮಾಡಿದ್ದೀರಲ್ಲ ಇದರ ಲಾಭ ಯಾರಿಗೆ? ರಾಜ್ಯದ ರೈತರು ಸಾಲವನ್ನು ರಬಿ, ಖರೀಫ್, ಬೆಳಗಾವಿ ನಗೆದು ಕೊಂಡಿದ್ದಾರೆ. Southern Karnataka ದಲ್ಲಿ ಬೇರೆ ಪರಿಸ್ಥಿತಿ ಇದೆ. ಬೀದರ್ ನಲ್ಲಿ ಅಕ್ಟೋಬರ್ ನವೆಂಬರ್ ನಲ್ಲಿ ಸಾಲವನ್ನು ತೆಗೆದುಕೊಳ್ಳುತ್ತಾರೆ. ಅವರ ಸಾಲ due ಆಗುವುದು ಅಕ್ಟೋಬರ್, ನವೆಂಬರ್ ೨೦೦೬. ಯಾರು ದೀರ್ಘಾವಧಿ ಸಾಲ ತೆಗೆದುಕೊಳ್ಳುತ್ತಾರೆ, ೧.೪.೨೦೦೬ ರಿಂದ ೩೧.೧೨.೨೦೦೬ ಅವರಿಗೆ instalment ಬರುವುದೇ ೨೦೦೭ ಮೇ ಜೂನ್ ನಲ್ಲಿ. ಅವರಿಗೇನು benefit ಕೊಟ್ಟಂತಾಯಿತು ನೀವು ? ಯಾವ ರೈತರು ೧.೪.೨೦೦೬ ರವರೆಗೆ ಮಧ್ಯಮ ಮತ್ತು ದೀರ್ಘಾವಧಿ ಸಾಲ ತೆಗೆದುಕೊಂಡಿದ್ದಾರೆ ಅವರ instalments due ಆಗುವುದು ಒಂದು ವರ್ಷದ ನಂತರ. ಕೆಲವು ಸಲ ಮುಂದಿನ ವರ್ಷದಲ್ಲಿ ಬರುತ್ತದೆ. depending upon the loan which available. ಹಾಗಾದರೆ ಅವರಿಗೇನೂ benefit ಇಲ್ಲ. ಏಕೆಂದರೆ instalment due ಆಗಿಲ್ಲ, ಅವರು principal ಅನ್ನು ಕೊಡಬೇಕಲ್ಲ. ಅವರು principal ಕೊಡುವ ಪ್ರಸ್ನೆಯೇ ಬಂದಿಲ್ಲ. ಯಾವ ರೈತರು ಅಕ್ಟೋಬರ್, ನವೆಂಬರ್ ೨೦೦೫ರಲ್ಲಿ ಬೆಳೆ ಸಾಲವನ್ನು ತೆಗೆದುಕೊಂಡಿದ್ದಾರೆ, ಅವರು ನವೆಂಬರ್ ೨೦೦೬ರಲ್ಲಿ ಸಾಲ ವಾಪಸ್ ಕೊಡುತ್ತಾನೆ. ಅವನಿಗೆ ಈ benefit ಸಿಗುವುದಿಲ್ಲ. ನೀನೇನು ಹೇಳಿದ್ದೀರಿ, ಯಾರು ೧.೪.೨೦೦೬ ರಿಂದ ೩೧.೧೨.೨೦೦೬ ರವರೆಗೆ ಸಾಲವನ್ನು ತೆಗೆದುಕೊಂಡಿದ್ದಾರೆ, ಅವರದಷ್ಟನ್ನೆ ಹೇಳಿದ್ದೀರಿ. ಯಾರು ಜನವರಿ,

ಡಿಸೆಂಬರ್, ನವೆಂಬರ್ ೨೦೦೪-೦೫ರಲ್ಲಿ ಸಾಲ ತೆಗೆದುಕೊಂಡಿದ್ದಾರೆ ಅವರಿಗೆ ಇದರ ಲಾಭ ಇಲ್ಲ. ಒಂದು ದೃಷ್ಟಿಯಿಂದ ರೈತರಿಗೆ ವಂದನೆ ದ್ರೋಹ ಮಾಡಿದ್ದಾರೆ. ಇಡೀ ರೈತ ಸಮುದಾಯಕ್ಕೆ ನೀವು ಸಹಾಯವನ್ನು ಮಾಡಬೇಕಾದರೆ ಎಲ್ಲಾ ರೈತರಿಗೂ ಸಾಲ ಮನ್ನಾ ಮಾಡಬೇಕಾಗಿತ್ತು. ಮತ್ತು ಈ factors ರಾಜ್ಯದ ಬೇರೆ ಬೇರೆ ಭಾಗದಲ್ಲಿ, ಬೇರೆ ಬೇರೆ ಸಮಯದಲ್ಲಿ ಬೆಳೆ ಸಾಲವನ್ನು ತೆಗೆದುಕೊಳ್ಳುತ್ತಾರೆ. ಇದನ್ನೆಲ್ಲ ನೀವು ಗಮನದಲ್ಲಿಟ್ಟು ಕೊಳ್ಳಬೇಕಾಗಿತ್ತು. ಅದನ್ನು ನೀವು ಗನದಲ್ಲಿಟ್ಟು ಕೊಂಡಿಲ್ಲ. ಅದೇ ಪ್ರಕಾರ ನೀವೇನು ಹೇಳಿದ್ದೀರಿ, ಯಾರು ಸಾಲವನ್ನು ಮರುಪಾವತಿ ಮಾಡಿದ್ದಾರೆ, ಅವರ ಹಣವನ್ನು FD ಯಲ್ಲಿ ಇಡುತ್ತೇನೆ. ಅದಕ್ಕೆ ೪% interest ಅನ್ನು ಕೊಡುತ್ತೇನೆ ಎಂದು ಹೇಳಿದ್ದೀರಿ. ಏಕಪ್ಪ ? ಯಾವ ಆರ್ಥಿಕ ತಜ್ಞರು ನಿಮಗೆ ಈ advise ಅನ್ನು ಮಾಡಿದರು ? ರೈತನಿಗೆ ಹಣವನ್ನು ವಾಪಸ್ ಕೊಡಿ. ನಿಮ್ಮ FD interest ೮-೯% ಇರುವಾಗ ನೀವೇ ೪% ಕೊಡುತ್ತಿದ್ದೀರಿ? ಇದು ಒಂದು ದೃಷ್ಟಿಯಿಂದ ರೈತರಿಗೆ ಮೋಸ ಮಾಡಿದಂತೆ ಅಲ್ಲವೇ ? ಹಿಂದೆ ಧರ್ಮಸಿಂಗ್ ಸರ್ಕಾರ ಇತ್ತು. Loan interest Waiver Scheme ತಂದಾಗ ರೂ. ೧೨೦೦ ಕೋಟಿ ರೈತರಿಗೆ ಬಡ್ಡಿ ರಿಯಾಯಿತಿಯನ್ನು ಕೊಟ್ಟಿದ್ದೇವೆ. ೧೦,೨೫,೦೦೦ ರೈತರಿಗೆ benefit ಆಗಿದೆ. Interest Subsidy Scheme ತಂದಾಗ ತಾವು ಹೇಳಿದ್ದಿರಿ. ನಾವು ೪% ಗೆ ಕೊಡುತ್ತೇವೆಂದು. ನೀವೆಲ್ಲಿ ೪% ಗೆ ಕೊಡುತ್ತೀರಿ ? ಕೇಂದ್ರ ಸರ್ಕಾರ ನಬಾರ್ಡ್ ಬಡ್ಡಿ ದರವನ್ನು ಕಡಿಮೆ ಮಾಡಿದರು. ನಾವು ೬%, ಲೆಕ್ಕವನ್ನು ತೆಗೆದು ನೋಡಿ. ೬% ಅನ್ನು ನಾವು ಕೊಡುವಾಗ ಆಗ ಏನು ಸರ್ಕಾರದ interest subsidy burden ಮೇಲೇನು ಇತ್ತು, ಅದಕ್ಕಿಂತ ಕಡಿಮೆ burden ಈಗ ನಿಮಗೆ ಆಗಿದೆ ಏಕೆಂದರೆ Government of India have reduced, NABARD has reduced the lending rates to 7%. ಹಾಗಾಗಿ ನೀವು ನಿಮ್ಮ ಬೆನ್ನನ್ನು ತಟ್ಟಿಕೊಳ್ಳುವ ಪ್ರಶ್ನೆಯೇ ಇಲ್ಲ. ಆ credit ಹಾಗಬೇಕಾದರೆ ಅದು Governement of India ಗೆ ಹೋಗಬೇಕಾಗುತ್ತದೆ. ನಮ್ಮ ಹಣಕಾಸು ಸಚಿವರು ಏನು ಹೇಳಿದ್ದಾರೆ. ಬರಗಾಲ ಬಂದಿದೆ, ಅತಿವೃಷ್ಟಿಯಾಗಿದೆ, ಬೆಳೆ

ಹಾಳಾಗಿದೆ. Agriculture production ೨% ಗಿಂತ ಕಡಿಮೆಯಾಗಿದೆ, suicides ಆಗುತ್ತಿವೆ, ಎಂದು ಮಾನ್ಯ ಯಡಿಯೂರಪ್ಪನವರೆ, ನಿಮಗೆ ಒಂದು ಮಾತನ್ನು ಕೇಳಬೇಕು. ಹಾಗಾಗಿ ನಾವು ಸಾಲ ಮನ್ನಾ ಮಾಡುತ್ತೇವೆಂದು ಹೇಳಿದ್ದೀರಿ. ಸಾಲ ಮನ್ನಾ ಏಕೆ ಮಾಡುತ್ತಿದ್ದೀರಿ ಎಂದರೆ, ಈ ಕಾರಣಕ್ಕೆ ಸಾಲ ಮನ್ನಾ ಮಾಡಬೇಕು. ಹಾಗಾಗಿ ನಿಜವಾಗಿ ಈ benefit ಅವರಿಗೆ ಮೊದಲೇ ಹೋಗಬೇಕಾಗಿತ್ತು. ಯಾರು suicide ಮಾಡಿಕೊಳ್ಳುತ್ತಿದ್ದಾರೆ. ಯಾರು ಬೆಳೆಯನ್ನು ಹಾಳು ಮಾಡಿಕೊಂಡಿದ್ದಾರೆ. ಅವರಿಗೆ ಈ ಬೆ----- ಹೋಗಬೇಕಾಗಿತ್ತು. ಯಾರು, ಯಾರು defaulter ಆಗಿದ್ದಾರೆ. ಅವರಿಗೆ ಸಾಲವನ್ನು ಮನ್ನಾ ಮಾಡಬೇಕಾಗಿತ್ತು. Along with this, current defaulters ಕೂಡ ಮನ್ನಾ ಮಾಡಿದ್ದೀರಿ. ಸಂತೋಷ, ಆದರೆ ಕರೆಂಟ್ ಲೋನ್ ನೋಡುವಾಗ ಹಳೆಯ ಬಾಕಿಯನ್ನು ಏಕೆ ಮಾಡಿಲ್ಲ? ಇವತ್ತು ಪಾಪ, suicide ಮಾಡಿಕೊಳ್ಳುವವರು ಮಾಡಿಕೊಳ್ಳುತ್ತಲೇ ಇದ್ದಾರೆ. ಅವರು defaulter ಇದ್ದಾರೆ. ಅವರ ಸಾಲದ ಭಾರ ಏನೂ ಕಡಿಮೆಯಾಗಿಲ್ಲ. ಅವರಿಗೆ ಸಾಲ ಮರುಪಾವತಿ ಮಾಡುವ ಶಕ್ತಿ ಅವರಿಗೆ ಇಲ್ಲ. ಯಾರಿಗೆ ಸಾಲ ಮರುಪಾವತಿ ಮಾಡುವ ಶಕ್ತಿ ಇಲ್ಲ. ಅವರಿಗೆ ನೀವು ಸಹಾಯವನ್ನು ಮಾಡಿಲ್ಲ. Overdues ಯಾರಾದರು ಹೊಂದಿದರೆ, ಅವರಿಗೆ ಸಹಾಯವನ್ನು ಮಾಡಿದ್ದೀರಾ ? ಕರೆಂಟ್ dues ನೀವು ಮನ್ನಾ ಮಾಡಿದ್ದೀರಿ. ಅದನ್ನು partially ಮಾಡಿದ್ದೀರಿ. ಈ Loan Waiver Scheme ಒಂದು stunt ಇದರಿಂದ ನಿಜವಾಗಿ ಯಾವ ರೈತರು ಕಷ್ಟದಲ್ಲಿದ್ದಾರೆ,ಯಾವ ರೈತರು ತೊಂದರೆಯಲ್ಲಿದ್ದಾರೆ, ಯಾರು suicide ಮಾಡಿಕೊಳ್ಳುತ್ತಿದ್ದಾರೆ, ಆ ಕುಟುಂಬಕ್ಕೆ ಏನೂ ಲಾಭವಾಗಿಲ್ಲ. ಇದನ್ನು ನಾವು ತಿಳಿದುಕೊಳ್ಳಬೇಕಾಗಿದೆ. ಹಾಗಾಗಿ ಒಂದೆರಡು ಸಾರಿ ಕೇಂದ್ರ ಸರ್ಕಾರ ಸಹಾಯವನ್ನು ಮಾಡಿತ್ತು ಪದೇ ಪದೇ ನಿಮಗೆ ಅದೇ ಯೋಚನೆ. ಕೇಂರ ಸರ್ಕಾರ ಸಹ ನಿಮಗೆ ರೂ.೧೫೬೮ ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ. ಇಡೀ ರಾಯಕ್ಕೆ ನೀವು ಹೇಳುತ್ತಿದ್ದೀರಿ. ಇಡೀ ರಾಜ್ಯಕ್ಕೆ ಕೊಟ್ಟಿದ್ದು ರೂ.೧೯೫೦ ಕೋಟಿ ಎಂದು ನೀವು ಹೇಳುತ್ತಿದ್ದೀರಿ. ಅದು ಕಡಿಮೆಯಾಗುತ್ತದೆ. ನಮ್ಮ ಲೆಕ್ಕದ ಅಷ್ಟು ಆಗುವುದಿಲ್ಲ. ಆದರೆ

ಕೇಂದ್ರ ಸರ್ಕಾರ ಆರು ಜಿಲ್ಲೆಗೆ ಕೊಡಗು, ಚಿಕ್ಕಮಗಳೂರು, ಶಿವಮೊಗ್ಗ, ಚಿತ್ರದುರ್ಗ, ಬೆಳಗಾಂ ಮತ್ತು ಬಿಜಾಪುರಕ್ಕೆ ರೂ.೧೫೬೮.೭೫ ಕೋಟಿ grants ಅನ್ನು ಕೊಟ್ಟಿದ್ದಾರೆ. Rs. 1121.57 Crores is subsidy. ಅದನ್ನು ನೀವು ಮೆಚ್ಚುವುದಿಲ್ಲ. ಅದರ ಬಗ್ಗೆ ನೀವೇನೂ ಹೇಳುವುದಿಲ್ಲ. ಹಾಗಾಗಿ ಈ ರೈತರಿಗಾಗಲಿ, ಮೀನುಗಾರರಿಗಾಗಲಿ, ಮತ್ತು Weavers ಗಾಗಲಿ, ನೀವೇನು ಅವರಿಗೆ ಲೋನ್ ಕೊಟ್ಟಿದ್ದೀರಲ್ಲ. ನೀವು overdue loans waive ಮಾಡಬೇಕಾಗಿತ್ತು. ನಿಜವಾಗಿ ಕಷ್ಟದಲ್ಲಿರುವ ನೇಕಾರ, ಕಷ್ಟದಲ್ಲಿರುವ ಮೀನುಗಾರ, ಕಷ್ಟದಲ್ಲಿರುವ ರೈತರಿಗೆ ಸಹಾಯವಾಗುತ್ತಿತ್ತು. ಅದನ್ನು ಮಾಡಲಿಲ್ಲ. ಇವತ್ತು current loan ಮನ್ನಾ ಮಾಡುವಾಗ ಅದನ್ನು ನೀವು ವಿಚಾರ ಮಾಡಿದ್ದರೆ ಅವರಿಗೆ ಸಹಾಯವನ್ನು ಮಾಡಿದರೆ ಒಳ್ಳೆಯ ಕೆಲಸವಾಗುತ್ತಿತ್ತು. ಅಲ್ಲವೇ? you have kept them again in dark. ಮತ್ತೊಂದು ದೊಡ್ಡ ಸಮಸ್ಯೆ ಏನೆಂದರೆ ತಾವು ವಿಚಾರ ಮಾಡಬೇಕು. ತಾವೇ ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದ್ದೀರಿ. ೨% ಗಿಂತ ಕಡಿಮೆಯಾಗುತ್ತಿದೆ, ಅದರ ಅರ್ಥವೇನು ? ಕೇಂದ್ರ ಸರ್ಕಾರ ಹೇಳಿದ್ದಾರೆ, thrust area is Agriculture. ನಮ್ಮ ಮಾನ್ಯ ಚದಂಬರಂ ಬಜೆಟ್ ನ್ನು ತಾವು ನೋಡಿದಾಗ ಈ ಬಾರಿRural Development, ಗೆ Agriculture ಗೆ, Social Service ಗೆ, Health Care ಗೆ, ಶಿಕ್ಷಣಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟಿದ್ದಾರೆ. So, naturally as a Finance Minister ನೀವು ಅದನ್ನು ಮಾಡಬೇಕಾಗಿತ್ತು. ಇವತ್ತು ಏನಾಯಿತು ಹೇಳಿ, ಪಿಎಲ್‌ಡಿ ಬ್ಯಾಂಕ್‌ಗಳಿಂದ ಯಾವ ರೈತರು ಸಾಲವನ್ನು ಪಡೆದುಕೊಂಡಿದ್ದಾರೆ. ಅವರಿಗೆ ಯಾವ ರಿಯಾಯಿತಿಯೂ ಇಲ್ಲ. ರಾಜ್ಯದಲ್ಲಿ ೧೭೭ ಪಿಎಲ್‌ಡಿ ಬ್ಯಾಂಕ್ ಗಳೇನು ಇವೆ, ಇವೇ institutions ರಾಜ್ಯದ ರೈತರಿಗೆ long term, medium term loan ಅನ್ನು ಕೊಡುತ್ತಾರೆ. Capital expenditure ಅನ್ನು ಕೊಡುತ್ತಾರೆ ; Land improvement ಗೆ ಕೊಡುತ್ತಾರೆ ; Building ಗೆ ಕೊಡುತ್ತಾರೆ ; Tractor ಗೆ ಕೊಡುತ್ತಾರೆ ; Power tiller ಗೆ ಕೊಡುತ್ತಾರೆ. ಆ 177 PLD Bank ಗಳು defaulter ಆದರೆ ಹಣ ಎಲ್ಲಿ ಬರುತ್ತದೆ ? Entire agricultural development will come

to a standstill. ಆ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕಲ್ಲವೆ? ನೀವು ಸಾಲ ಮನ್ನಾ ಮಾಡುತ್ತೇವೆಂದು ಹೇಳಿದಿರಿ, ಗೌರವಾನ್ವಿತ ಮುಖ್ಯಮಂತ್ರಿಗಳು, ನೀವು ಮೊದಲು "ಎಲ್ಲ ಸಾಲ ಮನ್ನಾ ಮಾಡುತ್ತೇವೆ, ಎಂದು ಹೇಳಿದಿರಿ ಯಾವ ರೈತರಿಗೆ ಸಾಲ ಕೊಟ್ಟಿಲ್ಲ ; Commercial Banks ಗೆ ಕೊಟ್ಟಿಲ್ಲ ; RRB ಗೆ ಕೊಟ್ಟಿಲ್ಲ ; ಸಹಕಾರಿ ಕ್ಷೇತ್ರಕ್ಕೆ ಕೊಟ್ಟಿಲ್ಲ. ನಂತರ ಎಲ್ಲ Co-operative ಗೆ ಮನ್ನಾ ಮಾಡುತ್ತೇವೆಂದು ಹೇಳಿದಿರಿ. ಯಾರಿಗೂ ಕೊಟ್ಟಿಲ್ಲ. ಹೀಗೆ ಹೇಳಿ ಹೇಳಿ ರೈತರಿಗೆ ಮೋಸ ಮಾಡಿ ಈಗ ನೀವು ಕೇವಲ ಬೆಳೆ ಸಾಲ ಅದು restricted ಆಗಿ ಕೊಡುತ್ತೇವೆಂದು ಹೇಳಿದರೆ, ಯಾರು ನಿಮ್ಮ ಮಾತಿಗೆ ಗೌರವವನ್ನು ಕೊಡಬೇಕು ? ನೀವು ಆ ಸ್ಥಾನದಲ್ಲಿರದ್ದು ಮಾತನಾಡುತ್ತಿದ್ದೀರಿ, ಹೇಗೆ ನಿಮ್ಮ ಮೇಲೆ ನಾವು ಭರವಸೆಯನ್ನು ಇಡಬೇಕು ? ಮಾನ್ಯ ಧರ್ಮಸಿಂಗ್ ಅವರ ಸರ್ಕಾರದ ಕಾಲದಲ್ಲಿ ಈ waiver interest ಪುನಃ revive ಆಯಿತು. ಪುನಃ ವಸೂಲಾತಿ ಇಲ್ಲದೆ ಆ ಬ್ಯಾಂಕುಗಳು ಕಷ್ಟದಲ್ಲಿ ಬಂದು ನಬಾರ್ಡ್ ನಿಂದ ಅವರಿಗೆ ಹಣ ಸಿಗುವುದಿಲ್ಲ. ಸಿಗುವುದಿಲ್ಲ. ರೈತರು ಬೆಳೆಯನ್ನು ಹೆಚ್ಚಿನ ರೀತಿಯಲ್ಲಿ ಉತ್ಪಾದನೆ ಮಾಡುವುದಕ್ಕೆ, ಮಾಡುವುದಕ್ಕೆ ಮಾಡುವುದಕ್ಕೆ ಯಾವ ತರಹದ ಸಹಾಯ ಆಗುವುದಕ್ಕೆ ಸಾಧ್ಯವಿಲ್ಲ. ರಾಜ್ಯದಲ್ಲಿ ಬರಗಾಲ ಇದೆ. ನೀವು ಏನು ಮಾಡುತ್ತಿದ್ದೀರಿ ? ಕೇಂದ್ರ ಸರ್ಕಾರ ಕೊಟ್ಟ ಹಣವನ್ನೆ ನೀವು ಬಿಡುಗಡೆ ಮಾಡುತ್ತಿಲ್ಲ. ಕುಡಿಯಲಿಕ್ಕೆ ನೀರಿಲ್ಲ. ಉದ್ಯೋಗವಕಾಶ ಇಲ್ಲ. ನಾನು ನಿಮಗೂ ಹೇಳಿದೆ. ಮಾನ್ಯ ಪ್ರಕಾಶ್ ಅವರಿಗೂ ಹೇಳಿದೆ. ಅದೇ ನಮ್ಮ ಮಲೆನಾಡು ಜಿಲ್ಲೆ, ನಮ್ಮ ಜಿಲ್ಲಾ ಮಂತ್ರಿಗಳು ಪ್ರಯತ್ನ ಮಾಡಿದರು, ಏಳೆಂಟು ಜಿಲ್ಲೆ, ಸ್ವಲ್ಪ ಹಣವನ್ನು ಬಿಡುಗಡೆ ಮಾಡಿಯಪ್ಪ ಎಂದರೆ ಅವರು ಹಣವನ್ನು ಕೊಟ್ಟಿಲ್ಲ. ೪-೫ ತಿಂಗಳ ಹಿಂದೆ ಸ್ವಲ್ಪ ಕೊಟ್ಟಿದ್ದು ಅಷ್ಟೆ. ಏಕೆ ನಿಮಗೆ ಮಲೆನಾಡಿನ ಬಗ್ಗೆ ಚಿಂತೆ ಇಲ್ಲವೇ ? ನೀವು ದುಡ್ಡು ಕೊಟ್ಟಿಲ್ಲ ನಾಲ್ಕೈದು ತಿಂಗಳ ಹಿಂದೆ ಕೊಟ್ಟಿದ್ದು ನಿಜ. ಮೊನ್ನೆ ಮೊನ್ನೆ ಒಂದು ತಿಂಗಲ ಹಿಂದೆ release ಮಾಡಿದಿರಿ. ಆಗ ನಾನು ತಮಗೂ ಹೇಳಿದ್ದೆ. ಮಲೆನಾಡು ಜಿಲ್ಲೆಯಲ್ಲಿ ಕಷ್ಟ ಇದೆ, ಉತ್ತರ ಕನ್ನಡದಲ್ಲಿದೆ, ಸೌತ್ ಕೆನರಾದಲ್ಲಿದೆ, ಶಿವಮೊಗ್ಗ ಇರಬಹುದು, ಚಿಕ್ಕಮಗಳೂರು

ಇರಬಹುದು, ಅಲ್ಲಿಗೆ ನೀವು ಕೊಟ್ಟಿಲ್ಲ. Those districts have been affected by flood. ಹಾಗಾಗಿ ಇವತ್ತು ಇದರ ಬಗ್ಗೆ ಮಾನ್ಯ ಹಣಕಾಸು ಸಚಿವರು ವಿಚಾರವನ್ನು ಮಾಡಬೇಕಾಗುತ್ತದೆ. ಇವತ್ತು ಲಾಟರಿಯನ್ನು abolish ಮಾಡಿದ್ದೀರಿ. OK ನನಗೆ ಬಂದ ಮಾಹಿತಿ ಪ್ರಕಾರ ಆರರಿಂದ ಏಳು ಲಕ್ಷ ಜನ ಈ trade ನಲ್ಲಿ depend ಇದ್ದಾರೆ. ಮಾರಾಟ ಮಾಡುವುದು, ಸ್ಟ್ಯಾಂಡ್ ನಲ್ಲಿ ಮಾರಾಟ ಮಾಡುವುದು, ಮತ್ತೊಂದು ಮಾಡುವುದು, ತಾವೇನು ಇವರಿಗೆ ಹೇಳಿದ್ದೀರಿ, ಸುವರ್ಣ ಕಾಯಕ ಯೋಜನೆಯಲ್ಲಿ ತರಬೇಡಿ ಕೊಡುತ್ತೇವೆಂದು ಹೇಳಿದ್ದೀರಿ. ಹೇಗೆ ಸಾಧ್ಯ ಸ್ವಾಮಿ ? ಏನು ತರಬೇತಿಯನ್ನು ಕೊಡುತ್ತೀರಿ ? ಅವರಿಗೆ ವಯಸ್ಸು ೩೦ ವರ್ಷ, ೪೦ ವರ್ಷ, ೫೦ ವರ್ಷ ಆಗಿದೆ. ಎರಡನೆಯದು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ಅದು ನಿಮಗೆ ಗೊತ್ತಿದೆಯೆ ಇಲ್ಲವೊ ಗೊತ್ತಿಲ್ಲ. On line ಎಂದು ಇರುತ್ತದೆ. ಈ ಲಾಟರಿಯನ್ನು On line ನೀವು computer ಮೇಲೆ purchase ಮಾಡಬಹುದು. ನೀವು ಇಡೀ ಕರ್ನಾಟಕ ರಾಜ್ಯದಲ್ಲಿ ಲಾಟರಿ abolish ಮಾಡುತ್ತೇವೆಂದು ಹೇಳಿದಿರಿ. ಇವತ್ತು ನಿಮಗೆ ಗೊತ್ತಿರಬಹುದು. e-ticketing ಬಂದಿದೆ. ಮುಂಚೆ ನಿಮಗೆ ticket ಕೊಡುವಾಗ ನಿಮಗೆ ಏನು ಬರುತ್ತಿತ್ತು ? What do you call that ? ಈಗ ನಿಮಗೆ ಕಾಗದದ ಮೇಲೆ ಕೊಡುತ್ತಾರೆ. ಆ ಪ್ರಕಾರ On line lottery ಇದೆ. ಲಂಡನ್ ಲಾಟರೀಸ್ ಇದೆ. ಬೇರೆ ಬೇರೆ ದೇಶದ ಲಾಟರೀಸ್ ಇದೆ. ಬೇರೆ ಬೇರೆ ರಾಜ್ಯದ ಲಾಟರೀಸ್ ಇದೆ. How are you going to control them ? What is the jurisdiction you have on the On-line lotteries, e-lotteries ? ಒಂದು ಕಡೆ revenue ಮುಗಿಸಿದ್ದೀರಿ. ಮತ್ತೊಂದು ಕಡೆ ಆರೇಳು ಲಕ್ಷ ಜನರು ಮನೆಗೆ ಹೋದರು. ಲಾಟರಿ ಪುನಃ ನಡೆಯುವುದು. I want anser from you. ನಿಮಗೆ ಇದು ಗೊತ್ತಿದೆಯೋ ಇಲ್ಲವೊ ಗೊತ್ತಿಲ್ಲ. But these On-line lotteries, e-lotteries are there. ಕರ್ನಾಟಕದಲ್ಲಿ ಬೇಕಾದರೆ ನೀವು ಲಂಡನ್ ಲಾಟರಿಯನ್ನು ಪರ್ಚೇಸ್ ಮಾಡಬಹುದು. How are you going to stop it ?

ಶ್ರೀ ಎಂ.ಪಿ.ಪ್ರಕಾಶ್ : To whom you are feeding ?

ಶ್ರೀ ಆರ್.ವಿ.ದೇಶ್ ಪಾಂಡೆ : ನಾನು feeding ಮಾಡುತ್ತಾ ಇಲ್ಲ ನಾನೇನು ಹೇಳುತ್ತಿದ್ದೇನೆ, ಇದನ್ನು ಗಮನದಲ್ಲಿಟ್ಟು ಕೊಳ್ಳಬೇಕಾಗಿತ್ತೆಂದು ಹೇಳುತ್ತಿದ್ದೇನೆ. See, what you have said ? Entire Karnataka ದಲ್ಲಿ abolish ಮಾಡಿದ್ದೇವೆಂದು ಹೇಳಿದರಲ್ಲ. that is not a correct statement ಎಂದು ಹೇಳುತ್ತಿದ್ದೇನೆ. That is the only thing I am making.

ಶ್ರೀ ಎಂ.ಪಿ. ಪ್ರಕಾಶ್ : ತಾವು ಹೇಳಿರತಕ್ಕಂಥಾದ್ದು ಬೇರೆ ದೇಶದ, ರಾಜ್ಯದ ಹೊಸ ತಂತ್ರಜ್ಞಾನದ ಮೂಲಕ ಜೂಜಾಡುವ ಪ್ರವೃತ್ತಿ ಮುಂದುವರೆಯುತ್ತದೆ, ಅದಕ್ಕೆ ಏನು ಮಾಡುತ್ತೀರಿ ? ಈಗ ಒಂದು step ಮುಂದಕ್ಕೆ ಹೋಗಿದ್ದೇವೆ. ಅದನ್ನು ನಾವು ನಿಲ್ಲಿಸಿದ್ದೇವೆ. ಅದರ ಅನುಭವದ ಮೂಲಕ ಈಗ ಎರಡು ಮೀಟಿಂಗ್ ಗಳನ್ನೂ ಮಾಡಿದ್ದಾರೆ. ಆದರೆ, ಇನ್ನೂ ಇರತಕ್ಕಂಥಾದ್ದಕ್ಕೆ ಹೇಗೆ ಮಾಡಬಹುದು ಎಂಬುದಕ್ಕೆ suggestions ಕೊಡಿ. ಮಾಡಿರುವುದನ್ನು ಸ್ವಾಗತ ಮಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇವತ್ತು ಪೇಪರ್ ನೋಡಿದ ಮೇಲೆ ನಮಗೆ confusion ಏನಾಗಿದೆಯೆಂದರೆ, ಪತ್ರಿಕೆಯಲ್ಲಿ ಏನು ಬಂದಿದೆಯೆಂದರೆ, ಲಾಟರಿ ನಿಲ್ಲಿಸತಕ್ಕಂಥಾದ್ದು, ಸಾರಾಯಿ ನಿಲ್ಲಿಸ ತಕ್ಕಂಥಾದ್ದು, loan wave-off ಮಾಡುವುದು – ಇವು ಮೂರು ಕೂಡ ಮಾನ್ಯ ಕುಮಾರಸ್ವಾಮಿಯವರ ಕಾರ್ಯಕ್ರಮ, ಇವು ಬಿಜೆಪಿ ಕಾರ್ಯಕ್ರಮವಲ್ಲ. ಇದನ್ನು ನಾನು ಹೇಳುತ್ತಿದ್ದೇನೆಂದು ಮಾನ್ಯ ದೇವೇಗೌಡರು ಘೋಷಣೆ ಮಾಡಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಮಾನ್ಯ ದೇವೇಗೌಡರು ಹೇಳಿರುವುದನ್ನು ಸ್ವಾಗತ ಮಾಡುತ್ತೇನೆ. ನನಗೇನು ವ್ಯತ್ಯಾಸವಿಲ್ಲ. ಮಾನ್ಯ ಕುಮಾರಸ್ವಾಮಿಯವರು ಮಾಡಿದರೇನು ? ಮಾನ್ಯ ಯಡಿಯೂರಪ್ಪನವರು ಮಾಡಿದರೇನು ? ಈ ರಾಜ್ಯದ ಜನರಿಗೆ ಸಾರಾಯಿ ಬಂದ್ ಆಗಬೇಕು, ಲಾಟರಿ ಬಂದ್ ಆಗಬೇಕು. ಇದು ಸಮ್ಮಿಶ್ರ ಸರ್ಕಾರದ ಕಾರ್ಯಕ್ರಮ.

ಮಾನ್ಯ ದೇವೇಗೌಡರನ್ನು ಏಕೆ ಇಲ್ಲಿ ತರುತ್ತೀರಿ ? ಇದು ಬಿಜೆಪಿ ಕಾರ್ಯಕ್ರಮವಲ್ಲ. ಇದು ಬಿಜೆಪಿ – ಜೆಡಿಎಸ್ ಸಮ್ಮಿಶ್ರ ಸರ್ಕಾರದ ಕಾರ್ಯಕ್ರಮ. ಮಾನ್ಯ ಸಿದ್ಧರಾಮಯ್ಯನವರೆ, ನೀವು ಆರ್ಥಿಕ ಸಚಿವರಾಗಿದ್ದಾಗ, "ಸಿದ್ಧರಾಮಯ್ಯನವರ ಬಜೆಟ್, ಸಿದ್ಧರಾಮಯ್ಯನವರ ಬಜೆಟ್" ಎನ್ನುತ್ತಿದದರು. ಹಾಗೆಯೇ, ಮಾನ್ಯ ಯಡಿಯೂರಪ್ಪನವರು ಹಣಕಾಸು ಸಚಿವರಾಗಿ ಬಜೆಟ್ ಮಂಡಿಸಿರುವುದರಿಂದ ಮಾನ್ಯ ಯಡಿಯೂರಪ್ಪನವರ ಬಜೆಟ್ ಎಂದು ಹೇಳುತ್ತಾರೆ.

ಶ್ರೀ ಸಿದ್ಧರಾಮಯ್ಯ : ಅದನ್ನು ಒಪ್ಪಿಕೊಳ್ಳುವುದಕ್ಕೆ ತಯಾರಾಗಿಲ್ಲ ಎನ್ನುವುದೇ ಈಗ ನಮ್ಮ ಪ್ರಶ್ನೆಯಾಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಬಿಜೆಪಿ – ಜೆಡಿಎಸ್ ಸಮ್ಮಿಶ್ರ ಸರ್ಕಾರದ ಬಜೆಟ್ ಅದಾಗಿದೆ. ನಾನು ಅದನ್ನು ಸಾರಿ ಸಾರಿ ಹೇಳುತ್ತೇನೆ.

ಶ್ರೀ ಸಿದ್ಧರಾಮಯ್ಯ : ಅದನ್ನು ಆ ರೀತಿ ಒಪ್ಪಿಕೊಂಡಿಲ್ಲವಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಯಡಿಯೂರಪ್ಪನವರೆ, ನಮಗೆ ದುಃಖವೇನೆಂದರೆ, "ಸಿದ್ಧರಾಮಯ್ಯನವರ ಬಜೆಟ್, ಸಿದ್ಧರಾಮಯ್ಯ ನವರ ಬಜೆಟ್ " ಎಂದು ನೀವು ಯಾವ ರೀತಿ ಹೇಳಿದಿರಿ. ಹಾಗೆಯೇ, ಇದನ್ನು "ಯಡಿಯೂರಪ್ಪನವರ ಬಜೆಟ್" ಎಂದು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಅವರು ಸ್ಪಷ್ಟವಾಗಿ ಹೇಳಿದ್ದಾರೆ... ಇವತ್ತು ಕನ್ನಡಪ್ರಭ ಪತ್ರಿಕೆಯ headlines ನೋಡಿ.

ಶ್ರೀ. ಕೆ.ಎಸ್. ಈಶ್ವರಪ್ಪ : ಅದಕ್ಕೋಸ್ಕರ ನಿಮಗೆ ದುಃಖವೇ ? ಬಹಳ ಸಂತೋಷ, ಬಿಡಿ.

ಶ್ರೀ ಕೆ.ಶ್ರೀನಿವಾಸಗೌಡ : ದುಃಖವಲ್ಲ, ಸೆಪ್ಟಂಬರ್ ಆದನಂತರ ಏನೇನಾಗುತ್ತದೆಂಬ ನಮಗೆ ಅನುಮಾನಗಳಷ್ಟೆ, ದುಃಖವೇನಿಲ್ಲ.

ಅಧ್ಯಕ್ಷರು : ಯಾರಾದಾದರೂ ಕಾರ್ಯಕ್ರಮವಾಗಲಿ ಬಿಡಿ. ಸರ್ಕಾರದ ಕಾರ್ಯಕ್ರಮ.

ಶ್ರೀ ಸಿದ್ಧರಾಮಯ್ಯ : ಇದು ಸಮ್ಮಿಶ್ರ ಸರ್ಕಾರದ ಕಾರ್ಯಕ್ರಮವೆಂದು ಹೇಳಿಬಿಟ್ಟಿದ್ದರೆ, ನಾವೇನು ಅದರ ಬಗ್ಗೆ ಹೇಳುತ್ತಿರಲಿಲ್ಲ. ಆದರೆ, ಅವರು ಏನು ಹೇಳಿದ್ದಾರೆಂದರೆ, ಬಿಜೆಪಿಯವರು " ನಮ್ಮ ಕಾರ್ಯಕ್ರಮ, ನಮ್ಮ ಕಾರ್ಯಕ್ರಮ" ವೆಂದು claim ಮಾಡುತ್ತಿದದಾರೆ. ಆ ರೀತಿ ಅವರು claim ಮಾಡುತ್ತಿರುವುದು ಸರಿಯಿಲ್ಲ. ಇದನ್ನು ಮಾನ್ಯ ಕುಮಾರಸ್ವಾಮಿಯವರು ಮೊದಲಿನಿಂದಲೂ ಹೇಳಿಕೊಂಡು ಬಂದಿದ್ದರು, ಲಾಟರಿಯನ್ನು ರದ್ದು ಮಾಡುತ್ತೇವೆ, ಪೂರ್ತಿ ಸಾಲ ಮನ್ನಾ ಮಾಡುತ್ತೇವೆ, ಸಾರಾಯಿ ರದ್ದು ಮಾಡುತ್ತೇವೆ, ನಿಷೇಧಿಸುತ್ತೇವೆ. ಎಂದು ಹೇಳಿಕೊಂಡು ಬಂದಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ : ಅಷ್ಟೊಂದು ಮಾಡಿಬಿಟ್ಟಿದ್ದಾರೆ. ಹಾಗಾಗಿ, ನಿಮಗೆ ಪಟ್ಟಿ ಮರೆತು ಹೋಗುತ್ತಿದೆ. ಇನ್ನೊಂದು ಯಾವುದು ಎಂದು ಕೇಳುವಷ್ಟು ಅವರು ಮಾಡಿಬಿಟ್ಟಿದ್ದಾರೆ.

ಅಧ್ಯಕ್ಷರು : ಈಗ ಯಾರು ಏನೇ ಹೇಳಲಿ, ಅಂತಿಮವಾಗಿ ಜನರು ಏನು ತಿಳಿದುಕೊಳ್ಳುತ್ತಾರೆಂಬುದು ಮುಖ್ಯವಲ್ಲವೇ ?

ಶ್ರೀ ಸಿದ್ಧರಾಮಯ್ಯ : ಮತ್ತಿ ಮಾನ್ಯ ಯಡಿಯೂರಪ್ಪನವರು ಮಾತೆತ್ತಿದರೆ, "ನಡೀರಿ, ಜನರ ಹತ್ತಿರಕ್ಕೆ ಹೋಗೋಣ. ಬಡಗಿ ತೆಗೆದುಕೊಂಡು ಹೋಡೀತಾರೆ " ಎನ್ನುತ್ತಾರಲ್ಲ, ... ಒಮ್ಮೆ ಏನು ಹೇಳಿದರು : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ಕೇಳಿ, ಸರ್ಕಾರದ ಬಜೆಟ್, ಜನರು ತೀರ್ಮಾನ ಮಾಡುತ್ತಾರೆ. ಪ್ರಜಾಪ್ರಭುತ್ವದಲ್ಲಿ ನೀವೆಲ್ಲಾ ಹೇಳುವುದೆಲ್ಲವೂ correct. ೧೦೦% ನಾವು ಒಪ್ಪಿಕೊಳ್ಳುತ್ತೇವೆ. ಮಾನ್ಯ ಯಡಿಯೂರಪ್ಪನವರು ಏನು ಹೇಳಿದರು ಎಂದರೆ, " ನೀವು ಹೋಗಿ ಜನರ ಹತಿತರ, ಅವರು ಬಡಗಿ ತೆಗೆದುಕೊಂಡು ಹೊಡೆಯುತ್ತಾರೆ" ಅಂದ್ರಲ್ಲ. ನಾನು ಅದಕ್ಕೋಸ್ಕರ, ೨-೩ದಿನವಸಗಳ ಕಾಲ ಬೆಳಗಾಂ ಕಡೆಗೆ ಹೋಗಿ ಬಂದೆ. ಇವರು ಹೇಳಿದಂತೆ ಅವರ ಮುಂದೆ ಹೇಳಿದೆ. ನೀವು ಹೇಳಿದ ತರಹ ಅವರೇನೂ ಮಾಡಲಿಲ್ಲವಲ್ಲ, ಮಾನ್ಯ ಯಡಿಯೂರಪ್ಪನವರೆ ?

(ನಗು)

ಒಬ್ಬ ಮಾನ್ಯ ಸದಸ್ಯರು : ನೀವು ಈಗಷ್ಟೇ ಬಂದಿದ್ದೀರಿ. ಅಯ್ಯೋ, ಪಾಪ! ಎಂದು ತಿಳಿದುಕೊಂಡು ಬಿಟ್ಟಿರಬೇಕಷ್ಟೇ, ಈಗಷ್ಟೇ ಕಾಂಗ್ರೆಸ್ಸಿಗೆ ಹೋಗಿದಾರೆ. ಅಯ್ಯೋ ಪಾಪ ಎಂದು ಬಿಟ್ಟಿರಬೇಕು.

ಶ್ರೀ ಸಿದ್ಧರಾಮಯ್ಯ : ಬಜೆಟ್ ಪುಸ್ತಕದ ಮೇಲೆ ಮಾನ್ಯ ಯಡಿಯೂರಪ್ಪನವರ ಹೆಸರೇ ಇರುವುದು ಅಲ್ಲವೇ ? ಅದ್ದರಿಂದ, ಇದು ಮಾನ್ಯ ಯಡಿಯೂರಪ್ಪನವರು ಮಂಡಿಸಿರುವ ಬಜೆಟ್ ಎಂದು ಅಷ್ಟಾದರೂ ಹೇಳಿದ್ದರೆ, ಸಾಕಾಗಿತ್ತು. ನಮಗೆ ಏನು ನೋವು ಎಂದರೆ, ಅವರು ಅಷ್ಟೊ ಹೇಳಲಿಲ್ಲವಲ್ಲ ಎಂದಷ್ಟೆ. ಅದು ನಮಗೆ ನೋವಾಗುತ್ತಿರುವುದು. ಪಾಪ ! ನೀವು ಇಷ್ಟೊಂದು ಕಷ್ಟಪಟ್ಟು ೧೨೭ ಪುಟಗಳನ್ನು ಎರಡೂವರೆ ಗಂಟೆಗಳ ಕಾಲ ಓದಿದ್ದೀರಿ. ಅದರ ಬಗ್ಗೆ ಅವರು ಅಷ್ಟಾದರೂ 'Thanks' ಹೇಳುವುದಕ್ಕಾಗಲಿಲ್ಲವಲ್ಲ ಎಂಬುದೇ ನೋವಷ್ಟೇ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಯಡಿಯೂರಪ್ಪನವರೇ ಬಹಳ ಜಾಣರಿದ್ದಾರೆ. ಮುಂದೆ ಜೆ.ಡಿ.ಎಸ್ ರವರು ಹೇಳಬಹುದೆಂದು ತಿಳಿದುಕೊಂಡು ಬಜೆಟ್ ನಲ್ಲಿ ಅವರು ಏನು ಹೇಳುತ್ತಾರೆಂಬುದನ್ನು ನೋಡಿ. 'My Government is committed'. ಇದು Chief Minister ಹೇಳುವ ಮಾತು. Finance Minister ರವರು 'My Government' ಎಂಬ ಮಾತನ್ನು ಹೇಳುವುದಿಲ್ಲ. ನಾನು ಎಲ್ಲಿಯೂ ನೋಡಿಲ್ಲ. 'Our Government.. My Government' ಎಂದರೆ, it is only Chief Minister, who says that, Chief Minister ಅವರು it is only Chief Minister, who says that, Chief Ministerಈಟಿಚಿಟಿಛಿಜ ಒಟಿಥಿಣಜಡಿ ಆಗಿದ್ದಾಗ 'My Government' ಎಂದು ಹೇಳುತ್ತಾರೆ. But, a Finance Minsiter is not a Chief Minister. He will not say 'My Government'.

Sri K. Jayaprakash Hegde : ಮಾನ್ಯ ದೇಶಪಾಂಡೆಯವರೆ, it is only the Governor who can say "it is my Government" ಎಂದು ಬೇರೆ ಯಾರೂ ಅಲ್ಲ.

ಶ್ರೀ ಆರ್. ವಿ. ದೇಶಪಾಂಡೆ : ಆದರೆ, ಅವರು ಹೇಳಿದ್ದಾರಲ್ಲ, ಮಾನ್ಯ ಯಡಿಯೂರಪ್ಪನವರು 'My Government' ಎಂದು ಹೇಳಿದ್ದಾರೆ. ಇರಲಿ, ಹೇಳಲಿ. ಅಂದರೆ ಮಾನ್ಯ ಯಡಿಯೂರಪ್ಪನವರು ಅವರಿಗಿಂತಲೂ ಬಹಳ ಜಾಣರು ಎಂದು ಹೇಳಿದೆ. ಅವರು 'My Government' ಎಂದು ಹೇಳಿಬಿಟ್ಟಿದ್ದಾರೆ. ಆರು ತಿಂಗಳ ಮುಂಚೆ he has assumed as a Chief Minister. No. He cannot say that 'My Government' ಎಂದು ಅವರು ಹೇಳುವುದಕ್ಕಾಗುವುದಿಲ್ಲ. ಹಾಗಾಗಿ ಮಾನ್ಯ ಯಡಿಯೂರಪ್ಪನವರೆ, ಲಾಟರಿ ನಿಷೇಧಿಸಿರುವುದು ಒಳ್ಳೆಯದು. ಆದರೆ, ಅದರ reprercussions ಅನ್ನು ಗಮನದಲ್ಲಿಟ್ಟು ಕೊಳ್ಳಿರೆಂದು, ಒಂದು rehabilitation ಈಗ ಹೊಸ ಹೊಸ ತರಹ ಲಾಟರಿಗಳು ಏನು ಬರುತ್ತಿವೆ, ಅವುಗಳನ್ನು ಕಂಟ್ರೋಲ್ ಮಾಡುವುದು ಹೇಗೆ ಎಂದು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ನಿಮ್ಮ ಬಜೆಟ್ ನಲ್ಲಿ ೨೩೮ ಭರವಸೆಗಳಿವೆ. ಅವೆಲ್ಲವನ್ನೂ ಓದಿ ಹೇಳುವುದಕ್ಕೆ time ಇಲ್ಲ. ೨೩೮ ಭರವಸೆಗಳು. ಹೊಸದಾಗಿ ೭ ಪಾಲಿಸಿಗಳನ್ನು ತರುವುದಾಗಿ ಹೇಳಿದ್ದೀರಿ. ಅನ್ನು ಕಡಿಮೆ ಮಾಡುವುದು ಬಿಟ್ಟು ೧೫ ಹೊಸ ಬೋರ್ಡ್‌ಗಳು, ಹೊಸ ಕಮಿಟಿಗಳು, ಹೊಸ ಚೇರ್‌ಗಳನ್ನು ನಿರ್ಮಾಣ ಮಾಡುತ್ತೇವೆಂದು ಹೇಳಿದ್ದೀರಿ. ಮತ್ತು ೭-೮ ಕಡೆ ಕವಿಗಳು, ಸಾಹಿತಿಗಳ ಹೆಸರಿನಲ್ಲಿ ಕೆಲವು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಾಗಿ ಹೇಳಿದ್ದೀರಿ. ಸಂತೋಷ, ಆದರೆ, ಇವೆಲ್ಲಾ ಕಮಿಟಿ ಮೇನ್ಟೇನ್ ಮಾಡಿದ್ದೀರಲ್ಲ, ಅದನ್ನು ಬರುವ ಒಂದು ವರ್ಷದೊಳಗಾಗಿ ತಾವು implement ಮಾಡಬೇಕಾಗುತ್ತದೆ. ಅಷ್ಟನ್ನೇ ನಿಮ್ಮ ಗಮನಕ್ಕೆ ತರುತ್ತಿದ್ದೇನೆ, ಮತ್ತೇನೂ ಹೇಳುತ್ತಿಲ್ಲ. ಇನ್ನು Housing ನಾವು ಇಷ್ಟು ಮಾಡಿದ್ದೇವೆ. ರೈತರಿಗೆ ಹೇಗೆ ಮನೆ ಕೊಟ್ಟೆವು, ಬಡವರಿಗೆ ಹೇಗೆ ಮನೆಗಳನ್ನು ಕೊಟ್ಟೆವು ಎಂದು ಬಹಳ ಜಂಭದಿಂದ ಹೇಳುತ್ತಿದ್ದೀರಲ್ಲ, ನೋಡಿ ಇದು ನಿಮ್ಮ Economic Survey. ೨೦೦೧-೦೨ ನೇ ಇಸವಿಯಲ್ಲಿ ೧,೬೩,೩೭೫ ಮನೆಗಳನ್ನು ಕಟ್ಟಿದರು. ೨೦೦೨-೦೩ ರ್ಲಿ ೧,೩೩,೬೮೨ ಮನೆಗಳನ್ನು ಕಟ್ಟಿದರು. ೨೦೦೪-೦೫ರಲ್ಲಿ ೧,೩೦,೫೪೦ ಮನೆಗಳನ್ನು ಕಟ್ಟಿದರು. ಈಗ ೨೦೦೬-೦೭ರಲ್ಲಿ upto December

೭೩,೦೦೦ ಮನೆಗಳು. ಮತ್ತೆ site distribution ನೋಡಿ. ೨೦೦೧-೦೨ರಲ್ಲಿ ೧೯,೭೮೪. ನಿಮ್ಮ ಕಾಲದಲ್ಲಿ 81 sites. ಇಡೀ ರಾಜ್ಯದಲ್ಲಿ ೨೦೦೬-೦೭ನೇ ಸಾಲಿನಲ್ಲಿ 81 sites ಅನ್ನು ಸರ್ಕಾರ ಕೊಟ್ಟಿದೆ. How can you say that your Government is for the poor ? ಅದರ ನಂತರ, urban Ashraya. ೨೦೦೧-೦೨ ೩೪,೨೭೪, ೨೦೦೬-೦೭ರಲ್ಲಿ ಡಿಸೆಂಬರ್ ತನಕ ೪,೭೬೨. Urban Ambedkar ೨೦೦೧-೦೨ನೇ ಸಾಲಿನಲ್ಲಿ ೩,೦೫೮, ೨೦೦೬-೦೭ರಲ್ಲಿ Zero. House, Sites distributed 2001-02 ರಲ್ಲಿ ೧೮,೧೬೭, ೨೦೦೬-೦೭ರಲ್ಲಿ Zero. This is the progress ಇದು ಬಡವರ ಪರವಾಗಿ ನೀವು ಮಾಡಿರುವ progress. ಮನೆ ಕೊಟ್ಟಿದ್ದು, ಅಂಬೇಡ್ಕರ್ ಮನೆಗಳನ್ನು ಕೊಟ್ಟಿದ್ದು. This is all from your own report.

ಶ್ರೀ ಕ್ಯಾತ್ಸಂದ್ರ ಎನ್. ರಾಜಣ್ಣ : Slow ಅಂದಿರಲ್ಲ, slow ಏಕೆ ಆಗಿದೆ ಎಂಬುದನ್ನು ಹೇಳುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೆ : Rural Ashraya. ೨೦೦೧-೦೨ರಲ್ಲಿ ೧,೩೬,೭೮೬, ೨೦೦೬-೦೭ರಲ್ಲಿ ೬೫,೫೨೨, Urban Ashraya ೨೦೦೧-೦೨ ರಲ್ಲಿ ೩೪,೨೭೪...

ಶ್ರೀ ಕ್ಯಾತ್ಸಂದ್ರ ಎನ್.ರಾಜಣ್ಣ : ಸ್ವಲ್ಪ ಯೀಲ್ಡ್ ಆಗಿ. ಬೇರೆಯವರು ಮಾತನಾಡುವಾಗ ನೂರು ಸಲ interfere ಮಾಡುತ್ತೀರಿ.

ಶ್ರೀ ಆರ್.ವಿ.ದೇಶಪಾಂಡೆ : ಆಯಿತು, ಮಾತನಾಡಿ.

ಶ್ರೀ ಕ್ಯಾತ್ಸಂದ್ರ ಎನ್.ರಾಜಣ್ಣ : ಅಧ್ಯಕ್ಷರೆ, ೨೦೦೧-೦೨, ೨೦೦೨-೦೩, ೨೦೦೩-೦೪ ಆಗೆಲ್ಲಾ ಆಶ್ರಯ ಸಮಿತಿಗಳು ಇರುತ್ತಿದ್ದವು, ಶಾಸಕರುಗಳು ಅಧ್ಯಕ್ಷರಾಗಿರುತ್ತಿದ್ದರು, ಸರಿಯಾಗಿ ಸೈಟುಗಳನ್ನು ಹಂಚಿಕೆ ಮಾಡುತ್ತಿದ್ದರು. ಮನೆಗಳಿಗೆ ಸಂಬಂಧಿಸಿದಂಎ. ಫಲಾನುಭವಿಗಳನ್ನ ಕೂಡ ನಿಗದಿತ ವೇಳೆಯಲ್ಲಿ ಗುರ್ತಿಸುತ್ತಿದ್ದರು. ಇವರು ಮಾಡಿದ ಪುಣ್ಯದ ಫಲವೋ, ಪಾಪದ ಕರ್ಮವೋ, ಯಾವುದೋ 'ಬೇಲೂರು ಘೋಷಣೆ'

ಎಂದು ತಂದು ಪಂಚಾಯಿತಿಗೆ ಕೊಟ್ಟಿದ್ದರಿಂದ ಅವರು ಸರಿಯಾಗಿ ಸೈಟುಗಳನ್ನೂ ಹಂಚುವುದಿಲ್ಲ, ಮತ್ತು ಫಲಾನುಭವಿಗಳನ್ನು ಕೂಡ ಸಮಯಕ್ಕೆ ಸರಿಯಾಗಿ ಗುರ್ತಿಸುವುದಕ್ಕೆ ಆಗದಿರುವುದರಿಂದ ಈ ರೀತಿ ಆಗಿದೆಯೇ ಹೊರತು, ಬೇರಾವುದೇ ಕಾರಣದಿಂದ, ಇದರಿಂದ ನಿಧಾನವಾಗಿರುವುದಿಲ್ಲ.

ಶ್ರೀ ಸಿದ್ಧರಾಮಯ್ಯ : ಇದು ಸರ್ಕಾರದ ಅಭಿಪ್ರಾಯವೋ ಅಥವಾ ನಿಮ್ಮ ಅಭಿಪ್ರಾಯವೋ ?

ಶ್ರೀ. ಕೆ.ಎಸ್.ರಾಜಣ್ಣ : ಅದು ನಮ್ಮೆಲ್ಲರ ಅಭಿಪ್ರಾಯ.

ಶ್ರೀ ಸಿದ್ಧರಾಮಯ್ಯ : ಅದು ನಿಮ್ಮ ಅಭಿಪ್ರಾಯ. ಆದರೆ, ಪದೇ ಪದೇ ಏನು ಹೇಳಿದ್ದಾರೆಂದರೆ.,

ಒಬ್ಬ ಮಾನ್ಯ ಸದಸ್ಯರು : ನಿಮ್ಮ ಎಲ್ಲಾ ಶಾಸಕರೂ ಒಪ್ಪಿಕೊಳ್ಳುತ್ತಾರೆ. ಅವರ ಅಭಿಪ್ರಾಯವೂ ಇದೇ ಆಗಿದೆ. ಅವರ ಅಭಿಪ್ರಾಯವನ್ನೇ ಈ ಕಡೆಯಿಂದ ಹೇಳುತ್ತಿದ್ದಾರೆ.

ಶ್ರೀ ಸಿದ್ದರಾಮಯ್ಯ : ನಿಮ್ಮ ಅಭಿಪ್ರಾಯವೋ ನಮ್ಮ ಅಭಿಪ್ರಾಯವೋ ಎಂಬುದು ನನಗೆ ಗೊತ್ತಾಗುತ್ತದೆ. ಆಶ್ರಯ ಕಮಿಟಿ ಮಾಡಲಿಲ್ಲ, ಎಂ.ಎಲ್.ಎ ತೆಗೆದುಹಾಕಿ ಬಿಟ್ಟರು ಪಂಚಾಯಿತಿಗಳಿಗೆ ಅಧಿಕಾರವನ್ನು ಕೊಟ್ಟು ಬಿಟ್ಟರು ಎಂದು ಸರ್ಕಾರ ಹೇಳಿ ಬಿಟ್ಟಿದ್ದರೆ ಪರವಾಗಿರಲಿಲ್ಲ. ವಸತಿ ಸಚಿವರು ಡಿಸೆಂಬರ್ ಒಳಗೆ ೩ ಲಕ್ಷ ಮನೆಗಳನ್ನು ಕಟ್ಟಿ ಮುಗಿಸುತ್ತೇವೆಂದು ಹೇಳುತ್ತಾರೆ. ಮುಖ್ಯ ಮಂತ್ರಿಯವರು ಮಾರ್ಚ್ ಒಳಗೆ ಆರೂವರೆ ಲಕ್ಷ ಮನೆಗಳನ್ನು ಕಟ್ಟಿಸುತ್ತೇವೆಂದು ಹೇಳುತ್ತಾರೆ. ಹಾಗಾದರೆ ಜನರು ಏನೆಂದು ತಿಳಿದುಕೊಳ್ಳಬೇಕು ? ನೀವು ಹೇಳಿದ ಅಭಿಪ್ರಾಯ ತಿಳಿದುಕೊಳ್ಳಬೇಕೋ ಅಥವಾ ಇವರು ಹೇಳಿದ ಅಭಿಪ್ರಾಯ ವನ್ನು ತಿಳಿದುಕೊಳ್ಳಬೇಕೋ ? ಮಾರ್ಚ್‌ನ ಒಳಗಡೆ ಆರೂವರೆ ಲಕ್ಷ ಮನೆಗಳನ್ನು ಬಡವರಿಗೆ ಕಟ್ಟಿ ಕೊಡುತ್ತೇವೆಂದು ಮುಖ್ಯಮಂತ್ರಿಯವರು ಪದೇ ಪದೇ ಹೇಳಿದ್ದಾರೆ. ವಸತಿ ಸಚಿವರು ೩ ಲಕ್ಷ ಮನೆಗಳೆಂದು

ಹೇಳಿದ್ದಾರೆ. ಆದರೆ ಇಲ್ಲಿ ನೋಡಿದರೆ ೭೩ ಸಾವಿರ ಮನೆಗಳು, ಅದೂ ಹಿಂದೆ ಮಂದಜೂರಾಗಿರುವಂಥ ಮನೆಗಳು ; on going works ಅದು ಮಾಡುತ್ತಿದ್ದಾರೆ. ಅದು ಹಿಂದೆ ಮಂಜೂರಾಗಿರುವುದು. ಹೊಸದಾಗಿ ಮಂಜೂರಾಗಿರುವುದನ್ನೇನೂ ಮಾಡಿಲ್ಲ. ಹಿಂದೆ ಮಂಜೂರಾಗಿರುವುದನ್ನು ಕಟ್ಟುತ್ತಿರುವುದು. ಆದ್ದರಿಂದ ಯಾವುದು ಸರಿ? ಹೇಳಬೇಕಾದರೆ ಜವಾಬ್ದಾರಿ ಯಿಂದ ಮಾನ್ಯ ಮಂತ್ರಿಗಳು ಹೇಳಬೇಕಲ್ಲ ?

ಶ್ರೀ ಎಸ್. ರಾಜೆಂದರನ್ : ಇವರು ಹೇಳುವ ರೀತಿ ಹೇಗಿದೆಯೆಂದರೆ, ಮಗನಿಗೆ ತಾಯಿ ಇಂಜಿನಿಯರಿಂಗ್ ಮಾಡಬೇಕೆಂದು ಹೇಳುವುದು, ತಂದೆ ಡಾಕ್ಟರ್ ಮಾಡು ಎಂದು ಹೇಳಿ ಆ ವಿದ್ಯಾರ್ಥಿ ಓದುವುದನ್ನೆಲ್ಲಾ decide ಮಾಡುವುದೆ? ಒಳ್ಳೆ ಕತೆಯಾಯಿತಲ್ಲಾ ? ಯಾವುದೋ ಒಂದು ಆಗೇ ಆಗುತ್ತದೆ.

ಶ್ರೀ ಆರ್.ವಿ.ದೇಶಪಾಡೆ : ೨೦೦೧–೦೨ನೇ ಇಸವಿಯಲ್ಲಿ ಆಶ್ರಯ ಮನೆಗಳಲ್ಲಿ ೧ ಲಕ್ಷ ೩೬ ಸಾವಿರದ ೮೮೬ ಮನೆ ಕಟ್ಟಿದ್ದಾರೆ. ೨೦೦೬–೦೭ ರಲ್ಲಿ ಡಿಸೆಂಬರ್ ವರೆಗೆ ೬೫,೫೨೨ ಮನೆಗಳನ್ನು ಕಟ್ಟಿದ್ದಾರೆ. ಅಂದರೆ just 33% of 2001-02. Urban Ashraya 2001-02 ರಲ್ಲಿ ೩೪,೨೨೪ ೨೦೦೬–೦೭ ರಲ್ಲಿ ಕೇವಲ ೪,೮೬೨. ಅಂಬೇಡ್ಕರ್ ೨೦೦೧–೦೨ರಲ್ಲಿ ೨೯,೫೪೭, ೨೦೦೬–೦೭ ರಲ್ಲಿ ೩,೫೧೪. PMRGY ನಲ್ಲಿ ಕೇವಲ ೫೩೩. ಸರ್ಕಾರ ೬ ಲಕ್ಷ ೩ ಲಕ್ಷ ಮನೆಗಳನ್ನು ಕೊಡುತ್ತೇವೆಂದು ಹೇಳಿದೆ. ಆದರೆ, ಈ Progress ನೋಡಿದರೆ ಯಾವ ಪ್ರಕಾರವಾಗಿ ಈ ರಾಜ್ಯದಲ್ಲಿ ಬಡವರಿಗೆ ದ್ರೋಹವಾಗುತ್ತಿದೆ ಎಂಬುದನ್ನು ತಮ್ಮ ಮೂಲಕ ರಾಜ್ಯದ ಜನತೆಯ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಮೂಲಭೂತ ಸೌಖರ್ಯಗಳು, ಮಾನವ ಸಂಪನ್ಮೂಲಗಳು ಯಾವ ದೇಶದಲ್ಲಿ ಚೆನ್ನಾಗಿ ಬೆಳೆಯುತ್ತದೆಯೋ, ಆ ದೇಶ ಪ್ರಗತಿಯಾಗಲು ಸಾಧ್ಯವಾಗುತ್ತದೆ. ಆ ದೃಷ್ಟಿಯಲ್ಲಿ ನಮ್ಮ ಸ್ನೇಹಿತರು ಪ್ರಯತ್ನವನ್ನು ಮಾಡಬೇಕಾಗಿತ್ತು. ಇವತ್ತು ಈ ದೇಶದಲ್ಲಿ ಸರಿಯಾದ ಮೂಲಭೂತ ಸೌಖರ್ಯಗಳು ನಿರ್ಮಾಣವಾಗಬೇಕಾದರೆ ೧೪ ಲಕ್ಷ ಕೋಟಿಗಳ ಅವಶ್ಯಕತೆ ಇದೆ. Rs.

14 lakhs crores are reqired to develop infrastructure in this country. ಅದೇ ಪ್ರಕಾರ ಕರ್ನಾಟಕದಲ್ಲೂ ಒಳ್ಳೆಯ infrastructure develop ಮಾಡಬೇಕಾದರೆ, ೬೦-೭೦ ಸಾವಿರ ಕೋಟಿಯ ಅವಶ್ಯಕತೆ ಇದೆ. ಈ ವಿಚಾರವನ್ನು ಗಮನದಲ್ಲಿಟ್ಟುಕೊಂಡು adequate provisions ತಮ್ಮ ಮುಂಗಡ ಪತ್ರದಲ್ಲಿ ಮಾಡಬೆಕಾಗಿತ್ತು. International Airport ಕೆಲಸ ನಡೆಯುತ್ತಿದೆ. Out going work ಗೆ ನೀವು ಹಣವನ್ನು ಕೊಟ್ಟಿರಿ. ಕೆಲವು ಹೆಲಿಪ್ಯಾಡ್ ಗೆ ಹಣವನ್ನು ಕೊಟ್ಟಿರಿ. ಇದು ಬಿಟ್ಟರೆ where is the money ? Power sector ನಲ್ಲಿ ಕಡಿಮೆ. Irrigation sector ನಲ್ಲಿ ಕಡಿಮೆ, Hosing sector, where is the money ? P.W.D ಗೂ ಕಡಿಮೆಯೆಂದು ಮಾನ್ಯ ರೇವಣ್ಣನವರು ಹೇಳುತ್ತಾರೆ. ರಾಜ್ಯದ ಮೂಲಭೂತ ಸೌಖರ್ಯಗಳು ಮತ್ತು ಮಾನವ ಸಂಪನ್ಮೂಲಗಳನ್ನು ಬೆಳೆಸುವುದಕ್ಕೆ ನೀವು ಯಾವ ರೀತಿಯ ಪ್ರಯತ್ನ ಮಾಡಿದ್ದೀರಿ? ಆ ಗ್ರೋಥ್ ನಿಮ್ಮ ಮುಂಗಡ ಪತ್ರದಲ್ಲಿ ಕಾಣಿಸುತ್ತಿಲ್ಲ. ನಾವು airportಗೆ ಲ್ಯಾಂಡ್ acquire ಮಾಡುವಾಗ ಕೆಲವು excess land ಇತ್ತು. KSIIDCಗೆ ಲಾಭವಾಗಿದೆ. ಅದನ್ನು ಮಾರಾಟ ಆಡಿ ೭೦೦ ಕೋಟಿ ರೂಪಾಯಿಗಳನ್ನು ತರುತ್ತೇವೆಂದು ತಾವು ಹೇಳೀದ್ದಿರಿ. I don't think you have the right to sell that land and take money. That money is for KSIIDC. You have to utilize it for infrastructure. You can't just squander that money. ಆ ಹಣವನ್ನು ನಿಮ್ಮ ಮನಸ್ಸಿಗೆ ಉಪಯೋಗ ಮಾಡುವುದಕ್ಕೆ ನಿಮಗೆ ಅಧಿಕಾರ ವಿಲ್ಲ. ಇವತ್ತು ಮಾನ್ಯ ಯಡಿಯೂರಪ್ಪನವರು ಹಲವಾರು announcements ನ್ನು ಮಾಡಿದ್ದಾರೆ. ಗುಡಿಗಳಿಗೆ, ಮಠಗಳಿಗೆ ಹಣ ಕೊಡುವ ಬಗ್ಗೆ ಹೇಳಿದ್ದೀರಿ. ಕೋಡಿ, ಆದರೆ, you could have done one work. Endowment ನಿಂದ ಕೊಡಬೇಕಾಗಿತ್ತು. ಏಕೆ ಹೆಚ್ಚಿನ publicity ? 232 announcements ನ್ನು ಮಾಡಿ ಹತ್ತು ಲಕ್ಷ, ಎರಡು ಲಕ್ಷ, ಐದು ಲಕ್ಷ ಕೊಡುತ್ತೇನೆಂದು ಯಾವ Finance Minister ಕೂಡ announcements ಮಾಡಿದ್ದನ್ನು ನಾವು ನೋಡಿಲ್ಲ. This is just a

stunt, cheap popularity. ಇವತ್ತು ಸಮ್ಮಿಶ್ರ ಸರ್ಕಾರದ ಹಣಕಾಸು ಸಚಿವರು ಸಂಪೂರ್ಣವಾಗಿ ವಿಫಲರಾಗಿದ್ದಾರೆ. Budget, short-sighted ಆಗಿದೆ, vision ಇಲ್ಲ. ಕೇವಲ short measures ತೆಗೆದುಕೊಂಡು popularity gain ಮಾಡಲು ಏನು ಪ್ರಯತ್ನ ಮಾಡುತ್ತಿದ್ದೀರಿ, ಇದರಿಂದ ಹಣಕಾಸಿನ ವ್ಯವಸ್ಥೆ ಬಹಳ ಕಷ್ಟಕ್ಕೆ ಬರುತ್ತದೆ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ನಮ್ಮ ಜಿಲ್ಲೆಯ ಬಗ್ಗೆ ಕೊನೆಯದಾಗಿ ಒಂದೆರಡು ವಿಚಾರಗಳನ್ನು ಹೇಳಬೇಕಾಗುತ್ತದೆ. ಕರಾವಳಿ ಯಲ್ಲಿ ಸಮುದ್ರ ಕೊರೆತ ಬಹಳವಾಗುತ್ತಿದೆ. ಅದಕ್ಕೆ ತಾವು ಸರಿಯಾದ funds ಇಟ್ಟಿಲ್ಲ. ಕರಾವಳಿಯ ಭಾಗದ ರೈತರು, ಮೀನುಗಾರರಿಗೆ ಸಹಾಯ ಮಾಡಬೇಕೆಂದು ನಾನು ಕೇಳುತ್ತಿದ್ದೇನೆ. ಬಂದರು ಅಭಿವೃದ್ಧಿಯ ಬಗ್ಗೆ ಯಾವುದೇ ಚಿಂತರೆ ಇಲ್ಲ. Fisheries ಬಗ್ಗೆ ಚಿಂತನೆ ಇಲ್ಲ. Tadari port could have been taken up for development; Biligiri port could .have been taken. up for developemnt with private sector. ಅದರ ಗ್ಗೆ ಯಾವುದೇ ಚಿಂತನೆ ಇಲ್ಲ. ಗುಜರಾತ್, ಒರಿಸ್ಸಾ, ಆಂಧ್ರ ನೋಡಿ. Every State is trying to have its ports. ಅದರ ಬಗ್ಗೆ ಯಾವುದೇ mention ಇಲ್ಲ. ಒಂದು ದೃಷ್ಟಿಯಿಂದ ಹಣಕಾಸು ಸಚಿವರು ಕೆಲವು ವಿಚಾರಗಳಲ್ಲಿ ಕೊಟ್ಟಿದ್ದೀರಿ. ಅದನ್ನು ಸ್ವಾಗತಿಸುತ್ತೇನೆ. Senior citizens ೪೦೦ ರೂಪಾಯಿ ಮಾಡಿದ್ದೀರಿ ; ಅದನ್ನು ಸ್ವಾಗತಿಸುತ್ತೇನೆ. ಕೆಲವು ಒಳ್ಳೆಯ ವಿಚಾರಗಳು ಇದೆ. ಆದರೆ, overall ಬಜೆಟ್ ನೋಡಿದಾಗ it is not a healty budget ; it is not in the interest of the State. ರಾಜ್ಯದ ಹಿತದಲ್ಲಿ ಈ ಮುಂಗಡ ಪತ್ರ ಇಲ್ಲ. ಒಂದು ದೃಷ್ಟಿಯಿಂದ ಇದು ಬಿ.ಜೆ.ಪಿ. ಬಜೆಟ್ ಆಗಿದೆ ಯೆಂದರೂ ತಪ್ಪಾಗುವುದಿಲ್ಲ. ಇದು ಒಂದು ರೀತಿಯಲ್ಲಿ ಕೇಸರಿ ಬಜೆಟ್ ಆಗಿದೆಯೆಂದು ನಾನು ಭಾವಿಸುತ್ತೇನೆ. ದಳಪತಿಗಳು ಎಂದು ಮೊದಲು ಹಳ್ಳಿಗಳಲ್ಲಿದ್ದರು. ಅವರ proposal pending ಇದೆ. ಈಗ High Courtನಲ್ಲು ದಳಪತಿಗಳಿಗೆ pension ಕೊಡಬೇಕೆಂದು ಆದೇಶವಾಗಿದೆ. ಅದರ ಬಗ್ಗೆ ಸರ್ಕಾರದಿಂದ ಇನ್ನೂ ನಿರ್ಣಯವಾಗಿಲ್ಲ. ಅದರ ಬಗ್ಗೆ

ನಿರ್ಣಯವನ್ನು ಮಾಡಬೇಕೆಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್.

ಶ್ರಿ ಹೆಚ್. ಆಂಜನೇಯ : ಮಾನ್ಯ ಅಧ್ಯಕ್ಷರೆ, ನಮಗೂ ಸ್ವಲ್ಪ ಮಾತನಾಡಲು ಅವಕಾಶ ಕೊಡಿ. ಅವರುಗಳು ಎರಡು ಮೂರು ಗಂಟೆ ಮಾತನಾಡುತ್ತಾರೆ. ನಮಗೆ ಯತ್ತತ್ತು ನಿಮಿಷ ಕೊಟ್ಟರೆ ಮಾತನಾಡಿ ಮುಗಿಸುತ್ತೇವೆ. ದಯಮಾಡಿ ನಮಗೂ ಸ್ವಲ್ಪ ಅವಕಾಶ ಕೊಡಬೇಕು.

ಅಧ್ಯಕ್ಷರು : ನಿಜ, ತಮಗೂ ಅವಕಾಶ ಕೊಡಬೇಕು.

ಶ್ರೀ ಹೆಚ್. ಆಂಜನೇಯ : ಒಂದು ಹತ್ತು ಜನರಿರಬಹುದು. ನಮಗೆ ಹತ್ತತ್ತು ನಿಮಿಚಸ ಮಾತನಾಡಲು ಅವಕಾಶ ಕೊಡಿ. ಪ್ರಶ್ನೋತ್ತರ ವೇಳೆಯನ್ನು ಎಲ್ಲಾ ಮುಗಿದಮೇಲೆ ಸಂಜೆ ಹಾಕಿದ್ದಾರೆ. ಅಲ್ಲೂ ಬಾಗವಹಿಸಲು ನಮಗೆ ಹಕ್ಕಿಲ್ಲ. ಇಲ್ಲಿ ಬಜೆಟ್ ಮೇಲೂ ಮಾತನಾಡಲು ಹಕ್ಕಿಲ್ಲವೆಂದರೆ ಹೇಗೆ ?

ಶ್ರಿ ಧರ್ಮ್‌ಸಿಂಗ್ : ಮಾನ್ಯ ಸಿದ್ದರಾಮಯ್ಯನವರು ೭ ಬಜೆಟ್‌ನ್ನು ಮಂಡಿಸಿದ್ದಾರೆ. ಇವತ್ತು ಅವರಿಗೆ ಏನೋ ಕೆಸಲವಿದ್ದ ಕಾರಣ ಮುಂಜಾನೆ ಬರಲು ಆಗಲಿಲ್ಲ. ಅವರಿಗೆ ೩ ಗಂಟೆಗೆಂದು ನಿಗದಿ ಮಾಡಿದ್ದೀರಿ. ಮಾನ್ಯ ಸಿದ್ದರಾಮಯ್ಯವನರು, ಮಾನ್ಯ ವಾಟಾಳ್ ನಾಗರಾಜ್ ರವರು ಮಾತನಾಡಲಿ. ಬಜೆಟ್ ಮೇಲೆ ಅವರು ಸ್ವಲ್ಪ ಬೆಳಕು ಚೆಲ್ಲಿದರೆ ಸರಿಯಾಗುತ್ತದೆ. ಜೊತೆಗೆ ಇದನ್ನೇ ನಾಳೆಗೆ ಮುಂದುವರೆಸಿ. ಉತ್ತರವನ್ನು ನಾಳೆ ಮಧ್ಯಾಹ್ನಕ್ಕೆ ಕೊಡಲಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದು ಹೇಗೆ ಸಾಧ್ಯ ? ಮೇಲ್ಮನೆಗೆ ಹೋಗಿಬರಬೇಕು. ನಾನು ಇಂದು ಸಂಜೆ ೫ ಗಂಟೆಗೆ ಉತ್ತರವನ್ನು ಕೊಡುತ್ತೇನೆಂದು ಹೇಳಿದ್ದೇನೆ. ಆದ್ಯಕ್ಷರೂ ಒಪ್ಪಿಕೊಂಡಿದ್ದಾರೆ. ಸಂಜೆ ೫ ಗಂಟೆಯೊಳಗೆ ಚರ್ಚೆಯನ್ನು ಮುಗಿಸಬೇಕು. ನಾನು ಉತ್ತರ ಕೊಡುತ್ತೆನೆ. ನಾಳೆ ಅಲ್ಲಿಗೆ ಹೋಗಿ ಬರಬೇಕು.

ಶ್ರೀ ಸಿದ್ದರಾಮಯ್ಯ : ಅದೇಗೆ ಆಗುತ್ತದೆ ?

ಶ್ರೀ ಬಿ.ಎಸ್. ಯಡಿಯೂರಪ್ಪ : ಇನ್ನೂ ರಾಜ್ಯಪಾಲರಿಗೆ ಹೋಗಿ ಬರಬೇಕು. ನಾಡಿದ್ದು ರಜೆ ಇದೆ.

ಅಧ್ಯಕ್ಷರು : ಒಪ್ಪಿಕೊಳ್ಳುತ್ತೇನೆ. ೬ ಗಂಟೆಯವರೆಗೆ ಮುಂದುವರೆಸೋಣ.

ಶ್ರೀ ಸಿದ್ದರಾಮಯ್ಯ : ೩ ಗಂಟೆಯವರೆಗೆ ಇವರದ್ದೇ ಮುಂದುವರೆದುಬಿಟ್ಟಿತು.

ಅಧ್ಯಕ್ಷರು : ತಾವು ಬರಲಿಲ್ಲ.

ಶ್ರೀ ಸಿದ್ದರಾಮಯ್ಯ : ಬಂದಿದ್ದೆ, ಆದರೆ, ಅವರು ಮುಂದುವರೆಸಿದರು.

ಅಧ್ಯಕ್ಷರು ತಾವೇ ಲಕ್ಷ್ಮಣ ರೇಖೆಯನ್ನು ಹಾಕಿಕೊಂಡು ಎಲ್ಲರೂ ಕಡಿಮೆ ಮಾತನಾಡಿಯೆಂದು ವಿನಂತಿ ಮಾಡಿಕೊಮಡೆ,. ಆದರೆ ಯಾರೂ ಕೇಳದಿದ್ದರೆ ಏನ ಮಾಡುವುದು ? ಈಗ ಸಂಜೆಯೊಳಗೆ ಮುಗಿಯಬೇಕು. ಏನು ಮಾಡಲು ಆಗುತ್ತದೆ ?

ಶ್ರೀ ಸಿದ್ದರಾಮಯ್ಯ : ನಬಮೆ ಅವಕಾಶವನ್ನು ತಪ್ಪಿಸಿಬಿಡುತ್ತೀರ ? ನೀವು ಹಣಕಾಸು ಸಚಿವರಿಗೆ ಸ್ವಲ್ಪ ಹೇಳಬೇಕು. ನಾನ ೨೦೦೪-೦೫, ೨೦೦೫-೦೬ ರಲ್ಲಿ ಬಜೆಟ್ ಮೇಲೆ ಉತ್ತರ ಕೊಟ್ಟಿದ್ದು ಎರಡೂ ಸದನಗಳಲ್ಲಿ ಒಂದೇ ದಿವಸ. ಬೇಕಾದರೆ ರೆಕಾರ್ಡ್ಸ್‌ನ್ನು ತೆಗೆಸಿನೋಡಿ. ಸಂಜೆನೇ ಎಲ್ಲಾ ಮಾಡಿ ೫ ಗಂಟೆಯೊಳಗೆ ಎಲ್ಲವನ್ನು ಮುಗಿಸಿದ್ದೆವೆ. ಇನ್ನೂ ಮಾನ್ಯ ವಾಟಾಳ್‌ನಾಗರಾಜ್ ರವರು. ಮಾನ್ಯ ರಾಜೇಂದ್ರನ್ ರವರು ಮಾತನಾಡಬೇಕು, ಇನ್ನೂ ಕೆಲವರೆಲ್ಲ ಮಾತನಾಡಬೇಕೆಂದು ಇದದಾರೆ. ಆದ್ದರಿಂದ ನಾಳೆ ಸ್ವಲ್ಪ early ತೆಗೆದುಕೊಂಡು ಇನ್ನೊಂದೆರಡು ಗಂಟೆ ಮಾತನಾಡಲು ಅವಕಾಶ ಕೊಟ್ಟರೆ ಅವರು ೧೧ ಗಂಟೆಗೆ ಉತ್ತರ ಕೊಡಲಿ ಏನೂ ಆಗುವುದಿಲ್ಲ. ಸಂಜೆಯೊಳಗೆ ಹೋಗಿ ಬರುತ್ತದೆ, ಏನೂ ಆಗುವುದಿಲ್ಲ.

ಅಧ್ಯಕ್ಷರು : ಮೇಲ್ಮನೆಯೊಂದು ಇದೆ. ಅಲ್ಲಿಗೆ ಹೋಗಬೇಕು.

(ಗೊಂದಲ)

ಶ್ರೀ ಸಿದ್ಧರಾಮಯ್ಯ : ೨೦೦೪-೦೫ರ ಬಜೆಟ್ ಪಾಸಾಗಿರುವ ರೆಕಾರ್ಡ್ಸ್ ತೆಗೆಸಿ ನೋಡಿ. ನಾನು ಒಂದೇ ದಿನದಲ್ಲಿ ಎರಡೂ ಸದನಗಳಲ್ಲಿ ಉತ್ತರ ಕೊಟ್ಟಿದ್ದೆ. Finance bills ಕೂಡ ಅವತ್ತೇ ಪಾಸ್ ಆಗಿದ್ದವು.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ : ಒಂದನೇ ತಾರೀಖಿನಿಂದಲೇ ನಾವು ಕಾರ್ಯಕ್ರಮಗಳನ್ನು ಜಾರಿಗೊಳಿಸಬೇಕಾಗುತ್ತದೆ. Taxation bills ಅನ್ನು ಪಾಸ್ ಮಾಡಬೇಕಾಗುತ್ತದೆ...

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಅದೆಲ್ಲವನ್ನೂ ಒಂದೇ ದಿವಸದಲ್ಲಿ ಮುಗಿಸಬಹುದು.

(ಗೊಂದಲ)

ಶ್ರೀ. ಎಂ.ಪಿ. ಪ್ರಕಾಶ್ : ಮೇಲ್ಮನೆಗೆ ಕಳುಹಿಸಿಕೊಟ್ಟಿರತಕ್ಕಂಥ Financial Bill ಅನ್ನು vote out ಮಾಡಿರತಕ್ಕಂಥ ಪ್ರಸಂಗಗಳಿವೆ..

(ಗೊಂದಲ)

ಶ್ರೀ ಸಿದ್ಧರಾಮಯ್ಯ : ನಾನು ಸಹ ಏಳು ಬಜೆಟ್ ಗಳನ್ನು ಮಂಡಿಸಿದ್ದೇನೆ. ಯಾವಾಗಲೂ ಕೂಡ vote out or rejection ಆಗಿರತಕ್ಕಂಥ ಪ್ರಸಂಗವೇ ಇಲ್ಲ. ಯಾವಾಗಲೂ ಆಗಿಲ್ಲ.

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್ : ತಾವಿದ್ದಾಗಲೇ ಒಮ್ಮೆ ಆ ರೀತಿಯಾಗಿದೆ. ಆದ್ದರಿಂದ ತಡವಾದರೂ ಚಿಂತೆಯಿಲ್ಲ. ಇವತ್ತು ಎಷ್ಟು ಹೊತ್ತಾದರೂ

ಬಜೆಟ್ ಇಲ್ಲಿ ಅಪ್ರೂವ್ ಆಗಲೇ ಬೇಕು. ನಾಳೆ ನವು ಇದನ್ನು ಮೇಲ್ಮನೆಗೆ ಕಳುಹಿಸಬೇಕಾಗುತ್ತದೆ...

(ಗೊಂದಲ)

ಶ್ರೀ ಸಿದ್ಧರಾಮಯ್ಯ : ನಾವು ಇಲ್ಲಿ ಇಡೀ ರಾತ್ರಿ ಕುಳಿತುಕೊಳ್ಳುವುದಕ್ಕಾಗುತ್ತದೆಯೇ ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನಮಗೆ ಯಾವುದೇ ತರಹದ ಪ್ರಚಾರ ಬೇಡ. ರಾತ್ರಿ ೯ ಗಂಟೆಯಾದರೂ ಸರಿ, ನಾನು ಇವತ್ತು reply ಮಾಡಲೇಬೇಕು..

(ಗೊಂದಲ)

ಶ್ರೀ ಎಂ.ಪಿ.ಪ್ರಕಾಶ್ : ನಾವ್ಯಾರೂ ಕೆಲಸ ಮಾಡಲಿಕ್ಕೆ ಕೂಡ ತಯಾರಿಲ್ಲ. ಬೇಗ ಮುಗಿಯಬೇಕೆಂದರೆ ಹೇಗೆ ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ನಮಗೂ ಪ್ರಚಾರ ಬೇಡ. ಆದರೆ ಹೇಳುವುದನ್ನಾದರೂ ನಾವು ಹೇಳಬೇಕಲ್ಲವೇ ?

ಶ್ರೀ ಎಂ.ಪಿ.ಪ್ರಕಾಶ್ : ಹೇಳಿ ಸಾರ್, ಅದಕ್ಕಾಗಿ ನಾವು ಇವತ್ತು ರಾತ್ರಿ ೧೦ ಗಂಟೆಯಾದರೂ ಸರಿ, ಕುಳಿತುಕೊಳ್ಳೋಣ. ಪತ್ರಿಕೆಯವರೆಲ್ಲರೂ ಕೂಡ ಎದುರಿಗೇ ಇರಬೇಕು. ಅವರು ಇದ್ದಾಗ ಮಾತ್ರ ನಾವು ಭಾಷಣ ಮಾಡುತ್ತೇವೆ ಎಂಬ ಪ್ರವೃತ್ತಿ ಹೋಗಬೇಕಾಗುತ್ತದೆ...

(ಗೊಂದಲ)

ಅಧ್ಯಕ್ಷರು : ಹೌದು ಸ್ವಾಮಿ . ಇಂದು ಈ ತರಹ ಆಗುತ್ತದೆಂದು ನಗೆ ಗೊತ್ತಿತ್ತು. ಹಿಂದೆಲ್ಲಾ ಇದೇ ತರಹ ಆಗಿದೆ. ಕೊನೆ ಗಳಿಗೆಯಲ್ಲಿ ಎಲ್ಲರೂ ಎದ್ದು ನಿಂತುಕೊಂಡು, ಯಾವುದನ್ನೂ ಸರಿಯಾದ ರೀತಿಯಲ್ಲಿ ಮಾಡಲಿಕ್ಕಾಗದೆ, ಎಲ್ಲರಿಗೂ ಅವಕಾಶ ಕೊಡಲಿಕ್ಕೆ ಆಗದೇ ಇರುವುದು ಹಿಂದೆಯೂ ನಡೆದಿದೆ. ಅದಕ್ಕಾಗಿಯೇ ನಾನು ಮೊದಲೇ ಎಲ್ಲರಲ್ಲೂ

ವಿನಂತಿ ಮಾಡಿಕೊಂಡೆ, ಆದರೆ ಅದನ್ನು ಯಾರೂ ಕೇಳುವುದಿಲ್ಲ. ಒಮ್ಮೆ ಎದ್ದು ನಿಂತರೆ ಅವರನ್ನು ಕೂರಿಸುವುದಕ್ಕೆ ಸಾಧ್ಯವೇ ಆಗುವುದಿಲ್ಲ. ಈ ತರಹದ ಸ್ಥಿತಿ ಇರುವಾಗ ಏನೂ ಮಾಡಲಿಕ್ಕಾಗುವುದಿಲ್ಲ.

(ಗೊಂದಲ)

ಶ್ರೀ. ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಒಂದು ಪಕ್ಷದವರಿಗೆ ಇಂತಿಷ್ಟು ಸಮಯವೆಂದು ಪಕ್ಷವಾರು ನಿಗದಿ ಮಾಡಿದಾಗ ತಾವು ಸಹಾಯ ಮಾಡಲಿಕ್ಕೆ ಸಾಧ್ಯತೆ ಆಗುತ್ತದೆ..

ಅಧ್ಯಕ್ಷರು : ನನ್ನ ಮಾತನ್ನು ಯಾರೂ ಕೇಳುವುದೇ ಇಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಎಲ್ಲರೂ ಆ ಸಮಯವನ್ನು ಮೀರಿ ನಾವು ಮಾತನಾಡುತ್ತೇವೆ ಎನ್ನುವುದಾದರೆ ಬಹಳ ಕಷ್ಟವಾಗುತ್ತದೆ. ಪಕ್ಷದ ಸಚೇತಕರು ಆಯಾ ಪಕ್ಷಗಳಿಂದ ಯಾರು ಮಾತನಾಡುತ್ತಾರೆಂದು ಪಟಟಿಯನ್ನು ಮಾನ್ಯ ಅಧ್ಯಕ್ಷರಿಗೆ ಕೊಡುವುದಿಲ್ಲ. ಇದರಿಂದಲೇ ತೊಂದರೆಯಾಗಿದೆ. ಒಂದು ಪಕ್ಷಕ್ಕೆ ಇಂತಿಷ್ಟು ಸಮಯವೆಂದು ನಿಗದಿ ಮಾಡಿದಾಗ, ಆ ಪಕ್ಷದವರು ಎಷ್ಟು ಜನ ಬೇಕಾದರೂ ಆ ಸಮಯದ ಮಿತಿಯಲ್ಲಿ ಮಾಡನಾಡಿದರೆ ಅನುಕೂಲವಾಗುತ್ತದೆ.

ಅಧ್ಯಕ್ಷರು : ಮಾನ್ಯ ಸಿದ್ದರಾಮಯ್ಯನವರೆ, ಮಾನ್ಯ ವಾಟಾಳ್ ನಾಗರಾಜ್ ರವರು ಈಗ ಸ್ವಲ್ಪ ಮಾತನಾಡಿ ಬಿಡಲಿ.

ಶ್ರೀ ಸಿದ್ದರಾಮ್ಯಯ : ಬಜೆಟ್ ಮೇಲೆ ನೀವು ಚರ್ಚೆ ಮಾಡುವುದಿಲ್ಲ ಎನ್ನುತ್ತೀರಿ. ಈಗ ಚರ್ಚೆ ಮಾಡಬೇಕೆಂದು ತಯಾರಾದಾಗ ಟೈಮ್ ಕೊಡುವುದಿಲ್ಲ ಎನ್ನುತ್ತೀರಿ. ಇದ್ಯಾವ ನ್ಯಾಯ ?..

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಯಡಿಯೂರಪ್ಪನವರು ಉತ್ತರ ಕೊಡತಕ್ಕಂಥ ಕಾಲದಲ್ಲಿ ತಾವು ಅಡ್ಡಿ ಆತಂಕಗಳನ್ನು ಮಾಡಿ ಅವರ ಉತ್ತರ ನಾಳೆ ಪ್ರಚಾರಕ್ಕೆ ಬರಬಾರದು ಎನ್ನುವಂತಹ ರೀತಿಯಲ್ಲಿ ಮಾಡುತ್ತಿದ್ದೀರಿ.

ಶ್ರೀ ಸಿದ್ದರಾಮಯ್ಯ : ನಾಳೆ ೧೨ ಗಂಟೆಗೆ ಅವರು ಉತ್ತರ ಕೊಡಲಿ.

ಶ್ರೀ ಎಂ.ಪಿ. ಪ್ರಕಾಶ್ : ಇವತ್ತು ಎಷ್ಟು ಹೊತ್ತಾದರೂ ಸರಿ, ನಾವು ಉತ್ತರ ಕೊಡಲು ತಯಾರಾಗಿದ್ದೇವೆ. ಆದರೆ ನಾಳೆ ಬೇಡ. ಮಾನ್ಯ ಅಧ್ಯಕ್ಷರು, ದಯಮಾಡಿ ಹಾಗೆ ಮಾಡಬೇಡಿ.

ಅಧ್ಯಕ್ಷರು : ಇವತ್ತು ಎಷ್ಟು ಗಂಟೆಯಾದರೂ ಸರಿ, ನಾನು ಉತ್ತರ ಕೊಡತುತ್ತೇನೆ ಎನ್ನುತ್ತಿದ್ದಾರೆ. ಅವು ಇವತ್ತು ರಾತ್ರಿ ೧೨ ಗಂಟೆಯಾದರೂ ಸರಿ ಉತ್ತರ ಕೊಡಲಿ. Even BAC ನಲ್ಲೂ ಅದೇ ರೀತಿಯಾಗಿ ತೀರ್ಮಾನವಾಗಿದೆ.

ಶ್ರೀ ಹೆಚ್. ಆಂಜನೇಯ : ಮಾನ್ಯ ಅಧ್ಯಕ್ಷರೆ, ತಾವು ದಯವಿಟ್ಟು ನಮ್ಮ ಕಡೆಯೂ ಸ್ವಲ್ಪ ನೋಡಬೇಕು. First time elect ಆಗಿರುವವರು ಸುಮಾರು ೧೦೪ ಜನರಿದ್ದೇವೆ. ತಾವು ದಯವಿಟ್ಟು ಒಬ್ಬೊಬ್ಬರಿಗೂ ಮಾತನಾಡಲು ಐದೈದು ನಿಮಿಷ ಅವಕಾಶ ಕೊಡಿ. ಮುಂದಿನ ಸಾಲಿನವರು ಒಂದು ಇಡೀ ದಿನ ಮಾತನಾಡುತ್ತಾರೆ. ನಾವು ಒಂದೇ ಗಂಟೆಯಲ್ಲಿ ಎಲ್ಲರೂ ಮಾತನಾಡಿ ಬಿಡುತ್ತೇವೆ. ನಾವು ೪-೫ ಜನ ಮಾತ್ರ ಮಾತನಾಡುವವರಿದ್ದೇವೆ. ಕೇವಲ ಒಬ್ಬೊಬ್ಬರಿಗೆ ಐದೈದು ನಿಮಿಷ ಅವಕಾಶ್ ಕೊಡಿ. ಮುಂದಿನ ಸಾಲಿನವರೇ ೨-೩ ಗಂಟೆಗಳ ಕಾಲ ಮಾತನಾಡುತ್ತಾರೆ. ಪ್ರಶ್ನೋತ್ರರದಲ್ಲೂ ನೀವು ನಮಗೆ ಮಾತನಾಲಿಕ್ಕೆ ಅವಕಾಶ ಕೊಡುವುದಿಲ್ಲ. ಈಗಾಲಾದರೂ ಕೊಡಿ.

ಅಧ್ಯಕ್ಷರು : ಮಾನ್ಯ ನಾಗರಾಜ್ ರವರೆ, ತಾವು ಮಾತನಾಡಿ. ತಾವು ಬೇಗ ತಮ್ಮ ಭಾಷಣವನ್ನು ಕೇವಲ ೧೦-೧೫ ನಿಮಿಷಗಳಲ್ಲಿ ಮುಗಿಸಿ ಒಂದು ಹೊಸ ಸಂಪ್ರದಾಯವನ್ನು ಹಾಕಿಕೊಡಿ. ನಂತರ ಎಲ್ಲರಿಗೂ ಅವಕಾಶ ಕೊಡೋಣ. ರಾತ್ರಿ ೧೨ ಗಂಟೆಯಾದರೂ ಸರಿ ಮಾನ್ಯ ಅರ್ಥ ಸಚಿವರು ಉತ್ತರ ಕೊಡುತ್ತೇನೆ ಎಂದುಹೇಳಿದ್ದಾರೆ. ಅಲ್ಲಿಯವರೆಗೂ ಮಾತನಾಡಲು ಅವಕಾಶ ಇದೆ. ನಾನು ಎಲ್ಲರಿಗೂ ಅವಕಾಶ ಕೊಡುತ್ತೇನೆ. ಈಗ ದಯಮಾಡಿ ಎಲ್ಲರೂ ಕುಳಿತುಕೊಳ್ಳಿ, ಮಾನ್ಯ ವಾಟಾಳ್ ನಾಗರಾಜ್

ರವರೆ, ತಾವು ಮಾತನಾಡಿ. ಅವರಿಗೆ ತಾವು ಬೇಗ ಮಾತನಾಡಿ ಮುಗಿಸಬೇಕೆಂದು ನಾನು ವಿನಂತಿ ಮಾಡಿದ್ದೇನೆ. ಅವರು ಬೇಗ ಮಾತನಾಡಿ ಮುಗಿಸುತ್ತಾರೆ. ನಂತರ ನಾನು ಎಲ್ಲರಿಗೂ ಅವಕಾಶ ಕೊಡುತ್ತೇನೆ. ದಯಮಾಡಿ ಸಹಕರಿಸಿ.

(ಗೊಂದಲ)

ಶ್ರೀ ವೈಜನಾಥ ಪಾಟೀಲ್ : ನಮಗೆ ಯಾವಾಗ ಅವಕಾಶ ಕೊಡುತ್ತೀರಿ ? ನಮಗೆ ಮಾತನಾಡಲು ಅವಕಾಶ ಕೊಡುತ್ತೀರೋ, ಇಲ್ಲವೋ? ಅದನ್ನಾದರೂ ಹೇಳಿ.

(ಗೊಂದಲ)

ಅಧ್ಯಕ್ಷರು : ನಿಮಗೂ ಅವಕಾಶ ಕೊಡೋಣ. ಈಗ ಕುಳಿತುಕೊಳಿ. ಈಗ ಅವರು ಮಾತನಾಡಲಿ. ಹೀಗೆಯೇ ಸಮಯ ಮುಗಿದು ಹೋಗುವುದಕ್ಕೆ ಅವಕಾಶ ಕೊಡಬೇಡಿ.

(ಗೊಂದಲ)

ಮಾನ್ಯ ರಾಯರೆಡ್ಡಿಯವರೆ, ತಾವು ಯಾವ ಯಾವ ಸ್ಥಾನದಿಂದಲೋ ಮಾತನಾಡಲಿಕ್ಕೆ ಬರುವುದಿಲ್ಲ, ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ನಿಮ್ಮ ವಿಚಾರಗಳನ್ನು ಹೇಳಿದ್ದೀರಿ, ಅವರು ವಿಚಾರಗಳನ್ನು ಹೇಳಿದ್ದಾರೆ. ಇವತ್ತು ಇದು ಮುಗಿಯಬೇಕು. ಆ ತರಹ ಮಾಡಲಿಕ್ಕೆ ಸಧ್ಯವಾಗುವುದಿಲ್ಲ.

(ಗೊಂದಲ)

ಮಾನ್ಯ ರಾಯರೆಡ್ಡಿಯವರೆ, ನೀವು ಎಲ್ಲಿ ಕುಳಿತುಕೊಳ್ಳುತ್ತೀರೋ ; ಎಲ್ಲಿಂದ ಮಾತನಾಡುತ್ತೀರೋ ಗೊತ್ತಾಗುತ್ತಿಲ್ಲ.

(ಗೊಂದಲ)

ಅವರಿಗೆ ಮಾತನಾಡಲು ನಾನು ಅನುಮತಿ ಕೊಟಿಲ್ಲ. ಅವರು ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರ ಅನುಮತಿ ಪಡೆದು, ಅವರು ಎಲ್ಲಿಂದ ಬೇಕಾದರೂ ಮಾತನಾಡಬೇಕೆಂದರೆ ಮಾತನಾಡಬಹುದು. ಈ ಕಡೆಯ ಆಸ್ಥಾನವೆಲ್ಲಾ ನಮ್ಮದು ಎಂಬ ಭಾವನೆಯಿಂದ, ಎಲ್ಲಿಂದ ಭೇಕಾದರೂ ತಾವು ಮಾತನಾಡಬಹುದು ಎಂದು ಅವರು ತಿಳಿದುಕೊಂಡಿದ್ದಾರೆ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್ : ಅವರು ಇಲ್ಲಿಎ ಬರುವುದಿದ್ದರೆ ನಾವು ಅವರಿಗೆ ಇಲ್ಲಿಯೇ ಕುಳಿತುಕೊಳ್ಳಲು ಅವಕಾಶ ಕೊಡುತ್ತೇನೆ...

(ಗೊಂದಲ)

ಶ್ರೀ. ಕೆ.ಎಸ್. ಈಶ್ವರಪ್ಪ : ನಿಮಗೆ ಮಾತ್ರ ಕರೆಕ್ಟಾದ ಸ್ಥಾನ ಸಿಕ್ಕಿದೆ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಮ್ಮ ಜಾಗವನ್ನು ಯಾರೂ ತಪ್ಪಿಸುವಂತಿಲ್ಲ. ನಮ್ಮ ಜಾಗ ಇಲ್ಲಿರುತ್ತದೆ ಅಥವಾ ಅಲ್ಲಿರುತ್ತದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಯಡಿಯೂರಪ್ಪನವರು ತಮ್ಮ ಎರಡನೇ ಆಯವ್ಯಯವನ್ನು ಮಂಡಿಸಿದ್ದಾರೆ. ಈ ರಾಜ್ಯದಲ್ಲಿ ಮುಂದೆ ಯಾರೂ ಹಣಕಾಸಿನ ಸಚಿವರಾಗಬಾರದು, ಎಲ್ಲವನ್ನೂ ನಾನೇ ಕೊಟ್ಟು ಬಿಡಬೇಕು, ಯಾರ್‍ಯಾರಿಗೆ ಏನೇನು ಅನುಕೂಲ ಕೊಡಬೇಕಾಗಿದೆಯೋ ಅದೆಲ್ಲವನ್ನೂ ನಾನೇ ಕೊಡುತ್ತೇನೆ ಎಂಬ ಭಾವನೆ ಮಾನ್ಯ ಹಣಕಾಸಿನ ಸಚಿವರಲ್ಲಿದೆ ಎಂದು ನನಗನಿಸುತ್ತಿದೆ. ಒಂದು ಕಡೆಯಿಂದ ಪಟ್ಟಿ ಮಾಡಿಕೊಂಡು ಎಲ್ಲರಿಗೂ ಕೊಟ್ಟಿದ್ದಾರೆ. ಆದಾಗ್ಯೂ ಕೆಲವೊಂದು ಬಿಟ್ಟು ಹೋಗಿದೆ. ಅವರು ಪಟ್ಟಿ

ಮಾಡುವಾಗ ನಮ್ಮನ್ನೂ ಕೇಳಿದ್ದರೆ ನಾವು ಇನ್ನೂ ಯಾರ್ಯಾರಿಗೆ ಏನೇನು ಕೊಡಬೇಕಾಗಿದೆ ಎಂಬುದನ್ನು ಅವರಿಗೆ ಹೇಳಿ ಬಿಡುತ್ತಿದ್ದೆವು. ಅವರು ದೊಡ್ಡದೊಂದು ಪಟ್ಟಿಯನ್ನೇ ಮಾಡಿದ್ದಾರೆ. ಒಂದು ತರಹ ಹೊಟ್ಟೆಕಿಚ್ಚಿನಲ್ಲಿ ಅವರು ಈ ರೀತಿ ಮಾಡಿದ್ದಾರೆ. ಮುಂದೆ ಯಾರೂ ಏನನನ್ನೂ ಹೇಳಬಾರದು, ಎಲ್ಲವನ್ನೂ ನಾನೇ ಮಾಡಬಿಡಬೇಕು ಎಂಬ ಮನೋಭಾವನೆಯ್ಲ್ಲಿ ಅವರು ಈ ಬಜೆಟ್ ಮಂಡಿಸಿದ್ದಾರೆ. ಅವರ ಉತ್ಸಾಹವನ್ನು ನಾನು ಮೆಚ್ಚುತ್ತೇನೆ. ಆದರೆ ಅವರು ಎರಡು ದೃಷ್ಟಿಯಿಂದ ಇದನ್ನು ಮಂಡಿಸಿದ್ದಾರೆ. ಮೊದಲನೆಯದಾಗಿ, ಎಲ್ಲರೂ ಹೇಳಿದಂತೆ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಇದನ್ನು ಮಂಡಿಸಿದ್ದಾರೆ. ಎರಡನೆಯದಾಗಿ, ಚುನಾವಣೆ ಇಲ್ಲದಿದ್ದರೂ, ಈ ಬಜೆಟ್‌ನ ಕೀರ್ತಿ ನನಗೇ ಬರಲಿ ಎಂಬ ದೃಷ್ಟಿಯಿಂದ ಬಹಳ ಲೆಕ್ಕಾಚಾರದಿಂದ, ಬುದ್ಧಿವಂತಿಕೆಯಿಂದ ಇದನ್ನು ಮಂಡಿಸಿದ್ದಾರೆ. ಮಾನ್ಯ ಯಡಿಯೂರಪ್ಪನವರನ್ನು ಅಷ್ಟು ಸುಲಭವಾಗಿ 'ಜೊಳ್ಳು ಕುಳ' ಎಂದು ಯಾರೂ ಕೂಡ ಹೇಳಲಿಕ್ಕಾಗುವುದಿಲ್ಲ. ಅವರು ಬಹಳ 'ಗಟ್ಟಿ ಕುಳ'. ಆ ಗಟ್ಟಿ ಕುಳ ಇಲ್ಲದಿದ್ದರೆ ಇವರ್ಯಾರೂ ಮಂತ್ರಿಗಳಾಗಲಿಕ್ಕೆ ಆಗುತ್ತಿರಲಿಲ್ಲ. ಗಟ್ಟಿ ಕುಳವಾದ ಅವರು ನಿಮ್ಮ ಪಕ್ಷಕ್ಕೆ ದುಡಿದಿದ್ದಾರೆ, ಅದರ ಬಗ್ಗೆ ನಮ್ಮದೇನೂ ತಕರಾರು ಇಲ್ಲ. ಅವರು ನಿಮ್ಮ ಪಕ್ಷಕ್ಕೆ ದುಡಿದಿದ್ದಾರೆ. ಹೋರಾಟ ಮಾಡಿದ್ದಾರೆ. ಅವರ ಬಗ್ಗೆ ನಮ್ಮದೇನೂ ತಕರಾರು ಇಲ್ಲ. ಅವರು ನಿಮ್ಮ ಪಕ್ಷಕ್ಕೆ ದುಡಿದಿದ್ದಾರೆ. ಹೋರಾಟ ಮಾಡಿದ್ದಾರೆ. ಎಲ್ಲಾ ಕೆಲಸವನ್ನೂ ಸಹ ಮಾಡಿದ್ದಾರೆ. ನಾನೇನು ಅದರ ಬಗ್ಗೆ ಚಿಂತನೆ ಮಾಡುತ್ತಿಲ್ಲ. ಮಾನ್ಯ ಯಡಿಯೂರಪ್ಪನವರು ತಮ್ಮ ಬಜೆಟ್ನಲ್ಲಿ ಮೊದಲಿಗೆ 'ಮೈತ್ರಿ ಧರ್ಮ' ಎಂಬ ಪದ ಬಳಸಿದ್ದಾರೆ. ಈ 'ಮೈತ್ರಿ ಧರ್ಮ' ಎಂದರೆ ಏನು ? ನನಗೆ ಇದು ಅರ್ಥವಾಗುತ್ತಿಲ್ಲ. ಬೇರೆ ಬೇರೆ ನಾನಾ ಧರ್ಮಗಳಿವೆ, ಆದರೆ ಈ 'ಮೈತ್ರಿ ಧರ್ಮ' ಈ ಸದನಕ್ಕೂ ಗೊತ್ತಿಲ್ಲ, ನಾಡಿನ ಜನತೆಗೂ ಗೊತ್ತಿಲ್ಲ, ಯಾರಿಗೂ ಅದರ ಬಗ್ಗೆ ಗೊತ್ತಿಲ್ಲ. ಅಲ್ಲದೆ ತಮ್ಮ ಬಜೆಟ್ ನಲ್ಲಿ 'ಲಕ್ಷ್ಮಣ ರೇಖೆ' ಎಂಬ ಪದವನ್ನೂ ಸಹ ಬಳಸಿದ್ದೀರಿ. ಆದರೆ ನೀವು ಇವೆರಡಕ್ಕೂ ತದ್ವಿರುದ್ಧವಾಗಿದ್ದೀರಿ. ನೀವು

'ಲಕ್ಷ್ಮಣ ರೇಖೆ' ಯನ್ನು ಈಗಾಗಲೇ ದಾಟಿ ಬಿಟ್ಟಿದ್ದೀರಿ. 'ಎತ್ತು ಏರಿಗೆ ಎಳೆದರೆ, ಎಮ್ಮೆ ನೀರಿಗೆಳೆಯಿತು' ಎಂಬಂತೆ ಇಲ್ಲಿ ಆಗಿದೆ.

ಈ ರಾಜ್ಯ ಒಂದು ಗಾಡಿಯಂತೆ, ಅದರಲ್ಲಿ ಈ ರಾಜ್ಯದ ಜನತೆ ಕುಳಿತಿದ್ದಾರೆ. ಅವರನ್ನು ನಾವು ಎಳೆದುಕೊಂಡು ಹೋಗುತ್ತೇವೆಂದು, ಒಂದು ಕಡೆ ನೊಗದಲ್ಲಿ ಎಮ್ಮೆ ಮತ್ತೊಂದು ಕಡೆ ಎತ್ತನ್ನು ಕಟ್ಟಿಕೊಂಡು ಯಾರು ಒಬ್ಬರ ಮುಖವನ್ನು ಮತ್ತೊಬ್ಬರು ನೋಡದೆ, ಎಮ್ಮೆ ಒಂದು ಕಡೆ ಎಳೆಯುತ್ತಿದೆ, ಎತ್ತು ಒಂದು ಕಡೆ ಎಳೆಯುತ್ತಿದೆ. ಇದನ್ನು ನೀವು ಯಾವ ಕಡೆ ಎಳೆದುಕೊಂಡು ಹೋಗುತ್ತಿದ್ದೀರೊ ಗೊತ್ತಿಲ್ಲ. ನೀವೇನೊ ಬಜಾವ್ ಆಗುತ್ತೀರಿ. ಆದರೆ ಗಾಡಿಯಲ್ಲಿ ಕುಳಿತಿರುವ ಈ ರಾಜ್ಯದ ಜನತೆಯನ್ನು ಯಾವ ಮೋರಿಗೆ ಹಾಕುತ್ತೀರೊ, ಯಾವ ರಸ್ತೆ, ಯವ ಹಳ್ಳಕ್ಕೆ ತಳ್ಳುತ್ತೀರೊ, ಈ ಗಾಡಿ ಎಲ್ಲಿಗೆ ಹೋಗುತ್ತದೆಂಬುದು ಗೊತ್ತಿಲ್ಲ. ಕಿತ್ತಾಟದಲ್ಲಿ ನಿಮ್ಮ ಮಾತು, ನಿಮ್ಮ ವರಸೆ, ನಿಮ್ಮ ಭಾಷಣ ಎಲ್ಲವನ್ನೂ ನಾವು ನೋಡುತ್ತಿದ್ದೇವೆ. ನೀವು ಕಿತ್ತಾಡುವಾಗ ಕಿತ್ತಾಡುತ್ತೀರಿ, ಹೇಳುವುದನ್ನು ಹೇಳುತ್ತೀರಿ, ಬಹಿರಂಗ ವಾಗಿ ನೀವು ಹೇಳುತ್ತೀರಿ, ಬಹಿರಂಗವಾಗಿ ಅವರು ಹೇಳುತ್ತಾರೆ, ಆದರೆ ನಾವಿಬ್ಬರೂ ಒಂದೆ, ನಾವು ಒಂದಾಗಿದ್ದೇವೆನ್ನುತ್ತಾರೆ. ನನಗನಿಸುತ್ತದೆ, ರಾಜ್ಯದ ಜನತೆಯ ಮುಂದೆ ನಿಮ್ಮ ಸಮ್ಮಿಶ್ರ ಸರ್ಕಾರ ಒಂದಾಗಿದೆ ಎಂಬು ನಾವ್ಯಾರು ತಿಳಿದುಕೊಂಡಿಲ್ಲ. ನಿಮ್ಮಲ್ಲಿ ತೀವ್ರವಾದ ಗೊಂದಲವಿದೆ ; ಬಹಳ ಜಿಜ್ಞಾಸೆಗಳಿವೆ. ಅದು ನಿಮ್ಮಲ್ಲಿ ಯಾವ ಹಂತಕ್ಕೆ ಎಲ್ಲಿಗೆ ಹೋಗಿ ತಲುಪುತ್ತದೆಂದು ನಾನು ನಿರೀಕ್ಷೆ ಮಾಡುವುದಕ್ಕಾಗುವುದಿಲ್ಲ. ಆದರೆ ಮೈತ್ರಿ ಧರ್ಮವೆಂದರೇನು ಎಂಬುದನ್ನು ನೀವು ಹೇಳಬೇಕು. ಅದನ್ನು ನೀವು ಸ್ಪಷ್ಟಪಡಿಸತಕ್ಕಂತಹದ್ದು ನಿಮ್ಮ ಧರ್ಮ. ಮತ್ತೆ, ನಿಮ್ಮ ಇಡೀ ಆಯವ್ಯಯ ದಲ್ಲಿ ಸ್ವಲ್ಪ ಹೆಚ್ಚು ಕಡಿಮೆ. ಯಾವ ಹಣಕಾಸಿನ ಸಚಿವರು ಮಂಡಿಸದಿರುವ ಬಜೆಟ್ ಭಾಷಣ ಒಂದಲ್ಲ ಎರಡಲ್ಲ ೧೨೭ ಪುಟಗಳಷ್ಟಿದೆ. ನಿಮಗೆ ಇನ್ನು ಕೆಲವು ಸ್ನೇಹಿತರು ಸಿಕ್ಕಿದ್ದರೆ, ಯಾರ್‍ಯಾರಿಗೆ ಏನೇನು ಕೊಡಬೇಕೆಂದು ಕೇಳಿದ್ದರೆ, ಇನ್ನು ೧೫೦ ಪುಟಗಳು ಮುಂದಕ್ಕೆ ಹೋಗುತ್ತಿತ್ತು. ಮತ್ತೆ ಇಲ್ಲಿ ರಾಷ್ಟ್ರಕವಿ ಕುವೆಂಪುರವರನ್ನು ತಂದಿದ್ದಿರಿ ; ಡಾ:ಶಿವರುದ್ರಪ್ಪನವರನ್ನು ತಂದಿದ್ದಿರಿ. ನಾನು ಹೋದ ಸಾರಿ ನಿಮಗೆ ಹೇಳಿದ್ದೆ. ನೀವು ಈ ಕಡೆ

ವಿರೋಧಪಕ್ಷ ನಾಯಕರಾಗಿದ್ದಾರ, ಈ ರಾಷ್ಟ್ರಕವಿಗಳ ಬಗ್ಗೆಯಾಯಲಿ, ವಚನಗಳ ಬಗ್ಗೆ ಆಗಲಿ, ದಾಸರುಗಳ ಬಗ್ಗೆ ಆಗಲಿ, ಸಂತರ ಬಗ್ಗೆ ಆಗಲಿ, ಚಿಂತನೆ ಇರಲಿಲ್ಲ. ಮಾತು ಎತ್ತಿದರೆ, ಇಲ್ಲಿ ನಡೆಯುತ್ತಿದ್ದ ಯುದ್ಧ, ನಿಮ್ಮ ಹೋರಾಟ ನೋಡಿದಾಗ ಇವ್ಯಾವುವು ಇರಲಿಲ್ಲ. ನೀವು ಅಲ್ಲಿಗೆ ಬಂದ ತಕ್ಷಣ ಎಲ್ಲರವನ್ನು ಮೈಗೂಡಿಸಿಕೊಂಡಿದ್ದಿರಿ ದಾಸರ ಪದಗಳನ್ನು ತರಬೇಕು, ಸಾಹಿತ್ಯ ತರಬೇಕು, ಸಂಸ್ಕೃತಿ ತರಬೇಕೆಂದು ಇಟ್ಟುಕೊಂಡಿದ್ದಿರಿ.

ಹಾಲು ಹಳ್ಳ ಹರಿಯಲಿ
ಬೆಣ್ಣೆ ಬೆಟ್ಟವಾಗಲಿ
ಜೇನು ಮಳೆಯ ಸುರಿಯಲಿ
ತೊಟ್ಟಲೊಲಿದು ತೂಲಿ
ಮುನಿದು ಸಮರ ನರಬಲಿ
ನರರು ನರರ ನಂಬಲಿ
ಸ್ವಾಮಿಯಮೃತ ಕೃಪೆಯಲಿ
ಶಾಂತಿ ಜಗವ ತುಂಬಲಿ

ರಾಷ್ಟ್ರಕವಿ ಕುವೆಂಪುರವರು ಕವನ ಎಷ್ಟು ಚೆನ್ನಾಗಿದೆ ಎಂದರೆ, ಇದು ಹೇಳುವುದಕ್ಕು ನೀವು ನಡೆದುಕೊಳ್ಳುತ್ತಿರುವ ರೀತಿಗು, ನಿಮ್ಮ ಆಯವ್ಯಯಕ್ಕು ಪ್ರಾಮಾಣಿಕವಾಗಿ ಸಂಬಂಧವಿಲ್ಲ. ನೀವು ಬಹಳ ಕಷ್ಟಪಟ್ಟು ಈ ಕೆಲಸವನ್ನು ಮಾಡಿದ್ದಿರಿ ಇದನ್ನು ಮೆಚ್ಚುತ್ತೇನೆ. ಇದಕ್ಕೆ ತಕ್ಕಂತೆ ನೀವು ನಡೆದುಕೊಂಡಿಲ್ಲ. ಇಲ್ಲಿ ನೀವು ಕೆಲವೊಂದು ಸೂತ್ರಗಳನ್ನು ಕೊಟ್ಟಿದ್ದಿರಿ. ಸರ್ಕಾರದ ಆದ್ಯತೆಗಳು : ಅಭಿವೃದ್ಧಿಯ ವೇಗೋತ್ಕರ್ಷ, ಸಮತೋಲನದ ಅಭಿವೃದ್ಧಿ, ಸಾಮಾಜಿಕ ನ್ಯಾಯ, ಸಾಮಜಿಕ ಸಾಮರಸ್ಯ, ಸಾಮಾಜಿಕ ಭದ್ರತೆ, ಆಹಾರ ಭದ್ರತೆ, ಮಾನವ ಸಂಪನ್ಮೂಲದ ಸದ್ಬಳಕೆಗೆ ಕೌಸಲ್ಯಾಭಿವೃದ್ಧಿ, ಉದ್ಯೋಗಾವಕಾಶ ಗಳಲ್ಲಿ ಹೆಚ್ಚಳ, ನಾಡಿನ ನೆಲ-ಜಲ, ಭಾಷೆ ಮತ್ತು ಸಂಸ್ಕೃತಿಗಳ ಸಂರಕ್ಷಣೆ. ಒಂಬತ್ತು, ನವಗ್ರಹಗಳು ಸರಿಯಾಗಿದೆ. ಈ

ಯಾವ್ಯಾವ ಗ್ರಹ, ಯಾವ್ಯಾವ ಗಳಿಗೆಯಲ್ಲಿ, ಯಾರ್ಯಾರನ್ನು ಹಿಡಿದುಕೊಳ್ಳುತ್ತವೆಯೊ ಗೊತ್ತಿಲ್ಲ. ಒಂಬತ್ತನ್ನು ಕರೆಕಫಿ ಹೇಳಿದ್ದಿರಿ, ಒಂದು ಹೆಚ್ಚಾಗಿ ೧೦ ಹೇಳಿದ್ದರೆ ಇವು ನವಗ್ರಹಗಳಾಗುತ್ತಿರಲಿಲ್ಲ. ನೀವು ಇವನ್ನು ಕೊಟ್ಟಿದ್ದಿರಿ. ಯಾವ ಗ್ರಹ ೮ನೆಯದು ಯಾವಾಗ ಹಿಡಿಯುತ್ತದೆಯೊ, ೭ನೆಯದು ಯಾವಾಗ ಹಿಡಿಯುತ್ತದೆಯೊ, ನಿಮ್ಮ ಪರಿಸ್ಥಿತಿ ಏನಾನಾಗುತ್ತದೆಯೊ ಹೇಳುವುದಕ್ಕೆ ಸಾಧ್ಯವಿಲ್ಲ. ಅದೇನೆ ಆಗಲಿ ಅದು ಇರಲಿ, ಮತ್ತೆ ಹೊಸ ಹೊಸ ಹೆಸರುಗಳನ್ನು ಕೊಟ್ಟಿದ್ದಿರಿ. ವಿದ್ಯಾರ್ಥಿ ಕೇಂದ್ರೀಕೃತ ಅನುದಾನ, ಸಂಧ್ಯಾ ಸುರಕ್ಷ, ಅಮೃತ, ಭಾಗ್ಯಲಕ್ಷ್ಮಿ, ಆಮ್ ಆದ್ಮಿ ವಿಮೋಚನ ಕೇಂದ್ರ ಸುವರ್ಣ ಸುರಕ್ಷ, ವಿದ್ಯಾ ವಿಕಾಸ, ಅಕ್ಷರ ದಾಸೋಹ, ಸುವರ್ಣ ಗ್ರಾಮೋದಯ, ಸಿದ್ಧ ಉಡುಪು ನೀತಿ, ಕಣಿವೆ ಯೋಜನೆ, ಸುವರ್ಣ ಕಾಯಕ, ಕರ್ನಾಟಕ ಕರೆ ಕೇಂದ್ರ ಬೆಂಗಳೂರು ಮಧುಮೇಹ ಕೇಂದ್ರ ಸ್ವಲ್ಪ ಹೆಚ್ಚುಕಡಿಮೆ ೧೪ ಸೂತ್ರಗಳನ್ನು ತಾವು ಹೇಳಿದ್ದಿರಿ. ಪ್ರತಿ ವರ್ಷ ಹೊಸ ಹೊಸ ಸೂತ್ರಗಳನ್ನು ತಾವು ಹೇಳುತ್ತಾ ಬಂದಿದ್ದಿರಿ. ನಿಮಗೆ ಏನಾಗಿದೆ ಎಂದರೆ, ನಾನು ಆಗಲೆ ಹೇಳಿದಂತೆ, ನಿಮಗೆ ಎಲ್ಲರಿಗಿಂತ ಬಹಳ ಮೆಚ್ಚಿಗೆ ಪಡೆಯಬೇಕು, ನಾನು, ಹೆಚ್ಚಿನ ಕಾಳಜಿಯಿಂದ ಮಾಡಿದ್ದೇನೆಂದು ಜನರಿಂದ ಪ್ರಶಂಸೆಯನ್ನು ಪಡೆಯಬೇಕು, ಆದುದರಿಂದ ಎಲ್ಲಾ ವರ್ಗದ ಜನರನ್ನು ಸಂತೃಸಬೇಕು ಎನ್ನುವ ದೃಷ್ಟಿಯಿಂದ ನೀವು ಓದುತ್ತಿದ್ದೀರಿ. ಜೊತೆಗೆ ಈ ನಿಮ್ಮ ವಚನವನ್ನು ನೋಡಿದಾಗ, ನನಗೊಂದು ವಚನ ಜ್ಞಾಪಕಕ್ಕೆ ಬರುತ್ತದೆ ; ಅದನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಮಾನ್ಯ ಪ್ರಕಾಶ್ ರವರೇ, ಇದು ಶಿಶುನಾಳ ಶರೀಫ್ ರದು ; ಕೋಡಿಗಾನ ಕೋಳಿ ನುಂಗಿತ್ತಾ ನೋಡವ್ವ ತಂಗೆ, ಕೋಡಗಾನ ಕೋಳಿ ನುಂಗಿತ್ತಾ ತಂಗಿ, ಆಡು ಆನೆಯ ನುಂಗಿ, ಗೋಡೆ ಸುಣ್ಣಾವ ನುಂಗಿ, ಆಡಲು ಬಂದವಳ ಪಾತರದವಳ ಮದ್ದಲೆ ನುಂಗಿತ್ತಾ, ಒಳ್ಳು ಒನಕೆಯ ನುಂಗಿ ಕಲ್ಲು ಗೂಟಾವ ನುಂಗಿ ಮೆಲ್ಲನೆ ಂದ ಮುದುಕಿಯನ್ನೆ ನೆಲ್ಲು ನುಂಗಿತ್ತಾ ಹಗ್ಗ ಮಗ್ಗವ ನುಂಗಿ ಮಗ್ಗವ ಳಾಳಿ ನುಂಗಿ, ಮಗ್ಗದಲ್ಲಿರುವ ಅಣ್ಣನನ್ನೆ ಮಣಿಯು ನುಂಗಿತ್ತಾ, ಎತ್ತು ಜಿತ್ತಾಗಿ ನುಂಗಿ, ಭತ್ತ ಬಾಸವ ನುಗಿ, ಮುಕುಟ ತಿರುವು ಅಣ್ಣನನ್ನ ಮೇಳೆ ನುಂಗಿತ್ತಾ, ಗುಡ್ಡ ಗವಿಯನ್ನ ನುಂಗಿ, ಗವಿಯು ಇರುವೆಯ ನುಂಗಿ,

ಗೋವಿಂದ ಗುರುವಿನ ಪಾದ ನನ್ನನ್ನೆ ನುಂಗಿತ್ತಾ ಕೋಡುಗಾನ ಕೋಳಿ ನುಂಗಿತ್ತಾ. ಅಂದರೆ; ಶಿಶುನಾಳ ಶರೀಪರು ಹೇಳಿರುವುದಕ್ಕೂ ನೀವು ನಡೆದುಕೊಳ್ಳುತ್ತಿರತಕ್ಕಂತಹ, ನೀವು ಮಂಡಿಸಿರುತಕ್ಕಂತಹ ಆಯವ್ಯಯದ ಈ ರೀತಿಗಳನ್ನು ನೋಡಿದಾಗ ನೀವೊಂದು ಬಹಳ ಪ್ರಚಂಡದ ದಿಕ್ಕಿಗೆ ಹೋಗಬೇಕೆಂದು ಹೊರಟಿರತಕ್ಕಂಹದ್ದನ್ನು ನೀವು ಜಾಣ್ಮೆಯಲ್ಲಿ ಮಾಡುವುದಕ್ಕೆ ಹೊರಟಿದೀರಿ. ತಾವು ರಾಷ್ಟ್ರಕವಿಗಳ ಕವನವನ್ನು ತಾವು ಹೇಳಿದ್ದಿರಿ. ನಿಮ್ಮಿಡೀ ಆಯವ್ಯಯವನ್ನು ನೋಡಿದಾಗ, ಸರ್ವಜನಾಂಗದ ಶಾಂತಿಯ ತೋಟ, ರಸಿಕರ ಕಂಗಳ ಸೆಳೆಯುವ ನೋಟ, ಹಿಂದು ಕ್ರೈಸ್ತ ಮುಸಲ್ಮಾನ, ಪಾರಸೀಕರ ಜೈನರುದ್ಯಾನ, ಜನಕನ ಹೋಲುವ ದೊರೆಗಳ ಧಾಮ. ಇದಕ್ಕು ನಿಮ್ಮ ಆಯವ್ಯಯಕ್ಕು ಸಂಬಂಧವೇ ಇಲ್ಲ. ಇದು ಸರ್ವಜನಾಂಗದ ಶಾಂತಿಯ ತೋಟ ಎಲ್ಲೂ ನಿಮ್ಮ ಆಯವ್ಯಯದಲ್ಲಿ ಸರ್ವಜನಾಂಗವನ್ನು ಕಾಣಲಿಲ್ಲ. ಶಿಶುನಾಳ ಶರೀಫರನ್ನು ನೋಡಲಿಲ್ಲ. ಟಿಪ್ಪು ಸುಲ್ತಾನ್ ಬಗ್ಗೆ ನೀವು ಎಲ್ಲೂ ನೋಡಲಿಲ್ಲ. ಮುಸ್ಲೀಂ ಸಂಸ್ಥೆಗಳ ಬಗ್ಗೆ ನೋಡಲಿಲ್ಲ. ಕ್ರಿಶ್ಚಿಯನ್ ಸಂಸ್ಥೆಗಳ ಬಗ್ಗೆ ನೋಡಲಿಲ್ಲ, ಬೇರೆ ಎಲ್ಲೂ ನೋಡಲಿಲ್ಲ. ಬರೀ ಮಠಗಳು ಮಾನ್ಯಗಳು, ಕೆಲವು ಸಾಹಿತಿಗಳು ಇವನ್ನು ಬಿಟ್ಟರೆ, ವಿಶಾಲವಾಗಿ ಮಾನ್ಯ ಯಡಿಯೂರಪ್ಪನವರು, ತಾವು ಈ ರಾಜ್ಯದ ಹಣಕಾಸಿನ ಸಚಿವರು, ನೀವು ಬಿಜೆಪಿಯ ಮುಖಂಡರು ಅಲ್ಲ ಅಥವಾ ಬಿಜೆಪಿ ಪಕ್ಷದವರೂ ಅಲ್ಲ. ಈ ರಾಜ್ಯದ ಸಮ್ಮಿಶ್ರ ಸರ್ಕಾದ ಹಣಕಾಸಿನ ಸಚಿವರಾಗಿದ್ದೀರಿ. ನೀವು ಹಣಕಾಸಿನ ಸಚಿವರಾಗಿದದಾಗ, ಎಲ್ಲವನ್ನೂ ಮರೆತು ಅನಿಷ್ಟಗಳನ್ನೆಲ್ಲಾ ದೂರ ಹಾಕಿ ನಾನು ಈ ರಾಜ್ಯದ ಒಬ್ಬ ಹಣಕಾಸಿನ ಸಚಿನಾಗಿದ್ದೇನೆ ಎನ್ನುವ ಒಂದೇ ಒಂದು ಭಾವನೆಯಿಂದ ಇವತ್ತು ನೀವು ನಡೆದಿದ್ದರೆ, ಟಿಪ್ಪುವನ್ನು ನೆನೆದಿದ್ದರೆ, ನಿಸಾರ್ ಅಹಮದ್ ರವರನ್ನು ನೆನೆದಿದ್ದರೆ, ಕರೀಂ ಖಾನ್ ರವರನ್ನು ನೆನೆದಿದ್ದರೆ, ಅವರ ಸಾಹಿತ್ಯವನ್ನು ನೆನೆದಿದ್ದರೆ, ಅವರ ಸಾಹಿತ್ಯವನ್ನು ನೆನೆದಿದ್ದರೆ ಅವರ ಸಾಹಿತ್ಯವನ್ನು ನೀವು ಹೇಳಿದ್ದರೆ, ನನಗೆ ನಿಜಕ್ಕೂ ಹಂಡೆ ಹಾಲು ಉಂಡಷ್ಟು ಸಂತೋಷಪಡುತ್ತಿದ್ದೆ. ನಾನು ಒಂದು ಕಡೆಯಿಂದ ಸಂಪೂರ್ಣವಾಗಿ ಎಲ್ಲವನ್ನೂ ನೋಡಿದ್ದೇನೆ. ನೀವು ಎಲ್ಲವನ್ನು ಕೊಟ್ಟಿದ್ದಿರಿ, ಅ.ನಾ.ಕೃ ಬಗ್ಗೆ

ಹೇಳಿದ್ದೀರಿ ಶಿವರುದ್ರಪ್ಪನವರ ಬಗ್ಗೆ ಹೇಳಿದ್ದೀರಿ. ಇನ್ನು ಅನೇಕರದ್ದನ್ನು ನೀವು ಹೇಳಿದ್ದೀರಿ, ಒಪ್ಪುತ್ತೇನೆ. ಎಲ್ಲರಿಗೂ ಅಷ್ಟಷ್ಟು ಕೊಟ್ಟಿದಿರಿ, ೫೦ ಲಕ್ಷ ೧ ಕೋಟಿ, ೨೦ ಲಕ್ಷ, ೫ ಲಕ್ಷ, ೧ ಲಕ್ಷ, ೬ ಕಾಸು, ૩ ಕಾಸು, ೨ ಕಾಸು, ೧ ಕಾಸು ಇಚ್ಛೆ ಬಂದಂತೆ ಅಲ್ಲಲ್ಲಿ ಇಟ್ಟು ಬಂದಿದ್ದಿರಿ,, ಅದೆಲ್ಲಾ ಎಲ್ಲಿಗೆ ತಲುಪುತ್ತದೆಯೋ ಗೊತ್ತಿಲ್ಲ.

ಎಲ್ಲರನ್ನೂ ಮೆಚ್ಚಿಸೋಣ ಎನ್ನುವ ಒಂದು ದಿಕ್ಕಿನಲ್ಲಿ ತಾವು ಹೋಗುತ್ತಿದದೀರಿ. ಈ ರಾಜ್ಯದ ಜನ ಭೇಷ್ ಅದರಲ್ಲಿ ಯಾವುದೇ ವಿಧವಾದಂತಹ ದ್ವೇಷ, ಈರ್ಷೆ, ಅಸೂಯೆ, ಕೋಮುವಾದ ಮತ್ತು ಧರ್ಮ ಯಾವುದೂ ಇಲ್ಲ. ಮಾನ್ಯ ಯಡಿಯೂರಪ್ಪನವರು ಬಹಳ ವಿಸಾಲವಾದ ಹೃದಯದಿಂದ ತಮ್ಮ ಆಯವ್ಯಯವನ್ನು ಮಂಡಿಸಿದ್ದಾರೆ ಎಂಬ ಒಂದು ದಿಕ್ಕಿಗೆ ಹೋಗುತ್ತಿದ್ದಿರಿ. ನೀವು ಹೋಗಲಿಲ್ಲ. ಎಲ್ಲೋ ಒಂದು ಕಡೆ ಲೋಪವಾಗಿದೆ. ಆ ಜನ ನಿಮ್ಮಿಂದ ನಿರೀಕ್ಷೆ ಮಾಡುತ್ತಿದ್ದರು. ಈ ರಾಜ್ಯ ಇರುವುದು ಕೇವಲ ಯಾವುದೋ ಒಂದು ವರ್ಗದ ಗುಂಪಿನ ರಾಜಕಾರಣ ಅಲ್ಲ. ಈ ಮಠಗಳಿಗೆ ಅನುದಾನವನ್ನು ಕೊಡಬೇಕು ಕೊಡಬಾರದು ಎನ್ನತಕ್ಕಂಥದ್ದರ ಬಗ್ಗೆ ನೀವೇ ಜಿಜಾಸೆ ತಂದವರು. ಯವ ಮಠದವರೂ ನಿಮಗೆ ಹಣ ಕೇಳಿರಲಿಲ್ಲ. ಯಾವ ಮಠದವರು ನಮಗೆ ಹಣ ಕೊಡಿ ಎಂದು ಹೇಳಿ ಕೇಳಿರಲಿಲ್ಲ. ಇನ್ನು ಮುಂದೆ ಎಲ್ಲ ಮಠದವರೂ ನಮಗೆ ಹಣ ಕೊಡಿ ಎಂದು ಕೇಳುತ್ತಾರೆ. ನೀವು ಕೊಡಲೇ ಬೇಕಾಗುತ್ತದೆ. ಅಧ್ಯಕ್ಷರೆ, ಏಕೆ ಕೊಡಬೇಕೆಂದರೆ, ಇವತ್ತು ನಾವು ಯಾರು ಏನೇ ಹೇಳಲಿ, ಸಂವಿಧಾನ ಒಂದು ಕಡೆ, ಪ್ರಜಾತಂತರ ವ್ಯವಸ್ಥೆ ಒಂದು ಕಡೆ. ಮತ್ತು ಎಲ್ಲೋ ಒಂದು ಕಡೆ ಯಾರದೋ ಒತ್ತಡಕ್ಕೋ. ಅಭಿಮಾನಕ್ಕೋ, ಎಲ್ಲೋ ಒಂದು ಕಡೆ ಜೋತು ಬಿದ್ದಿದ್ದೇವೆ. ನಾವು ಅದನ್ನು ತಳ್ಳಿ ಹಾಕುವುದಕ್ಕಾಗುವುದಿಲ್ಲ. ಇಡೀ ನಮ್ಮ ರಾಜ್ಯವನ್ನೇ ಒಂದು ಕಡೆ ಜ್ಯೋತಿಷ್ಯದವರು, ಮತ್ತೊಂದು ಕಡೆ ಮಂತ್ರವಾದಿಗಳು ಇನ್ನೊಂದು ಕಡೆ ಶಾಸ್ತ್ರ ಸೂತ್ರಗಳನ್ನು ಹೇಳತಕ್ಕಂತಹವರು, ಮತ್ತೊಂದು ಕಡೆ ಮಾಟ ಮಂತ್ರಗಳನ್ನು ಮಾಡತಕ್ಕಂತಹವು, ಇನ್ನೊಂದು ಕಡೆ ಪೂಜಾರಿಗಳು, ಮತ್ತೊಂದು ಕಡೆ ಮಠಾಧಿಪತಿಗಳು, ನಮ್ಮ ರಾಜ್ಯವನ್ನು

ಹಿಡಿತದಲ್ಲಿಟ್ಟುಕೊಳ್ಳತಕ್ಕಂತಹ ವ್ಯವಸ್ಥೆಗೆ ಹೋಗುತ್ತಿದ್ದಾರೆ ಎನ್ನತಕ್ಕಂತಹ ನೋವು ನನಗೆ ಎಲ್ಲೋ ಒಂದು ಕಡೆ ಕಾಡುತ್ತಿದೆ. ಇದು ಆಗಬಾರದು. ನಾನು ೧೯೬೭ರಿಂದ ಈ ಸದನದಲ್ಲಿ ಸದಸ್ಯನಾಗಿದ್ದೇನೆ. ಇವತ್ತು ನಮ್ಮ ರಾಜ್ಯಕ್ಕೆ ಬಂದಿರತಕ್ಕಂತಹ ಪರಿಸ್ಥಿತಿ ಹೀಗೆಯೇ ಮುಮದುವರೆದರೆ ಪ್ರಜಾತಂತ್ರ ವ್ಯವಸ್ಥೆಗೆ ಅಪಾಯ ಕಾದಿಟ್ಟ ಬುತ್ತಿ. ಆದ್ದರಿಂದ ಎಲ್ಲ ಪಕ್ಷಗಳವರು, ರಾಜಕಾರಣಿಗಳು, ಮುಖ್ಯಮಂತ್ರಿಗಳಾದವರು, ಮಂತ್ರಿಗಳಾದ ವರು, ಈ ಒಂದು ವಿಚಾರದಲ್ಲಿ ದೂರ ಸರಿಯಬೇಕು. ೧೯೬೭ರಿಂದ ಇಲ್ಲಿಯವರೆಗೆ ನಾನು ಬಹಳ ಪ್ರಮಾಣಿಕವಾಗಿ ಇದ್ದೇನೆ. ಪ್ರಚಾರ ಬರಲಿ ಬರದೆ ಇರಲಿ, ನಾನಂತೂ ಇಲ್ಲಿದ್ದೇನೆ. ಒಂದೇ ಸಮನೆ ಹೇಳುತ್ತೇನೆ. ಬಹುಶಃ ಈ ಸದನದಲ್ಲಿ ನಾನು ಮತ್ತು ಇನ್ನೊಂದಿಬ್ಬರು ಹಿರಿಯರಿರ ಬಹುದು. ೧೯೬೭ರಲ್ಲಿ ನಾನು ಇದನ್ನೇ ಮಾತನಾಡಿದ್ದೇನೆ. ನಾನು ವಿಷ ಕುಡಿದು ಪ್ರಚಾರ ತೆಗೆದುಕೊಂಡಿದ್ದೇನೆ. ಮಾನ್ಯ ಯಡಿಯೂರಪ್ಪನವರೆ ನಾನು ನಿಮಗೆ ಕೈ ಎತ್ತಿ ಹೇಳುತ್ತೇನೆ, ವಿಷ ಕುಡಿದು ನಾನು ಇಲ್ಲಿ ಪ್ರಚಾರ ತೆಗೆದುಕೊಂಡಿದ್ದೇನೆ. ಅದರಲ್ಲಿ ಏನು ಬೇರೆ ಮಾತಿಲ್ಲ. ಇಂತಹ ಅನೇಕ ಬಹಳ ಕ್ರಂತಿಕಾರಕವಾದ ವಿಚಾರಗಳನ್ನು ನಾನು ಹೇಳುತ್ತೇನೆ. ಅನೇಕ ಸಲ ಅದು ಹೊರಗಡೆ ಬಂದಿರುವುದಿಲ್ಲ. ಆದರೂ ಚಿಂತೆ ಇಲ್ಲ. ಮುಂದಿನ ಪೀಳಿಗೆ ಅದನ್ನು ಪುಸ್ತಕದಲ್ಲಿ ನೋಡಿಕೊಂಡು ಓದಲಿ. ನಾನೇನು ಅದಕ್ಕೆ ತಲೆ ಕೆಡಿಸಿಕೊಂಡಿಲ್ಲ. ನಾನು ಈ ಮಾತನ್ನು ಅತ್ಯಂತ ಜವಾಬ್ದಾರಿಯಿಂದ ಹೇಳುತ್ತಿದ್ದೇನೆ. ರಾಜ್ಯವನ್ನಾಳತಕ್ಕಂತಹವರು, ರಾಜ್ಯವನ್ನು ನಡೆಸತಕ್ಕಂತಹ ವರು, ಈ ಒಂದು ಪದ್ಧತಿಗೆ ಸಲುಕಿದರೆ, ಈ ವ್ಯವಸ್ಥೆಗಳಿಗೆ ಗುಲಾಮರಾದರೆ, ಈ ವ್ಯವಸ್ಥೆಗಳಿಗೆ ತಲೆ ಒಡ್ಡಿದರೆ, ರಾಜ್ಯ ಅರಾಜಕತೆ ಆಗುತ್ತದೆ. ಈ ರಾಜ್ಯಕ್ಕೆ ಒಳ್ಳೆಯದಾಗುವುದಿಲ್ಲ. ಒಳ್ಳೆಯ ಸೂಚನೆ ಬರುವುದಿಲ್ಲ. ಇದು ನಾನು ಅತ್ಯಂತ ಪ್ರಮಾಣಿಕವಾಗಿ ಹೇಳುತ್ತಿದ್ದೇನೆ. ಎಷ್ಟೇ ದೊಡ್ಡವರಾಗಿರಲಿ, ಏನೇ ಇರಲಿ, ಅವರವರ ವ್ಯಕ್ತಿತ್ವದಂತೆ ಇರಬೇಕು. ಈ ರಾಜ್ಯ ಹಾಳಾಗುತ್ತಿದೆ. ರಾಜಕಾರಣ ಕೆಡುತ್ತಿದೆ. ಈ ದೇಶದ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನ್ಯಾಯಾಲಯಗಳು ಕೆಡುತಿವೆ. ರಾಜಕಾರಣ ಕೆಡುತ್ತಿದೆ. ಶಾಸಖಾಂಗ ಕೆಡುತ್ತಿದೆ. ಪತ್ರಿಕಾ ರಂಗ ಎಲ್ಲ ಕೆಟ್ಟು ಹೋಗಿದೆ. ಕೆಟ್ಟು ನಾರಿ ಕೊಳೆಯು

ತ್ತಿದೆ. ನಾವು ಇದನ್ನು ಸರಿಪಡಿಸತಕ್ಕಂಥದ್ದು ಈ ರಾಜ್ಯದ ಜವಾಬ್ದಾರಿ. ರಾಜಕಾರಿಣಿಗಳ ಜವಾಬ್ದಾರಿ. ಸಮಗ್ರ ರಾಜ್ಯದ ಜವಾಬ್ದಾರಿ. ನಾವು ಜವಾಬ್ದಾರಿಯಿಂದ ನುಣುಚಿಕೋಮಡು ಒಳಗಡೆ ಹೋಗುವುದಾದರೆ, ಅಪರಾಧ ಮಾಡಿದ ಹಾಗಾಗುತ್ತದೆ. ಈ ರಾಜ್ಯದ ಜನತೆಗೆ ಅಪರಾಧ ಮಾಡಿದ ಹಾಗಾಗುತ್ತದೆ. ಮಾನ್ಯ ಅಧ್ಯಕ್ಷರೆ ನಾನು ತಮಗೆ ಹೇಳುತ್ತೇನೆ, ಇತ್ತೀಚಿನ ಚುನಾವಣೆಗಳು, ಇತ್ತೀಚಿನ ವ್ಯವಸ್ಥೆಳು ಇವುಗಳನ್ನೆಲ್ಲಾ ನೋಡಿದಾಗ ಇನ್ನು ಮುಂದೆ ಚುನಾವಣೆಗಳಿಗೆ ತತ್ವ ಸಿದ್ಧಾಂತಗಳಿಲ್ಲ. ನೀತಿ ನಿರೂಪಣೆಗಳು ಇಲ್ಲ. ಇನ್ನೇನಿದ್ದರೂ ಚಾಕು, ಭಯೋತ್ಪಾದನೆ, ಹಣ– ಇದು ಇದ್ದರೆ ಮಾತ್ರ ಚುನಾವಣೆ ; ಇದು ಇದ್ದರೆ ಮಾತ್ರ ಮೈತ್ರಿ ಇಲ್ಲದಿದ್ದರೆ ಇಲ್ಲ. ಚಾಮುಂಡೇಶ್ವರಿ ಚುನಾವಣೆ ನೋಡಿದಾಗ ನನಗೆ ಬಹಳ ಭೀತಿ; ಎಲ್ಲೋ ಒಂದು ಕಡೆ ಮುಮದೆ ಏನಾಗುತ್ತೇವೆ ಎನ್ನತಕ್ಕಂತಹ ಚಿಂತನೆ. ಇದೆಲ್ಲಾ ಆಯಿತು, ಇನ್ನು ಮುಂದೆ, ನನಗನ್ನಿಸುತ್ತದೆ.. ಮುಖ್ಯ ಮಂತ್ರಿಗಳಾಗಬೇಕಾದರೆ ಏನೇ ತತ್ವ ಸಿದ್ಧಾಂತಗಳು ಬೇಕಾಗಿಲ್ಲ. ೫೦೦ ಕೋಟಿ, ಸಾವಿರ ಕೋಟಿ ರೂಪಾಯಿ ಇದ್ದರೆ ಮುಖ್ಯ ಮಂತ್ರಿ. ಮತ್ತು ಕೆಲವು ಶಾಸಕ ಕ್ಷೇತ್ರಗಳು ಹರಾಜು. ಕೆಲವರು ಬರುತ್ತಾರೆ, ಬಳ್ಳಾರಿ ಕಡೆಯವರು ಕೆಲವರು ಬರುತ್ತಾರೆ. ಇಷ್ಟಿಷ್ಟು ಏರಿಯಾ ನಮಗೆ ಬಿಟ್ಟು ಬಿಡಿ ನಾವು ಗೆಲ್ಲಿಸಿಕೊಂಡು ಬರುತ್ತೇವೆ ನೀವು ತಲೆ ಕೆಡಿಸಿ ಕೊಳ್ಳಬೇಡ ಎಂದು ಹೇಳುವುದು. ಇನ್ನು ಆ ಕ್ಷೇತ್ರಗಳು ಹರಾಜು ಆಗುತ್ತವೆ. ಅದರಲ್ಲಿ ಏನು ಬೇರೆ ಮಾತಿಲ್ಲ. ಹರಾಜಿಗೆ ನಾವು ತಯಾರಾಗಿರ ಬೇಕು. ಸಾರಾಯಿ ಅಂಗಡಿಗಳು ವರ್ಷಕ್ಕೆ ಇಷ್ಟು ಹರಾಜಾಗುತ್ತವಲ್ಲ ಹಾಗೆ ಜರಾಜಿನಲ್ಲಿ ಕೊಂಡುಕೊಳ್ಳತಕ್ಕಂತಹ ಜನ ಇವತ್ತು ತಯಾರಾಗಿದ್ದಾರೆ. ಮಾನ್ಯ ಪ್ರಕಾಶ್ ರವರೆ, ನಾನು ಕೈ ಮುಗಿದು ಹೇಳುತ್ತಿದ್ದೇನೆ. ತಾವು ಅನ್ಯಥಾ ಭಾವಿಸಬಾರದು. ತಾವು ಹಿರಿಯರು. ಇನ್ನು ಮುಂದೆ ಮುಂದಿನ ಸಾಲಿಗೆ ಬರುತ್ತೀರಿ. ಅದರಲ್ಲಿ ನನ್ನದೇನು ಅಭ್ಯಂತರವಿಲ್ಲ. ನಾವೂ ಬರುತ್ತೇವೆ. ಬರುವುದಿಲ್ಲವೆಂದು ಅಲ್ಲ. ಯಾವ ಯಾವ ಪಕ್ಷಗಳು ಇನ್ನು ಮುಂದೆ ಇಲ್ಲಿ ಬರುತ್ತದೆ ಎಂದು ಗೊತ್ತಿಲ್ಲ. ಲಾಂಗ್ ಪಕ್ಷಗಳು ಇಲ್ಲಿ ಅಧಿಕಾರಕ್ಕೆ ಬಂದರೂ ಬರಬಹುದು. ಅದರಲ್ಲೇನು ಅನುಮಾನ ಪಡಬೇಕಾಗಿಲ್ಲ.

ಯಾವ ಪರಿಸ್ಥಿತಿ ಬರುತ್ತದೋ ಹೇಳುವುದಕ್ಕಾಗುವುದಿಲ್ಲ. ಆದ್ದರಿಂದ ನನಗನ್ನಿಸುತ್ತದೆ, ನಾವು ಪ್ರಜಾ ತಂತ್ರ ವ್ಯವಸ್ಥೆಯಲ್ಲಿ ಎಲ್ಲೋ ಒಂದು ಕಡೆ ಪರಿಣಾಮಕಾರಿಯಾಗಿ ಆತ್ಮಶೋಧನೆ ಮಾಡಿಕೊಳ್ಳಬೇಕು. ಅಧಿಕಾರಿಗಳು ತೀವ್ರ ಕೆಟ್ಟು, ಕುಲಗೆಟ್ಟು ನಾರುತ್ತಿದ್ದಾರೆ. ಅವರ ಆಸ್ತಿಯ ಸಮಗ್ರ ತನಿಖೆ ಆಗಬೇಕು ಒಳ್ಳೆಯ ಅಧಿಕಾರಿಗಳು ಎಲ್ಲೋ ಒಂದಿಬ್ಬರು ನಾಲ್ಕು ಜನ, ಐದು ಜನ, ೧೦ ಜನ ಬೆರಳಿಣಿಕೆಯಷ್ಟು ಇರಬಹುದು. ನಿವೃತತಿಯಾಗಿರ ತಕ್ಕಂತಹ ಅಧಿಕಾರಿಗಳು ಈಗಿರತಕ್ಕಂತಹವರು ಕೆಲವು ಅಧಿಕಾರಿಗಳ ಸಮಗ್ರ ಆಸ್ತಿಯನ್ನು ತನಿಖೆ ಮಾಡತಕ್ಕಂತಹ ತಾಕತ್ತು ಗಂಡಸುತನ ಮತ್ತು ಚಿಂತನೆ ಯಾರಿಗಾದರೂ ಇದ್ದರೆ, ಅದನ್ನು ನೀವು ಮಾಡುವುದಾದರೆ ಮಾಡಿ. ಎಷ್ಟು ಬೇಕಾದರೂ ನೋಡಿ, ಎಲ್ಲೆಲ್ಲಿ ಆಸ್ತಿ ಮಾಡಿದ್ದಾರೆಂದು ನಾನು ಹೇಳುತ್ತೇನೆ. ಎಲ್ಲೆಲ್ಲಿ ಇಟ್ಟಿದ್ದಾರೆ, ಎಲ್ಲೆಲ್ಲಿ ಹೋಗಿದ್ದಾರೆ, ಏನೇನು ಮಾಡಿದ್ದಾರೆ, ಇದರ ಬಗ್ಗೆ ಸಮಗ್ರವಾಗಿ ವಿಚಾರಣೆ ಆಗಬೇಕಾಗಿದೆ. ಇದರಲ್ಲಿ ಯಾರೂ ಹಿಂದೆ ಬರತಕ್ಕಂಥದ್ದು ಅಲ್ಲ. ಮತ್ತು ಕೆಲವು ರಾಜಕಾರಿಣಿಗಳ ಸಮಗ್ರ ತನಿಖೆ ಆಗಬೇಕು. ಇದೇನು ಸಾಮಾನ್ಯವಾದ ತನಿಖೆ ಅಲ್ಲ. ಅತ್ಯನ್ನತವಾದ ತನಿಖೆ ಆಗಬೇಕು. ಕೇವಲ ನಮ್ಮ ರಾಜ್ಯದಲ್ಲಲ್ಲ ಇಡೀ ದೇಶದಲ್ಲಿ ತನಿಖೆ ಆಗಬೇಕು. ನಾನು ಎಲ್ಲೋ ಒಂದು ಕಡೆ ನೋಡಿದೆ, ಉತ್ತರ ಪ್ರದೇಶದಲ್ಲಿ ಒಬ್ಬ ಮಾಜಿ ಮುಖ್ಯ ಮಂತ್ರಿಯ ಆಸ್ತಿ ಮೂರುವರೆಸಾವಿರ ಕೋಟಿ ರೂಪಾಯಿ ಅಷ್ಟು ಇದೆ. ಈ ದೇಶದಲ್ಲಿ ಏನೇನಾಗಬಹುದು, ಈ ದೇಶದ ಪರಿಸ್ಥಿತಿ ಎಲ್ಲಿಗೆ ತಲುಪುತ್ತದೆ ಎನ್ನ ತಕ್ಕಂತಹ ಮಾತನ್ನು ನಾನು ಅತ್ಯಂತ ನೋವಿನಿಂದ ಹೇಳುತ್ತಿದ್ದೇನೆ, ಇದರ ಬಗ್ಗೆ ಯಾರೂ ಚಿಂತನೆ ಮಾಡುತ್ತಿಲ್ಲ. ಚುನಾವಣೆ ಕಾಯಿದೆ ಸಮಗ್ರವಾಗಿ ಬದಲಾವಣೆ ಆಗದೇ ಇದ್ದರೆ, ನನಗನ್ನಿಸುತ್ತದೆ, ಶ್ರೀಮಾನ್ ಸಿದ್ದರಾಮಯ್ಯನವರ ಕಾಲದಲ್ಲಿ ಚಾಮುಂಡೇಶ್ವರಿಯಲ್ಲಿ ನಡೆದಂತಹ ಚುನಾವಣೆ ನಾನು ಯಾವ ಪಕ್ಷದ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಆ ಚುನಾವಣೆಯ ಸಮಯದಲ್ಲಿ ಎರಡೂ ಪಕ್ಷಗಳ ನಡುವೆ ನಡೆದಂತಹ ಆ ರಣರಂಗದ ವಾತಾವರಣ ನೋಡಿದಾಗ ಮುಂದಿನ ಚುನಾವಣೆ ಪರಿಸ್ಥಿತಿ ಏನಾಗಬಹುದು ಎನ್ನತಕ್ಕಂತಹ ಚಿಂತನೆ ನನಗೆ ಬಹಳ

ಕಾಡುತ್ತಿದೆ. ಆ ರೀತಿ ಮುಂದುವರೆಯುವುದಾದರೆ ಈ ದೇಶದಲ್ಲಿ ಯಾರೂ ಉಳಿಯುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕಂತಹ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ಕೆಲವು ವಿಚಾರಗಳನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಂಜುಂಡಪ್ಪ ವರದಿ ಬಗ್ಗೆ ನಾವು ಇಲ್ಲಿ ಮೊಸಳೆ ಕಣ್ಣೀರನ್ನು ಹಾಕುತ್ತಿದ್ದೇವೆ. ನಂಜುಂಡಪ್ಪ ವರದಿ ಇದು ಬರಿ ಮಾತು. ಇದರಲ್ಲಿ ಪ್ರಾಮಾಣಿಕತೆ ಇಲ್ಲ. ಉತ್ತರ ಕರ್ನಾಟಕದ ಜನ ಏನು ೧೯೫೬ ರಲ್ಲಿ ಏಕೀಕರಣವಾಯಿತು, ಕರ್ನಾಟಕಕ್ಕೆ ಬಂದರು ಅವರನ್ನು ನಾವು ಗುಲಾಮರ ರೀತಿಯಲ್ಲಿ ಕಂಡಿದ್ದೇವೆ. ಒಡಗಿನ ಜನರನ್ನು ಕಡೆಗಾಣಿಸಿದ್ದೇವೆ. ಕೊಡಗಿನ ಜನರನ್ನು ಕಾಲ ಕಸಕ್ಕಿಂತ ಕಡೆಯಾಗಿ ಕಂಡಿದ್ದೇವೆ. ಮತ್ತು ಉತ್ತರ ಕರ್ನಾಟಕದ ಸಮಗ್ರ ಜಿಲ್ಲೆಗಳನ್ನು ಕಡೆಗಾಣಿಸಿದ್ದೇವೆ. ಗಡಿನಾಡು ಗಳನ್ನು ಸಂಪೂರ್ಣವಾಗಿ ಕಡೆಗಾಣಿಸಿದ್ದೇವೆ. ನಿಮ್ಮ ಸುವರ್ಣ ಕರ್ನಾಟಕದ ಕಲ್ಪನೆ ಏನು ? ೫೦ ವರ್ಷ ಎಂದರೆ, ಈ ೫೦ ವರ್ಷಗಳಲ್ಲಿ ರಾಜ್ಯ ಎಷ್ಟು ನೋವನ್ನು ಅನುಭವಿಸಿದೆ? ಒಂದು ಕಡೆ ಹೈದರಾಬಾದ್ ಕರ್ನಾಟಕ ಮತ್ತೊಂದು ಕಡೆ ಉತ್ತರ ಕರ್ನಾಟಕ, ಇನ್ನೊಂದು ಕಡೆ ಕೊಡಗು ಮತ್ತು ಕೋಲಾರ ಇದು ದೃಷ್ಟಿಯಲ್ಲಿರುವಾಗ ಸಮಾನತೆ ಎನ್ನತಕ್ಕಂಥದ್ದು ಎಲ್ಲಿದೆ ? ೫೦ ವರ್ಷ ಸಮಾನತೆ ಇಲ್ಲ. ನಾನು ಇವತ್ತು ಹೇಳುತ್ತಿದ್ದೇನೆ. ಉತ್ತರ ಕರ್ನಾಟಕದ ಸಮಗ್ರ ಜನತೆಗೆ ಈ ಒಂದು ವೇದಿಕೆಯಲ್ಲಿ ಹೇಳುತ್ತಿದ್ದೇನೆ. ಮೇ, ಜೂನ್ ತಿಂಗಳ ನಂತರ ತೆಲಂಗಾಣ ಚಳುವಳಿ ರೂಪದಲ್ಲಿ ಹೊರಡುತ್ತೇವೆ. ಇದನ್ನು ನಾನು ಸರ್ಕಾರಕ್ಕೆ ಎಚ್ಚರಿಕೆ ಕೊಡುತ್ತಿದೇನೆ.

ಸರ್ಕಾರದವರಾದ ನೀವು ಎಚ್ಚರ ಮಾಡಲಿಲ್ಲವೆಂದರೆ ನಾನೇ ಬೀದಿಗೆ ಹೋಗುತ್ತೆನೆ. ಉತ್ತರ ಕರ್ನಾಟಕದ ಬೀದಿ ಬೀದಿಗೆ ಹೋಗುತ್ತೇನೆ. ವಿದ್ಯಾರ್ಥಿಗಳು, ಕಾರ್ಮಿಕರು ಮತ್ತು ಎಲ್ಲ ವರ್ಗದ ಜನ ಉತ್ತರ ಕರ್ನಾಟಕದ ಸಮಗ್ರ ಅಭಿವೃದ್ಧಿಗೆ ಹೋರಾಟ ಮಾಡತಕ್ಕಂಥ ಪರಿಸ್ಥಿತಿ ಬರುತ್ತದೆ. ಡಾ: ನಂಜುಂಡಪ್ಪ ವರದಿ ಇರುವಾಗ ಇವೊತ್ತು ಮಾನ್ಯ ಯಡಿಯೂರಪ್ಪನವರು ಉತ್ತರ ಕರ್ನಾಟಕದ ಅಭಿವೃದ್ಧಿಗೆ ಕೊಟ್ಟಿರುವ ಹಣ ಸಾಕಾಗುವುದಿಲ್ಲ. ನಿಮಗೆ ಈ ಬಗ್ಗೆ ಕಾಳಜಿ ಇಲ್ಲವೆಂದು ನಾನು ಹೇಳು ವುದಿಲ್ಲ. ಆದರೆ ನೀವು ಇನ್ನೂ ಹೆಚ್ಚು ಕಾಲಜಿಯಿಂದ ಇದನ್ನು

ಮಾಡಬೇಕಾದದ್ದು ನಿಮ್ಮ ಕರ್ತವ್ಯವಾಗಿದೆ. ರಾಮನಗರ ಪಟ್ಟಣವನ್ನು ನೀವು ಆರೋಗ್ಯ ನಗರವೆಂದು ಮಾಡಿದಿರಿ. ರಾಮನಗರ ಈ ಮೊದಲು ಅನಾರೋಗ್ಯವಾಗಿತ್ತ ? ಅಲ್ಲಿರುವವರಿಗೆಲ್ಲಾ ರೋಗವಿತ್ತೇನು ? ರಾಮನಗರಕ್ಕೆ ಆರೋಗ್ಯನಗರವೆಂದು ಏಕೆ ಹೆಸರಿಡಬೇಕಾಗಿತ್ತು? ರಾಮನಗರವೆಂದೇ ಇಟ್ಟುಕೊಳ್ಳಿ. ಬೇಕಾದರೆ ನೀವು ಅಲ್ಲಿಗೆ ಒಂದು ಮೆಡಿಕಲ್ ಕಾಲೇಜನ್ನು ಕೊಟ್ಟುಕೊಳ್ಳಿ. ಆಸ್ಪತ್ರೆ ಕೊಟ್ಟುಕೊಳ್ಳಿ. ಆದರೆ ನನಗನ್ನಿಸುತ್ತದೆ, ಬೆಂಗಳೂರು, ಪಕ್ಕದಲ್ಲಿಯೇ ಮುಖ್ಯಮಂತ್ರಿಗಳು ಗೆದ್ದಿರತಕ್ಕಂಥ ಕ್ಷೇತ್ರವೆಂದು ಹೇಳಿ ರಾಮನಗರಕ್ಕೆ ನೀವು ಎಲ್ಲ ಸವಲತ್ತುಗಳನ್ನು ಕೊಡುವುದು ಹೌದು ತಾನೆ? ಇದು ಯವ ರೀತಿ. ನೀವೇ ಇದರ ಬಗ್ಗೆ ಹೇಳಿ. ನಮ್ಮ ರಾಜ್ಯದಲ್ಲಿ ರಾಮನಗರ ಬಿಟ್ಟರೆ ಮಿಕ್ಕ ಎಲ್ಲ ನಗರಗಲು ರೋಗಗ್ರಸ್ಥ ನಗರಗಳೆ ? ಮಿಕ್ಕ ನಗರಗಳಿಗೆ ಕಾಲರ, ಪ್ಲೇಗ್ ಗಳು ಬಂದಿದೆಯೇ ? ಏನಾಗಿದೆ ? ಸಾಮಾನ್ಯ ಜನರು ಈ ಬಗ್ಗೆ ನಿಮ್ಮನ್ನು ಕೇಳುತ್ತಾರೆ ಎಂಉದ ನಿಮಗನ್ನಿಸಲಿಲ್ಲವೆ ? ಅದರ ಬಗ್ಗೆ ನೀವು ಚಿಂತನೆಯನ್ನು ಮಾಡಬೇಕು. ಇನ್ನು ಶಿವಮೊಗ್ಗಕ್ಕೆ ಬಂಪರ್, ನಾವು ಇರುವಾಗ ಮಾಡಿಬಿಡೋಣ, ಮುಂದೆ ಏನಾಗುತ್ತದೋ, ಏನೋ, ಎಂದು ಒಟ್ಟು ೧೩ ಕಾರ್ಯಕ್ರಮಗಳನ್ನು ಅಲ್ಲಿಗೆ ಹಾಕಿದ್ದೀರಿ. ಒಂದು ಕಡೆ ಮಾನ್ಯ ಶಂಕರಮೂರ್ತಿ, ಒಂದು ಕಡೆ ಮಾನ್ಯ ಈಶ್ವರಪ್ಪ, ಮತ್ತೊಂದು ಕಡೆ ಮಾನ್ಯ ಯಡಿಯೂರಪ್ಪ. ಈ ತ್ರಿಮೂರ್ತಿಗಳೇ ಇಡೀ ಶಿವಮೊಗ್ಗ ಜಿಲ್ಲೆ ಮತ್ತು ಕರ್ನಾಟಕ ರಾಜ್ಯ ಎಂಬಂತಾಗಿದೆ. ಕರ್ನಾಟಕ ಎಂದರೆ ಶಿವಮೊಗ್ಗ. ಶಿವಮೊಗ್ಗ ಎಂದರೆ ಕರ್ನಾಟಕ. ಈ ರೀತಿ ತಾವು ತೀರ್ಮಾನಕ್ಕೆ ಬಂದು ಬಿಟ್ಟಿದದೀರೆಂದು ಕಾಣುತ್ತಿದೆ. ಭೇಷ್ ಮಾಡಿ. ಈ ತರಹ ಆದರೆ ರಾಜ್ಯದ ಜನತೆ ಎಲ್ಲೋ ಒಂದು ಕಡೆ ನಿಮ್ಮ ಬಗ್ಗೆ ನಂಬಿಕೆ ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ನಂಬಿಕೆಯನ್ನು ಖಂಡಿತ ಇಟ್ಟುಕೊಳ್ಳುವು ದಕ್ಕೆ ಆಗುವುದಿಲ್ಲ. ಇನ್ನೊಂದು ವಿಷಯ, ನೀವು ಮಸಾಜ್ ಪಾರ್ಲರ್ ಗೆ ಏಕೆ ತೆರಿಗೆಯನ್ನು ಹಾಕಿದಿರಿ? ನೀವು ಒಂದು ಕಡೆ ಹೇಳುತ್ತೀರಿ ಸಂಧ್ಯಾರಾಗವೆಂದು. ಇನ್ನೊಂದು ಕಡೆ ಮಸಾಜ್ ಪಾರ್ಲರ್ ಗೆ ತೆರಿಗೆ ಹಾಕುತ್ತೀರಿ. ಇದಕ್ಕೆ ತೆರಿಗೆ ಹಾಕಲು ನಿಮಗೆ ಹೇಳಿದವರ್ಯಾರು ? ಯಾರೋ ಪಾಪ ಹೊಟ್ಟೆಗಿಟ್ಟೆ ಜಾತಿ ಬಂದಿರುವವರು ಎಣ್ಣೆ ತಿಕ್ಕಿಸಿಕೊಳ್ಳುವುದಕ್ಕೆ

ಹೋದರೆ ಅವರಿಗೂ ನೀವು ತೆರಿಗೆ ಹಾಕಬೇಕೆ ? ಯಾರು ಹೇಳಿದವರು ನಿಮಗೆ ತೆರಿಗೆ ಹಾಕಬೇಕೆಂದು ? ನಮ್ಮಲ್ಲಿ ಬಹುತೇಕ ಶಾಸಕರು ಹೊಟ್ಟೆ ಬಂದಿರುವವರು ಇದ್ದಾರೆ. ಅವರು ಎಣ್ಣೆಗಿಣ್ಣೆ ತಿಕ್ಕಿಸಿಕೊಳ್ಳುವುದಕ್ಕೆ ಹೋದರೆ ತೆರಿಗೆ ಹಾಕುವುದೆ? ನೀವು ಮಾಡಿರುವುದು ಸರಿಯಾದ ಕ್ರಮವಲ್ಲ. ಇನ್ನು ನೀವು ನಾಟಕಗಳ ಮೇಲೆ ತೆರಿಗೆ ವಿನಾಯಿತಿ ಎಂದಿದ್ದೀರಿ. ಈಗ ನಾಟಕ ಕಂಪನಿಗಳೇ ಇಲ್ಲ. ಹೀಗಿರುವಾಗ ಯಾರ ಮೇಲೆ ತೆರಿಗೆ ವಿನಾಯಿತಿ ? ನಮ್ಮ ರಾಜ್ಯದಲ್ಲಿ ನೀವುಗಳೇನಾದರೂ ನಾಟಕವನ್ನು, ವೃತತಿರಂಗಭೂಮಿ ಯನ್ನು ಮತ್ತೆ ಪುನರುದ್ಧಾರ ಮಾಡುವುದಾದರೆ, ಹೊಸ ಯೋಜನೆ ಮಾಡುವುದಾದರೆ, ಕಾರ್ಯಕ್ರಮ ಹಾಕುವುದಾದರೆ, ನಾನು ಒಪ್ಪುತ್ತಿದ್ದೆ. ಗುಬ್ಬಿ ವೀರಣ್ಣ, ಹಿರಣ್ಣಯ್ಯ, ಕೆ.ಬಿ.ಆರ್. ನಾಟಕ, ಇಂಥ ಅನೇಕ ನಾಟಕ ಕಂಪನಿಗಳನ್ನು ಮತ್ತೆ ತರುತ್ತೇವೆ, ಇವುಗಳಿಗಾಗಿ ವರ್ಷಕ್ಕೆ ಇಷ್ಟು ಹಣ ಕೊಡುತ್ತೇವೆ ಎಂದು ಹೇಳಿದ್ದರೆ ಸಂತೋಷವಾಗುತ್ತಿತ್ತು. ಅದನ್ನು ಬಿಟ್ಟು ಇದ್ಯಾವುದನ್ನೋ ಹೇಳಿದ್ದೀರಿ. ಹಳ್ಳಿ ನಾಟಕದ ಮೇಸ್ಟ್ರನ್ನು ನೀವು ನೋಡಿದ್ದೀರ ? ಲಕಾರ್‌ಮುನಿ ಎಂದು ಹೇಳುತ್ತೇವೆ. ನೀವೆಲ್ಲರೂ ನಾಟಕವನ್ನು ನೋಡಲು ಹೋಗಿರುತ್ತೀರಿ ಎಂದು ಕೊಳ್ಳುತ್ತೇನೆ. ಅವರುಗಳ ಬಗ್ಗೆ ಕರುಣೆ ಇರಬೇಕು. ಇವರು ಆರು ತಿಂಗಳಿಗೊಮ್ಮೆ ನಾಟಕವಾಡುತ್ತಾರೆ. ಮಾನ್ಯ ಸಿದ್ಧರಾಮಯ್ಯರವರೆ, ನಿಮಗೆ ಗೊತ್ತಿರಬೇಕು. ಹಳ್ಳಿಯಲ್ಲಿ ಆರು ತಿಂಗಳಿಗೊಮ್ಮೆ ನಾಟಕ. ಅವರ ಪರಿಸ್ಥಿತಿ, ಅವರ ಪಾಡು ಬಹಳ ಅತ್ಯಂತ ಹೀನಾಯ.

ಶ್ರೀ ಎನ್.ಚಲುವರಾಯಸ್ವಾಮಿ : ಮಾಗಡಿಯಲ್ಲಿ ನಾಟಕ ಬಹಳ ಫೇಮಸ್.

ಶ್ರೀ ವಾಟಾಳ್ ನಾಗರಾಜ್ : ಮಾಗಡಿ ಒಂದೇ ಅಲ್ಲ. ಎಲ್ಲ ಕಡೆಯಲ್ಲೂ ಇದೆ. ಮಾಗಡಿ, ನಾಗಮಂಗಲ, ನಮ್ಮೂರು ಮತ್ತು ಎಲ್ಲಾ ಕಡೆಯಲ್ಲೂ ಇದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ವಾಟಾಳ್ ರವರೆ, ಒಂದ್ನಿಮಿಷ, ಸಾರ್ ಪ್ರಕಾಶ್ ರವರೆ, ಪ್ರಸನ್ನರವರು ಸ್ಟ್ರೈಕ್ ಮಾಡಿದ ದಿವಸ

ತಾವು ಮತ್ತು ಮುಖ್ಯಮಂತ್ರಿಗಳಿರುವಾಗ ಜೊತೆಯಲ್ಲಿ ನಾನೂ ಇದ್ದೆ. ತಾವು ಅಂದು ಅಶ್ಯೂರೆನ್ಸ್ ಕೊಟ್ಟಿರಿ. ಶಾಲೆಗಳಲ್ಲಿ ನಾಟಕ ಕಲೆಯನ್ನು ಜೀವಂತ ಮಾಡುತ್ತೇವೆ ; ೫೮, ೬೦ ಟೀಚರ್ಸ್‌ಗಳನ್ನು ಅಪಾಯಿಂಟ್ ಮಾಡುತ್ತೇವೆ, ಅದನ್ನು extra-curricular activity ಯನ್ನಾಗಿ ಮಾಡುತ್ತೇವೆಂದು ಹೇಳಿದ್ದಿರಿ. ಆದರೆ ಅದರ ಬಗ್ಗೆ ಈ ಬಜೆಟ್ ನಲ್ಲಿ ಪ್ರಸ್ತಾಪವನ್ನೇ ಮಾಡಿಲ್ಲ. ಮುಖ್ಯಮಂತ್ರಿಗಳು ಮತ್ತು ತಾವು ಹೋಗಿ ಸ್ಟ್ರೈಕ್ ಮಾಡುವವರನ್ನು ಏಳಿಸಿ, ಭರವಸೆ ಕೊಟ್ಟಿದ್ದೀರಿ. ತಾವು ಸ್ವಲ್ಪ ಏನಾದರೂ ಮಾಡಬೇಕು.

ಶ್ರೀ ಎಂ.ಪಿ. ಪ್ರಕಾಶ್ : ತಮಗೂ ಕೂಡ ಗೊತ್ತಿದೆ. ಮಾನ್ಯ ಹೊರಟ್ಟಿಯವರು ಸುದೈವದಿಂದ ಕೆಳಮನೆಗೂ ಬಂದಿದ್ದಾರೆ. ಅವೊತ್ತು ೫೨ ಸ್ಯಾಂಕ್ಷನ್ಡ್ ಪೋಸ್ಟ್ ಗಳಿವೆ, ಆ ಸ್ಯಾಂಕ್ಷನ್ಡ್ ಪೋಸ್ಟ್ ನಲ್ಲಿ ಅವರು ಯಾರನ್ನೂ ಭರ್ತಿ ಮಾಡದೇ, ಕಡಿಮೆ ಮಾಡುತ್ತಾ ಮಾಡುತ್ತಾ ಕೇವಲ ಇಬ್ಬರೋ ನಾಲ್ಕು ಮಂದಿಯೋ ಮಾತ್ರ ಉಳಿದಿದ್ದರು. ಆ ಕಾರಣಕ್ಕಾಗಿಯೇ ನಾನು ಸರಿಪಡಿಸುತ್ತೇನೆ ಎಂದು ಅವೊತ್ತು ಮಾಡತು ಕೊಟ್ಟಂತೆ ಅವೊತ್ತೇ ಅವರು ಆಜ್ಞೇ ಮಾಡಿದ್ದಾರೆ. ಅದೇನೂ ತೊಂದರೆಯಾಗಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಕ್ರಾಫ್ಟ್ ಪಿರಿಯಡ್ ಬದಲು ಡ್ರಾಮಾ ಪಿರಿಯಡ್ ಇಂಟ್ರಡ್ಯೂಸ್ ಮಾಡುತ್ತೇವೆ ಎಂದು ನೀವು ಹೇಳಿದ್ದಿರಿ.

ಶ್ರೀ ಎಂ. ಪಿ. ಪ್ರಕಾಶ್ : ಹಾಗೆ ಹೇಳಲಿಲ್ಲ. ಆ ಸಂದರ್ಭದಲ್ಲಿ ಹೇಳಿರತಕ್ಕಂಥದ್ದು ಯಾರಿಗೆ ಸಂಗೀತ ಬೇಕು ಅವರು ಸಂಗೀತ ವಿಷಯ ತೆಗೆದುಕೊಳ್ಳಲಿ, ಕ್ರಾಫ್ಟ್ ಬೇಕಾದವರು ಕ್ರಾಫ್ಟ್ ವಿಷಯ ಆಯ್ಕೆ ಮಾಡಿಕೊಳ್ಳಲಿ. ಯಾರಿಗೆ ನಾಟಕದ ಆಸಕ್ತಿ ಇದೆಯೋ ಅವರಿಗೆ ನಾಟಕದ್ದು ವಿಯ ಮಾಡಿಸೋಣ ಎನ್ನತಕ್ಕಂಥ ರೀತಿಯಲ್ಲಿ ಹೇಳಿದ್ದು.

ಶ್ರೀ ಕೆ.ಆರ್.ರಮೇಶ್ ಕುಮಾರ್ : ಮಾನ್ಯ ವಾಟಾಳ್ ರವರು ಹೇಳಿದ್ದು, ಮಾಧುಸ್ವಾಮಿಯವರು ಹೇಳಿದ್ದು ತಮಗೆ ಗೊತ್ತಿದೆ, ನಾನು ಹೇಳಬೇಕೆಂದೇನೂ ಇಲ್ಲ. ಹಳ್ಳಿಗಳಲ್ಲಿ ಯಾವ ಪರಿಸ್ಥಿತಿ ಬಂದು

ಬಿಟ್ಟಿದೆಯೆಂದರೆ ಜಾತ್ರೆ ಎಂದರೆ, ಮದುವೆಯೆಂದರೆ, ಯಾರಾದರೂ ಸತ್ತುಹೋದ ದಿವಸದ್ದನ್ನು ಅಂಥ ದಿವಸ ಎಂದೇ ಮಾಡುತ್ತಾರೆ. ಇವಕ್ಕೆಲ್ಲಾ ಈಗ ರೆಕಾರ್ಡ್ ಡ್ಯಾನ್ಸ್ ಬಂದುಬಿಟ್ಟಿದೆ. ಮೊದಲು ಹರಿಕಥೆಯೋ, ನಾಟಕವೋ ಅಥವಾ ಬೇರೊಂದೋ ಮಾಡುತ್ತಿದ್ದರು. ಅದು ಈಗ ಎಕ್ಸ್ ಟಿಂಕ್ಟ್ ಆಗಿಬಿಉತ್ತಿದೆ. ಅದನ್ನು ಜೀವಂತ ಇಡುವ ಪ್ರಯತ್ನ ಮಾಡಿ. ಈಗ ನಾಟಕದ ಕಂಪನಿಗಳೇ ಇಲ್ಲ. ಹೀಗಿರುವಾಗ ತೆರಿಗೆ ವಿನಾಯಿತಿ ಯಾರಿಗೆ ಕೊಡುತ್ತೀರೆಂದು ಮಾನ್ಯ ವಾಟಾಳ್‌ರವರು ಕೇಳುತ್ತಿದ್ದಾರೆ. ಮಾನ್ಯ ಮಾಧುಸ್ವಾಮಿಯವರು ಕೇಳಿದ್ದೇನೆಂದರೆ ನಿಮ್ಮಿಂದ patronigation. ಅದರಲ್ಲಿ ನೀವು ಸಾಕಷ್ಟು ಅನುಭವ ಹೊಂದಿರತಕ್ಕಂಥವರು, ಆ ಕಲೆ ಜೀವಂತವಾಗಿರಲಿ, ಅದು ಸತ್ತುಹೋಗುವುದು ಬೇಡ, ಮುಂದಿನ ಜನಾಂಗಕ್ಕೆ ಅದು ಸತ್ತುಹೋಗುವುದು ಬೇಡವೆಂದು ಹೇಳಿದ್ದಾರೆ. ಈಗ ತಾವು ಲಂಡನ್ ನಲ್ಲಿ ಷೇಕ್ಸ್ ಪಿಯರ್ ಥೀಯೇಟರ್ ನ್ನು ನೋಡಿದ್ದೀರಿ. ಇಡೀ ಪ್ರಪಂಚ ಒಂದು ಕೆಗೆ ತನ್ನದೇ ಆದ ವೇಗದಲ್ಲಿ ಹೋಗುತ್ತಿದ್ದರೂ ಕೂಡ ಷೇಕ್ಸ್ ಪಿಯರ್ ಥಿಯೇಟರ್ ಮಾತ್ರ ತನ್ನ ಗತವೈಭವವನ್ನು ಕಳೆದುಕೊಂಡೇ ಇಲ್ಲ. ಆ ಗತವೈಭವವನ್ನು ಪ್ರತಿ ದಿವಸ ಸಾರುತ್ತಲೇ ಇದೆ. ಆ ರೀತಿ ಇದು ಆಗಬೇಕೆನ್ನುವುದನ್ನು ಪ್ರಸ್ತಾಪ ಮಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನಾನು ಹೇಳುವುದೇನೆಂದರೆ ಇದು ತಮಗೂ ಗೊತ್ತಿದೆ. ಮಾನ್ಯ ಪ್ರಕಾಶ್ ರವರೆ, ಬಳ್ಳಾರಿಯಲ್ಲಿ ಬಳ್ಳಾರಿ ರಾಘವ ನಾಟಕ ಕಂಪನಿ ಬಗ್ಗೆ ತಮಗೆ ಗೊತ್ತಿದೆ. ತಮಗೆ ಗೊತ್ತಿಲ್ಲವೆಂದು ನಾನು ಹಏಳುವುದಕ್ಕೆ ಹೋಗುವುದಿಲ್ಲ. ಇದಲ್ಲದೇ ತಾವೇ ಪಾತ್ರಧಾರಿ ಗಳಾಗಿ ರಂಗಭೂಮಿಯಲ್ಲಿ ಮಾಡಿದ್ದೀರಿ, ನಾಟಕಗಳನ್ನು ಬರೆದಿದ್ದೀರಿ ಮತ್ತು ನಾಟಕದಲ್ಲಿ ಅಭಿನಯ ಮಾಡಿದ್ದೀರಿ. ಇವೆಲ್ಲವನ್ನು ನಾನು ಒಪ್ಪುತ್ತೇನೆ. ಮಾನ್ಯ ಯಡಿಯೂರಪ್ಪರವರಿಗೆ ನಾನು ಏನು ಹೇಳುತ್ತೇನೆಂದರೆ ಈ ಗ್ರಾಮೀಣ ಪ್ರದೇಶದಲ್ಲಿ ನಾಟಕ ಕಲಿಸತಕ್ಕಂಥ ಮೇಸ್ತ್ರುಗಳ ಪರಿಥಿತಿ ಹೇಗಿರುತ್ತದೆಂದರೆ, ಹಳ್ಳಿಯಲ್ಲಿ ಗೌಡ್ರು ಪಟೇಲರ ಮಗ ಸ್ವಲ್ಪ ಆಧಾರವಾಗಿರುತ್ತಾರೆ. ಹೀಗಿರುವಾಗ ಗೌಡ್ರು ಪಟೇಲರ ಮಗನಿಗೆ ಒಳ್ಳೆಯ ಪಾತ್ರವನ್ನೇ ಕೊಡಬೇಕು. ಕೊಡಲಿಲ್ಲವೆಂದರೆ ಅವರಿಗೆ ಊಟಕ್ಕೂ

ಕರೆಯುವುದಿಲ್ಲ ಮತ್ತು ಬೇರೆ ಏನೂ ವ್ಯವಸ್ಥೆ ಇರುವುದಿಲ್ಲ. ಇದು ಬಹಳ ಸ್ಪಷ್ಟ. ಇದೇ ರೀತಿ ನಮ್ಮಲ್ಲಿ ಎಲ್ಲ ಹಳ್ಳಿಗಳಲ್ಲೂ ನಾಟಕದ ಮೇಸ್ತ್ರಗಳ ಪರಿಸ್ಥಿತಿ ಅತ್ಯಂತ ಗಂಭೀರ ಪರಿಸ್ಥಿತಿ ಇದೆ. ತಾವು ಕನಿಷ್ಟ ಉತ್ತರ ಕೊಡುವಾಗಲಾದರೂ ಹಳ್ಳಿಯ ನಾಟಕದ, ಬಯಲು ನಾಟಕದ ಮೇಸ್ಟ್ರುಗಳಿಗೆ, ಅಂದರೆ ಇವೊತ್ತು ಹಳ್ಳಿಗಳಲ್ಲೇನಾದರೂ ಮಹಾಭಾರತ, ರಾಮಾಯಣ, ಪೌರಣಿಕ, ಪುರಾಣ ಪ್ರಸಿದ್ಧ ಮತ್ತು ಐತಿಹಾಸಿಕ ನಾಟಕಗಳು ಉಳಿದಿದ್ದರೆ ಆ ಮೇಸ್ತ್ರಗಳಿಂದಲೇ. ಒಂದು ನಾಟಕದಿಂದ ಅವರು ಆರು ತಿಂಗಳು ಕಳೆಯುತ್ತಾರೆ. ಒಂದೇ ಒಂದು ನಿದರ್ಶನವನ್ನು ನಿಮಗೆ ನಾನು ಹೇಳುತ್ತೇನೆ. ನಮ್ಮ ಊರಿನ ಹತ್ತಿರ ರಾಮಾಯಣ ನಾಟಕ ಇತ್ತು ರಾಮಾಯಣದಲ್ಲಿ ಕೊನರೆಯ ದೃಶ್ಯ ರಾವಣನದು. ಅವನು ಊರಿನ ಗೌಡರ ಮಗ. ಅವನೇನು ಮಾಡಿದನೆಂದರೆ ಈ ಮೇಸ್ಟ್ರು ಮತ್ತು ನಾಟಕದಲ್ಲಿ ಡ್ರೆಸ್ ಹಾಕುವವರ ಜೊತೆ ದೊಡ್ಡ ಗಲಾಟೆ ಮಾಡಿದ. ನನಗೆ ಮೊದಲೇ ಡ್ರೆಸ್ ಹಾಕಿಬಿಡಬೇಕು ಎಂದು ಗಲಾಟೆ ಮಾಡಿದ. ಸರಿ ಅವರೇನು ಮಾಡಿದರು, ಗೌಡರ ಮಗನಾದ್ದರಿಂದ ಹಾಕಲೇಬೇಕಲ್ಲ ಎಂದು ಮೊದಲೇ ಡ್ರೆಸ್ ಹಾಕಿದು, ತಲೆಗೆ ಕಿರೀಟ ಹಾಕಿದರು, ಹತ್ತು ಕೈ ಜೋಡಿಸಿ ಕಚ್ಚೆಗಿಚ್ಚೆ ಹಾಕಿ ಇಟ್ಟರು. ಆದರೆ ರಾವಣ ಬರುವುದು ಕಡೆಯ ದೃಶ್ಯ. ನಾಟಕ ಶುರುವಾಯಿತು. ನಾಟಕ ಆಡುವುದು ಸಾಮಾನ್ಯವಾಗಿ ಬೇಸಿಗೆ ಕಾಲದಲ್ಲಿ ನಾಟಕ ನಡೆಯುತ್ತಿತ್ತು. ರಾವಣನ ಪಾತ್ರಧಾರಿ ಅಲ್ಲಿ ಇಲ್ಲಿಗೆ ಓಡಾಡಿದ. ಕೊನೆಗೆ ಅವನಿಗಗೆ ಸ್ವಲ್ಪ ಸೆಖೆ ಆದ ಹಾಗಾಯಿತು. ನಾಟಕ ಬಿಟ್ಟು ಹೊರಗಡೆ ಬಂದ ಹೊರಗಡೆ ನಾಟಕ ನೋಡುವುದಕ್ಕೆ ಬಂದವರದ್ದು ಅರ್ಧ ಹುಲ್ಲಿನ ಗಾಡಿ ಇತ್ತು. ರಾವಣನ ಪಾತ್ರಧಾರಿ ಆ ಕಡೆ ಈ ಕಡೆ ನೋಡಿ ಹುಲ್ಲಿನ ಗಾಡಿಯಲ್ಲಿ ಒಂದೆರಡು ನಿಮಿಷ ಮಲಗಿ ಕೊಳ್ಳೋಣವೆಂದುಕೊಂಡು ಆ ಹುಲ್ಲಿನ ಗಾಡಿಯಲ್ಲಿ ಮಲಗಿಕೊಂಡ. ಹಳ್ಳಿ ನಾಟಕ. ಈ ನಾಟಕ ನೋಡುವುದಕ್ಕೆ ಒಳಗೆ ಹೋದವರು ಹೊರಗೆ ಬಂದರು. ಮೇಲೆ ರಾವಣ ಮಲಗಿರುವುದು ಅವರಿಗೆ ಗೊತ್ತಿಲ್ಲ. ಗಾಡಿ ಕಟ್ಟಿಕೊಂಡು ಹೊರಟರು. ರಾವಣ ಮೇಲೆ ಮಲಗಿದ್ದಾನೆ. ಗಾಡಿಯೂ ಹೋಗುತ್ತಿದೆ. ಮುಂದಿನ ಊರು ಕೆರೆಯ ಮೇಲೆ ನೀರು ತುಂಬಿದೆ. ಸ್ವಲ್ಪ

ಚಳಿಯಾಯಿತು, ರಾವಣ ಗಾಬರಿಯಾಗಿ ಎದ್ದ, ರಾವಣ ಎದ್ದ ತಕ್ಷಣ ಎತ್ತುಗಳು ಗಾಬರಿಯಿಂದ ಕೆರೆಗೆ ಬಿದ್ದವು. ರಾವಣ ಕೆರೆಗೆ ಬಿದ್ದ, ರಾವಣನ ತಲೆ ಕೆರೆಗೆ ಬಿತ್ತು. ಇಲ್ಲಿ ಇತ್ತ ಕಡೆ ರಾವಣ ಎಲ್ಲಿ ಹೋದ ಎಂದುಇ ಕೂಗಿಕೊಳ್ಳುತ್ತಿದ್ದಾರೆ. ಅಂದರೆ ಹಳ್ಳಿಗಳಲ್ಲಿ ಇಂಥ ನಾಟಕದ ಪರಿಸ್ಥಿತಿಗಳು ನಡೆದಿರುವುದು ಬೇಕಾದಷ್ಟು ಇದೆ. ಅಂದರೆ ನಾಟಕ ಎನ್ನುವುದು ಜೀವಂತ ಕಲೆ. ಅದರಲ್ಲಿ ವೃತ್ತಿ ರಂಗಭೂಮಿ. ಒಂದು ಕಾಲದಲ್ಲಿ ಬೆಂಗಳೂರು ನಗರದಲ್ಲಿ ಮಹದೇವಸ್ವಾಮಿ, ಸುಬ್ಬಯ್ಯನಾಯ್ಡು, ಹಿರಣ್ಣಯ್ಯ, ಗುಬ್ಬಿವೀರಣ್ಣ ಹೀಗೆ ಬೆಂಗಳೂರಿನ ಸುತ್ತ ನಾಟಕ ಕಂಪನಿಗಳು ಇದ್ದವು. ಕೆ.ಬಿ.ಆರ್. ಡ್ರಾಮಾ ಕಂಪನಿ ಕೂಡ ಇತ್ತು. ಇವೊತ್ತು ಯಾವ ಕಂಪನಿಗಳೂ ಇಲ್ಲ.

ಗುಬ್ಬಿ ವೀರಣ್ಣ ಕಂಪನಿ ತನ್ನ ೯೬ನೇ ವಯಸ್ಸಿನಲ್ಲಿ ಮುಚ್ಚಿಹೋಗುವಂತಹ ಹಂತಕ್ಕೆ ಬಂತು. ಆಗ ಶ್ರೀಮಾನ್ ಡಿ.ಕೆ. ನಾಯಕ್ ರವರು ಇದ್ದರು. ಆಗ ಅವರನ್ನು ಭೇಟಿ ಮಾಡಿಸಿ ನಾಲ್ಕು ವರ್ಷಗಳ ಕಾಲ ಅದಕ್ಕೆ ಹಣ ಕೊಡಿಸಿ ನೂರು ವರ್ಷ ದಾಟಿ ಅದು ಕೊನೆಗೆ ಅಸ್ತಂಗತವಾಯಿತು. ಇವತ್ತು ನಮ್ಮಲ್ಲಿ ನಾಡಕ ಕಂಪನಿಗಳು ಇಲ್ಲ. ನೀವು ವಿಧವೆಯವರಿಗೆ ಯಾವ ರೀತಿ ಕೊಡುತ್ತೀರಿ ಅದೇ ರೀತಿ ನೀವು ಹಳ್ಳಿ ನಾಟಕ ಆಡುವವರಿಗೆ ಸ್ವಲ್ಪ ಕೊಟ್ಟರೆ ಎಷ್ಟೋ ಅನುಕೂಲವಾಗುತ್ತದೆ. ಅದರ ಬಗ್ಗೆ ನೀವು ಚಿಂತನೆ ಮಾಡಬೇಕು ಎಂದು ತಮ್ಮಲ್ಲಿ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ತಾವು packet ಸಾರಾಯಿ ತೆಗೆದಿರಿ. Packet ಸಾರಾಯಿ ಏಕೆ ? ಎಲ್ಲಾ ತೆಗೆದುಬಿಡಿ. ಇಲ್ಲಿರುವವರು ಬಹುತೇಕ ಕುಡಿಯುವವರು, ಹೊರಗೆ ಕುಡಿಯುವವರು, ಒಳಗಡೆ ಕುಡಿಯುವವರು. ಆ ಕಡೆ, ಬಲಗಡೆ, ಕುಡಿಯುವವರು, ಈ ಕಡೆ, ಎಡಗಡೆ ಕುಡಿಯುವವರು, ಈ ರೀತಿ ಏನು ಕುಡಿಯುತ್ತಾರೆ ಅದನ್ನು ಸಂಪೂರ್ಣವಾಗಿ ತೆಗೆದುಬಿಡಿ.

ಶ್ರೀ ಕೆ.ಎಸ್. ರಾಜಣ್ಣ ಕುಡಿಯುವುದನ್ನು ತಪ್ಪಿಸಬೇಕು ಎನ್ನುವ ವಾದವನ್ನು ಎಲ್ಲರೂ ಮಾಡುತ್ತೇವೆ. ಕುಡಿಯುವುದು ನಿನ್ನೆ ಮೊನ್ನೆ ಹುಟ್ಟಿದ್ದಲ್ಲ. ದೇವಾನುದೇವತೆಗಳ ಕಾಲದಿಂದಲೂ ಕೂಡ ಕುಡಯುತ್ತಿದ್ದರು.

ಅವರು ಕುಡಿಯುವುದಕ್ಕೆ ಸುರಪಾನ ಎಂದು ಕರೆಯುತ್ತೇವೆ, ಆದರೆ ಮನುಷ್ಯರು ಕುಡಿಯುವುದಕ್ಕೆ ಮಧ್ಯಪಾನ ಎಂದು ಕರೆಯುತ್ತಾರೆ.

ಒಬ್ಬರು ಮಾನ್ಯ ಸದಸ್ಯರು : ನೀವು ಯಾವಾಗ ದೇವರನ್ನು ನೋಡಿದ್ದೀರಿ ?

ಶ್ರೀ ಕೆ.ಎನ್. ರಾಜಣ್ಣ : ಇಲ್ಲ ಅವರೇ ಹೇಳುತ್ತಿದ್ದರು, ಅದಕ್ಕೋಸ್ಕರ ಮದ್ಯಪಾನ ಸುರಪಾನ, ಇದು ಮೊದಲಿನಿಂದಲೂ ನಡೆದುಕೊಂಡು ಬಂದಿರುವಂತಾದ್ದು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನಿನ್ನೆ ರಾಮರಸ ಕುಡಿದವರ ಪರಿಸ್ಥಿತಿ ಏನು ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅವರು ಕುಡಿಯುವುದನ್ನು ರಾಜಣ್ಣನವರು ಯಾವಾಗ ನೋಡಿದರು ? ಎಲ್ಲಿ ನೋಡಿದಿರಿ ಹೇಳಿ ?

ಶ್ರೀ ವಾಟಾಳ್ ನಾಗರಾಜ್ : ಈ Packet ಸಾರಾಯಿ ಬದಲು, ಮದ್ಯದ ಬಾಟಲುಗಳು ಧಾರಾಳವಾಗಿ ಸಿಗುತ್ತವೆ. ನನಗೆ ಅನಿಸುತ್ತದೆ ಇದು ಸರಿಯಲ್ಲ. ಇದು ಸರಿಯಿಲ್ಲವೆಂದು ನಿಮ್ಮ ಮನೋಧರ್ಮವನ್ನು ವಿರೋಧ ಮಾಡುತ್ತಿಲ್ಲ. ಮಾಡುವುದಾದರೆ, ಕ್ರಾಂತಿಕಾರಕ ತೀರ್ಮಾನವಾಗಲಿ, ಈ ರಾಜ್ಯದಲ್ಲಿ ಸಂಪೂರ್ಣವಾಗಿ ಪಾನ ನಿರೋಧವನ್ನು ಜಾರಿಗೆ ತರುತ್ತೇವೆ ಎಂದು ಹೇಳಿ ತೆಗೆದುಕೊಂಡು ಬನ್ನಿ. ಆದರಿಂದ ಎಲ್ಲೋ ಒಂದು ಕಡೆ ಅನುಕೂಲವಾಗುತ್ತದೆ. ಹಿಂದೆ ಹೆಂಡ ಇತ್ತು. ಈ ಹೆಂಡ ನೈಸರ್ಗಿಕವಾಗಿ ಬರುವಂತಾದ್ದು.

ಶ್ರೀ ಕೆ. ಶ್ರೀನಿವಾಸ ಗೌಡ : ಮಾನ್ಯ ಉಪಧ್ಯಕ್ಷರೆ, ಗುರಾತಿನಲ್ಲಿ drinks ಗೆ ಪೂರ್ತಿ prohibition ಇದೆ. ಅಲ್ಲಿ ಯಾವ್ಯಾವ variety liquor ಬೇಕು ಸಿಗುತ್ತದೆ. ಆದರೆ ಅಲ್ಲಿ prohibition ಅಂತೂ ಇದೆ. ಸರ್ಕಾರಕ್ಕೆ ಬರುವಂತಹ ಆದಾಯಕ್ಕೆ ಕತ್ತರಿ, ಆದರೆ footpathನಲ್ಲಿ ಎಲ್ಲಾ ಮಾರುತ್ತಾರೆ. ಇದನ್ನು ನಾನು ಸ್ವಂತ ಅನುಭವದಿಂದ ಕೂಡ ಹೇಳುತ್ತಿ

ದ್ದೇನೆ. ಆದುದರಿಂದ ಮಾನ್ಯ ವಾಟಾಳ್ ನಾಗರಾಜ್‌ರವರು ಇದನ್ನು ಸರಿಯಾಗಿ ನೋಡಿದರೆ ಆಮೇಲೆ ಅರ್ಥವಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಆಯಿತು, ಕುಡಿಯುವವರು ಕೆಲವರು ಬೇಕು ಎಂದು ಹೇಳುತ್ತಾರೆ. ಕೆಲವರು ಬೇಡ ಎಂದು ಹೇಳುತ್ತಾರೆ. ನಾನು ಅದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಹೆಚ್. ಆಂಜನೇಯ : ನಿಸರ್ಗದಿಂದ ಬಂದಂತಹ ಹೆಂಡ ಬಹಳ ಚೆನ್ನಾಗಿ ಇರುತ್ತದೆ ಎಂದು ಹೇಳಿದಿರಲ್ಲ. ಎಂದಾದರೂ ಕುಡಿದಿದ್ದರಾ ಎಂದು ಕೇಳಿದೆ.

ಶ್ರೀ ವಾಟಾಳ್ ನಾಗರಾಜ್ : ಹೆಂಡವನ್ನು ಈಚಲು ಮರದಿಂದ ತೆಗೆಯುವುದರಿಂದ ಅದು ನೈಸರ್ಗಿಕವಾಗಿ ಬರುತ್ತದೆ. ತೆಂಗಿನಿಂದಲೂ ಬರುತ್ತದೆ. ಇಲ್ಲಿ ಹೆಂಡದ ಬಗ್ಗೆ ಎಷ್ಟು ಚೆನ್ನಾಗಿ ಬರೆದಿದ್ದಾರೆ ಅದು ತೋರಿಸೋಣವೆಂದು ತೆಗೆದುಕೊಂಡು ಬಂದೆ. ಅದರ ಬಗ್ಗೆ ಶ್ರೀ ಜಿ.ಪಿ. ರಾಜರತ್ನಂರವರು ಹೇಳಿದ್ದಾರೆ.

" ಬೆಳದಿಂಗಳ ರಾತ್ರಿಲಿ, ಈ ಚೋರಿ ಬಂತಂದ್ರ,
ಈಚಲ ಹೆಂಡ ಚೆಲ್ಲಿದಂಗೆ ನೆಪ್ಪಾಯ್ತದೆ .
ಆಕಾಶದ ಚಂದ್ರನ್ನ, ಪಡಖಾನೆ ದೀಪಕ್ಕೆ
ಹೋಲಿಸದೆ ಹೋಯ್ತಂದ್ರೆ ತೆಪ್ಪಾಯ್ತದೆ, ತೆಪ್ಪಾಯ್ತದೆ "

ಈ ರೀತಿ ಹೆಂಡದ ಕುಡುಕರ ಬಗ್ಗೆ ಬರೆದಿದ್ದಾರೆ. ಮೊನ್ನೆ ಒಬ್ಬ ರಾಮರಸ ಕುಡಿದು ಪ್ರಾಣ ಬಿಟ್ಟ. ಅದು ಪತ್ರಿಕೆಯಲ್ಲಿ ಬಂದಿರಬೇಕು, ತಾವು ಓದಿರಬಹುದು. ರಾಮರಸ ಕುಡಿದ ಹೋದ, ರಾಮನ ಹೆಸರಿನಲ್ಲಿ ರಾಮರಸವನ್ನು ಕುಡಿದು ಸತ್ತ ಎಂದು ಪತ್ರಕೆಯಲ್ಲಿ ಬಂದಿದೆ. ನಾನು ಹೇಳುವುದೇನೆಂದರೆ ಸಾರಾಯಿ ಕೆಲಸಗಾರರು ಏನು ಮಾಡುತ್ತಾರೆ ? ಅವರಿಗೆ ಯಾವ ನೀತಿ ನಿಯಮ ಇದೆ. ಅವರ ಬಗ್ಗೆ ನಾನೇನು ಮಾತ ನಾಡುವುದಿಲ್ಲ. ಆದರೆ ಆ ಕೆಲಸಗಾರರ ಬಗ್ಗೆ ನೀವು ಎಲ್ಲೋ ಒಂದು ಕಡೆ

ಚಿಂತನೆ ಮಾಡಬೇಕಲ್ಲ. ಅದರ ಚಿಂತನೆ ಮಾಡುವಂತಹ ವ್ಯವಸ್ಥೆ ನಿಮ್ಮಲ್ಲಿ ಇಲ್ಲ. ಸುವರ್ಣ ಕರ್ನಾಟಕದ ಕಲ್ಪನೆ ಎಂದರೆ ಏನು ? ಸುವರ್ಣ ಕರ್ನಾಟಕಕ್ಕೆ ತ್ಯಾಗ ಮಾಡಿದವರು, ದುಡಿದವರು, ಹೋರಾಟ ಮಾಡಿದವರ ಇತಿಹಾಸ ಎಲ್ಲಾದರೂ ಒಂದು ಕಡೆ ಇರಬೇಕಲ್ಲ. ನೀವು ಅನೇಕರ ಬಗ್ಗೆ ಹೇಳಿದ್ದೀರಿ. ಶ್ರೀಮಾನ್ ನಿಜಲಿಂಗಪ್ಪನವರು ಕರ್ನಾಟಕದ ಏಕೀಕರಣಕ್ಕಾಗಿ ಹಾಗೂ ಈ ದೇಶದ ಉನ್ನತ ಸ್ಥಾನಕ್ಕೆ ಏರಿದಂತಹ ಗಟ್ಟಿಗರು. ಶ್ರೀಮಾನ್ ನಿಜಲಿಂಗಪ್ಪನವರ ಸಮಾದಿಯನ್ನು ಸ್ಮಾರಕ ಮಾಡುವುದಕ್ಕೆ ನೀವು ಏಕೆ ಕ್ರಮ ಕೈಗೊಳ್ಳಲಿಲ್ಲ. ರಾಷ್ಟ್ರದ ನಾಯಕರು ಹಗೂ ಈ ರಾಜ್ಯದ ಏಕೀಕರಣಕ್ಕಾಗಿ ಹೋರಾಟ ಮಾಡಿದಂತಹವರು. ಅವರ ಬಗ್ಗೆ ನಿಮಗೆ ಚಿಂತನೆ ಬರಲಿಲ್ಲವಲ್ಲ. ಮೈಸೂರಿನ ಪ್ರಥಮ ಮುಖ್ಯಮಂತ್ರಿ ಕೆಸಂಬಳ್ಳಿ ಚಂಗಲ್ ರಾಯರೆಡ್ಡಿ ಅವರ ಬಗ್ಗೆ ನಿಮಗೆ ಗಮನ ಬರಲಿಲ್ಲವೇ? ಈ ರಾಜ್ಯದ ಕಬ್ಬಿಣದ ಮನುಷ್ಯ ಸಾಹುಕಾರ್ ಚನ್ನಯ್ಯ ಅವರ ಬಗ್ಗೆ ನೀವ್ಯಾರು ಚಿಂತನೆ ಮಾಡಲಿಲ್ಲವಲ್ಲ. ಮಾನ್ಯ ದೇವರಾಜು ಅರಸು, ಈ ರಾಜ್ಯಕ್ಕೆ ಹೆಸರಿಟ್ಟಂತಹವರು. ಇವರುಗಳ ಸಮಾದಿಗಳು ಸ್ಮಾರಕವಾಗಿ, ಈ ರಾಜ್ಯದ ಜನತೆಗೆ ಮುಂದಿನ ಪೀಳಿಗೆಗೆ ತಿಳಿಯುವಂತಹ ಕೆಲಸವಾಗಬೇಕು. ಹಳ್ಳಿಕೆರೆ ಗುದ್ಲಪ್ಪ, ವಾಲಿ ಚನ್ನಪ್ಪ ಎಷ್ಟು ಜನರಿಗೆ ಗೊತ್ತು ? ಇವರೆಲ್ಲರೂ ಈ ರಾಜ್ಯಕ್ಕಾಗಿ ತ್ಯಾಗ ಮಾಡಿದಂತಹ ಜನ. ಅವರ ಬಗ್ಗೆ ನಿಮಗೆ ಕಲ್ಪನೆ ಬರಲಿಲ್ಲ. ತಮಗೆ ಹೇಳುವುದೇನೆಂದರೆ ಕಡಲ ತೀರದ ಭಾರ್ಗವ ಶಿವರಾಮ್ ಕಾರಂತ್ ರವರನ್ನು ಏಕೆ ಮರೆತಿರಿ ? ಉತ್ತರ ಕರ್ನಾಟಕಕ್ಕೆ ತಾವು ಎಷ್ಟೆಷ್ಟು ಅನ್ಯಾಯ ಮಾಡಿದ್ದೀರಿ ಎಂದು ಹೇಳುತ್ತೇನೆ. ಎಷ್ಟು ಜನ ಕಲಾವಿದರಿಗೆ ಅನುಕೂಲ ಮಾಡಿದ್ದೀರಿ ? ಉತ್ತರ ಕರ್ನಾಟಕದಲ್ಲಿ ಸಾಹಿತಿಗಳಿಗೆ ಎಷ್ಟು ಅನುಕೂಲ ಮಾಡಿದ್ದೀರಿ. ಎಷ್ಟು ಬರಹಗಾರರಿಗೆ ಅನುಕೂಲ ಮಾಡಿದ್ದೀರಿ ? ಎಷ್ಟು ರಾಜ್ಯ ಪ್ರಶಸ್ತಿ ಮತ್ತು ರಾಷ್ಟ್ರ ಪ್ರಶಸ್ತಿ ಕೊಟ್ಟಿದ್ದೀರಿ ? ಅದಕ್ಕೆ ಶ್ವೇತ ಪತ್ರ ಮಂಡಿಸಿ. ನೀವು ಉತ್ತರ ಕರ್ನಾಟಕಕ್ಕೆ ಅನುಕೂಲ ಮಾಡಿದ್ದೇವೆ ಎಂದು ಹೇಳುತ್ತೀರಲ್ಲ, ಸಾಹಿತಿಗಳು, ಕವಿಗಳು, ಬರಹಗಾರರು, ಪತ್ರಕರ್ತರು ಎಷ್ಟು ಜನರಿಗೆ ಸಹಾಯ ಮಾಡಿದ್ದೀರಿ ? ಅದರ ಬಗ್ಗೆ ಶ್ವೇತ ಪತ್ರ ಮಂಡಿಸಿ. ನಿಮಗೆ ಬೇಕು ಬೇಕಾದವರಿಗೆ ಸಹಾಯ

ಮಾಡಿದ್ದೀರಿ ? ಯಾರು ಇದರ ಬಗ್ಗೆ ನಿಮಗೆ ಚಿಂತನೆ ಹೇಳಲಿಲ್ಲವೇ ? ನಿಮ್ಮನ್ನು ಕೇಳಲಿಲ್ಲವೇ? ಗಮನ ಕೊಡಲಿಲ್ಲವೇ ? ಎಲ್ಲರಿಗೂ ನೀವು ಸಮನ್ವಯ, ಸಮಾನತೆ ತರುವ ರೀತಿಯಲ್ಲಿ ಮಾಡಬೇಕಾಗಿತ್ತು. Parliament ನಲ್ಲಿ ಮುರಸೊಲಿ ಮಾರನ್ ಅವರ photo ಹಾಕಿದ್ದಾರೆ. ಎಂ.ಜಿ. ರಾಮಚಂದ್ರನ್ photo ಇದೆ. ಮಾನ್ಯ ನಿಜಲಿಂಗಪ್ಪನವರ, ಮಾನ್ಯ ಹನುಮಂತಯ್ಯನವರ, ಡಾ: ರಾಜ್ಕುಮಾರ್ ರವರ, ಸಾಹುಕಾರ ಚನನ್ಯನವರ ಹಾಗೂ ಮಾನ್ಯ ಅರಸುರವರ photo ಏಕೆ ಹಾಕಬಾರದು? ನಮ್ಮವರಿಗೆ ಯಾರಿಗೂ ಬಾಯಿ ಇಲ್ಲ. ನಮ್ಮವರಿಗೆ ಯಾರಿಗೂ ಕೇಳುವುದಕ್ಕೆ ಆಗುವುದಿಲ್ಲ. parliament ನಲ್ಲಿ ಕೇಳಿದರಾ ? ತಮಿಳುನಾಡಿಗೆ ಇರುವಷ್ಟು ಬಾಯಿ, ಶಕ್ತಿ ನಮಗೆ ಇಲ್ಲವಾ ? ಮಾತಿಲ್ಲವೇ? ಎಲ್ಲಿ ಏನಾಗಿದೆ ? ಕಾರಣವೇನು ? ಪರಿಸ್ಥಿತಿ ಏನು? ಗಡಿ ಬಗ್ಗೆ ನೀತಿ ಇಲ್ಲ.

ನಾನು ಮಾನ್ಯ ಧರ್ಮಸಿಂಗ್ ರವರನ್ನು ಜಿಜಕ್ಕೂ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಅಲ್ಲಿ ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಿದ್ದೇವೆ ಎಂದು ನಿರ್ಣಯ ಮಾಡಿದ ಒಂದು ವಾರದಲ್ಲಿ ಆ ನಗರಸಭೆಯನ್ನು ವಜಾ ಮಾಡಿ ಇವತ್ತು ದೊಡ್ಡ ಇತಿಹಾಸವನ್ನು ಮಾಡಿದರು. ಇವತ್ತು ನಾನು ಅವರು ಇಲ್ಲಿ ಇದ್ದಾರೆ ಎಂದು ಹೇಳುತ್ತಿಲ್ಲ.

ನಮ್ಮ ಕರ್ನಾಟಕ ರಾಜ್ಯದ ಅತ್ಯಂತ ಒಳ್ಳೆಯ ಸ್ನೇಹ ಜೀವಿ ಶ್ರೀ ಧರ್ಮಸಿಂಗ್ ನೀವೆಲ್ಲರೂ ಪಕ್ಷ ಭೇದವನ್ನು ಮರೆತು ಆತ್ಮ ಶೋಧನೆಯನ್ನು ಮಾಡಿಕೊಳ್ಳಿ. ಅವರು ಅಧಿಕಾರವನ್ನು ಬಿಟ್ಟು ಹೋಗುವಾಗ ಪತ್ರಿಕೆಯವರು ಧರ್ಮರಾಯ ಎಂಬ ಪದವನ್ನೆ ಬರೆದರು. ಅನೇಕ ಪತ್ರಿಕೆಗಳಲ್ಲಿ ನಾನೇ ಕಣ್ಣಾರೆ ನೋಡಿದ್ದೇನೆ. ಒಬ್ಬ ಒಳ್ಳೆಯ ಸಂಭಾವಿಕ, ಯೋಗ್ಯ, ಮತ್ತು ಈ ರಾಜ್ಯದ ದೂರದೃಷ್ಟಿ ಇರುವಂಥ ವ್ಯಕ್ತಿ. ನಿಜಕ್ಕೂ ಅವರು ಅಧಿಕಾರವನ್ನು ಕಳೆದುಕೊಂಡಿದ್ದು ಎಲ್ಲೋ ಒಂದು ಕಡೆ, ಅನೇಕ ನಮ್ಮಂಥ ಸ್ನೇಹಿತರುಗಳಿಗೆ ಮತ್ತು ರಾಜ್ಯದ ಬಹುತೇಕ ಜನರಿಗೆ ನೋವಾಗಿದೆ. ಅವರು ಮುಖ್ಯಮಂತ್ರಿಗಳಾಗಿ ಇದ್ದಾಗ ಎಲ್ಲಾ ಮಠಗಳವರು ಅವರನ್ನು ಕರೆಯುತ್ತಿದ್ದರು. ಅವರ

ಹಿಂದದೆ ಮಾನ್ಯ ಎಸ್.ಎಂ.ಕೃಷ್ಣರವರು ಮುಖ್ಯಮಂತ್ರಿಗಳಾಗಿ ಇದ್ದಾಗ, ಎಲ್ಲಾ ಮಠಗಳವರು ಕರೆಯುತ್ತಿದ್ದರು. ಅವರನ್ನು ಬಿಟ್ಟರು, ಇವರನ್ನು ಬಿಟ್ಟರು, ಈಗ ಈಗಿನ ಮುಖ್ಯಮಂತ್ರಿಯವರನ್ನು ಹಿಡಿದುಕೊಂಡರು. ಇವರು ಹೋದ ಮೇಲೆ ಇನ್ನು ಯಾರನ್ನು ಹಿಡಿದುಕೊಳ್ಳುತ್ತಾರೊ, ಇದು ಒಂದು ರೀತಿ ಜಾಡ್ಯ. ಆ ರೀತಿ ಆಗಿದೆ. ಅದು ಸರಿಯಲ್ಲ. ನನಗನಿಸುತ್ತದೆ, ಅವರು ಒಬ್ಬ ಸ್ನೇಹ ಜೀವಿ, ಅವರು ಒಂದು ದಿವಸ ಸಿಟ್ಟು ಮಾಡಿಕೊಂಡಿದ್ದು ಕಂಡಿಲ್ಲ. ನಾನು ಒಂದು ವಿಷಯವನ್ನು ಹೇಳುತ್ತೇನೆ. ನಾನು ಅವರ ಹುಟ್ಟುಹಬ್ಬದಂದು ಹೇಳಿದ್ದೆ. ಅವರ ಎರಡು ವರ್ಷಗಳ ಆಡಳಿತ ಸಂದರ್ಭದಲ್ಲಿ ಬೆಳಿಗ್ಗೆಯಿಂದ ಸಂಜೆ ೬ ಗಂಟೆಯವರೆಗೆ ನಡೆದಿರುವಂತಗಹ ಸಂಪೂರ್ಣ ಎರಡು ವರ್ಷದ ಸಮಗ್ರ ಚಿತ್ರವನ್ನೊಳಗೊಂಡಂತಹ ಒಂದು ಪುಸ್ತಕವನ್ನು ಬರೆಯಬೇಕು. ಕರ್ನಾಟಕ ಇತಿಹಾಸದಲ್ಲಿ ಸಮ್ಮಿಶ್ರ ಸಕಾರದ ಒಬ್ಬ ಮುಖ್ಯಮಂತ್ರಿಯಾಗಿದ್ದರೆಂಬ ಹೆಸರು ಅವರಿಗೆ ಬಂದಿದ್ದು. ನಾನು ನಿಜಕ್ಕೂ ಸಂತೋಷ ಪಡುತ್ತೇನೆ. ಆ ಪುಸ್ತಕವನ್ನು ಬರೆಯಬೇಕು. ಇವತ್ತು ಕಾಸರಗೋಡಿಗೆ ೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ತಾಳವಾಡಿ ಏನು ಮಾಡಿತ್ತು ? ಹರಕನ ಕೋಟೆ ಏನು ಮಾಡಿತ್ತು ? ಮಡಕಸಿರ ಏನು ಮಾಡಿತ್ತು ? ಸೊಲ್ಲಾಪುರ ಏನು ಮಾಡಿತ್ತು ? ಹೊಸೂರು ಏನು ಮಾಡಿತ್ತು ? ಏಕೆ ಆ ಭಾಗಗಳು ನಿಮಗೆ ಬೇಕಾಗಿಲ್ಲವೇ ? ಕಾಸರಗೋಡಿಗೆ ೫ ಲಕ್ಷ ರೂಪಾಯಿಗಳನ್ನು ಕೊಟ್ಟರೆ ಉದ್ಧಾರವಾಗುವುದಿಲ್ಲ. ನಿಮಗೆ ಶಕ್ತಿ ಇತ್ತಾ, ಮಹಾರಾಜನ್ ವರದಿ ಯಾಥಾವತ್ತಾಗಿ ಆರಿಯಾಗಬೇಕು. ಕಾಸರಗೋಡು ಕರ್ನಾಟಕಕ್ಕೆ ಸೇರಬೇಕು. ಇದಕ್ಕಾಗಿ ನಿಮ್ಮ ಸರ್ಕಾರ ಪಣತೊಡಬೇಕು. ಕಾಸರಗೋಡನ್ನು ಕರ್ನಾಟಕಕ್ಕೆ ಸೇರಿಸಲು ನಿಮ್ಮ ಸ್ಪಷ್ಟ, ನೇರ ನಿರ್ಧಾರದಿಂದ ಆಗಬೇಕು. ನೀವು ಬೆಳಗಾವಿಯಲ್ಲಿ ವಿಕಾಸಸೌಧವನ್ನು ಕಟ್ಟುತ್ತಿಲ್ಲ. ಬೆಳಗಾವಿಯಿಂದ ದೂರದಲ್ಲಿ ಕಟ್ಟುತ್ತಿದ್ದಿರಂತೆ., ಇವತ್ತು ಅಲ್ಲಿ ಕನ್ನಡ ಪರ ಸಂಘಟನೆಗಳು ಹೋರಾಟಕ್ಕೆ ನಿಂತಿವೆ. ನಾನು ಹೇಳುತ್ತೇನೆ. ಅದನ್ನು ಬೆಳಗಾವಿಯಲ್ಲೆ ಕಟ್ಟಬೇಕು. ಜೊತೆಗೆ ಗುಲ್ಬರ್ಗಾದಲ್ಲಿ ಒಂದು ಕಟ್ಟಡವನ್ನು ಕಟ್ಟಬೇಕು. ಗುಲ್ಬರ್ಗಾದಲ್ಲೂ ಒಂದು ವಿಕಾಸ ಕೇಂದ್ರ ೨೫೦ ಕೋಟಿ ರೂಪಾಯಿಗಳಲ್ಲಿ

ಆಗಬೇಕು. ಆಗಲೇ ನಿಮ್ಮ ಭಾವೈಕ್ಯತೆ ಎನ್ನುವಂಥಾದ್ದು ಆಗುತ್ತೆ ಅದು ಬಿಟ್ಟು, ಇಲ್ಲೆ ಬೆಂಗಳೂರಿನಲ್ಲಿ ಮಾಡಿಕೊಂಡೆರೆ ಆಗುವುದಿಲ್ಲ. ಆದುದರಿಂದ ನಿಮಗೆ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ತಮ್ಮ ಗಮನಕ್ಕೂ ಬಂದಿದೆ, ನನ್ನ ಗಮನಕ್ಕೂ ಬಂದಿದೆ. ಇಡೀ ಬೆಂಗಳೂರು ನಗರದಲ್ಲಿ ಜಮೀನು ವಜ್ರದ rate ಆಗಿದೆ. ಇದನ್ನು ಕೊಡಂಡುಕೊಳ್ಳುವವರು ಯಾರು. ಅವರು ಕನ್ನಡಿಗರಲ್ಲ. ನೀವು ಮತ್ತು ಮಾನ್ಯ ಜಗದೀಶ್ ಶೆಟ್ಟರ್ ರವರು ನೋಡಿ, ದೇವನಹಳ್ಳಿ ಜಮೀನು, ವೈಟ್ ಫೀಲ್ಡ್ ಜಮೀನು, ಎಲ್ಲಾ ಹೊರಗಡೆಯವರು, ಒಬ್ಬ ಆಂದ್ರ ಪ್ರದೇಶದ ದೊಡ್ಡ ವ್ಯಕ್ತಿ ಎಂದು, ಎಲ್ಲಾ ಸರ್ಕಾರದಲ್ಲೂ ಆ ವ್ಯಕ್ತಿಗೆ, ವಿಶ್ವವಿದ್ಯಾಲಯಗಳಲ್ಲಿ ಒಂದು ಪೀಠ ಇಟ್ಟಿರುತ್ತಾರೆ. ಆ ರೀತಿಯಲ್ಲಿ ಒಬ್ಬ ವ್ಯಕ್ತಿಗೆ ಎಲ್ಲಾ ಸರ್ಕಾರದಲ್ಲೂ ಒಂದು ಪೀಠವಿದೆ, ಮತ್ತು ಎಲ್ಲಾ ಮಂತ್ರಿಗಳು ರಾತ್ರಿ ೩.೩೦ ಗಂಟೆಗೆ ನುಗ್ಗಬಹುದು. ಆ ವ್ಯಕ್ತಿ ಬೆಂಗಳೂರು ನಗರ ಒಂದರಲ್ಲೆ ಹತ್ತು ಸಾವಿರ ಕೋಟಿ ರೂಪಾಯಿಗಳ ಬಂಡವಾಳವನ್ನು ಹಾಕಿದ್ದಾರೆ. ಈ ಊರಿಗೆ ಬರೀ ಸಾರಾಯಿ ಪ್ಯಾಕೇಟ್ ಗೆ ಬಂದಂತಹ ವ್ಯಕ್ತಿಯದು ಹತ್ತು ಸಾವಿರ ಕೋಟಿ ರೂಪಾಯಿಗಳ ಬಂಡವಾಳವಿದೆ. ಆ ವ್ಯಕ್ತಿ ಈ ರಾಜ್ಯದ ಎಲ್ಲರಿಗೂ ಬೇಕಾಗಿರುವವರು. ಅವರ ಬಗ್ಗೆ ನನಗನಿಸುತ್ತದೆ, ನೀವೆಲ್ಲಾ ಎಚ್ಚರದಿಂದ ಇರಬೇಕು. ಇವತ್ತು ನಾನು ಹೇಳುವುದೆನೆಂದರೆ ಒಂದು ವಿಧಾನಸೌಧವೆಂದರೆ ಇದಕ್ಕೆ ಘನತೆ, ಒಂದು ಗಾಂಭಿರ್ಯವಿದೆ. ವಿಧಾನ ಸೌಧದ ಪಕ್ಕದಲ್ಲಿ ಇದಕ್ಕಿಂತ ಎತ್ತರವಾದ ಕಟ್ಟಡವನ್ನು ಕಟ್ಟಬಾರದು. ಮಧ್ಯಪಾನ ಮಾಲೀಕರೊಬ್ಬರು ಎರಡು ಕಟ್ಟಡವನ್ನು ವಿಧಾನಸೌಧಕ್ಕೂ ಎತ್ತರಕ್ಕೆ ಕಟ್ಟಿರುವಂಥಾದ್ದು ಸರಿಯಾದ ಕ್ರಮವಲ್ಲ, ಮತ್ತೆ ಅಲ್ಲಿ ಹೆಲಿಕ್ಯಾಪ್ಟರ್ ಇಳಿಯುವುದಕ್ಕೆ ವ್ಯವಸ್ಥೆ ಏನು ? ಏನು ಇದು ಹುಡುಗಾಟ. ಸರ್ಕಾರ ಇದೆಯಾ ? ಏನು ಹುಡುಗಾಟವಿದು, ಅವರನ್ನು ತಡೆಯುವುದಕ್ಕೆ ನಿಮ್ಮ ಕೈಯಲ್ಲಿ ಆಗಲಿಲ್ಲವಾ ? ನಗರಪಾಲಿಕೆ ಇದೆಯಾ ? ಏನು ಇದೆ ? ಎಲ್ಲಿದ್ದೀರಿ ? ಒಂದು ಕಡೆ ರಾಜಭವನ ಮತ್ತೊಂದು ಕಡೆ ವಿಧಾನಸೌಧ, ಅವರ ಪಕ್ಕದಲ್ಲಿ ವಿಧನಸೌಧದ ಮೂರರಷ್ಟು ಎತ್ತರಕ್ಕೆ ಕಟ್ಟಡವನ್ನು ಕಟ್ಟಿ, ಅಲ್ಲಿ ಒಂದು ಘಂಟೆ, ಅದು ಈ ರಾಜ್ಯದ ಜನತೆಗೆ ತಿಳಿಯಬೇಕೆಂದು ಹೇಳಿ,

ಈ ರೀತಿ ಮಾಡಿದರೆ ಇದು ತಲೆ ತಗ್ಗಿಸುವಂಥ ವಿಚಾರವಲ್ಲವೇ ? ಇನ್ನು ಕಂಠೀರವ ಸ್ಟೇಡಿಯಂಯನ್ನು ಮಲ್ಯ ಆಸ್ಪತ್ರೆಯ ಕಾರುಗಳನ್ನು ನಿಲ್ಲಿಸುವುದಕ್ಕೆ ಏಕೆ ಕೊಟ್ಟಿದ್ದೀರಿ? ನೀವು ಎಲ್ಲರಿಗೂ ಕೊಡುತ್ತೀರಾ ?

ಶ್ರೀ. ಕೆ. ಜಯಪ್ರಕಾಶ್ ಹೆಗ್ಡೆ : ಅದು ಮಾತ್ರವಲ್ಲ, ಮಾನ್ಯ ಎ.ಟಿ. ರಾಮಸ್ವಾಮಿಯವರ ಕಮಿಟಿಯವರು, ಅದರ ಪಕ್ಕದಲ್ಲಿರುವ ಕಾರ್ಪೋರೇಷನ್ ಗಾರ್ಡನ್ ಬಗ್ಗೆಯೂ ಬರೆದಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಅವರನ್ನು ಹೇಳುತ್ತೇನೆ. ಮಾನ್ಯ ರಾಮಸ್ವಾಮಿಯವರ ಕಮಿಟಿ ನಮಗೆ ಸುಮ್ಮನೆ ಎಲ್ಲೋ ಕಂಡಿರುವುದನ್ನು ನಿಮಗೆ ಹೇಳುತ್ತೇನೆ. ಅದರ ವಿಚಾರವೇ ಬೇರೆ. ನಾನು ಅದರ ಬಗ್ಗೆ ಒಬ್ಬ ಸದಸ್ಯನಾಗಿ ಜಾಸ್ತಿ ಏನು ಹೇಳುವುದಕ್ಕೆ ಹೋಗುವುದಿಲ್ಲ. ತಾವು ಆ ಸಮಿತಿಯ ವರದಿಯನ್ನು ನೋಡಬೇಕು. ಆ ವರದಿಯಲ್ಲಿ, ಏನೇನು ನಡೆದಿದೆಯೆನ್ನುವ ಬಗ್ಗೆ ಇದೆ. ನಾವು ಇವತ್ತು ಆ ವರದಿಗೆ ಅಭಿನಂದನೆ ಯನ್ನು ಸಲ್ಲಿಸುತ್ತೇವೆ. ನಮ್ಮ ಜೀವನದಲ್ಲಿ ಒಂದು ಒಳ್ಳೆಯ ವರದಿಯನ್ನು ಕೊಡುವಂಥ ಸದವಕಾಶ ದೊರಯಿತಲ್ಲಾ ಎಂದು ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ನೀವು ನಿರುದ್ಯೋಗ ಸಮಸ್ಯೆಯ ಬಗ್ಗೆ ಏನು ಹೇಳಿದ್ದೀರಿ ? ಏನು ಇಲ್ಲವಲ್ಲಾ! ನಿರುದ್ಯೋಗ ಸಮಸ್ಯೆ ಈ ರಾಜ್ಯದ ಯುವಕರಿಗೆ, ಯುವಕ ಮುಂದಾಳುಗಳಿಗೆ, ನಿಮ್ಮ ಬಾವುಟ ಹಿಡಿಯುವವರಿಗೆ, ಜೈಕಾರ ಹಾಕುವವರಿಗೆ, ರಸ್ತೆಯಲ್ಲಿ ಹೋಗುವವರಿಗೆ, ಯುವ ಜನಾಂಗಕ್ಕೆ ಏನು ಹೇಳಿದ್ದೀರಿ ? ಏನೂ ಇಲ್ಲ. ಯುವ ಜನಾಂಗವನ್ನು ರಸ್ತೆಯಲ್ಲಿ ದಾರಿ ತಪ್ಪುವುದಕ್ಕೆ ಮಾರ್ಗಗಳು ಇವೆಯೇ, ಹೊರತು ಅವರನ್ನು ಬೇರೆ ದಿಕ್ಕಿಗೆ, ಈ ದೇಶವನ್ನು ಬಲವರ್ಧನೆಗೆ ತರುವಂಥ ಚಿಂತನೆ ಇವತ್ತು ನಮಗೆ ಇಲ್ಲ. ಕೃಷಿ ಸಮರ ನೀತಿ ಏನು ಇದೆ. ಇವತ್ತು ನಾವು ದಿ॥ ಭೈರೇಗೌಡರನ್ನು ನೆನಪು ಮಾಡಿಕೊಳ್ಳಬೇಕು. ಕೃಷಿ ಕಸದ ಪಾಲಾಗಿತ್ತು, ಕೃಷಿಗೆ ಶಕ್ತಿಯನ್ನು ಭೈರೇಗೌಡರು ತಂದವರು. ಭೇರೈಗೌಡರ ಬಗ್ಗೆ ಚಿಂತನೆ ಏನು ? ಇಡೀ ಕೃಷಿ ಇಲಾಖೆಗೆ ಒಂದು ಶಕ್ತಿಯನ್ನು ತಂದು ಕೊಟ್ಟರು. ನಾನು ಒಂದು ಕಡೆ ಮಾನ್ಯ ವಲ್ಲಭಭಾಯಿ ಪಟೇಲ್ ಅವರನ್ನು ನೆನಪು ಮಾಡಿಕೊಂಡು

ಅವರಿಗೆ ಹೇಳಿದೆ. ಆ ದೃಷ್ಟಿಯಿಂದ, ಬೆಳೆ ರಕಷಣೆ ಬಗ್ಗೆ ನಿಮ್ಮ ಯೋಜನೆ ಏನು ? ಮೊನ್ನೆ ಟೊಮೇಟೊ ಕೋಲಾರ ಜಿಲ್ಲೆಯಲ್ಲಿ ಸುರಿದಿದ್ದಾರೆ. ಅಲ್ಲಿ ರಸ್ತೆಗೆ ಸುರಿದರು, ರಕ್ಷಣೆಗೆ ಏನು ? ಟೊಮೇಟೊ ರಕ್ಷಣೆಗೆ, ಬೆಳೆ ರಕ್ಷಣೆಗೆ ನಿಮ್ಮ ಕಾರ್ಯಕ್ರಮ ಏನು ? ಏನೂ ಇಲ್ಲ. ಆಹಾರ ಉತ್ಪಾದನೆಗೆ ನೀವು ಸರಿಯಾದ ದಾರಿ ತೋರಿಸಿಲ್ಲ. ನೀವು ಆಹಾರ ಉತ್ಪಾದನೆಗೆ ಏನು ದಾರಿಯನ್ನು ತೋರಿಸಿದ್ದೀರಿ? ಉತ್ತಮ ಗೊಬ್ಬರಗಳು ಇಲ್ಲ. ಬೀಜ ಇಲ್ಲ; ಅವರಿಗೆ ಖಾತ್ರಿ ಇಲ್ಲ. ಅಂತರ ಜಲದ ಬಗ್ಗೆ ನೀವು ಏನಾದರೂ ಯೋಚನೆ ಮಾಡಿದ್ದೀರಾ ? ದಿ ॥ ನಜೀರ್ ಸಾಬ್ ರವರ ಕಾಲದಲ್ಲಿ ಭೂಮಿಯಿಂದ ನೀರು ತೆಗೆಯಲು ಹೊಡೆಯಲು ಶುರುವಾಯಿತು. ಇಒವತ್ತಿನವರೆಗೂ ನೀರನ್ನು ತೆಗೆಯಲೂ ಭೂಮಿಯನ್ನು ಕೊರೆ ಯುತ್ತಿದದೇವೆ. ನೀರು ಎಷ್ಟು ಇದೆ, ಮುಂದೆ ಏನು ? ಅಂತರಜಲ ಬತ್ತಿ ಹೋಯಿತೆಂದರೆ, ಮುಂದೆ ನೀರನ್ನು ಎಲ್ಲಿಂದ ತರಬೇಕು ? ಹೇಗೆ ತರಬೇಕು? ನದಿಗಳ ಪಾತ್ರವೇನು ? ಖಾಯಂ ಆಗಿ ನೀರಿನ ವ್ಯವಸ್ಥೆ ಹೇಗೆ? ಗ್ರಾಮೀಣ ಪ್ರದೇಶಕ್ಕೆ ನೀರು ಏನು ? ಸಂಪೂರ್ಣ ಅಂತರಜಲ ಮಾಯವಾದರೆ, ಇವರಲ್ಲಿ ಅದಕ್ಕೆ ಒಂದು ಒಳ್ಳೆಯ ಸೂತ್ರವಿಲ್ಲ. ನಾನು ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ಅಂತರಜಲ ಹೋಗುತ್ತದೆ, ಒಂದು ದಿವಸ ಪ್ರಳಯ, ನಮ್ಮ ರಾಜ್ಯದಲ್ಲೂ ಪ್ರಳಯ ಸಂಭವಿಸುತ್ತದೆ. ಆ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಬೆಂಗಳೂರಿಗೆ ಹತ್ತಿರದಲ್ಲೆ ಕಾವೇರಿ ನೀರು ಕಪಿಲ ನೀರು ಒದಗಿಸಲು ಕಷ್ಟವಾಗುತ್ತದೆ. ಈಗಾಗಲೇ ಕಾವೇರಿ ನದಿ ಒಣಗುತ್ತಿದೆ, ಕಪಿಲ ನದಿ ಒಣಗುತ್ತಿದೆ. ಬೆಂಗಳೂರಿನಲ್ಲಿರುವ ೭೦ ಲಕ್ಷ ಜನರಿಗೆ ನೀರನ್ನು ಒದಗಿಸಲು ಕಷ್ಟವಾಗುತ್ತದೆ. ಅವರಿಗೆ ಎಲ್ಲಿಂದ ನೀರನ್ನು ಕೊಡುತ್ತೀರಿ, ನಿಮಗೆ ಕಷ್ಟವಾಗುತ್ತದೆ. ಅದರ ಬಗ್ಗೆ ಬೇರೆ ಮಾತು ಇಲ್ಲ. ಸಮಗ್ರ ಬೆಂಗಳೂರಿನ ಅಭಿವೃದ್ಧಿಯ ಬಗ್ಗೆ ನಿಮ್ಮಲ್ಲಿ ಏನು ಚಿಂತನೆ ಇಲ್ಲವೆಂಬುದು ಸ್ಪಷ್ಟ. ಒಂದು ಕಡೆ ಚುನಾಯಿತ ಪ್ರತಿನಿಧಿಗಳನ್ನು ಮನೆಗೆ ಕಳುಹಿಸಿದ್ದೀರಿ ; ಚುನಾವಣೆ ನಡೆಯುತ್ತಿಲ್ಲ. ಸರ್ವಾಧಿಕಾರಿ ಅಧಿಕಾರಿ ಗಳನ್ನಿಟ್ಟಿದ್ದೀರಿ. ಒಂದು ಕಡೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಮತ್ತೊಂದು ಕಡೆ ಬೆಂಗಳೂರು ಮಹಾನಗರ ಪಾಲಿಕೆ, ಇವೆರಡರಲ್ಲಿ

ಅವರದೇ ದರ್ಬಾರು ನಡೆಯುತ್ತಿದೆ. ಅವರು ಏನು ಬೇಕಾದರೂ ದರ್ಬಾರು ಮಾಡಬಹುದು. ಬೆಂಗಳೂರಿನಲ್ಲಿ ಮಾನ್ಯ ರಾಮಸ್ವಾಮಿಯವರು ತೋರಿಸಿದ ಜಮೀನನ್ನು ಹರಾಜು ಹಾಕುತ್ತೇವೆಂದು ಹೇಳುತ್ತಿದ್ದೀರಿ. ಹರಾಜಿನಲ್ಲಿ ಕೊಂಡುಕೊಳ್ಳುವವರು ಯಾರೆಂದರೆ, ಉತ್ತರ ಪ್ರದೇಶದವರು, ದೆಹಲಿಯವರು. ಬೆಂಗಳೂರು ಈಗಾಗಲೇ ನಿಮ್ಮ ಕೈಯಲ್ಲಿ ಉಳಿಯದೆ ಬೇರೆಯವರ ಕೈಗೆ ಹೋಗಿದೆ. ಹರಾಜಿನಲ್ಲಿ ಈ ಕೆಳಕಂಡಂತೆ ನಮೂದು ಮಾಡಬೇಕು. 'ಕನಿಷ್ಟ ೪೦ ವರ್ಷಗಳ ಕಾಲ ಕರ್ನಾಟಕದವರು ಬೆಂಗಳೂರಿನಲ್ಲಿ ಯಾರಿದ್ದಾರೆ ಅವರು ಜರಾಜಿನಲ್ಲಿ ಭಾಗವಹಿಸಿ ತೆಗೆದುಕೊಳ್ಳಬಹುದೆಂದು ಹಾಕಬೇಕು.' ಇಲ್ಲವೆಂದರೆ ನಿವೇಶನ ಮಾಡಿ ಹಂಚಿ ಹರಾಜು ಮಾಡುವಾಗ ಮೇಲಿನಂತೆ ಹೇಳದಿದದರೆ – ದುಡ್ಡಿನ ಮೂಟೆ ಕಟ್ಟಿಕೊಂಡು ಯಾವ ಜಾಗ ಬೇಕಾದರೂ ಕೊಂಡುಕೊಳ್ಳುವುದಕ್ಕೆ ಎಲ್ಲರೂ ರೆಡಿಯಾಗಿ ತುದಿಗಾಲಿನಲ್ಲಿ ನಿಂತಿದ್ದಾರೆ. ಈ ರೀತಿ ಆದರೆ ಬೆಂಗಳೂರು ಹರಾಜಾಗಿ ಹೊರಟು ಹೋಗುತ್ತದೆಂದು ನಿಮಗೆ ನಾನು ಹೇಳಬಯಸುತ್ತೇನೆ. ಕಡಿಮೆ ದರದಲ್ಲಿ ನಿವೇಶನ ಹಂಚುವುದಕ್ಕೆ ನೀವು ಚಿಂತನೆ ಮಾಡಬೇಕು. ಬೆಂಗಳೂರು ನಗರದಲ್ಲಿ ನೀವು ಬಡವರಿಗೆ ನಿವೇಶನ ಕೊಡಬೇಕಲ್ಲವೇ ? ಯಾವುದೇ ಇರಲಿ, ೧೦ ಲಕ್ಷ ೫ ಲಕ್ಷ ರೂಪಾಯಿಗಳೆಂದರೆ ಬಡವರು ಯಾರು ತೆಗೆದುಕೊಳ್ಳುವುದಕ್ಕಾಗುತ್ತದೆ ? ನಿವೇಶನಗಳು ಸಾಮಾನ್ಯ ಜನರಿಗೆ ದೊರಕುವಂತೆ ಮಾಡಬೇಕಾದದ್ದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಆ ದೃಷ್ಟಿಯಿಂದ ತಮಗೆ ನಾನು ಅತ್ಯಂತ ಕಳಕಳಿಯಿಂದ ಮನವಿ ಮಾಡಿ, ಮತ್ತೊಮ್ಮೆ ಉತ್ತರ ಕರ್ನಾಟಕದಲ್ಲಿ ಚನ್ನವೀರಕಣವಿಯವರನ್ನು, ಕಡಲ ತೀರದ ಶಿವರಾಮ ಕಾರಂತರವರು, ಜಿ.ಪಿ. ರಾಜರತ್ನಂ, ನಾ.ಸು ಹರ್ಡೀಕರ್ ರವರು ಈ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದವರು, ಭಾರತ ಸೇವಾ ದಳವನ್ನು ಕಟ್ಟದವರು, ಅವರ ಬಗ್ಗೆ ನೀವು ಚಿಂತನೆ ಮಾಡಬೇಕು. ಅದನ್ನು ಮಾಡಲಿಲ್ಲವೆಂದರೆ ಅದು ಸರಿಯಾಗಲಾರದು. ಕನಕದಾಸರ ಕನಕ ಪೀಠಕ್ಕೆ ಹಣ ಇಟ್ಟಿದ್ದೀರಿ, ಸಂತೋಷ. ಪುರಂದರದಾಸರಿಗೆ ನೀವು ಏಕೆ ಹಣ ಇಟ್ಟಿಲ್ಲ. ಪುರಂದರದಾಸರನ್ನು ನೀವೇಕೆ ಮರೆತಿದ್ದೀರಿ? ಪುರಂದರದಾಸರನ್ನು

ಮರೆತಿರುವುದು ಸರಿಯಿಲ್ಲ. ಇನ್ನು ಖಾಸಗಿ ವಿದ್ಯುತ್ ಕಂಪನಿಗಳಿಗೆ ಸಂಬಂಧಿಸಿದಂತೆ ಹೇಳುವುದಾದರೆ, ಗಗನಚುಕ್ಕಿ – ಬರಚುಕ್ಕಿ ಮಂಡ್ಯಾ ಜಿಲ್ಲೆ ಒಂದು ಕಡೆ, ಚಾಮರಾಜನಗರ ಒಂದು ಡೆ. ಆಂಧ್ರದವರು ವಿದ್ಯುಚ್ಛಕ್ತಿ ತಯಾರು ಮಾಡುವುದಕ್ಕೆ ಗಗನಚುಕ್ಕಿ ಬರಚುಕ್ಕಿಗೆ ಬೀಳತಕ್ಕಂಥ ನೀರಿನ ಮಾರ್ಗವನ್ನು ಬದಲಾವಣೆ ಮಾಡಿ ಹೊಸ ದಿಕ್ಕಿಗೆ ತರುತ್ತಿದ್ದಾರೆ. ಈ ತರಹ ೭೫ ಕಂಪನಿಗಳು ಸಂಪೂರ್ಣ ನಮ್ಮ ಪ್ರವಾಸಿ ಏಂದ್ರಗಳ ಮೇಲೆ ದಾಳಿ ಮಾಡಿದ್ದಾರೆ, ಲೂಟಿ ಮಾಡಿದ್ದಾರೆ. ಇದರ ಬಗ್ಗೆ ತಮ್ಮ ಗಮನಕ್ಕೆ ಬಂದಿರಬಹುದು, ಇದನ್ನು ತಾವು ನಿಲ್ಲಿಸಬೇಕಾಗಿರುವುದು ತಮ್ಮ ಕರ್ತವ್ಯ ವಾಗಿರುತ್ತದೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಮಾನ್ಯ ಯಡಿಯೂರಪ್ಪರವರ ಬಗ್ಗೆ ಮಂಕುತಿಮ್ಮನ ಕಗ್ಗದ ಕವಿತೆಯ ಮೂಲಕ ಹೇಳಬಯಸುತ್ತೇನೆ.

ಎದ್ದೆದ್ದು ಬೀಳುತಿಹೆ, ಗುದ್ದಾಡಿ ಸೋಲುತಿಹೆ,
ಗದ್ದಲವ ತುಂಬಿ ಪ್ರಸಿದ್ಧನಾಗುತಿಹೆ
ಉದ್ಧರಿಸುವೆನು ಜಗವನ್ನೆನುತಿಹ ಸಖನೆ
ನಿನ್ನ ಉದಾರವೆಷ್ಟಯಿತೋ ಮಂಕುತಿಮ್ಮ,

ಎದ್ದು ಎದ್ದು ಮತ್ತೆ ಮತ್ತೆ ಬೀಳುತ್ರಿರುವೆ
ಕಡೆಯಲ್ಲಿ ಗುದ್ದಾಟವನ್ನು ಮಾಡಿ ಸೋಲುತಿರುವೆ
ಗದ್ದಲವನು ಮಾಡಿ ಪ್ರಸಿದ್ಧನಾಗುತ್ತಿರುವೆ
ಜಗತ್ತನ್ನು ನಾನು ಮೇಲಕ್ಕೆತ್ತಿ ಉದ್ದಾರ ಮಾಡುವೆನೆಂದು
ಸೆಣಸುತ್ತಿರುವ ನನ್ನ ಸ್ನೇಹಿತನೇ
ಈ ಗಲಾಟೆಗಳಲ್ಲಿ ನಿನ್ನ ಉದ್ದಾರವೆಷ್ಟು?

– ಡಿ.ವಿ.ಜಿ.

ಮಾನ್ಯ ಯಡಿಯೂರಪ್ಪನವರೇ, ಇದಕ್ಕೆ ಹೊರಟಿದ್ದೀರಿ, ಸಾಧ್ಯವಿಲ್ಲ. ಈ ಕಡೆಯೂ ನಿಮ್ಮ ಎದ್ದೆದ್ದು ಕೂಗುತಿಹೆ, ಗುದ್ದಾಟವಾಯಿತು. ಈಗ ಬಹಳ ಭದ್ರವಾಗಿ ನಿಮ್ಮ ಪೂರ್ವ ಜನುಮವೋ ಅಥವಾ ಯಾವ ಪುಣ್ಯವೋ, ನೀವು ಆ ಕಡೆ ಹೊರಟಿದ್ದೀರಿ. ಏಕೆ ಹೋದರಿ, ಏನು ? ಕೊನೆಗೆ ನಮ್ಮ ಕನ್ನಡ ಕಸ್ತೂರಿ ಪ್ರಥಮ ಭಾಷೆ.

ಇದು ಮಕ್ಕಳಿಗೆ ಇಟ್ಟಿರತಕ್ಕಂಥ ಪುಸ್ತಕ. ಇದರಲ್ಲಿ ಸತ್ಯವೇ ನಮ್ಮ ತಾಯಿ ತಂದೆ, ಸತ್ಯವೇ ನಮ್ಮ ಬಂಧುಬಳಗ, ಸತ್ಯ ವಾಕ್ಯಕೆ ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು ಎಂಬುದ ಮಕ್ಕಳಿಗೆ ಹೇಳಿ, ಇದಕ್ಕೆ ತದ್ವವಿರುದ್ಧವಾಗಿ ನಾವೆಲ್ಲರೂ ಆಡಳಿತವನ್ನು ನಡೆಸುತ್ತಿದ್ದೇವೆ. ಹಸು ಮತ್ತು ವ್ಯಾಘ್ರ ಅವುಗಳ ಮಧ್ಯೆ ನಡೆದಂಥ ಪ್ರಹಸನ. ಆ ಪ್ರಾಣಿಗಳು ಕೊನೆಗೆ ಎಲ್ಲಿಗೆ ನಿಲ್ಲುತ್ತದೆಂದರೆ, ಆ ವ್ಯಾಘ್ರವೇ ಸತ್ಯಕ್ಕೆ ಸೋತು, ತನ್ನ ಪ್ರಾಣವನ್ನು ಅರ್ಪಣೆ ಮಾಡುತ್ತದೆ. ನಮಗೆ ಗೌರವವಿದ್ದರೆ ಮಾನ ಮರ್ಯಾದೆ ಇದ್ದರೆ, ಪ್ರಾಮಾಣಿಕತೆ ಇದ್ದರೆ, ಚಿಂತನೆ ಇದ್ದರೆ, ಎಲ್ಲೋ ಒಂದು ಕಡೆ ತತ್ವ ಸಿದ್ಧಾಂತಗಳಿಗೆ ನಾವು ತಲೆ ಬಾಗಬೇಕು. ಅದಿಲ್ಲವೆಂದರೆ ಆಗುವುದಿಲ್ಲ. ಕೊನೆಯದಾಗಿ ಒಂದು ಮಾತು ಹೇಳಿಬಿಡುತ್ತೇನೆ. ಇದೆಲ್ಲ ಲಭ್ಯ, ಅದರ ಬಗ್ಗೆ ನನಗೆ ನಂಬಿಕೆ ಇಲ್ಲ. ನೀವು ನಂಬಿಕೆ ಇಟ್ಟುಕೊಂಡಿರಬಹುದು. ಪ್ರಾಮಾಣಿಕವಾಗಿ ಹೇಳುವುದಾದರೆ ನನಗೆ ಯಾವುದರ ಬಗ್ಗೆಯೂ ನಂಬಿಕೆ ಇಲ್ಲ. ನಾನು ನಾಮಕರಣ ಸಲ್ಲಿಸುವುದು ಮಂಗಳವಾರ ದಿವಸವೇ ಆಗಿದೆ. ಅಂದರೆ ಈ ಮಾಯಾ ಮಂತ್ರ. ಜ್ಯೋತಿಷಿಗೆ ವಿರುದ್ಧವೆಂದಲ್ಲ. ಅದನ್ನು ನಂಬುವವರು ನಂಬಿಕೊಳ್ಳಲಿ. ಮಂಗಳವಾರ ಯಾರು ಹಾಕುವುದಿಲ್ಲ, ನಾನು ಹೋಗಿ ನಾಮಕರಣ ನಲ್ಲಿಸುವುದು ಮಂಗಳವಾರವೇ, ಏಕೆಂದರೆ ಅವತ್ತು ಚೆನ್ನಾಗಿರುತ್ತದೆ ಗಲಾಟೆ ಇರುವುದಿಲ್ಲ ಆದರೂ ಗೆಲ್ಲುತ್ತೇವೆ. ಅದರ ಬಗ್ಗೆ ತಕರಾರೇನಿಲ್ಲ. ಆದರೆ ನನಗನ್ನಿಸುತ್ತದೆ, ಎಲ್ಲೋ ಒಂದು ಕಡೆ ನಿಮಗೆ ನಂಬಿಕೆ ಇದೆ, ಇಲ್ಲವೆಂದು ನಾನು ಹೇಳುವುದಿಲ್ಲ. ನಂಬಿಕೆ ಹೇಗಿದೆ ಎಂದರೆ ಇಡೀ ಸರ್ಕಾರಕ್ಕೆ ನಂಬಿಕೆ ಇದೆ. ಒಂದು ಕಡೆ ಮುಖ್ಯಮಂತ್ರಿಗಳು ಅವರು ಈ ೧೨-೧೩ ತಿಂಗಳುಗಳಲ್ಲಿ ೬ ತಿಂಗಳು ಜ್ಯೋತಿಷಯರವರ ಹತ್ತಿರ ಹೋಗಿದ್ದಾರೆ, ಮಠಗಳಿಗೆ ಹೋಗಿದ್ದಾರೆ, ಶಾಸ್ತ್ರದವರ ಹತ್ತಿರ

ಹೋಗಿದ್ದಾರೆ, ಮಾಟಕ್ಕೆ ಹೋಗಿದ್ದಾರೆ, ಹೀಗೆ ಅನೇಕ ಕಡೆ ಹೋಗಿ ಬಂದಿದ್ದಾರೆ ಮತ್ತು ಬೇರೆ ಬೇರೆ ರಾಜ್ಯದ ಯಾವ್ಯಾವ ದೇವರುಗಳು ಏನೇನು ವರ ಕೊಡುತ್ತದೆಂದು ಯಾರ್ಯಾರು ಹೇಳಿದರೋ ಅಂಥ ಎಲ್ಲಾ ಕಡೆಗೆ ಹೋಗಿ ಬಿದ್ದು ಬಿದ್ದು ಬಂದಿದ್ದಾರೆ. ಇವತ್ತು ಎಲ್ಲಿ ಹೋಗಿದ್ದಾರೋ ಗೊತ್ತಿಲ್ಲ. ಯಾವ ದೇವಸ್ಥಾನಕ್ಕೆ ಹೋಗಿದ್ದಾರೋ ನಮಗಂತೂ ಗೊತ್ತಿಲ್ಲ. ಅವರು ಎಲ್ಲಿಗಾದರೂ ಹೋಗಲಿ, ಅದರ ಬಗ್ಗೆ ನನಗೆ ಚಿಂತೆ ಇಲ್ಲ. ತಾವು ಸಹ ಅಧಿಕಾರಕ್ಕೆ ಬಂದ ತಕ್ಷಣ ಬಹಳ ಜನ ಕಿವಿಯಲ್ಲಿ ಒಬ್ಬರು ಬರುತ್ತಾರೆ, ತಲೆಯ ಮೇಲೆ ಒಬ್ಬರು ಕುಳಿತುಕೊಳ್ಳುತ್ತಾರೆ, ಹೆಗಲ ಮೇಲೆ ಒಬ್ಬರು ಕುಳಿತುಕೊಳ್ಳುತ್ತಾರೆ. ಸರ್ – ಈ ತಾಯಿತ ಕಟ್ಟಿಕೊಳ್ಳಬೇಕು, ದಾರ ಕಟ್ಟಿಕೊಳ್ಳಬೇಕು, ಕೆಂಪು ಉಂಗುರ ಹಾಕಿಕೊಳ್ಳಬೇಕು. ನೀಲಿ ಬಟ್ಟೆ ತೊಟ್ಟುಕೊಳ್ಳಬೇಕು, ಕಿವಿಗೆ ಹೂ ಹಾಕಿಕೊಳ್ಳಬೇಕು, ವಿಭೂತಿ ಧರಿಸಬೇಕು, ಕುಂಕುಮ ಹಾಕಬೇಕು ಎಂದು ಹೇಳುತ್ತಾರೆ. ನಾವು ಅದಕ್ಕೆಲ್ಲ ಸೋಲುತ್ತೇವೆ. ನಾವು ಇದಕ್ಕೆ ಸೋತಿಲ್ಲ. ಆದರೆ, ನಾಳೆ ಅವರುಗಳಿಂದಲೇ ರಾಜ್ಯ ನಡೆಯಬೇಕೆಂದು ಹೇಳಿದರೆ ಗತಿ ಏನು ? ನಾಳೆ ಈ ಮಾಯಾ ಮಂತ್ರಗಳಿಂದಲೇ ರಾಜ್ಯ ನಡೆಯಬೇಕಾದರೆ ತತ್ವ ಸಿದ್ಧಾಂತಗಳನ್ನೆಲ್ಲ ಚರಂಡಿಗೆ ಹಾಕಬೇಕು. ನೀತಿ ನಿರೂಪಣೆಗಳನ್ನೆಲ್ಲ ಈ ಗಟಾರಕ್ಕೆ ಹಾಕಬೇಕು. ಅಂದರೆ ಆವಾಗ ೩ ನೇ ಮಹಡಿಯಲ್ಲಿ ಅವರೆಲ್ಲರೂ ಒಬ್ಬೊಬ್ಬರಿಗೆ ಒಂದೊಂದು ಕಾರ್ಯಾಲಯಗಳನ್ನು ಮಾಡಿ ಬೆಳಗ್ಗೆ ೬ ಗಂಟೆಗೆ ಅಲ್ಲಿ ನೋಡೋಣ, ಮುಖ್ಯ ಕಾರ್ಯದರ್ಶಿ ಬೇಡ ! ಬರೆಸಬೇಕು, ಎಲ್ಲಿ ನೋಡೋಣ, ಇವತ್ತು ಯಾವ ದೇವರ ಪೂಜೆ ಮಾಡೋಣ, ಮಾರಿಯೋ, ಲಕ್ಷ್ಮಿಯೋ, ಶಿವಲಿಂಗವೋ, ಯಾರ ಪೂಜೆ ಮಾಡೋಣ ವೆಂದು ಅವರು ಹೇಳಿದ ಪ್ರಕಾರ ನಾವು ಹೋಗಬೇಕು. ನಮ್ಮ ರಾಜ್ಯ ಅವರು ಹೇಳಿದ ಪ್ರಕಾರ ನಡೆಯಬೇಕು. ಈ ಮೂಢ ನಂಬಿಕೆಗಳೇ ಬೇರೆ. ಈ ತರಹ ರಾಜ್ಯ ನಡೆಯುವುದಾದರೆ, ಸಂವಿಧಾನ ಅವನ್ನೆಲ್ಲ ತೆಗೆದುಕೊಂಡು ಹೋಗಿ ಕಟ್ಟಿ ಎಲ್ಲೋ ಒಂದು ಕಡೆ ಇಟ್ಟು, ಸಮುದ್ರಕ್ಕೆ ಹಾಕಿಬಿಡಬೇಕು. ಸಂವಿಧಾನ, ಇದರಲ್ಲಿ ಅರ್ಥವಿಲ್ಲ. ಎಲ್ಲಾದರೂ ಉಂಟೆ? ನೀವು ಬಹುಮತ ಪಡೆದು ಬಂದಿರಿ, ಅಲ್ಲಿ ಕುಳಿತುಕೊಂಡಿರಿ, ಈ ಸಮ್ಮಿಶ್ರ

ಸರ್ಕಾರ ಅಧಿಕಾರಕ್ಕೆ ಬಂದಿರುವುದು ಸಂತೋಷವೇ. ಸ್ವಲ್ಪ ತಾಳ್ಮೆಯಿಂದ ಇದ್ದಿದ್ದರೆ ಮಾನ್ಯ ಯಡಿಯೂರಪ್ಪನವರು ಉಪಮುಖ್ಯಮಂತ್ರಿಗಳಾಗುತ್ತಿರ ಲಿಲ್ಲ. ಮಾನ್ಯ ಕುಮಾರಸ್ವಾಮಿ ಮುಖ್ಯಮಂತ್ರಯಾಗುತ್ತಿರಲಿಲ್ಲ, ಮಾನ್ಯ ಧರ್ಮಸಿಂಗ್ ರವರೂ ಇಳಿಯುತ್ತಿರಲಿಲ್ಲ. ಆದ್ದರಿಂದ, ನನಗನ್ನಿಸಿತು, ತತ್ವ, ಸಿದ್ಧಾಂತಗಳ ಮೇಲೆ ಆಗಿಯೇ ಇಲ್ಲ. ಸ್ವಲ್ಪ ವಿವೇಚನೆ ಇದ್ದಿದ್ದರೆ, ಖಂಡಿತ ಅಲ್ಲಿ ಬರುವುದಕ್ಕೆ ಸಾಧ್ಯವಿರಲಿಲ್ಲ. ಅವರು ಸ್ವಲ್ಪ ತಾಳ್ಮೆ ತಪ್ಪಿದ್ದರಿಂದ ಮಾನ್ಯ ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾದರು ಮಾನ್ಯ ಯಡಿಯೂರಪ್ಪ ನವರು ಉಪ ಮುಖ್ಯಮಂತ್ರಿಗಳಾದರು. ಅಂದರೆ, ನಿಮ್ಮೆ ಶ್ರೀ ಇಲ್ಲವೆಂದು ಹೇಳುತ್ತಿಲ್ಲ. ಈಗಿನ ಪರಿಸ್ಥಿತಿಯಲ್ಲಿ ನಿಮ್ಮ ಸಮ್ಮಿಶ್ರ ಸರ್ಕಾರ ಬರುವ ಧರ್ಮಕ್ಕೆ ಮಾನ್ಯ ಸಿದ್ದರಾಮಯ್ಯವನರು ಕಾರಣ. ನಿಮ್ಮ ಸಕಾರ ರಚನೆಯಾಗುವುದಕ್ಕೆ ನೇರವಾಗಿ ಮಾನ್ಯ ಸಿದ್ದರಾಮಯ್ಯನವರೇ ಕಾರಣ. ಅದರ ಬಗ್ಗೆ ಬೇರೆ ಮಾತಿಲ್ಲ. ಆದ್ದರಿಂದ, ನಿಮಗೆಷ್ಟೇ ದ್ವೇಷ, ಕೋಪ, ತಾಪ ಇರುವುದು ಗೊತ್ತಾದರೂ, ಮಾನ್ಯ ಸಿದ್ದರಾಮಯ್ಯನವರ photo ಇಟ್ಟಿಕೊಂಡು ನೀವು ಮನೆಯಲ್ಲಿ ಪೂಜೆ ಮಾಢುವುದು ಒಳ್ಳಯದು ಎಂದು ಹೇಳುತ್ತೇನೆ. ಅದು ಸತ್ಯ. ಆದರೆ, ಅವರ ದುಡುಕಿನಿಂದ ಮಾನ್ಯ ಧರ್ಮಸಿಂಗ್ ಈ ಕಡೆ ಬರಬೇಕಾಯಿತು, ಅವರು ಆ ಕಡೆ ಬರಬೇಕಾಯಿತು. ನಿಮ್ಮ ಪರಿಸ್ಥಿತಿ ನೋಡಿ ನನಗೆ ನೋವಾಯಿತು. ಚುನಾವಣೆಗೆ ನಿಲ್ಲಬೇಡಿ ಎಂದೆ. ಚುನಾವಣೆಗೆ ಹೋದಿರಿ. ನೀವು ಯಾವ ಸಿದ್ಧಾಂತವನ್ನಿಟ್ಟುಕೊಂಡಿದ್ದಿರಿ ? ಮಠಳಿಗೆ ಹೋದಿರಿ ; ಶಾಸ್ತ್ರ ಕೇಳಿದಿರಿ? ಬೀದಿಗೆ ಹೋದಿರಿ ; ಎಲ್ಲ ಕಡೆ ಹೋದಿರಿ. ನಿಮ್ಮ ಪರಿಸ್ಥಿತಿ ನೋಡಿ ಒಂದು ಕಡೆ ನನಗೆ ವ್ಯಥೆಯಾಯಿತು. ಆದ್ದರಿಂದ, ಈ ವ್ಯವಸ್ಥೆ ಬದಲಾವಣೆಯಾಗಬೇಕಾದರೆ, ಈ ರಾಜ್ಯದಲ್ಲಿ ಮೂಲ ಪುರುಷ ಮಾನ್ಯ ಸಿದ್ದರಾಮಯ್ಯ ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

ಉಪಾಧ್ಯಕ್ಷರು : ಮಾನಯ ಸಿದ್ಧರಾಮಯ್ಯನವರೆ, ನೀವು ಮಾತನಾಡುವುದಾದರೆ, ಶುರು ಮಾಡಿ.

ಶ್ರೀ ಸಿದ್ದರಾಮಯ್ಯ : ಈಗ ನಾನು ಮಾತನಾಡಲು ಶುರು ಮಾಡುವುದಿಲ್ಲ. ಮಾನ್ಯ ಯಡಿಯೂರಪ್ಪರವರು ನಾಳೆ ಬೆಳಗ್ಗೆ ಸದನ ೯ ಗಂಟೆ ಸೇರಲು ಒಪ್ಪಿಕೊಂಡಿದ್ದಾರೆ. ನೀವು ಸ್ವಲ್ಪ ಅವರಿಗೆ ಹೇಳಿದರೆ ಆಯಿತು. ನಾಳೆ ಬೆಳಗ್ಗೆ ೧೧.೩೦ಕ್ಕೆ ಉತ್ತರ ಕೊಡುವುದಕ್ಕೆ ಅವರು ಒಪ್ಪಿಕೊಂಡಿದ್ದಾರೆ. ೯ ಗಂಟೆಗೆ ಸೇರಿ, ೧೧.೩೦ ಗಂಟೆಗೆ ಉತ್ತರ ಕೊಡುವುದು, ೨ ಗಂಟೆಯೊಳಗೆ ಮುಗಿಸಬಹುದದು.

ಶ್ರೀ ಜೆ.ಸಿ ಮಾಧುಸ್ವಾಮಿ : ನಾಳೆ ಬೆಳಗ್ಗೆ ೧೨ ಗಂಟೆಗೆ ಮೊದಲು ಅವರು ಉತ್ತರ ಕೊಡಬಾರದು.

ಶ್ರೀ ಸಿದದರಾಮಯ್ಯ : ಅದೇನು time ನೋಡಿ ಬೇಕಾದರೆ ಉತ್ತರ ಕೊಡಲಿ.

ಉಪಾಧ್ಯಕ್ಷರು : ಅವರೇನು ಹೇಳುತ್ತಾರೆ, ಕೇಳೋಣ.

ಶ್ರೀ ಸಿದ್ದರಾಮಯ್ಯ : ಇನ್ನೂ ೪-೫ ಜನ ಮಾತನಾಡುವವರಿದ್ದರೆ ಮಾತನಾಡಲಿ.

ಶ್ರೀ ಎಂ.ಪಿ. ಪ್ರಕಾಶ್ (ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳ ಸಚಿವರು) : ಅವರು ಸಲಹೆಯನ್ನು ಕೊಟ್ಟಿದ್ದಾರೆ. ಆದರೆ, ಇವತ್ತು ಎಲ್ಲರೂ ಮಾತನಾಡಬೇಕಾಗಿರುವುದರಿಂದ ಇವತ್ತು ನಮ್ಮೆಲ್ಲ ಸದಸ್ಯರು ಮಾತನಾಡಲಿ. ಅಕಸ್ಮಾತ್ ಒಬ್ಬರೋ ಇಬ್ಬರೋ ಉಳಿದಿರತಕ್ಕಂಥವರು ನಾಳೆ ಮಾತನಾಡಲಿ. ಅದಕ್ಕೆ ನಮ್ಮದ್ಯಾರದೂ ಆಕ್ಷೇಪಣೆ ಇಲ್ಲ. ಆದರೆ, ನಾಳೆ ನಮ್ಮ Taxation Bills ಅನ್ನು ನಾವು ಪಾಸ್ ಮಾಡಿಯೇ ತೀರಬೇಕಾತ್ತದೆ. ೧ ನೇ ತಾರೀಖಿನ ದಿವಸದಿಂದ ಅದು ಜಾರಿಗೆ ಬರಬೇಕಾಗಿರುವುದರಿಂದ Taxation Bills ಮೇಲ್ಮನೆಯಲ್ಲಿ ಒಪ್ಪಿಗೆಯಾಗದೇ ಇದ್ದರೆ ನಾವಿಲ್ಲಿ ಮಾಡುವುದಕ್ಕೆ Taxation Bill move ಮಾಡುವುದಕ್ಕೆ ಬರುವುದಿಲ್ಲ. ಅಲ್ಲಿ ಒಪ್ಪಿಗೆಯಾಗಿದೆ ಎಂದ ತಕ್ಷಣವೇ 'ಇಲ್ಲಿ ತರುತ್ತೇವೆ. ತಾವು ದಯವಿಟ್ಟು ನಾಳೆ ಸಹಕರಿಸಿ. Taxation Bill ಮೇಲೆ ತಾವು ಹೋದ

ವರ್ಷ ಎತ್ತಿದಂತೆ ಆಕ್ಷೇಪಣೆ ಎತ್ತುವುದಿಲ್ಲವೆಂದು ಹೇಳುವುದಾದರೆ, ಈಗ ಉಳಿದಿರುವ ನಮ್ಮ ಸದಸ್ಯರು ಮಾತನಾಡಲಿ, ನಾಳೆ ಬೆಳಗ್ಗೆ ೯ ಗಂಟೆಗೆ ಸದನ ಸೇರೋಣ. ೧೧ ಗಂಟೆಯವರೆಊ ಕೂಡ ಯಾರೇ ಆಗಿರಲಿ, ಎಷ್ಟು ಜನರಾಗಲಿ ಮಾತನಾಡಲಿ. ೧೧ ಗಂಟೆಯಿಂದ...

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಯಡಿಯೂರಪ್ಪರವರು ರಾಹು ಕಾಲದಲ್ಲಿ ಶುರು ಮಾಡುವುದು ಬೇಡ. ೧೨ ಗಂಟೆ ಕಳೆದು ಶುರು ಮಾಡಲಿ ಎಂದೆ ನೀವು ೧೦ ಗಂಟೆಗೇ ಮಾಡಿ ನನಗೇನಾಗಬೇಕು ?

ಶ್ರೀ ಸಿದ್ದರಾಮಯ್ಯ : ಲಂಚ್ time ವರೆಗೂ 2 hours time ಇರುತ್ತದೆ. ೧೨ ರಿಂದ ೨ ಗಂಟೆ. ಅವರು ೨ ಗಂಟೆ ಉತ್ತರ ಕೊಡಲಿ.

ಶ್ರೀ ಎಂ.ಪಿ. ಪ್ರಕಾಶ್ : ರಾಹು ಕಾಲ ಅದೆಲ್ಲ ಮಾನ್ಯ ರೇವಣ್ಣವರು ಹೇಳುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ತಾವು ನೋಡಿ, ಬಜೆಟ್ ಮಂಡನೆ ಮಾಡುವ ದಿವಸ ಶುಕ್ರವಾರ ೧೨.೩೦ ಗಂಟೆಗೆ time fix ಮಾಡಿದ್ದಿರಿ. ಈಗಲೂ ಹಾಗೇ ಮಾಡಲಿ ಎಂಬುದು ನಮ್ಮ ಅಭಿಪ್ರಾಯ ಅಷ್ಟೇ. ಬೇರೇನಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ನಾಡಿದ್ದು ರಜೆ ಇಲ್ಲದೇ ಇದ್ದರೆ ಈ ಮಾತು ಮಾತನಾಡಬಹುದಿತ್ತು. ಅದು Assembly ಇಲ್ಲ. ಅದೇ ಸಮಸ್ಯೆ ನಮಗೆ ಬಂದಿರುವುದು. ಆಯಿತು. ಹಾಗಾದರೆ, ಸನ್ಮಾನ್ಯ ಅಧ್ಯಕ್ಷರೆ, ಒಂದು ಮಾತು. ನಮ್ಮ Taxation Bill ಗೆ ವಿರೋಧ ಮಾಡಬಾರದು. ಮೇಲ್ಮನೆಯಲ್ಲಿಯೂ ಕೂಡ ಕಾಂಗ್ರೆಸ್ ಸದಸ್ಯರು ಸಹಕಾರ ಕೊಡಬೇಕು. ಆ ಮಾತನ್ನು ನಿಮ್ಮ ನಾಯಕರು ಹೇಳಬೇಕು. ಏಕೆಂದರೆ ಹಿಂದೆ ನಾವು ಅನುಭವಿಸಿದ್ದೇವೆ. ಅದು ಹಿಂದೆ ವಾಪಸ್ ಬಂದಿದ್ದಿದೆ. ಅದು ಇಲ್ಲಿಯದಾಯಿತು. ಮೇಲ್ಮನೆಯಲ್ಲಿಯೂ ಕೂಡ ಸಹಕಾರ ಸಿಗಬೇಕು. ಕಳೆದ ಬಾರಿ ಮೇಲ್ಮನೆಯಲ್ಲಿ ಸಹಕಾರ ಸಿಗಲಿಲ್ಲ. ನಾವು ಬೇರೇನೂ ತರುವುದಿಲ್ಲ. Taxation Bill ತಂದೇ ತರುತ್ತೇವೆ.

ಶ್ರೀ ಸಿದ್ದರಾಮಯ್ಯ : ಹೊಸ Tax ಗಳ ಬಗ್ಗೆ ಏನು ಹೇಳಿದ್ದಾರೆ, Motro Vehicles Tax, Motor Vehicles Act ಅದನ್ನು ತಿದ್ದುಪಡಿ ಮಾಡಬೇಕು. ಆಮೇಲೆ, Stamp and Registration Act ತಿದ್ದುಪಡಿ ಮಾಡಬೇಕು. Excise Act, Rules ಅವೆಲ್ಲ ತಿದ್ದುಪಡಿ ಮಾಡಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ : ತಪ್ಪು ಅಭಿಪ್ರಾಯ ಬೇಡ. Consequential Bill ಆದರೆ ನಾವು ವಿರೋಧ ಮಾಡುತ್ತಿರಲಿಲ್ಲ. Organization ಅನ್ನು ಕೂಡ re-organize ಮಾಡುವುದನ್ನು ಅದರಲ್ಲಿ ಸೇರಿಸಿದ್ದಿರಿ. ಮಾನ್ಯ ಯಡಿಯೂರಪ್ಪರವರೆ, ಎಂದು ನಾನು ತಕರಾರು ಎತ್ತಿದ್ದೆ? ಈಗಲೂ ನೀವು ಅಂಥದ್ದೆಲ್ಲ Bill ನಲ್ಲಿ ಸೇರಿಸಿದರೆ ನಾವು ಯೆಸ್ ಅನ್ನುವುದಕ್ಕಾಗುತ್ತದೆಯೇ ?

ಶ್ರೀ ಎಂ.ಪಿ. ಪ್ರಕಾಶ್ : Taxation Bill ಗಳನ್ನು pass ಮಾಡಿಕೊಡತಕ್ಕಂಥದ್ದು ಒಂದು ಆಗಬೇಕು. ಎರಡನೆಯದಾಗಿ, ಮೇಲ್ಮನೆಯಲ್ಲಿ ಸಹಕಾರ ಕೊಡಬೇಕು. ಅದಕ್ಕೆ ವಿರೋಧ ಪಕ್ಷದ ನಾಯಕರನ್ನು ಹೇಳಿ ಕಳುಹಿಸಿದರೆ ಒಳ್ಳೆಯದು.

ಶ್ರೀ ಎಸ್.ಎಸ್. ಪಾಟೀಲ್ : ಅಂಜಿಕೆ ಇದ್ದ ಹಾಗೆ ಕಾಣುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ : ಅಂಜಿಕೆಯಲ್ಲ (ಗೊಂದಲ) ಕಳೆದ ಸಾಲ ತಿರಸ್ಕೃತ ಆಯಿತು. ಈ ಸಲವೂ ಹಾಗೆ ಮಾಡಿಬಿಟ್ಟರೆ ಗತಿ ಏನಿದೆ?

ಉಪಾಧ್ಯಕ್ಷರು : ಈಗ ಅವರ ಸಮಸ್ಯೆ ಏನು ಹೇಳುತ್ತಿದ್ದಾರೆ, ಕೇಳಿ, ಅದಕ್ಕೆ ಸರಿಯಾಗಿ ಉತ್ತರ ಕೊಡಿ.

ಶ್ರೀ ಎಂ.ಪಿ. ಪ್ರಕಾಶ್ : ಆದ್ದರಿಂದ, ಅದಕ್ಕೆ ತಾವು ಒಪ್ಪಿಗೆ ಕೊಡುವುದಾದರೆ, ನಮ್ಮದೇನೂ ಆಕ್ಷೇಪಣೆ ಇಲ್ಲ. ತಾವು ಹೇಳಿದಂತೆ, ಮಾನ್ಯ ಉಪ ಮುಖ್ಯಮಂತ್ರಿಗಳು ೧೨ ಗಂಟೆಗೆ ಉತ್ತರ ಕೊಡುತ್ತಾರೆ.

ಉಪಾಧ್ಯಕ್ಷರು : ಹಾಗಾದರೆ, ಆಳೆ ಬೆಳಗ್ಗೆ ೯ ಗಂಟೆಗೆ ಸದನವನ್ನು ಶುರು ಮಾಡುವುದೇ ?

ಶ್ರೀ ಎಂ.ಪಿ. ಪ್ರಕಾಶ್ : ಎಲ್ಲರೂ ಏನು ಹೇಳುತ್ತಿದ್ದಾರೆ, ಹೇಳಿ.

ಶ್ರೀ ಸಿದ್ದರಾಮಯ್ಯ : ಹೊಸದಾಗಿ ಏನೂ ತರುವುದಕ್ಕೆ ಹೋಗಬೇಡಿ.

ಶ್ರೀ ಎಂ.ಪಿ. ಪ್ರಕಾಶ್ : ಹೊಸದಾಗಿ ಬರತಕ್ಕಂಥದ್ದು ಏನೂ ಇರುವುದೇ ಇಲ್ಲವಲ್ಲ. ಎಲ್ಲಿ ಬರುತ್ತದೆ? Consequential Bills ನಲ್ಲಿ technical faults ಇಟ್ಟುಕೊಂಡು ಯಾವುದರ ಕೆಳಗೆ ಮಾಡುತ್ತಿದ್ದೀರಿ, ಇದರ ಕೆಳಗೆ ಎಲ್ಲಿ ಮಾಡುತ್ತಿದ್ದೀರಿ, ಎಂದು ಗಂಟೆಗಟ್ಟಲೆ ಆಗುವುದು.

(ಗೊಂದಲ)

ಉಪಾಧ್ಯಕ್ಷರು : ಅವರು ಮಾತನಾಡಿದ ಮೇಲೆ ಮಾತನಾಡಿ. ಬೇಡವೆಂದವರು ಯಾರು ? ಇಲ್ಲರೂ ಮಾತನಾಡಿ.

ಶ್ರೀ ಎಸ್. ರಾಜೇಂದ್ರನ್ (ಕೆಜಿಎಫ್) : ಮಾನ್ಯ ಉಪಾಧ್ಯಕ್ಷರೆ, ನಾನು ಬಜೆಟ್ ಮೇಲೆ ವಿಸ್ತಾರವಾಗಿ ಮಾತನಾಡುವುದಿಲ್ಲ. ಯಾವಾಗ ಒಬ್ಬರು ಬಜೆಟ್ಗ ಮಾಡುತ್ತಾರೆ. ಆ ಬಜೆಟ್ ಮಾಡುವುದಕ್ಕಿಂತ ಮುಂಚೆ ಅವರ ಜೊತೆಯಲ್ಲಿರುವ ಅಧಿಕಾರಿಗಳು ಸ್ವಲ್ಪ ಚಿಂತನೆ ಮಾಡಿ ಬಜೆಟ್‌ಗೆ idea ಕೊಡಬೇಕು. ಇಲ್ಲವೆಂದರೆ, Finance Minsiter ಗೆ ಒಂದು idea ಬಂದಿರಬೇಕು. ಅವರ ಪ್ರಕಾರ ಬಜೆಟ್ ಅನ್ನು ಬಹಳ ಚೆನ್ನಾಗಿ ಮಾಡಿದ್ದಾರೆ. ಬಹಳ ಚೆನ್ನಾಗಿ ಬಜೆಟ್ ಮಾಡಿದ್ದೀರಿ, ಎಲರಿಗೂ ದುಡ್ಡು ಕೊಟ್ಟಿದೀರಿ, ಯಾರ್ಯಾರಿಗೆ ಎಷ್ಟೆಷ್ಟು ಕೊಡಬೇಕೆಂದು ಯೋಚನೆ ಮಾಡಿ ಕೊಟ್ಟಿದ್ದೀರಿ ಎಂದು ನಾವು ನಿಜವಾಗಲೂ ಒಪ್ಪಿಕೊಳ್ಳುತ್ತೇವೆ. Social Welfare Department SC/ST ಗೆ ತಾವು ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ ಎಂದು ಯೋಚನೆ ಮಾಡಿ SC/ST Corportation ಗೋ ಅಥವಾ Social Welfare Department ಗೋ ತಾವು ಸುಮಾರು ೧೪ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕು. ೧೪ ಸಾವಿರ ಕೋಟಿ ರೂಪಾಯಿಗಳೇನು electric bill ಕಟ್ಟಬೇಕೆ ? ಪಟ್ಟಿ ಮಾಡಿ ನೋಡಿದರೆ, ೨೦೦೧-೦೨ ನಲ್ಲಿ 13 bore wells, 2002-03 ನಲ್ಲಿ 88 bore wells,

2003-04 ನಲ್ಲಿ 500 borewells, 2004-05 ನಲ್ಲಿ 1,460 bore wells ನಲ್ಲಿ 2005-06 ನಲ್ಲಿ 5,629, 2006-07ನಲ್ಲಿ 5,827 borewells ಇದಕ್ಕೆ ಹಣ ಒದಗಿಸಬೇಕು. ಒದಗಿಸಿದ್ದಾರೆಯೇ ? Social Welfare ಗೆ ಕಟ್ಟುವುದಕ್ಕಗುತ್ತದೆಯೇ ? ನಿಮಗೆ ಹಣ ಬಿಡುಗಡೆ ಮಾಡಿದ್ದಾರೆಯೇ ? ನಿಮಗೆ ಕೊಟ್ಟಿರುವ ಹಣ ಎಷ್ಟೆಂದರೆ, ೧ ಕೋಟಿ ೮೬ ಲಕ್ಷ ರೂಪಾಯಿ. ಅಷ್ಟು ಹಣ ಇಟ್ಟುಕೊಂಡು ಗಂಗಾ ಕಲ್ಯಾಣ scheme ನಲ್ಲಿ ಚುನಾವಣೆಗೆ ಮುಂಚೆ ನಾವು Schedule Caste, Schedule Tribe ಜನರಿಗೆ ಹಾಗೆ, ಹೀಗೆ ಮಾಡುತ್ತೇವೆಂದರು. ಯಾರೂ ಕೇಳುವವರೇ ಇಲ್ಲವೆಂದರೆ, Finance Minister, what mercy he is having about the Schedule Caste and Schedule Tribe ? Schedule Caste ಜನರಿಗೆ ನಾವು ಇಷ್ಟು ಮಾಡಿದ್ದೇವೆ, ಬಡವರ ಬಗ್ಗೆ ನಮಗೆ ಚಿಂತನೆ ಇದೆ ಎಂದು ಹೇಳುವುದನ್ನು ಪತ್ರಿಕೆಗಳಲ್ಲಿ ಕಾಣಬಹದುಉ. ಎಲ್ಲಿದೆ ? Where it is ? Practically it is not.ನಾವು ಏನಾದರು Hon'ble Minsiter ಅವರಲ್ಲಿ ಸ್ವಲ್ಪ ಜೋರಾಗಿ ಏನು ಸ್ವಾಮಿ ನಮಗೆ ಹೀಗೆ ಅನ್ಯಾಯ ಮಾಡಿದಿರಿ ಎಂದು ಕೇಳಿದರೆ, ಅವರು ನಮ್ಮ ಮೇಲೆ ಸಿಟ್ಟಾಗಿ ಬಿಡುತ್ತಾರೆ. ಏನ್ರೀ ನಿಮಗೆ ಇಷ್ಟೆಲ್ಲಾ ಕೊಟ್ಟಿದ್ದೇನೆಂದು ಹೇಳುತ್ತಾರೆ. ಎಷ್ಟು ಕೊಟ್ಟಿದ್ದೀರಿ ಸ್ವಾಮಿ ? ನೀವೇ ನೋಡಿ ಅದರ ಜೊತೆಗೆ ಪೂಲ್ಡ್ ಅಮೌಂಟ್ ಒಎಂದು ಎದೆ. ಆದರೆ ಪ್ರತಿಯೊಂದು ಇಲಾಖೆಯಲ್ಲಿ ಆ ಅಮೌಂಟ್ ನ್ನು ಖರ್ಚು ಮಾಡುವುದಿಲ್ಲ. ಯಾರು ಕೇಳುವವರೇ ಇಲ್ಲ. ಆ ದುಡ್ಡಗಳೆಲ್ಲವನನು ಪೂಲ್ ಮಾಡಿ ಸಮಾಜ ಕಲ್ಯಾಣ ಇಲಾಖೆ ಕೊಟ್ಟಿದ್ದರೆ, ಅದು Scheduled Caste ಜನಗಳಿಗೆ ಅನುಕೂಲವಗುತ್ತದೆ. ಅದನ್ನು ಮಾಡಿಲ್ಲ ಕಾರಣ ಏನು ? Scheduled Caste ನವರು ಮೇಲೆ ಬರಬಾರದೆ ? ಇಲ್ಲಾಂದ್ರೆ ಅವರನ್ನು ಮಾಡಬೇಕೆ suppress ? ಬರಿ ಬಾಯಿನಲ್ಲಿ ಪತ್ರಿಕೆಗಳಲ್ಲಿ ಮಾತ್ರ Scheduled Caste ಜನಗಳಿಗೆ ನಾವು ಅನುಕೂಲ ಮಾಡಿದ್ದೇವೆಂದು ಹೇಳುವುದೆ ? Administration ಮಾಡುವವರು ಹಿಂದಿನ ಕಾಲದಲ್ಲೂ ಕೂಡ ಪುರಾಣಕಾಲದಲ್ಲೂ ಕೂಡ ಒಬ್ಬ ಮಹಾರಾಜ ತನ್ನ ದೇಶವನ್ನು ರಜ್ಯವನ್ನು ಪರಿಪಾಲನೆ

ಮಾಡಬೇಕೆಂದರೆ, ಒಳ್ಳೆಯ ಮಂತ್ರಗಳನ್ನು ಜೊತೆಯಲ್ಲಿಟ್ಟುಕೊಂಡು ಕೆಲಸ ಮಾಡಿದ್ದರು. ಮಹಾರಾಷ್ಟ್ರದಲ್ಲಿ ಛತ್ರಪತಿ ಶಿವಾಜಿ ಯವರು ತಮ್ಮ ಜೊತೆಗೆ ರಾಮದಾಸ ಎನ್ನುವವರು ಇದ್ದರು, a good administrator ಅವರಿಂದ ಅವರಿಗೆ ಒಳ್ಳೆಯ ಹೆಸರಾಗಿದೆ. ಹೀಗಾಗಿ history ನಲ್ಲಿ ಶಿವಾಜಿ ಅವರ ಹೆಸರು ಇದೆ. ತಾವು ಮಂತ್ರಿಗಳು ಒಳ್ಳೆಯವರಾಗಿರಬಹುದು. ನಿಮ್ಮ ಜೊತೆಯಲ್ಲಿ ಅಧಿಕಾರಿಗಳು ನಿಮಗೆ ಸರಿಯಾಗಿ ಮಾಹಿತಿ ಕೊಟ್ಟಿದ್ದಾರೆಯೆ ? ಕೊಟ್ಟಿಲ್ಲ. ಹೀಗಿರುವಾಗ ನಾವು ಹೇಗೆ ಸ್ವಾಮಿ Scheduled Caste ಜನರಗಳಿಗೆ treatment ಮಾಡುವುದು ? ರೈತರ ಮೇಲೆ ಅಪಾರ ಪ್ರೀತಿ. ಅದರಲ್ಲಿ ತಾವೇನು ಹೇಳಬಹುದು Scheduled Caste ಜನರು ರೈತರಾಗಿದ್ದಾರೆಂದು ಹೇಳಬಹುದು. ಮಾನ್ಯ ಶ್ರೀನಿವಾಸ ಗೌಡರೆ, Scheduled Caste ಜನರು ರೈತರಾಗಿದ್ದಾರೆಯೇ? ರೈತರು ಕೂಲಿ ಕೆಲಸ ಮಾಡುವವರಾಗಿದ್ದಾರೆ. ನನ್ನ ಬಂಗಾರಪೇಟೆ ತಾಲ್ಲೂಕಿನಲ್ಲಿ Scheduled Caste ಜನ ೫ ಎಕರೆ ಜಮೀನು ಇಟ್ಟುಕೊಂಡಿರುವವರು ಎಷ್ಟು ಜನ ಇದ್ದಾರೆಂದು count ಮಾಡಿ ನೋಡಿ. ೧೦ ಜನ ಇರುವುದಿಲ್ಲ. ಅವರಿಗೆ ನೀವು ಸಾಲ ಮನ್ನಾ ಮಾಡುತ್ತೇನೆಂದು ಹೇಳುತ್ತೀರಾ ? ಏಕೆ ? ನೀವು ರೂ. ೨೦೦ ಕೋಟಿ Welfare department ಗೆ ಕೊಡಿ. ಮಂತ್ರಿಗಳು ಕೇಳುತ್ತಾರೋ ಇಲ್ಲವೋ but ನಾನು ಕೇಳಬೇಕು. ಇಡೀ ರಾಜ್ಯದಲ್ಲಿರುವ Scheduled Caste ಜನರಿಗೋಸ್ಕರ ನಾನು ಕೇಳಬೇಕು. ಅದಕ್ಕೆ ರೂ. ೨೦೦ ಕೋಟಿ ಕೊಡಿ. ರೂ. ೨೦೦ ಕೋಟಿ ಕೊಟ್ಟರೆ ಅವರಿಗೆ ಎಷ್ಟು loan ೫ ಸಾವಿರ ಪೆಟ್ಟಿ ಅಂಗಡಿಗೆ, ೧೦ ಸಾವಿರ, ೧೫ ಸಾವಿರ maximum 20 ಸಾವಿರ, ೨೫ ಸವಿರ. ಇದಕ್ಕೆ ಅವರು ಬಡ್ಡಿ ಕಟ್ಟಬೇಕು. ಅವರೇನಾದರೂ ಬಡ್ಡಿ ಕಟ್ಟಿಲ್ಲವೆಂದರೆ ಅವರಿಗೆ ಬ್ಯಾಂಕ್ ಮುಖಾಂತರ ಮಾಡುತ್ತೀರಿ. ತೊಂದರೆಗಳನ್ನು ಕೊಡುತ್ತೀರಿ. ಕೇವಲ ಒಂದು ೧೦ ರಿಂದ ೨೫ ಸಾವಿರ ದುಡ್ಡು ತೆಗೆದುಕೊಂಡಿರುವವರಿಗೆ ನೀವು ವಾರೆಂಟ್ ಇನ್ನೂ ಮಾಡುತ್ತೀರಿ. ಅವನ ಆಟೋ ಸೀಜ್ ಮಾಡುತ್ತೀರಿ. ರೂ. ೨೦೦ ಕೋಟಿ ತೆಗೆದುಕೊಂಡು ನೀವು ಅವರ ಸಾಲ ಮನ್ನಾ ಮಾಡಿ. ಏಕೆ ಮಾಡಬಾರದು ? ಬರೀ ಚುನಾವಣೆ ಬಂದರೆ Scheduled Caste

ಜನಗಳ vote ಬೇಕು. They are vote banks. ಆ ದಿವಸ ಭಾಷಣ ಮಾತುತ್ತೀರಿ Scheduled Caste ರವರಿಗೆ ಹೀಗೆ ಮಾಡುತ್ತೇವೆ. ಅವರಿಗೆ ಎಲ್ಲಿ ಇಟ್ಟಿದ್ದೀರಿ, ಆಕಾಶದಲ್ಲಿ ಇಟ್ಟಿದ್ದೀರಿ. ತಾವು ಇದನ್ನು ನಿಜವಾಗಿಲೂ ಮಾಡಬೇಕು. ಮಾನ್ಯ ಈಶ್ವರಪ್ಪನವರೆ, ಖಂಡಿತವಾಗಿ ನಮ್ಮ Hon'ble ಮಾಡುವುದಿಲ್ಲ. Scheduled Caste ಬಗ್ಗೆ ಎಷ್ಟು ಗಂಭೀರವಾಗಿ ಮಾತನಾಡುತ್ತಿದ್ದೇನೆ. ಅದು ಅವರ ಕಿವಿಗೆ ಹೋಗಿದೆಯೋ ಇಲ್ಲವೋ ಗೊತ್ತಿಲ್ಲ. ಅದು ಹೋಗಿಲ್ಲವೆಂದರೆ ತಾವಾದರೂ ಹೇಳಿ. ಈ ಜನಕ್ಕೆ ಒಳ್ಳೆಯದು ಮಾಡಬೇಕು. ನ್ಯಾಯರೀತಿಯಾಗಿ ಸತ್ಯಾಂಶ ಕೆಲಸ ಮಾಡಬೇಕಾದರೆ, ಸರ್ಕಾರದ ಕೆಲಸ ಮಾಡಬೇಕೆಂದರೆ ಬಡವರಿಗೆ ಒಳ್ಳೆಯದು ಮಾಡಬೇಕು. ಆ ಚಿಂತನೆ ನಿಮಗಿಲ್ಲ.

ಶ್ರೀ ಕೆ. ಶ್ರೀನಿವಾಸ ಗೌಡ : ಮಾನ್ಯ ರಾಜೇಂದ್ರನ್ ರವರು ಹೇಳುವುದರಲ್ಲಿ ಬಹಳ ಅರ್ಥವಿದೆ. ಸಹಕಾರ ಸಂಘಗಳಲ್ಲಿ SC/ST ಜನಾಂಗ ಲೋನ್ ತೆಗೆದುಕೊಂಡಿರುವುದು ೨%. ನನಗೆ ಮಾಹಿತಿ ಇದೆ. ಅದರಿಂದ ನಾನು ಹೇಳುತ್ತೇನೆ. ಮಾನ್ಯ ರಾಜೇಂದ್ರನ್ ಹೇಳುತ್ತಿರುವುದು ಇವತ್ತು ಬೇರೆ ಸಮಾಜಗಳಿಗೆ ಸಿಕ್ಕುವಂಥ, ಏನು loan waive ಮಾಡುತ್ತಿದ್ದಾರೆ, ಇದರಿಂದಾಗಿ ಅವರಿಗೆ ಏನೇನು ಸಿಗುವುದಿಲ್ಲ. ಏಕೆಂದರೆ, ಅವರ್‍ಯಾರು ಸಹಕಾರ ಸಂಘಗಳಲ್ಲಿ ಮೆಂಬರ್ಗಳೇ ಅಲ್ಲ. ಅಲ್ಲಿ ಮೇಲ್ಜಾತಿ farmers ಇದ್ದಾರೆ, ಕಡಿಮೆ ಸಂಖ್ಯೆಯಲ್ಲಿ ಈ SC/ST ಯವರು ಇರುವುದರಿಂದ ಮಾನ್ಯ ಉಪ ಮುಖ್ಯಮಂತ್ರಿಗಳು ಇದರ ಬಗ್ಗೆ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಇದಕ್ಕೆ ಏನಾದರು ಹೇಳಬೇಕಾಗುತ್ತದೆ. ಕೇವಲ ೯೮% ತೆಗೆದುಕೊಂಡು ಹಾಗುವವರಿಗೆ ಅನುಕೂಲ ಸಿಗುತ್ತದೆ. ೨% ಗಿಂತ ಕಡಿಮೆಯಿರುವವರಿಗೆ ಏನೂ ಸಿಗುತ್ತಿಲ್ಲ. ಆದ್ದರಿಂದ ಇದನ್ನು ನೀವು ಯಾವ ರೀತಿ ಅವರಿಗೆ ಅನುಕೂಲ ಮಾಡುತ್ತೀರೆಂದು ಉತ್ತರ ಕೊಡುವಾಗ ಆದ್ಯತೆ ಕೊಡಬೇಕೆನ್ನುವ ಮಾತನ್ನು ಹೇಳಬೇಕಾಗುತ್ತದೆ.

ಶ್ರೀ ಆರ್.ಧ್ರುವನಾರಾಯಣ : ಈ SC/ST corporation ಮತ್ತು backward class ಇದರಲ್ಲಿ ಲೋನ್ ತೆಗೆದುಕೊಂಡಿರುವರಿಗೆ ಮನ್ನಾ ಮಾಡಬಹುದು.

ಶ್ರೀ ಎಸ್.ರಾಜೇಂದ್ರನ್ : ಈ drinking water ಬಗ್ಗೆ ಮಾತನಾಡುತ್ತೇನೆ. ಬರಗಾಲ ಈ ಬರಗಾಲದ ಬಗ್ಗೆ ಮಾತನಾಡುವ ಟೈಂ ನಲ್ಲಿ ಮಂತ್ರಿಗಳು ಅವರವರ administration ಅಧಿಕಾರಿಗಳನ್ನು ಜೊತೆಯಲ್ಲಿಟ್ಟುಕೊಂಡು correct ಆಗಿ ಮಾಡಬೇಕು. ಉದಾಹರಣೆಗೆ ಹೇಳುತ್ತೇನೆ. ಒಬ್ಬ ಮಹಾರಾಜ ತನ್ನ ರಾಜ್ಯವನ್ನು ಪಾರಿಪಾಲನೆ ಮಾಡುವ ಸಂದರ್ಭದಲ್ಲಿ ಬೇರೆ ರಾಜ್ಯಗಳಿಗೆ ಹೋಗಿ ಒಳ್ಳೆಯ ಫೈಟ್ ಮಾಡಿ ಅಕ್ಕ - ಪಕ್ಕದಲ್ಲಿನ ರಾಜ್ಯಗಳನ್ನು ಗೆದ್ದು ದೊಡ್ಡ ವಜ್ರ ತೆಗೆದುಕೊಂಡು ತನ್ನ ರಾಜ್ಯಕ್ಕೆ ಬರುತ್ತಿದ್ದನಂತೆ. ಆ ರಾಜರು ತನ್ನ ಊರಿಗೆ ಬಂದ ತಕ್ಷಣ ಆ ಊರಿನವರೆಲ್ಲರೂ, ರಾಜರು ಬಂದಿದ್ದಾರೆ ಎಲ್ಲರೂ ಬರಬೇಕು, ದೊಡ್ಡ ಫೆಲಿಸಿಟೇಷನ್ ಮಾಡಬೇಕೆಂದು ಹೇಳಿದಾಗ, ಆ ಊರಿನ ಜನಕ್ಕೆಲ್ಲಾ ಸಂತೋಷವೇ ಇಲ್ಲ. ಕಾರಣ ಏನೆಂದರೆ, ಕೆಲವರಿಗೆ ತಮ್ಮ ಯಜಮಾನ ತೀರಿ ಹೋಗಿರುವ ಸಂಕಟ, ಕೆಲವರಿಗೆ ತನ್ನ ಗಂಡ, ಮಕ್ಕಳು ತೀರಿ ಹೋಗಿರುವ ಸಂಕಟ, ಹೀಗಾಗಿ ರಾಜನಿಗೇಕೆ ಫೆಲಿಸಿಟೇಷನ್ ? ನಾವು ಏಕೆ ಅಲ್ಲಿಗೆ ಹೋಗಬೇಕು? ಎಂದುಕೊಂಡು ತಮ್ಮ ಊರಿನ ಪಕ್ಕದಲ್ಲಿಯೇ ಒಂದು ಬುದ್ದಿಸ್ಟ್ ಮಂಕ್ ಪ್ರೇಯರ್ ಮಾಡುತ್ತಿದ್ದಾರೆ, ಅಲ್ಲಿ ಹೋಗಿ ಅವರ ಪ್ರೇಯರ್ ಕೇಳೋಣ, ಇದು ನಮಗೆ ಏಕೆ ಬೇಕೆಂದು ಜನ ಮಾತನಾಡಿಕೊಂಡು ಅಲ್ಲಿಗೆ ಹೋದರು. ಇದು ರಾಜನ ಕಿವಿಗೆ ಬಿದ್ದಿದೆ. ನಾನು ಇಷ್ಟು ದೊಡ್ಡದಾದ ವಜ್ರ ತೆಗೆದುಕೊಂಡು ಸಂತೋಷವಾಗಿ ಬಂದಿದ್ದೇನೆ ಆದರೂ ಈ ಜನ ಅಲ್ಲಿಗೆ ಏಕೆ ಹೋಗುತ್ತಾರೆ ಎಂದು ಕೇಳಿದ್ದಕ್ಕೆ ಯಾರೊಬ್ಬರು ಆ ಬುದ್ದಿಸ್ಟ್ ಮಂಕ್ ಚೆನ್ನಾಗಿ ಭಾಷಣ ಮಾಡುತ್ತಿದ್ದಆರೆ, ಸಾರ್ ಅದಕ್ಕಾಗಿ ಜನರೆಲ್ಲರೂ ಅಲ್ಲಿಗೆ ಹೋಗಿದ್ದಾರೆಂದು ತಿಳಿಸಿದರು. ಆಗ ರಾಜ ಅಲ್ಲಿಗೆ ಒಂದು ನೋಟ್ ಕಳುಹಿಸಿ ಬುದ್ದಿಸ್ಟ್ ಮಂಕ್ ರವರೆ, ತಾವು ಸ್ವಲ್ಪ ನಮ್ಮ ಅರಮನೆಗೆ ಬನ್ನಿ ನೀವು ನಮ್ಮ ಅರಮನೆಗೆ ಬಂದರೆ ನಮಗೆ ಪುಣ್ಯ ಲಭಿಸುತ್ತದೆ, ತಾವು ಕೂಡ ನಮ್ಮ ಫಂಕ್ಷನ್ ನಲ್ಲಿ ಭಾಗವಹಿಸಬಹುದು ಎಂದು ಅವರಿಗೆ

ಹೇಳಿ, ಅವರನ್ನು ತಮ್ಮ ಅರಮನೆಗೆ ಕರೆದುಕೊಂಡು ಬಂದರೆ, ಜನರೆಲ್ಲರೂ ಬರುತ್ತಾರೆ ಎಂದು ಇವರ ಐಡಿಯಾ. ಅವರು ಬಂದ ತಕ್ಷಣ ಇವರು ವಜ್ರವನ್ನು ತೋರಿಸಿದರು. ನಾನು ಅಕ್ಕಪಕ್ಕದ ರಾಜ್ಯಗಳಿಗೆ ಹೋಗಿ ಗೆದ್ದು ಬಂದಿದ್ದೇನೆ ; ಈ ಲೋಕದಲ್ಲಿ ಎಲ್ಲಿಯೂ ಇಲ್ಲದ ಇದನ್ನು ತೆಗೆದುಕೊಂಡು ಬಂದಿದ್ದೇನೆ ನೋಡಿ ಎಂದು ಅದನ್ನು ತೋರಿಸಿದರು. ಬುದ್ದಿಸ್ಟ್ ಮಂಕ್ ಅದನ್ನು ನೋಡಿ ಹಾಗಾದರೆ ಸಂತೋಷ, ಇನ್ನು ಮುಂದೆ ನಿಮ್ಮ ಊರಿನಲ್ಲಿ ಬರಗಾಲವೇ ಇರುವುದಿಲ್ಲ, ಈ ದೊಡ್ಡ ವಜ್ರ ನಿಮಗೆ ಹಣ ಕೊಡುತ್ತದೆ ನಿಮಗೇನು ತೊಂದರೆಯಿಲ್ಲ, ಕುಡಿಯುವಕ್ಕೆ ನೀರು ಕೊಡುತ್ತದೆ, Food and Civil Supplies ಗೆ ಹಣ ಕೊಡುತ್ತದೆ, ನಿಮಗೇನು ನೋವಿಲ್ಲವೆಂದು ಹೇಳಿದರು. ಆಗ ರಾಜ, ಅಯ್ಯಯ್ಯೋ ಇಲ್ಲ ಸ್ವಾಮಿ, ಇದು ನನಗೆ ದುಡ್ಡು ಕೊಡುವುದಿಲ್ಲ, ನಾನು ಇದಕ್ಕೆ ಖರ್ಚು ಮಾಡಬೇಕು, ಈ ವಜ್ರವನ್ನು ಯಾರಾದರೂ ತೆಗೆದುಕೊಂಡು ಹೋದರೆ ಏನು ಮಾಡುವುದು? ಇದಕ್ಕೆ ಇನ್ನು ಸ್ವಲ್ಪ ದುಡ್ಡು ಖರ್ಚು ಮಾಡಿ, ಸೆಕ್ಯೂರಿಟಿ ಹಾಕಿ, ಇದನ್ನು ಭದ್ರವಾಗಿ ಇಡಬೇಕಾಗುತ್ತದೆ ಹೀಗಾಗಿ ಇದರಿಂದ ನಮಗೆ ದುಡ್ಡು ಬರುವುದಿಲ್ಲ ವೆಂದರು. ಆಗ ಬುದ್ದಿಸ್ಟ್ ಮಂಕ್, ನನ್ನ ಜೊತೆಗೆ ಬನ್ನಿರಿ ನಿಮ್ಮ ಹತ್ತಿರ ಇರುವ ಕಲ್ಲಿಗಿಂತ ದೊಡ್ಡಕಲ್ಲು ಇದೆ ಅದು ನಿಮಗೆ ದುಡ್ಡು ಕೊಡುತ್ತದೆ ಬನ್ನಿ ನಾನು ತೋರಿಸುತ್ತೇನೆಂದರೆ. ಆಗ ರಾಜ ಅಯ್ಯೋ ಇದು ನಮಗೆ ಗೊತ್ತಿಲ್ಲವೆ? ನಮ್ಮ ಊರಿನಲ್ಲಿ ಇದಕ್ಕಿಂತ ದೊಡ್ಡ ಕಲ್ಲು ಇದೆಯೇ , ಹೋಗಿ ನೋಡೋಣ ಎಂದು ಅತಿ ಆಶೆಯಿಂದ ಹೋದರು. ಆ ಮಂಕ್ ರಾಜನನ್ನು ಒಂದು ವಿಲೇಜ್ ಗೆ ಕರೆದುಕೊಂಡು ಹೋದರು ಆ ಗ್ರಾಮಕ್ಕೆ ಹೋಗಿ ತೋರಿಸಿದರು. ಅಲ್ಲಿ ಒಬ್ಬ ಮುದುಕಿ ಒಂದು ರುಬ್ಬುಕಲ್ಲು ಹಿಡಿದುಕೊಂಡು ರುಬ್ಬುತ್ತಿದ್ದರು. ನೋಡಿ ಆ ಮುದುಕಿಗೆ ಆ ರುಬ್ಬಕಲ್ಲಿನಿಂದ ಪ್ರತಿ ದಿನ ಹತ್ತು ರೂಪಾಯಿ ಸಂಪಾದನೆ ಸಿಗುತ್ತದೆ, ಅದನ್ನು ಇಟ್ಟುಕೊಂಡು ಅವಳು ಜೀವನ ಮಾಡುತ್ತಿದ್ದಾಳೆ. ಈ ನಿಮ್ಮ ವಜ್ರದ ಕಲ್ಲು ನಿಮಗೆ ದುಡ್ಡು ಕೊಡುವುದಿಲ್ಲ, ಈ ಕಲ್ಲು ಮೇಲೆ ನೀವು ಸ್ವಲ್ಪ ಗಮನ ಇಟ್ಟಿದ್ದರೆ ನಿಮಗೆ ಇದಕ್ಕಿಂತ ಹೆಚ್ಚಿನ ದುಡ್ಡು ಸಿಕ್ಕಬಹುದು ಇದನ್ನು ಮರೆತು ನೀವು ವಜ್ರದ ಕಲ್ಲನ್ನು ತೆಗೆದುಕೊಂಡು ಬಂದಿದ್ದೀರಲ್ಲ ಎಂದರು. ಆ

ರೀತಿಯಾಗಿ ನೀವು ಹಳ್ಳಿಯ ಕಡೆ ಇರುವವರಿಗೆ ಸಹಾಯ ಮಾಡಿ ಎಂದರೆ, ಸಿಟಿ ಕಡೆ, ಯಾವನು ಜೂಜು ಕುದುರೆ ಜೂಜು ಆಡುತ್ತಿದ್ದಾನೆ ಅವನಿಗೆ, ಅವನ ಜಾಕಿಗೆ, ಬುಕ್ಕಿಗೆ, ಹಾರ್ಸ್‌ಗಳಿಗೆಲ್ಲಾ ನೀವು ಸಹಾಯ ಮಾಡಿಕೊಂಡು ಹೋದರೆ, ಹಳ್ಳಿಗಳಲ್ಲಿರುವವರು ಹೇಗೆ ಸ್ವಾಮಿ ಮೇಲೆ ಬರುವುದಕ್ಕೆ ಆಗುತ್ತದೆ ? ಇವರ ಬಜೆಟ್ ನಲ್ಲಿಕೊಟ್ಟಿರುವುದು ಕುದುರೆ ಜೂಜು ಆಡುವವರಿಗೆ, ಜಾಕಿಗೊ, ಕಮರ್ಷಿಯಲ್ ಮೇಲೆ ಹೆಚ್ಚಿಗೆ ತೆರಿಗೆ ಹಾಕಿಲ್ಲವೆ? ಬ್ಯಾನ್ ಮಾಡಿ. ಚೆನ್ನೈನಲ್ಲಿ ಗಿಂಡಿ ರೇಸ್ ಬ್ಯಾನ್ ಮಾಡಿದ್ದಾರೆ. ತಮಿಳು ನಾಡು ಏನು ಕೆಟ್ಟು ಹೋಗಿದೆಯೇ? ಏಕೆ ಮಾಡಿಲ್ಲ ? ಲಾಟರಿ ಬ್ಯಾನ್ ಮಾಡಿದಿರಿ, ????? ಕೂಡ ಬ್ಯಾನ್ ಮಾಡಿ, ಇಲ್ಲ, what is in your mind regarding that, in the budget ? ಯಾರಿಗೂ ಸಹಾಯ ಮಾಡಬೇಕು. class ನಲ್ಲಿ teachers students ಗಳಿಗೆ ಒಂದೊಂದು ಪೆಪ್ಪರ್‌ಮಿಂಟ್ ಕೊಡುತ್ತಾರೆ. ಆ ರೀತಿ ೫೦ ಸಾವಿರ, ಒಂದು ಲಕ್ಷ ಎರಡು ಲಕ್ಷ, ಇದು ಬಜೆಟ್? ಕೋಟ್ಯಾಂತರ ರೂಪಾಯಿಗಳು ಈ ಬಜೆಟ್ ನಲ್ಲಿ ಕೊಡಬೇಕು. ಇದನ್ನು councilors budget ರೀತಿ ಮಾಡಿದ್ದೀರಿ. ಇದು ಅಸೆಂಬ್ಲಿ ಬಜೆಟ್ ರೀತಿ ಇಲ್ಲವೆ ? ತಾವೇನು PWD ಯಲ್ಲಿ ಏನು ಹೇಳಿದಿರಿ ? "Speed works ಇರುವುದರಿಂದ ಅದಕೋಸ್ಕರ ನಾವು ಇಷ್ಟು ಹಣ ಬಿಡುಗಡೆ ಮಾಡಿದೆವು" ಸಂತೋಷ. ನನ್ನ ಕ್ಷೇತ್ರದಲ್ಲಿ ೩೦,೪೦,೫೮ ನಂಬರ್ ಇಟ್ಟಿಬಿಟ್ಟಿದಿರಿ, ಎರಡು ವರ್ಷಗಳಾಗಿವೆ, ನಮ್ಮ ಶ್ರೀನಿವಾಸ ಗೌಡರವರು ಮಂತ್ರಿಯಾಗಿದ್ದ ಕಾಲದಲ್ಲಿ ಅವರು ಆ ರೋಡ್ ಗೆ ಪೂಜೆ ಮಾಡಿದ್ದರು. ಅಲ್ಲವೆ ಸ್ವಾಮಿ ? ಇನ್ನೂ ಕೆಲಸವಾಗಿಲ್ಲವೆ? ಸಾವಿರಾರು ಕೋಟಿ ರೂಪಾಯಿಗಳನ್ನು PWDಗೆ ಕೊಟ್ಟಿದ್ದರೆ, ಅದನ್ನು ಯಾರು ತಿಂದಿದ್ದಾರೋ? ಅದನ್ನು, Whos is monitoring that ? What is the transparency in that? ಅದೇನೂ ಇಲ್ಲ. ಅದರ ಜೊತೆಗೆ ಈ ಸರ್ಕಾರ ಸುಳ್ಳು ಬೇರೆ ಹೇಳುತ್ತಿದೆ. ಅಡಿಷನಲ್ ಬಜೆಟ್ ನಲ್ಲಿ ತಾವು ಏನು ಹೇಳಿದ್ದೀರೆಂದರೆ, Public works Vide Notification dated 17.7.2006, B.C. Patel Commission of Inquiry was constituted to inquire into various aspects of BMIC

project. To meet the Commission's travel expense an amount of Rs.10 lakhs has been included in this demand," ಎಂದು ಹೇಳಿರತಕ್ಕಂಥದು ಸಂತೋಷ, ಆದರೆ, ಇದರ ಬಗ್ಗೆ ಸುಪ್ರೀಂ ಕೋರ್ಟ್‌ಗೆ ಏನು ಕೊಟ್ಟಿದ್ದೀರೆಂದರೆ, "Having regard to the serious charges of malafide made in the petition, in constituting the Commission of Inquiry in terms of the Notification dated 10th July 2006, we are favorably inclied to stay the proceedings. But, Mr. Verma, learned senior Counsel appearing for the State of Karnataka submitted without prejudice to his right, that the State Government would not proceed further before the Commission of Inquiry. In this view, it is not necessary to pas an order to stay. " Stay ತೆಗೆದುಕೊಳ್ಳುವ ಟೈಂನಲ್ಲಿ ನಾವು ಇದನ್ನು ನಿಲ್ಲಿಸುತ್ತೇವೆ. ಆದ್ದರಿಂದ ಇದರ ಬಗ್ಗೆ ಚಿಂತನೆ ಬೇಡ ಎಂದು ತೆಗೆದುಕೊಳ್ಳುವಂಥ ಸಂದರ್ಭದಲ್ಲಿ, you have deposed in the Supreme Court. ಈ ರೀತಿಯಾಗಿ ಸುಪ್ರೀಂ ಕೋರ್ಟ್‌ಗೆ undertaking ಕೊಟ್ಟಿದ್ದಾರೆ.. ಆದರೆ ಇಲ್ಲಿ ರೂ. ೧೦ಲಕ್ಷ ಬಿಡುಗಡೆ ಮಾಡಿದ್ದೀರಿ ಅಂದರೆ, ಒಂದು ಕಡೆ ಸುಪ್ರೀಂ ಕೋರ್ಟ್ ಅನ್ನು ಯಾಮಾರಿಸುತ್ತಿದ್ದೀರಾ ಅಥವಾ ಸರ್ಕಾರ ಇಲ್ಲಿರತಕ್ಕಂಥ ಜನರನ್ನು ಯಾಮಾರಿಸುತ್ತಿದೆಯೇ ? Where you are right ? Where your Budget will be right? ಇದನ್ನು ನಾವೇನಾದರು ಕೇಳಿದರೆ, ಇವನ್ನು ಸರಿಯಾಗಿ ಭಾಷಣ ಮಾಡುವುದಿಲ್ಲವೆಂದು ಹೇಳುತ್ತಾರೆ. ಈ ರೀತಿಯಾಗಿ ಇರುವುದನ್ನು ಅಧಿಕಾರಿಗಳು ನಿಮ್ಮ ಗಮನಕ್ಕೆ ತಂದಿದ್ದಾರೆಯೇ ? Whether your officers have taken much interest to stop this Rs.10 lakh ? ಇದು ತಪ್ಪಾಗುತ್ತದೆ. ಆದ್ದರಿಂದ ಇದನ್ನು ನಾವು ಕೊಡಬಾರದೆಂಬುದರ ಬಗ್ಗೆ ಏನಾದರು ಚಿಂತನೆ ಮಾಡಿದ್ದೀರಾ? ತಪ್ಪು ಮಾಹಿತಿಯನ್ನು ಕೋರ್ಟ್‌ಗೆ ಮತ್ತು ಜನಗಳಿಗೂ ತಿಳಿಸುತ್ತಿದ್ದೀರಿ. ಟ್ರಾಫಿಕ್ ಜಾಸ್ತಿಯಾಗಿರುವುದರಿಂದ ನಾವು ದೊಡ್ಡ ದೊಡ್ಡ

ರಸ್ತೆಗಳನ್ನು ಮಾಡುತ್ತೇವೆ. ಅದಕ್ಕೆ ಟ್ಯಾಕ್ಸ್ ಜಾಸ್ತಿ ಮಾಡುತ್ತೇವೆಂದು ಹೇಳುತ್ತೀರಿ. ಆದ್ದರಿಂದ ರಸ್ತೆಗಳನ್ನು ಕ್ಲಿಯರ್ ಮಾಡಿಕೊಡಿ. ಬಿಐಎಂಸಿ ಅಥವಾ ಬೇರೆ ರಸ್ತೆಗಳನ್ನು ಕ್ಲಿಯರ್ ಮಾಡಿ ಕೊಡುತ್ತೀರೊ ಅಥವಾ ಇಲ್ಲವೊ ? ರಸ್ತೆ ಮಾಡುವುದಕ್ಕೆ ಆಸಕ್ತಿ ಇರತಕ್ಕಂಥ ತಾವು ನೋಟಿಫಿಕೇಶನ್ ಆಗಿರತಕ್ಕಂಥ ಜಾಗಕ್ಕೆ ಇನ್ನೂ ಪರ್ಮಿಶನ್ ಕೊಟ್ಟಿಲ್ಲ. ಮಾನ್ಯ ಚಂದ್ರಣ್ಣನವರ ಕ್ಷೇತ್ರದಲ್ಲಿರುವ ಬೂದಿಗೆರೆಯಲ್ಲಿ ನೋಟಿಫಿಕೇಶನ್ ಇಲ್ಲ. ಇದು ತಮಗೂ ಗೊತ್ತಿದೆ. ಗುಡಿ ಮತ್ತು ಸ್ಮಾಶನವನ್ನು ಸ್ವಾಧೀನ ಮಾಡಿಕೊಳ್ಳಬಾರದೆಂದು ಕಾನೂನು ಇದೆ. ಅಲ್ಲಿ ಏನೂ ಸಹ ಕೊಡದೆ ಕಲ್ಲು ಹಾಕಿದ್ದಾರೆ. ಬೂದುಗೆರೆಯ ಅಂಧ್ರಳ್ಳಿಯಲ್ಲಿರತಕ್ಕಂಥ ಒಂದು ಗುಡಿ ಜಾಗದಲ್ಲಿ ಕಲ್ಲು ಹಾಕಿದ್ದಾರೆ. ಇವರು ಮಾಡಿರತಕ್ಕಂಥದ್ದು ಸ್ಪೀಡ್ ವರ್ಕ್? ಇದು ತಪ್ಪು, ನಮಗೆ ಇದರ ಬಗ್ಗೆ ನೋಟೀಸ್ ಕೊಟ್ಟಿಲ್ಲ ಎಂದು ಅಲ್ಲಿರತಕ್ಕಂಥ ಹಳ್ಳಿಯ ಜನ ಹೇಳಿದ್ದಾರೆ. ಆದ್ದರಿಂದ ನಿಮ್ಮಲ್ಲಿ ಎಂಥಾ ಅಧಿಕಾರಿಗಳು ಇದ್ದಾರೆ ಎಂಬುದನ್ನು ನೋಡಿ. ಎಂಥ arrogancy of power they are holding in your Government. ಇದನ್ನು ನಾವು ಎಲ್ಲಿ ಹೋಗಿ ಕೇಳಬೇಕು ಸ್ವಾಮಿ? ಇದರ ಬಗ್ಗೆ ನೀವು ಯೋಚನೆ ಮಾಡಿ. ಸ್ಪೀಡ್ ವರ್ಕ್ ಎಂದು ನೀವು ಹೇಳುತ್ತೀರಿ. ಆದರೆ, ಅವರು ಯಾವ ರೀತಿಯಾಗಿ ಸ್ಪೀಡ್ ವರ್ಕ್ ಮಾಡುತ್ತಿದ್ದಾರೆ ನೋಡಿ ? IAS officers ಕಟ್ಟಿರುವ ದೊಡ್ಡ ದೊಡ್ಡ ಬಂಗಲೆ ಕಟ್ಟಿರುವ ಕಟ್ಟಡಗಳು ಡೆಮಾಲಿಷ್ ಆಗಬಾರದು ಮತ್ತು ಆ ಕಡೆ ರಸ್ತೆ ಹೋಗಬಾರದೆಂದು ಮಂತ್ರಿಗಳಿಗೆ ತಪ್ಪು ಮಾಹಿತಿ ಕೊಡುತ್ತಾರೆ. ಇವತ್ತಿನ ದಿವಸ ಕೊಟ್ಟಗೆರೆ ಟ್ಯಾಂಕ್. 500 year old historical tank. ನಿಮ್ಮನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಇಂಥ ಟ್ಯಾಂಕ್‌ನ್ನು ನಿಮ್ಮ ಅಧಿಕಾರಿಗಳು ತೋರಿಸುತ್ತಾರೆ ಅದು ತಪ್ಪಲ್ಲವೆ. ಏಕೆಂದರೆ ಆ ಟ್ಯಾಂಕ್ ಪಕ್ಕದಲ್ಲಿ ಸ್ಕೂಲ್ ಇದೆ. ಅದನ್ನು ಡೆಮಾಲಿಷ್ ಮಾಡಬೇಕೆಂದು ಹೇಳುತ್ತಾರೆ.

(ಈ ಹಂತದಲ್ಲಿ ಮಾನ್ಯ ಎ.ಟಿ. ರಮಸ್ವಾಮಿಯವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು)

Actual route, where you have given permission to notify, ಆ ಜಾಗದಲ್ಲಿ one of your IAS officers constructed a beautiful bungalow. ಹಾಗಾದರ, ಅದನ್ನು ಡೆಮಾಲಿಷ್ ಮಾಡಿ, ನೋಡೋಣ. ಅಧಿಕಾರ ದುರುಪಯೋಗ ಮಾಡತಕ್ಕಂಥ ಸರ್ಕಾರ, you are encouraging the IAS officer who is taking more advantage, spoiling the line entire Below Poverty Line people and middle class people. ಆದ್ದರಿಂದ ನಾವು ಎಲ್ಲಿ ಹೋಗಿ ಕೇಳುವುದು? ಬಜೆಟ್ ನಲ್ಲಿ ಎಷ್ಟು ಕೋಟಿ ರೂಪಾಯಿ ಕೊಟ್ಟಿದ್ದೀರಿ ? ಸ್ಪೀಡ್ ವರ್ಕ್ ಅನ್ನು ಯಾವ ರೀತಿಯಾಗಿ ಮಾಡುವುದು ? ಗುಡಿಗಳನ್ನು ಮತ್ತು ಬಡವರ ಜಾಗಗಳನ್ನು ಸ್ವಾಧೀನ ಮಾಡಿಕೊಳ್ಳುವುದಕ್ಕಾಗಿಯೇ? ಮಿಸ್ ಯೂಸ್ ಮಾಡತಕ್ಕಂಥ ಅಧಿಕಾರಗಳನ್ನು ಫ್ರೀ ಯಾಗಿ ಬಿಟ್ಟಿರುವುದಕ್ಕಾಗಿಯೆ ? ಈ ರೀತಿಯಾದರೆ, ನಾವು ಎಲ್ಲಿ ಹೋಗಿ ಕೇಳುವುದು? ತಾವೇ ಯೋಚನೆ ಮಾಡಿ. ಮತ್ತೆ ಬಜೆಟ್ ನ್ನಲಿ ಕೈಗಾರಿಕೆ ಬಗ್ಗೆ ಹೇಳಿದ್ದೀರಿ. Unemployment ಇರುವುದುರಿಂದ ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಅವಕಾಶ ಕೊಟ್ಟು. ನಾವು ಯೂತ್ ಗಳಿಗೆ ಎನ್ಕರೇಜ್ ಮಾಡಬೇಕೆಂದು ಲಕ್ಷಾಂತರ, ಕೋಟ್ಯಾಂತರ ರೂಪಾಯಿಗಳನ್ನು ಕೊಟ್ಟು ಜಾಗವನ್ನು ತೆಗೆದುಕೊಳ್ಳುವಂಥ ಕೆಲಸ ಆಗುತ್ತಿದೆ. ಇವರಿಗೆ ಕೈಗಾರಕೆಗಳ ಮೇಲೆ ನಿಜವಾದ ಚಿಂತನೆ ಇದ್ದರೆ, where the economic development is getting down day-by-day in the city, ಅದನ್ನು ಸ್ಕ್ರುಟಿನೈಜ್ ಮಾಡಿ, ಇವತ್ತಿನ ದಿವಸ ಎಲ್ಲಿ ಕೊಡಬೇಕಾಗಿರು ತ್ತದೆಯೊ ಅಲ್ಲಿ ಯಾವ ಮಿನಿಸ್ಟರ್ ಇರುತ್ತಾರೆಯೊ ಅವರ ಜಾಗದಲ್ಲಿ ಕೈಗಾರಿಕೆಯನ್ನು ಪ್ರಾರಂಭ ಮಾಡತಕ್ಕಂಥದು ಮತ್ತು ಯಾರ್‍ಯಾರು ಪವರ್ ಫುಲ್ ಪೋಸ್ಟ್ ನಲ್ಲಿರತಕ್ಕಂಥವರು ಸಹ ಅವರ ಕಡೆ ಇಂಡಸ್ಟ್ರಿಗಳನ್ನು ಹಾಕಿಕೊಳ್ಳತಕ್ಕಂಥ ಕೆಲಸ ನಡೆಯುತ್ತಿದೆ. ಇದು ಸರ್ಕಾರ ನಡೆಸತಕ್ಕಂಥ ರೀತಿಯೇ? ಸರ್ಕಾರದ ಕೆಲಸ ದೇವರ ಕೆಲಸ್ ಆಗುತ್ತದೆಯೇ ? ಮಾನ್ಯ ಯಡಿಯೂರಪ್ಪನವರು ಧರ್ಮ ಎಂದರೆ ಕರ್ತವ್ಯವೆಂದು ಹೇಳಿದ್ದಾರೆ. ಆದ್ದರಿಂದ ಕರ್ತವ್ಯವೆಂದರೇನು ? ಇದು ನ್ಯಾಯವೇ ? ನಿಮ್ಮ ಹತ್ತಿರ

ನೀತಿ, ನ್ಯಾಯವಿಲ್ಲ, ಆದರೆ, ಸತ್ಯಾಂಶದ ಬಗ್ಗೆ ಮಾತನಾಡುತ್ತೀರಿ. ನಿಮ್ಮ ನ್ಯಾಯಗಳನ್ನು ತಾವು ಬೇರೆ ಕಡೆ ತೋರಿಸಬೇಕು. ಆದರೆ, ನಮ್ಮ ಕೋಲಾರ ಜಿಲ್ಲೆಯಲ್ಲಿ ತಾವು ತೋರಿಸಿಲ್ಲ. ನಮ್ಮ ಕೋಲಾರ ಜಿಲ್ಲೆಯನ್ನು ತಾವು ಅಭಿವೃದ್ಧಿ ಮಾಡಿಲ್ಲ. Hon'ble Minister has clearly annonced. ತೋಟಗಾರಿ ಇಲಾಖೆಗೆ ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ ಮತ್ತು ಏನು ಅಭಿವೃದ್ಧಿ ಮಾಡಿದ್ದೀರಿ ಎಂಬುದರ ಬಗ್ಗೆ ನಿಮ್ಮ ಬುಕ್ ತೋರಿಸಿ ಎಂದು ಕೇಳಿದ್ದರು. ಅವರು ನನಗೆ ಕೊಟ್ಟಿರುವುದನ್ನು ನಾನು ಓದಿದ್ದೇನೆ. ಅದನ್ನು ಇಲ್ಲಿ ಮತ್ತೆ ರಿಪೀಟ್ ಮಾಡತಕ್ಕಂಥ ಅವಶ್ಯಕತೆ ಇಲ್ಲ. ಹಾರ್ಟಿಕಲ್ಚರ್ ಕಾಲೇಜ್ ಅನ್ನು ಕೋಲಾರಕ್ಕೆ ಕೊಡುತ್ತೇವೆಂದು ತಾವು ಹೇಳಿದ್ದೀರಿ. ಇದನ್ನು ಬೇರೆ ಕಡೆಗೆ ಕೊಟ್ಟಿರುವ ಬಗ್ಗೆ ನನಗೆ ಗೊತ್ತಿಲ್ಲ. ಆದರೆ, Why you have not provided? ದೆಹಲಿ ಪಾರ್ಲಿಮೆಂಟ್ ನಲ್ಲಿ ಇಂಥವರದೆಲ್ಲಾ ಸ್ಟ್ಯಾಚು ಇಟ್ಟಿದ್ದಾರೆಂದು ಮಾನ್ಯ ವಾಟಾಳ್ ನಾಗರಾಜ್ ರವರು ಮಾತನಡತಕ್ಕಂಥ ಸಂದರ್ಭದಲ್ಲಿ ಹೇಳಿದರು. ಆದ್ದರಿಂದ ಮಾನ್ಯ ಭೈರೇಗೌಡರ ಹೆಸರಿನಲ್ಲಿ ಅಲ್ಲಿಂದು ಹಾರ್ಟಿಕಲ್ಚರ್ ಕಾಲೇಜನ್ನು ಪ್ರಾರಂಭ ಮಾಡಬೇಕು. ಮಾನ್ಯ ಭೈರೇಗೌಡರು ರೈತರಾಗಿರಲಿಲ್ಲವೆ? ಮತ್ತೆ ಅವರು ರೈತರ ಪರವಾಗಿ ಹೋರಾಟ ಮಾಡಿಲ್ಲವೆ ? Why you have not provided ? ನಮ್ಮ ಜಿಲ್ಲೆಯನ್ನು ನೆಗ್ಲೆಟ್ ಮಾಡುತ್ತಿದ್ದೀರಿ. ನಮ್ಮ ಜಿಲ್ಲೆಯಲ್ಲಿರುವ ಬಿಜಿಎಂಎಲ್ ಕೈಗಾರಿಕೆ ಮುಚ್ಚಿರತಕ್ಕಂಥದು ಮಾನ್ಯ ಕೈಗಾರಿಕಾ ಸಚಿವರಿಗೆ ಮತ್ತು ತಮಗೆಲ್ಲಾ ಗೊತ್ತಿದೆ. ಅಲ್ಲಿ ೧೨,೦೦೦ acres of land is available. Earlier, when Hon'ble Mr. P.G.R. Sindhya was the Industries Minister, he assured on the floor of the House. All my respectful senior leaders are also well aware of this. ಏನು ಭರವಸೆ ಕೊಟ್ಟರೆಂದರೆ, ಖಂಡಿತವಾಗಿ ಅಲ್ಲಿ Iron and steel plant ಕೊಡುತ್ತೇವೆಂದು ಹೇಳಿದ್ದರು. ಆದರೆ, ಇದುವರೆಗೂ ಕೊಟ್ಟಿಲ್ಲ. ಮತ್ತೆ ಅಲ್ಲಿ ಬಸ್ ಸ್ಟ್ಯಾಂಡ್ ಓಪನ್ ಮಾಡುವುದಕ್ಕೆ ಶ್ರೀಮಾನ್ ಕುಆರ ಸ್ವಾಮಿಯವರು ಅಲ್ಲಿಗೆ ಬಂದು he has assured in front of the public. ಆ ಸಂದರ್ಭದಲ್ಲಿ ನಮ್ಮ HUD

Minister ಕೂಡ ಇದ್ದರು. ಇಲ್ಲಿಎ ೫ ಇಂಡಸ್ಟ್ರಿಗಳನ್ನು ಕೊಡುತ್ತೇವೆಂದು ಅವತ್ತಿನ ಸಮಾರಂಭದ ಡೆಯಿಸ್ ಮೇಲೆ announce ಮಾಡಿದರು. Sorry, ಆ ಸಂದರ್ಭದಲ್ಲಿ ತಾವು ಶಾಸಕರಾಗಿದ್ದೀರಿ. ಆದರೆ, ಈಗ ಮಂತ್ರಿಗಳಾಗಿದ್ದೀರಿ. ಆ ದಿವಸ ತಾವು ಕೂಡ ಅಲ್ಲಿದಿರಿ. ಇಲ್ಲಿಗೆ ಇಂಡಸ್ಟ್ರಿ ಕೊಡುತ್ತೇವೆ ಮತ್ತೆ ೧೫ ದಿವಸದೊಳಗೆ ಕೆ.ಜಿ.ಎಫ್. ಪುರವನ್ನು ನೋಡುವುದಕ್ಕೆ ಇಲ್ಲಿಗೆ ಬರುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಅವತ್ತಿನ ದಿವಸ ಹೇಳಿದ್ದರು. ಆದರೆ, ಇದುವರೆಗೂ ಅಲ್ಲಿಗೆ ಬಂದಿಲ್ಲ. ಮತ್ತೆ, ಅಲ್ಲಿಗೆ ಯಾವುದೇ ಕೈಗಾರಿಕೆಗಳನ್ನು ಕೊಟ್ಟಿಲ್ಲ. ಇದಕ್ಕೆ ನಾನು ಏನು ಹೇಳಬೇಕು ಸ್ವಾಮಿ ? ಬಿಜಿಎಂಎಲ್ ಮತ್ತೆ ರಿವೈವ್ ಆಗುವುದೆಲ್ಲಾ ಸುಳ್ಳು. ಈ ರೀತಿಯಾಗಿ ಯಾರು ಸುಳ್ಳು ಹೇಳಿದ್ದಾರೋ ಅವರನ್ನು ಹೇಳಿದರೆ ಕಾಂಗ್ರೆಸ್ನವರು ಏನು ತಿಳಿದುಕೊಳ್ಳಬಾರದು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಮಾನ್ಯ ಛೇರ್ಮನ್ ರವರೆ, ಬಿಜಿಎಂಎಲ್ ರಿವೈವ್ ಆಗುತ್ತದೆಂದು ಎಲ್ಲಿಯ ಕೂಡ ಹೇಳಿಲ್ಲ. Instead of that, the Central Government has decided to close down the factory. It is a fact. ಅದನ್ನು ಬಚ್ಚಿಟ್ಟು ಕೆಲವರು ಸುಳ್ಳು ಹೇಳಿಕೊಂಡಿದ್ದಾರೆ. ಅವತ್ತಿನ ಕ್ಯಾಬಿನೆಟ್ ನಲ್ಲಿ ಆದಂಥ ತೀರ್ಮಾನದ ಕಾಪಿಯನ್ನು ತೋರಿಸಿ ಆ ಕ್ಯಾಬಿನೆಟ್ ಮೀಟಿಂಗ್ ನಲ್ಲಿ ಇಂಥವರು ಪ್ರಸೆಂಟ್ ಇದ್ದರೆಂದು ನಾನು ಹೇಳಿದ್ದೇನೆ. ಇದರ ಬಗ್ಗೆ ತೀರ್ಮಾನವಾಗುವಾಗ ಕ್ಯಾಬಿನೆಟ್ ಮೀಟಿಂಗ್ ನಲ್ಲಿ ಕುಳಿತುಕೊಂಡಿದ್ದವರೇ ಇದನ್ನು ರಿವೈವ್ ಮಾಡುತ್ತೇವೆಂದು ಪ್ರಚಾರ ಮಾಡಿದ್ದಾರೆ. ಇದು ನಿಜವಾಗಿಯೂ ನಮ್ಮ ದುರಂತ.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಛೇರ್ಮನ್ ರವರೆ, ಇದು ತಪ್ಪು, ಸರ್ಕಾರದಲ್ಲಿ ಮಂತ್ರಿಯಾಗಿ ಕುಳಿತುಕೊಂಡಿರುವವರ ಮೇಲೆ ನಮಗೆ ಬಹಳ ಗೌರವ ಇದೆ. ನಾವು ಅಧಿಕಾರಿಗಳಿಗೆ ಏನು ಹೇಳುತ್ತೇವೆಂದರೆ, ನಮ್ಮ ಕೆಲಸ ಮಾಡಿ ಇಲ್ಲದಿದ್ದರೆ ನಮ್ಮ ಮಿನಿಸ್ಟರ್ ಗೆ ಹೋಗಿ ಹೇಳುತ್ತೇವೆಂದು ನಿಮ್ಮ ಮೇಲೆ ಗೌರವ ಇಟ್ಟುಕೊಂಡು ಹೇಳುತ್ತೇವೆ.

ಆದರೆ, ನೀವು ಅವರ ಜೊತೆಯಲ್ಲಿದ್ದುಕೊಂಡು ಇವರದು ಏನಾಗುತ್ತದೆ ನೋಡಿ ಎಂದು ಹೇಳಿದರೆ, they are thinking that they are superior to you. That should not happen. ಕಾನೂನು ಪ್ರಕಾರ ಕೆಲಸ ಮಾಡಬೇಕು ಮತ್ತೆ ಕಾನೂನು ಚೌಕಟ್ಟಿನೊಳಗೆ ಏನಿದೆ ಎಂಬುದನ್ನು ತಾವು ನೋಡಬೇಕು, ಯಾವ ಅಧಿಕಾರಿಯ ಮೇಲೆ ನಾವು ನಿಮ್ಮ ಗಮನಕ್ಕೆ ತರುತ್ತೇವೆಯೋ ಆಗ ನೀವು ನಮ್ಮ ಗೌರವ ಕಡಿಮೆಯಾಗಬೇಕೆಂಬುವುದ ಕ್ಕೋಸ್ಕರ, ಇಲ್ಲ ಇಲ್ಲ ಎಂದು ಹೇಳಬಾರದು. ತಕ್ಷಣ ಅದಕ್ಕೆ attention ಕೊಟ್ಟು ಆ ಅಧಿಕಾರಿ ಏತಕ್ಕೆ ಆ ರೀತಿಯಾಗಿ ಮಾಡಿದ್ದಾನೆಂದು ತಿಳಿದುಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಆದರೆ, ನೀವು ಕ್ರಮ ತೆಗೆದುಕೊಳ್ಳುವುದಿಲ್ಲ. ಆದ್ದರಿಂದ, ಅವರು ಕೇರ್ ಮಾಡುವುದಿಲ್ಲ.

ಮಾನ್ಯ ಛೇರ್ಮನ್ ರವರೆ ನಮಗೆ picture ತೆಗೆದುಕೊಳ್ಳುವುದು ಬೇಡ. ನಿಮ್ಮನ್ನು ಕೇಳಿ, ಕೇಳಿ ನಾವು ಭಾಷಣ ಮಾಡಬೇಕಾ? ನಾವು ಭಾಷಣ ಮಾಡಿದ ತಕ್ಷಣ ಈ ಅಧಿಕಾರಿಗಳಿಗೆ ಏನು ಆಗುತ್ತದೆ? ಈ ತರಹ ಚಿಂತನೆ ಬಂದರೆ ಅಲ್ಲಿ ಬೋರ್ಡ್‌ನ್ನು ಹಾಕಿರುವುದನ್ನು ತೆಗೆಯಬೇಕು, " ಸರ್ಕಾರಿ ಕೆಲಸ ದೇವರ ಕೆಲಸ," ಎಂದು ಹಾಕಿದ್ದಾರೆ, ದೇವರು ಏನು ಮಾಡುತ್ತಾರೆಂದರೆ, ಒಂದು ನಿಮಿಷ ಹೇಳುತ್ತೇನೆ ಕೇಳಿ. ಹಿಂದೆ ಮಾನ್ಯ ಸದಸ್ಯರಾದ ವಟಾಳ್ ನಾಗರಾಜ್ ರವರು ಹೇಳಿದರು. ದೇವರು ಎಲ್ಲಾ ಕಡೆಗೆ ಹೋಗುತ್ತಾರೆ. ಈ ಕಡೆಗೆ ಹೋದರೆ ಆ ಕಡೆಗೆ ಹೋಗಿ ಸ್ವಾಮಿ, ಏನು ತಮಿಳುನಾಡಿನಲ್ಲೇ ಬೇಕಾದರೆ ಕ್ಯಾಂಪ್ ಮಾಡಿಕೊಳ್ಳಿ, ತಿರುಚಂದೂರಿನಲ್ಲಿ ಇಟ್ಟುಕೊಂಡು, ಮದುರೈನಲ್ಲಿ ಇಟ್ಟುಕೊಂಡು, ಕನ್ಯಾಕುಮಾರಿಯಲ್ಲಿ ಕ್ಯಾಂಪ್ ಮಾಡಿಕೊಂಡು ಅದು ನಿಮಗೇನು ಸಂಬಂಧವೇ ಇಲ್ಲ, ತಿರುಪತಿಯಲ್ಲಿ ಓಡಾಡಿದ್ದಕ್ಕೆ ಬೇಕಾದರೆ ಅಲ್ಲಿಯೇ ಮಲಗಿಕೊಳ್ಳಿ, ನಮಗೇನು ಚಿಂತನೆಯಿಲ್ಲ. ನಾನು ಒಂದು ವಿಷಯವನ್ನು ಹೇಳುತ್ತೇನೆ, ಅದರ ಬಗ್ಗೆ ತಾವು ಯೋಚನೆ ಮಾಡಿ ನಿಮ್ಮ ಮೇಲೆ ಗೌರವವಿದೆ ಅಥವಾ ಇಲ್ಲವೋ ಎಂಬುದು ನಾವು ಮಾತನಡುವಂತಹ ಸಮಯದಲ್ಲಿ ಮಾನ್ಯ ಯಡಿಯೂರಪ್ಪನವರ ಮೇಲೆ ಬಹಳ ಗೌರವವಿದೆ ಎಂದು ಹೇಳಿದೆ. ಆಮೇಲೆ ಅದು ಕೊಟ್ಟಿಲ್ಲ ಇದು ಕೊಟ್ಟಿಲ್ಲವೆಂದು

ಹೇಳಿದೆ. ಇದು ಕೊಟ್ಟಿಲ್ಲ ಮತ್ತು ಅದು ಕೊಟ್ಟಿಲ್ಲವೆಂದು ಹೇಳಬೇಕಾದರೆ ಅದಕ್ಕೆ ಗೌರವ ಇರಬೇಕಾ ? ಆದ್ದರಿಂದ ಈ ಬಗ್ಗೆ ,ತಾವು ನ್ಯಾಯವಾಗಿ ಯೋಜನೆಯನ್ನು ಮಾಡಬೇಕು. ಗಣೇಶ ವಿನಾಯಕ ಇದ್ದಾನೆ, ಅವನ ಹತ್ತಿರ ಹೋಗಿ ಆ ಗುಡಿಗೆ ಇಬ್ಬರು ಹೋಗಿದ್ದಾರೆ. ಒಬ್ಬನು ರೈತ, ಇನ್ನೊಬ್ಬನು ಇಟ್ಟಿಗೆ ಕೆಲಸ ಮಾಡುವವನು. ರೈತನು ಹೋಗಿ ದೇವರ ಹತ್ತಿರ ಹೇಳುತ್ತಾನೆ, ಸ್ವಾಮಿ, ಒಳ್ಳೆಯ ಮಳೆ ಬರಬೇಕು, ನಾನು ಎಲ್ಲವನ್ನು ಚೆನ್ನಾಗಿ ಬೆಳೆಸಬೇಕು. ಆ ತರಹ ಆದರೆ ನಿನಗೆ ಒಂದು ತೆಂಗಿನಕಾಯಿ ಓಡೆಯುತ್ತೇನೆ ಎಂದು ನಮಸ್ಕಾರ ಹೇಳುತ್ತಾನೆ. ಇಟ್ಟಿಗೆ ಕೆಲಸ ಮಾಡುವವನು ಹೋಗಿ ಸ್ವಾಮಿ, ಮಳೆಯೇ ಬರಬಾರದು, ನಾನು ಇಟ್ಟಿಗೆಗೆ ಬೆಂಕಿಯನ್ನು ಹಾಕಬೇಕು ಸ್ವಾಮಿ, ಮಳೆ ಬಂದರೆ ಅವೆಲ್ಲವು ಹಾಳಾಗಿ ವ್ಯಾಪಾರವು ಹೋಗುತ್ತದೆ ಸ್ವಾಮಿ ಆ ತರಹ ಬಂದರೆ ನಿಮಗೆ ನಿಜವಾಗಲೂ ಎರಡು ತೆಂಗಿನಕಾಯಿ ಓಡೆಯುತ್ತೇವೆ. ಸ್ವಾಮಿ ಎಂದು ಹೇಳುತ್ತಾನೆ. ಕೊಬ್ಬರಿಕಾಯಿ ಎಂದರೆ ಇನ್ನೊಬ್ಬರು ಕೊಬ್ಬರಿ ಹಣ್ಣು ಎಂದು ಹೇಳುತ್ತಾರೆ. ಹಾಗೆ ಹೇಳಿದರೆ ನಾವು ಎಲ್ಲಿಗೆ ಹೋಗುವುದು? ನಿಮ್ಮ ಸರ್ಕಾರದಲ್ಲಿ ಏನೇನು ಹೇಳಿಬಿಡುತ್ತೀರಿ. ಕೊಬ್ಬರಿ ಹಣ್ಣು ಕೂಡ ಸಿಗುತ್ತದೆ, ಕೊಬ್ಬರಿ ಕಾಯಿಯೂ ಕೂಡ ಸಿಗುತ್ತದೆ ಸ್ವಾಮಿ. ಅದು ತೆಂಗಿನಕಾಯಿ ಸ್ವಾಮಿ. ಇನ್ನೊಬ್ಬರು ಹೇಳುತ್ತಾರೆ ಏಕೆ ಕಾಯಿ ಎಂದು ಹೇಳುತ್ತೀಯಾ, ಹಣ್ಣು ಎಂದು ಹೇಳು ಎನ್ನುತ್ತಾರೆ. ನಾನೇನು ಮಾಡುವುದಕ್ಕಾಗುತ್ತದೆ? ಹಣ್ಣು ಎಂದು ಹೇಳಿಬಿಡುತ್ತೇನೆ ಸ್ವಾಮಿ, ಸರಿ ಸ್ವಾಮಿ ಹಣ್ಣು ಎಂದು ಹೇಳುತ್ತೇನೆ, ಬೇರೆಯವರು ಕೂಡ್ರಿ ಕೂಡ್ರಿ ಎಂದು ಹೇಳುತ್ತಾರೆ. ಈ ತರಹ ಎರಡು ರೀತಿಯಲ್ಲಿ ಹೇಳಿದ ತಕ್ಷಣ ಅವರ ಪಕ್ಕದಲ್ಲಿ ಎರಡು ಹೆಂಡತಿಗಳು ಗಣೇಶನಿಗೆ ಇದ್ದಾರೆ. ನಾನು ನೋಡಿಲ್ಲ. ಒಬ್ಬಳು ಕುಳ್ಳಶಕ್ತಿ, ಒಬ್ಬಳು ಗುತ್ತಿ, ಆ ಇಬ್ಬರು ಹೆಂಡತಿಗಳು ; ಆ ರೈತ ಇದ್ದಾನೆ, ಅವನು ನನ್ನ ಪರವಾಗಿದ್ದಾನೆ. ಆದ್ದರಿಂದ ಅವನಿಗೆ ಎಲ್ಲಿಯಾದರೂ ಮಳೆ ಬರುವ ತರಹ ಮಾಡಬೇಕು ಎಂದು ಹೇಳುತ್ತಾಳೆ. ಈ ಕಡೆ ಇರುವವಳು ಏನು ಹೇಳಿದಳು ಎಂದರೆ ಬೇಡ ಈ ಇಟ್ಟಿಗೆ ಕೆಲಸ ಮಾಡುವವನು ನನ್ನ ಪರವಾಗಿದ್ದಾನೆ, ಆದ್ದರಿಂದ ನೀವು ಮಳೆ ಬರದೆ ಇರುವ ಹಾಗೆ

ಮಾಡಬೇಕು ಎಂದು ಹೇಳುತ್ತಾಳೆ. ದೇವರು ಈ ಬಗ್ಗೆ ಯೋಚನೆ ಮಾಡುತ್ತಾನೆ. ಯಾವನೋ ಒಬ್ಬನಿಗೆ, ಮಳೆ ಬಂದರೂ ಸರಿ, ಬರದಿದ್ದರೂ ಸರಿ, ನನಗೆ ತೆಂಗಿನಕಾಯಿ ಸಿಗುವುದು ಗ್ಯಾರೆಂಟಿ ಎಂದು ಮನಸ್ಸಿನಲ್ಲಿ ಇಟ್ಟುಕೊಂಡು ಏನು ಮನಸ್ಸಿನೋಳಗಡೆ ಅಯ್ಯೋ ಮುಂಡೆ ಮಕ್ಕಳಾ, ನಾವು ನಿಮಗೋಸ್ಕರವೇ ರೈತನು ಯಾವ ಕಾಲದಲ್ಲಿ ಬೆಳೆಯನ್ನು ಬೆಳೆಸಿದರೆ ಮಳೆ ಬರುತ್ತದೆ ನಾನು ಆ ಕಾಲವನ್ನು ಮುಂದಕ್ಕೆ ಹಾಕಿದೇನೆ, ಇಟ್ಟಿಗೆ ಕೆಲಸವನ್ನು ಮಾಡುವವನಿಗೆ ಸಮ್ಮರ್ ಟೈಮ್ ನಲ್ಲಿ ನೀನು ಕೆಲಸವನ್ನು ಮಾಡಿದರೆ ಚೆನ್ನಾಗಿ ಇರುತ್ತದೆ. ಆ ಕಾಲವನ್ನು ನಿಮಗೆ ಕೊಟ್ಟಿದ್ದೇನೆ. ನೀವು ಇಬ್ಬರು ಚೇಂಜ್ ಮಾಡಿಕೊಂಡು ಮಳೆ ಕಾಲದಲ್ಲಿ ಇಟ್ಟಿಗೆಯನ್ನು ಹಾಕಿ, ಸಮ್ಮರ್ ಕಾಲದಲ್ಲಿ ನೀವು ಬೇಯಿಸಿಬಿಟ್ಟು ನಮ್ಮನ್ನು ಕೇಳಿದರೆ ನಾನು ಎಲ್ಲಿಗಪ್ಪಾ ಹೋಗುವುದು ? ನಿಮ್ಮ ಹಣೆ ಬರಹ ಹೀಗೆ ಇದೆ. ನೀವು ಎಲ್ಲಿಗಾದರೂ ಹೋಗಲಿ ನಿಮಗೆ ಕಾಲವನ್ನು ಫಿಕ್ಸ್ ಮಾಡಿರುವುದು ಆದೇನೆ. ಸೆಪ್ಟಂಬರ್ ಚೇಲೆ ಡಿಸೈಡ್ ಮಾಡೋಣ, ಆಗ ಮಳೆ ಬರುತ್ತದಯೋ ಇಲ್ಲವೋ, ಮಳೆ ಬಂದರೂ ಸರಿ, ಮಳೆ ಬಾರದಿದ್ದರೂ ಸರಿ ಇದು ಸೆಪ್ಟೆಂಬರ್ ಮೇಲೆ ಗೊತ್ತಾಗಿ ಹೋಗುತ್ತದೆ. ಆಗ ಮಳೆ ಕಾಲವಾಗಿರುತ್ತದೆ. ಆದ್ದರಿಂದ ದೇವರು ಯಾವಾಗ ಆ ಕಾಲವನ್ನು ಫಿಕ್ಸ್ ಮಾಡಿರುವುದರಿಂದ ಹಾಗೆಯೇ ಅದು ನಡೆದುಕೊಂಡು ಹೋಗುತ್ತದೆ. ಅದನ್ನು ಭಗಬ್ಧಗೀತೆಯಲ್ಲಿ ಹೇಳಿದ್ದಾನೆ. ಯಾವುದು ಯಾವ ಸಮಯದಲ್ಲಿ ನಡೆಯ ಬೇಕೋ ಅದು ಆ ಸಮಯದಲ್ಲಿ ನಡೆದೆ ನಡೆಯುತ್ತದೆ. ಅದರಲ್ಲಿ ತಪ್ಪು ಏನು ಇಲ್ಲ. ಅದು ನಡೆಯಲೇಬೇಕು, ಕೊನೆಗೆ ಅದನ್ನು ಹೇಳುತ್ತೇನೆ. ಸರ್ಕಾರಗಳು ನಡೆಯಲೇಬೇಕು, ನಾವುಗಳು ಎಂಎಲ್ಎ ಆಗಿ ಇರಲೇಬೇಕು. ನಾವುಗಳು ಕೂಗಾಡಲೇ ಬೇಕು. ನೀವು ಕೆಲಸವನ್ನು ಮಾಡಲೇಬೇಕು. ಈ ಎಲ್ಲವೂ ಇದೆ. ಹೈಯರ್ ಎಜುಕೇಷನ್ ಬಗ್ಗೆ ಹೇಳುವುದಾದರೆ, First Grade College ಎಲ್ಲಾ ಕಡೆಗಳಲ್ಲಿ ಕೊಡುತ್ತೇವೆಂದು ಹೇಳಿದ್ದೀರಿ, ಸಂತೋಷ. ಮಕ್ಕಳು ಓದಬೇಕು. ಅಲ್ಲಿ administration ಹೇಗೆ ನಡೆಯುತ್ತಿದೆ ಎಂದು ತಮಗೆ ಗೊತ್ತಿದೆಯಾ ? ತಾವು ಹಣವನ್ನು ಎಷ್ಟು ಖರ್ಚು ಮಾಡಬೇಕೆಂದು ಹೇಳಿದ್ದೀರಿ. ಇಷ್ಟು ಹಣವನ್ನು ಕೊಡುತ್ತೇವೆಂದು

ಸಹ ಹೇಳಿದ್ದೀರಿ. ಒಂದೊಂದು First Grade College ಗೆ ಏನೇನು ಕೊಡುತ್ತೇವೆಂದು ಹೇಳಿದ್ದೀರಿ ಸಂತೋಷ. ನೀವು ಹೇಳಿದ ಪ್ರಕಾರವನ್ನು ನಾವು ಒಪ್ಪಿಕೊಳ್ಳೋಣ. ನಿಮ್ಮ administration ಯಾವ ಗೊಂದಲದಲ್ಲಿ ಇದೆ ಎಂದು ತಮಗೆ ಗೊತ್ತಿದೆಯೇ ? What is Government? ಅಲ್ಲಿ ಯಾರು ಹೇಳುವವರು ಇಲ್ಲ, ಕೇಳುವವರು ಇಲ್ಲ, ಅದಕ್ಕೆ ಹೇಳುತ್ತಿದ್ದೇನೆ. ಮಾನ್ಯ ಛೇರ್ಮನ್ ರವರಿಗೆ ಹೇಳಿಕೊಂಡು ನಾವು ಹೋಗಬೇಕು. ಪತ್ರಿಕೆಯವರು ಅದನ್ನು ನೋಡಿಕೊಂಡು ಈ ಸ್ಥಿತಿಯಲ್ಲಿ ಇದ್ದರೆ ಅವರು ಅದನ್ನು ಬರೆಯಬೇಕು. ಜನವರಿಗೆ ಅದು ಗೊತ್ತಾಗಬೇಕು. ಇದರ ಬಗ್ಗೆ ತಾವು ಯೋಚನೆ ಮಾಡಿ ಸಾರ್. At least, Finance Minister ರವರು ಯೋಚನೆ ಮಾಡಲಿಲ್ಲವೆಂದರೂ ಇಲ್ಲಿ ಇಲ್ಲವಾದರೂ ಕೂಡ, the in-charge Minister is very important to fine out as to what is the fact. ಒಬ್ಬರು ಮಂತ್ರಿ, ಒಬ್ಬ Principal Secretary ಯವರನ್ನು ಕರೆದು ಆ ಕಾಲೇಜಿನಲ್ಲಿ ತಪ್ಪಾಗಿದೆ. ಅದನ್ನು ಸರಿಪಡಿಸಿ ಎಂದು ಹೇಳಬೇಕು. ಏನು ತಪ್ಪಾಗಿದೆ ಎಂದರೆ, The Principal Secretary passed an order to the teacher to admit him. What you have suspended him is wrong ಎಂದು judgment ಕೊಟ್ಟು ಅವನಿಗೆ ಕಾಲೇಜಿಗೆ ಕಳುಹಿಸಿದ್ದಾರೆ. ಆ management ನವರು ತೆಗೆದು ಕೊಂಡಿಲ್ಲ. The management has refused to take him back. That shows that the Management is superior to the Principal Secretary. The Management is superior to the Minister. ನಾನು Higher Education Minister ಗೆ ಹೇಳಿದ್ದೆ, ಈತರಹ ಇದೆ ಸಾರ್, ಈ ಬಗ್ಗೆ ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ, ನೀವು ಬಜೆಟ್ ನಲ್ಲಿ ಈ ರೀತಿಯಾಗಿ ಹೇಳುತ್ತೀರಿ. First Grade College ಕೊಡುತ್ತೇವೆ. ನೀವು ಕೊಟ್ಟಿರುವಂತಹ First Grade College ನಲ್ಲಿ ಈ ತರಹದ ಸ್ಥಿತಿ ಬಂದಿದೆ. ಆ ಗ್ರಾಂಟ್ ನ್ನು ಕೊಟ್ಟಿರುವುದನ್ನು stop ಮಾಡುತ್ತೀರಾ? ಅಥವಾ ಅವರ ಮೇಲೆ action ತೆಗೆದು ಕೊಳ್ಳುತ್ತೀರಾ? ಅದಕ್ಕೆ Administrator ಅನ್ನು ಹಾಕಬೇಕು ಎಂದು ಮಾನ್ಯ

ಎಂ.ಪಿ.ಪ್ರಕಾಶ್ ರವರು ಅವರ Revenue Minister ಕಾಲದಲ್ಲಿ ಲೆಟರ್ನು ಇಷ್ಯೂ ಮಾಡಿದ್ದಾರೆ. ಶ್ರೀಮಾನ್ ಡಿ.ಮಂಜುನಾಥ್ ರವರು Minister ಆಗಿರುವಂತಹ ಟೈಮ್‌ನಲ್ಲಿ administration ಆಗಿದ್ದೂ ಇಂತಹ ತಪ್ಪನ್ನು ಮಾಡಿರುವವರಿಗೂ ಕೊಟ್ಟಿದ್ದಾರೆ, ಇವತ್ತಿನವರೆಗೂ ಅಲ್ಲಿ ಕೆಲಸಗಳು ಆಗಿರುವುದಿಲ್ಲ. Administration ಹೇಗೆ ಇದೆ ನೋಡಿ. Principal Secretary ವರು ಏನು ಹೇಳುತ್ತಾರೆಂದರೆ, what can I do for that ಎಂದು ಹೇಳುತ್ತಾರೆ. A IAS Officer, a learned man, a highly qualified officer who takes care of Karnataka in his hand, says to the Minister, "What can I do for that?' Ministerರವರೆ, ನಾನು ಟ್ರೈ ಮಾಡುತ್ತೇನೆ, ಅದನ್ನು ಕಮಿಷನರ್ ರವರು ಸ್ವಲ್ಪ ಡಿಲೇ ಮಾಡಿರುತ್ತಾರೆ. Sir, keeping me, they are discussing this. I should respect the Minister and I should obey to the Principal Secretary. This is the situation in your Maitri Sarkara. Where can I go and speak about this fate? ಈ ಕರ್ಮವನ್ನು ನಾನು ಎಲ್ಲಿಗೆ ಹೋಗಿ ಮಾತನಾಡುವುದಕ್ಕಾಗುತ್ತದೆ? ನಾನು ಏನು ತಪ್ಪು ಎಂದು ಹೇಳಲಿಲ್ಲ. ತಾವು ಬಜೆಟ್ ನಲ್ಲಿ ಏನು ಕೊಟ್ಟಿದೀರೋ ಅದರ ಬಗ್ಗೆ ನಾನು ತಪ್ಪು ಹೇಳಲಿಲ್ಲ. ನಿಮ್ಮ ಬಜೆಟ್ ನಲ್ಲಿ First Grade College ಅನ್ನು ಕೊಟ್ಟಿದ್ದೀರಿ, ಸ್ವಾಗತ ಮಾಡುತ್ತೇನೆ, ಸಂತೋಷ.

(ಈ ಹಂತದಲ್ಲಿ ಮಾನ್ಯ ಶ್ರೀರಾಮರೆಡ್ಡಿಯವರು ಕುಳಿತುಕೊಂಡು ಮಾತನಾಡುತ್ತಿದ್ದರು)

ಏನು ಸಾರ್ ಶ್ರೀರಾಮರೆಡ್ಡಿಯವರೆ, ಬಜೆಟ್ ಭಾಷಣದಲ್ಲಿ ಕಾಲೇಜಿನ ಬಗ್ಗೆ ಹೇಳಿದ್ದಾರೆ ಸ್ವಾಮಿ, ಇಷ್ಟು ಜನ ಹೇಳಿದ್ದಾರೆಂದರೆ ದಯವಿಟ್ಟು ಸ್ವಲ್ಪ ಬುಕ್ಕನ್ನು ನೋಡಬೇಕು. ಇವರಿಗೆ confuse ಆಗಿಬಿಟ್ಟಿದೆ. ನಾನು ಹುಡುಕಿ ನೋಡುತ್ತಿದ್ದೇನೆ. Higher education ಬಗ್ಗೆ ಇಲ್ಲಿ ಇದೆ. "…….upgrade the polytechnics at Kushalnagar, Raichur,

Chamarajnagar and Bellary" ಇದರಲ್ಲಿ ಆ ಬಗ್ಗೆ ಹೇಳಿದ್ದಾರೆ ಇದು ನಿಮ್ಮ administration ಸ್ವಾಮಿ. ನಾವು ಯಾರ ಹತ್ತಿರ ಹೋಗುವುದು, ಸ್ವಲ್ಪ ತಾವು ಆ ಅಧಿಕಾರಿಗಳನ್ನು, you have to keep them in your control. ಕುಡಿಯುವ ನೀರಿನ ಬಗ್ಗೆ ಹೇಳಿದ್ದಾರೆ. Water supply ಬಗ್ಗೆ ಹೇಳಿದ್ದಾರೆ ಸಂತೋಷ. ನೀವು ಬೇಕಾದಷ್ಟು ಹಣವನ್ನು ಕೊಟ್ಟಿದ್ದೀರೋ ಇಲ್ಲವೋ, ನಮ್ಮ ಕಡೆ ಹಣ ಇದೆ, ನಾವು ಮಾಡುತ್ತೇವೆಂದು ನಮ್ಮ ಮಂತ್ರಿಗಳಿಗೆ ಹೇಳಿದದೇವೆ. ಯರಗೋಡು ಪ್ರಾಜೆಕ್ಟ್ ಈ ಬಗ್ಗೆ ನಾನು ಮತ್ತು ಮಾನ್ಯ ಶ್ರೀನಿವಾಸಗೌಡರು ಟ್ರೈ ಮಾಡಿ ಅದರ ಮೇಲೆ ತೆಗೆದುಕೊಂಡು ಅದಕ್ಕೆ ಬಜೆಟ್ ಅಲಾಟ್ ಮಾಡಬೇಕೆಂದು ಹೇಳಿದರೆ ತಾವು ಯರಗೋಡು ಪ್ರಾಜೆಕ್ಟ್‌ಗೆ ಹಣವನ್ನು ಒದಗಿಸುವ ಬಗ್ಗೆ ಏನು ಹೇಳಿದ್ದಾರೆ ಸಾರ್. ಇದು ಯರಗೋಡಿನ ಬಗ್ಗೆ ಬುಕ್‌ನಲ್ಲಿದೆ. ಯರಗೋಡು ಪ್ರಾಜೆಕ್ಟ್ ಮಾಡುತ್ತೇವೆ. ೮೭-೮೮ ಸೆಕೆಂಡ್ ಸ್ಟೇಜ್. ಅದಕ್ಕೆ ಇಷ್ಟು ಹಣವೆಂದು ಹೇಳಲಿಲ್ಲ. ೧೦ ಲಕ್ಷವೆಂದು ಹೇಳಲಿಲ್ಲ, ೧೦ ಕೋಟಿ ರೂಪಾಯಿಗಳನ್ನು ಮಠಕ್ಕೆ ಕೊಟ್ಟಿದ್ದಾರೆ ನನಗೆ ನೋವಿಲ್ಲ. ನೀವು ೧೦೦ ಕೋಟಿ ರೂಪಾಯಿಗಳನ್ನು ಕೊಡಿ ಸ್ವಾಮಿ. ಅವರಿಂದ ಆಶೀರ್ವಾದ ಆಗಿ ಯರಗೋಡಿನಿಂದ ನೇರವಾಗಿ ನೀರು ನಮ್ಮ ಜಿಲ್ಲೆಗೆ ಬರಲಿ. ಅವರಿಗೆ ಹಣವನ್ನು ಕೊಟ್ಟು ಬಿಡಿ, ಅವರು ಆಶೀರ್ವಾದವನ್ನು ಮಾಡಲಿ, ಅಲ್ಲಿಂದ ನೇರವಾಗಿ ಕೆಜಿಎಫ್, ಕೋಲಾರ ಮತ್ತು ಮುಳಬಾಗಲಿಗೆ ಎಲ್ಲಾ ಎರಡೆರಡು ಟಿ.ಎಂ.ಸಿ.ಹೋಗಲಿ. ನಮಗೆ ಬಹಳ ಸಂತೋಷ. Because ಇದರಲ್ಲಿ ಏನಾಗುತ್ತದೆ ಎಂದರೆ casteless, colourless, creedless ಇದು ಸುಳ್ಳು, ಹೇಗೆ casteless, colourless, creedless? ಸನ್ಮಾನ್ಯ ಶ್ರೀ ಧರ್ಮಸಿಂಗ್‌ರವರು ಮುಖ್ಯಮಂತ್ರಿಯಾಗಿರುವಂತಹ ಕಾಲದಲ್ಲಿ ಯಾವುದೋ Christian function ಹೋಗಿದ್ದಾರೆಂದು ಎಷ್ಟು ಗೊಂದಲ ಮಾಡಿದರು. ಮಿಸ್ಟರ್ ಬೆನ್ನಿಹಿನ್ ಏತಕ್ಕೆ ಹೋಗಬೇಕು. ನಾವು ಬಿಡುವುದಿಲ್ಲವೆಂದು ಹೇಳಿದ್ದರೆ ಅವರು ಎಷ್ಟು ದೊಡ್ಡ ಮನಸ್ಸು ಇಟ್ಟುಕೊಂಡು ಎಲ್ಲಾ religious, ಎಲ್ಲಾ ಮತಗಳು ಒಂದೇ, ಮುಖ್ಯಮಂತ್ರಿಯ ಸ್ಥಾನದಲ್ಲಿರುವುದರಿಂದ ನಾನು ಹೋಗಲೇಬೇಕಾಗಿದೆ ಎಂದರು, ಇದರ ಬಗ್ಗೆ

ಮಾತನಾಡಿದರೆ ನಿಮಗೆ ಕೋಪ ಬರುತ್ತದೆ, ನನಗೆ ಕೋಪ ಇಲ್ಲ. I am not against swamijis. I am never against swamijis and I have never touched any swamijis feet till today and I will not touch till my death. Many millions of time I can die. ಇಲ್ಲವೇ ನಾಳೆ, ಇವತ್ತು, ಅರ್ಧಗಂಟೆಯಲ್ಲಿ ಎಂದು ಹೇಳಲಿಕ್ಕಾಗುವುದಿಲ್ಲ ವಲ್ಲ, ಮಾತನಾಡಿಕೊಂಡೇ ತೀರಿಹೋಗಬಹುದು. ಅದೊಂದು ಕಡೆ, ಆದ್ದರಿಂದ ನೀರಿಗೆ ದುಡ್ಡೇ ಕೊಟ್ಟಿಲ್ಲ, ಅದರ ಬಗ್ಗೆ ನಮ್ಮ ಹಣಕಾಸು ಸಚಿವರು ಗಮನವಿಟ್ಟುಕೊಂಡು, ಆ ಜಿಲ್ಲಾ dark area, ಅಲ್ಲಿ ರೈತರುಗಳು ಬಹಳ ಗೊಂದಲದಿಂದ ಇದ್ದಾರೆ, ಕುಡಿಯುವ ನೀರಿಗೆ ಇದೆ, ಎಂದು ನೀವೇನಾದರೂ ಚಿಂತನೆ ಮಾಡಿದ್ದೀರಾ ? ಆದ್ದರಿಂದ, Hon'ble Finance Minister, immediate ಆಗಿ ನಲ್ಲಿ ಒಂದು ರೂ. ೧೦.೦೦ ಕೋಟಿಗಳನ್ನು ರಿಲೀಸ್ ಮಾಡಲಿ. ೫೦,೦೦ ಕೋಟಿ ರೂ.ಗಳನ್ನು ರಿಲೀಸ್ ಮಾಡಲಿ.

ಶ್ರೀ ಕೆ.ಶ್ರೀನಿವಾಸ ಗೌಡ : ಅಧ್ಯಕ್ಷರೆ, ನಿನ್ನೆ ಮಾನ್ಯ ಉಪ ಮುಖ್ಯಮಂತ್ರಿಗಳು, ಶ್ರೀರಾಮರೆಡ್ಡಿಯವರು ಮಾತನಾಡುವಾಗ ಯರಗೋಡು ಪ್ರಾಜೆಕ್ಟ್ಗೆ ರೂ. ೫೦.೦೦ ಕೋಟಿ ಇಟ್ಟಿದ್ದೇನೆಂದು ಹೇಳಿದ್ದಾರೆ.

ಶ್ರೀ ಎಸ್. ರಾಜೇಂದ್ರನ್ : ಬೇರೆಯವರಾದರೂ ಕೇಳಿದರೆ ತಕ್ಷಣ ನಮ್ಮ ಮಾನ್ಯ ಉಪ ಮುಖ್ಯಮಂತ್ರಿಗಳು ಎದು ಉತ್ತರ ಕೊಡುತ್ತಾರೆ, ನಾವು ಕೇಳಿದರೆ ಅವರು ಕೊಡುತ್ತಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ನಾಳೆ ನಿಮಗೆ ಖುಷಿಯಾಗುವ ರೀತಿಯಲ್ಲಿ ಉತ್ತರ ಕೊಡುತ್ತೇನೆ.

ಶ್ರೀ ಎಸ್. ರಾಜೇಂದ್ರನ್ : ಸಂತೋಷ, ನಾವು ಖುಷಿಯಲ್ಲಿ ಮೇಲೆ ಹಾಗೆ ಎದ್ದು ಹೋಗುತ್ತೇವೆ. ನಿಜವಾಗಲೂ I will admire it. ನಾಳೆ ನಿಮ್ಮ ಪರವಾಗಿ ಪಾಸ್ ಆಗುತ್ತದೆಂದರೆ ಸಂತೋಷ ತಾನೆ? ಮೇಷ್ಟ್ರು ಪೇಪರ್ ಕರೆಕ್ಷನ್ ಮಾಡಿ, ನೀನು ಪಾಸಾಗುತ್ತೀಯಾ ಹೋಗು ಎಂದರೆ ಸಂತೋಷ, ಆದರೆ ಮಾನ್ಯ ಹಣಕಾಸು ಸಚಿವರ ಬಾಯಿಯಲ್ಲಿ ಈ ಮಾಥು

ಬಂದರೆ ಅದು ವಶಿಷ್ಠರ ಬಾಯಿಯಲ್ಲಿ ಬಂದ ಹಘೆ. ಖಂಡಿತವಾಗಿಯೂ ಅವರು ಹಣ ಕೊಡುವುದು ಗ್ಯಾರಂಟಿ ಮಾನ್ಯ ಶ್ರೀನಿವಾಸಗೌಡರೇ. ಅದರೊಂದಿಗೆ ತಾವು ಜಿ.ಟಿ.ಟಿ. Government Tool Training ಎಂಬ centre ಅನ್ನು ಕೆ.ಜಿ.ಎಫ್.ಗೆ ಕೊಟುರಿ youths ಬಗ್ಗೆ, ತಾವು ಮಾತನಾಡಿ ತಾವು ಮಾತನಾಡಿ, ಅವರಿಗೆ ತುಂಬಾ encouragement ಕೊಡಬೇಕು, ಅವರನ್ನು ಮೇಲೆ ತರಬೇಕು ಎಂದು. ಆದರೆ ಅದಕ್ಕೆ ಇನ್ನು ಹಣವೇ ಬಿಡುಗಡೆ ಮಾಡಿಲ್ಲ. ಆದ್ದರಿಂದ ಆ ಜಿ.ಟಿ.ಟಿಯವರು ನಮಗೆ ಹಣ ಕೊಡದಿರುವುದರಿಂದ ಮುಚ್ಚುಬಿಡುತ್ತೇವೆಂದು ನಿರ್ಧಾರ ಮಾಡುತ್ತಿದ್ದಾರೆ. ಎಲ್ಲಿ ನೀವು youths ಅನ್ನು encourage ಮಾಡುವುದು? encourage ಮಾಡುವ ರೀತಿಯೇ ಇದು? ಕ್ರಕೆಟ್ ನಲ್ಲಿ ಸೋತ್ತಿದ್ದಾಗ ಆಟಗಾರರ ಮನೆಗಳಿಗೆ ಪೊಲೀಸ್ ಪ್ರೊಟೆಕ್ಷನ್ ಕೊಡುತ್ತಾರೆ. ಅಷ್ಟು ಮಾಡಿದಿರಿ. ಕ್ರಿಕೆಟ್ ಬಾಲ್, ಪ್ಯಾಡ್, ಬ್ಯಾಟ್ ತೆಗೆದುಕೊಳ್ಳಲು ದುಡ್ಡಿಲ್ಲ. ಕ್ರಿಕೆಟ್ ಎಲ್ಲಿ ನೋಡುತ್ತಾನೆ ಅವನು ? ಯುವಜನತೆಯನ್ನು ಈಗಿನಿಂತ train ಮಾಡಿದರೆ ತಾನೆ. ಭಾಷಣದಲ್ಲಿ ಏನು ಹೇಳುವುದು? ಈಗಿರುವ ಕ್ರಿಕೆಟರ್ಸ್‌ಗೆಲ್ಲಾ age ಆಗಿದೆ. ಅವರನ್ನು ಸ್ಟಾಪ್ ಮಾಡಿ. Youngsters ಅನ್ನು ಕಳುಹಿಸಬೇಕು. ಆದರೆ ನೀವು ಅವರಿಗೆ ದುಡ್ಡೇ ಕೊಟ್ಟಿಲ್ಲ ಹೇಗೆ ಬೆಳೆಸುವುದು, tournament ಗೆ ಹವಾಯಿ ಚಪ್ಪಲ್ ಹಾಕಿಕೊಂಡು ಕ್ರಿಕೆಟ್ ಆಡಲಿಕ್ಕೆ ಹೋಗುತ್ತಾನೆಯೇ? ಯೋಚನೆ ಮಾಡಿ. ಈ ಬುಕ್ಕಿನಲ್ಲಿ ಏನೂ ಕೊಟ್ಟಿಲ್ಲ, ಕ್ರೀಡಾ ಸಚಿವರನ್ನು ಕೇಳಿದರೆ, ಏಷಪ್ಪಾ ಮಾಡುವುದು ಹಣ ಕೊಟ್ಟಿಲ್ಲ ಎನ್ನುತ್ತಾರೆ, ಇವರು ಹೋಗಿ ಕೇಳಬೇಕಲ್ಲವೇ? ಯಾರ್‍ಯಾರಿಗೆ ಯಾವ್ಯಾವ portfolio ಕೊಟ್ಟರೆ ತಾನೆ ಅವರಿಗೆ interest ಇರುವುದು. Last time ಹಾಗೆ ನನ್ನನ್ನು ಕೇಳಿದ್ದರು. ಆ ರೀತಿ sports ಬೆಳೆಸಿ, Youths ಅನ್ನು ಮೇಲಕ್ಕೆ ತರಬೇಕು. ಅದಕ್ಕೆ ನೀವು ಹಣ ಬಿಡುಗಡೆ ಮಾಡಬೇಕು. ನೀವು ಅದನ್ನೆಲ್ಲಾ ಕೈಬಿಟ್ಟು, ಸ್ವಾಮಿ ನಿಮ್ಮ ಬಜೆಟ್ಟಿನಲ್ಲಿ ಇಷ್ಟು amount ಕೊಟ್ಟರೆ ಅದನ್ನು ಎಷ್ಟು ಜಿಲ್ಲೆಗಳಿಗೆ ಖರ್ಚು ಮಾಡಲಿಕ್ಕಾಗುತ್ತದೆ? ಒಂದು district tournament ಇಟ್ಟು ಅವರು ನ್ಯಾಷನಲ್ಸ್ ಗವ ಹೋಗಬೇಕೆಂದರೆ, ಒಂದು ದಿವಸಕ್ಕೆ ೨೨೦-೦೦ ರೂ. ಗಳನ್ನು ಅವರಿಗೆ

ಕೊಡಬೇಕು. ಹಾಗಾದರೆ ಒಂದೊಂದು ಜಿಲ್ಲೆಯಲ್ಲಿ ಎಷ್ಟು ಜನ ಹೋಗುತ್ತಾರೆ. ಆ ಕ್ಯಾಂಪ್ ಗೆ ? ಯೋಚನೆ ಮಾಡಿ, ನೀವು ಕೊಟ್ಟಿರುವ ಹಣವನ್ನು ನಾನು ಇಲ್ಲಿ ಹೇಳಬೇಕೆ ? ರೂ. ಒಂದು ಕೋಟಿ ಚಿಲ್ಲರೆ, ಆದ್ದರಿಂದ You are encouraging more and more your bureacrats. Due to the bureaucrats, entire administration of Karnataka has failed. Yes it has failed ದೇವದಾಸಿ ಪದ್ಧತಿಯ ಬಗೆ ಹೇಳಿದಿರಿ. ಅವರಿಗೆ rehabilitate ಮಾಡಬೇಕು. ದೇವದಾಸಿಗಳಿಗೆಲ್ಲಾ ಒಂದೊಂದು ಹಸು ಕೊಡಬೇಕು. ದೇವದಾಸಿಗಳಿಗೆ rehabilitate ಮಾಡಬೇಕೆಂದರೆ, ನೀವು ತಪ್ಪು ತಿಳಿಯಬಾರದು, ದೇವದಾಸಿಯರಿಗೆಲ್ಲಾ ಪ್ರೋತ್ಸಾಹ ಕೊಡಬೇಕೆಂದರೆ ಮುಂದಿನ ಸಬ್ಜೆಕ್ಟ್ ಏನು ಅವರಿಗೆಲ್ಲಾ ಲಾಡ್ಜ್ ಕಟ್ಟಿಕೊಡಬೇಕೆಂದರೆ ತಪ್ಪಾಗುತ್ತದೆ. ಅವರಿಗೆಲ್ಲಾ ಅಲ್ಲಲ್ಲಿ ಛತ್ರ, ಲಾಡ್ಜಸ್ ಕಟ್ಟಿಕೊಡಬೇಕೆಂದು ಹೇಳಿಲ್ಲ, ನಾನು ಅವರಿಗೆ encourage ಮಾಡುವುದೆಂದರೆ ಏನು, ಅವರು ಅವರ ಕಸುಬಿಗೆ ಹೋಗಬಾರದು. ಹಾಗಾಗಿ ಅವರಿಗೆ, ಒಂದೊಂದು ಹಸು ಕೊಡಬೇಕು ಎಂದು. ಅವರಿಗೆ ಹಸು ಕೊಡಲಿಕ್ಕೆ ಸರ್ಕಾರ ಹತ್ತು ಸಾವಿರ ರೂಪಾಯಿ ಗಳು ಹತ್ತು ಸಾವಿರ ಸಾಲ, ಒಟ್ಟು ರೂ. ೨೦,೦೦೦-೦೦ ಒಂದು ಹಸು ಕೊಡುವುದು. ಎಲ್ಲಾ ಮಹಿಳೆಯರು, ಅದರಲ್ಲಿ ದೇವದಾಸಿಯರು ಇದ್ದಾರೆ. ನೀವು ಯಾವ ರೀತಿ ಹಸುಗಳನ್ನು ಕೊಡುವಿರಿ, ಗೊತ್ತೆ? SC/ST ಆಗಿರಲಿ, ಇವರಾಗಿರಲಿ, ಯಾರು ಚೆನ್ನಾಗಿ ಬೆಳೆಸಿ ಹಾಲನ್ನು ತೆಗೆದುಕೊಂಡು ಮೂರು ನಾಲ್ಕು ಕರುಗಳನ್ನು ಹಾಕಿರುವಂಥ ಹಸುಗಳನ್ನು ಇವರು sale ಮಾಡುವುದು. ಅದನ್ನು ಈ ದೇವದಾಸಿ ಹೆಣ್ಣುಮಕ್ಕಳಿಗೆ ಕೊಡುವುದು , ಆ ಹಸು ಮತ್ತೆ ಹಾಲು ಕೊಡುತ್ತದೆಯೇ? ಆ ಹಸು ಬಂದು ದೇವದಾಸಿ ಯಾಗಬೇಕು. ಆ ರೀತಿ ಎಸ್.ಸಿ./ಎಸ್.ಟಿ ಯವರಿಗೆ ಕೊಡುವುದು, ಹೀಗೆ ಮಾಡಿದರೆ ಏನು ಪ್ರಯೋಜನ ? ಈಗ ನೋಡಿ ಯಾರೋ ಒಬ್ಬ, ಹಸು ಬೆಳೆಸಿ ಹಾಲು ಪಡೆದು enjoy ಮಾಡಿ ಇಷ್ಟು ಕರುಗಳಾದ ಮೇಲೆ ಬೇರೆಯವರಿಗೆ ಕೊಡುತ್ತಾನೋ, ಅವನಿಗೆ ದುಡ್ಡು ಸಹ ಹೋಗುತ್ತದೆ.

ಶ್ರೀ ಎಸ್. ಸಿದ್ದರಾಮಯ್ಯ : ಎಲ್ಲಾ ಪ್ರಾಣಿಗಳೂ ದೇವದಾಸಿಗಳೇ.

ಶ್ರೀ ಎಸ್. ರಾಜೇಂದ್ರನ್ : ನಾನು ನೋಡಿಲ್ಲ ಸ್ವಾಮಿ, ಯಾವ್ಯಾವ ಪ್ರಾಣಿಗಳು ದೇವದಾಸಿ ಎಂದು ನನಗೆ ಗೊತ್ತಿಲ್ಲ.

ಶ್ರೀ ಕೆ. ಅನ್ನದಾನಿ : ಒಂದು ನಿಮಿಷ ಮಾನ್ಯ ರಾಜೇಂದ್ರನ್.

ಶ್ರೀ ಎಸ್.ರಾಜೇಂದ್ರನ್ : ಕುಳಿತುಕೊಳ್ಳಬೇಕೇ.

ಶ್ರೀ ಕೆ. ಅನ್ನದಾನಿ : ಈಗ SC/ST Corporation ನಲ್ಲಿ ಯಾವುದೇ ವಸ್ತನ್ನು ಅವರು ಖರೀದಿ ಮಾಡಿ, ಈ ಪರಿಶಿಷ್ಟಜಾತಿ / ವರ್ಗದ ಜನಾಂಗಕ್ಕೆ ಕೊಟ್ಟರೆ, ಅದು ಕಳಪೆ ಮಟ್ಟದಲ್ಲಿರುತ್ತದೆ. ಹೈನುಗಾರಿಕೆ ಯೋಜನೆ ಅಡಿಯಲ್ಲಿ ಹಸುಗಳನ್ನು ಖರೀದಿ ಮಾಡಿಕೊಡಬಹದುದು ಅಥವಾ ಪಂಪ್ ಮೋಟಾ ಕೊಡಬಹುದು, ಪಂಪ್ ಮೋಟಾರ್ ಯಾವ ಪರಿಸ್ಥಿತಿಯಲ್ಲಿರುತ್ತದೆಂದರೆ, ಯಾರೋ ಒಬ್ಬರು ಟೆಂಡರ್ ಮಾಡಿರುತ್ತಾರೆ, ಆ ಪಂಪ್ ನ ಸ್ವಿಚ್ ಆನ್ ಮಾಡಿದರೆ, ಒಂದೇ ಸಾರಿಗೆ ಅದು ಫುಲ್ burst ಆಗಿರುತ್ತದೆ. ಯಾವುದೇ ಆಗಲಿ, ಎತ್ತುಗಾಡಿ ಖರೀದಿ ಮಾಡಿಕೊಡಬಹುದು ಅಥವಾ ಭೂಮಿ ಖರೀದಿ ಮಾಡಿ ಕೊಡಬಹುದು, ಅಲ್ಲಿ ನೀರೇ ಬರುವುದಿಲ್ಲ. ಭೂ ಬಡೆತನ ಯೋಜನೆಯಲ್ಲಿ ಭೂಮಿಯನ್ನು ಖರೀದಿ ಮಾಡಿ, ದಲಿತರಿಗೆ ಕೊಡತಕ್ಕಂಥ ಒಂದರೆಡು ಎಕರೆ ಭೂಮಿಯಲ್ಲಿ ನೀರೇ ಬರುವುದಿಲ್ಲ. ನೀರಾವರಿ ಸೌಲಭ್ಯವಿರುವುದಿಲ್ಲ. ಮಳೆ ಆಶ್ರಯ ಪಡೆಯಬೇಕು. ಅಂಥ ಪರಿಸ್ಥಿತಿ ಇರುತ್ತದೆ.

ಛೇರ್ಮನ್ : ಆಯಿತು, ನಾವೇ ಕಳಪೆಯಾಗಿರುವಾಗ ನಾವು ಕೊಂಡು ಕೊಡುವುದೆಲ್ಲಾ ಕಳಪೆಯಾಗಿರುತ್ತದೆ.

ಶ್ರೀ ಎಸ್. ರಾಜೇಂದ್ರನ್ : ಇದನ್ನು ಸ್ವಲ್ಪ ಗಮನದಲ್ಲಿಟ್ಟುಕೊಂಡು ಸಮಾಜ ಕಲ್ಯಾಣ ಮಾನ್ಯ ಸಚಿವರಾಗಲಿ, ಹಣಕಾಸು ಮಾನ್ಯ ಸಚಿವರಾಗಲಿ ಅವರಿಗೆ ಡೈರೆಕ್ಟ ಆಗಿ ಹಣ ಕೊಡಬೇಕು. ರೂ. ೫೦,೦೦೦-೦೦ ಕೊಡಿ, ಬಾಂಬೆಯಲ್ಲಿ ರೂ. ೩೦೦-೦೦ ಕೊಡುತ್ತಿದ್ದಾರೆ. ಮಹಿಳಾ ಮತ್ತು ಮಕ್ಕಳ ಸಚಿವರು, ನೀವು ರೂ. ೫೦೦-೦೦ ಕೊಡಿ, ಆ ಕೆಲಸಕ್ಕೆ ಹೋಗಬಾರದೆಂದರೆ ಹಣಕಾಸು ಸಚಿವರು ನೀವು ಹಣ ಕೊಡಬೇಕು. ou

should come forward. ಮಹಿಳೆಯರಿಗೆ ಮಂತ್ರಿಪದವಿ ಕೊಟ್ಟಿಲ್ಲ. ಆ ಹೆಣ್ಣುಮಕ್ಕಳಿಗೆ ಯಾವ ಪೋಸ್ಟಿಂಗ್ಸ್ ಕೊಟ್ಟಿಲ್ಲ. ಅಧ್ಯಕ್ಷರ ಸ್ಥಾನ ಕೊಟ್ಟಿದ್ದಾರೆಯೇ, ಎಂದರೆ ಅದು ಇಲ್ಲ. At least ಹೆಣ್ಣುಮಕ್ಕಳಿಗೆ ರೂ. ೫೦೦-೦೦ ಕೊಡಿ. ಅದರ ಬಗ್ಗೆ ಸ್ವಲ್ಪ ಚಿಂತನೆ ಮಾಡಿ. ನಿಮ್ಮ ಮೈತ್ರಿ ಸರ್ಕಾರ, ಒಳ್ಳೆಯ ಸರ್ಕಾರ, ಕೆಟ್ಟ ಪದ ನನ್ನ ಬಾಯಲ್ಲಿ ಬರಬಾರದು. Hon'ble Medical Education Minister ತಾವು ಚಿಂತನೆ ಮಾಡಿರಬೇಕು. ನಿಮ್ಮ ಅಧಿಕಾರಿಗಳನ್ನು ತಮ್ಮ ಪಕ್ಕದಲ್ಲಿರುವವರು ನಿಮಗೆ ಅವರು ಕಾಲೇಜುಗಳನ್ನು ಎಲ್ಲೆಲ್ಲಿ ಕೊಡಬೇಕು, ಹಣ ಎಲ್ಲಿ ಖರ್ಚು ಮಾಡಬೇಕೆಂದು ಹೇಳುತ್ತಾರೋ, ಕೆ.ಜಿ.ಎಫ್, ಬಿ.ಜಿ.ಎಂ.ಎಲ್. ಆಸ್ಪತ್ರೆ ಬಗ್ಗೆ ಕೌನ್ಸಿಲ್ ನಲ್ಲಿ ಪ್ರಶ್ನೆ ಬಂದಿರುವುದು ತಮಗೆ ಗೊತ್ತಿರಬಹುದು. ಸುಮಾರು ೨೦ ಮಾಜಿ rooms Hospital ಸಚಿವರಾದ ಮಾನ್ಯ ಶ್ರೀನಿವಾಸಗೌಡರು ಇದ್ದಾರೆ. It is such a huge and beautiful hospital. ಅದನ್ನು ಈಗ ಸುಮ್ಮನೆ ಮುಚ್ಚಿದ್ದಾರೆ. ನೀವು ಕೇಂದ್ರ ಸರ್ಕಾರದವರ ಹತ್ತಿರ ಮಾತನಾಡಿ ಅಲ್ಲೊಂದು ಸರ್ಕಾರಿ ಕಾಲೇಜನ್ನು ಕೊಟ್ಟಿದ್ದರೆ ಅಲ್ಲಿ ಕೆಲವರಿಗೆ employments ಸಿಗುತ್ತಿತ್ತು. ಆ ಜಿಲ್ಲೆಗೆ ಒಳ್ಳೆಯ ರೀತಿಯಲ್ಲಿ medical facility ಸಿಗುತ್ತಿತ್ತು. ತಾವು ಕೆ.ಜಿ.ಎಫ್ ಗೆ ಬಂದಾಗ ನೋಡಿಲ್ಲವೇ ? ಇದನ್ನೆಲ್ಲಾ ಯೋಚನೆ ಮಾಡಿ ನಿಮ್ಮ ಅಧಿಕಾರಿಗಳನ್ನು ಇಟ್ಟುಕೊಳ್ಳಬೇಕು. ಇದನ್ನೆ ನಾವು ನಿಮಗೆ ಹೇಳುವುದು. ಇದನ್ನು ಹೇಳಿದರೂ ನಿಮಗೆ ನೋವು, ನಾವು ಒಳ್ಳೆಯ ಕೆಲಸಗಳನ್ನು ಮಾಡಿದ್ದೇವೆ. opposition ಕಡೆ ಯವರು ನಮಗೆ ಯಾವಾಗಲೂ ಹೀಗೆ ಹೇಳುತ್ತಾರೆಂದು ನೀವು ನೊಂದು ಕೊಳ್ಳುತ್ತೀರಿ.ಆದರೆ ನೀವು ಎಲ್ಲಿ ಒಳ್ಳೆಯ ಕೆಲಸವನ್ನು ಮಾಡಿದ್ದೀರಿ? ತಾವು ಒಳ್ಳೆಯವರಾಗಿರಬಹುದು, ನಿಮ್ಮ ಜೊತೆಯಲ್ಲಿರುವವರು. ಆದ್ದರಿಂದ ಈ ಸರ್ಕಾರ ಹೇಗೆದೆಯೆಂದರೆ..

ಛೇರ್ಮನ್ : ಮಾನ್ಯ ರಾಜೇಂದ್ರನ್, ನಿಮ್ಮ ಸಮಯ ಮುಗಿದಿದೆ.

ಶ್ರೀ ಎಸ್.ರಾಜೇಂದ್ರನ್ : ಒಂದೆರಡು ನಿಮಿಷಗಳಲ್ಲಿ ಮಾತನಾಡಿ ಮುಗಿಸುತ್ತೇನೆ. ತಾವು ಅಲ್ಲಿ ಕುಳಿತುಕೊಂಡಿರುವವರ ಬಗ್ಗೆ ಮೂರು

ಮಾತುಗಳನ್ನು ಹೇಳಬೇಕು. This coalition Government, ಇಬ್ಬರು friends ಹೇಗಿದ್ದಾರೆಂದರೆ, ಒಬ್ಬನಿಗೆ ಕಾಲು ಇಲ್ಲ, ಇನ್ನೊಬ್ಬನಿಗೆ ಕಣ್ಣು ಇಲ್ಲ. ಇಬ್ಬರು ಏನು ಮಾಡುತ್ತಾರೆಂದರೆ, ಒಂದು ವಾತಾವರಣ ಇಟ್ಟುಕೊಂಡು ನಾವು ಹೇಗಾದರೂ ಚೆನ್ನಾಗಿರಬೇಕು, ಆದ್ದರಿಂದ ನಿಮಗೆ ಕಾಲು ಇದೆ, ನನಗೆ ನಿಮ್ಮ ಮೇಲೆ ಕೂರಿಸಿಕೊಳ್ಳಿ, ಕಣ್ಣು ಇಲ್ಲ ನಾನು ದಾರಿ ತೋರಿಸಿಕೊಂಡುಹೋಗುತ್ತೇನೆ, ನಿಮಗೇನೂ ಏಟಾಗುವುದಿಲ್ಲ ನೀವು ಹೇಳಿದ ಪ್ರಕಾರ ಹೋದರೆ ಸಂತೋಷ ಎಂದು ಹೇಳುತ್ತಾನೆ. ಅವನಿಗೆ ಬಹಳ ಸಂತೋಷವಾಗುತ್ತದೆ. ಇವರಿಬ್ಬರೂ ಒಪ್ಪಿಕೊಂಡು ಕಾಲು ಇಲ್ಲದವನು ಕಣ್ಣು ಕಾಣಿಸದವನ ಮೇಲೆ ಕುಳಿತು ಕೊಂಡು ದಾರಿ ತೋರಿಸಿ ಕೊಂಡು ಹಾಗುತ್ತಿದ್ದಾನೆ. ಹೀಗೆಯೇ ಜೀವನ ಮಾಡಿಕೊಂಡಿರುವ ಸಮಯ ದಲ್ಲಿ ಒಂದು ಕೆರೆ ಪಕ್ಕದಲ್ಲಿ ಇಬ್ಬರು ಕುಳಿತುಕೊಂಡರು. ಬಟ್ಟೆ clean ಮಾಡುವುದಕ್ಕೆ ಹೋಗಿ ಕಾಲು ಇರುವವನು ಬಟ್ಟೆ ಒಣಗಿಸುತ್ತಿದ್ದಾನೆ. ಕಣ್ಣು ಇಲ್ಲದಿರುವವನು ಅವನಿಗೆ ಹೇಳುತ್ತಿದ್ದಾನೆ. ಇದು ನೀರು, ಸೋಪು, ಈ ಜಾಗದಲ್ಲಿ ಇದೆ ಎಂದು ಹೇಳುತ್ತಿದ್ದಾನೆ. ಇವರಿಬ್ಬರ ಮನಸ್ಸಿನಲ್ಲಿ ಏನಿದೆ ಎಂದರೆ, ಇನ್ನು ಎಷ್ಟು ಕಾಲಕ್ಕೆ ನಾನು ಈ ಕುಂಟನನ್ನು ತೆಗೆದುಕೊಂಡು ಹೋಗುವುದು, ದೇವರು ನನಗೆ ಕಣ್ಣು ಕೊಟ್ಟಿದ್ದರೆ ಎಷ್ಟು ಸಂತೋಷ ವಾಗುತ್ತಿತ್ತು, ಈ ಕುಂಟನ ಸಹವಾಸದಿಂದ ನಾನು ದೂರ ಇರಬಹುದಿತ್ತು, ಏನು ಕರ್ಮವೋ ಎಂದು ಮನಸ್ಸಿನಲ್ಲಿಟ್ಟುಕೊಂಡು ಬಟ್ಟೆ ಒಣಗಿಸುತ್ತಾನೆ. ಅದನ್ನೇ ಕಾಲು ಇಲ್ಲದವನು ಅಯ್ಯೋ ದೇವರೆ ನನಗೆ ಕಾಲು ಕೊಟ್ಟಿದ್ದರೆ ಈ ಗೂಬೆ ಹತ್ತಿರ ಎಷ್ಟು ದಿವಸ ನಾನು ಇರುವುದು, ನನಗೆ ಕಾಲು ಇದ್ದಿದ್ದರೆ ನಾನು ಸಂತೋಷವಾಗಿ ಹೋಗಬಹುದಿತ್ತು ; ಎಂದು ಇದು ಇಬ್ಬರ ಮನಸ್ಸಿನಲ್ಲಿಯೂ ಇದೆ. ಇದನ್ನು ಕೇಳಿ ದೇವರೇ ನೇರವಾಗಿ ಬಂದಿತು. ಬಂದ ತಕ್ಷಣ ಯಾರಿಗೆ ಕಣ್ಣು ಇಲ್ಲವೋ ಅವನ ಬಳಿ ಬಂದು ಅಪ್ಪ ನಿನಗೆ ಎರಡು ವರ ಕೊಡುತ್ತೇನೆ, ನಿನಗೆ ಏನು ಬೇಕು ಕೇಳಿ ಎಂದು ಹೇಳಿದ. ಸವಾಮಿ ನನಗೆ ಕಣ್ಣು ಇಲ್ಲ ಕಣ್ಣು ಕೊಡಿ ಎಂದು ಹೇಳಿದ. ಹಾಗೆಯೇ ಆಗಲಿ ನಿನೆ ಕಣ್ಣು ಕೊಡುತ್ತೇನೆ. ಇನ್ನೊಂದು ವರ ಬೇಕಾ ಕೇಳು ಎಂದು ಹೇಳಿದ, ಇನ್ನೊಂದು ವರ ಕೇಳುವಾಗ ಅವನು ಏನು

ಹೇಳಿದ, ಅಲ್ಲಿ ಕುಳಿತುಕೊಂಡಿದ್ದಾನಲ್ಲಾ. ಅವನಿಗೆ ಕಣ್ಣೇ ಇರಬಾರದು ಎಂದು ಹೇಳಿದ. ಆಯಿತು ಹಾಗೆಯೇ ಮಾಡುತ್ತೇನೆ. ಎಂದು ಹೇಳಿದ. ಇವನ ಹತ್ತಿರ ಬಂದು ನಿನಗೆ ಎರಡು ವರ ಕೊಡುತ್ತೇನೆ ಏನು ಬೇಕು ಕೇಳು ಎಂದು ಹೇಳಿದ. ಸ್ವಾಮಿ ಕಾಲು ಬೇಕು ಎಂದು ಹೇಳಿದ. ಆಯಿತು ಕೊಡುತ್ತೇನೆ, ಇನ್ನೊಂದುವರ ಏನು ಬೇಕು ಕೇಳು ಎಂದು ಹೇಳಿದ. ಅಲ್ಲಿದ್ದಾನೆ ನೋಡಿ ಅವನಿಗೆ ಕಾಲೇ ಬರಬಾರದು ಸ್ವಾಮಿ ಎಂದು ಹೇಳಿದ ಇಬ್ಬರಿಗೂ ಎಷ್ಟು ಪ್ರೀತಿ ನೋಡಿ, ಇಬ್ಬರು ಒಬ್ಬರ ಮೇಲೆ ಒಬ್ಬರು ತೆಗೆದುಕೊಂಡು ಹೋಗುವವರೆ, ಒಳಗಡೆ ಏನಿದೆ, ಇವನು ಸಾಯಬೇಕೆಂದು ಅವನು, ಅವನು ಸಾಯ ಬೇಕೆಂದು ಇವನು. ಕೊನೆಗೆ cycling rotation. ಯಾವನು ಕಾಲು ಇಲ್ಲದವನು ಕಣ್ಣು ಇಲ್ಲದವನಿಗೆ ಕರೆದುಕೊಂಡು ಹೋಗಿದ್ದನೋ ಈಗ ಅದು ರಿವರ್ಸ್ ಆಗಿದೆ. ಇವನು ಅವನಿಗೆ ಕರೆದುಕೊಂಡು ಹೋಗಬೇಕು. ಅಷ್ಟೆ. ಸೆಪ್ಟಂಬರ್‌ನಿಂದ ಹೀಗಾಗಿದೆ. ಸರ್ಕಾರಕ್ಕೆ ಏನೂ ಬರುವುದಿಲ್ಲ. ನಿಮ್ಮ ಎಲ್ಲ ಬಜೆಟ್ ಪಾಸ್, ಮಾನ್ಯ ಯಡಿಯೂರಪ್ಪರವರ ಬಜೆಟ್ ಪಾಸು, ಮೈತ್ರಿ ಸರ್ಕಾರ ಪಾಸು, ಹೌದು ಎಂಬುವವರು ಹೌದು ಇಲ್ಲ ಎನ್ನುವವರು ಇಲ್ಲ. ಇಷ್ಟು ಮಾತ್ರ ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ಅಧ್ಯಕ್ಷರಿಗೆ ಧನ್ಯವಾದಗಳನ್ನು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್ : ಮಾನ್ಯ ಗೋಪಾಲ್ ಪೂಜಾರಿಯವರು.

ಶ್ರೀ ಕೆ. ಗೋಪಾಲ್ ಪೂಜಾರಿ (ಕಾರ್ಕಳ) : ಮಾನ್ಯ ಛೇರ್ಮನ್ ರವರೇ, ೮ನೇ ಆಯವ್ಯಯದ ಬಗ್ಗೆ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳು. ೨೦೦೭-೦೮ ರ ಆಯವ್ಯಯದ ಕೆಲವು ಭಾಗಗಳನ್ನು ನಾನು ಇಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಲಾಟರಿ ನಿಷೇಧ ಹಾಗೂ ರೈತರ ಬಡ್ಡಿ ಮನ್ನಾ ಮತ್ತು ಸಾಲ ಮನ್ನಾವನ್ನು ಈ ಸಂದರ್ಭದಲ್ಲಿ ಸ್ವಾಗತಿಸುತ್ತೇನೆ. ಸಾರಾಯಿ ನಿಷೇಧ ಮತ್ತು ಲಾಟರಿ ನಿಷೇಧ ಏನು ಘೋಷಣೆ ಮಾಡಿದ್ದಾರೆ, ಈ ನಿಷೇಧವನ್ನು ನಾನು ಸ್ವಾಗತಿಸುತ್ತೇನೆ. ಆದರೆ ಮಾನ್ಯ ಸಚಿವರು ಆಯವ್ಯಯದಲ್ಲಿ ಆ ನೌಕರರು ಏನು ಕೆಲಸ

ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಅವರಿಗೆ ತರಬೇತಿ ಕೊಡುತ್ತೇವೆ ಎನ್ನತಕ್ಕಂತಹ ಮಾತನ್ನು ಹೇಳಿದ್ದಾರೆ. ೪೦ರಿಂದ ೫೦ ವರ್ಷ ಮೀರಿದವರಿಗೆ ಈ ಸರ್ಕಾರ ಯಾವ ರೀತಿಯ ತರಬೇತಿ ಕೊಡುತ್ತದೆ ? ಬಹುಶಃ ೨೦ರಿಂದ ೨೫ ವರ್ಷದ ಯುವಕರಿಗೆ ಆದರೆ ನೀವು ತರಬೇತಿ ಕೊಡಬಹುದು.

ಶ್ರೀ. ಜಯಪ್ರಕಾಶ್ ಹೆಗ್ಡೆ. ಕೆ : ಮಾನ್ಯ ಯಡಿಯೂರಪ್ಪರವರು ದಯವಿಟ್ಟು ಇದನ್ನು ಕೇಳಬೇಕು. ಅವರು ಏನೋ ಒಂದು ಪ್ರಶ್ನೆ ಕೇಳಿದರು, ಸಾರಾಯಿ ನಿಷೇಧ ಮಾಡಿ ಅವರಿಗೇನು ತರಬೇತಿ ಕೊಡುತ್ತೇವೆಂದು ಹೇಳಿದಿರಿ, ಎಲಲ್ ಹೆಚ್ಚಿನಾಂಶ ೪೦ರಿಂದ ೫೦ ವರ್ ಮೀರಿದವರು ಅವರಗೇನು ತರಬೇತಿ ಕೊಡುತ್ತೀರಿ ಎಂದು ಅವರು ಕೇಳುತ್ತಿದ್ದಾರೆ.

ಶ್ರೀ ಕೆ. ಗೋಪಾಲ್ ಪೂಜಾರಿ : ೫೦ ವರ್ಷ ವಯಸ್ಸಿನವರು ಇಡೀ ಕುಟುಂಬವನ್ನು ನಡೆಸತಕ್ಕಂತಹ ಜವಾಬ್ದಾರಿಯನ್ನು ಹೊಂದಿದಂತಹ ಆ ಜನರಿಗೆ, ಈ ವಯಸ್ಸಿನಲ್ಲಿ ಯಾವ ರೀತಿಯ ತರಬೇತಿಯನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ? ಮಾನ್ಯ ಅರ್ಥ ಸಚಿವರು ಆ ಭಾಗದ ಜನರ ಬಗ್ಗೆ ಹೆಚ್ಚು ಕಾಳಜಿ ಇಟ್ಟುಕೊಂಡು ಆ ಕುಟುಂಬದವರ ರಕ್ಷಣೆ ಮಾಡತಕ್ಕಂಥದ್ದಕ್ಕೆ ಕಾರ್ಯಕ್ರಮಗಳನ್ನು ಕೊಡಬೇಕು. ಅವರಿಗೆ ಬದಲಿ ವ್ಯವಸ್ಥೆಯನ್ನು ಮಾಡಬೇಕೆಂದು ತಮಗೆ ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಮತ್ತೊಂದು ಕಡೆ ನೀವು ಸಾರಾಯಿ ಬದಲಿ ವ್ಯವಸ್ಥೆಯನ್ನು ಮಾಡುತ್ತೇನೆಂದು ಹೇಳಿದ್ದೀರಿ. ಬಹುಶಃ ಈ ಸಾರಾಯಿ ನಿಷೇಧದಿಂದ ಗ್ರಾಮೀಣ ಪ್ರದೇಶಗಳಲ್ಲಿ ದೊಡ್ಡ ರೀತಿಯಲ್ಲಿ ಕಳ್ಳ ಬಟ್ಟಿ ಮಾಡಲಿಕ್ಕೆ ಈಗಾಗಲೇ ತಯಾರಿಯಾಗಿದೆ. ಇದರ ಬಗ್ಗೆ ಸರ್ಕಾರದ ಮುಂಜಾಗ್ರತೆ ಏನು? ಎಷ್ಟೋ ಸಾರಿ ಕಳ್ಳ ಬಟ್ಟಿ ದುರಂತಗಳಾಗಿವೆ. ಇದರ ಬಗ್ಗೆ ಸರ್ಕಾರದ ಮುಂದಿನ ಕಾಳಜಿ ಏನು? ಇದರ ಬಗ್ಗೆ ಸಹ ಈ ಸರ್ಕಾರ ಹೆಚ್ಚಿನ ಜವಾಬ್ದಾರಿಯಿಂದ ನಡೆದುಕೊಳ್ಳಬೇಕಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಚೆ ಪಡುತ್ತೇನೆ. ಇನ್ನು ಲಾಟರ ನಿಷೇಧವ

ಬಗ್ಗೆ ಹೇಳಬೇಕೆಂದರೆ, ನಾನು ಅದನ್ನು ಸ್ವಾಗತಿಸುತ್ತೇನೆ. ಗ್ರಾಮೀಣ ಪ್ರದೇಶದ ಕೂಲಿ ಕಾರ್ಮಿಕ ವರ್ಗ ಏನಿದೆ, ಮಟ್ಟಿ ಹಾವಳಿಯಿಂದ ಮನೆಗೆ ಒಂದು ರೂಪಾಯಿಯನ್ನು ತೆಗೆದುಕೊಂಡು ಹೋಗದಂತಹ ಪರಿಸ್ಥಿತಿ ಇವತ್ತು ಗ್ರಾಮೀಣ ಪ್ರದೇಶಗಳಲ್ಲಿ ಇದೆ. ಮಾನ್ಯ ಹಾವಳಿ ನಿಷೇಧದ ಬಗ್ಗೆ ಯಾವ ರೀತಿ ಕಾನೂನು ಕ್ರಮವನ್ನು ತೆಗೆದುಕೊಳ್ಳುವುದಕ್ಕಾಗುತ್ತದೆ, ನೀವು ಅವರಿಗೆ ಅರೆಸ್ಟ್ ಮಾಡಿದರೆ ತಕ್ಷಣ ಅರ್ಧ ಗಂಟೆಯೊಳಗೆ ಜಾಮೀನು ಮೂಲಕ ಹೊರಗೆ ಬರುತ್ತಾರೆ. ಅದರ ಬಗ್ಗೆ ಸರ್ಕಾರದ ನಿಲುವು ಏನು ? ಅದರ ಬಗ್ಗೆ ಸರ್ಕಾರದ ವ್ಯವಸ್ಥೆ ಏನು ಎನ್ನುವುದನ್ನು ಜನರಿಗೆ ತಿಳಿಸಬೇಕಾಗುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಸಾಲ ಮನ್ನಾ ಬಗ್ಗೆ ರೂ.೧೯೦೦ ಕೋಟಿ ಹೊರೆ ಬೀಳುತ್ತದೆ ಎಂದು ಮಾನ್ಯ ಸಚಿವರು ಈಗಾಗಲೇ ಹೇಳಿದ್ದಾರೆ. ರೂ. ೧೯೦೦ ಕೋಟಿ ಹೊರೆ ಬೀಳುತ್ತದೆ ಎಂದು ಮಾನ್ಯ ಸಚಿವರು ಈಗಾಗಲೇ ಹೇಳಿದ್ದಾರೆ. ರೂ. ೧೯೦೦ ಕೋಟಿ ಹೊರೆ ಬೀಳುತ್ತದೆ ಎಂದರೆ, ನಾವು ಇದರ ಬಗ್ಗೆ ಬಹಳಷ್ಟು ಚರ್ಚೆ ಮಾಡಬೇಕಾಗುತ್ತದೆ. ಹಿಂದಿನ ಸಾಲ ಹೋ ಸಾರಿಯ ಬಡ್ಡಿ ಮನ್ನಾದಲ್ಲಿ ರೂ.೧೭೨ ಕೋಟಿ ಹಣ ಸಹಕಾರಿ ಸಂಘಗಳಿಗೆ ಪಾವತಿಸುವುದು ಬಾಕಿ ಇತ್ತು. ಆದಾದ ಮೇಲೆ ಬಹುಶಃ ಈ ಬಾರಿ ಆಗುವಂತಹ ಬಡ್ಡ ಮನ್ನಾ ಕಾರ್ಯಕ್ರಮಕ್ಕೆ ಸುಮಾರು ಮೂರು ಕೋಟಿ ರೂಪಾಯಿಯಷ್ಟು ಹಣ ಕೊಡಬೇಕಾಗುತ್ತದೆ. ಅದಲ್ಲದೆ, ಈ ಸಾಲಗಾರರಿಗೆ ಬಡ್ಡಿ ಮನ್ನಾ ಮಾಡುವುದರ ಜೊತೆಗೆ ರೂ. ೪೯೪ ಕೋಟಿ ರೂಪಾಯಿ ಹಣ ಪಾವತಿಸಬೇಕಾಗುತ್ತದೆ. ಸುಮಾರು ಆರು ಲಕ್ಷ ರೈತರಿಗೆ ರೂ. ೨೫,೦೦೦ ರೂಪಾಯಿಯವರೆಗೆ ಕೊಡಬೇಕಾದರೆ ರೂ. ೮೫೦ ಕೋಟಿ ಹೊಣೆ ಈ ಸಂದರ್ಭದಲ್ಲಿ ಆಗುತ್ತದೆ. ಅದೇ ರೀತಿ ಸುಮಾರು ಮೂರು ಲಕ್ಷ ರೈತರಿಗೆ ಅಲ್ಪಾವಧಿ ಸಾಲ ಮತ್ತು ಬಡ್ಡಿ ಮನ್ನಾ ರೂ. ೭೫೦ ಕೋಟಿ. ಒಟ್ಟಾರೆ ಸಂಪೂರ್ಣವಾಗಿ ಕೊಡಬೇಕಾದರೆ ರೂ. ೧೫೫೦ ರಿಂದ ರೂ. ೧೬೦೦ ಕೋಟಿ ಹಣವನ್ನು ನಮಗೆ ಕೊಟ್ಟರೆ ಹೆಚ್ಚಿನ ರೈತರಿಗೆ ಇದರಿಂದ ಲಾಭವಾಗುತ್ತದೆ. ಅದರ ಬಗ್ಗೆ ಹೆಚ್ಚು ಕೊಡಬೇಕೆನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಬಹಳಷ್ಟು

ಸಂಘಟನೆಗಳಿಗೆ ಮತ್ತು ಸ್ವಾಮೀಜಿಗಳಿಗೆ ಹಣವನ್ನು ಬಿಡುಗಡೆ ಮಾಡಿದ್ದಾರೆ. ನಮ್ಮ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಕೋಟಿ ಚನ್ನಯ್ಯ ಎನ್ನುವ ಹೋರಾಟವನ್ನು ಹಿಂದುಳಿದ ವರ್ಗದವರು ಮಾಡಿದರು. ಹೋರಾಟ ಮಾಡಿ ಆ ದೇವರ ಬಗ್ಗೆ ಇರುವ ಕಾಳಜಿಯನ್ನು ನಾವು ಅನುಸರಿಸಿಕೊಂಡು ಬಂದಿದ್ದೇವೆ. ಮಾನು ಎಸ್.ಎಂ.ಕೃಷ್ಣರವರ ಕಾಲದಲ್ಲಿ ದೊಡ್ಡ ಸಮಾವೇಶ ವನ್ನು ಮಾಡಿ ಆಗರಡಿಯಲ್ಲಿ ಪೂಜೆ ಮಾಡತಕ್ಕಂತಹ ಜನರಿಗೆ ಮಾಶಾಸನ ಕೊಡಬೇಕು, ಮತ್ತು ಆ ಸಂಶೋಧನಾ ಕೇಂರಕ್ಕೆ ಸರ್ಕಾರದಿಂದ ಸಹಾಯಧನವನ್ನು ಕೊಡಬೇಕೆಂಬ ಬೇಡಿಕೆಯನ್ನು ಇಟ್ಟಿದ್ದೆವು. ಮಾನ್ಯ ಅರ್ಥ ಸಚಿವರು ಇದರ ಬಗ್ಗೆ ಬಹಳಷ್ಟು ಒತ್ತನ್ನು ಕೊಟ್ಟಿದದಾರೆ. ಇದಕ್ಕು ಸಹ ಒಂದುವರೆ ಕೋಟಿ ರೂಪಾಯಿ ಹಣವನ್ನು ಈ ಕೋಟಿ ಚನನ್ಯ್ಯಶ ಸಂಶೋಧನಾ ಕೇಂದ್ರಕ್ಕೆ ಕೊಡುವ ಮೂಲಕ, ಅಲ್ಲಿ ಕೆಲಸ ಮಾಡುವಂತಹ ಅರ್ಚಕರಿಗೆ ಸಹಾಯಧನವನ್ನು ಕೊಡುವ ಬಗ್ಗೆ ಘೋಷಣೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಮಾನ್ಯ ಅರ್ಥ ಸಚಿವರಲ್ಲಿ ನನ್ನ ವಿನಂತಿ ಎಷ್ಟೆ. ಈ ನಮ್ಮ ಜಿಲ್ಲೆಯಲ್ಲಿ ವಸತಿ ಬಗ್ಗೆ ಬಹಳ ಹೆಚ್ಚು ಆರುವರೆ ಲಕ್ಷ ಜನರಿಗೆ ಮನೆಗಳನ್ನು ಕೊಡುತ್ತೆನೆ, ಸೈಟ್ ಕೊಡುತ್ತೇವೆ ಎನ್ನುವ ಘೋಷಣೆ ಮಾಡಿದ್ದಾರೆ. ಇಡೀ ಜಿಲ್ಲೆಯಲ್ಲಿ ಸೈಟ್ ಕೊಡತಕ್ಕಂತಹ ಕಾರ್ಯಕ್ರಮ ಇವತ್ತು ನಡೆಯಲಿಲ್ಲ. ಪಡುಬಿದ್ರಿಯಲ್ಲಿ ಆದಂತಹ ಘಟನೆಯನ್ನು ನಾವು ನೆನಪಿಸಿ ಕೊಳ್ಳಬೇಕಾಗುತ್ತದೆ. ಅತ್ಯಂತ ಕಡು ಬಡವರು ಒಂದು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ೭೪ ಕುಟುಂಬಗಳು ಅಲಿ ವಾಸಿಸುತತಿದ್ದವು. ಆದರೆ ಜಿಲ್ಲಾಡಳಿತದವರು ಅವರು ಕೂಲಿ ಕೆಲಸಕ್ಕೆ ಹೋದಂತಹ ಸಂದರ್ಭದಲ್ಲಿ ಬುಲ್ಡೋಜರ್ ತೆಗೆದುಕೊಂಡು ಹೋಗಿ ಮನೆಗಳನ್ನು ಹೊಡೆದು ಅವರನ್ನು ಬೀದಿಪಾಲು ಮಾಡಿದಂತಹ ಘಟನೆಗೆ ಪ್ರತಿಭಟನೆ ನಡೆದಿರುವುದನ್ನು ನಾವು ನೋಡಿದದೇವೆ. ಜಿಲ್ಲಾಡಳಿತ ಇಂತಹ ಬಡ ವರ್ಗದ ಜನತೆಯ ರಕ್ಷಣೆ ಮಾಡುವುದರಲ್ಲಿ ಸಂಪೂರ್ಣ ವಿಫಲವಾಗಿದೆ. ಉದಾಹರಣೆಗೆ ನಾಗಾರ್ಜುನ. ಮಾನ್ಯ ಸಚಿವರು ಇಲ್ಲಿ ಇಲ್ಲ. ಹಿಂದೆ ಅವರು ಅಧಿಕಾರ ದಲ್ಲಿ ಇಲ್ಲದಂತಹ ಸಂದರ್ಭದಲ್ಲಿ ನಾಗಾರ್ಜುನ ಬಗ್ಗೆ ಆಗಿರತಕ್ಕಂತಹ

ಹೋರಾಟ ಏನಿದೆ, ಇವತ್ತು ಅವರ ಕೈಯಲ್ಲಿ ಅಧಿಕಾರ ಇರುವಾಗ ನಾಗಾರ್ಜುನ ಬಗ್ಗೆ ಇವರಿಗಿರುವ ಕಾಳಜಿ ಎಲ್ಲಿ ಹೋಗಿದೆ ಎಂದು ನಾನು ಕೇಳಬೇಕಾಗುತ್ತದೆ. ಆ ಒಂದು ನಾಗಾರ್ಜುನದ ಬಗ್ಗೆ ದಿಟ್ಟವಾದ ನಿಲುವು ನಮ್ಮ ಜಿಲ್ಲಯೆ ಜನರಿಗೆ ಅದು ಬೇಡ ಎನ್ನುವ ಭಾವನೆ ಇದೆ. ಆ ಮೀನುಗಾರರಿಗೆ ನಾಗಾರ್ಜುನ ಬೇಡ ಎನ್ನುವ ಪ್ರತಿಭಟನೆ ಕೂಡ ನಡೆದಿದೆ. ಅದರ ಬಗ್ಗೆ ಸಹ ಮಾನ್ಯ ಅರ್ಥ ಮಂತ್ರಿಗಳು ಮತ್ತು ಮಾನ್ಯ ಮುಖ್ಯ ಮಂತ್ರಿಗಳು ಒಂದು ಹೆಚ್ಚಿನ ಗಮನವನ್ನು ಕೊಡಬೇಕು. ಪಡುಬಿದ್ರಿಯಲ್ಲಿ ಆಗಿರತಕ್ಕ ಘಟನೆಗೆ ಒಂದು ಪರ್ಯಾಯ ವ್ಯವಸ್ಥೆಯನ್ನು ಅವರಿಗೆ ಸೈಟನ್ನು ಮಾಡಿಕೊಡುವ ಕೆಲಸಕ್ಕೆ ಸರ್ಕಾರ ಮುಂಧೆ ಬರಬೇಕೆನ್ನುವ ಮಾತನ್ನು ಹೇಳುತ್ತೆನೆ. ಬಹುಶಃ ಇವತ್ತು ಅಸಂಘಟಿತ ಕಾರ್ಮಿಕರ ಬಗ್ಗೆ ಕೆಲವು ಜೋಡಣೆಯನ್ನು ಮಾಡಿದರು. ನನ್ನ ತಾಲ್ಲೂಕಿನಲ್ಲಿ ಬಹುಶಃ ಈ ನದಿಯಲ್ಲಿ ಹೋಗಿ ಚಿಪ್ ಎತ್ತುವಂಥ ಕಾರ್ಮಿಕರು, ಅದೇ ರೀತಿ ಮರಳನ್ನು ಎತ್ತಕ್ಕೆ ಕಾರ್ಮಿಕರು, ಅದೇ ರೀತಿ ಮೀನುಗಾರಿಕೆ ಕಾರ್ಮಿಕರು ಇದ್ದಾರೆ. ಗಂಗೊಳ್ಳಿ ಆ ಭಾಗದಲ್ಲಿ ಅತಿ ಹೆಚ್ಚು ಮೀನುಗಾರರು ಇದ್ದಾರೆ. ಅವರು ಸಹ ಈ ಅಸಂಘಟಿತ ಕಾರ್ಮಿಕರ ಲಿಸ್ಟ್ನಲ್ಲಿ ಸೇರಿಸಿ ಅವರಿಗೂ ಸಹ ನ್ಯಾಯವನ್ನು ಒದಗಿಸಿಕೊಡಬೇಕೆನ್ನುವ ಮಾತನ್ನು ಹೇಳುತ್ತೇನೆ. ಇನ್ನು ನಮ್ಮ ಮೀನುಗಾರಿಕೆ ಮನೆ, ಬಹುಶಃ ನಾನು ವಿಶೇಷವಾಗಿ, ಮಾನ್ಯ ಆರ್ಥಿಕ ಸಚಿವರನ್ನು ಮಾತು ಮಾನ್ಯ ಮೀನುಗಾರಿಕಾ ಸಚಿವರನ್ನು ಈ ಸಂದರ್ಭದಲ್ಲಿ ಪ್ರ್ನೆಯನ್ನು ಮಾಡುತ್ತೇನೆ. ಬಹುಶಃ ಮೀನುಗಾರರಿಗೆ ಮನೆ ಹಂಚತಕ್ಕ ಕೆಲಸ, ನಾನು ಜಯಪ್ರಕಾಶ್ ಹೆಗ್ಡೆಯವರು ಮೀನುಗಾರಿಲಾ ಸಚಿವರಾಗಿದ್ದಾಗ ನೋಡಿದ್ದೇನೆ. ರಮಾನಾಥ ರೈ ಅವರು ಮೀನುಗಾರಿಕಾ ಸಚಿವರಾಗಿದ್ದಾಗ ನೋಡಿದ್ದೇನೆ. ಆದರೆ ಆ ಮೀನುಗಾರರ ಮನೆ ಹಂಚತಕ್ಕ ಸಂದರ್ಭದಲ್ಲಿ ಇವತ್ತು ತಾರತಮ್ಯವಾಗುತ್ತಿದೆ. ಇಡೀ ಜಿಲ್ಲೆಯಲ್ಲಿ ದೊಡ್ಡ ಕ್ಷೇತ್ರ ಮೀನುಗಾರರಿಗೆ ಇರುವ ಕರಾವಳಿ ಭಾಗದ ಕ್ಷೇತ್ರ. ಅದು ಬೈಂದೂರು ಕ್ಷೇತ್ರ ನನಗೆ ೪೦ ಮನೆಗಳನ್ನು ಕೊಟ್ಟಿದ್ದರೆ ಪಕ್ಕದ ಕ್ಷೇತ್ರಕ್ಕೆ ನೂರು ಮನೆಗಳನ್ನು ಕೊಡುವ ತಾರತಮ್ಯವನ್ನು ಮಾಡಿದ್ದಾರೆ. ಇದನ್ನು ನಾನು ಜೆ.ಹೆಚ್.ಪಟೇಲರ ಕಾಲದಲ್ಲಿ ನೋಡಿದ್ದೇನೆ. ಬಹುಶಃ ಈ ರೀತಿ ತಾರತಮ್ಯ

ಎಂದೂ ನಡೆದಿರಲಿಲ್ಲ. ಮುಖ್ಯಮಂತ್ರಿ ಸೆಕ್ ಯೋಜನೆಯು ಮಾನ್ಯ ಚೆಲುವರಾಯಸ್ವಾಮಿಯವರು ಆ ಖಾತೆಯ ಸಚಿವರಾಗಿದ್ದಾಗ ಈ ಸದನದಲ್ಲಿ ಹೇಳಿಕೆ ಕೊಟ್ಟರು. ನಾನು ಕಾಂಗ್ರೆಸ್ ಸದಸ್ಯನಾದ್ದರಿಂದ ನನಗೆ ಹಣವನ್ನು ಕೊಡಲಿಲ್ಲ. ಅದನ್ನು ಪ್ರತಿಭಟಿಸಿದಾಗ ಮುಂದೆ ಕೊಡುವ ಸಂದರ್ಭದಲ್ಲಿ ಕೊಡುತ್ತೇವೆಂದು ಈ ಸದನದಲ್ಲಿ ಆಶ್ವಾಸನೆಯನ್ನು ಕೊಟ್ಟರು. ಆದರೂ ಕೊಡಲಿಲ್ಲ. ಮಾನ್ಯ ಉದಾಸಿಯವರು ಸಚಿವರಾದರು. ಈ ಜಿಲ್ಲೆಗೆ ನಾನು ಕಾಂಗ್ರೆಸ್ ಸದಸ್ಯನಾದಾಗಲೂ ಸಹ ನನಗೆ ಅನ್ಯಾಯವಾಗಿದೆ. ಇಂಥ ತಾರತಮ್ಯದ ಸರ್ಕಾರ ಬಂದಾಗ, ಶಾಸಕರಿಗೆ ತಾರಮ್ಯವನ್ನು ಮಾಡಿದರೆ, ಯಾವ ಪ್ರಮಾಣ ವಚನವನ್ನು ಸ್ವೀಕಾರ ಮಾಡುವಾಗ ಸಚಿವರೇನು ಘೋಷಣೆಯನ್ನು ಮಾಡುತ್ತಾರೆ. ಅದಕ್ಕೆ ಚೆತ್ ಮಾಡುವ ಕೆಲಸವನ್ನು ಸಚಿವರು ಮಾಡುತ್ತಾರೆ. ಇದು ತಪ್ಪು. ಯಾವ ಪ್ರಮಾಣ ವಚನ ಸಂದರ್ಭದಲ್ಲಿ ಯಾವುದನ್ನು ಘೋಷಣೆ ಮಾಡಿ ಹೋಗಿ ಹೇಳುತ್ತಾರೊ ಅದಕ್ಕೆ ಸರಿಯಾದ ರೀತಿಯಲ್ಲಿ ಸಚರಿವುರ ನಡೆದುಕೊಳ್ಳಬೇಕಾಗುತ್ತದೆ. ಇಲಲ್ದಿದ್ದರೆ ಆ ಪ್ರಮಾಣ ವಚನಕ್ಕೆ ಇರುವ ಒಂದು ಬೆಲೆ ಕಳೆದುಕೊಂಡ ಹಾಗೆ ಆಗುತ್ತದೆ. ಆ ಕೆಲಸ ಈ ಸರ್ಕಾರದಿಂದ ಆಗಿದೆ. ಇದನ್ನು ಸರಿ ಮಾಡುವ ಕೆಲಸವಾಗಬೇಕು. ಈ ವ್ಯವಸ್ಥೆ ನಿರಂತರವಾಗಿ ನನ್ನ ಮೇಲೆ ಸವಾರಿ ಮಾಡುವ ಕೆಲಸ ಇವತ್ತು ಆಗುತ್ತಿದೆ. ಅದರ ಬಗ್ಗೆ ಹೆಚ್ಚು ಒತ್ತನ್ನು ಕೊಡಬೇಕೆನ್ನುವ ಮಾತನ್ನು ಹೇಳಲು ಇಚ್ಚೆಪಡೆಉತ್ತೇನೆ. ಬಹುಶಃ ಈ ಬಜೆಟ್ ಬಗ್ಗೆ ಇದು ಒಳ್ಳೆಯ ಬಜೆಟ್ ಎಂದು ಕೇಳಿದ್ದೇವೆ. ಮಾನ್ಯ ಯಡಿಯೂರಪ್ಪರವರು ಸಚಿವರಾಗಿದ್ದಾರೆ. ನಾನೊಂದು ಪ್ರಶ್ನೆಯನ್ನು ಅವರಿಗೆ ಕೇಳುತತೇನೆ. ಇಂಧನ ಇಲಾಖೆ, ಇದು ಇಡೀ ಇವತ್ತು ಕೈಗಾರಿಕೆ ಮತ್ತು ಕಾರ್ಮಿಕರ ಭವಿಷ್ಯವನ್ನು ರೂಪಿಸುವ ಒಂದು ಇಲಾಖೆಗೆ ಕೊಟ್ಟಿರುವ ಅನುದಾನಷ್ಟು ಮತ್ತು ಮಾನ್ಯ ಸಿದ್ದರಾಮಯ್ಯರವರು ಕೊಟ್ಟಿದ್ದ ಅನುದಾನಕ್ಕೂ ತುಲನೆಯನ್ನು ಮಾಡಬೆಕಾಗತ್ತದೆ. ಇದನ್ನು ನಾನು ಹೇಳಲು ಇಚ್ಚೆಪಡುತ್ತೇನೆ. ಕಾರಣವೇನೆಂದರೆ ಇವರು ೧೧.೮೨% ಕೊಟ್ಟಿದ್ದು. ಆ ಕಾಲದಲ್ಲಿ ಮಾನ್ಯ ಸಿದ್ದರಾಮಯ್ಯರವರು ಇಂಧನ ಇಲಾಖೆಗೆ ಕೊಟ್ಟಿದ್ದು ೧೩.೬೮%. ಇದನ್ನು ತುಲನೆ ಮಾಡಬೇಕು. ಆಯವ್ಯಯದಲಲಿ ಯಾವ ಇಲಾಖೆಗೆ ಹೆಚ್ಚು ಒತ್ತನ್ನು

ಕೊಡಬೇಕು? ಬಹುಶಃ ಪ್ರಚರದ ದೃಷ್ಟಿಯಿಂದ ಮುಂದೆ ಬರುವ ಚುನಾವಣೆ ದೃಷ್ಠಿಯಿಂದ ಇಂಥ ಆಯವ್ಯಯಗಳು ಮಂಡನೆಯಾಗಿದೆ. ಇದು ಆಗಬಾರದು. ಒಂದು ರಾಜ್ಯದ ಆಯವ್ಯಯ ಆಗತಕ್ಕ ಸಂದರ್ಭದಲ್ಲಿ ರಾಜ್ಯದ ಹಿತದೃಷ್ಟಿ, ಆರ್ಥಿಕ ಶಿಸ್ತನ್ನು ಕಾಪಾಡುವ ಕಡೆಗೆ ಹೆಚ್ಚು ಒತ್ತನ್ನು ಕೊಡಬೆಕು. ಅದನ್ನು ಮಾಡಲಿಲ್ಲ. ಪ್ರಚಾರದ ದೃಷ್ಟಿಯಿಂದ ಈ ಆಯವ್ಯಯ ಆಗಿದೆ. ಮುಂದೆ ಬರುವ ಚುನಾವಣೆಯ ದೃಷ್ಟಯಿಂದ ಈ ಆಯವ್ಯಯ ಆಗಿದೆ. ನೀರಾವರಿ ಇಲಾಖೆಗೆ ಕೊಟ್ಟಿರುವ ಬಗ್ಗೆ ಹೇಳುತ್ತೇನೆ. ನೀರಾವರಿ ಇಲಾಖೆ ಎಂದರೆ ಇಡೀ ರಾಜ್ಯ ಮುಂದೆ ಬರುವ ಜನರಿಗೆ ನಾವು ಹೆಚ್ಚಿನ ಒತ್ತನ್ನು ಕೊಡಬೇಕಾದರೆ ನೀರಾವರಿ ಇಲಾಖೆಗೆ ನಾವು ಹೆಚ್ಚು ಒತ್ತನ್ನು ಕೊಡಬೇಕು. ೧೭.೬೯% ಕೊಟ್ಟಿದ್ದಿದ್ದರೆ ಮಾನ್ಯ ಸಿದ್ದರಾಮಯ್ಯರವರು ೨೯.೦೮% ಕೊಟ್ಟಿದ್ದಾರೆ. ರೂ. ೧೧೦೦ ಕೋಟಿ ಕಡಿಮೆ ಕೊಟ್ಟಿದ್ದಾರೆಂದು ಸಮ್ಮಿಶ್ರ ಸರ್ಕಾರದ ಸಚಿವರು ಹೇಳಿದ್ದಾರೆಂದರೆ ಇದು ಯಾವ ಆಯವ್ಯಯ? ಮಾನ್ಯ ಸಿದ್ದರಾಮಯ್ಯರವರು ಕೊಟ್ಟಿರುವ ಆಯವ್ಯಯ ಏನಿದೆ. ಅದು ರಾಜ್ಯದ ಮುಂದಿನ ದೂರದೃಷ್ಟಿ ಇಟ್ಟುಕೊಂಡು ಮಾಡಿರುವ ಆಯವ್ಯಯ ಅದು. ಆದ್ದರಿಂದ ಇದನ್ನು ಚುನಾವಣೆಯ ದೃಷ್ಟಿಯಿಂದ ಮಾಡಿರುವ ಆಯವ್ಯಯ. ಇದು ಪ್ರಚಾರಕ್ಕೋಸ್ಕರ ಮಾಡಿರುವುದು. ನಾಳೆ ಯಾವುದೇ ಒಂದು ಸಕಾರ ಬರಬೇಕಾದರೆ, ರಾಜ್ಯದ ಹಿತದೃಷ್ಟಿಯನ್ನು ಕಾಪಾಡಬೇಕಾಗುತ್ತದೆ. ಚುನಾವಣೆ ವ್ಯವಸ್ಥೆ ಬರುವುದು ರಜ್ಯದ ಹಿತದೃಷ್ಟಿ ಯಿಂದಲೇ, ಪ್ರಚಾರಕ್ಕೋಸ್ಕರ ನಾವು ಮಾಡುವುದು ಬೇರೆ, ಇಂಥನ ಇಲಾಖೆ, ನೀರಾವರಿ ಇಲಾಖೆಗಳಿಗೆ ಕೊಟ್ಟಿರುವ ಏನು ಅನುದಾನವಿದೆ, ಅದು ಕಡಿಮೆಯಾಗಿದೆ, ಅದನ್ನು ಹೆಚ್ಚು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಸಾಲದ ಬಗ್ಗೆಯೂ ನೀವು ತುಲನೆಯನ್ನು ಮಾಡಬೇಕು. ಬಹುಶಃ ಮಾನ್ಯ ಸಿದ್ದರಾಮಯ್ಯರವರು ಕೊಟ್ಟಿರುವ ಸಾಲವೆಷ್ಟು ? ಅವರು ಅದನ್ನು ತೀರಿಸಿದ್ದು ಎಷ್ಟು ? ಅವರು ಎಚ್ಚು ತೀರಿಸಿದ್ದಾರೆಂದು ಹೇಳುತ್ತೆನೆ. ಬಹುಶಃ ೧೨ ಪೈಸೆಯಷ್ಟು ಸಾಲ ತೀರಿಸಲಿಕ್ಕೆ ಮಾನ್ಯ ಅರ್ಥ ಸಚಿವರು ಈ ಬಾರಿ ಇಟ್ಟಿದ್ದರೆ ಮಾನ್ಯ ಸಿದ್ದರಾಮ್ಯಯರವರು ೧೪% ಸಾಲವನ್ನು ತೀರಿಸಲು ಹಣವನ್ನು ಇಟ್ಟಿದ್ದಾರೆ. ಇದರಲ್ಲಿ ಯಾರ ದೂರದೃಷ್ಟಿಯ ಹೆಚ್ಚು

ಎನ್ನುವುದನ್ನು ತಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಸಾಲ ಮುಕ್ತ ರಾಜ್ಯವನ್ನು ಘೋಷಣೆ ಮಾಡಬೇಕೆನ್ನುವ ಆಸೆ ನಮ್ಮ ಜನರದು. ಆದರೆ ನಾವು ಸಾಲವನ್ನು ಹೆಚ್ಚಿಗೆ ಎತ್ತಿ ಸಾಲವನ್ನು ತೀರಿಸುವ ಕೆಲಸವನ್ನು ಮಾಡಬೇಕಾದರೆ ಹೆಚ್ಚು ಹಣವನ್ನು ಬಿಡುಗಡೆ ಮಾಡುವ ಕೆಲಸವನ್ನು ಇವತ್ತು ಈ ಆಯವ್ಯಯದಲ್ಲಿ ಮಾಡಲಿಲ್ಲ. ನಮ್ಮ ರೈತರಿಗೆ ಹೆಚ್ಚಿಗೆ ಸಾಲವನ್ನು ಕೊಡುತ್ತೇವೆಂದು ಮೊದಲೇ ಪ್ರಚಾರವಾಗಿದೆ. ಆಯವ್ಯಯ ಮಂಡನೆಯಾಗುವುದಕ್ಕೆ ಮುಂಚಿತವಾಗಿಯೇ ಜನಸಾಮಾನ್ಯರು ಇದರ ಬಗ್ಗೆ ಚರ್ಚೆಯನ್ನು ಮಾಡುತ್ತಿದ್ದರು. ಮಾನ್ಯ ಬಂಗಾರಪ್ಪನವರು ಹಿಂದೆ ಮುಖ್ಯಮಂತ್ರಿಗಳಾಗಿದ್ದಾಗ ಆಯವ್ಯಯ ಮಂಡನೆಯಾಗುವುದಕ್ಕೆ ೧೦ ನಿಮಿಷ ಮುಂಚೆ ಈ ಬುಕ್ ಬೇರೆಯವರ ಕೈಗೆ ಸೇರಿದಾಗ ಅದರ ಬಗ್ಗೆ ದೊಡ್ಡ ಗಲಾಟೆಯಾಯಿತು. ಆಯವ್ಯಯದ ಒಂದು ಶಿಸ್ತನ್ನು ಇವರು ಮಾಡಲು ಆಗಿಲಿಲ್ಲ. ದು ಮೊದಲೇ ಲೀಕ್ ಆಗಿದೆ. ಆದ್ದರಿಂದ ಇಂಥ ಆಯವ್ಯಯ ಮಂಡನೆಯಾಗುವುದಕ್ಕೆ ಮುಂಚಿತವಾಗಿ ಇದನ್ನು secret ಆಗಿ ಚರ್ಚೆ ಮಾಡಿ ಇದರ ಬಗ್ಗೆ ಹೆಚ್ಚು ಚಿಂತನೆಯನ್ನು ಮಾಡಿದರೆ ಮಾತ್ರ ಆಯವ್ಯಯದ ಗೌರವವನ್ನು ಕಾಪಾಡಿದಂತಾಗುತ್ತದೆಂದು ಹೇಳುತ್ತೇನೆ. ನಮ್ಮ ಜಿಲ್ಲೆ ಪ್ರವಾಸೋದ್ಯಮ ಜಿಲ್ಲೆ ಎಂದು ಘೋಷಣೆ ಮಾಡಿದರು. ಅದರಲ್ಲೂ ಮರವಂತೆ ಬೀಚ್ ಎನ್ನುವುದು ನನ್ನ ಕ್ಷೇತ್ರದ ಒಂದು ಕೇಂದ್ರ ಸ್ಥಾನ. ಅಲ್ಲಿ Philips Company ಯಿಂದ ಆಯಿತು. light house ಸುನಾಮಿ ಬಂತು. ಸುನಾಮಿ ಬಂದು ಎಷ್ಟು ತಿಂಗಲಾಯಿತು ಹೇಳಿ ಆದರೆ ಈ ಪ್ರವಾಸೋದ್ಯಮ ಇಲಾಖೆ ಇಷ್ಟರ ತನಕ ಲೈಟ್ ಅನ್ನು ಹಾಕುವ ಬಗ್ಗೆ ಇನ್ನು ಆ ಬೀಚ್ ಕಡೆಗೆ ಹೋಗಿಲ್ಲ. ಈ ಪ್ರವಾಸೋದ್ಯಮ ಇಲಾಖೆ ಏನು ಮಾಡುತ್ತಿದೆ ? ಇದರ ಬಗ್ಗೆ ತುಲನೆ ಮಡಿ, ಚರ್ಚೆ ಮಾಡಿ ಕೊಲ್ಲೂರು ರಾಜ್ಯದಲ್ಲಿ ರಾಷ್ಟ್ರದಲ್ಲಿ ಒಂದು ಕೇಂದ್ರ ಸ್ಥಾನ. ಈ ಸರ್ಕಾರದ ಬಂದ ಮೇಲೆ ಅಲ್ಲಿ ಇಷ್ಟರ ತನಕ ಒಂದು ಸಭೆಯನ್ನು ಮಾಡಲು ಆಗಲಿಲ್ಲ. ಇವರ ಆಡಳಿತ ವ್ಯವಸ್ಥೆ ಬಂದು ನಾಲ್ಕು ಬಾರಿ ಇಷ್ಟರ ತನಕ ಒಂದು ಸಭೆಯನ್ನು ಮಾಡಲು ಆಗಲಿಲ್ಲ. ಇವರ ಆಡಳಿತ ವ್ಯವಸ್ಥೆ ಬಂದು ನಾಲ್ಕು ಬಾರಿ ಇಷ್ಟರ ತನಕ ಹೇಳಿದ್ದೇನೆ. ಯಕ್ಷಗಾನದ ಬಗ್ಗೆ ಒಂದು

ಅಕಾದೆಮಿಯನ್ನು ಮಾಡುತ್ತೇವೆಂದು ಹೇಳಿದ್ದರು. ನನ್ನ ಕ್ಷೇತ್ರದಲ್ಲಿ ಗೊಂಬೆ ಯಾಟದ ಒಂದು ಸಂಸ್ಥೆ ಇದೆ. ಅದು ಉಪ್ಪಿನಕುದುರೆಯಲ್ಲಿ, ಬಹಳಷ್ಟು ವರ್ಷದಿಂದ ಇಡೀ ರಾಜ್ಯದಲ್ಲಿ ಅಲ್ಲ, ರಾಷ್ತ್ರ ಅಲ್ಲ, ಹೊರ ರಾಷ್ಟ್ರಗಳಿಗೆ ಹೋಗುವಂಥ ಒಂದು ಗೊಂಬೆಯಾಟದ ಸಂಸ್ಥೆ. ಕನ್ನಡ ಸಂಸ್ಕೃತಿ ಇಲಾಖೆಗೆ ಇಂಥ ಗೊಂಬೆಯಾಟದ ಬಗ್ಗೆ ಕಾಳಜಿಯೇ ಇಲ್ಲ. ಅವರಿಗೆ ಕಾಳಜಿ ಇರಬೇಕಾಗಿತ್ತಿ. ಅದು ದೇವಣ್ಣ ಪದ್ಮನಾಭ ಕಾಮತ್ ಎನ್ನುವವರು ಹಿಂದೆ ಮಾಡಿದ ಒಂದು ಗೊಂಬೆಯಾಟ. ಅವರ ಮಗನು ಈಗ ಗಣೇಶ್ ಗೊಂಬೆಯಾಟ ನಾಟಕ ಮಂಡಳಿ ಎಂದು ಮಾಡಿಕೊಂಡು ಬಂದರು. ಆ ಒಂದು ಕಲೆ ನಶಿಸಬಾರದು ಎನ್ನುವ ದೃಷ್ಟಿಯಿಂದ ಅದನ್ನು ಆತನು ಉಳಿಸಿಕೊಂಡು ಬಂದ, Infosys ಎನ್ನವ ಸಂಸ್ಥೆ ಅದನ್ನು ನೋಡಿ ಶ್ರೀಮತಿ ಸುಧಾ ಮೂರ್ತಿಯವರು ೪೦೭ ಗಾಡಿಯನ್ನು ಕೊಟ್ಟು ಇಡೀ ರಾಜ್ಯಾದ್ಯಂತ ಈ ಗೊಂಬೆಯಾಟವನ್ನು ನೀವು ಆಡಿಸಬೇಕು; ಈ ಕಲೆಯನ್ನು ಉಳಿಸಬೇಕೆನ್ನುವ ದೃಷ್ಟಿಇಂದ ಒಂದು ಗಾಡಿಯನ್ನು ಕೊಟ್ಟರೆ, ಬಹುಶಃ ಈ ಸಂಸ್ಕೃತಿ ಇಲಾಖೆ ಅವರಿಗೆ ಎಷ್ಟು ಕಟ್ಟಲು ಬರುತ್ತದೆ. ರೂ. ೫೭,೦೧೩ ಅದನ್ನು ಕಟ್ಟಲು ಅರು ಎಲ್ಲೆಲ್ಲಿಗೋ ಹೋಗಿ ಬೇಡಬೇಕಾಗುತ್ತದೆ. ಇಡೀ ಪತ್ರಿಕಾ ರಂಗವೇ ಅದರ ಬಗ್ಗೆ ಟೀಕೆಯನ್ನು ಮಾಡಿ ಬರೆದರು. ನನ್ನ ಹತ್ತಿರ ಅದರ ಫೈಲ್ ಇದೆ, ಅದನ್ನು ಕಳುಹಿಸಿ ಕೊಡುತ್ತೇನೆ. ಶ್ರೀಮತಿ ಸುಧಾ ಮೂರ್ತಿಯವರು ಕಲೆಗೆ ಕೊಟ್ಟಿರುವ ಪ್ರೋತ್ಸಾಹವನ್ನು ಕನ್ನಡ ಸಂಸ್ಕೃತಿ ಇಲಾಖೆಯವರಿಗೆ ಅದಕ್ಕೆ ಸಹಾಯ ಧನವನ್ನು ಮಾಡುವ ಕೆಲಸಕ್ಕೆ ಕೈ ಹಾಕಿ ಅದನ್ನು ಆರ್ಥಿಕ ಇಲಾಖೆಯಿಂದ ಮಾಡಲು ಆಗುತತಿರಲಿಲ್ಲವೇ ? ಇಲಖೆ ಬಗ್ಗೆ ಬರೆದಾಗ ಅದರ ಬಗ್ಗೆ ಸ್ಪಂದಿಸಲು ಆಗಲಿಲ್ಲವೇ ? ಬಹುಶಃ ಇಂಥ ಕಲೆಗಳನ್ನು ಉಳಿಸುವ ಕೆಲಸಕ್ಕೆ ಸರ್ಕಾರ ಮುಂದೆ ಬರೆದಿದ್ದರೆ ನಾಳೆ ಇಂಥ ಅನೇಕ ಜಾನಪದ ಕಲೆ ನಶಿಸುತ್ತದೆ. ಅದರ ಬಗ್ಗೆ ಕನ್ನಡ ಸಂಸ್ಕೃತಿ ಇಲಾಖೆ ಹೆಚ್ಚು ಸ್ಪಂದಿಸ ಬೇಕೆನ್ನುವ ಮಾತನ್ನು ಹೇಳಿ. ಇನ್ನು ಹೇಳುವುದಕ್ಕೆ ನಮ್ಮ ಜಿಲ್ಲೆಯ ಸಮಸ್ಯೆಗಳಿದ್ದವು. ವಿಶೇಷವಾಗಿ ಈ ಒಂದು ಆಯವ್ಯಯದಲ್ಲಿ ಬಹಳಷ್ಟು ಪ್ರಚಾರಕ್ಕೋಸಕ್ರ ಕೆಲವು ಕಾರ್ಯಕ್ರಮಗಳು ಜೋಡಣೆಯಾಗಿದೆ.

ಜನಸಾಮಾನ್ಯರ ಬಗ್ಗೆ ಸರ್ಕಾರ ಹೆಚ್ಚು ಚಿಂತನೆಯನ್ನು ಮಾಡಿಲ್ಲ, ಅದರಲ್ಲೂ ವಿಶೇಷವಾಗಿ ಇಂಥನ ಇಲಾಖೆಯ ಮುಂದಿನ ಇಂಧನ ಉತ್ಪತ್ತಿಯ ಬಗ್ಗೆ ಯಾವುದೇ ಯೋಜನೆಗೆ ಬಗ್ಗೆ ಸ್ಪಂದಿಸಲಿಲ್ಲ, ಕಾರ್ಯಕ್ರಮವನ್ನು ಜೋಡಣೆ ಮಾಡಿಲಿಲ್ಲ ಎನ್ನುವುದನ್ನು ಈ ಸಂದರ್ಭದಲ್ಲಿ ಹೇಳಿ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ. ಜೈಹಿಂದ್.

ಶ್ರೀಮತಿ ಶಕುಂತಲಾ ಶೆಟ್ಟಿ (ಪುತ್ತೂರು) : ಸನ್ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ್ ಮಾಢಿಕೊಟ್ಟಿದ್ದಕ್ಕಾಗಿ ಮೊದಲನೆಯದಾಗಿ ತಮಗೆ ಧನ್ಯವಾದಗಳು. ಮಾನ್ಯ ಯಡಿಯೂರಪ್ಪನವರು ಈ ಬಾರಿ ಕರ್ನಾಟಕಕ್ಕೆ ಅತ್ಯುತ್ತಮವಾದ ಬಜೆಟ್ ಕೊಟ್ಟಿದ್ದಕ್ಕಾಗಿ ನಾನು ಅವರನ್ನು ಮಹಿಳಾ ಸಮುದಾಯದ ಪರವಾಗಿ ಅಭಿನಂದಿಸುತ್ತೇನೆ. ಪ್ರಥಮವಾಗಿ, ರೈತರಿಗೆ ೨೫,೦೦೦ ರೂಪಾಯಿಗಳ ಸಾಲ ಮನ್ನಾ ಬಗ್ಗೆ ಮಾತನಾಡಲೂ ಬಯಸುತ್ತೇನೆ. ಇದು ಬಹುಶಃ ಇತಿಹಾಸವೆಂದು ನಾವೆಲ್ಲರೂ ಒಪ್ಪಿಕೊಳ್ಳಬೇಕಾದಂಥ ವಿಚಾರವಾಗಿದೆ. ಎಲ್ಲಾ ರೈತರು ಒಂದು ತರಹ ನೆಮ್ಮದಿ, ನಿಟ್ಟುಸಿರು ಬಿಡುವಂತಹ ಸಮಯ ಬಂದಿದೆ. ಜೊತೆಗೆ, ಮೀನುಗಾರರು, ನೇಕಾರರು, ಎಲ್ಲರಿಗೂ ಇದರಿಂದ ಬಹಳ ಸಹಾಯವಾಗಿದೆ. ಆದರೆ ಬಹಳಷ್ಟು ಜನರಿಗೆ ಇನ್ನೂ ಹೆಚ್ಚಿಗೆ ಅವಕಾಶ ಸಿಗದಿರುವುದು ಸಹಜ. ಆದರೆ ಸರ್ಕಾರಕ್ಕೆ ಎಷ್ಟು ಸಾಧ್ಯವೋ ಅಷ್ಟು ಮಾತ್ರ ಮಾಡುವಂತಹ ವ್ಯವಸ್ಥೆ ಇರುವುದರಿಂದ ಸಾಧ್ಯವಾದಲ್ಲಿ ಒಂದು ಲಕ್ಷದ ರೂಪಾಯಿಗಳವರೆಗೆ ಏರಿಸಿದರೆ ಒಳ್ಳೆಯದೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಸಹಕಾರಿ ಸಂಘಗಳಲ್ಲಿ ಸ್ವಲ್ಪ ಗೊಂದಲುಗಳು ಪ್ರಾರಂಭವಾಗಿದೆ. ೨೫,೦೦೦ ರೂಪಾಯಿಗಳವೆಗೆ ಸಾಲ ಮನ್ನಾ ಮತ್ತು ೩೦ನೇ ತಾರೀಖಿನವೆಗೆ ಕಟ್ಟಿರುವುದಕ್ಕೆ, ವಾಯಿದೆಗೆ ಸರಿಆಗಿ ಕಟ್ಟಿದಂತಹ ಸಾಲಗಳಿಗೆ ಮಾನ್ಯ ಸಚಿವರು ಮನ್ನಾ ಮಾಡಿದರೆ ಬಹಳ ಉತ್ತಮವೆಂದು ನನ್ನ ಅನಿಸಿಕೆ. ಏಕೆಂದರೆ, ಕೆಲವು ಸಾಲಗಳು ಏಪ್ರಿಲ್ ಕೊನೆಗೆ, ಮೇ ಒನೆಗೆ, ನವೆಂಬರ್ ಕೊನೆಗೆ, ಹೀಗೆ ಬರುವ ಕಾರಣ ವಾಯಿದೆಗೆ ಸರಿಯಾಗಿ ಕಟ್ಟಿದವರ ಸಾಲ ಮತ್ತು ಬಡ್ಡಿಯನ್ನು ಮನ್ನಾ ಮಾಡುವಂತಹ ವ್ಯವಸ್ಥೆ ಮಾಡುವುದು. ಅಗತ್ಯ ಮತ್ತು ಒಳ್ಳೆಯದೆಂದು ನನ್ನ ಅನಿಸಿಕೆ. ಇನ್ನು

ನಾವು ಹೆಮ್ಮೆ ಪಡುವಂತಹ ವಿಚಾರವೆಂದರೆ, ಎಲ್ಲಾ ಲಾರಿಗಳ ಹಿಂದೆಯೂ ಕೊಡು ತಾಯಿ ವರವ ಕುಡುಕನಲ್ಲದ ಗಂಡನ " ಎಂದು ಬರೆದಿರುತ್ತದೆ. ಸಾರಾಯಿ ನಿಷೇಧ ಒಂದು ತರಹ ಬಡವರ ಬಾಳಿಗೆ ಕುಡುಕನಲ್ಲದ ವರವನ್ನು ಸರ್ಕಾರ ಕೊಟ್ಟಂತಾಗಿದೆ. ಏಕೆಂದರೆ, ಕಳ್ಳಭಟ್ಟಿಗೆ ಅವಕಾಶ ವಾಗದಂತೆ ತಡೆಹಿಡಿಯುವ ಒಂದು ಜವಾಬ್ದಾರಿ ಸರ್ಕಾರದ ಮೇಲಿದೆ. ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಏಕೆಂದರೆ, ಕಳ್ಳಭಟ್ಟಿ ಮಾಡಿದುವವರು ಬಹಳಷ್ಟು ದೊಡ್ಡ ಜನರು, ಅದನ್ನು ತಡೆಹಿಡಿಯಬೇಕು ಹಾಗೂ ಸಾರಾಯಿ ಮುಕ್ತ ರಾಜ್ಯವಾಗಬೇಕು. ಇದು ಬಹಳಷ್ಟು ಮಹಿಳೆಯರ ಕಣ್ಣೀರೊರೆಸಿದೆ. ಇದರಿಂದಾಗಿ ಇವತ್ತು ಬಹಳಷ್ಟು ಹೆಣ್ಣುಮಕ್ಕಳು ಸಂತೋಷದಲ್ಲಿ ಕುಣಿಯುವಂತಹ ಸ್ಥಿತಿಯಾಗಿದೆ. ಕುಡಿದುಕೊಂಡು ಬಂದು ಹೆಂಡತಿ ಮಕ್ಕಳನ್ನು ಹೊಡೆದು, ಬಡಿದು ಮನೆ ಮಠಕ್ಕೆ ಬೆಂಕಿ ಕೊಟ್ಟು ಸುಡುವಂತಹ ಗಂಡಸರು ಈ ಪುರುಷ ಪ್ರಧಾನ ಸಮಾಜದಲ್ಲಿರುವಂತಹ ಸಂದರ್ಭದಲ್ಲಿ ನಾವೆಲ್ಲರೂ ಸಾಮಾನ್ಯ ಮಹಿಳೆಯರ ಪರವಾಗಿ ಸರ್ಕಾರವನ್ನು ಅಭಿನಂದಿಸುತ್ತಿದ್ದೇವೆ. ಲಾಟರಿ ನಿಷೇಧ. ಲಾಟರಿಯಲ್ಲಿ ಹುಡುಗರು, ಯುವಕರು, ಮುದುಕರು ಮತ್ತು ಪ್ರಾಯದವರೆಲ್ಲರೂ ಬೆಳಿಗ್ಗೆ ಹೋಗಿ ಲಾಟರಿ ಅಂಗಡಿ ಬಾಗಿಲಲ್ಲಿ ನಿಂತುಕೊಂಡು ಹೆಂಡತಿ ದುಡಿದು ತಂದ ಅಕ್ಕಿಯನ್ನು ಮಾರಾಟ ಮಾಡಿ ಲಾಟರಿ ತೆಗೆದುಕೊಳ್ಳುವ ಬಹಳಷ್ಟು ಜನರು ಇರುವಾಗಿ ಇವತ್ತು ಲಾಟರಿ ನಿಷೇಧ ಬಹಳಷ್ಟು ಉತ್ತಮ ಕಾರ್ಯಕ್ರಮವಾಗಿದೆ. ಅನಂತರ, ಸ್ತ್ರೀಶಕ್ತಿ ಸಂಘಗಳಿಗೆ ಶೇಕಡ ೪ ರ ಬಡ್ಡಿ ದರದಲ್ಲಿ ಲೋನ್ ಕೊಡುವಂತಹ ವ್ಯವಸ್ಥೆ ಇವತ್ತು ಇಡೀ ರಾಜ್ಯದಲ್ಲಿ ಹೆಣ್ಣುಮಕ್ಕಳ ಆಂತರಿಕ ಸಾಲ ಕೊಡುವಂಥಾದ್ದೇ ೧,೨೨೨.೦೦ ಕೋಟಿ ರೂಪಾಯಿಗಳು ಹಾಗೂ ಬ್ಯಾಂಕ್ ನಿಂದ ೪೮೬ಕೋಟಿ ರೂಪಾಯಿಗಳಷ್ಟು ಮಾತ್ರ ಸ್ತ್ರೀಶಕ್ತಿ ಸಂಘಗಳವರು ಸಾಲ ಪಡೆದಿದ್ದಾರೆ. ಅದರ ಮೂರು ಪಟ್ಟು, ಸಾಧಾರಣ ೪ ಲಕ್ಷಕ್ಕೂ ಹೆಚ್ಚು ನಮ್ಮ ರಾಜ್ಯದಲ್ಲಿ ಸ್ವಸಹಾಯ ಸಂಘಗಳಿವೆ. ಅವರಿಗೂ ಇದು ಅನ್ವಯವಾಗಿದೆ. ಇದರ ಜೊತೆಗೆ ನಾನು ಹೇಳುತ್ತಿರುವುದೇ ನೆಂದರೆ, ನಾವೆಲ್ಲರೂ ಬೆಳಗಾವಿಗೆ ಅಧಿವೇಶನಕ್ಕೆ ಹೋಗಿದ್ದೆವು. ಶಾಸನಸಭೆಯ ಮಹಿಳಾ ಸದಸ್ಯರುಗಳಾದ ನಾವೆಲ್ಲರೂ ಕಿತ್ತೂರು ಚೆನ್ನಮ್ಮ

ಹುಟಟಿದ ಜಾಗವಾದ ಕಾಕತಿಗೆ ಹೋಗಿದ್ದೆವು. ಇವತ್ತು ಬಹಳಷ್ಟು ಬೇಸರವಾಗಿದ್ದು ಏನೆಂದರೆ, ನಾವು ಶಾಲೆಗೆ ಹೋಗುತ್ತಿದ್ದಾಗ, ನಾವೆಲ್ಲರೂ ಕಿತ್ತೂರು ಚೆನ್ನಮ್ಮ ಆಗಬೇಕೆಂದು ಹೇಳುತ್ತಿದ್ದರು. ಆದರೆ ಅಲ್ಲಿ ನಾವು ನೋಡಿದ್ದು ಏನೆಂದರೆ ಕಿತ್ತೂರು ಚೆನ್ನಮ್ಮ ಹುಟ್ಟಿದ ಜಾಗದಲ್ಲಿ ಕಲ್ಲು, ಮುಳ್ಳುಗಳು ಹಾಗೂ ಮಣ್ಣು ರಾಶಿ ತುಂಬಿತ್ತು. ಯಾರೋ ಅಲ್ಲೊಬ್ಬರು ನಾಗರಿಕರು, 'ಹೇಗನಿಸುತ್ತದೆ?' ಎಂದು ಕೇಳಿದರು. ನಾವೆಲ್ಲರೂ ಹೇಳಿದೆವು. " ಭಾರತದ ೬೦ ವರ್ಷಗಳ ಇತಿಹಾಸದಲ್ಲಿ ಹೆಣ್ಣಿಗೆ ಯಾವ ಸ್ಥಾನವಿದೆ ಎಂಬುದು ಇಲ್ಲಿ ಕಂಡುಬಂತು" ಎಂದು ನಾವು ಕಣ್ಣೀರು ಹಾಕಿ ಬಂದಿದ್ದೆವೆಲು. ಆದರೆ ಇವತ್ತು ನಮ್ಮ ಸರ್ಕಾರ ಅಲ್ಲಿ ಕಿತ್ತೂರು ಅಭಿವೃದ್ಧೀ ಪ್ರಾಧಿಕಾರ ಮಾಡಿ ಬಹುಶಃ ಚನ್ನಮ್ಮನಿಗೆ ಸ್ವಲ್ಪವಾದರೂ ಈ ರಾಜ್ಯಕ್ಕೆ ಆಕೆ ಮಾಡಿದಂಥ ಸೇವೆಗಾದರೂ ನಮ್ಮ ಸರ್ಕಾರ ಅಭಿನಂದನೆ ಅಥವಾ ನೆನಪಿನ ಕಾಣಿಕೆ ಕೊಟಿದೆಯೆಂದು ಅನಿಸುತ್ತಿದೆ. ನಾನು ಹೇಳುತ್ತಿರುವುದು ಕಿತ್ತೂರು ಅಭಿವೃದ್ಧಿಯಲ್ಲಿ ಕಾಕತಿಯನ್ನೂ ಸೇರಿಸಿಕೊಳ್ಳಬೇಕು. ಅದು ಆಕೆಗೆ ಜನ್ಮ ಕೊಟ್ಟ ಭೂಮಿ. ಅಲ್ಲಿಂದ ಆಕೆಗೆ ಹುಟ್ಟಿದ ಮನೆ ಹಾಗೂ ಸೇರಿದ ಮನೆ. ಎರಡೂ ಮುಖ್ಯವಾದ ಕಾರಣ, ಕಾಕತಿಯನ್ನು ಅಭಿವೃದ್ಧಿಗೊಳಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಪ್ರಾಯದವರಿಗೆ ಸಂಧ್ಯಾ ಸುರಕ್ಷಾ ಯೋಜನೆ - ಶ್ರಮಜೀವಿಗಳಾಗಿ ದುಡಿದು ೬೦ ವರ್ಷಗಳ ನಂತರ ದುಡಿಯುವುದಕ್ಕಾಗುತ್ತಿಲ್ಲವೆಂದು ಹೇಳಿದಾಗ, ೪೦೦ ರೂಪಾಯಿಗಳ ಮಾಸಿಕ ವೇತನ ಅಷ್ಟೇ ಅಲ್ಲ, ಹಿಂದೆ ನಮ್ಮ ಈ ಸರ್ಕಾರ ನಾವು ಶಾಸಕರಾಗಿ ಬರುತ್ತಿದ್ದಾಗ, ೧೦೦ ರೂಪಾಯಿಗಳು ಸಿಗುತ್ತಿದ್ದಂಥ, ವಿಧವೆಯರಿಗೆ ಕಳೆದ ಬಾರಿ ನಮ್ಮ ಸರ್ಕಾರ ೨೦೦ ರೂಪಾಯಿಗಳನ್ನು ಘೋಷಿಸಿತು. ಈ ಬಾರಿ ವಿಧವೆಯರಿಗೆ, ಅಂಗವಿಕಲರಿಗೆ ಮತ್ತು ವೃದ್ದಾಪ್ಯ ವೇತನಗಳನ್ನು ೪೦೦ ರೂಪಾಯಿಗಳಿಗೆ ಏರಿಸಿದ್ದಕ್ಕಾಗಿ ನಮ್ಮ ಸರ್ಕಾರಕ್ಕೆ ನಾವೆಲ್ಲರೂ ಅಭಿನಂದಿಸಬೇಕಗಿದೆ. ಅಸಂಘಟಿತ ಕಾರ್ಮಿಕರು ನಮ್ಮ ರಾಜ್ಯದಲ್ಲಿ ಬಹಳಷ್ಟು ಮಂದಿ ಚಿನ್ನ-ಬೆಳ್ಳಿ ಮಾಡುವ ಕೆಲಸಗಾರರು, ಬಡಗಿಗಳು ಕಮ್ಮಾರರು, ದರ್ಜಿಗಳು, ಆಟೋ ಚಾಲಕರು ಮುಂತಾದ ಅಸಂಘಟಿತ ಕಾರ್ಮಿಕರ ದಂಡೇ ಇದೆ. ಕೇರಳದಲ್ಲಿ ಕಾರ್ಮಿಕರಿಗಾಗಿ ಕಲ್ಯಾಣ

ಅಭಿವೃದ್ಧಿ ಮಂಡಳಿ ಮಾಡಿದ್ದರೆ. ಅದೇ ರೀತಿ ನಮ್ಮ ಸರ್ಕಾರ ಇವತ್ತು ಅವರೆಲ್ಲರಿಗೂ ಒಂದು ಒಳ್ಳೆಯ ವ್ಯವಸ್ಥೆ ಮಾಡಿದೆ. ಅದಕ್ಕಾಗಿ ನಾವು ಸರ್ಕಾರವನನು ಅಭಿನಂದಿಸುತ್ತಿದ್ದೇವೆ. ಮಾನ್ಯ ಗೋಪಾಲ ಪೂಜಾರಿ ಯವರು ಹೇಳಿದಂತೆ ಕೋಟಿ ಚನ್ನಯನವರು ನಮ್ಮ ದಕ್ಷಣ ಕನ್ನಡದ ವೀರಪುತ್ರರು, ಅದರಲ್ಲೂ ನನಗಂತೂ ಒಂದು ಹೆಮ್ಮೆ, ಅವರು ಹುಟ್ಟಿದ್ದು ಹಾಗೂ ಅಂತ್ಯವಾದದ್ದು, ಎರಡೂ ಪುತ್ತೂರು ತಾಲ್ಲೂಕು ಹಾಗೂ ಸುಳ್ಯ ತಾಲ್ಲೂಕಿನಲ್ಲೇ. ಆದಕಾರಣ, ಆ ಕುರಿತಂತೆ ಸಂಶೋಧನಾ ಕೇಂದ್ರ ಸ್ಥಾಪಿಸಿ, ಅದನ್ನು ಪುತ್ತೂರಿನಲ್ಲೇ ಸ್ಥಾಪಿಸಬೆಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಕಡಲ ತೀರದ ಭಾರ್ಗವ ಎಂದು ಬಿರುದಾಂಕಿತರಾದ ಶಿವರಾಮ ಕಾರಂತರು ಹುಟ್ಟಿದ್ದು ಕೋಟಾದಲಿ, ಬೆಳೆದಿದ್ದು ಪುತ್ತೂರಿನಲ್ಲಿ, ಸ್ವಾತಂತ್ರ್ಯ ಹೋರಾಟಗಾರ ಹಾಗೂ ಜ್ಞಾನಪೀಠ ಪ್ರಶಸ್ತಿ ವಿಜೇತರಾದ ಅವರ ' ಬಾಲವನ' ಅವರು ವಾಸವಾಗಿದ್ದ ಮನೆಯನ್ನು ಸಾರ್ವಜನಿಗರಿಗೆ, ಸರ್ಕಾರಕ್ಕೆ ಬಿಟ್ಟುಕೊಟ್ಟಿದ್ದಾರೆ. ಅದರ ಅಭಿವೃದ್ಧಿಗಾಗಿ ಕನಿಷ್ಟ ರೂ. ೧ ಕೋಟಿಯಾದರೂ ಮೀಸಲಿಡಬೇಕೆಂದು ಆನು ಮಾನ್ಯ ಉಪಮುಖ್ಯಮಂತ್ರಗಳಲ್ಲಿ ಕೇಳಿಕೊಳ್ಳುತ್ತುತ್ತಿದ್ದೇನೆ. ಸಭಾಧ್ಯಕ್ಷರೆ, ಇನ್ನು ವಿದ್ಯುತ್, ಬಗ್ಗೆ ಹೇಳುವುದಾದರೆ, ಇವತ್ತು ನಾವು ಒಪ್ಪಿಕೊಳ್ಳಲೇಬೇಕಾದಂತಹ ಸಂಸ್ತಯೆ. ಇಡೀ ರಾಜ್ಯದಲ್ಲಿ ವಿದ್ಯುತ್ ಕಣ್ಣುಮುಚ್ಚಾಲೆಯಾಡುತ್ತಿದೆ. ಅದೇ ರೀತಿ ವಿದ್ಯುತ್ ಅನ್ನು ನಾವು ಹೊರಗಿನಿಂದ ತೆಗೆದುಕೊಳ್ಳಬಹುದಾದಂತಹ ಸ್ಥಿತಿ ಬರಬಹುದು. ಇವತ್ತು ಸೋಲಾರ್ ದೀಪಗಳು ಹಾಗೂ ಸೋಲಾರ್ ಪಂಪುಸೆಟ್ಟುಗಳನ್ನು ಸಬ್ಸಿಡಿಯಲ್ಲಿ ಕೊಡುವಂತಹ ವ್ಯವಸ್ಥೆ ಮಾಡಿದಾಗ ವಿದ್ಯುತ್ ಸಮಸ್ಯೆ ಬಹಳಷ್ಟು ಕಡಿಮೆಯಾಗಬಹುದೆಂದು ನನ್ನ ಅನಿಸಿಕೆ. ಇನ್ನು ಯುವ ಜನಸೇವಾ ಇಲಾಖೆ - ನಿಜವಾಗಿಯೂ ಈ ಇಲಾಖೆಗೆ ಇಟ್ಟಿರುವ ಹಣ ಸ್ವಲ್ಪ ಕಡಿಮೆಯಾಗಿರಬಹುದು. ಆದರೆ ಪ್ರತಿವರ್ಷ ನಡೆಯುವ ಮಳೆಗಳಿಗೆ ಪ್ರತಿಯೊಂದು ತಾಲ್ಲೂಕು ಮಟ್ಟದಲ್ಲಿ ಕನಿಷ್ಠ ೧೦-೧೫ ಸಾವಿರ ರೂಪಾಯಿಗಳನ್ನಾದರೂ ಕೊಡುವಂತಹ ವ್ಯವಸ್ಥೆಯನ್ನು ಮಾನ್ಯ ಸಚಿವರು ರೂಪಿಸಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಸಮಾಜ ಕಲ್ಯಾಣ ಇಲಾಖೆ

ಬಗ್ಗೆ ಹೇಳುವುದಾದರೆ, ಈ ಇಲಾಖೆಯಲ್ಲಿ ಗಂಗಕಲ್ಯಾಣ ಹಾಗೂ ಕ್ಲಸ್ಟರ್ ಯೋಜನೆಗೆ ಸಂಬಂಧಿಸಿದಂತೆ ಇವತ್ತು ನನ್ನ ಪ್ರಶ್ನೆಗೆ ಉತ್ತರ ಒದಿದೆ. ಕ್ಲಸ್ಟರ್ ಯೋಜನೆಯಲ್ಲಿ ಬಹಳಷ್ಟು ತೊಂದರೆಯಾಗುತ್ತದೆ. ೨-೩ ವರ್ಷಗಳಿಂದಲೂ ಬಹಳ ಒಳ್ಳೆಯ ಸಚಿವರು ಸಿಕ್ಕಿದ್ದಾರೆ. ಎಲ್ಲರೂ ಸಿಕ್ಕಿದರೂ ಎಲ್ಲಿಯೋ ಒಂದು ಕಡೆ ಅದಕ್ಕೆ ಅಧಿಕಾರಿಗಳಿಂದ ತಡೆ ಬರುತ್ತಿದೆ. ಆ ಅಧಿಕಾರಿಗಳು ನನಗೆ ಕೊಟ್ಟ ಉತ್ತರದಲ್ಲೂ ತಪ್ಪು ಇದೆ. ಎಲ್ಲಿ ಬೋರ್ ಆಗಬೇಕು, ಎಲ್ಲಿ ಬಾವಿ ಆಗಬೇಕು, ಅಂತೂ ಪರಿಶಿಷ್ಟರ ಹೆಸರಿನಲ್ಲಿ ಅಧಿಕಾರಿಗಲು ತಿನ್ನುವಂತಹ ವ್ಯವಸ್ಥೆಯನ್ನು ಕಟ್ಟುನಿಟ್ಟಾಗಿ ನಿಲ್ಲಿಸುವಂತಹ ವ್ಯವಸ್ಥೆಯಾಗಬೇಕೆಂದು ಕೇಳಿಕೊಳ್ಳುತ್ತೇನೆ.

ಇದು ಮುಜರಾಯಿ ಇಲಾಖೆ ಬಗ್ಗೆ ಹೇಳುವುದಾದರೆ, ಏಲ್ಲರು ಮಾನ್ಯ ನಾಗರಾಜ ಶೆಟ್ಟರ ಮೇಲೆ ಬೀಳುತ್ತಿದ್ದಾರೆ. ನನಗನಿಸುತ್ತದೆ. ಎಲ್ಲಾ ಜಿಲ್ಲೆಗಳಲ್ಲೂ ಪ್ರಸಿದ್ಧವಾದ ದೇವಸ್ಥಾನಗಳು ಬಹಳಷ್ಟಿದೆ. ಉದಾಹರಣೆ ನಮ್ಮಲ್ಲಿ ಕುಕ್ಕೆ ಸುಬ್ರಮಣ್ಯ ಕ್ಷೇತ್ರ. ಆ ಒಂದು ದೇವಸ್ಥಾನಕ್ಕೆ ಆ ಆಸುಪಾಸಿನ ೨೫ ದೇವಸ್ಥಾನಗಳನ್ನು ದತ್ತು ಕೊಟ್ಟರೆ, ಅವರಿಗೆ ಬೇರೇನು ಬೇಡ. ಆ ದೇವಸ್ಥಾನಗಳನ್ನು ಉದ್ಧಾರ ಮಾಡುವಂತಹ ವ್ಯವಸ್ಥೆಯನ್ನು ಕಲ್ಪಸಿದಾಗ, ಎಲ್ಲವೂ ತನ್ನಷ್ಟಕ್ಕೆ ತಾನೆ ಒಳ್ಳೆಯದಾಗುವುದಕ್ಕೆ ಸಾಧ್ಯ. ಕೊಲ್ಲೂರು ಇದೆ. ಸುಬ್ರಮಣ್ಯ ಇದೆ. ನಮ್ಮ ಉಡುಪಿ ಇದೆ. ಬೇರೆ ಬೇರೆ ಕಡೆ, ಎಲ್ಲಾ ದೇವಸ್ಥಾನಗಳಲ್ಲಿ ಈ ವ್ಯವಸ್ಥೆಯನ್ನು ಮಾಡಿದಾಗ ಬಹಳಷ್ಟು ಒಳ್ಳೆಯದಾಗಬಹುದು. ಇನ್ನು ತುಳು ಅಧ್ಯಯನ ಕೇಂದ್ರವನ್ನು ಕುಪ್ಪಂ ದ್ರಾವಿಡ ವಿಶ್ವ ವಿದ್ಯಾನಿಲಯದಲ್ಲಿ ಸ್ಥಾಪನೆ ಮಾಡಿದ್ದಕ್ಕಾಗಿ ಕೊಡವ ಇತಿಹಾಸವನ್ನು ಮಂಗಳೂರಿನಲ್ಲಿ ಸ್ಥಾಪನೆ ಮಾಡಿದ್ದಕ್ಕಾಗಿ ಅಭಿನಂದನೆ ಯನ್ನು ಸಲ್ಲಿಸುತ್ತಿದ್ದೇನೆ.

Chairman : ಒಟ್ಟಿಗೆ ಅಭಿನಂದನೆಯನ್ನು ಸಲ್ಲಿಸಿಬಿಡಿ. ಸಮಯ ಆಯಿತು. ಬೇರೆಯವರನ್ನು ಕರೆಯುತ್ತೇನೆ.

ಶ್ರೀಮತಿ ಶಕುಂತಲ ಶೆಟ್ಟಿ : ಇನ್ನು ಅಂಗನವಾಡಿ ಕಾರ್ಯಕರ್ತೆಯವರು, ಅವರು ಗೌರದಿಂದ ಬಾಳುವುದಕ್ಕಾಗಿ ಗೌರವ ಧನ

ಸ್ವಲ್ಪ ಹೆಚ್ಚಿಗೆ ಮಾಡಬೇಎಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಏಕೆಂದರೆ ಸ್ತ್ರೀಶಕ್ತಿಗೆ ಕೊಟ್ಟಿದ್ದೀರಿ. ಆದರೆ ಅಂಗನವಾಡಿ, ಹೆಣ್ಣು ಮಕ್ಕಳು ಆ ಸಣ್ಣ ಸಣ್ಣ ಮಕ್ಕಳ ಜೊತೆಯಲ್ಲಿರಬೇಕಾಗುತ್ತದೆ. ಅವರು ನೆಮ್ಮದಿಯಿಂದ ಬಾಳುವುದಕ್ಕೆ ಒಂದು ಅವಕಾಶವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ಲೋಕೋಪಯೋಗಿ ಇಲಾಖೆ, ಈ ಇಲಾಖೆಯ ನನ್ನ ಊರಿನ ರಸತೆ, ಬಾಕಿಯದು ನನಗೆ ಗೊತ್ತಿಲ್ಲ, ಸುಳ್ಯ ಕ್ಷೇತ್ರಕ್ಕೆ ಒಳಪಟ್ಟ, ಪುತ್ತೂರು ತಾಲ್ಲೂಕಿನ ಉಪ್ಪನಂಗಡಿಯಿಮದ ಸುಬ್ರಹ್ಮಣ್ಯಕ್ಕೆ ಹೋಗುವಂತಹ ರಸ್ತೆಯಲ್ಲಿ ಹೋದವರಿಗೆ ಖಂಡಿತ ಸುಬ್ರಹ್ಮಣ್ಯ ಪ್ರತ್ಯಕ್ಷವಾಗುತ್ತಾರೆ. ಹಾಗಾಗಿ ನಮ್ಮಲ್ಲಿ ಒಂದು ದಿನ ರಾತ್ರಿ ಕೆ.ಎಸ್.ಆರ್.ಟಿ.ಸಿ. ಬಸ್ ಗುಂಡಿಗೆ ಬಿದ್ದಾಗ, ಅವರಲ್ಲೊಬ್ಬರು ಬಿದ್ದು ಅವರನ್ನು ಆಸ್ಪತ್ರೆಗೆ ಸಾಗಿಸಿ, ಅವರು ತೀರಿ ಕೊಂಡರು,ಆದಕಾರಣ ದಯಮಾಡಿ, ಮಾನ್ಯ ಉಪ ಮುಖ್ಯಮಂತ್ರಿಯವರು ಸ್ಪೆಷಲ್ ಆಗಿ ಆ ಒಂದು ರಸತೆಯನ್ನು ಜೀರ್ಣೋದ್ದಾರ ಮಾಡುವಂತಹ ಕೆಲಸವನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ನಮ್ಮದು ಮಲೆನಾಡು ಪ್ರದೇಶ. ಶಿರಾಡಿಘಾಟ್ ನನ್ನ ಪುತ್ತೂರು ತಾಲ್ಲೂಕಿನಲ್ಲಿದೆ. ನಮ್ಮ ಉಪ್ಪಿನಂಗಡಿ ಹಗೂ ಕಡವ ಎರಡು ಪೊಲೀಸ್ ಸ್ಟೇಷನ್ಗಳಿಗೆ ಬಹಳಷ್ಟು ಗ್ರಾಮಗಳು ಬರುತ್ತದೆ. ಅವೆಲ್ಲಾ ಅರಣ್ಯ ಪ್ರದೇಶದಲ್ಲಿದೆ. ದೇವರ ದಯೆಯಿಂದ ನಕ್ಸಲೈಟ್ಸ್ ನಮ್ಮ ಕಡೆ ಕಣ್ಣು ಹಾಕಲಿಲ್ಲ. ಆದರೆ ಎಲ್ಲಿಯಾದರೂ ಬಂದರೆ ಬಹಳ ಅಪಾಯವಿದೆ. ಅದಕ್ಕಾಗಿ ನೆಲ್ಯಾಡಿಯ ಔಟ್ ಪೊಸ್ಟ್‌ನ್ನು ಮೇಲ್ದರ್ಜೆಗೇರಿಸಿ ಅವರಿಗೆ ಒಳ್ಳೆಯ ಆಯುಧಗಳನ್ನು ಕೊಟ್ಟು, ಆ ಔಟ್ ಪೋಲೀಸ್ ಸ್ಟೇಷನ್ ಅನ್ನು ಮೇಲ್ದರ್ಜೆಗೇರಿಸಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಡಾ. ಕೆ. ಅನ್ನದಾನಿ : ಈಗ ತಾವು ಮಹಿಳೆಯರ ಅಭಿವೃದ್ಧಿ ಬಗ್ಗೆ ಏನೇನು ಮಾಡಬೆಕೆಂದು ಸಲಹೆ ಕೊಡಿ.

ಶ್ರೀಮತಿ ಶಕುಂತಲ ಶೆಟ್ಟಿ : ಇನ್ನು ನಮ್ಮಲ್ಲಿ ಖಾಸಗಿ ಬಸ್ಸುಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಾಸ್ತಿ ಓಡಾಡುತ್ತಿವೆ. ಅದಕ್ಕೆ ತೆರಿಗೆ ಜಾಸ್ತಿ ಹಾಕಿದ್ದಾರೆ. ಆದರೆ ಸಮಸ್ಯೆ ಏನೆಂದರೆ ನಾವು ಬಸ್ಸು ಹತ್ತಿದಾಗ ನಮ್ಮನ್ನು

ನೋಡಿಕೊಂಡು ಜನ ಏನೇನೊ ಮಾತನಾಡಿಕೊಳ್ಳುತ್ತಾರೆ. ಸ್ವಲ್ಪ ತೆರಿಗೆ ಕಡಿಮೆ ಮಾಡಿಸಿ ಎಂದು ಹೇಳುತ್ತಿದ್ದಾರೆ. ನಾನು ಮಾನ್ಯ ಉಪಮುಖ್ಯಮಂತ್ರಿಯವರಲ್ಲಿ ಕೇಳಿಕೊಳ್ಳುವುದೇನೆಂದರೆ ಈಗ ಹಾಕಿರುವ ತೆರಿಗೆಗಿಂತ ಸ್ವಲ್ಪ ಕಡಮೆ ಮಾಡಿದರೆ ಒಳ್ಳೆಯದಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಂಡು, ರಾಜ್ಯದಲ್ಲಿ ಬಹಳಷ್ಟು ದೇವದಾಸಿಯರ ಸಮಸ್ಯೆಯಿದೆ. ಬಹಳಷ್ಟು ಹೆಣ್ಣು ಮಕ್ಕಳ ಮೇಲೆ ದೌಜನ್ಯ ನಡೆಯುತ್ತಿದೆ. ಬಹಳಷ್ಟು ಹೆಣ್ಣು ಮಕ್ಕಳ ಕೊಲೆಯಾಗುತ್ತಿದೆ. ಬಹಳಷ್ಟು ಹೆಣ್ಣು ಮಕ್ಕಳ ಮೇಲೆ ಶೋಷಣೆ ನಡೆಯುತ್ತಿದೆ. ನಮ್ಮ ಸರ್ಕಾರ, ಆ ಎಲ್ಲಾ ಹೆಣ್ಣು ಮಕ್ಕಳಿಗೆ ರಕ್ಷಣೆ ಕೊಡಿ ದೇವದಾಸಿಯರ ಮಕ್ಕಳಿಗೆ ಒಳ್ಳೆಯ ಯೋಜನೆಯನ್ನು ಹಾಕಿದ್ದೀರಿ. ನಮ್ಮ ಶಾಸಕ ಮಿತ್ರರು ಹೇಳಿದರು, ದೇವದಾಸಿಯರ ಮಕ್ಕಳು ಎಂದು ಆದರೆ ಆ ಮಕ್ಕಳು ದೊಡ್ಡವರಾದ ಮೇಲೂ ಅವರನ್ನು ದೇವದಾಸಿಯರ ಮಕ್ಕಳು ಅಂತ ಹೇಳಿ ಬೆಟ್ಟು ಮಾಡಿ ತೋರಿಸುವಂತಹ ಕೆಲಸ ಆಗುವುದು ಬೇಡ, ಎಂದು. ಅದಕ್ಕೆ ಬೇರೆ ಒಂದು ಹೆಸರು ಇಟ್ಟುಕೊಂಡು, ಒಳ್ಳೆಯ ಹೆಸರಿನಲ್ಲಿ, ಆ ಮಕ್ಕಳಿಗೂ ಮುಂದೆ ಉತ್ತಮವಾದ ಒಂದು ಜೀವನ ಸಿಗುವ ರೀತಿಯಲ್ಲಿ ಆ ಯೋಜನೆಯನ್ನು ರೂಪಿಸಬೇಕು. ದೇವದಾಸಿ ಎನ್ನುವ ಹೆಸರನ್ನು ತೆಗೆದು, ಅವರು ಸಹ ಮಾನವಂತರಾಗಿ ಬಾಳುವುದಕ್ಕೆ ಅವಕಾಶ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ವಿಧವೆಯರಿಗೆ ಮತ್ತು ಅಂಗವಿಕಲರಿಗೆ ಕೊಡುವ ಮಾಸಾಶನ. ವಿಧವೆಯರಿಗೆ ಏಕೆ ಕೊಡುತ್ತಾರೆಂದರೆ, ಅವರಿಗೆ ಏನೂ ಆಧಾರವಿಲ್ಲ. ದೇವದಾಸಿಯರಿಗೂ ಆಧಾರವಿಲ್ಲ. ಆಕೆಗೂ ಮಾಸಾಶನ ಕೊಟ್ಟು, ಆಕೆಯು ಸಹ ಗೌರವಯುತವಾಗಿ ಬದುಕುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಂಡು, ಉತ್ತಮವಾದ ಬಜೆಟ್ ಕೊಟ್ಟು, ಮಾನ್ಯ ಯಡಿಯೂರಪ್ಪ ಸೈಕಲ್ ಎಂದು ತೋರಿಸುವ ಹಾಗೆಯೇ ಭಾಗ್ಯದಲಕ್ಷ್ಮೀ ಎಂದು ಕರೆಯುವ ಹಾಗೆಯೇ, ಮುಂದೆ ನಿಮ್ಮ ಸಮ್ಮಿಶ್ರ ಸರ್ಕಾರ ಅತ್ಯತ್ತಮ ಬಜೆಟ್ ಕೊಟ್ಟಿದೆಯೆಂದು ಜನರು ಮೂಲೆ ಮೂಲೆಯಲ್ಲಿ ಹೇಳುವ ಹಾಗೆ ಆಗಲಿ, ಮಾನ್ಯ ಮುಖ್ಯಮಂತ್ರಿಯವರು,

ಮಾನ್ಯ ಉಪ ಮುಖ್ಯಮಂತ್ರಿಯವರು ಶಾಶ್ವತವಾಗಿ ಅಧಿಕಾರದಲ್ಲಿ ಇರಲಿ ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಆಂಜನೇಯ : (ಭರಮಸಾಗರ) ಮಾನ್ಯ ಅಧ್ಯಕ್ಷರೇ, ೨೦೦೭-೦೮ನೇ ಸಾಲಿನಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಅರ್ಥ ಸಚಿವರು ಬಹಳ ಅತ್ಯುತ್ತಮವಾದ ಬಜೆಟ್‌ನ್ನು ಮಂಡಿಸಿರುತ್ತಂತಹ ಬಜೆಟ್ ಬಗ್ಗೆ ಇಲ್ಲಿ ಮಾತನಾಡಿದಂತಹ ವಿರೋಧಪಕ್ಷದ ನಾಯಕರು ಅವರದ್ದೇ ಆದಂತಹ ದಾಟಿಯಲ್ಲಿ ವಿಶ್ಲೇಷಣೆ ಮಾಡಿದ್ದಾರೆ. ಕೆಲವರು ಈ ಒಂದು ಬಜೆಟ್ ಚುನಾವಣೆ ಹಿನ್ನೆಲೆಯಿಂದ ಮಾಡಿರತಕ್ಕಂತಹ ಬಜೆಟ್ ಎಂದು ಹೇಳಿದ್ದಾರೆ. ಇನ್ನು ಕೆಲವರು ಈ ಬಜೆಟ್ ನಲ್ಲಿ ಏನೇನೂ ಇಲ್ಲವೆಂದು ಹೇಳಿದ್ದಾರೆ. ಅವರು ಯಾವ ಮನಸ್ಸು ಇಟ್ಟುಕೊಂಡು ಹೇಳಿ ದ್ದಾರೋ ಗೊತ್ತಿಲ್ಲ. ಈ ಬಜೆಟ್ ನಲ್ಲಿ ಅವರು ಬಡವರ ಪರವಾಗಿ ರೈತರ ಪರವಾಗಿ, ದಲಿತರ ಪರವಾಘಿ, ಶೋಷಿತರ ಪರವಾಗಿ, ಅಸಹಾಯಕ ಹೆಣ್ಣು ಮಕ್ಕಳ ಪರವಾಗಿ ಎಷ್ಟು ಒತ್ತು ನೀಡಲಾಗಿದೆ ಎನ್ನುವ ಬಗ್ಗೆ ಅವರು ಸ್ವಲ್ಪ ಅವರ ಮನಸ್ಸನ್ನು, ಯಾವುದೊ ಒಂದು ಕಣ್ಣು ಎಂದು ಹೇಳುತ್ತಾರಲ್ಲ, ಆ ಕಣ್ಣನ್ನು ತೆರೆದು ನೈಜ ಕಣ್ಣಿನಿಂದ ನೋಡಿದ್ದರೆ ಸ್ವಲ್ಪ ಅರ್ಥವಾಗುತ್ತಿತ್ತು. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದರು. ರಾಜಕೀಯ ಎನ್ನುವುದು ಅನುಕೂಲ ಸಿಂಧು ರಾಜಕೀಯ. ಯಾವಾಗ ಸೌಲತ್ತು ಸಿಗುವುದಿಲ್ಲವೋ ಯಾವಾಗ ಸೌಲಭ್ಯ ಸಿಗುವುದಿಲ್ಲವೋ, ಯಾರಿಗೆ ಹೋರಾಟಕ್ಕೆ ತಕ್ಕಂತಹ ಪ್ರತಿಫಲ ಸಿಗುವುದಿಲ್ಲವೋ ಅಂತಹವನು ಬಂಡಾಯ ಏಳುತ್ತಾನೆ. ಒಬ್ಬ ವ್ಯಕ್ತಿ ಒಂದು ತತ್ವ ಸಿದ್ಧಾಂತವನ್ನು ಇಟ್ಟು ಕೊಂಡು ಬಂದಿರುತ್ತಾರೆ. ಹೋರಾಟದ ಮನೋಭಾವನೆಯಿಂದ ನಾವು ಬಂದಿದ್ದೇವೆ. ವಿದ್ಯಾರ್ಥಿ ದೆಸೆಯಿಂದಲೂ ಕೂಡ ಹೋರಾಟ ಮಾಡಿಕೊಂಡು ಬಂದಿದ್ದೇವೆ. ನಾನು ಬಂಡಾಯವೆದ್ದು ಬಂದಿದ್ದೇನೆ. ಜನ ಇವತ್ತು ನನ್ನನ್ನು ಆರಿಸಿ ಕಳುಹಿಸಿದ್ದಾರೆ. ಈ ಬಜೆಟ್ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಬಹಳ ವರ್ಷಗಳ ಕಾಲ ಈ ಸಾರಾಯಿಯನ್ನು ನಿಷೇಧ ಮಾಡಬೇಕೆಂದು ಹೇಳಿ ನಾನಾ ಕಡೆಗಳಲ್ಲಿ ಮಹಿಳಾ ಸಂಘಟನೆಗಳು ಬಂದಂತಹ ಎಲ್ಲಾ ರಾಜಕಾರಣಿಗಳನ್ನು ಒತ್ತಾಯ

ಮಾಡುತ್ತಿದ್ದರು. ಈಗ ಸಾರಾಯಿ ನಿಷೇಧವಾಯಿತು. ಕಳ್ಳ ಭಟ್ಟಿಯನ್ನು ಹೀಗೆ ತಡೆಹಿಡಿಯುತ್ತೀರಾ ಎಂದು ಸುಮ್ಮನೆ ಅನವಶ್ಯಕವಾದ ಪ್ರಶ್ನೆಯನ್ನು ಕೇಳುತ್ತಾರೆ. ಕಳ್ಳಭಟ್ಟಿ ಸಾರಾಯಿ ನಿಷೇಧವಾಗುತ್ತದೆ. ಕಳ್ಳಬಟ್ಟಿ ಸಾರಾಯಿ ತಯಾರು ಮಾಡುವುದು ಅಷ್ಟು ಸುಲಭವಲ್ಲ ಈಗ. ಇದೊಂದು ಕ್ರಾಂತಿಕಾರವಧ ಹೆಜ್ಜೆ ಇದು. ಸಾರಾಯಿ ನಿಷೇಧ ಮಾಡುವಂತಹ ಒಂದು ನಿರ್ಧಾರ ಏನಿದೆಯಲ್ಲ. ಕ್ರಾಂತಿಕಾರಕವಾದಂತಹ ಕಾರ್ಯಕ್ರಮವಿದು. ಯಾರೂ ಮಾಡಲಿಕ್ಕೆ ಆಗದೇ ಇರುವಂತಹ ಒಂದು ಕಾರ್ಯಕ್ರಮವನ್ನು ಸಮ್ಮಿಶ್ರ ಸರ್ಕಾರ ಮಾನ್ಯ ಕುಮಾರಸ್ವಾಮಿಯವರು ನೇತೃತ್ವದ ಸರ್ಕಾರ, ಮಾನ್ಯ ಯಡಿಯೂರಪ್ಪನವರ ನೇತೃತ್ವದ ಸರ್ಕಾರ ಮಾಡಿದೆ.

ಯಾರೂ ಮಾಡಲಿಕೆಕ ಆಗದೆ ಇರತಕ್ಕಂಥ ಕಾರ್ಯಕ್ರಮವನ್ನು ಇವತ್ತು ಮಾನ್ಯ ಕುಮಾರಸ್ವಾಮಿ ಮತ್ತು ಮಾನ್ಯ ಯಡಿಯೂರಪ್ಪರವರ ನೇತೃತ್ವದ ಸಮ್ಮಿಶ್ರ ಸರ್ಕಾರ ಜಾರಿಗೊಳಿಸಿದೆ. ಇದರಿಂದ ಬಡವವರಿಗೆ ಅದರಲ್ಲೂ ದಲಿತರಿಗೆ, ಶೋಷಿತರಿಗೆ, ಕೃಷಿ ಕಾರ್ಮಿಕರಿಗೆ, ಕೂಲಿಕಾರರಿಗೆ ಇವತ್ತು ಅನುಕೂಲವಾಗಿದೆ. ಅವರ ದಿನನಿತ್ಯದ ದುಡಿಮೆ ಸಾರಾಯಿ ಅಂಗಡಿಗೆ ಹೋಗುತ್ತಿತ್ತು. ಇವತ್ತು ಸಾರಾಯಿಯನ್ನು ರದದು ಮಾಡಿದ್ದರಿಂದ ಅವರಿಗೆಲ್ಲಾ ಅನುಕೂಲವಾಗಿದೆ. ಆಮೇಲೆ ಅವರು ಬಾಟ್ಲಿಗೆ ಬರಬಹುದು ಎಂದು ಈವು ಹೇಳಬಹುದು. ಪ್ರತಿ ಹಳ್ಳಯಲ್ಲೂ ಕೂಡ ಚಹಾ ಅಂಗಡಿ ಗಳಿಗಿಂತ ಸಾರಾಯಿ ಅಂಗಡಿಗಳೇ ಹೆಚ್ಚಿನ ಸಂಖ್ಯೆಯಲ್ಲಿದ್ದವು. ಬೀದಿ ಬೀದಿಯಲ್ಲಿ ಪ್ಯಾಕೆಟ್ ಗಳನ್ನು ಮಾರಾಟ ಆಡುತತಿದ್ದರು. ಅಂತಹ ಸ್ಥಿತಿ ಇತ್ತು. ಹೆಣ್ಣುಮಕ್ಕಳೆಲ್ಲರೂ ಕೂಡ ಸ್ವಾಮಿ, ಏನಾದರೂ ಮಾಡಿ ಈ ಸಾರಾಯಿಯಿಂದ ನಮ್ಮ ಮನೆಯವರನ್ನು, ನಮ್ಮ ಮಕ್ಕಳನ್ನು ಮುಕ್ತರನ್ನಾಗಿ ಮಾಡಿ ಎಂದು ಗೋಗರೆಯುತ್ತಿದ್ದರು. ಇವತ್ತು ದಿಟ್ಟ ಹೆಜ್ಜೆಯನ್ನಿಟ್ಟು ಸಾರಾಯಿಯನ್ನು ನಿಷೇಧ ಮಾಡತಕ್ಕಂಥ ಕ್ರಾಂತಿಕಾರಕವಾದಂತಹ ನಿರ್ದಾರ ವನ್ನು ಈ ಸರ್ಕಾರ ಮಾಡಿದೆ. ಅದನ್ನು ಅವರು ಮಾಡಲಿಕ್ಕೆ ಆಗಲಿಲ್ಲ ವೆಂಬ ಹೊಟ್ಟೆಕಿಚ್ಚಿನಿಂದ ಅವರು ಆ ಮಾತನ್ನು ಹೇಳುತ್ತಿದ್ದಾರೆ. ಎರಡನೆಯದಾಗಿ, ಲಾಟರಿ ನಿಷೇಧ ಮಾಡಲಾಗಿದೆ. ಕಳೆದ ಐದು ವರ್ಷಗಳಿಂದಲೂ ಎಲ್ಲಾ ಕಡೆಗೂ ಅದನ್ನು ನಿಷೇಧಿಸಲು ಹೋರಾಟ

ನಡೆಯುತ್ತಿತ್ತು. ಮಾನ್ಯ ಎಸ್.ಎಂ.ಕೃಷ್ಣರವರ ಸರ್ಕಾರ ಕೂಡ ಲಾಟರಿ ನಿಷೇಧ ಮಾಡುತ್ತೇವೆ ಎಂದು ಹೇಳಿತ್ತು. ಆದರೆ ಅವರು ಮಾಡಲಿಕ್ಕಾಗಲಿಲ್ಲ. ನಂತರ ಬಂದಂತಹ ಸರ್ಕಾರ ಕೂಡ ಅದನ್ನು ಮಾಡಲಿಕ್ಕಾಗಲಿಲ್ಲ. ಇವತ್ತು ಲಾಟರಿ ನಿಷೇಧದಿಂದ ಬಡವರು ನೆಮ್ಮದಿಯಿಂದ ಬದುಕುವಂತಹ ವಾತಾವರಣ ಉಂಟಾಗಿದೆ. ನೆಮ್ಮದಿಯ ಸಮಾಜ ನಿರ್ಮಾಣ ಮಾಡಲಿಕ್ಕೆ ಇವತ್ತು ಅದು ನಾಂದಿಯಾಗಿದೆ. ಇವತ್ತು ದುಡಿಯಲಿಕ್ಕೆ ಆಗದೆ ಇರತಕ್ಕಂಥ, ಅಸಹಾಯಕ ಹೆಣ್ಣುಮಕ್ಕಳಿಗೆ, ಅಂಗವಿಕಲರಿಗೆ, ವಿಧವೆಯವರಿಗೆ ಮತ್ತು ವೃದ್ಧರಿಗೆ ೨೦೦ ರೂಪಾಯಿಗಳನ್ನು ಭತ್ಯೆಯಾಗಿ ಸರ್ಕಾರದವರು ಕೊಡುತ್ತಿದದರು. ಅದನ್ನು ೪೦೦ ರೂಪಾಯಿಗಳಿಗೆ ಏರಿಸಿದ್ದಾರೆ. ೨೦೦ ರೂಪಾಯಿಗಳಿಂದ ೪೦೦ರೂಪಾಯಿಗಳಿಗೆ ಏರಿಸಿರತಕ್ಕಂಥದ್ದು ಸ್ವಾಗತಾರ್ಹ. ಮಾನ್ಯ ಯಡಿಯೂರಪ್ಪನವರೆ, ಮಾನ್ಯ ವಿರೋಧ ಪಕ್ಷದ ನಾಯಕರು, ನಿಮ್ಮ ಬಜೆಟ್ ಬಗ್ಗೆ ಮನೆ ಮನೆಯಲ್ಲಿ ಮಾತನಾಡುತ್ತಾರಂತೆ 'ಎಂದು ಹೇಳಿದರು. ಮನೆ ಮನೆಯಲ್ಲಿ ಅಲ್ಲ,. ಗುಡಿಸಲುಗಳಲ್ಲಿ ನಿಮ್ಮ ಬಜೆ ಬಗ್ಗೆ ಮಾತನಾಡುತ್ತಿದ್ದಾರೆ. ಹೊಲಗದ್ದೆಗಳಲ್ಲಿ ಮಾತನಾಡುತ್ತಿದಾರೆ. ಪಂಚಾಯಿತಿ ಕಟ್ಟೆಗಳಲ್ಲಿ ಮಾತನಾಡುತ್ತಿದ್ದಾರೆ. ವೃದ್ಧರೆಲ್ಲಾ, ಏನಪ್ಪ ಈ ಮನುಷ್ಯ ನಮಗೆ ೨೦೦ ರೂಪಯಿಗಳನ್ನು ಕೊಡುತ್ತಿದ್ದದ್ದನ್ನು ೪೦೦ ರೂಪಾಯಿಗಳಿಗೆ ಏರಿಸಿದ್ದಾರಲ್ಲಾ ಎಂದು ಹೊಗಳುತ್ತಿದ್ದಾರೆ. ಮೊನ್ನೆ ನಾನು ನಮ್ಮ ಕ್ಷೇತ್ರಕ್ಕೆ ಹೋದಾಗ, ನಮ್ಮಲ್ಲಿನ ಹೆಣ್ಣುಮಕ್ಕಳು ಸಾರಾಯಿ ನಿಷೇಧ ಮಾಡಿ ಪುಣ್ಯ ಕಟ್ಟಿಕೊಂಡಿರಿ ಎನ್ನುವ ಮಾತನ್ನು ಹೇಳಿದರು. ನಾವೆಲ್ಲರೂ ನಿಮಗೆ ಓಟು ಹಾಕುತ್ತೇವೆ ಎಂದು ಹೇಳಿದರು. ಆದ್ದರಿಂದ ನೀವು ನಿಮ್ಮ ಉತ್ತರದಲ್ಲಿ ಅವರಿಗೆ ನನ್ನ ಬಜೆಟ್ ಬಗ್ಗೆ ಕೇವಲ ಮನೆ ಮನೆಯಲ್ಲಿ ಮಾತ್ರ ಮಾತನಾಡುತ್ತಿಲ್ಲ, ಪಂಚಾಯ್ತಿ ಕಟ್ಟೆಗಳಲ್ಲಿ ಮಾತನಾಡುತ್ತಿದ್ದರೆ. ಕ್ಷೌರವ ಅಂಗಡಿಯಲ್ಲಿ ಮಾತನಾಡುತ್ತಿದ್ದಾರೆ, ಚಹಾ ಗದ್ದೆಗಳಲ್ಲಿ ಮಾತನಾಡುತ್ತಿದ್ದಾರೆ' ಎಂದು ಹೇಳಬೇಕು. ನಮ್ಮ ಬಜೆಟ್ ಬಗ್ಗೆ ಎಂದು ನೀವು ಬಹಳ ಹೆಮ್ಮೆಯಿಂದ ಹೇಳಬೇಕು. ದಯಮಾಡಿ ಸಿಟ್ಟಾಗಬೇಡಿ,ಶಾಂತಿ, ಸಮಾಧಾನ ದಿಂದ ಅವರಿಗೆ ಹೇಳಿ, ನೀವು ಸಿಟ್ಟಾಗಿ ಬಿಟ್ಟರೆ ಶಬ್ದಗಳು ಹೊರಟು ಹೋಗಿ ಬಿಡುತ್ತವೆ. ನೀವು ಸಿಟ್ಟಾಗಲಿ ಎಂಬ ಉದ್ದೇಶದಿಂದಲೇ ಅವರು ನಿಮ್ಮನ್ನು

ಕೆರಳಿಸುತ್ತಾರೆ. ದಯವಿಟ್ಟು ಆಕ್ರೋಶಕ್ಕೆ ಒಳಗಾಗಬೇಡಿ. ಹತಾಶರಾಗಬೇಡಿ. ಬಹಳ ಒಳ್ಳೆಯ ಬಜೆಟ್ ಅನ್ನು ನೀವು ಮಂಡಿಸಿದ್ದೀರಿ. ಶಾಂತಿ, ಸಮಾಧಾನ ದಿಂದ ನೀವು ಅವರಿಗೆ ಧೈರ್ಯವಾಗಿ ಉತ್ತರ ಹೇಳತಕ್ಕಂಥ ಶಕ್ತಿ ನಿಮಗೆ ಬರಲಿ ಎಂದು ನಾನು ಹಾರೈಸುತ್ತೇನೆ. ತಾವು ೨೦೦೦ ಕೋಟಿ ರೂಪಾಯಿಗಳನ್ನು ರೈತರಿಗೆ ಕೊಟ್ಟಿದ್ದೀರಿ. ಸಾಲದ ಮೇಲಿನ ಬಡ್ಡಿ ಮನ್ನಾ ಮಾಡಿದ್ದೀರಿ, ಸಾಲ ಮನ್ನಾ ಮಾಡಿದ್ದೀರಿ. ಇಂಡಿಯಾ ದೇಶದಲ್ಲಿ ಯಾವ ರಾಜ್ಯವೂ ಮಾಡದಿರತಕ್ಕಂಥ ಕ್ರಾಂತಿಕಾರಕವಾದಂತಹ ಕಾರ್ಯಕ್ರಮವನ್ನು ನೀವು ಮಾಡಿದ್ದೀರಿ. ಶೇಕಡ ೪ ರ ಬಡ್ಡಿ ದರದಲ್ಲಿ ಸಾಲ ಕೊಡುವುದನ್ನು ಮುಂದುವರೆಸಿದ್ದೀರಿ. ಇದು ಇವತ್ತು ಯಾವ ರಾಜ್ಯದಲ್ಲಿದೆ? ಕಾಂಗ್ರೆಸ್ ಎಷ್ಟು ರಾಜ್ಯಗಳಲ್ಲಿ ಅಧಿಕಾರದಲ್ಲಿದೆ ? ಅಲ್ಲೆಲ್ಲಾ ನೀವು ಏಕೆ ಈ ರೀತಿ ಮಾಡಲಿಕ್ಕಾಗಲಿಲ್ಲ? ಇವತ್ತು ಈ ಸರ್ಕಾರ ಮಾಡಿದೆ, ಶೇಕಡ ೪ರ ಬಡ್ಡಿ ದರದಲ್ಲಿ ಇವತ್ತು ರೈತರಿಗೆ ಸಾಲ ಕೊಟ್ಟು ಸಹಾಯವನ್ನು ಮಾಡತಕ್ಕಂಥ ಸರ್ಕಾರವಿದು. ಸ್ವಾಮಿ, ಇದನ್ನೆಲ್ಲವನ್ನು ಕೂಡ ನಾವು ಸ್ವಾಗತ ಮಾಡುತ್ತೇವೆ. ರಾಜ್ಯದಲ್ಲಿ ಇವತ್ತು ಮಠ ಮಾನ್ಯಗಳು ಇವೆ. ಸರ್ಕಾರ ಮಾಡದಿರತಕ್ಕಂಥ ಕೆಲಸವನ್ನು ಈ ರಾಜ್ಯದಲ್ಲಿ ಮಠ ಮಾನ್ಯಗಳು ಮಾಡುತ್ತಿವೆ. ಈ ಮಠ ಮಾನ್ಯಗಳಿಗೆ ನೀವು ಹಣ ಕೊಟ್ಟಿರತಕ್ಕಂಥದ್ದು ಸಹ ಸ್ವಾಗತಾರ್ಹ. ನಿಮ್ಮಲ್ಲಿ ನಮ್ಮದೊಂದು ವಿನಂತಿ ಇದೆ. ಅದರ ಜೊತೆಗೆ ಇನ್ನೂ ಕೆಳ ವರ್ಗದ ಮಠಗಳು ಕೂಡ ಇವೆ. ಅವನ್ನು ಕೂಡ ನೀವು ಸೇರಿಸಿಕೊಳ್ಳಿ, ಆಲ್ಮೀಕಿ ಗುರುಮಠ ಇರಬಹುದು, ದಲಿತರ ಪೀಠಗಳು ಇರಬಹುದು, ಉಪ್ಪಾರರ ಗುರು ಪೀಠ ಇರಬಹುದು. ಅವರ ಮಠಗಳಿಗೂ ನೀವು ಹಣ ಕೊಡಿ. ಕನಕದಾಸರ ಪೀಠಕ್ಕೆ ಪ್ರತಿ ವರ್ಷವೂ ಕೊಟ್ಟು ಬಿಡುತ್ತಾರೆ. ಈಗ ಇಲ್ಲಿ ಮಾನ್ಯ ಈಶ್ವರಪ್ಪನವರು ಇದ್ದಾರೆ. ಆಗ ಮಾನ್ಯ ಸಿದ್ದರಾಮಯ್ಯನವರು ಇದ್ದರು. ಅವರು ಇರುವುದಕ್ಕಿಂತ ಮುಂಚೆ ಇದ್ದವರು ಕೂಡ ಅದಕ್ಕೆ ಕೊಡುತ್ತಿದ್ದರು. ಮಾನ್ಯ ಸಿದ್ದರಾಮಯ್ಯನವರು ಅದನ್ನು ಮುಂದುವರೆಸಿ ಕೊಂಡು ಬಂದರು. ಅವರು ಇದ್ದಾಗಲು ಕೂಡ ಕೆಲವೊಂದು ಮಠಗಳಿಗೆ ಸಹಾಯ ಮಾಡಿದ್ದಾರೆ. ಇವರು ಅತಿ ಹೆಚ್ಚು ಮಠಗಳಿಗೆ ಸಹಾಯ ಮಾಡಿದ್ದಾರೆ. ಬಹಳ ಸಂತೋಷ, ಅದರ ಬಗ್ಗೆ ಯಾವುದೇ ರೀತಿಯ

ಚಕಾರ ಅಥವಾ ವಿರೋಧ ನಮ್ಮದ್ಯಾರದೂ ಇಲ್ಲ. ಎಲ್ಲರೂ ಹೇಳುವಾಗ ಏನು ಹೇಳಿದರು ಎಂದರೆ, ನೀವು ಕೊಡುತ್ತಿರುವುದು ಸ್ವಾಗತಾರ್ಹ, ಉಳಿದವರಿಗೂ ಕೊಡಿ, ಆದ್ದರಿಂದ ಉಳಿದ ಮಠಗಳಿಗು ಕೂಡ ನೀವು ಕೊಡುವುದರ ಮೂಲಕ ಅವರಿಗು ಕೂಡ ನೀವು ಸಮಾಜದಲ್ಲಿ ನಾವು ಜಾತ್ಯತೀತವಾಗಿ ನಡೆದುಕೊಳ್ಳುತ್ತೇವೆ ಎನ್ನುವುದನ್ನು ಇವತ್ತು ತೋರಿಸಬೇಕು. ಈಗಾಗಲೇ ನೀವು ತೋರಿಸಿದ್ದೀರಿ. ಇಲ್ಲವೆಂದು ನಾನು ಹೇಳುತ್ತಿಲ್ಲ.

ಡಾ : ಕೆ. ಅನ್ನದಾನಿ (ಮಳವಳ್ಳಿ) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಆಂಜನೇಯರವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ನಾನು ಕೂಡ ನಮ್ಮ ಜಂಟಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಅದೇ ವಿಚಾರವನ್ನು ಸ್ಪಷ್ಟವಾಗಿ ಹೇಳಿದ್ದೇನೆ. ಯಾವುದೇ ಮಠ ಮಾನ್ಯಗಳಿಗೆ ಹಣದ ಸಹಾಯವನ್ನು ಮಾಡಲಿಕ್ಕೆ ನಮ್ಮ ವಿರೋಧವಿಲ್ಲ. ಕೇವಲ ಆ ಮಠಗಳಿಗೆ ಮಾತ್ರ ಕೊಟ್ಟಿದ್ದನ್ನು ನಾವು ಪ್ರಶ್ನೆ ಮಾಡಿದೆವು. ಎಲ್ಲಾ ಮಠಗಳಿಗೂ ಕೂಡ ನೀವು ಸಹಾಯ ಮಾಡಬೇಕು. ಹಿಂದುಳಿದ ವರ್ಗಗಳ ಮಠಗಳು ಕೂಡ ಇವೆ, ದಲಿತರ ಮಠಗಳಿವೆ, ಇತರರ ಮಠಗಳೂ ಇವೆ. ಆ ಮಠಗಳೂ ಸೇರಿದಂತೆ ಆರ್ಥಿಕವಾಗಿ ಹಿಂದುಳಿರತಕ್ಕಂಥ ಮಠಗಳಿಗೆ ಸಹಾಯ ಮಾಡಿ ಎಂದು. ನಾವು ಕೇಳಿದ್ದೆವು.ಅದು ತಪ್ಪು ಅರ್ಥದಲ್ಲಿ ಬೇರೆ ಬೇರೆ ರೀತಿಯಲ್ಲಿ ವ್ಯಾಖ್ಯಾನವಾಗುತ್ತಿದೆ, ಚರ್ಚೆಯಾಗುತ್ತಿದೆ. ಎಲ್ಲಾ ಮಠಗಳಿಗೂ ಕೊಡಿ, ನಮಗೆ ಬಹಳ ಸಂತೋಷ, ಆದರೆ ಬೇರೆ ಹಿಂದುಳಿದ ಮತ್ತು ಬಹಳ ಕ್ಲಿಷ್ಟಕರವಾದಂತಹ ಪರಿಸ್ಥಿತಿಯನ್ನು ಇದುರಿಸತಕ್ಕಂಥ ಮಠಗಳಿಗೂ ಕೊಡಿ. ಅದರ ಜೊತೆಗೆ ಬಡ ಮಕ್ಕಳಿಗಾಗಿ ನಡೆಸುತ್ತಿರುವ ಮಠಗಳಿಗು ಕೂಡ ಸ್ವಲ್ಪ ಸಹಾಯ ಕೊಡಿ ಎನ್ನುವುದು ನಮ್ಮ ಅಭಿಪ್ರಾಯವಾಗಿದೆ.

ಛೇರ್ಮನ್ : ಮಾನ್ಯ ಆಂಜನೇಯರವರೆ, ತಮ್ಮ ಸಮಯ ವ್ಯಯವಾಗುತ್ತಿದೆ. ನಿಮ್ಮ ಸಮಯ ಬಹಳ ಮುಖ್ಯ.

ಶ್ರೀ ಹೆಚ್. ಆಂಜನೇಯ : ಮಾನ್ಯ ಅಧ್ಯಕ್ಷರೆ, ಇವತ್ತು ಅಂಬೇಡ್ಕರ್ ಮತ್ತು ದಲಿತರ ಬಗ್ಗೆಯೂ ಬಜೆಟ್ ನಲ್ಲಿಪ್ರಸ್ತಾಪ ಮಾಡಿದ್ದಾರೆ. ಗದಗ್ ನಲ್ಲಿ ಕಟ್ಟಿಸುತ್ತಿರುವ ಅಂಬೇಡ್ಕರ್ ಭವನಕ್ಕೆ ೧ ಕೋಟಿ

ರೂಪಾಯಿಗಳನ್ನು ಕೊಟ್ಟಿದ್ದೀರಿ. ಅಂಬೇಡ್ಕರ್ ಜೀವನ ಚರಿತ್ರೆ ಪುಸ್ತಕವನ್ನು ಪುನರ್ ಮುದ್ರಣ ಮಾಡಲಿಕ್ಕೆ ೫೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಹಸಿರು ಕ್ರಾಂತಿಯ ಹರಿಕಾರರಾಗಿದ್ದ ಮತ್ತು ದೇಶದ ಮಾಜಿ ಉಪ ಪ್ರದಾನಿಗಳಾಗಿದ್ದಂತಹ ಬಾಬು ಜಗಜೀವನ್ರಾಂರವರು ಹುಟ್ಟಿ ನೂರು ವರ್ಷಗಳಾಗುತ್ತಿರುವ ಸಂದರ್ಭದಲ್ಲಿ ಅವರ ಜನ್ಮ ದಿನಾಚರಣೆಯನ್ನು ಆಚರಿಸುತ್ತಿರುಆಗ ಬೆಂಗಳೂರಿನಲ್ಲಿ ೩ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಭವನವೊಂದನ್ನು ನಿರ್ಮಾಣ ಮಾಡಲಾಗುವುದೆಂದು ನೀವು ಹೇಳಿದದೀರಿ. ಅನೇಕ ರೀತಿಯಲ್ಲಿ ದಲಿತರಿಗೆ ಸವಲತ್ತು ಆಗತಕ್ಕಂಥ ಕಾರ್ಯಕ್ರಮಗಳು ನಿಮ್ಮ ಪಟ್ಟಿಯಲಿವೆ. ಮಾನ್ಯ ಹಣಕಾಸು ಸಚಿವರಲ್ಲಿ ನಾನು ಮತ್ತೊಂದು ವಿನಂತಿಯನ್ನು ಮಾಡುತ್ತಿದ್ದೇನೆ. ೨೦೦೦ ಕೋಟಿ ರೂಪಾಯಿಗಳ ಹಣವನ್ನು ನಮ್ಮ ರೈತರಿಗೆ ನೀವು ಕೊಡುತ್ತಿದ್ದೀರಿ. ಅವರ ಸಾಲ ಮನ್ನಾ ಮಾಡುತ್ತಿದ್ದೀರಿ. ಬಡ್ಡಿ ಮನ್ನಾ ಮಾಡುತ್ತಿದ್ದೀರಿ. ಅವರ ಸಾಲ ಮನ್ನಾ ಮಾಡುತ್ತಿದ್ದೀರಿ, ಬಡ್ಡಿ ಮನ್ನಾ ಮಾಡುತ್ತಿದ್ದೀರಿ. ಅದೇ ರೀತಿಯಲ್ಲಿ SC/ST Corporation ನಿಂದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರು ಪಡೆದಿರತಕ್ಕಂಥ ಸಾಲವನ್ನೂ ಮನ್ನಾ ಮಾಡಬೇಕು. ಆ ಮೊತ್ತ ಹೆಚ್ಚೇನೂ ಇಲ್ಲ. ಅದು ಸುಮಾರು ೧೦೦-೨೦೦ ಕೋಟಿ ರೂಪಾಯಿಗಳು ಆಗಬಹುದು. ಅವರ ಸಾಲವನ್ನು ಮತ್ತು ಬಡ್ಡಿಯನ್ನು ಮನ್ನಾ ಮಾಡುವು ದರ ಮೂಲಕ ಅವರಿಗು ಕೂಡ ಈ ಸಮಾಜದಲ್ಲಿ ಗೌರವಯುತವಾಗಿ ಬದುಕತಕ್ಕಂಥ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ನಿಮ್ಮಲ್ಲಿ ಪ್ರಾರ್ಥನೆ ಯನ್ನು ಮಾಡುತ್ತಿದ್ದೇನೆ. ೨೦೦೦ ಕೋಟಿ ರೂಪಾಯಿಗಳಷ್ಟು ಇವತ್ತೆನು ನೀವು ರೈತರಿಗೆ ಬಡ್ಡಿ ಮನ್ನಾ ಮಾಡುತ್ತಿದ್ದೀರಿ,...

ಶ್ರೀ ಸಿ.ಎಸ್. ಪುಟ್ಟೇಗೌಡ : ಮಾನ್ಯ ಅಧ್ಯಕ್ಷರೆ, ಎಲ್ಲರ ಸಾಲವನ್ನೂ ಮನ್ನಾ ಮಾಡುತ್ತಿದ್ದೀರಿ. ಪಾಪ! ಶಾಸಕರು ಯಾರೋ ತಬ್ಬಲಿಗಳಾಗಿ ಇರುವವರು, ಅವರ ಸಾಲವನ್ನೂ ಸಾಧ್ಯವಾದರೆ ಮನ್ನಾ ಮಾಡಿಬಿಡಿ. ಮಾಜಿ ಶಾಸಕರದು ಮತ್ತು ಹಾಲಿ ಶಾಸಕರು ಇಬ್ಬರದೂ ಮನ್ನಾ ಮಾಡಿಬಿಡಿ.

(ಗೊಂದಲ)

ಛೇರ್ಮನ್ : ಮಾನ್ಯ ಆಂಜನೇಯವರವರೆ, ತಾವು ಮಾತನಾಡಿ, ತಮ್ಮ ಸಮಯ ಮುಗಿಯುತ್ತಿದೆ. ತಾವು ಎಲ್ಲರಿಗೂ ಯೀಲ್ಡ್ ಆಗುತ್ತಾ ಕುಳಿತರೆ ತಮ್ಮ ಸಮಯ ಮುಗಿದೇ ಹೋಗುತ್ತದೆ. ನಾನು ಮಾತನಾಡಲು ಬೇರೆಯವರನ್ನು ಕರೆಯಬೇಕಾಗುತ್ತದೆ.

(ಗೊಂದಲ)

ಮಾನ್ಯ ಆಂಜನೇಯರವರೆ, ನಿಮ್ಮ ಸಮಯ ಮುಗಿಯುತ್ತಿದೆ. ತಾವು ದಯವಿಟ್ಟು ಯಾರಿಗೂ ಯೀಲ್ಡ್ ಆಗದೆ ಮಾತನಾಡುವುದನ್ನು ಮುಂದುವರೆಸಿ.

(ಅಡಚಣೆ)

ಶ್ರೀ ಹೆಚ್. ಆಂಜನೇಯ : ರೂ.೨೦೦೦ ಕೋಟಿ ರೈತರ ಸಾಲ ಮತ್ತು ಬಡ್ಡಿ ಮನ್ನಾ ಮಾಡಿದ್ದೀರಿ. ನಮ್ಮವರು, ಭೂಮಿ ಇಲ್ಲದಿರುವ ಜನರು. ಸದಾ ರೈತರ ಮನೆಯಲ್ಲೇ, ಅವರ ಹೊಲ ಗದ್ದೆಗಳಲ್ಲಿ ಕೆಲಸ ಮಾಡತಕ್ಕಂಥ ಕೃಷಿ ಕಾರ್ಮಿಕರಲ್ಲಿ ನಮ್ಮ ದಲಿತರು ಹೆಚ್ಚಿನ ಸಂಖ್ಯೆ ಯಲ್ಲಿದ್ದಾರೆ. ಅವರೆಲ್ಲರು ಕೂಡ SC/ST Development Corporation ನಿಂದ ಅಲ್ಪಸ್ವಲ್ಪ ಸಾಲ ಏನಾದರೂ ಪಡೆದಿದ್ದರೆ, ದಯವಿಟ್ಟು ಅದನ್ನೂ ಮನ್ನಾ ಮಾಡಬೇಕು. ಆ ಮೊತ್ತ ಬಹಳ ಹೆಚ್ಚೇನೂ ಆಗುವುದಿಲ್ಲ. ಅದು ಸುಮಾರು ೧೦೦-೧೫೦ ಕೋಟಿ ರೂಪಾಯಿಗಳಾಗಬಹುದು ಅಷ್ಟೆ. ದಯಮಾಡಿ ಅಂತಹ ಸಾಲ ಮತ್ತು ಬಡ್ಡಿಯನ್ನು ಕನ್ನಾ ಮಾಡಬೇಕು. ಆ ಮೂಲಕ ಇದೊಂದು ಕ್ರಾಂತಿಕಾರಕ ವಾದಂತಹ ಹೆಜ್ಜೆ ಎನ್ನುವುದನ್ನು ನೀವು ತೋರಿಸಿಕೊಡಬೇಕು. ಆ ವರ್ಗಕ್ಕು ಕೂಡ ನೀವು ಸಹಾಯ ಮಾಡಬೇಕೆಂದು ನಿಮ್ಮಲ್ಲಿ ಪ್ರಾರ್ಥನೆ ಯನ್ನು ಮಾಡಿಕೊಳ್ಳುತ್ತೇನೆ. ಇವತ್ತು ರೂ.೫೦ ಸಾವಿರ ದೇವದಾಸಿಯರಿಗೆ ಹಸು ಕೊಡುತ್ತೇನೆ ಎನ್ನುವ ಮಾತನ್ನು ಹೇಳಿದ್ದೀರಿ. ಇವತ್ತು ವೃದ್ಧಾಪ್ಯ ವೇತನ, ಅಂಗವಿಕಲರ ವೇತನವಾಗಿ ೪೦೦ ರೂಪಾಯಿಗಳನ್ನು

ಕೊಡುತ್ತಿದ್ದೀರಿ, ಅದೇ ರೀತಿಯಲ್ಲಿ ದೇವದಾಸಿಯರಿಗೆ ಕನಿಷ್ಟ ೧೦೦೦ ರೂಪಾಯಿಗಳ ಗೌರವಧನವನ್ನಾದರು ಕೂಡ ನೀವು ಕೊಡಬೇಕು. ಆ ಮೂಲಕ ಅವರು ಈ ಸಮಾಜದಲ್ಲಿ ಗೌರವದಿಂದ ಬದತಕಕಥ ಒಂದು ಅವಕಾಶ ಆ ಜನಾಂಗಕ್ಕೆ ಕೊಡಬೇಕು. ದೇವದಾಸಿಯರಲ್ಲಿ ಬಹಳಷ್ಟು ಜನ ಹಿಂದುಳಿದ ವರ್ಗಕ್ಕೆ ಮತ್ತು ದಲಿತ ವರ್ಗಕ್ಕೆ ಸೇರಿದವರಾಗಿದ್ದಾರೆ. ಯಾವುದೋ ಕಾಲದಲ್ಲಿ ಪಾಪ ಮೂಢನಂಬಿಕೆಯನ್ನು ಇಟ್ಟುಕೊಂಡು ಕೇವಲ ಹೆಸರಿನಲ್ಲಿ ಅವರು ಇವತ್ತು ದೇವದಾಸಿಯರಾಗಿ ಬದುಕುತ್ತಿದ್ದಾರೆ. ಅವರೆಲ್ಲರಿಗು ಕೂಡ ವಯಸ್ಸಾಗಿದೆ, ಮಕ್ಕಳಿದ್ದಾರೆ, ಆದರೆ ಮನೆಯಿಲ್ಲ, ಮಠವಿಲ್ಲ, ಏನೂ ಇಲ್ಲ. ಇಂತಹ ನಿರ್ಗತಿಕ ದೇವದಾಸಿಯರ ಬೇಡಿಕೆಗೆ ತಾವು ಸ್ಪಂದಿಸಬೇಕು.ಅವನಿಗೆ ಏನಾದರೂ ಮಾಡಿ ೧೦೦೦ ರೂಪಾಯಿಗಳ ಗೌರವಧನವನ್ನಾದರೂ ನೀವು ಕೊಟ್ಟಿದ್ದೇ ಆಗಿದ್ದರೆ, ಅವರು ಉತ್ತಮ ವಾದಂತಹ ಜೀವನವನ್ನು ನಡೆಸಲಿಕ್ಕೆ ಅವಕಾಶ ಕಲ್ಪಿಸಿದಂತಾಗುತ್ತದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ತಾವು ಮಂಡಿಸಿರತಕ್ಕಂಥ ಈ ಒಂದು ಬಜೆಟ್ ಅನ್ನು ನಾವು ಬಹಳ ಗೌರವಪೂರ್ವಕವಾಗಿ ಸ್ವಾಗತ ಮಾಡುತ್ತೇವೆ, ಬೆಂಬಲಿಸುತ್ತೇವೆ, ಇದು ಈ ಸರ್ಕಾರದ ಕೊನೆಯ ಬಜೆಟ್ ಅಲ್ಲ, ಇನ್ನೂ ಎರಡು ಬಜೆಟ್ ಅನ್ನು ಕೂಡ ಈ ಸರ್ಕಾರ ಮಂಡಿಸುತ್ತದೆ, ಅದು ಕೂಡ ಜನಪರವಾಗಿರುತ್ತದೆ, ಬಡವರ ಪರವಾಗಿರುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಲಿ, ನನಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ, ನಮಸ್ಕಾರ.

ಛೇರ್ಮನ್ : ಮಾನ್ಯ ಕೃಷ್ಣ ಬೈರೇಗೌಡರು ಈಗ ಬಜೆಟ್ ಮೇಲೆ ಮಾತನಾಡಬೇಕು.

(ಅಡಚಣೆ)

ಮಾನ್ಯ ಕೃಷ್ಣ ಬೈರೇಗೌಡರ ಹೆಸರನ್ನು ನಾನು ಈಗ ಕರೆದಿದ್ದೇನೆ. ಅವರು ಮಾತನಾಡುತ್ತಾರೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಬೇಕು.

ಶ್ರೀ ಸಿ.ಬಿ. ಕೃಷ್ಣ ಬೈರೇಗೌಡ [ನೇಮಗಲ್] : ಮಾನ್ಯ ಅಧ್ಯಕ್ಷರೆ, ನನಗೆ ಸಿಕ್ಕಿರುವ ಕಾಲಾವಾಶದಲ್ಲಿ ಕೃಪಿರಂಗದ ಬಗ್ಗೆ ನಾನು ಹೆಚ್ಚು ಒತ್ತನ್ನು ಕೊಡಬಯಸುತ್ತೇನೆ. ಇವತ್ತು ಕೃಪಿರಂಗ ಬಿಕ್ಕಟ್ಟಿನ ವಾತಾವರಣದಲ್ಲಿದೆ. ಬಹುಶಃ ೬೦ರ ದಶಕದಲ್ಲಿ ಅಭಾವದ ಪರಿಸ್ಥಿತಿಎ ಸಿಕ್ಕಿಹಾಕಿಕೊಂಡು ಲಕ್ಷಾಂತರ ಜನರು ಜೀವನವನ್ನು ಕಳೆದುಕೊಂಡಿದ್ದರು. ಅದಾದ ನಂತರ, ಅದೇ ರೀತಿಯ ಆದ ಗಂಭೀರವಾದ ಬಿಕ್ಕಟ್ಟನ್ನು ಇವತ್ತು ಕೃಷಿರಂಗದಲ್ಲಿ ಎದುರಿಸುತ್ತಿದ್ದೇವೆ. ಈ ಆಯವ್ಯಯದಲ್ಲಿ ೨೦೦೬-೦೭ನೇ ಸಾಲಿನಲ್ಲಿ ಉದ್ದೇಶಿತ ಗುರಿಗಿಂತ ೨೫% ರಷ್ಟು ಕಡಿಮೆಯಾಗುವ ನಿರೀಕ್ಷೆ ಇದೆ. ಎಣ್ಣೆ ಕಾಳುಗಳ ಉತ್ಪಾದನೆಯಲ್ಲಿ ಗುರಗಿಂತ ४೦% ಕಡಿಮೆಯಾಗಲಿದೆ. ಕೃಷಿ ಉತ್ಪಾದನೆಯನ್ನು ಪುನಶ್ಚೇತನಗೊಳಿಸುವ ಜವಾಬ್ದಾರಿಯನ್ನು ನಮ್ಮ ಸರ್ಕಾರ ನಿರ್ವಹಿಸಬೇಕಾಗಿದೆ. ಈ ಕಠಿಣ ಪರಿಸ್ಥಿತಿಯಿಂದ ಹೊರಬಂದು ಕೃಷಿ ಬೆಳವಣಿಗೆಯನ್ನು ಸಾಧಿಸುವುದು ಹೇಗೆ ಎನ್ನುವ ಸವಾಲು ನಮ್ಮ ಮುಂದಿದೆ ಎಂದು ಮಾನ್ಯ ಮುಖ್ಯಮಂತ್ರಗಳು, ಹಣಕಾಸಿನ ಸಚಿವರು ಬಜೆಟ್ ನಲ್ಲಿ ಹೇಳುತ್ತಾರೆ. ಜೊತೆಗೆ ಇನ್ನೊಂದು ಕಡೆ ಹೇಳುತ್ತಾರೆ, ಕೃಷಿ ವಲಯ ಮಾತ್ರ ಯಾವುದೇ ಹೂಡಿಕೆಯನ್ನು ಆಕರ್ಷಿಸಿಲ್ಲ. ಈ ಹಿನ್ನಲೆಯಲ್ಲಿ ನಾವು ಕೃಷಿ ವಲಯಕ್ಕೆ ಹೆಚ್ಚಿನ ಬಂಡವಾಳವನ್ನು ಹರಿಸಲು ಬೆಂಬಲ ನೀಡಬೇಕು. ಇದರ ಜೊತೆಗೆ ದ್ವಿತೀಯ ಮತ್ತು ಪೂರಕ ವಲಯಗಳು ಸಹ ಗ್ರಾಮೀಣ ಪ್ರದೇಶಕ್ಕೆ ವಿತರಿಸುವಂತೆ ನೋಡಿ ಕೊಳ್ಳಬೇಕೆಂದು, ಕೃಷಿ ಬಗ್ಗೆ ಸಾಕಷ್ಟು ಒತ್ತು ಕೊಟ್ಟು ಮಾತುಗಳನ್ನಾಡಿದ್ದಾರೆ. ಇವತ್ತು ನಾವು ಕಾಳು, ಅಕ್ಕಿ, ರಾಗಿ, ಗೋಧಿಯ ಉತ್ಪಾದನೆಯಲ್ಲಿ, ನಮ್ಮ ರಾಜ್ಯದಲ್ಲಿ ಸುಮಾರು ೧೧४ ಲಕ್ಷ ಟನ್ ಗಳ ಉತ್ಪಾದನೆಯನ್ನು ನಿರೀಕ್ಷಿಸಿದೆವು. ಆಗಿರತಕ್ಕಂತಹದ್ದು ೯೭.೯ ಲಕ್ಷ ಟನ್ ಉತ್ಪಾದನೆ ಅಂದರೆ ಸುಮಾರು ೧೫% ರಷ್ಟು ಕಡಿಮೆ ಆಗಿದೆ. ಸುಮಾರು ೧೮ ಲಕ್ಷ ಟನ್ ಗಳ ಎಣ್ಣೆಕಾಳುಗಳ ಉತ್ಪಾದನೆಯನ್ನು ನಿರೀಕ್ಷಿಸಿದ್ದೆ. ಆಗಿರುವುದು ೧೩.४೯ ಲಕ್ಷ ಟನ್ ಉತ್ಪಾದನೆ. ಇವತ್ತು ನಮ್ಮ ಉತ್ಪಾದನೆಯಲ್ಲಿ ಕಬ್ಬು ಬೆಳೆಯು ಸಹ ೨% ಕುಸಿದಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಹಾಲಿನ ಉತ್ಪಾದನೆಯು ಸಹ ಕುಸಿದಿರುವುದನ್ನು ಪತ್ರಿಕೆಗಳೆಲ್ಲಾ ನೋಡಿದ್ದೇವೆ. ರೇಷ್ಮೆ

ಬೆಳೆಯತಕ್ಕಂತಹವರು ನಾವು ಇನ್ನು ಸಹ ಬೇರೆ ದೇಶಗಳಿಂದ ರೇಷ್ಮೆಯನ್ನು ಆಮದು ಮಾಡಿಕೊಳ್ಳುವುದರ ಬಗ್ಗೆ ಅವಲಂಬಿಸಿದ್ದೇವೆ. ನಮ್ಮ ದೇಶದ ಮತ್ತು ರಾಜ್ಯದ ಜನಸಂಖ್ಯೆ ವರ್ಷಕ್ಕೆ ಸುಮಾರು ಶೇ. ಎರಡೂವರೆಯಷ್ಟು ಬೆಳೆಯುತ್ತಿದೆ. ಆಹಾರ ಪದಾರ್ಥಗಳಿಗೆ ಬೇಡಿಕೆ ಏನು ಹೆಚ್ಚಾಗುತ್ತಿದೆ, ಅದನ್ನು ಉಪಯೋಗಿಸತಕ್ಕಂತಹದ್ದು ಹೆಚ್ಚಾಗುತ್ತಿದೆ. Food demand as well as consumption, both are going up. ಒಂದು ಕಡೆ ಹೇಳುತ್ತಾರೆ, the consumption of pulses has grown to over 15 million tons, but India produces barely around 12 million tons. Imports are limited as few countries produce pulses. ಹೀಗಾಗಿ ಆಹಾರದ ಬೇಡಿಕೆ ಒಂದು ಕಡೆ ಜಾಸ್ತಿಯಾಗುತ್ತಿದ್ದಂತೆ ಅದರ ಉತ್ಪಾದನೆ ಕಡಿಮೆಯಾಗುತ್ತಿದೆ. ನಮ್ಮ ರಾಜ್ಯ ೧೦ ವರ್ಷಗಳ ನಂತರ ಕೃಷಿ ನೀತಿಯನ್ನು ಮತ್ತೆ ಹೊರ ತಂದಿದೆ. ೧೦ ವರ್ಷಗಳ ಹಿಂದೆ ದಿ:ಭೈರೇ ಗೌಡರು ದೇಶದಲ್ಲೆ ಪ್ರಥಮ ಭಾರಿಗೆ ಕೃಷಿ ನೀತಿಯನ್ನು ತಂದಿದ್ದರು. ಅದನ್ನು ಅನುಸರಿಸಿ ಮತ್ತೆ ಇವತ್ತು ಕೃಷಿ ನೀತಿಯನ್ನು ತಂದಿದ್ದಾರೆ. ಅದರಲ್ಲಿ ಬಹಳ ಒಳ್ಳೆಯ ಉದ್ದೇಶಗಳನ್ನಿಟ್ಟುಕೊಂಡಿದ್ದಾರೆ, ಅವನ್ನೆಲ್ಲಾ ನಾವು ಒಪ್ಪಿಕೊಳ್ಳಬೇಕಾಗಿರುವುದು. ಕೃಷಿರಂಗದಲ್ಲಿ ೪.೫%ರಷ್ಟು ಬೆಳವಣಿಕೆಯನ್ನು ಏರಿಸಬೇಕೆಂಬ ಉದ್ದೇಶವನ್ನು ಅವರು ವ್ಯಕ್ತಪಡಿಸಿದ್ದಾರೆ. ನಮ್ಮ ಸಂಪೂರ್ಣ ಕೃಷಿ ಉತ್ಪಾದನೆ ಏನಿದೆ, ೧೦ ವರ್ಷದಲ್ಲಿ ಅದನ್ನು ಡಬಲ್ ಮಾಡಬೇಕೆಂದು ಕೃಷಿ ನೀತಿಯಲ್ಲಿ ವ್ಯಕ್ತಪಡಿಸಿದ್ದಾರೆ. ನಮ್ಮ ಕೃಷಿ ಉತ್ಪಾದನೆಯಲ್ಲಿರುವ efficiency ಆಗಬಹುದು, ಅದು ಸಾಲದು, ಅದನ್ನು ಇಂಪ್ರೂವ್ ಮಾಡಬೇಕೆನ್ನುವ ಉದ್ದೇಶವನ್ನು ವ್ಯಕ್ತಪಡಿಸಿದ್ದಾರೆ. ಹಾಗು ಕೃಷಿ ಉತ್ಪನ್ನಗಳಿಗೆ value addition ಮಾಡಬೇಕೆಂದು ಹೇಳಿದ್ದಾರೆ. ಅದನ್ನು ಸಾಕಾಣಿಕೆ ಮಾಡುವುದಕ್ಕಾಗಲಿ ಅಥವಾ storage ಮಾಡುವುದಕ್ಕೆ ಹೆಚ್ಚು ಒತ್ತು ಕೊಡಬೇಕೆಂಬ ಮಾತುಗಳನ್ನು ನಾವು ಕೃಷಿ ನೀತಿಯಲ್ಲಿ ಓದಿದ್ದೇವೆ. ಆದರೆ ಇವತ್ತ ಆಗುತ್ತಿರುವುದು ಏನು? ಕೃಷಿ ಉತ್ಪಾದನೆ ದಿನದಿನಕ್ಕೆ ಕಡಿಮೆಯಾಗುತ್ತಿದೆ. ಈಗಾಗಲೆ ಅದಕ್ಕೆ ಪೂರಕವಾಗಿ ಯಾವ ರೀತಿಯಾಗಿ ಫುಡ್ ಗ್ರೇನ್ಸ್ ಕಡಿಮೆಯಾಗುತ್ತಿದೆ, ಯಾವರೀತಿ ಆಯಿಲ್

ಸೀಡ್ಸ್ ಕಡಿಮೆಯಾಗುತ್ತಿದೆ ಎಂಬ ಅಂಕಿ ಅಂಶಗಳನ್ನು ಒದಗಿಸಿಕೊಟ್ಟೆ. ಆದರು ಕೃಷಿ ಉತ್ಪನ್ನಗಳನ್ನು ಬೆಳೆಯತಕ್ಕಂತ ಪ್ರದೇಶವೇನಿದೆ, ಅದು ಕೂಡ ಇವತ್ತು ಕಡಿಮೆಯಾಗುತ್ತಿದೆ. ಡಿಮ್ಯಾಂಡ್ ಇಂಕ್ರೀಸ್ ಆಗುತ್ತಿದೆ. ಆದರೆ ಪ್ರೊಡಕ್ಷನ್ ಕಡಿಮೆಯಾಗುತ್ತಿದೆ, ಪ್ರೊಡಕ್ಷನ್ ಏರಿಯ ಸಹ ಕಡಿಮೆ ಯಾಗುತ್ತಿದೆ ಏಕೆ ಎಂಬ ಪ್ರಶ್ನೆ ಇವತ್ತು ನಮ್ಮನ್ನು ಕಾಡುತ್ತಿದೆ. ಏಕೆಂದರೆ, ನಾನೊಬ್ಬ ಸರಳ ರೈತನಾಗಿ, ಉತ್ತರವನ್ನು ಕೊಡಬಯಸುತ್ತೇನೆ. ಇವತ್ತು ಕೃಷಿರಂಗ ಆಶಾಯದಾಯಕವಾಗಿಲ್ಲ, ಕೃಷಿ ಮಾಡುವುದರಿಂದ ಜೀವನ ಸುಧಾರಿಸುವುದಕ್ಕೆ ಸಾಧ್ಯವಿಲ್ಲ. ಅದರಲ್ಲಿ ಲಾಭವನ್ನು ಗಳಿಸುವುದಕ್ಕೆ ಸಾಧ್ಯವಿಲ್ಲ ಎನ್ನುವ ಕಾರಣದಿಂದ ಇವತ್ತು ನಮ್ಮಲ್ಲಿ ಕೃಷಿ ಉತ್ಪನ್ನ ಕಡಿಮೆ ಯಾಗಿತ್ತಿದೆಯೇ ಹೊರತು ಬೇರೆ ಕಾರಣಗಳಿಂದಲ್ಲ ಎಂದು ನಾನೊಬ್ಬ ರೈತನಾಗಿ ಹೇಳುವುದಕ್ಕೆ ಬಯಸುತ್ತೇನೆ./ ರಾಗಿ ಬೆಲೆ ಎಷ್ಟು ವರ್ಷಗಳಿಂದ ನೋಡಿದರೂ ಅಷ್ಟೆ ಇದೆ. ಬತ್ತದ ಬೆಲೆ ನೋಡಿದರೆ ಸ್ವಲ್ಪ ಹೆಚ್ಚು ಕಡಿಮೆ ೨೦-೫೦ ರೂಪಾಯಿಗಳು ಜಾಸ್ತಿಯಾಗಬಹುದು, ಅದು ಸಹ ಸ್ವಲ್ಪ ಹೆಚ್ಚು ಕಡಿಮೆ ಅದೇ ಮಟ್ಟದಲ್ಲಿದೆ. ಗೋಧಿ ಬೆಲೆಯನ್ನು ನೋಡಿದರೆ, ನಾವು ಆಮದು ಮಾಡುವುದಕ್ಕೆ ಹೆಚ್ಚು ಬೆಲೆಯನ್ನು ಕೊಡುತ್ತೇವೆ. ತಮಗೆ ಗೊತ್ತಿರಬಹುದು ಸುಮಾರು ೯೫೦ ರೂಪಾಯಿಗಳನ್ನು ಕೊಟ್ಟು ಆಸ್ಟ್ರೇಲಿಯದಿಂದ ನಾಲ್ಕುವರೆ ಟನ್ ಆಮದು ಮಾಡಿಕೊಂಡಿದ್ದು ಬಹುಶಃ ಜ್ಞಾಪಿಸಿಕೊಳ್ಳಬಹುದು. ನಮ್ಮ ರೈತರಿಗೆ ನಾವೆಷ್ಟು ಕೊಡುತ್ತಿದ್ದೇವೆ? ರೂ. ೭೬೦/- ನಮ್ಮ ರೈತರಿಗೆ ಕೊಡುತ್ತೇವೆ. ಅದೂ ರೂ. ೭೦೦ ಇದ್ದದ್ದನ್ನು ದೊಡ್ಡ ಮನ್ಸು ಮಾಡಿ ರೂ.೬೦ ಜಾಸ್ತಿ ಮಾಡಿ ರೂ. ೭೬೦ ನಮ್ಮ ರೈತರಿಗೆ ಕೊಡುತ್ತೇವೆ. ಆದರೆ ಬೇರೆ ದೇಶದಿಂದ ಆಮದು ಮಾಡಿಕೊಂಡಿದ್ದಕ್ಕೆ ರೂ. ೯೦೦ ಕೊಡುತ್ತೇವೆ. ಸಕ್ಕರೆ ಬೆಲೆ ಸ್ವಲ್ಪ ಜಾಸ್ತಿಯದ ತಕ್ಷಣ ನಾವು ಬೇರೆ ದೇಶದಿಂದ ಆಮದು ಮಾಡಿಕೊಳ್ಳುವುದಕ್ಕೆ ಹೊರಡುತ್ತೇವೆ. OGLಗೆ restriction ಇದೆ. ಅದನ್ನು relax ಮಾಡಿ extraordinary order ಅನ್ನು promulgate ಮಾಡಿ ಅವುಗಳನ್ನು ಉಪಯೋಗಿಸಿಕೊಂಡು, ನಮ್ಮಲ್ಲಿರತಕ್ಕಂತಹ ಕಾನೂನುಗಳನ್ನು ಡೈಲೂಟ್ ಮಾಡಿ, ತತ್‌ಕ್ಷಣ ಬೇರೆ ದೇಶದಿಂದ ಇಂಪೋರ್ಟ್ ಮಾಡುತ್ತೇವೆಯೆ ಹೊರತು, ನಮ್ಮ ರೈತರಿಗೆ

ಬೆಲೆ ಕೊಡುವುದಕ್ಕೆ ತಯಾರಿಲ್ಲ. ಏಕೆ ಸ್ವಾಮಿ, ರೈತರನ್ನು ಕಂಡರೆ ಎಲ್ಲರಿಗು ಇಷ್ಟೊಂದು ತಾತ್ಸಾರ? ರೈತ ಏನು ಅನ್ಯಾಯ ಮಾಡಿದ್ದಾನೆ? ಈ ಕವರ್ ಅನ್ನು ನಾನು ತಮಗೆ ತೋರಿಸುವುದಕ್ಕೆ ಬಯಸುತ್ತೇವೆ. ದಯವಿಟ್ಟು ಗಮನಿಸಬೇಕು. 'Prices on fire' ಎಂದು ಹೇಳುತ್ತಾರೆ. ಮಿಡ್ಲ್ ಕ್ಲಾಸ್ ಗೆ ಕೆಲವೊಂದು ಉತ್ಪನ್ನಗಳ ಬೆಲೆ ಸ್ವಲ್ಪ ಜಾಸ್ತಿಯಾಗುತ್ತಿದ್ದಂತೆ ಆ ಕಾವನ್ನು ಮಿಡ್ಲ್ ಕ್ಲಾಸ್ ನಿಂದ ಬರುವ ಕಾವನ್ನು ತಡೆಯುವುದಕ್ಕಾಗದೆ ರೈತರನ್ನು ತುಳಿಯುವುದಕ್ಕೆ ನಾವೇನು ಬೇಕಾದರು ಮಾಡುವುದಕ್ಕೆ ತಯಾರಿದ್ದೇವೆ, ಹೌದೋ ಇಲ್ಲವೊ ? ಇದು ಯಾವುದೆ ಪಕ್ಷವೆಂದಿಲ್ಲ, ಎಲ್ಲಾ ಪಕ್ಷದವರು ಕೂಡ ಇದೇ ಕೆಲಸವನ್ನು ಮಾಡುತ್ತಿರುವುದು. ಈ ಒಂದು ಮ್ಯಾಗಜಿನ್ ನಲ್ಲಿ ಎಲ್ಲಾ ಪಕ್ಷದ ಎಲ್ಲಾ ಮುಖ್ಯಮಂತ್ರಿಗಳನ್ನು ಕೇಳಿದ್ದಾರೆ. ನಮ್ಮ ಮುಖ್ಯಮಂತ್ರಿಗಳನ್ನು ಕೇಳಿದಾಗ, we are trying to help stablilize vegetable prices so that they don't affect the public ಎಂದು ಹೇಳುತ್ತಾರೆ. ಯಾರು ಸ್ವಾಮಿ ಪಬ್ಲಿಕ್? ಬೆಳೆಯತಕ್ಕಂತಹ ೬೫% ಜನರೇನು ಹಳ್ಳಿಗಳಲ್ಲಿದ್ದಾರೆ. ಅವರು ಪಬ್ಲಿಕ್ ಅಲ್ಲ ಕೊಂಡುಕೊಳ್ಳುವ ೨೫% ಜನರಿದ್ದಾರಲ್ಲ ಅವರು ಮಾತ್ರ ಪಬ್ಲಿಕ್. ಹಿಂದೆ ಈ ದೇಶದಲ್ಲಿ ಬೆಳೆಯತಕ್ಕಂತಹ ರೈತನಿಗೆ ಎಂತಹ ಮರ್ಯಾದೆ ಇತ್ತು? ಇವತ್ತು ಆ ರೈತನನ್ನು ತುಳಿಯುವುದಕ್ಕೆ ಬೇಕಾದಷ್ಟು ಮಾಡುತ್ತಿರುವುದು ಸ್ಪಷ್ಟವಾಗಿದೆ. ಸ್ವಲ್ಪ ಬೆಲೆ ಜಾಸ್ತಿಯಾದ ತಕ್ಷಣ ನಾವು ಏನು ಮೈಯೆಲ್ಲಾ ಕೆರೆದುಕೊಂಡು, ಹೇಗೆ ಅದನ್ನು ಕಡಿಮೆ ಮಾಡುವುದೆಂದು ರಾಜ್ಯ ಸರ್ಕಾರವಿರಬಹುದು, ಕೇಂದ್ರ ಸರ್ಕಾರವಿರಬಹುದು, ಎಲ್ಲರು ತಲೆಕೆಡಿಸಿಕೊಳ್ಳುತ್ತಾರೆ. ಸ್ವಾಮಿ ಅಧ್ಯಕ್ಷರೆ, ನಾನು ಕೇಳಬಯಸುತ್ತೇನೆ, ತಮಗೂ ಸಾಕಷ್ಟು ಅನುಭವವಿದೆ. ಕಳೆದ ಒಂದೂವರೆ ವರ್ಷದಲ್ಲಿ ಸ್ಟೀಲ್ ಬೆಲೆ ಎಷ್ಟು ಜಾಸ್ತಿಯಾಗಿದೆ? ಸುಮಾರು ಒಂದು ಟನ್ ಗೆ ರೂ.೧೯,೦೦೦ ಇದ್ದದ್ದು ರೂ.೩೦,೦೦೦ ಮೇಲೆ ಹೋಗಿಲ್ಲವೇ? ಕಾರಣ ಏನೀರಬಹುದು ಹೇಳಿ. ಇಲ್ಲಿ inflation ಇಲ್ಲವೇ? ಸಿಮೆಂಟ್ ಬೆಲೆ. ೧೩೦ ರೂಪಾಯಿ ಇದ್ದದ್ದು ೨೫೦ ರೂಪಾಯಿಗಳಿಗೆ ಹೋಗಿಲ್ಲವೇ? ಅವರ ಮೇಲೆ ಏಕೆ ಕಣ್ಣು ಬೀಳಲಿಲ್ಲ. ರೈತ ಇವತ್ತು fertilizers ಕೊಡುಕೊಳ್ಳುತ್ತಾರೆ. ಸಿಮೆಂಟ್ ಕೊಂಡುಕೊಳ್ಳು

ತ್ತಾರೆ. Steel ಕೊಂಡುಕೊಳ್ಳುತ್ತಾರೆ. ಈ ಎಲ್ಲಾ ಬೆಲೆಗಳು ಜಾಸ್ತಿಯಾಗ ಬಹುದು. ರೈತ ಏನೇನು ಸಾಮಗ್ರಿಗಳನ್ನು ಕೊಂಡುಕೊಳ್ಳುತ್ತಾನೆ, ಈ ಎಲ್ಲಾ ಬೆಲೆಗಳು ಜಾಸ್ತಿಯಾಗಬಹುದು. ಆದರೆ ರೈತ ಉತ್ಪಾದನೆ ಮಾಡಿದ್ದು ಮಾತ್ರ ಜಾಸ್ತಿಯಾಗಬಾರದು ಇದು ನ್ಯಾಯವೇ ಸ್ವಾಮಿ. ನಾವು ಹೇಳಿಕೊಳ್ಳುವುದು ಏನು? ರೈತರು, ರೈತರು, ರೈತನಿಗೋಸ್ಕರವಿರತಕ್ಕಂತಹ ಸರ್ಕಾರ. ಇದನ್ನು ಪಕಾತೀತವಾಗಿ ಹೇಳುತ್ತೇನೆ. ಎಲ್ಲರೂ ಹೇಳುವುದು ಅದನ್ನೆ ಇಲ್ಲಿಂದ ದೆಹಲಿಯವರೆಗೂ ಎಲರೂ ಹೇಳುವುದು ಅದನ್ನೆ ನಾವು ರೈತರ ಪರ, ರೈತರ ಪರ ಎಂದು ಹೇಳಿ ಮಾಡುವುದು ಏನು? ರೈತ ಎಲ್ಲಿಯಾದರೂ ಒಂದಿಷ್ಟು ಸಂಪಾದನೆ ಮಾಡಿಕೊಳ್ಳಬೇಕೆಂದು ಹೇಳಿದರೆ, ಅವನ ಹೊಟ್ಟೆ ಮೇಲೆ ತಣ್ಣೀರು ಬಟ್ಟೆಯನ್ನು ಹಾಕಿಕೊಳ್ಳಬೇಕಾಗುತ್ತದೆ. ಇದನ್ನು ಎಲ್ಲರು ಸೇರಿ ಮಾಡುತ್ತಿದ್ದಾರೆ. Steel price ಏತಕ್ಕೆ ಸ್ವಾಮಿ control ಮಾಡಲಿಲ್ಲ. Import ಮೇಲೆ ಏಕೆ ಸ್ವಾಮಿ restriction ಹಾಕಲಿಲ್ಲ. ಸಿಮೆಂಟ್ manufactures ಸಿಮೆಂಟ್ ಬೆಲೆ ಜಾಸ್ತಿಯಾದರೆ ಅವರನ್ನು negotiation ಗೆ ಕರೆಯುತ್ತಾರೆ. ಭಾರತ ಸರ್ಕಾರದವರು, ಅವರು ದಿಕ್ಕರಿಸಿ ಹೇಳುತ್ತಾರೆ ನೇರವಾಗಿ, ನಾವು ಕಡಿಮೆ ಮಾಡುವುದಿಲ್ಲ ನೀವು ಏನು ಮಾಡಿಕೊಳ್ಳುತ್ತೀರೋ ಮಾಡಿಕೊಳ್ಳಿ ಅಂತ, ಸೀಮೆಂಟ್ manufactures ನೇರವಾಗಿ ಹೇಳುತ್ತಾರೆ ಸಿಮೆಂಟ್ manufactures. ಕೇಂದ್ರ ಬಜೆಟ್ ನಲ್ಲಿ ಅವರಿಗೆ ತೆರಿಗೆ ವಿನಾಯ್ತಿಯನ್ನು ಕೊಟ್ಟರು ಸಹ ಅದರಿಂದ ನಾವು ಗ್ರಾಹಕರಿಗೆ ಅದನ್ನು ಕೊಡುವುದಿಲ್ಲವೆಂದು ಅವರು ಹೇಳಿದರೆ ಅದಕ್ಕೆ ನಾವು ಇವತ್ತು ಒಪ್ಪಿಕೊಳ್ಳಬೇಕು. ರೈತನಿಗೆ ಆ ತರಹದ ಹಕ್ಕು ಇದೆಯೇ? ನಾವು ಕೊಂಡುಕೊಳ್ಳತಕ್ಕಂತದ್ದು ಏನೇನು ಇದೆ, ಅದಕ್ಕೆಲ್ಲದ್ದಕ್ಕೂ ಬೆಲೆ ನಿಗಧಿಯಾಗಿದೆ ಬೆಲೆ. ಜಾವು ಮಾರಾಟ ಮಾಡುವುದಕ್ಕೆ ಮಾತ್ರ ಬೆಲೆ ನಿಗಧಿಯಾಗಿಲ್ಲ. ನಾವು ಕೊಂಡುಕೊಳ್ಳುವವರು ಕೇಳಿದ ಬೆಲೆಗೆ ಮಾರಾಟ ಮಾಡಬೇಕು. ಈ ಪರಿಸ್ಥಿತಿ ನಮ್ಮಲ್ಲಿ ಕಾಡುತ್ತಿದೆ. ಇಂತಹ ಒಂದು ಹಿನ್ನಲೆಯಲ್ಲಿ ನಾವು ಬೆಳೆಯತಕ್ಕಂತಹ ಉತ್ಪನ್ನಗಳಿಗೆ ಒಳ್ಳೆಯ ಮಾರುಕಟ್ಟೆಯನ್ನು ಕೊಡತಕ್ಕಂತಾದ್ದು ಆಗಲಿ ಒಳ್ಳೆಯ ಬೆಲೆಗಳನ್ನು ಕೊಡುವುದಕ್ಕೆ ಈ ಬಜೆಟ್ ನಲ್ಲಿ ಏನು ವ್ಯವಸ್ಥೆ ಮಾಡಿದ್ದೀರಿ? ಎಂದು

ನಾನು ಕೇಳುವುದಕ್ಕೆ ಬಯಸುತ್ತೇನೆ. ಏನೂ ಇಲ್ಲ. ಇವತ್ತು ನಮ್ಮ ಜಿಲ್ಲೆಯಲ್ಲಿ ನಾವು ಸಾಕಷ್ಟು ಮಾವು ಬೆಳೆಯುತ್ತೇವೆ. ಹಾಲು ಉತ್ಪತ್ತಿ ಮಾಡುತ್ತೇವೆ. ಅದಕ್ಕೇನಾದರೂ ನೀವು ಉತ್ತಮ ಬೆಲೆ ಕೊಡಲಿಕ್ಕೆ ವ್ಯವಸ್ಥೆ ಮಾಡಿದ್ದೀರಾ? ರೇಷ್ಮೆ ಬೆಲೆ ಸುಧಾರಣೆ ಮಾಡುವುದಕ್ಕೆ ಏನಾದರೂ ಮಾಡಿದ್ದೀರಾ? ಅಕ್ಕಿ ಬೆಲೆ ಸುಧಾರಣೆ ಮಾಡುವುದಕ್ಕೆ ಏನಾದರೂ ಮಾಡಿದ್ದೀರಾ? ನಾನು ಏಕೆ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆಂದರೆ ನಮ್ಮ ಉತ್ಪಾದನೆಯನ್ನು ಜಾಸ್ತಿ ಮಾಡಬೇಕಾದರೆ ಉತ್ಪಾದನೆಯಲ್ಲಿರತಕ್ಕಂತಹ efficiency ಜಾಸ್ತಿ ಮಾಡಬೇಕಾದರೆ ಏನೂ ಬೇಕಾಗಿಲ್ಲ ರೈತನಿಗೆ ಉತ್ತಮವಾದಂತಹ ಬೆಲೆ ಕೊಡಿ. ರೈತನೆ ಇವತ್ತು ಎಲ್ಲಾ ಸಾಧನೆಗಳನ್ನು ಮಾಡುತ್ತಾನೆ. ಯಾವಾಗ ನೀವು ಬೆಲೆ ಕೊಡುವುದಿಲ್ಲವೋ ಅದುವರೆವಿಗೂ ನಾವು ಏನೂ ಒಂದು ಬಿಕ್ಕಟ್ಟಿನ ವಾತಾವರಣದಲ್ಲಿ ಸಿಕ್ಕಿ ಹಾಕಿಕೊಂಡಿದ್ದೇವೆ ಅದು ಹಾಗೆಯೇ ಮುಂದುವರೆಯುತ್ತದೆ. ಮಿನಿಮಮ್ ಸಪೋರ್ಟ್ ಪ್ರೈಸ್ ಅಂತ ಕೊಡುತ್ತಾರೆ. ಏಕೆಂದರೆ ಬಜೆಟ್‌ಗೂ ಇದಕ್ಕೂ ಏನು ಸಂಬಂಧ ಎಂದು ಕೇಳಬಹುದು. Minimum support price ಏನು ಕೊಡುತ್ತಾರೆ. ಭತ್ತಕ್ಕೆ ಆಗಬಹುದು, ಮೇಜ್, ಜೋವರ್, ಮದುರಾ, ರಾಗಿ ಉರದು, ತೂರ್ ದಾಲ್ ಹೋದ ವರ್ಷ ಏನು ಬೆಲೆ ಇತ್ತು, ಈ ವರ್ಷವೂ ಅದೇ ಬೆಲೆ ಪ್ರಕ್ಯೋರ್‌ಮೆಂಟ್ ಪ್ರೆಸ್. Inflation ಮಾತ್ರ ಇವತ್ತು ೬% ಗೆ ಹೋಗಿದೆ. ನಮ್ಮ input cost ಜಾಸ್ತಿಯಾಗಿದೆ. ಆದರೆ ನಾವು ಕೊಡತಕ್ಕಂತಹ ಕನಿಷ್ಟ ಸಾಮಾನ್ಯ ಬೆಲೆ ಏನಿದೆ, ಹೋದ ವರ್ಷವೂ ಅಷ್ಟೆ ಈ ವರ್ಷ ಅಷ್ಟೆ. ಮಧ್ಯದಲ್ಲಿ ರೈತ ತನ್ನನ್ನು ತಾನೆ ಹಿಂಡಿಕೊಂಡು ಜೀವನ ಮಾಡಿ ಈ ಬೆಳೆಗಳನ್ನು ಬೆಳೆಯಬೇಕಾ ಎನ್ನುವುದನ್ನು ನಾವು ಒಪ್ಪಿಕೊಂಡಿಲ್ಲ. ನಾನು ಹಿಂದೆ ಒಂದು ಸಲ ಮಾತನಾಡುವಾಗ ಹೇಳಿದೆ. ಮುಂದಿನ ೧೦ ವರ್ಷಗಳಲ್ಲಿ ಚೈನಾ ದೇಶದಲ್ಲಿ ಮತ್ತು ಆಫ್ರಿಕಾ ಖಂಡದಲ್ಲಿ ಸಾಕಷ್ಟು ಆಹಾರ ಪದಾರ್ಥಗಳಿಗೆ ಬೇಡಿಕೆ ಬರುತ್ತದೆ. China is going to become a net importer of food products ಆ ಅವಕಾಶವನ್ನು ನಮ್ಮ ದೇಶ ಬಳಸಿಕೊಂಡರೆ ಸಾಕಷ್ಟು ಆದರಿಂದ ಅನುಕೂಲವಾಗುತ್ತದೆ. ಇವತ್ತು ನಾವು ಯಾವ ದಿಕ್ಕಿನಲ್ಲಿ ಹೊರಟಿದ್ದೇವೆ? ೬೦ ದಶಕದಲ್ಲಿದ್ದಂತಹ ಭೀಕರ

ಬರಗಾಲವನ್ನು ಎದುರಿಸತಕ್ಕಂತಹ ಪರಿಸ್ಥಿತಿಗೆ ನಾವು ತರುತ್ತಿದ್ದೇವೆ. ಏಕೆಂದರೆ demand increase ಆಗುತ್ತಿದೆ. Production ಕಡಿಮೆಯಾಗುತ್ತಿದೆ. Import ಮಾಡುವುದಕ್ಕೆ ಹೋದರೆ ಎಲ್ಲಾ ಕಡೆ import ಗೆ ಬಿಕ್ಕಟ್ಟು ಇದೆ. ಕೊನೆಗೆ ನಮ್ಮ ಆಹಾರ ಪದಾರ್ಥಗಳನ್ನು ಒದಗಿಸುವುದಕ್ಕೆ ಆಗದೇ ಇರತಕ್ಕಂತಹ ಪರಿಸ್ಥಿತಿಗೆ ನಾವು ಮುಟ್ಟುತ್ತಿದ್ದೇವೆ. ಇದೆಲ್ಲದ್ದಕ್ಕೂ ಬಜೆಟ್ ನಲ್ಲಿ ಏನು ತಾವು ಹೇಳಿರುವುದು? ಸಾಲ ಮನ್ನಾ ಮಾಡಿದ್ದೇವೆ. ರೈತರಿಗೆ ಮಹಾ ಅನುಕೂಲ ಮಾಡಿದ್ದೇವೆಂದು ಹೇಳಿದ್ದೀರಿ. ನಾನು ಧೈರ್ಯವಾಗಿ ಹೇಳುತ್ತೇನೆ. ಯಾರು ಏನೇ ತಿಳಿದುಕೊಳ್ಳಲಿ. ನಾನು ಏನಾದರೂ ಹೇಳಿದರೆ ಚಾಲೆಂಜ್ ಮಾಡುತ್ತಾರೆ. ಜನರ ಹತ್ತಿರ ಹೋಗಿ ಮಾತನಾಡಿ ಅಂತ. ಇದನ್ನು ತಾವು ಮಾಡಿರತಕ್ಕಂತಾದ್ದು ರಾಜಕೀಯ ಉದ್ದೇಶಗಳಿಗೆ ಹೊರತು ರೈತರನ್ನು ರೈತರ ಬಾಳನ್ನು ಕೃಷಿ ರಂಗವನ್ನು ಅಭಿವೃದ್ಧಿ ಮಾಡುವುದಕ್ಕೆ ತಾವು ಮಾಡಿಲ್ಲವೆನ್ನುವುದನ್ನು ನಾನು ಹೇಳುತ್ತೇನೆ. ಏಕೆಂದರೆ ಇವತ್ತು ರೈತನಿಗೆ ೪% ದರದಲ್ಲಿ ಸಾಲ ಸಿಗುತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಅಧ್ಯಕ್ಷರು ಅಧ್ಯಕ್ಷ ಪೀಠಕ್ಕೆ ಆಗಮಿಸಿದರು)

ಸಾಲವನ್ನು ಯಥೇಚ್ಚವಾಗಿ ಕೊಡಬೇಕೇ ಹೊರತು ಈ ರೀತಿ ಮಾಡಿರುವುದರಿಂದ ರೈತನಿಗೆ ಮುಂದಿನ ದಿನಗಳಲ್ಲಿ ಸಾಲ ಸಿಗದಂತಾಗುತ್ತದೆ. ನಮ್ಮ ಸಹಕಾರ ಸಂಘಗಳೆಲ್ಲಾ ಹಾಳಾಗುತ್ತವೆ. ರೈತರಿಗೆ ಸಹಕಾರ ಸಂಘಗಳು ಹಾಳಾದಾಗ ಲೇವಾದೇವಿಗಾರರ ಹತ್ತಿರ ಹೋಗಿ ತಿಂಗಳಿಗೆ ೫-೬ ರೂಪಾಯಿ ಬಡ್ಡಿ ದರದಲ್ಲಿ ಸಾಲವನ್ನು ತೆಗೆದುಕೊಂಡು ಬಂದು ಆ ಸಾಲವನ್ನು ತೀರಿಸುವುದಕ್ಕೆ ಆಗದೇ ನೇಣು ಹಾಕಿಕೊಳ್ಳತಕ್ಕಂತಹ ಪರಿಸ್ತಿತಿಗೆ ರೈತರನ್ನು ನೀವು ತರುತ್ತಿದ್ದೀರಿ. ಸಾಲ ಮನ್ನಾ ಮಾಡಿ; ಬೇಡವೆಂದು ನಾನು ಹೇಳುವುದಿಲ್ಲ. ಆದರೆ ರೈತರಿಗೆ ೪% ನಲ್ಲಾದರೂ ಆಗಬಹುದು ಅವರಿಗೆ ಉತ್ತಮ ಸಾಲವನ್ನು ಸೌಲಭ್ಯವನ್ನು ಕೊಡತಕ್ಕಂತಹ ಕೆಲಸವನ್ನು ಇವತ್ತು ಮಾಡದೇ ಇರುವುದರಿಂದ ಬಿಕ್ಕಟ್ಟು ಇನ್ನಷ್ಟು ಉಲ್ಬಣಗೊಳ್ಳುತ್ತದೆ ಎನ್ನತಕ್ಕಂತಹ ಮಾತನ್ನು ಹೇಳಿ, ಹಾಗೆಯೇ ಕೃಷಿ ರಂಗಕ್ಕೆ ಏನಿದೆ ಅಂತ ಹೇಳಿ ಮುಂದಕ್ಕೆ ಒಂದೆರಡು ಪುಟಗಳನ್ನು

ರಿತುವಿದರೆ ಸಾಕಷ್ಟುನೀರಾವರಿ ಬಗ್ಗೆ ಹೇಳಿದ್ದಾರೆ. ನೀರಾವರಿಗೂ ಕೃಷಿಗೂ ಅನ್ಯೋನ್ಯ ಸಂಬಂಧವಿದೆ, ಕೃಷಿಯನ್ನು ನಾವು ಅಭಿವೃದ್ಧಿಪಡಿಸಬೇಕಾದರೆ ನೀರಾವರಿ ಅಭಿವೃದ್ಧಿಪಡಿಸಬೇಕಾಗುತ್ತದೆ. ಇವತ್ತು ಈ ಬಾರಿಯ ಬಜೆಟ್ ನಲ್ಲಿ ರೂ. ೩೧೪೫ ಕೋಟಿ ನೀರಾವರಿಗೆ ಇಟ್ಟಿದದಾರೆ. ಹೋದ ವರ್ಷಕ್ಕಿಂತ ಹಿಂದೆ ಹೋಗುವುದು ಬೇಡ. ಹೋದ ವರ್ಷದ ಬಜೆಟ್ ಹೇಳುತ್ತೇನೆ. ೨೦೦೬-೦೭ ನೇ ಸಾಲಿನ ಬಜೆಟ್ ನಲ್ಲಿ ಯೋಜನಾ ಗಾತ್ರ ರೂ. ೧೬,೧೬೬ ಕೋಟಿ ಇತ್ತು. ಆ ರೂ. ೧೬,೧೬೬ ಕೋಟಿಯಲ್ಲಿ ರಊ. ೪,೨೮೦ ಕೊಟಿ ಇಟ್ಟಿದ್ದರು, ನೀರಾವರಿಗೆ. ಶೇಕಡ ೨೬.೪೮ರಷ್ಟು ಇಟ್ಟಿದ್ದರು. ಈ ಬಾರಿ ಎಷ್ಟು ಶೇಕಡ ೧೭.೬೯. ನೀವು ಏನಾದರೂ ನಿಜವಾಗಿ ರೈತರನ್ನು ಅಭಿವೃದ್ಧಿಪಡಿಸಬೇಕು. ಕೃಷಿರಂಗಕ್ಕೆ ನೀವು ಪೂರಕವಾಗಿ ಕೆಲಸ ಮಾಡಬೇಕು ಎನ್ನುವಂತಹ ಉದ್ದೇಶ ನಿಮಗೆ ಇದ್ದಿದ್ದರೆ, ಕನಿಷ್ಟ ಹೋದ ವರ್ಷ ಯೋಜನಾ ಗಾತ್ರವಲ್ಲಿ ಏನು ಶೇಕಡವಾರು ನೀರಾವರಿಗೆ ಮೀಸಲಿಟ್ಟಿದ್ದರೋ ಅಷ್ಟನ್ನಾದರೂ ನೀವು ಇಡಬೇಕಾಗಿತ್ತು. ನಿಜವಾಗಲೂ ನಿಮಗೆ ನೈತಿಕವಾಗಿ ಕೃಷಿ ರಂಗದ ಬಗ್ಗೆ ಕಾಳಜಿ ಇದ್ದಿದ್ದರೆ, ಆ ಶೇಕಡ ಇಡಬೇಕಾಗಿತ್ತು. ಅಷ್ಟು ಇಟ್ಟಿದ್ದರೆ ಸುಮಾರು ರೂ. ೪,೭೦೮ ಕೋಟಿಯಾಗುತ್ತಿತ್ತು. ಹೋದ ವರ್ಷ ಇಟ್ಟಂತಹ ಶೇಕಡವಾರು ಹಲವನ್ನು ನೀವು ಇಟ್ಟಿದ್ದರೆ ರೂ. ೪೭೦೦ ಚಿಲ್ಲರೆ ಕೋಟಿಯಗುತ್ತಿತ್ತು. ಅಲ್ಲಿಗೆ ನೀವು ನಿಜವಾಗಿಯೂ ನೀರಾವರಿ ರಂಗಕ್ಕೆ ಸುಮಾರು ರೂ. ೧,೫೬೩ ಕೋಟಿ ರೂಪಾಯಿನಷ್ಟು ಖೋತ ಮಾಡಿದ್ದೀರಿ. ಹೋದ ವರ್ಷದ ಬಜೆಟ್‌ಗೂ ಈ ವರ್ಷದ ಬಜೆಟ್‌ಗೂ ಹೇಳಬೇಕಾದರೆ ರೂ. ೧,೫೬೩ ಕೋಟಿ ರೂಪಾಯಿ ಖೋತ ಮಾಡಿದ್ದೀರಿ. ನೀರಾವರಿಗೆ ತಾವು ಅನ್ಯಾಯ ಮಾಡಿದ್ದೀರಿ. ಕೃಷಿಗೆ ನೀವು ಸಹಾಯ ಮಾಡಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಉತ್ತರ ಕೊಡುವಾಗ ನೀವು ಮತ್ತು ಮಾನ್ಯ ಸಿದ್ದರಾಮಯ್ಯನವರು ಹೇಳಿದ ಮಾತುಗಳನ್ನು ವಾಪಸ್ಸು ತೆಗೆದುಕೊಳ್ಳಬೇಕು, ಆ ರೀತಿ ಉತ್ತರ ಕೊಡುತ್ತೇನೆ.

ಶ್ರೀ ಕರಷ್ಣ ಬೈರೇಗೌಡ : ನಾನು ಹೇಳುತ್ತಾ ಇರತಕ್ಕಂತಾದ್ದು ಹೋದ ವರ್ಷದ ಬಜೆಟ್, ಪುಸ್ತಕ ಇಲ್ಲಿಯೇ ಇದೆ.

ಶ್ರೀ ಸಿದ್ದರಾಮಯ್ಯ : ನಾಳೆ ಅದನ್ನು prove ಮಾಡಿ ತೋರಿಸುತ್ತೆನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಎಷ್ಟು ಕೊಟ್ಟಿದ್ದೇನೆಂದು ನಾನು prove ಮಾಡುತ್ತೇನೆ.

ಶ್ರೀ ಸಿದ್ದರಾಮಯ್ಯ : ನಮಗೇನೆಂದರೆ ತಾವು ಮಾತೆತ್ತಿರೆ ನಾನು ರಾಜೀನಾಮೆ ಕೊಡುತ್ತೇನೆಂದು ಹೇಳುತ್ತೀರಿ. ಅದನ್ನು ಹೇಳುವುದಕ್ಕೆ ಹೋಗಬೇಡಿ.

ಶ್ರೀ ಕೃಷ್ಣ ಬೈರೇಗೌಡ : ಅಂಕೆ ಸಂಖ್ಯೆಗಳ ಮಾಯಾ ಮಾಟ ನನಗೆ ಗೊತ್ತಿಲ್ಲ. ಹೋದ ವರ್ಷದ ಬಜೆಟ್ ಪ್ರತಿ ಈ ವರ್ಷದ ಬಜೆಟ್ ಪ್ರತಿ ನನ್ನ ಹತ್ತಿರವಿದೆ. ನಾನು ಎರಡನ್ನೂ ನೋಡಿ ಹೇಳುತ್ತಿದ್ದೇನೆಯೇ ಹೊರತು, ಹೋದ ವರ್ಷ ಓಜನಾ ಗಾತ್ರದಲ್ಲಿ ಶೇಕಡ ೨೬.೯% ಕೊಟ್ಟಿದ್ದರು. ಈ ವರ್ಷ ಕೊಟ್ಟಿದ್ದೀರಾ? ಹೋದ ವರ್ಷದ ಶೇಕಡವಾರು ಒತ್ತು ಕೊಡತಕ್ಕಂತಾದ್ದು ಅಂಕಸಂಖ್ಯೆಗಳಲ್ಲಿ ಅಲ್ಲ. ಶೇಕಡವಾರು ಎಷ್ಟು ಕೊಟ್ಟಿದ್ದೀರಿ ಎಂದು ನೋಡಿದರೆ ನಮ್ಮ priorities ಏನು ಅಂತ ಗೊತ್ತಾಗುತ್ತದೆ. ಹೋದ ವರ್ಷಕ್ಕೂ ಈ ವರ್ಷಕ್ಕೂ ಹೋಲಿಸಿದರೆ ಸುಮಾರು ರೂ. ೧,೫೬೩ ಕೋಟಿ ಖೋತ ಆಗಿದೆ ಅದನ್ನು ಸರಿಪಡಿಸಿಕೊಳ್ಳುವುದಾದರೆ ನವು ಸ್ವಾಗತ ಮಾಡುತ್ತೇವೆ. ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಆಂದ್ರಪ್ರದೇಶದಲ್ಲಿ ಈ ಬಾರಿ ನೀರಾವರಿಗೆ ೧೫ ಸಾವಿರ ಕೋಟಿ ಖರ್ಚು ಮಾಡುತ್ತಿದ್ದಾರೆ. ಹೋದ ವರ್ಷ ರೂ.೧೦ ಸವಿರ ಕೋಟಿ ಬಜೆಟ್ ನಲ್ಲಿ ಇಟ್ಟಿದ್ದರು. ಈ ಬಾರಿ ರೂ. ೧೫ ಸಾವಿರ ಕೋಟಿ ಇಟ್ಟಿದ್ದಾರೆ. ರೈತರಿಗೆ ನೀವು ನಿಜವಾಗಿಯು ಸಹಾಯ ಮಾಡು ವುದಾದರೆ ನೀರಾವರಿಗೆ ಸಹಾಯ ಮಾಡಿ. ಒಂದು ಹನಿ ನೀರು ಸಹ ವೇಸ್ಟ್ ಆಗಬಾರದು. ಆ ರೀತಿ ರಾಜ್ಯದ ಮೂಲೆ ಮೂಲೆಯಲ್ಲಿ ನೀರಾವರಿ ಯನ್ನು ಮಾಡಿ. ನೀರಾವರಿ ವ್ಯವಸ್ಥೆಯನ್ನು ಕಲ್ಪಿಸಿ. ೧೫ ಸಾವಿರ ಕೋಟಿ

ರೂಪಾಯಿಗಳನ್ನು ಆಂದ್ರಪ್ರದೇಶದವರು ಇಟ್ಟಿರುವಾಗ, ನಾವು ರೂ. ೩,೧೪೫ ಕೋಟಿ ಇಟ್ಟರೆ ಯಾವ ರೀತಿ ನವು ರೈತರಿಗೆ ನ್ಯಾಯವನ್ನು ಒದಗಿಸುತ್ತೇವೆ. ಯಾವ ಆಧಾರದ ಮೇಲೆ ಹೇಳುತ್ತೀರಿ, ತಾವು ಇಂತಹ ಒಂದು ಬಿಕ್ಕಟ್ಟಿನ ಪರಿಸ್ಥಿತಿಗೆ, ನೀವು ನಿಜವಾಗಲು ಸಹ ನಮ್ಮ ಕೃಷಿ ರಂಗವನ್ನು ತಳ್ಳುತ್ತಿದ್ದೀರಿ ಅಂತ ಹೇಳಿ ನನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತಾ ತಾವು ಕೇಂದ್ರದ ಜೊತೆಯಲ್ಲಿ ಮಾತನಾಡಿ. ಇವತ್ತು ಕೃಷಿ ಬೆಲೆಗಳನ್ನು NCDH ಮುಖಾಂತರ Futures Trading ಇತ್ತು, ಇವತ್ತು ಅನದನು ನಿಲ್ಲಿಸಿದ್ದಾರೆ. ರೈತರಿಗೆ ಎಲ್ಲಿ ಸ್ವಲ್ಪ ಬೆಲೆ ಸಿಗುವುದಿದ್ದರೆ ಆ ಬಗ್ಗೆ ಎಲ್ಲರು ಸಹ ಕಾದಾಡಿ ಮಾಡಿ ನಿಲ್ಲಿಸತಕ್ಕಂತಹ ಪ್ರಯತ್ನವನ್ನು ಮಾಡುತ್ತಿದ್ದಾರೆ. ರೈತರಿಗೆ ಒಳ್ಳೆಯದಾಗುವ ಒಂದು ಸುಧಾರಣಾ ಕ್ರಮವನ್ನು ತಮಗೆ ತಿಳಿಸುವುದಕ್ಕೆ ಬಯಸುತ್ತೇನೆ. ಈಗಾಗಲೇ ಚಾಲ್ತಿಯಲ್ಲಿರತಕ್ಕಂಥ APMC Act ಗೆ Amendment ಅನ್ನಾದರೂ ತಾವು ತನ್ನಿ. ನಾನು ಒಂದು ಪ್ರಶ್ನೆಯನ್ನು ತಮಗೆ ಕೇಳಬಯಸುತ್ತೇನೆ. ಇವೊತ್ತು ಯಾರು ಏನು ಉತ್ಪಾದನೆ ಮಾಡಿದರೂ ಅವರು ಅದನ್ನು ಎಲ್ಲಿ ಬೇಕಾದರೂ ಮಾರಿಕೊಳ್ಳಬಹುದು. ಹೌದೋ, ಅಲ್ಲವೋ ? ಸ್ಟೀಲ್ ಮ್ಯಾನುಫ್ಯಾಕ್ಚರ್ ಮಾಡಿದವನು ಅದನ್ನು ಅವನು ಇಲ್ಲಿಯೇ ಮಾರಬೇಕೆಂದು ರಿಸ್ಟ್ರಿಕ್ ಶನ್ ಇದೆಯೆ? ಅದನ್ನು ಇಂಥವನಿಗೇ ಮಾರಬೇಕೆಂದು ರಿಸ್ಟ್ರಿಕ್ ಶನ್ ಇದೆಯೇ? ರೈತರಿಗೆ ಮಾತ್ರ ಏಕೆ ಎ.ಪಿ.ಎಂ.ಸಿ.ಯಲ್ಲಿಯೇ ಮಾರಬೇಕೇಂದು ರಿಸ್ಟ್ರಿಕ್ ಶನ್ ಹಾಕುತ್ತೀರಿ? ರೈತ ಯಾರಿಗೆ ಬೇಕಾದರೂ ಮಾರಿಕೊಳ್ಳಲಿ ಸ್ವಾಮಿ. ನೀವು ಎ.ಪಿ.ಎಂ.ಸಿ.ಯನ್ನು ತೆಗೆಯಿರಿ ಎಂದು ನಾನು ಹೇಳುವುದಿಲ್ಲ. ಎ.ಪಿ.ಎಂ.ಸಿ. ಇರಬೇಕು, ಆದರೆ ರೈತ ಅಲ್ಲಿಯೇ ಮಾರಬೇಕೆಂದು ಏಕೆ ನಮ್ಮನ್ನು ಜೀತಕ್ಕೆ ಒಳಪಡಿಸಿದ್ದೀರಿ? ನಿಜವಾಗಿಯೂ ಟ್ರೇಡರ್ಸ್‌ಗೆ ಹೆದರಿಕೊಂಡು ಎ.ಪಿ.ಎಂ.ಸಿ. ಆ್ಯಕ್ಟ್‌ನ್ನು promulgate ಮಾಡದೇ ಸರ್ಕಾರದವರು ಇಟ್ಟುಕೊಂಡಿದ್ದಾರೆ. ಎ.ಪಿ.ಎಂ.ಸಿ. ಆ್ಯಕ್ಟ್‌ನ್ನು ಅಮೆಂಡ್ ಮಾಡಿ ಎಂದು ಕೇಂದ್ರದಿಂದ ಸಾಕಷ್ಟು ಒತ್ತಡ ಬರುತ್ತಿದೆ. ರೈತ ಎಲ್ಲಾದರೂ ಒಂದಷ್ಟು ಮಾರಾಟ ಮಾಡುವುದಕ್ಕೆ ಈವತ್ತು ಕಾಂಪಟೀಶನ್ ಇಲ್ಲವೇ ಇಲ್ಲ. ಎ.ಪಿ.ಎಂ.ಸಿ.ಗೆ ಹೋಗಬೇಕು, ಅವರು ಹೇಳಿದ ಬೆಲೆಗೆ

ನಾವು ಮಾರಾಟ ಮಾಡಬೇಕು, ಬರಬೇಕು. ಇವತ್ತೊತ್ತು ಯಾರೋ ಒಬ್ಬರು ಬಂದು ರೈತರಿಂದ ನೇರವಾಗಿ ನಾನು ಕೊಂಡುಕೊಳ್ಳುತ್ತೇನೆ. ಉತ್ತಮ ಬೆಲೆ ಕೊಡುತ್ತೇನೆಂದು ಹೇಳಿ ಮುಂದೆ ಬಂದರೆ ಅವರಿಗೆ ಅವಕಾಶವನ್ನು ಕೊಡುತ್ತಿಲ್ಲ. ಏಕೆಂದರೆ ಕೆಲವರು ಆ ಟ್ರೇಡರ್ಸ್‌ಗಳು ಯಾರಿದ್ದಾರೆ ಅವರ ಒತ್ತಡಕ್ಕೆ ಇವೊತ್ತು ಮಣಿದಿದ್ದೇವೆಯೇ ಹೊರತು ನಾವು ರೈತರ ಕೂಗೇನಿದೆ, ರೈತರ ಅವಶ್ಯಕತೆ ಏನಿದೆ ಅದನ್ನು ನಾವು ಅರ್ಥ ಮಾಡಿಕೊಂಡಿಲ್ಲ. ಹೀಗಾಗಿ ಕೃಷಿಗೆ ಸಂಬಂಧಪಟ್ಟಂತೆ ಈ ಒಂದು ಬಜೆಟ್ ಏನಿದೆ ಇದು ಮಾರಕವಾದಂಥ ಬಜೆಟ್. ಈ ಬಜೆಟ್ ನಲ್ಲಿ ಸಾಕಷ್ಟು ಕೆಲವು ಉತ್ತಮವಾದವುಗಳು ಇವೆ, ನಾನು ಇಲ್ಲವೆಂದು ಹೇಳುವುದಿಲ್ಲ. ಆಧರೆ ಕೃಷಿಗೆ ಸಂಬಂಧಪ್ಪಂತೆ ನಿಜವಾಗಿಯೂ ಇದು ಮಾರಕವಾದಂಥ ಬಜೆಟ್ ಏನೊಂದು ಕ್ರೈಸಿಸ್, ಬಿಕ್ಕಟ್ಟಿಗೆ ನಾವು ಸಿಕ್ಕಹಾಕಿಕೊಳ್ಳುತ್ತಿದ್ದೇವೆ, ಆ ಬಿಕ್ಕಟ್ಟಿನಿಂದ ಕೃಷಿ ರಂಗವನ್ನು ಹೊರತರುವುದಕ್ಕೆ ಇದರಲ್ಲಿ ಏನೂ ಇಲ್ಲ ಎನ್ನತಕ್ಕಂಥ ಮಾತನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ಇನ್ನು ಕೋಲಾರ ಜಿಲ್ಲೆ ಬಗ್ಗೆ ನಾನು ಒಂದೆರಡು ಮಾತುಗಳನ್ನು ಹೇಳ ಬಯಸುತ್ತೇನೆ. ಇವೊತ್ತು ರಾಷ್ಟ್ರೀಯ ಎಂಪ್ಲಾಯ್ ಮೆಂಟ್ ಗ್ಯಾರಂಟಿ ಸ್ಕೀಂ ಇದೆ. ನಮ್ಮ ಕೋಲಾರ ಇದರಲ್ಲಿ ಮೊದಲೆಯ ಪಟ್ಟಿಯಲ್ಲಿಯೇ ನೇರಬೇಕಾಗಿತ್ತು. ಇವೊತ್ತು ರಾಜ್ಯ ಸರ್ಕಾರ ಕೂಡ ಸೇರಿಕೊಂಡು ನಮ್ಮ ಕೋಲಾರ ಜಿಲ್ಲೆಗೆ ಅನ್ಯಾಯ ಮಾಡಿದೆ. ಯಾವ ಯಾವ ಜಿಲ್ಲೆಗಳು ಈ ಸ್ಕೀಂನಲ್ಲಿ ಸೇರಿವೆಯೆಂದರೆ ಹಾಸನ, ಶಿವಮೊಗ್ಗ, ಬಳ್ಳಾರಿ, ಕೊಡಗು, ಚಿಕ್ಕಮಗಳೂರು ಮತ್ತು ಬೆಳಗಾಂ, ಸಾರ್, ದಯವಿಟ್ಟು ಒಂದು ನಿಮಿಷ ನನಗೆ ಅವಕಾಶ ಕೊಟ್ಟರೆ ನಾನು ಆ ಜಿಲ್ಲೆಗಳಿಗೆ ಕೋಲಾರವನ್ನು ಹೋಲಿಸಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಸರಾಸರಿ, ವರ್ಷಕ್ಕೆ ಬೀಳತಕ್ಕಂಥ ಮಳೆ ಪ್ರಮಾಣವನ್ನು ಕೋಲಾರಕ್ಕೆ ಹೋಲಿಸಿ ಹೇಳುತ್ತೇನೆ. ಶಿವಮೊಗ್ಗ ೧೮೧೩, ಆದರೆ ಹೋದ ವರ್ಷ ೧೮೪೭ ಎಕ್ಸಸ್ ರೇನ್ ಫಾಲ್ ಆಗಿದೆ. ಹಾಸನ ೧೦೩೧, ಆದರೆ ಹೋದ ವರ್ಷ ಎಕ್ಸಸ್ ರೇನ್ ಫಾಲ್ ೧೧೪೮. ಕೊಡಗು ೨೭೧೮, ಆದರೆ ಕಳೆದ ವರ್ಷ ಎಕ್ಸಸ್ ರೇನ್ ಫಾಲ್ ೨೯೩೨. ಬೆಳಗಾಂನಲ್ಲಿ ೮೦೮ ; ೮೧೬ ಆಗಿದೆ. ಬಳ್ಳಾರಿಯಲ್ಲಿ ೬೩೬

೭೫೭ ನಿಜವಾಗಿ ಮಳೆಯಾಗಿದೆ. ಚಿಕ್ಕಮಗಳೂರಿನಲ್ಲಿ ೧೯೨೫ ೨೦೬೯. ಅಂದರೆ ಎಲ್ಲ ಜಿಲ್ಲೆಗಳಲ್ಲೂ ನಿರೀಕ್ಷಿತ ಮಟ್ಟಕ್ಕಿಂತ ಹೆಚ್ಚು ಮಳೆಯಾಗಿದೆ. ಕೋಲಾರದಲ್ಲಿ ಎಷ್ಟು ? ೭೪೪ ೬೨೪ ಆಗಿದೆ. ಪ್ರತಿ ವರ್ಷವೂ ನಮ್ಮದು ಇದೇ ಗೋಳು ಆಗಿದೆ. ಇಲ್ಲವೆಂದು ಯಾರಾದರೂ ಹೇಳಲಿ. ನಾನು ಈ ಜಿಲ್ಲೆಗಳಿಗೆ ಕೊಡಬೇಡಿ ಎಂದು ಹೇಳುತ್ತಿಲ್ಲ. ಕೊಡಬೇಡಿ ಎಂದು ನಾನು ಎಲ್ಲೂ ಹೇಳುತ್ತಿಲ್ಲ. ಇಡೀ ರಾಜ್ಯದಲ್ಲಿ ಉದ್ಯೋಗ ಖಾತರಿ ಯೋಜನೆಗೆ ಯಾವುದಾದರೂ ಅರ್ಹ ಜಿಲ್ಲೆ ಇದೆಯೆಂದು ಹೇಳಿದರೆ ಅದು ಕೋಲಾರ. ನಾವು ಸಾವಿರ ಅಡಿ ಆಳದಿಂದ ನೀರನ್ನು ತೆಗೆಯುತ್ತಿದ್ದೇವೆಂದು ಎಲ್ಲರಿಗೂ ಗೊತ್ತಿದೆ. ಅಂಥ ಜಿಲ್ಲೆಯನ್ನು ಬಿಟ್ಟು ನೀರಾವರಿ ಅಧಿಕವಾಗಿರತಕ್ಕಂಥ ಜಿಲ್ಲೆಗಳನ್ನು ಏಕ ಸೇರಿಸುತ್ತೀರ? ಸೇರಿಸಿ, ನಿಮ್ಮ ನಿಮ್ಮ ಜಿಲ್ಲೆಗಳನ್ನು ನೀವು ಸೇರಿಸಿಕೊಳ್ಳಿ. ಹಾಸನವನ್ನೂ ಸೇರಿಸಿ, ಶಿವಮೊಗ್ಗವನ್ನೂ ಸೇರಿಸಿ, ನಾನು ಬೇಡವೆಂದು ಹೇಳುವುದಿಲ್ಲ. ಆದರೆ ಅರ್ಹರಿತಕ್ಕಂಥ ನಮ್ಮನ್ನು ಕೂಡ ನಿಮ್ಮ ಜೊತೆಯಲ್ಲಿ ಸೇರಿಸಿಕೊಂಡರೆ ಏನು ತೊಂದರೆಯಗುತ್ತದೆ? ಹ್ಯೂಮನ್ ಡೆವೆಲಪ್ ಮೆಂಟ್ ಇಂಡೆಕ್ಸ್ ನ್ನು ಮಾಡಿದ್ದಾರೆ. ಅದನ್ನೂ ಓದಿ ಹೇಳುತ್ತೇನೆ. ಶಿವಮೊಗ್ಗ ೫ನೆಯ ಸ್ಥಾನದಲ್ಲಿದೆ, ಹಾಸನ ೧೧ನೆಯ ಸ್ಥಾನ, ಕೊಡಗು ೪, ಬೆಳಗಾಂ ೮, ಬಳ್ಳಾರಿ ೧೮, ಚಿಕ್ಕಮಗಳೂರು ೯ನೆಯ ಸ್ಥಾನವಾದರೆ ಕೋಲಾರ ರಾಜ್ಯದಲ್ಲಿ ೧೭ನೆಯ ಸ್ಥಾನದಲ್ಲಿದೆ. ಹ್ಯೂಮನ್ ಡೆವಲಪ್ ಮೆಂಟ್ ಇಂಡೆಕ್ಸ್ ನಲ್ಲಿ ಕೇವಲ ನಾವು ಎಕನಾಮಿಕ್ ಗ್ರೋಥ್ ನ್ನು ಮಾತ್ರ ತೆಗೆದುಕೊಂಡರೆ ಆಗುವುದಿಲ್ಲ, ಸಮಗ್ರವಾಗಿ ತೆಗೆದುಕೊಳ್ಳಬೇಕು ಎಂದು ಹೇಳಿ ಅದನ್ನು ಮಾಡಿದ್ದಾರೆ. ಅದರಲ್ಲಿ ನಮ್ಮ ಜಿಲ್ಲೆ ೧೭ನೆಯ ಸ್ಥಾನದಲ್ಲಿದೆ. ಯಾವ ನ್ಯಾಯ ಸ್ವಾಮಿ ಇದು?

ಶ್ರೀ ಕೆ.ಆರ್. ರಮೇಶ್ ಕುಮಾರ್ : ಏಕೆಂದರೆ ಕೋಲಾರದಲ್ಲಿ ಇರಿಗೇಶನ್ ಜಾಸ್ತಿ ಇದೆ. ಮೇಜರ್ ಇರಿಗೇಶನ್ ಜಾಸ್ತಿ ಇದೆ, ಮೀಡಿಯಂ ಇರಿಗೇಶನ್ ಹದಿನೈದು, ಇಪ್ಪತ್ತು ಪ್ರಾಜೆಕ್ಟ್‌ಗಳಿವೆ ಪ್ಲಾಂಟೇಶನ್ ಇದೆ, ಸುಮಾರು ಮೇಜರ್ ಇಂಡಸ್ಟ್ರೀಸ್ ಸುಮಾರು ಎಂಟತ್ತು ಪಬ್ಲಿಕ್ ಸೆಕ್ಟರ್ ಅಂಡರ್ ಟೇಂಕಿಂಗ್ ಗಳು ಇವೆ ಕೋಲಾರದಲ್ಲಿ, ಹೀಗಾಗಿ ಕೋಲಾರ ಬೇಡವೆಂದು ಬಿಟ್ಟಿದ್ದಾರೆ. ಇದು ಅವರು ಕೊಡುವ ಕಾರಣ.

ಶ್ರೀ. ಎಂ.ಪಿ. ಪ್ರಕಾಶ್ : ಬಳ್ಳಾರಿಯನ್ನು ಮಾತ್ರ ಇಕ್ಸ್‌ಕ್ಲೂಡ್ ಮಾಡಿ. ಏಕೆಂದರೆ ನವು ನಿಮಗಿಂತ ಅಪಾಯದಲ್ಲಿದ್ದೇವೆ.

ಶ್ರೀ ಕೃಷ್ಣ ಬೇರೇಗೌಡ : ಸಾರ್, ನಾನು ಅಂಕ ಸಂಖ್ಯೆಗಳ ಆಧಾರದ ಮೇಲೆ ಹೇಳುತ್ತಿದ್ದೇನೆ. ನಾನು ಹೇಳುವುದಾದರೆ ಅಪಾಯದಲ್ಲಿ ಇರುವವರು ಯಾರು ಎನ್ನುವುದನ್ನು..

ಶ್ರೀ. ಕೆ. ಆರ್. ರಮೇಶ್ ಕುಮಾರ್ : ಮಾನ್ಯ ಕೃಷ್ಣ ಬೈರೇಗೌಡರೆ, ಒಂದ್ನಿಮಿಷ. Whether it is State Government or Central Government ನಾವೇನೂ ಸ್ಲೇವ್ಸ್ ಅಲ್ಲ. ಎಂಪ್ಲಾಯ್ ಮೆಂಟ್ ಪ್ರೋಂಗ್ರಾಂಗಳನ್ನು ಮಾಡುತ್ತಾರಲ್ಲ ಇವರು. What is the concept? ಇವರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು, ಇಲ್ಲಿಂದ ರೆಕಮೆಂಡೇಶನ್, ಇವರಿಗೇನಾದರೂ minimum sense ಇದೆಯೇ? Are they human beings? ಒಂದು ಮೀಡಿಯಂ ಇರಗೇಶನ್ ಪ್ರಜ್ಕ ಇಲ್ಲ ; ಎಂಟೈರ್ ಕೋಲಾರ್ ಡಿಸ್ಟ್ರಿಕ್ ನಲ್ಲಿ, ನಲವತ್ತು ಜನರಿಗೆ ಕೆಲಸ ಕೊಡತಕ್ಕಂಥ ಒಂದು ಸಂಸ್ಥೆ ಇಲ್ಲ, ಆ ಹಾಳು ಕೆರೆಗಳೆಲ್ಲಾ ಹೂಳು ತುಂಬಿಕೊಂಡು ಸತ್ತುಹೋಗಿದೆ, ಸಾವಿರ ಅಡಿಯಿಂದ ನೀರು ತೆಗೆದು ಫ್ರೂಟ್ಸ್, ವೆಜಿಟಬಲ್ಸ್ ಬೆಳೆಯಬೇಕಾದ ಸ್ಥಿತಿ ಇದೆ. ಈ ಕಷ್ಟದಲ್ಲಿಯೂ ಕೂಡ we have been producing the highest quantity of milk in the entire state. ಮೂಳೆಗಳನ್ನು ತೆಗೆದುಬಿಟ್ಟು ಭೂಮಿಗೆ ಹಾಕಿ ಬದುಕುತ್ತಿದ್ದಾನೆ ರೈತ ಅಲ್ಲಿ. ಆ ಜಿಲ್ಲೆ ಬೇಡವಂತೆ. ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು, ಹಾಸನ,ಮೈಸೂರು ಅರಮನೆಯನ್ನು ತೆಗೆದುಕೊಂಡು ಹೋಗಿ ಇಟ್ಟುಕೊಳ್ಳಿ ನೀವು. ಅವಿವೇಕಿಗಳು ತಂದು, it is a shame.

ಶ್ರೀ ಸಿದ್ದು ಸವದಿ : ಯಾರು ಅದನ್ನು ಮಾಡಿರುವುದು? ನಾವು ಮಾಡಿರುವುದಿಲ್ಲ.

(ಗೊಂದಲ)

ಅಧ್ಯಕ್ಷರು : ಮಾನ್ಯ ರಮೇಶ್ ಕುಮಾರ್ ರವರೆ, ಈಗೆಲ್ಲಾ ರಾಜಕೀಯ ಪ್ರದಾನವಾಗಿದೆ. ಯಾರೇ ಸರ್ಕಾರ ನಡೆಸಲಿ, ಕೇಂದ್ರದಲ್ಲಾಗಲಿ, ರಾಜ್ಯದಲ್ಲಾಗಲಿ, ರಾಜಕೀಯ ಪ್ರದಾನವಾಗಿದೆ. ಇದು ಎಲ್ಲರಿಗೂ ಗೊತ್ತಿರತಕ್ಕಂಥದ್ದು. ನಾನು ಏನು ಹೇಳುತ್ತೇನೆಂದರೆ ರಾಜಕೀಯ ಕಡಿಮೆ ಮಾಡಿಕೊಂಡರೆ ಇವೆಲ್ಲಾ ಸರಿಹೋಗುತ್ತದೆ.

ಶ್ರೀ ಕೆ.ಆರ್. ರಮೇಶ್ ಕುಮಾರ : ರಾಜ್ಯ ಸರ್ಕಾರವಾಗಲಿ ಅಥವಾ ಕೇಂದ್ರ ಸರ್ಕಾರವಾಗಲಿ ಎಂದೇ ನಾನು ಮಾತನಾಡಿದ್ದು. ಇವರು ಕೇಳಿಸಿಕೊಳದೇ ಹೋದರೆ ಏನು ಮಾಡುವುದಕ್ಕಾಗುತ್ತದೆ.

ಶ್ರೀ ಕೃಷ್ಣ ಬೇರೇಗೌಡ : ಮಾನ್ಯ ಅಧ್ಯಕ್ಷರೆ, ನಾವು ಇಲ್ಲಿ ಪಕ್ಷಾತೀತವಾಗಿ ಮಾತನಾಡುತ್ತಿದ್ದೇವೆ. ಆ ಸರ್ಕಾರ, ಈ ಸರ್ಕಾರ ಎಂದು ಹೇಳುತ್ತಿಲ್ಲ. ಯಾರೂ ಉದ್ವೇಗಕ್ಕೆ ಒಳಗಾಗಬೇಕಾಗಿಲ್ಲ.

ಅಧ್ಯಕ್ಷರು : ಮಾನ್ಯ ಕೃಷ್ಣ ಬೈರೇಗೌಡರೆ, ಏನಾಗಿದೆಯೆಂದರೆ, ನಾವು ನೋಡಿಕೊಂಡು ಯರುತ್ತಿದ್ದೇವೆ. ಎಲ್ಲರದ್ದೂ ಅನುಭವದೇ, ಸಾಮಾನ್ಯ ಜನರಿಗೂ ಅರ್ಥವಾಗತಕ್ಕಂಥ ವಿಚಾರ. ಆದರೆ ಇದರಲ್ಲಿ ರಾಜಕೀಯ ನುಸುಳುತ್ತದೆ, ಬೇರೆ ಬೇರೆ ವಿಷಯಗಳು ನುಸುಳುತ್ತವೆ. ಆದ್ದರಿಂದ ಯಾವಾಗ ನಿಮ್ಮ ತತ್ವ, ವೈಜ್ಞಾನಿಕತೆ, ಇದು ಇದು ಎಲ್ಲವೂ ಮಾಯಾವಾಗುತ್ತದೆ. ಇದನ್ನೆಲ್ಲಾ ನಾವು ನೋಡಿದ್ದೇವೆ. ಏನು ಮಾಡುವುದು? ಇವೆಲ್ಲಾ ಬದಲಾವಣೆಯಾಗಬೇಕು. ನೀವು ಮಾತನಾಡಿ. ಇನ್ನೊಂದು ಐದು ನಿಮಿಷ ಮಾತನಾಡಿ.

ಶ್ರೀ ಕೃಷ್ಣ ಬೈರೇಗೌಡ : ಆಗಬಹುದು ಅಧ್ಯಕ್ಷರೆ, ಕೋಲಾರ ಜಿಲ್ಲೆಗೆ ಪೂರಕವಾಗಿ ನಾನು ಇನ್ನೊಂದು ಅಂಕಸಂಖ್ಯೆ ಕೊಡುತ್ತೇನೆ. ಒಬ್ಬ ಮನುಷ್ಯನಿಗೆ ಬರತಕ್ಕಂಥ ಆದಾಯ ಪರ್ ಕ್ಯಾಪಿಟಾ ಇನ್‌ಕಂ ಬಗ್ಗೆ ಓದಿ ಹೇಳುತ್ತೇನೆ. ಶಿವಮೊಗ್ಗ ೨೦೧೯೬, ಹಾಸನ ೧೬೪೯೨, ಕೊಡಗು ೩೪೫೫೧, ಬೆಳಗಾಂ ೧೭೫೫೪, ಬಳ್ಳಾರಿ ೨೭೮೦೮, ಮಾನ್ಯ ಪ್ರಕಾಶ್ ರವರು ದಯವಿಟ್ಟು ಕೇಳಿಸಿಕೊಳ್ಳಬೇಕು. ಬಳ್ಳಾರಿಯಲ್ಲಿ ಪರ್ ಕ್ಯಾಪಿಟಾ

ಇನ್‌ಕಂ ೨೭೮೮೦೮ ಇದೆ. ಚಿಕ್ಕಮಗಳೂರು ೨೬೬೯೯. ಕೋಲಾರ ಎಷ್ಟಿರಬಹುದು ಮಾನ್ಯ ಅಧ್ಯಕ್ಷರೆ?

ಶ್ರೀ ಎಂ.ಪಿ. ಪ್ರಕಾಶ್ : ಆದರೆ ಎಜುಕೇಶನ್ ಅಂಡ್ ಹೆಲ್ತ್ ನಲ್ಲಿ ನಾವು ೧೮ನೆಯ ಸ್ಥಾನದಲ್ಲಿದ್ದೇವೆ. ಸರಾಸರಿ ಆದಾಯ ಎಷ್ಟು ಅಪಾಯ ಎಂದು ಹೇಳುವುದಾಗಿದದರೆ, ಹಿಂದೆ ಮಾನ್ಯ ಸಿದ್ದರಾಮಯ್ಯನವರು ತಂದಂಥ ಸಂದರ್ಭದಲ್ಲಿ ಕೂಡ ಅದನ್ನು ನಾವು ಚರ್ಚೆ ಮಾಡಿದ್ದೆವೆ. ನಮಗ್ಯಾರಿಗೋ ಮೈನ್ ಓನರ್ಸ್‌ಗೆ ದುಡ್ಡು ಬಂದಿದೆ, ಮತ್ತೊಂಬ್ಬರಿಗೆ ಏನೋ ದುಡ್ಡು ಬಂದಿದೆ ಎನ್ನುವುದನ್ನು ಹೇಳಿ ನಮ್ಮ ಊರಿನಲ್ಲಿ ೨೫ ರೂಪಾಯಿ ಹೆಣ್ಣಾಳಿಗೆ ಕೂಲಿ ನಾವು ಸರಾಸರಿ ಮಾಡಿಬಿಟ್ಟಿದ್ದೇವೆ. ಆದರೆ ಆರೋಗ್ಯ ಮತ್ತು ಶಿಕ್ಷಣದಲ್ಲಿ ೧೮ನೆಯ ಸ್ಥಾನದಲ್ಲಿದ್ದೇವೆ. ನೀವು ಅದಕ್ಕಿಂತ ಉತ್ತಮ ಸ್ಥಿತಿಯಲ್ಲಿದ್ದೀರಿ. ಆದರೆ ನಿಮಗೆ ನ್ಯಾಯವಾಗಿ ಸರಿಯಾದಂಥ ರೀತಿಯಲ್ಲಿ ಅವುರ ಶಿಫಾರಸ್ಸು ಮಾಡಿಲ್ಲ. ಎಲ್ಲ ವಿಚಾರಗಳಲ್ಲಿಯು ಕೂಡ ಬಯಲು ಸೀಮೆ ಪ್ರದೇಶಗಳಿಗೆ ಅನ್ಯಾಯವಾಗಿದೆ. ಆದರೆ ಅದನ್ನು ಯಾರ ಪ್ರಭಾವಕ್ಕೆ ಒಳಗಾಗಿ ಮಾಡಿದ್ದಾರೋ ದೇವರಿಗೇ ಗೊತ್ತು.

ಶ್ರೀ ಕೃಷ್ಣ ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಕೋಲಾರದ ಆದಾಯದ ಬಗ್ಗೆ ಹೇಳಿಬಿಡುತ್ತೇನೆ. ಕೋಲಾರದ ಆದಾಯ ಎಲ್ಲಾ ಜಿಲ್ಲೆಗಳಿಗಿಂತ ಕಡಿಮೆ. ಅಂದರೆ ೧೬೪೮೧. ಬೇರೆ ಜಿಲ್ಲೆಗಳಲ್ಲಿ ಕನಿಷ್ಟ ೧೭ ಸಾವಿರದಿಂದ ೩೪ ಸಾವಿರದವರೆಗೂ ಇದೆ. ಆದರೆ ಕೋಲಾರದ್ದು ೧೬೪೮೧ ಮಾತ್ರ. ಕೆಲವು ಜಿಲ್ಲೆಗಳಲ್ಲಿ ಹೇಗಿದೆಯೆಂದರೆ ಅದನ್ನು ಈಗ ಇಲ್ಲಿ ಹೆಸರಿಸುವುದು ಬೇಡ, ಅಲ್ಲಿ ಇವೊತ್ತು ಎಸ್ಟೇಟ್ ಗಳಲ್ಲಿ ಬೇರೆ ರಾಜ್ಯಗಳಿಂದ ಕೂಲಿ ಕಾರ್ಮಿಕರನ್ನು ಕರೆದುಕೊಂಡು ಬಂದು ಕೆಲಸ ಮಾಡಿಸುತ್ತಾರೆ. ಈ ರೀತಿಯಲ್ಲಿ ಎಸ್ಟೇಟ್ ಗಳನ್ನು ನಡೆಸುತ್ತಿರುವುದು ನಮಗೆಲ್ಲಾ ಗೊತ್ತಿರುವಂಥದ್ದೇ ಆಗಿದೆ. ತಮಿಳುನಾಡಿನಿಂದ ಕೂಲಿ ಕಾರ್ಮಿಕರನ್ನು ಕರೆದುಕೊಂಡು ಬಂದು ಎಸ್ಟೇಟ್ ಗಳಲ್ಲಿ ಕೆಲಸವನ್ನು ಮಾಡಿಸುತ್ತಿದ್ದಾರೆ. ಅಂಥ ಕಡೆಗೆ ನೀವು ತೆಗೆದುಕೊಂಡು ಹೋಗಿ ಉದ್ಯೋಗ ಖಾತರಿ ಯೋಜನೆಯನ್ನು ಕೊಟ್ಟರೆ ಯಾರಿಗೆ ಸ್ವಾಮಿ

ಅನುಕೂಲವಾಗುತ್ತದೆ? ನಮ್ಮ ರಾಜ್ಯದವರಿಗೇನಾದರೂ ಸಿಗುತ್ತದೆಯೆ? ಚಿಕ್ಕಮಗಳೂರು ಆಗಬಹುದು, ಕೊಡಗು ಆಹಬಹುದು, ಶಿವಮೊಗ್ಗ ಆಹಬಹುದು, ಅಲ್ಲೆಲ್ಲಾ ಬೇರೆ ರಾಜ್ಯಗಳಿಂದ ಬಂದವರು ಕೂಲಿ ಕೆಲಸ ಮಾಡುತ್ತಿದ್ದಾರೆ. ೧೫೦ ರೂಪಾಯಿ ಕೊಡುತ್ತಿದ್ದಾರೆ. ನೀವು ಉದ್ಯೋಗ ಖಾತರಿ ಯೋಜನೆಯಲ್ಲಿ ಕೊಡುವುದೆಷ್ಟು ? ೬೭ ಅಥವಾ ೭೨ ರೂಪಾಯಿ ಕೊಡುತ್ತೀರಿ.

ಶ್ರೀ ಡಿ.ಎನ್. ಜೀವರಾಜ್ : ಮಾನ್ಯ ಬೈರೇಗೌಡರೆ ಒಂದ್ನಿಮಿಷ. ಚಿಕ್ಕಮಗಳೂರು ಜಿಲ್ಲೆಯಲ್ಲಿ ನೀವು ಹೇಳುತ್ತಿರುವುದು ಸರಿ ಇದೆ. ಬೇರೆ ಕಡೆಯಿಂದ ಕೂಲಿಯವರು ಬರುತ್ತಾರೆ. ಆದರೆ ಆ ರೀತಿ ಬರುವುದು ಕಾಫಿ ತೋಟ ಇರುವಂಥ ಜಾಗಗಳಲ್ಲಿ ಮಾತ್ರ. ಚಿಕ್ಕಮಗಳೂರಿನ ಕಡೂರು, ಬೀರೂರು, ತರಿಕೆರೆಯಂಥ ಭಾಗಗಳಲ್ಲಿ ಒಂದು ಹೊತ್ತಿನ ಊಟಕ್ಕೂ ಕಷ್ಟ ಇರುವಂಥ ಬರಗಾಲದ ಸನ್ನಿವೇಶ ಇದೆ. ಆದುದರಿಂದ ಚಿಕ್ಕಮಗಳೂರನ್ನು ಎರಡು ಭಾಗವಾಗಿ ನೋಡಬೇಕು. ಚಿಕ್ಕಮಗಳೂರಿನಲ್ಲಿ ಅರ್ಧ ಬರಗಾಲ, ಅರ್ಧ ಮಲೆನಾಡು.

ನಾನು ಮಲೆನಾಡು ಪ್ರದೇಶದ ಬಗ್ಗೆ ಸಾಮಾನ್ಯವಾಗಿ ಮಾತನಾಡುತ್ತ ಹೇಳಿದೆ. ನಿಮಗೆ ಕೊಡಬೇಡಿ ಎಂದು ಹಏಳುತ್ತಿಲ್ಲ. ತೆಗೆದುಕೊಳ್ಳಿ ಸ್ವಾಮಿ. ಆದರೆ ಇವೆಲ್ಲಾಕ್ಕಿಂತ ತಾವು ಕೋಲಾರ ಜಿಲ್ಲೆಯಲ್ಲಿ ಒಂದು ಗದ್ದೆ ಪ್ರದೇಶ ತೋರಿಸಿಬಿಡಿ. ನೀವು ಒಂದು ಕಡೆ ನೀರಾವರಿ ಪ್ರದೇಶ ತೋರಿಸಿ. ನಾನು ನಿಮಗೆ ಕೈಮುಗಿಯುತ್ತೇನೆ. ನಮ್ಮ ಜಿಲ್ಲೆಯಂತಹ ನತದೃಷ್ಟ ಜಿಲ್ಲೆ ಒಂದೂ ಇಲ್ಲ. ಒಂದು ಅಡಿ ಕೂಡ ನೀರಾವರಿ ಇಲ್ಲ. ಇವತ್ತು ಬೆಂಗಳೂರು ಗ್ರಾಮಾಂತರದಲ್ಲಿ ಕೂಡ ಹೆಚ್ಚು ಕಡಿಮೆ ಅದೇ ಪರಿಸ್ಥಿತಿ ಇದೆ. ಆದರೆ ಬೆಂಗಳೂರು ಗ್ರಾಮಾಂತರ ಇವತ್ತು ಅತ್ಯಂತ ಶ್ರೀಮಂತವಾಗಿದೆ. ಅಲ್ಲಿ ವ್ಯವಸಾಯ ಮಾಡತಕ್ಕಂಥವರೆ..

ಶ್ರೀ ಜಿ. ಚಂದ್ರಣ್ಣ : ಬೆಂಗಳೂರು ಗ್ರಾಮಾಂತರ ಶ್ರೀಮಂತವಾಗಿಲ್ಲ.

ಶ್ರೀ ಸಿ.ಬಿ. ಕೃಷ್ಣ ಬೈರೇಗೌಡ : ನಿಮ್ಮದೂ ನಮ್ಮ ಪರಿಸ್ಥಿತಿನೇ ಎಂದು ಹೇಳುತ್ತಿದ್ದೇನೆ.

ಶ್ರೀ ಜಿ. ಚಂದ್ರಣ್ಣ : ಶ್ರೀಮಂತವಾಗುತ್ತಿದೆ ಎಂದು ಹೇಳಿದರಲ್ಲ, ಇನ್ನು ಹತ್ತಾರು ವರ್ಷ ಹೋಗಬೇಕು. ಇನ್ನು ಈಗೀಗ ಆಗುತ್ತಿದೆ, ಆದರೆ ಅಲ್ಲಿ ಇನ್ನು ಹತ್ತಾರು ವರ್ಷ ಬದುಕಬೇಕಲ್ಲ.

ಶ್ರೀ ಸಿ.ಬಿ. ಕೃಷ್ಣ ಬೈರೇಗೌಡ : ಹೌದು, ಬೆಂಗಳೂರು ಗ್ರಾಮಾಂತರ ಪ್ರದೇಶದ ಪರಿಸ್ಥಿತಿ ಕೂಡ ಕೋಲಾರದ ಪರಿಸ್ಥಿತಿ ಇದೆ. ಆದರೆ ದಿನೇದಿನೇ ವ್ಯವಸಾಯ ಅವಲಂಬಿಸಿರುವವರು ಕಡಿಮೆಯಾಗುತ್ತಿದ್ದಾರೆ ಎಂದು ಹೇಳಿದೆ. ಅದರ ಜೊತೆಗೆ ತುಮಕೂರು, ತುಮಕೂರು ಸ್ವಲ್ಪ ಭಾಗಕ್ಕೆ ನೀರಾವರಿ ಬಂದಿದೆ. ಇನ್ನು ಉಳಿದ ಭಾಗ ಕೂಡ ನಮ್ಮ ಪರಿಸ್ಥಿತಿಯೇ ಇದೆ. ಇದೆಲ್ಲಾ ಬಿಟ್ಟು ಎಲ್ಲಾ ಅನುಕೂಲ ಇರುವಂತಹ ಜಿಲ್ಲೆಗಳಿಗೆ ಎಲ್ಲಾ ಸವಲತ್ತನ್ನು ಕೊಡುವುದು. ಆಯಿತು, ಅದೊಂದು ತಪ್ಪಿಸಿದರು ಎಂದರೆ ಬೇರೆ ಏನಾದರೂ ಕೊಟ್ಟಿದ್ದಾರೆ? ಯಾವುದೂ ಇಲ್ಲ. ಕಾರಣವೇನು? ನಾನು ಪಾತಾಳಕ್ಕೆ ಹೋಗಿಯಾದರೂ ಸರಿ ನೀರನ್ನು ತಂದು ವ್ಯವಸಾಯ ಮಾಡುತ್ತೇನೆ. ಜೀವನಕ್ಕೆ ಹೆದರಿ ಪ್ರಾಣ ಕಳೆದುಕೊಳ್ಳುವುದಿಲ್ಲ ಎಂದು ನಿಷ್ಠೆಯಿಂದ ಈ ದೇಶದ ಜನರಿಗೆ ಊಟ ಹಾಕುತ್ತೀದ್ದೇವಲ್ಲ, ಆ ತಪ್ಪಿಗೆ ಇವತ್ತು ನಮಗೆ ಈ ಶಿಕ್ಷೆ. ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ಜನ ನೇಣು ಹಾಕಿಕೊಳ್ಳಲಿಲ್ಲವಂತೆ, ಪ್ರಾಣ ಕಳೆದುಕೊಳ್ಳಲಿಲ್ಲವಂತೆ, ಆ ಕಾರಣಕ್ಕೆ ಈ ಶಿಕ್ಷೆ ಇದು ಯಾವ ನ್ಯಾಯ ಸ್ವಾಮಿ ?

ಅಧ್ಯಕ್ಷರು : ಯೋಜನೆಯನ್ನು ರೂಪಿಸತಕ್ಕಂಥವರಿಗೆ ಈ ವಿಚಾರ ಗೊತ್ತಿಲ್ಲವಲ್ಲ ಸ್ವಾಮಿ.

ಶ್ರೀ ಸಿ.ಬಿ. ಕೃಷ್ಣ ಬೈರೇಗೌಡ : ನಾವು ಯಾರ ಹತ್ತಿರ ನಮ್ಮ ಪರಿಸ್ಥಿತಿಯನ್ನು ಹೇಳಿಕೊಳ್ಳೋಣ. ನಾವು ಜನರಿಗೆ ಏನೆಂದು ಉತ್ತರ ಕೊಡಲಿ? ಇದನ್ನು ಎಲ್ಲರಿಗೂ ಸೇರಿಸಿ ಹೇಳುತ್ತಿದ್ದೇವೆ, ಅವರಿಗೆ, ಇವರಿಗೆ ಎಂದು ಅಲ್ಲ. ನಾನು Agriculture ಬಗ್ಗೆ ಮಾತನಾಡುವಾಗ ಕೇಂದ್ರ

ಸರ್ಕಾರದ ಮೇಲೆ ಮಾತನಾಡಿದ್ದೇನೆ. ನಾನು ಪಕ್ಷಾತೀತವಾಗಿ ಮಾತನಾಡುತ್ತಿದ್ದೇನೆ. ರೈತನಿಗೆ ಏನಾದರೂ ಅನುಕೂಲವಾಗುತ್ತದೆ ಎಂದರೆ ಎಲ್ಲರಿಗೂ ಹೊಟ್ಟೆ ಉರಿ. ಆಗಲೇ ಹೇಳಿದೆನಲ್ಲ, ರೈತನಿಗೆ ಬೆಲೆ ಬಂದ ತಕ್ಷಣ ಎಲ್ಲಾ ಸರ್ಕಾರಗಳಿಗೂ ಕಣ್ಣು ಕೆಂಪಾಗುತ್ತದೆ. ಬೇರೆ ಉತ್ಪನ್ನಗಳಾದ steel, cement ಬೆಲೆ ಜಾಸ್ತಿಯಾಗುತ್ತಿದ್ದರೆ ಯಾರೂ ಕೇಳುವವರಿಲ್ಲ. ಆತ್ಮಹತ್ಯೆ ಮಾಡಿಕೊಳ್ಳಲಿಲ್ಲ ಎನ್ನುವ ಕಾರಣಕ್ಕೆ ನಮಗೆ ಈ ಶಿಕ್ಷೆಯನ್ನು ಕೊಟ್ಟಿದ್ದಾರಲ್ಲ, ನಾವು ಜನರಿಗೆ ಏನೆಂದು ಉತ್ತರ ಕೊಡಬೇಕು. ಒಂದಷ್ಟು ಜನ suicide ಮಾಡಿಕೊಳಿ ಎಂದು ಹೇಳಲಾ ? ಈ ಮಾತನ್ನು ನಾನು ಬಾಯಿಬಿಟ್ಟು ಹೇಳಬೇಕು. ನಾವು ಎಂತಹ ನತದೃಷ್ಟರಿದ್ದೇವೆ. ಎಂತಹ ಕಾಲ ಇದು. ಹೋಗಲಿ, ಅದು ಆಯಿತು. ನಮ್ಮ ನೀರಾವರಿ ಮಂತ್ರಿಗಳು ಇಲ್ಲಿ ಇಲ್ಲ. ಕೋಲಾರದಲ್ಲಿ ಬೋರ್ ವೆಲ್ ಹಾಕಿದರೆ ಸಾವಿರ ಅಡಿ ಆಳಕ್ಕೆ ಹೋಗಿದ್ದೇವೆ. ನಮಗೆ ನಾಳೆ ಕುಡಿಯುವುದಕ್ಕೆ ನೀರು ಸಿಗುವುದಿಲ್ಲ. ನಮಗೆ ಕುಡಿಯುವುದಕ್ಕೆ ನೀರು ಕೊಡಿ ಎಂದು ವರ್ಷಾನುಗಟ್ಟಲೆ ನಾವು ಬಡಿದುಕೊಳ್ಳುತ್ತಿದ್ದೇವೆ. ಬಿದ್ದಂತಹ ಮಳೆಯನ್ನು ಶೇಖರಣೆ ಮಾಡುವುದಕ್ಕೆ ಕೆರೆಯನ್ನು ಅಭಿವೃದ್ಧಿ ಮಾಡಿ. ಮಾತೆತ್ತಿದರೆ SGSY, ಯಾವಾಗಲೂ ಜನಸಂವರ್ಧನೆ ಯೋಜನೆ ಒಂದು ಇದೆ ಎಂದು ಹೇಳುತ್ತಾರೆ. ಜಲಸಂವರ್ಧನೆ ಯೋಜನೆಯಲ್ಲಿ ನಮ್ಮ ಜಿಲ್ಲೆಯಲ್ಲಿ ಮಾನ್ಯ ಜೀವರಾಜ್ ರವರು ಏನು ಹೇಳಿದರು, ಅದೇ ನ್ಯಾಯ. ಆರೇಳು ಜಿಲ್ಲೆಗಳು ಜಲ ಸಂವರ್ಧನೆ ಯೋಜನೆಯಲ್ಲಿ ಸೇರಿವೆ. ಇನ್ನು ಐದಾರು ಜಿಲ್ಲೆಗಳು ಬಿಟ್ಟುಹೋಗಿದೆ. ನಮ್ಮಲ್ಲಿ ೪,೨೦೦ ಚಿಲ್ಲರೆ ಕೆರೆಗಳು ಇವೆ. ಆದರೆ ಅದರಲ್ಲಿ ತೆಗೆದುಕೊಂಡಿರುವುದು ೧,೦೨೫ ಕೆರೆಗಳನ್ನು ಅಭಿವೃದ್ಧಿ ಮಾಡಿದ್ದೇವೆಂದು ಹೇಳುವುದು. ಆದರೆ ಅಲ್ಲಿ ರೈತ ಎಷ್ಟು, ಏನೇನು ಕೆಲಸವಾಗಬೇಕು ಎಂದು ಕೇಳುತ್ತಾನೆ. ಆದರೆಲ್ಲಿ ಶೇಕಡ ೩೦ ರಷ್ಟು ಮಾತ್ರ ಕೆಲಸಗಳನ್ನು ಮಾಡುತ್ತಿದ್ದಾರೆ. ಈ ಜಲ ಸಂವರ್ಧನ ಯೋಜನೆಗೆ ನನಗೆ ತಿಳಿದ ಹಫೆ ೯೭೦ ಕೋಟಿ ರೂಪಯಿಗಳು ಇದ್ದು, ೨,೦೦೦ ಚಿಲ್ಲರೆ ಕೆರೆಗಳನ್ನು ತೆಗೆದುಕೊಂಡಿದ್ದಾರೆ. ನಮಗೆ ಇದನ್ನು ಕೇಳಿದಾಗ ಬಹಳ

ಸಂತೋಷವಾಯಿತು. ಆದರೆ ೯೭೦ ಕೋಟಿ ರೂಪಾಯಿಗಳಲ್ಲಿ ಅದಕ್ಕೆ allocation ಎಷ್ಟು ಎಂದರೆ ೧೫೦ ಕೋಟಿ ರೂಪಾಯಿಗಳು ಮಾತ್ರ.

ಶ್ರೀ ಡಿ.ಎನ್. ದೇವರಾಜ್ : ನಿಮಗೆ ಹನಿ ನೀರಾವರಿಯಲ್ಲಿ ೧೦೦% subsidy ಕೊಟ್ಟಿದೆ ಎಂದು ಹೇಳಿ ಸಾರ್.

ಶ್ರೀ ಸಿ.ಬಿ. ಕೃಷ್ಣ ಬೈರೇಗೌಡ : ಕೊಟ್ಟಿದ್ದಾರೆ, ಇಲ್ಲ ಎಂದು ಹೇಳುತ್ತಿಲ್ಲ. ಬಿಜಾಪುರಕ್ಕೂ ಕೊಟ್ಟಿದ್ದಾರೆ. ಕೋಲಾರಕ್ಕೂ ಕೊಟ್ಟಿದ್ದಾರೆ. ನಮ್ಮ ಪರಿಸ್ಥಿತಿಯನ್ನು ನೀವು ಬಂದು ನೋಡಿ, ಏನೆಂದು ಆಮೇಲೆ ಗೊತ್ತಾಗುತ್ತದೆ. ಬೇರೆ ಜಿಲ್ಲೆಗಳಲ್ಲಿ ಕೂಡ ೭೫% ಕೊಟ್ಟಿದ್ದಾರೆ. ನಿಮಗೇನೂ ಅನ್ಯಾಯ ಮಾಡಿಲ್ಲ. ನೀರಾವರಿ ಇರುವ ಕಡೆ ಸಾವಿರಾರು ಕೋಟಿ ಹೋಗುತ್ತಿದೆ, ನಮಗೆ ಏನೂ ಅಲ್ಲ. ನಿಮಗೆ ಶೇಕಡ ೭೫ ಕೊಟ್ಟಿದ್ದಾರೆ, ನಮಗೆ ಶೇಕಡ ೨೫ ಅಷ್ಟೇ ಜಾಸ್ತಿ ಕೊಟ್ಟಿರುವುದು. ಕನ್ನೇನು ಕೊಟ್ಟಿಲ್ಲ.

ಶ್ರೀ ಆರ್. ಧ್ರುವನಾರಾಯಣ್ : ಇಲ್ಲಿ ಕೃಷಿ ಮಂತ್ರಿಗಳು ಕುಳಿತುಕೊಂಡಿದ್ದಾರೆ. ೭೫% ಕೇವಲ ತೋಟಗಾರಿಕೆಗೆ ಕೊಟ್ಟಿರುವುದು.

ಶ್ರೀ ಸಿ.ಬಿ. ಕೃಷ್ಣ ಬೈರೇಗೌಡ : ನಮ್ಮಲ್ಲಿ ಕೂಡ Horticulture ಕೊಟ್ಟಿರುವುದು. ಇನ್ನೇನಿಲ್ಲಾ ೨೫% ವ್ಯತ್ಯಾಸಕ್ಕೆ point out ಮಾಡಿ ತೋರಿಸುತ್ತೀರಿ. ನಾನು ನಿಮ್ಮನ್ನು ಏನೂ ಕೇಳುವುದಕ್ಕೆ ಬಯಸುವುದಿಲ್ಲ. ನಮ್ಮನ್ನು ನೋಡಿಕೊಳ್ಳಿ ಎಂದು ಅಷ್ಟೆ ಕೇಳುವುದು. ನೀರಿನ source ಏನಿದೆ ಅದನ್ನು ಪುನಶ್ಚೇತನಗೊಳಿಸುವುದಕ್ಕೆ ಮಾನ್ಯ ಹಣಕಾಸು ಸಚಿವರಲ್ಲಿಕೈಮುಗಿದು ಮನವಿ ಮಾಡುತ್ತೇನೆ. ಕೋಲಾರಕ್ಕೆ ವಿಶೇಷವಾಗಿ ಏನಾದರೂ ಮಾಡಿ. ಇಲ್ಲದಿದ್ದರೆ, ಇನ್ನು ಐದೇ ವರ್ಷದಲ್ಲಿ ಕೋಲಾರ ಜಿಲ್ಲೆಯಿಂದ ನಾವು ಗುಳೆ ಹೋಗುವಂತಹ ಪರಿಸ್ಥಿತಿ ಬರುತ್ತದೆ.

ಶ್ರೀ ಹೆಚ್. ಎಂ. ವಿಶ್ವನಾಥ್ : ಮಾನ್ಯ ಕೃಷ್ಣ ಬೈರೇಗೌಡರು ನೀರಾವರಿ ವಿಚಾರವನ್ನು ಮಾತನಾಡುವಂತಹ ಸಂದರ್ಭದಲ್ಲಿ ಮಲೆನಾಡಿನವರ ಬಗ್ಗೆ ಮಾತನಾಡಿದರು. ಅದಕ್ಕೋಸ್ಕರ ಐದು ಗ್ರಾಮ ಪಂಚಾಯಿತಿಗಳನ್ನು ಕೋಲಾರ ಜಿಲ್ಲೆಗೆ ಕೊಟ್ಟುಬಿಡುತ್ತೇವೆ, ನೀವು ಬಂದು

ಬಿಡಿ. ಮಲೆನಾಡು ಭಾಗದಲ್ಲಿ ಐದು ಒಳ್ಳೆಯ ಗ್ರಾಮಪಂಚಾಯಿತಿಗಳು ಇವೆ, ಕೊಡುತ್ತೇವೆ. ನಮಗೆ ನಿಮ್ಮ ಕಡೆಯ ಮೂರು ಗ್ರಾಮ ಪಂಚಾಯಿತಿ ಕೊಡಿ. ನಮ್ಮ ಪರಿಸ್ಥಿತಿ ನೀವು ಬಂದು ನೋಡಬೇಕು. ನಮ್ಮಲ್ಲಿ ಮಳೆ ಜಾಸ್ತಿಯಾಗಿ ಬೆಳೆ ಇಲ್ಲ. ಇವತ್ತು ಎಂಟು ಗ್ರಾಮ ಪಂಚಾಯಿತಿಯಲ್ಲಿ ನಮಗೆ ಯಾವುದೇ ಬೆಳೆ ಇಲ್ಲ. ಕಾಫಿ, ಏಲಕ್ಕಿ, ಬಾಳೆ, ಭತ್ತನೂ ಕೂಡ ಬರುವುದಿಲ್ಲ. ಮಲೆನಾಡು ಭಾಗದಲ್ಲಿ ಪಶ್ಚಿಮ ಘಟ್ಟದಲ್ಲಿರುವಂತಹ ಕೆಲವು ಅಂಚಿನ ಭಾಗದಲ್ಲಿ ನಮ್ಮ ಜನಜೀವನ ಅವ್ಯವಸ್ಥೆ ಆಗಿಹೋಗಿದೆ. ಅಲ್ಲಿ ರಸ್ತೆ ಇಲ್ಲ ಬೆಳೆ ಕೂಡ ಇಲ್ಲ. ಆದ್ದರಿಂದ ನಿಜವೇನಾದರೂ ಮನಸ್ಸು ಮಾಡಿದರೆ change ಮಾಡಿಕೊಳ್ಳೋಣ. ಬಾರೀ ನೀರು ಕೊಡುತ್ತೇವೆ, ನಮಗೆ ೪೦೦ ಇಂಚು ಮಳೆ ಬೀಳುತ್ತದೆ. ನಾವು, ನೀವು ಬದಲಾವಣೆ ಮಾಡಿಕೊಳ್ಳೋಣ?

ಶ್ರೀ ಸಿ.ಬಿ.ಕೃಷ್ಣ ಬೈರೇ ಗೌಡ : ನಾವು ನೇತ್ರಾವತಿ ನೀರು ಕೊಡಿ ಎಂದು ಕೈಮುಗಿದು ಕೇಳಿಕೊಂಡರೂ ಎಲ್ಲಿ ಮನಸ್ಸು..

ಅಧ್ಯಕ್ಷರು : ಎಲ್ಲರಿಗೂ ಅವರವರ ಕಷ್ಟ ಅವರವರಿಗೆ ದೊಡ್ಡದು.

ಶ್ರೀ ಸಿ.ಬಿ. ಕೃಷ್ಣ ಬೈರೇಗೌಡ : ಕಷ್ಟ ಎಲ್ಲಾ ಕಡೆಯಲ್ಲೂ ಇದೆ. ಕನಿಷ್ಟ ಏನೂ ಬೇಡ, ಬೆಳೆ ಬೆಳೆಯುವುದಕ್ಕೆ ಆಗದೇ ಇದ್ದ್ರುಎ ಹೋಗಲಿ, ಕುಡಿಯುವುದಕ್ಕಾದರೂ ನೀರು ಬೇಕಲ್ಲ, ಇವತ್ತು ನಮ್ಮ ಕ್ಷೇತ್ರದಲ್ಲಿ bore well ಸಾವಿರ ಅಡಿ ಕೊರೆದರೂ ಹತ್ತು bore well ಗೆ ಐದರಲ್ಲಿ ಮಾತ್ರ ನೀರು ಸಿಗುತ್ತಿರುವುದು. ನಾವು ಕುಡಿಯುವುದಕ್ಕೆ ನೀರು ಕೊಡಿ ಎಂದು ಅಷ್ಟೇ ಕೇಳುತ್ತಿರುವುದು. ಹಾಗಾಗಿ ನಮ್ಮ ಜಿಲ್ಲೆಯ ಜಲಸಂಪನ್ಮೂಲಗಳು ಏನಿದೆ, ಅವುಗಳನ್ನು ಪುನಶ್ಚೇತನಗೊಳಿಸುವುದಕ್ಕೆ ವಿಶೇಷವಾದಂತಹ ಕಾರ್ಯಕ್ರಮವನ್ನು ಈಗಲಾದರೂ ನೀವು ಕೊಡಿ. ಯರಗೋಳಕ್ಕೆ ದುಡ್ಡು ಕೊಡುತ್ತೇವೆ ಎಂದು ಹೇಳಿದದೀರಿ, ಅದನ್ನು ಸ್ವಾಗತ ಮಾಡುತ್ತೇವೆ. ನಮ್ಮ ಕೋಲಾರಕ್ಕೆ ಅನ್ಯಾಯ ಆಗಿರುವುದು ಇದೇ ವಿಷಯದಲ್ಲಿ ಅಲ್ಲ. ನಾವು ಸಮಾಜಕ್ಕೆ ಡಿ.ವಿ.ಗುಂಡಪ್ಪನಂತವರು, ಹೆಚ್. ನರಸಿಂಹಯ್ಯನವರು, ಗೀತಾ ಶರ್ಮರವರು ಇಂತಹವರನ್ನೆಲ್ಲಾ ಕೊಡುಗೆಯಾಗಿ ಕೊಟ್ಟಿದ್ದೇವೆ. ಮಾಸ್ತಿಯವರು, ಹೆಸರು ಹೇಳುತ್ತಾ ಹೋದರೆ ಬೇಕಾದಷ್ಟು ಜನರು ಇದ್ದಾರೆ.

ಮಾಸ್ತಿಯವರ ಹೆಸರಿನಲ್ಲಿ ಕನಿಷ್ಟ ಏನೋ ಒಂದು ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ನಾನು ಏಕೆ ಡಿ.ವಿ.ಜಿ ಮತ್ತು ಹೆಚ್. ಎನ್. ಹೇಳಿದೆ ಎಂದರೆ ಡಿ.ವಿಜಿ. ಏನೂ ಅನ್ಯಾಯ ಮಾಡಿದ್ದು? ಕೋಲಾರ ಜಿಲ್ಲೆಯಲ್ಲಿ ...

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ರಮೇಶ್ ಕುಮಾರ್ ಅವರ ಬಗ್ಗೆ ..

ಶ್ರೀ ಸಿ.ಬಿ. ಕೃಷ್ಣ ಬೈರೇಗೌಡ : ನೀವು ಅವರ ಬಗ್ಗೆ ವಿಶೇಷ ಆಸಕ್ತಿ ವಹಿಸಿಕೊಂಡಿದ್ದೀರಿ, ಅದಕ್ಕೆ ನಿಮಗೆ ಬಿಟ್ಟಿದ್ದೇವೆ.

ಅಧ್ಯಕ್ಷರು : ನೋಡಪ್ಪ, ಯಾವರೀತಿ ಮಾನ್ಯ ಕೃಷ್ಣ ಬೈರೇಗೌಡ ತಿರುಗಿಸಿಕೊಟ್ಟರು !

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹಾಸನ ಮತ್ತು ಶಿವಮೊಗ್ಗ ಎರಡರ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದರು. ಹಾಸನ ಜಿಲ್ಲೆ ಪರಿಸ್ಥಿತಿ ಏನು ಎನ್ನುವುದನ್ನು ಮಾನ್ಯ ಕೃಷ್ಣ ಬೈರೇಗೌಡರು ಬಂದು ನೋಡಬೇಕು. ಅರಸೀಕೆರೆ ತಾಲ್ಲೂಕಿನ ಪರಿಸ್ಥಿತಿ ಏನು? ಹಾಸನ ತಾಲ್ಲೂಕಿನ ಪರಿಸ್ಥಿತಿ ಏನು? ಗಂಡಸಿ ವಿಧಾನಸಭಾ ಕ್ಷೇತ್ರದ ಪರಿಸ್ಥಿತಿ ಏನು? ಬೇಲೂರು ತಾಲ್ಲೂಕಿನ ಪರಿಸ್ಥಿತಿ ಏನು? ನನ್ನ ವಿಧಾನಸಭಾ ಕ್ಷೇತ್ರದಲ್ಲಿ, ನೀರಾವರಿ ಇಲ್ಲ. ನೀವು ಮಾತನಾಡುತ್ತಿದ್ದರಿಂದ ಹೇಳಿದೆ. ಆದರೆ ಕೆಲವು ವಿಚಾರಗಳನ್ನು ಹೇಳುವಂತಹ ಸಂದರ್ಭದಲ್ಲಿ ಏನಾಗುತ್ತದೆಯೆಂದರೆ ಹಾಸನ ತಾಲ್ಲೂಕಿನಲ್ಲಿ dam ಇದೆ. ಹಾಸನ ತಾಲ್ಲೂಕಿಗೆ ಎಷ್ಟು ನೀರಾವರಿಯಾಗುತ್ತದೆ? ಚನ್ನರಾಯಪಟ್ಟಣದಲ್ಲಿ ಮಾನ್ಯ ಪುಟ್ಟೇಗೌಡರು ಇದ್ದಾರೆ, ಅವರ ತಾಲ್ಲೂಕಿನಲ್ಲಿ ಎಷ್ಟು ನೀರಾವರಿ ಆಗುತ್ತದೆಯೆಂದು ಹೇಳಲಿ.

ಶ್ರೀ ಸಿ.ಎಸ್. ಪುಟ್ಟೇಗೌಡ : ಆ ಸ್ಥಿತಿ ಹೇಳಿಕೊಳ್ಳುವ ಹಾಗೆ ಇಲ್ಲ. ನೋಡುವುದಕ್ಕೆ ಗೌಡರು ಯಜಮಾನರ ತರಹ ಕಾಣುತ್ತೇವೆ, ಒಳಗಡೆ ನಮ್ಮ ಸ್ಥಿತಿ ನೋಡಿದರೆ, ಮಾನ್ಯ ವಿಶ್ವನಾಥ್ ಹೇಳಿದರಲ್ಲ ಆ ರೀತಿ ಬದಲಾವಣೆ

ಮಾಡಿಕೊಂಡು ಅದರಲ್ಲಿಯಾದರೂ ಸಂತೋಷವನ್ನು ಕಾಣಬೇಕು ಎನ್ನುವಂತಹ ಸ್ಥಿತಿಯಲ್ಲಿದ್ದೇವೆ.

ಶ್ರೀ ಹೆಚ್. ಡಿ. ರೇವಣ್ಣ : ನೀವು argument ಮಾಡಬೇಕಾದರೆ ಏನು argument ಮಾಡಿದಿರಿ. ಕೋಲಾರ ಜಿಲ್ಲೆಯಲ್ಲಿ ೭೦೦ ಚಿಲ್ಲರೆ ಬೀಳಬೇಕಾಗಿತ್ತು. ಆದರೆ ೬೦೦ ಚಿಲ್ಲರೆ ಬೀಳುತ್ತಿದೆ ಎಂದು ಹೇಳಿದಿರಿ. ಹಾಸನದಲ್ಲಿ ೧,೧೦೦ ಚಿಲ್ಲರೆ ಇದೆ, ಆದರೆ ಮಳೆ ಬೀಳುವುದು ೧,೨೦೦. ಮಳೆ ಮಲೆನಾಡಿನಲ್ಲಿ ಎಲ್ಲೋ ಒಂದು ಕಡೆ ಬಿದ್ದರೆ, ಅರಸೀಕೆರೆಯಲ್ಲಿ ಮಳೆ ಬೀಳುತ್ತಿದೆಯಾ? ಅರಸೀಕೆರೆಯಲ್ಲಿ ಮಳೆ ಏನಿದೆ ಹೇಳಲಿ, ಬೇಲೂರಿನಲ್ಲಿ ಮಳೆ ಏನಿದೆ ಹೇಳಲಿ. ಹಾಸನ ತಾಲ್ಲೂಕಿನಲ್ಲಿ ಏನು ಮಳೆ ಬಿದ್ದಿದೆ ಹೇಳಲಿ.

ಹಾಸನ ತಾಲ್ಲೂಕಿನಲ್ಲ ಎಷ್ಟು ಮಳೆ ಬಿದ್ದಿದೆ ಹೇಳಲಿ, ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಎಷ್ಟು ಮಳೆ ಬಿದ್ದಿದೆಯೆಂಬುದನ್ನು ಹೇಳಲಿ. ಮಾನ್ಯ ಕೃಷ್ಣ ಭೈರೇಗೌಡರು ಬಾರಿ ಬುದ್ಧಿವಂತರು, ಅವುರ ವಿದೇಶದಿಂದ ಬಂದಿರುವವರು. ಎಲ್ಲರೂ ವಿಷಯವನ್ನು ಹೇಳಿ, ಆದರೆ ಬೇರೆ ಬೇರೆ ರೀತಿ ಅರ್ಥವನ್ನು ಕಲ್ಪಿಸಬೇಡಿ.

ಶ್ರೀ ಕೆ.ಆರ್. ರಮೇಶ್ ಕುಮಾರ : ಮಾನ್ಯ ಅಧ್ಯಕ್ಷರೆ, ಸಂತೆಯೊಳಗೆ ವ್ಯಾಪಾರ ನಡೆಯುತ್ತಿದೆ. ನಾವು ಕೋಲಾರ ಜಿಲ್ಲೆಯವರು ಉಪ್ಪನ್ನು ಹಾಕಿಕೊಂಡಿದ್ದೇವೆ, ಮಳೆ ಜೋರಾಗಿ ಬಂತು. ನಮಗೆ ಏನೂ ಲಾಸ್ ಆಗಲಿಲ್ಲ, ಉಪ್ಪು ಕರಗಿ ಹೋಯಿತು. ಗೋಣಿಚೀಲವನ್ನು ಮೈ ಮೇಲೆ ಹಾಕಿಕೊಂಡು ಹೋದೆವು. ಇವುರ ವೀಳ್ಯೆದೆಲೆಯನ್ನು ತಂದಿರುವವರು, ಬಹಳ ಲಾಸ್ ಆಗಿ ಬಿಟ್ಟಿದೆ. ನವು ಉಪ್ಪು ತಂದವರು ನಮಗೆ ಏನು ಲಾಸ್ ಇಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ನಮ್ಮ ಕಡೆ ಒಂದು ಗಾದೆ ಮಾತು ಇದೆ. ಅವುರ ಮೂಲಭೂತ ಪ್ರಶ್ನೆಗಳನ್ನು ಪಕ್ಷಾತೀತವಾಗಿ ಮಾತನಾಡುತ್ತಿದ್ದಾರೆ. ಇಂತಹ ಯುವಕರಿಂದ ನಾವು ಕಲಿಯಬೇಕಾಗಿದೆ. ಅಷ್ಟು ಚೆನ್ನಾಗಿ ಮಾತನಾಡುತ್ತಿದ್ದಾರೆ. ನಮ್ಮ ಕಡೆಯಲ್ಲಿ "ಉಪ್ಪಿನವನು ಅತ್ತ ಎಂದು,

ತೆಂಗಿನಕಾಯಿಯವನು ಅತ್ತನಂತೆ", ಇವರದು ಅರ್ಥ ಹೊಟ್ಟೆ ತುಂಬಿದೆ. ಅವರಿಗೆ ಪೂರ ಹೊಟ್ಟೆ ಖಾಲಿ ಇದೆ.

ಶ್ರೀ ಸಿದ್ಧರಾಮಯ್ಯ : ಮಾನ್ಯ ಕೃಷ್ಣ ಬೈರೇಗೌಡರು ಯಾವ ಜಿಲ್ಲೆ ಮೇಲೂ, ಏಕೆ ಮಾಡಿದಿರಿ ಎಂದು ಎಲ್ಲೂ ಹೇಳಿಲ್ಲ. ನೀವು ಹೇಳುವ ರೀತಿ ನೋಡಿದರೆ ಅವರು ಏನೋ ಹಾಸನದ ಮೇಲೆ ಆರೋಪ ಮಾಡಿ ಬಿಟ್ಟಿದ್ದಾರೆಂದು ನೀವು, ಮಾನ್ಯ ವಿಶ್ವನಾಥ್ ರವರು ಅವರ ಮೇಲೆ ಬಿದ್ದಿದ್ದೀರಿ. ಅವರು ಹೇಳಿದ್ದು ನಮ್ಮ ಜಿಲ್ಲೆಯಲ್ಲಿ ಪರಿಸ್ಥಿತಿ ಈ ರೀತಿ ಇದೆಯೆಂದು ಹೇಳಿದರು.

ಶ್ರೀ ಸಿ.ಎ. ಪುಟ್ಟೇಗೌಡ : ಆದರೂ ಅವರ ಮಾತಿನಲ್ಲಿ ಏನಿತು, ಎಂದರೆ ಶಿವಮೊಗ್ಗ, ಹಾಸನ, ಚಿಕ್ಕಮಗಳೂರಿನಲ್ಲಿ ಬಹಳ ಸಂತೃಪ್ತಿ ಕಾಣುತ್ತಿದೆ.

ಶ್ರೀ ಸಿದ್ದರಾಮಯ್ಯ : ಇಲ್ಲ, ಅವರ argument ನಲ್ಲಿ ಸತ್ವ ಇದೆ. ಅವರು ಏನು ಹೇಳಿದರೆಂದರೆ Employment Guarantee Scheme ಕೆಳಗೆ ಮತ್ತೆ ೬ ಜಿಲ್ಲೆಗಳನ್ನು ೫ ಜಿಲ್ಲೆಗಳನ್ನು ಸೇರಿಸಿದ್ದಾರೆ. ಅದನ್ನು ಕಾರಣ ಕೊಡುವಾಗ ಏನು ಹೇಳುತ್ತಾರೆಂದರೆ, ಅಲ್ಲಿ ಆತ್ಮಹತ್ಯೆಯನ್ನು ಮಾಡಿಕೊಂಡಿದ್ದಾರೆ. ಅದಕ್ಕೋಸ್ಕರ, ರೈತರಿಗೆ ಪ್ಯಾಕೇಜ್ ಕೊಟ್ಟರಲ್ಲಾ, ಆ ಪ್ರಕಾರವಾಗಿ ಪ್ಯಾಕೇಜನ್ನು ಕೊಟ್ಟರು. ಆ ಪ್ಯಾಕೇಜ್‌ನಲ್ಲಿ ಸೇರಿದ ಜಿಲ್ಲೆಗಳನ್ನು ಮತ್ತೆ Employment Guarantee Scheme ಸೇರಿದ್ದಾರೆ. ಅದಕ್ಕೆ ಅವರು ಸಮರ್ಥನೆ ಮಾಡುತ್ತಾ ಅವರು ಏನು ಹೇಳಿದರೆಂದರೆ, ಈ ಜಿಲ್ಲೆಗಳಿಗೂ ಅವರ ಜಿಲ್ಲೆಗಳಿಗೂ Human developemnt indes ಹೇಗೆ ಇದೆ? ನಮ್ಮ ಜಿಲ್ಲೆ ಹೇಗೆ ಇದೆ? Rainfall ಹೇಗೆ ಇದೆ? ನಮ್ಮ ಜಿಲ್ಲೆಯಲ್ಲಿ ಹೇಗೆ ಇದೆ? ಇದರಲ್ಲಿ ನಮ್ಮನ್ನು ಸೇರಿಸಲಿಲ್ಲವೆನ್ನುವುದಷ್ಟೆ ಅವರ ನೋವು. ಇವರನ್ನು ಏಕೆ ಸೇರಿಸಿದ್ದೀರೆಂದು, ಅವರು ಕೇಳಲೇ ಇಲ್ಲ. ನಮ್ಮನ್ನು ಸೇರಿಸಲಿಲ್ಲವೆಂದು ಅವರು ಕೇಳುತ್ತಿದ್ದಾರೆ. Hassan is better placed than Kolar ಎಂದು ಅಷ್ಟೆ ಹೇಳಿದ್ದಾರೆಯೇ, ಹೊರತು ನೀವು ನೀರಾವರಿಯನ್ನು ಏಕೆ ಮಾಡಿಕೊಂಡಿದ್ದೀರೆಂದು ಅವರು ಹೇಳಿದ್ದಾರೆ?

ಅವರಿಗೆ ಒಂದು ತೊಟ್ಟು ನೀರಾವರಿ ಆಗಿದೆಯಾ? ಅವರು ಅದನ್ನೇ ಹೇಳುತ್ತಿರುವುದು.

ಶ್ರೀ ಹೆಚ್.ಡಿ.ರೇವಣ್ಣ : ಈಗ ನಾನು ಹೇಳುವಂಥಾದ್ದು, ಇವತ್ತು ಕೋಲಾರ ಜಿಲ್ಲೆಯಲ್ಲಿ ಒಂದು ದಿವಸಕ್ಕೆ ೮ ಲಕ್ಷ ಲೀಟರ್ ಹಾಲು ಬರುತ್ತದೆ. ಅದೇ ಹಾಸನ ಜಿಲ್ಲೆಯಲ್ಲಿ ೮ ಲಕ್ಷ ಲೀಟರ್ ಹಾಲು ಉತ್ಪದನೆ ಆಗುತ್ತದೆಯೇ? ಅದೇ ರೀತಿಯಲ್ಲಿ ರೇಷ್ಮೆ, ಇವತ್ತು ಯಾವಾವ ಹವಾಗುಣಕ್ಕೆ ಏನೇನು ಮಾಡಬೇಕೊ ಅದು ಇದೆ. ಇವತ್ತು ಉದಾಹರಣೆಗೆ ಹೇಳಬೇಕೆಂದರೆ, ಅರಸೀಕೆರೆಯಲ್ಲಿ ಒಂದು ಎಕರೆ ಜಮೀನನ್ನು ೫ ಸಾವಿರ ರೂಪಯಿಗಳಿಗೆ ತೆಗೆದುಕೊಳ್ಳುವುದಿಲ್ಲ. ಕೋಲಾರದಲ್ಲಿ ಜಮೀನಿಗೆ ೫ ಲಕ್ಷ ರೂಪಾಯಿಗಳನ್ನು ಕೊಟ್ಟರೂ ಕೊಡುವುದಿಲ್ಲ. ನಾನು ಹೇಳುವಂಥಾದ್ದು ಕೋಲಾರ ಜಿಲ್ಲೆಗೆ ಏನು ಬೇಕೋ ಸಕಲ ಸವಲತ್ತುಗಳನ್ನು ಕೊಡಲಿ, ಮಾನ್ಯ ಕೆ.ಆರ್. ರಮೇಶ್ ಕುಮಾರ್ ರವರ ಬಗ್ಗೆ, ಮಾನ್ಯ ಕೃಷ್ಣ ಭೈರೇಗೌಡರ ಬಗ್ಗೆ ನಮಗೆ ಏನೂ ಇಲ್ಲ. ಆದರೆ ಅವರು ಏನು ಹೇಳುವುದೆನೆಂದರೆ, argument ಮಾಡುವ ಸಂದರ್ಭದಲ್ಲಿ, ಈ ರೀತಿ ಹಾಸನದಲ್ಲಿ ..

ಅಧ್ಯಕ್ಷರು : Exchange ಮಾಡಿಕೊಂಡು ಬಿಡಿ.

ಶ್ರೀ ಸಿದ್ಧರಾಮಯ್ಯ : ಅವರು ನೀರು ಕೊಡಿ ಎಂದು ಕೇಳುತ್ತಿದ್ದಾರೆ.

ಶ್ರೀ ಹೆಚ್. ಡಿ ರೇವಣ್ಣ : ನಮಗೆ ಏನು, ಕೇಂದ್ರ ಸರ್ಕಾರ ಮಾನ್ಯ ಕೃಷ್ಣ ಬೈರೇಗೌಡರ ಪರವಾಗಿ ಇದೆ. ಮಾನ್ಯ ಧರ್ಮಸಿಂಗ್ ರವರು ಇದ್ದಾರೆ. ನವು ಬೇಕಾದರೆ ಕೇಂದ್ರ ಸರ್ಕಾರಕ್ಕೆ ಜೊತೆಯಲ್ಲಿ ಹೋಗಿ ಹೇಳುತ್ತೇವೆ. ಕೋಲಾರ ಜಿಲ್ಲೆಗೆ ಏನೇನು ಬೇಕೊ ಎಲ್ಲವನ್ನು ಮಾಡಲಿ, ಬೇಕದರೆ ವಿಧಾನಸಭೆಯಲ್ಲಿ resolution ಮಾಡಿಯೇ ಕಳುಹಿಸೋಣ. ಕೋಲಾರ ಜಿಲ್ಲೆಗೆ ವಿಶೇಷವಾಗಿ ಏನೇನು ಬೇಕೊ ಮಾಡಲಿ, ನಮ್ಮದು ಏನು ಅಭ್ಯಂತರವಿಲ್ಲ.

ಶ್ರೀ ಸಿದ್ಧರಾಮ್ಯಯ : ಮಾನ್ಯ ರೇವಣ್ಣನವರೆ, Education ಗೆ ದುಡ್ಡು ಕೊಡಲಿಲ್ಲವೆಂದರೆ, ಧರಣಿ ಮಾತುತ್ತೇನೆಂದು ಹೇಳಿದ್ದೀರಿ.

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಸಿದ್ಧರಾಮ್ಯಯನವರೆ, ತಾವು ತಪ್ಪು ತಿಳಿಕೊಂಡಿದ್ದೀರಿ.

ಶ್ರೀ ಸಿದ್ಧರಾಮ್ಯಯ : ತಪ್ಪಲ್ಲ, ಈ ವಿಷಯ ಪತ್ರಿಕೆಗಳಲ್ಲಿ ಬಂದಿದೆ.

ಶ್ರೀ ಹೆಚ್. ಡಿ. ರೇವಣ್ಣ : ನಾನು ಒಂದು ವಿಷಯ ಹೇಳುತ್ತೇನೆ. ಪತ್ರಿಕೆಗಳನ್ನು ಆಧಾರವಾಗಿಟ್ಟುಕೊಂಡು ನಾವು ಮಾತನಾಡುವುದು ಬೇಡ.

ಶ್ರೀ ಸಿದ್ಧರಾಮಯ್ಯ : ಅದು ಸರಿ ಇಲ್ಲವಾ?

ಶ್ರೀ ಹೆಚ್. ಡಿ. ರೇವಣ್ಣ : ನಾನು ಸರಿ ಇಲ್ಲವೆಂದು ಹೇಳುತ್ತಾ ಇಲ್ಲ. Argument ಮಾಡುವುದಕ್ಕೆ ನಮಗೆ ಏನಂತೆ? ನಾನು ಶಿಕ್ಷಣಕ್ಕೆ ಒತ್ತು ಕೊಡಿಯೆಂದು ಹೇಳುವುದರಲ್ಲಿ ತಪ್ಪು ಏನು ಇದೆ? ಇವತ್ತು ನಾನು ಹೇಳುವಂಥಾದ್ದು, ಒಂದು ಹೊತ್ತು ಊಟ ಇಲ್ಲದಿದ್ದರೂ ಪರವಾಗಿಲ್ಲ. ಶಿಕ್ಷಣಕ್ಕೆ ಒತ್ತು ಕೊಡಿಯೆಂದು ಇವತ್ತು ಹೇಳುತ್ತೇನೆ. ಇವತ್ತು ಮಾನಯ ಕೃಷ್ಣ ಭೈರೇಗೌಡರೂ ಹೇಳುತ್ತೇನೆ. ಇಷೆಲ್ಲಾ argument ಮಾಡಿ..

ಶ್ರೀ ಸಿದ್ಧರಾಮಯ್ಯ : ಅದಕ್ಕೆ ತಾರೀಫ್ ಮಾಡುತ್ತಿರುವುದು. ಕ್ಯಾಬಿನೆಟ್ ನಲ್ಲಿ ನೀವು ಪ್ರಭಾವ ಮಂತ್ರಿಯಾಗಿ.

ಶ್ರೀ ಹೆಚ್. ಡಿ. ರೇವಣ್ಣ : ನಾನು ಪ್ರಭಾವ ಮಂತ್ರಿಯಲ್ಲ..

ಶ್ರೀ ಸಿದ್ಧರಾಮಯಯ್ಯ : ನಮಗೆ ಏನು ಹೊಸದಾ ಹೇಳಿ ಕೊಡುವುದಕ್ಕೆ ?

ಅಧ್ಯಕ್ಷರು : ಮಾನ್ಯ ಸಿದ್ಧರಾಮಯ್ಯನವರೆ, ಆಯಿತು ವಿಷಯ close ಮಾಡಿ. ಮಾನ್ಯ ಕೃಷ್ಣ ಭೈರೇಗೌಡರೆ, ತಮ್ಮ ಭಾಷಣವನ್ನು ಮುಕ್ತಾಯ ಮಾಡಿ.

ಶ್ರೀ ಸಿ.ಎಂ. ಉದಾಸಿ : ಮಾನ್ಯ ಕೃಷ್ಣ ಭೈರೇಗೌಡರು ಚೆನ್ನಾಗಿ ಮಾತನಾಡುತ್ತಿದ್ದಾರೆ. ಮಾನ್ಯ ಸಿದ್ಧರಾಮಯ್ಯನವರು ಸಹಿತ ಚೆನ್ನಾಗಿ ಮಾತ

ನಾಡುತ್ತಿದ್ದಾರೆ. ನಾನು ಒಂದು ವಿಚಾರವನ್ನು ಅವರ ಗಮನಕ್ಕೆ ತರಲಿಚ್ಚೀಸುತ್ತೇನೆ. "Rural Employment Gurantee Scheme" ಬಗ್ಗೆ ಕೋಲಾರ ಜಿಲ್ಲೆಯೂ ಸೇರಿ, ತುಮಕೂರು, ಗದಗ್, ಹಾವೇರಿ, ಕೊಪ್ಪಳ, ಬಳ್ಳಾರಿ ಸೇರಿಸಿ. ಒಟ್ಟು ೮ ಜಿಲ್ಲೆಗಳನು ಕೇಂದ್ರ ಸರ್ಕಾರಕ್ಕೆ ನಾವು ಪ್ರಸ್ತಾವನೆ ಕಳುಹಿಸಿದೆವು. ಆದರೆ ಕೇಂದ್ರ ಸರ್ಕಾರದವರು ಜಿಲ್ಲೆಗಳನ್ನು ಆಯ್ಕೆ ಮಾಡಬೇಕಾದಾಗ, suzan package ನಲ್ಲಿ ಕೊಟ್ಟಿರಬೇಕಾದಂಥ, ವಇದರ್ಭದಲ್ಲಿ ಕೊಟ್ಟಿರಬೇಕಾದಂಥ ಸಂದರ್ಭದಲ್ಲಿ ಕರ್ನಾಟಕದಲ್ಲಿ ಕೊಟ್ಟಿರುವಂತಹ ಜಿಲ್ಲೆಗಳನ್ನೆ ಆದ್ಯತೆಯ ಮೇಲೆ ಗುರುತಿಸಿದ್ದಾರೆಯೆ, ಹೊರತು ಅದರಲ್ಲಿ ಬಳ್ಳಾರಿ ಜಿಲ್ಲೆ ಒಂದನ್ನು ಮಾತ್ರ additional ಆಗಿ ಸೇರಿಸಿದ್ದಾರೆಯೇ ಹೊರತು, ವಿಶೇಷವಾಗಿ ನಾವು ಪ್ರಸ್ತಾವನೆಯನ್ನು ಕಳುಹಿಸಬೇಕಾದಾಗ ಕೋಲಾರ, ಚಾಮರಾಜ ನಗರ, ತುಮಕೂರು, ಹಾವೇರಿ, ಕೊಪ್ಪಳ, ಒಟ್ಟು ೮ ಜಿಲ್ಲೆಗಳನ್ನು ಕಳುಹಿದ್ದೇವೆ. ಅದನ್ನು ಆಯ್ಕೆ ನಾವಲ್ಲ ಮಾಡಿದ್ದು. ನಾವು ಆಯ್ಕೆ ಪ್ರಸ್ತಾವ ಮಾಡಿದ್ದು, ಕೇಂದ್ರದಲ್ಲಿ ಈಗ ಅನ್ಯಾಯವಾಗಿದೆ.

ಶ್ರೀ ಸಿದ್ಧರಾಮಯ್ಯ : He is not making allegation against anybody. ಏನು ಇಲ್ಲವೆಂದು ಅಷ್ಟೆ ಹೇಳುವುದು.

ಶ್ರೀ ಸಿ.ಎಂ. ಉದಾಸಿ : ಅಷ್ಟಾದರೆ ಪರವಾಗಿಲ್ಲ, ಆದರೆ ತಪ್ಪು ಸಂದೇಶ ಹೋಗುವುದು ಬೇಡವೆಂದು ಹೇಳುತ್ತೇನೆ. ಇದು ಆಗದೇ ಇರುವುದಕ್ಕೆ ರಜ್ಯ ಸರ್ಕಾರ ಕಾರಣವೆಂದು ಆಗಬಾರದಲ್ಲವೆಂಬ ಕಾರಣಕ್ಕೆ ನಾನು ತಮಗೆ ವಿವರಣೆ ಕೊಟ್ಟೆ.

ಶ್ರೀ ಹೆಚ್. ಡಿ. ರೇವಣ್ಣ : ನಾವು ಮತ್ತು ಮಾನ್ಯ ದೇವೇಗೌಡರು ಹಾಸನದಲ್ಲಿದ್ದೇವೆಂದು, ಇವರು ಏನೋ ಬೇರೆ ರಾಜಕೀಯುವನ್ನು ಮಾಡಿದ್ದಾರೆಂಬ ತಪ್ಪು ಅಭಿಪ್ರಾಯ ಬರಬಾರದು.

ಶ್ರೀ ಕೆ. ಆರ್. ರಮೇಶ್ ಕುಮಾರ್ : ನಾವು ಕೇಂದ್ರ ಸರ್ಕಾರವನ್ನು ಸೇರಿಸಿಯೇ ಹೇಳಿದ್ದು. ಅವರು ಮಾಡಿರುವಂಥಾದ್ದು

ತಪ್ಪೆಂದು ಹೇಳಿದ್ದೇವೆ. ಅವರು ತಪ್ಪು ಮಾಡಿದರೆ, ತಪ್ಪು ಎಂದು ಹೇಳುವ ಅಧಿಕಾರ ನಮಗೆ ಇರುವುದಿಲ್ಲವೇ?

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಕೃಷ್ಣ ಭೈರೇಗೌಡರು ಮಾತನಾಡುವಾಗ ಎಷ್ಟು ಚೆನ್ನಾಗಿ ಹೇಳಿದರೆಂದರೆ, ನಾವು ಅಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲವೆಂದು ಪ್ರಾಣಕ್ಕಾಗಿ ಭಾಷೆಯನ್ನು ಕೊಡಬೇಕೆ, ಅಥವಾ ಈಗ ನಾನು ಜನರಿಗೆ ಏನು ಉತ್ತರವನ್ನು ಕೊಡಲಿ? ಆತ್ಮಹತ್ಯೆ ಮಾಡಿಕೊಳ್ಳಿಯೆಂದು ಪ್ರೇರೆಪಿಸಲೇ ಎಂಥ ಅದ್ಭುತವಾದ ಮಾತುಗಳು, ಮನ ಕಲಕುವಂಥ ಮಾತುಗಳು, ಇವು ನಿಜವಾಗಿ..

ಶ್ರೀ ಕೆ.ಆರ್. ರಮೇಶ್ ಕುಮಾರ್ : He has made the best presentation.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷೆ, ಮಾನ್ಯ ಕೃಷ್ಣ ಭೈರೇಗೌಡರ ಪರಿಸ್ಥಿತಿ ಏನಾಯಿತೆಂದರೆ, " ಗುಡಿಯೊಳಗಿನ ಹನುಮಂತ, ಹಗ್ಗ ತಿನ್ನುವ ಹೊತ್ತಿಗೆ, ಪೂಜಾರಿ ಶಾವಿಗೆ ಬೇಡುವ ಹಾಗೆ ಆಯಿತು." ಎಲ್ಲರೂ ಸೇರಿ ಏನು ಹೇಳಿದರೆಂದರೆ, ನಮ್ಮ ಪರಿಸ್ಥಿತಿಯೇ ಕೆಟ್ಟಿದೆ, ನಿಮ್ಮದು ಹೇಗೆ ನೋಡುವುದು ಎಂದ ಹಾಗೆ ಆಯಿತು.

ಶ್ರೀ ಸಿ.ಬಿ. ಕೃಷ್ಣ ಭೈರೇಗೌಡ : ಮಾನ್ಯ ಉಪಾಧ್ಯಕ್ಷರೆ, ನಮ್ಮದೇ ಪರಿಸ್ಥಿತಿ ಸಾಕಾಗಿರುವಾಗ, ನಿಮ್ಮ ಕಡೆಯಲ್ಲಿ ಎಲ್ಲಿ ನೋಡುವುದು, ಎಂದು ಹೇಳಿದರು. ನಾನು ಮಾನ್ಯ ಸಿದ್ಧರಾಮಯ್ಯನವರು ಹೇಳಿದ ವಿಚಾರವನ್ನು ನಾನು ಮತ್ತೆ ಸ್ಪಷ್ಟೀಕರಿಸ ಬಯಸುತ್ತೇನೆ. ಇಲ್ಲಿ ಯಾರಿಗೆ ಕೊಟ್ಟಿರುವುದಕ್ಕೆ ನನ್ನದು ಏನು objection ಇಲ್ಲ. ನಾನು ಆಗಲೇ ಮಾತನಾಡುವಾಗ ಪದೇ ಪದೇ ಹೇಳಿದ್ದೇನೆ. ಆದರೆ ನಮ್ಮ ಪರಿಸ್ಥಿತಿ ಏಆಗಿದೆಯೆಂದರೆ, ಮಾನ್ಯ ಪ್ರಕಾಶ್ ರವರು ಹೇಳಿದ ಹಾಗೆ ಕೆಲವು ಕಡೆ ಅರ್ಧ ಹೊಟ್ಟೆ ತುಂಬಿದೆ. ನಮ್ಮದು ಪೂರ್ತಿ ಹೊಟ್ಟೆ ಖಾಲಿ ಇದೆ. ನಾಳೆ ಉಸಿರು ಕಟ್ಟುವುದೊಂದೇ ಬಾಕಿ ಇರುವುದು. ನಾನು ಅದನ್ನು ಹೇಳುತ್ತಿದ್ದೇನೆಯೇ ಹೊರತು ಬೇರೆ ಯವರಿಗೆ at least ಉಸಿರು ಆಡುತ್ತಿದೆ, ನೀರು ಕುಡಿಯುವುದಕ್ಕೆ ಸಿಗುತ್ತಿದೆ, ಏನೋ ಆಗುತ್ತಿದೆ. ನಮಗೆ ಉಸಿರು ಕಟ್ಟುವ ಮಟ್ಟಕ್ಕೆ ಬಂದಿದ್ದೇವೆ.

ನಾನು ಅಷ್ಟನ್ನೆ ಹೇಳುತ್ತಿದ್ದೇನೆ. ಇಲ್ಲಿ ಯಾರಿಗೂ ಕೊಟ್ಟಿರುವ ಬಗ್ಗೆ ನನ್ನ ಅಕ್ಷೇಪಣೆ ಇಲ್ಲ. ಇದು ರಾಜಕೀಯದಲ್ಲಿ ಎಲ್ಲಾ ಮಾಮೂಲಿಯಾಗಿ ಇದೆ. ನಾನು ಯಾವುದೇ ಪಕ್ಷದ ಮೇಲೆ, ಸರ್ಕಾರದ ಮೇಲೆ ಮಾತನಾಡುತ್ತಿಲ್ಲ. ನನ್ನ ಪರಿಸ್ಥಿತಿಯನ್ನು ನಾನು ಹೇಳಿಕೊಳ್ಳುತ್ತಿದ್ದೇನೆ ಅಷ್ಟೆ. ಮಾನ್ಯ ಹೆಚ್. ಡಿ. ರೇವಣ್ಣನವರು ಅವರ ಕೆಲವು ತಾಲ್ಲೂಕುಗಳನ್ನು ಬಂದು ನೋಡಿಯೆಂದು ಹೇಳಿದರು. ನಮ್ಮ ಕ್ಷೇತ್ರಕ್ಕೆ ಬನ್ನಿಯೆಂದು ನಾನು ಎರಡು ತಿಂಗಳುಗಳಿಂದ ಕರೆಯುತ್ತಿದ್ದೇನೆ. ಅವರು ಬರಲಿಲ್ಲ. ಅವರು ಯಾವಾಗ ಹೇಳಿದರೆ, ಆಗ ನಾನ ಅವರ ಕ್ಷೇತ್ರಕ್ಕೆ ಹೋಗಿ ನೋಡಿಕೊಂಡು ಬರಲು ತಯಾರು ಇದ್ದೇನೆ. ನಮ್ಮ ಕ್ಷೇತ್ರಕ್ಕೆ ಅವರನ್ನು ಕರೆದರೂ ಬರಲಿಲ್ಲ. ನೀವು ಯಾವಾಗ ಕರೆದರೂ ನಿಮ್ಮ ಕ್ಷೇತ್ರಕ್ಕೆ ಬರುತ್ತೇನೆ. ನಾನು ಮಾನ್ಯ ವಿಶ್ವನಾಥ್ ರವರೊಡನೆ exchange ಮಾಡಿಕೊಳ್ಳುವುದಕ್ಕೆ ತಯಾರು ಇದ್ದೇನೆ. ಆದರೆ ಜನಗಳನ್ನು ಮಾರಾಟ ಮಾಡುವುದಕ್ಕೆ ನಾನು ಯಾರು? ಏನು ಬೇಡ, ನೀವು ಮಾರಾಟ ಮಾಡುವುದು ಬೇಡ. ಅಲ್ಲಿ ಎಕ್ಸಸ್ ನೀರನ್ನು ನಮ್ಮ ಕಡೆಗೆ ಕೊಡುವುದಕ್ಕೆ ದೊಡ್ಡ ಮನಸ್ಸು ಮಾಡಿ ಒಪ್ಪಿಕೊಂಡು ಬಿಡಲಿ, ಅಷ್ಟೆ ಸಾಕು. ನಾನು ಡಿ.ವಿ.ಇ.ಯವರ ವಿಚಾರವನ್ನು ಮಾತನಾಡುತ್ತಿದ್ದೆ. ಡಾ: ಹೆಚ್.ನರಸಿಂಹಯ್ಯ ನವರ ವಿಚಾರವನ್ನು ಮಾತನಾಡುತ್ತಿದ್ದೆ. ನಮ್ಮ ಜಿಲ್ಲೆಯಲ್ಲಿ ಡಾ.ವಿಶ್ವೇಶ್ವರಯ್ಯ ನವರಿಂದ ಹಿಡಿದು ಮಾಸ್ತಿಯವರಾಗಬಹುದು, ಸಾಕಷ್ಟು ಕೊಡುತಗೆಯನ್ನು ಕೊಟ್ಟಿದ್ದೇವೆ. ಇವತ್ತು ನೀಉುವ ಎಲ್ಲರ ಸೇವೆಯನ್ನು ಗುರುತಿಸಿದ್ದೀರಿ, ಗುರುತಿಸಿ. ನಾವು ಬೇಡವೆಂದು ಹೇಳುವುದಿಲ್ಲ. ಆದರೆ ಡಿವಿಜಿಯವರ ತಪ್ಪು ಏನು? ನಮ್ಮ ಜಿಲ್ಲೆಯಲ್ಲಿ ಅವರು ಹುಟ್ಟಿದ್ದು ತಪ್ಪಾ? ಅವರು ಹುಟ್ಟಿ ೧೨೦ ವರ್ಷಗಳು ಆಗಿದೆ. ಅವರ ಹೆಸರಿನಲ್ಲಿ ಏನಾದರೂ ಮಾಡಲು ದೊಡ್ಡ ಮನಸ್ಸು ಮಾಡಿದ್ದರೆ, ನಿಮಗೆ ತಪ್ಪಾಗುತ್ತಿತ್ತಾ? ಮಂಕುತಿಮ್ಮನ ಕಗ್ಗ ಎಂದರೆ, ಇವತ್ತು ಅದರ value ಏನು? ಈಕಲಿಯುಗದ ಭಗವದ್ಗೀತೆ ಎಂದು ನಾನು ಹೇಳಬಯಸುತ್ತೇನೆ. ಮಾನ್ಯ ಪ್ರಕಾಶ್ರವರೆ, ತವು ಅದನ್ನು ಒಪ್ಪುತ್ತಿರೊ, ಇಲ್ಲವೊ? ಅದನ್ನು ಒಂದೊಂದು ಬಾರಿ ಓದುತ್ತಾ ಇದ್ದರೆ, ಅದರ ಅರ್ಥಗಳನ್ನು ನಾವು ಹುಡುಕುತ್ತಾ ಹೋದರೆ, ಅದು ಎಂತಹ ಮಹಾನ್ ಕಾವ್ಯ. ಅಂಥಾದ್ದನ್ನು ಕೊಟ್ಟಿರುವ ಡಿವಿಜಿಯರನ್ನು ಗುರುತಿಸಿ,

ಅವರ ಹೆಸರಿನಲ್ಲಿ ಏನಾದರೂ ಒಂದು ಪೀಠವನ್ನು ಮಾಡಿದ್ದಾರೆ. ಹಗಾಫಿ ಮಾಸ್ತಿಯವರ ಹೆಸರನ್ನು ಪ್ರಸ್ತಾಪ ಮಾಡುತ್ತಿಲ್ಲ. ಅದೇ ರಈತಿಯಲ್ಲಿ ಡಾ.ಹೆಚ್. ನರಸಿಂಹಯ್ಯನವರ ಬಗ್ಗೆ ಕಳೆದ ಬಜೆಟ್ ನಲ್ಲಿ ಮಾನ್ಯ ಸಿದ್ಧರಾಮಯ್ಯರವರು ಇದ್ದರೆಂದು ಕಾಣುತ್ತದೆ. ಬಜೆಟ್ ನಲ್ಲಿ ಭವನವನ್ನು ನಿರ್ಮಾಣ ಮಾಡಲು ಘೋಷಣೆ ಮಾಡಿದ್ದರು. ಇವತ್ತಿಗೂ ಅದು ಆಗಿಲ್ಲ, ಅವರು ಎಂಥ ಮೇದಾವಿಗಳು ಆಗಿದ್ದರು. ಅವರು ಶಿಕ್ಷಣ ಕ್ಷೇತ್ರಕ್ಕೆ ಕೊಟ್ಟಂಥ ಕೊಡುಗೆ ಏನು?

ನೀವು ಕೊನೆಯಲ್ಲಿ ಹೇಳಿದಿರಿ, ಅವರು implement ಮಾಡಲಿಲ್ಲ ಸಾರ್. ಹಾಗಾಗಿ, ನಮ್ಮ ಜಿಲ್ಲೆ ಬಗ್ಗೆ ಅಷ್ಟು ವಿಷಯಗಳನ್ನು ಹೇಳುತ್ತಾ. ೩-೪ ವರ್ಷಗಳಲ್ಲಿ ಕುಡಿಯುವುದಕ್ಕೆ ನೀಉರ ಸಿಗದೇ ನಮ್ಮ ಜಿಲ್ಲೆಯನ್ನು ಖಾಳಿ ಮಾಡಬೇಕಾದಂಥ ಪರಿಸ್ಥಿತಿ ಇದೆ. ಹಲು ಉತ್ಪಾದನೆ ಏಳೂವರೆ ಲಕ್ಷ ಲೀಟರ್ ಆಗುತ್ತಿದೆ ನಿಜ, ಒಪ್ಪಿಕೊಳ್ಳುತ್ತೇನೆ. ನಾಳೆ, ಕುಡಿಯುವುದಕ್ಕೆ ನೀರಿಲ್ಲದೇ ನಾವು ಊರುಗಳನ್ನು ಖಾಲಿ ಮಾಡಿದರೆ ಮನುಷ್ಯರು ಇರುವುದಿಲ್ಲ. ಹಾಲಂತು ಇಲ್ಲವೇ ಇಲ್ಲ. ಆ ಪರಿಸ್ಥಿತಿಗೆ ಹೋಗುತ್ತಿದ್ದೇವೆ. ಎಲ್ಲ ಶಾಸಕರೂ ನಮ್ಮ ಹಳ್ಳಿಗೆ ಬಂದು, ನಮ್ಮ ರೈತರ ಜೊತೆ ಮಾತನಾಡಿ, ನಮ್ಮ ಜಿಲ್ಲೆಯಲ್ಲಿ ನಿಜವಾಗಿ ಏನು ಸಮಸ್ಯೆಗಳು ಎನ್ನುವುದನ್ನು ಕೇಳಿ ಸಾರ್. ಇದರಿಂದ ಏನೆನ್ನುವುದು ನಿಮಗೇ ಅರ್ಥವಾಗುತ್ತದೆ. ನಮ್ಮ ಜಇಲ್ಲೆ ಎಂದು ನಾನು ಮಾತನಾಡುತ್ತಿದ್ದೇನೆಂದಲ್ಲ ಅಥವಾ ನನ್ನ ಕ್ಷೇತ್ರದ ಬಗ್ಗೆ ನಾನು ಮಾತನಾಡಲೇ ಇಲ್ಲ. ಕೋಲಾರ, ತುಮಕೂರು, ಬೆಂಗಳೂರು ಗ್ರಾಮಾಂತರ ಇವುಗಳದೆಲ್ಲ ಇದೇ ಪರಿಸ್ಥಿತಿಯಾಗಿದೆ. ವಿಶೇಷವಾಗಿ ಕಣ್ಣು ಬಿಡದೇ ಹೋದರೆ ಆ ಊರುಗಳಲ್ಲಿ ಜನರೆಲ್ಲ ಆ ಊರುಗಳನ್ನು ಖಾಲಿ ಮಾಡಿ ಬೆಂಗಳೂರಿಗೆ ಬಂದು ಸೇರಿಕೊಂಡು, ಬೆಂಗಳೂರಿನಲ್ಲಿ ಆಗಬಾರದ ಅನಾಹುತ ಮುಂದಿನ ದಿನಗಳಲ್ಲಿ ಆಗುತ್ತದೆ. ದಯವಿಟ್ಟು, ಇದನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳುತ್ತೇನೆ. ಶಾಲಾ ಮಕ್ಕಳಿಗೆ ಮಧ್ಯಾಹ್ನ ಬಿಸಿಯೂಟ ಕೊಡುವ ವ್ಯವಸ್ಥೆಯನ್ನು ೭-೧೦ನೇ ತರಗತಿಯವರೆಗೆ ವಿಸ್ತರಿಸಿದ್ದೀರಿ. ಮಾನ್ಯ ಸಮಾಜ ಕಲ್ಯಾಣ ಸಚಿವರು ಸಹ ಸದನದಲ್ಲಿ ಉಪಸ್ಥಿತರಿದ್ದು, ಇದರ ಬಗ್ಗೆ ಗಮನ ಕೊಡಬೇಕು. ಆರ್ಥಿಕ ಮಂತ್ರಿಗಳು

ಸಹ ಗಮನ ಕೊಡಬೇಕು. ಒಳ್ಳೆಯ ಒಂದು ಅಂಕೆ ಸಂಖ್ಯೆಯನ್ನು ತಮಗೆ ಕೊಡಬಯಸುತ್ತೇನೆ. ಇವತ್ತು ೭ನೇ ತರಗತಿಯವರೆಗೆ hostel ನಲ್ಲಿರುವ ಮಕ್ಕಳು hostel ನಲ್ಲಿ ಮಧ್ಯಾಜ್ನ ಊಟ ಮಾಡುತ್ತಿದ್ದಾರೆಂದು bill ಆಗುತ್ತಿದೆ. ಅದೇ ಸಂದರ್ಭದಲ್ಲಿ ಶಾಲೆಯಲ್ಲಿಯು ಸಹ ಅವರ ಹೆಸರಿನಲ್ಲಿ bill ಆಗುತ್ತಿದೆ. ಪುಟಾಣಿ ಮಕ್ಕಳು ಸಾರ್. ೫-೭ನೇ ತರಗತಿಯವರೆಗೆ ಓದುತ್ತಿರುವ hostel ನಲ್ಲಿರುವ ಮಕ್ಕಳ ಬಗ್ಗೆ ಹೇಳುತ್ತಿದ್ದೇನೆ. ಅವರ ಹೆಸರಿನಲ್ಲಿ ಶಾಲೆಯಲ್ಲಿಯು ಸಹ ಊಟ ಮಾಡಿದರೆಂದು bill ಆಗುತ್ತಿದೆ, hostel ನಲ್ಲಿಯು ಸಹ bill ಆಗುತ್ತಿದೆ. ಹಾಗಾದರೇ ಇದರ ಅರ್ಥವೇನು? ಎರಡೂ ಕಡೆ ಮಕ್ಕಳು ಊಟ ಮಾಡುತ್ತಿದ್ದಾರೆ ಎಂದು ಅರ್ಥವಾಗುತ್ತದೆ. ಅದನ್ನು ನಂಬಬಹುದೇ? ಸಾಧ್ಯವಿದೆಯೇ? ಈಗದನ್ನು ತಾವು ೧೦ನೇ ತರಗತಿಯವರೆಗೆ extend ಮಾಡಿದ್ದೀರಿ. ಶಿಕ್ಷಣಕ್ಕೆ ಎಷ್ಟೇ ಒತ್ತು ಕೊಟ್ಟರು ಸಹ ನಾನು ಸ್ವಾಗತ ಮಾಡುತ್ತೇನೆ. ನನ್ನ ತಾಲ್ಲೂಕಿನ ಒಂದು ಉದಾಹರಣೆನ್ನಿಟ್ಟುಕೊಂಡು generalize ಮಾಡಿ ತಮಗೆ ಒಂದು figure ಕೊಡುತ್ತೇನೆ. ಆಮೇಲೆ ತಾವೇನು ಹೇಳುತ್ತೀರೋ ಹೇಳಿ. ೫ ರಿಂದ ೧೦ನೇ ತರಗತಿಯವರೆಗಿನ hostel ನಲ್ಲಿರುವ ಮಕ್ಕಳ ಹೆಸರಿನಲ್ಲಿ hostel ನಲ್ಲಿಯೂ bill ಆಗುತ್ತಿದೆ, ಮುಂದೆ ಆಗುವ ಪ್ರಮೇಯವಿದೆ. ಮುಂದಿನ ಜೂನ್ ನಿಂದ High School ಮಕ್ಕಳಿಗೂ ಸಹ ಏನು ಊಟ ಕೊಡುತ್ತೀರಿ, ಅದನ್ನು extend ಆಗುತ್ತದೆಂದು ಇಟ್ಟುಕೊಂಡು, ಒಂದು assumption ಮೇಲೆ ಮಾತನಾಡುತ್ತೇನೆ. ದಯವಿಟ್ಟು ಕೇಳಿಸಿಕೊಳ್ಳಬೇಕು. ನನ್ನ ತಾಲ್ಲೂಕಿನಲ್ಲಿ ಹಿಂದುಳಿದ ವರ್ಗಗಳ ವಸತಿ ನಿಲಯಗಳಲ್ಲಿ ೩೦೦ ಮಕ್ಕಳಿದ್ದಾರೆ. ಆ ಮಕ್ಕಳಿಗೆ ೬ ದಿನ ಮಧ್ಯಾಹ್ನದ ಊಟ hostel ನಲ್ಲಿ ಆಗುತ್ತಿದೆ, ಶಾಲೆಯಲ್ಲಿಯೂ ಆಗುತ್ತಿದೆ. ೨೨ ದಿನಗಳಿಗೆ ಒಂದು ಹೊತ್ತಿನ ಊಟಕ್ಕೆ ಲೆಕ್ಕ ಹಾಕಿ ನೋಡಿದರೆ ಸುಮಾರು ೩ ಲಕ್ಷ.೯೬ ಸಾವಿರ ರೂಪಾಯಿಗಳಾಗುತ್ತದೆ. ನನ್ನ ತಾಲ್ಲೂಕಿನಲ್ಲಿ ಹಿಂದುಳಿದ ವರ್ಗಗಳ hostels, ೬ ಇವೆ ಅವುಗಳನ್ನು ಲೆಕ್ಕ ಹಾಕಿದ್ದೇನೆ. ಬೇಕಾದರೆ, ಆಮೇಲೆ, ತಮಗೆ figures ಕಳುಹಿಸಿಕೊಡುತ್ತೇನೆ. ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಪರಿಶಿಷ್ಟ ವರ್ಗ : ಪರಿಶಿಷ್ಟ ಪಂಗಡಗಳಿಗೆ ಸೇರಿದ ಸುಮಾರು

12 hostels SC ಗೆ ಇವೆ; STಯವರದು 1 hostel ಇದೆ. ಇದೆಲ್ಲ ಸೇರಿಸಿದರೆ ಸುಮಾರು ೧೧೭೦ ಮಕ್ಕಳಿದ್ದಾರೆ. ಅವರದೆಲ್ಲ ಮಧ್ಯಾಹ್ನದ ಬಿಸಿಯೂಟ ನಲ್ಲಾಗತಕ್ಕಂಥ ಖರ್ಚು ಲೆಕ್ಕ ಹಕಿದರೆ, ಪರಿಶಿಷ್ಟ ಗುಂಪಿನವರದು ೧೯ ಲಕ್ಷ ೪೦ ಸಾವಿರದ ೪೦೦ ರೂಪಾಯಿಗಳು ವರ್ಷಕ್ಕಾಗುತ್ತದೆ. ಹಿಂದುಳಿದ ಗುಂಪಿನವರದು ೩ ಲಕ್ಷದ ೯೬ ಸಾವಿರ ರೂಪಾಯಿಗಳು ವಾರ್ಷಿಕ ಖರ್ಚಾಗುತ್ತದೆ. Assuming that for High School ಗೂ extend ಆದಾಗ ಆ ಮಕ್ಕಳಿಗೂ ಆಗುತ್ತದೆ, ಎರಡೂ ಸೇರಿದರೆ ವರ್ಷಕ್ಕೆ ಸುಮಾರು ೧೯ ಲಕ್ಷ ೪೦ ಸವಿರದ ೪೦೦ ರಊಪಾಯಿ, ನನ್ನ ಒಂದು ತಾಲ್ಲೂಕಿನಲ್ಲಿ ಆ ಮಕ್ಕಳ ಹೆಸರಿನಲ್ಲಿ hostel ಗಳಲ್ಲಿಯೂ draw ಆಗುತ್ತಿದೆ. ಅದೇ ಮಕ್ಕಳ ಹೆಸರು ಶಾಲೆಯ ಬಿಸಿಯೂಟದಲ್ಲಿಯೂ ಅನ್ವಯವಾಗುತ್ತಿದೆ. ಶಾಲೆಯಲ್ಲಿಯೂ ಅವರ attendance ತೋರಿಸಿ ಅವರ ಹೆಸರಿನಲ್ಲಿ ಹಣ draw ಮಾಡುತ್ತಿದ್ದಾರೆ. ಇದೊಂದು ತಾಲ್ಲೂಕಿಗೆ ೧೯ ಲಕ್ಷ ಚಿಲ್ಲರೆ ರೂಪಾಯಿ ಆದರೆ,೧೭೬ ತಾಲ್ಲೂಕುಗಳಿಗೆ ಲೆಕ್ಕ ಮಾಡಿ ನೋಡಿದಾಗ, ೩೪ ಕೋಟಿ ೧೫ ಲಕ್ಷ ೧೦ ಸಾವಿರದ ೪೦೦ ರೂಪಾಯಿ ಬರುತ್ತದೆ. ಮುಂದೆ ಆಗುತಕ್ಕಂಥದ್ದೇನಿದೆ, double billing. ಒಂದೇ ಮಗುವಿನ ಹೆಸರಿನಲ್ಲಿ ಎರಡು ಕಡೆ ಆಗತಕ್ಕಂಥ billing ನಿಂದ ಪ್ರೌಢಶಾಲೆಗಳಿಗೆ ಬಿಸಿಯೂಟವನ್ನು ವಿಸ್ತರಿಸಿದ ನಂತರ double billing ಆಗುವ ಪ್ರಮಾಣ ಎಷ್ಟೆಂದರೆ ೩೪ ಕೋಟಿ ೧೫ ಲಕ್ಷ ೧೦ ಸಾವಿರದ ೪೦೦ ರೂಪಾಯಿ ಆಗುತ್ತದೆ. ನನ್ನ ತಾಲ್ಲೂಕಿನ ಒಂದು ಆಧಾರವನ್ನಿಟ್ಟುಕೊಂಡು ೧೭೬ ತಾಲ್ಲೂಕುಗಳಿಗೆ ಸರಾಸರಿ ಲೆಕ್ಕ ಹಾಕಿದ್ದೇನೆ. ಸ್ವಲ್ಪ ಹೆಚ್ಚು ಕಡಿಮೆ ಇರಬಹುದು. ನಾನು ಹಿಂದುಳಿದ ವರ್ಗಗಳ ಸಮಿತಿಯಲ್ಲಿದ್ದಾಗ ಪದೇ ಪದೇ ಈ ವಿಷಯವನ್ನು ಪ್ರಸ್ತಾಪ ಮಾಡಿದಾಗ, ಆ ಮಕ್ಕಳಿಗೆ hostel ನಲ್ಲಿಯೇ ಊಟ ಮಾಡುವುದಕ್ಕೆ ಹೇಳಿ ಎಂದು ಇಲ್ಲಿಂದ ಒಂದು direction ಕಳುಹಿಸುತ್ತಾರೆ. ನಾವೆಲ್ಲರೂ ಸಮಿತಿಯಲ್ಲಿ ಮನವಿ ಮಾಡಿದ್ದೇನೆಂದರೆ, ಏನಾದರೊಂದು ವ್ಯವಸ್ಥೆ ಮಾಡಿ, ಎಲ್ಲಿಯಾದರೂ ಒಂದು ಕಡೆ ಊಟ ಮಾಡಲಿ, ಒಂದು ಕಡೆ bill ಆಗಲಿ ಎಂದು ನಾವು ಹೇಳಿದರೆ, ಇವರು ಇಲ್ಲಿಂದ ಮೇಲಿನಂತೆ direction

ಕಳುಹಿಸುತ್ತಾರೆ. ಶಿಕ್ಷಣ ಇಲಾಖೆಯವರನ್ನು ಕೇಳಿದರೆ, ನಾವೇನೂ ಮಾಡುವುದಕ್ಕಾಗುವುದಿಲ್ಲ ಸಾರ್, ಅವರು ಇಲ್ಲಿಯೇ ಊಟ ಮಾಡಬೇಕು ಎಂದು ಹೇಳುತ್ತಾರೆ. ಒಟ್ಟಾರೆ ಅಧಿಕಾರಿಗಳ ಒತ್ತಾಯಕ್ಕೆ ಮಣಿದು ಅವರವರು ದುಡ್ಡು ಮಾಡಿಕೊಳ್ಳುವುದಕ್ಕೆ ನಾವು ರಕ್ಷಣೆ ಕೊಡುತ್ತಿದ್ದೇವೆ. ೩೪ ಕೋಟಿ ರೂಪಾಯಿ ಗಳಷ್ಟಾಗುವಂಥದಕ್ಕೆ ತಾವು ಎಚ್ಚರಿಕೆ ವಹಿಸಲಿಲ್ಲವೆಂದರೆ, ಎಲ್ಲಿಯಾದರೂ ಒಂದು ಕಡೆ ಊಟ ಮಾಡಿಯೇ ಮಾಡುತ್ತಾರೆ, ಆದ್ದರಿಂ, ಮುಂದಿನ ವರ್ಷಗಳಲ್ಲಿ ಎಲ್ಲಿಯಾದರೂ ಒಂದು ಕಡೆ ಊಟ ಮಾಡುವ ಹಾಗೆ ನಿಗದಿ ಮಾಡಿ ಎನ್ನುವ ಮನವಿ ಮಾಡುತ್ತೇನೆ. ಸಮಾಜ ಕಲ್ಯಾಣ ಇಲಾಖೆಗೆ ಇನ್ನೊಂದು ಮನವಿ ಮಾಡುವುದೇನೆಂದರೆ, ಈ ಬಾರಿ hostels ನಿರ್ಮಾಣಕ್ಕೆ Residential Schools ನಿರ್ಮಿಸುವುದಕ್ಕೆ ಸಾಕಷ್ಟು ಒತ್ತುಕೊಟ್ಟಿರುವುದಕ್ಕೆ ಸ್ವಾಗತ ಮಾಡುತ್ತೇನೆ. ಇನ್ನೂ ಹೆಚ್ಚಿಗೆ ಒತ್ತು ಕೊಡಿ. ಆದರೆ, ಈ hostel ಗಳನ್ನು ನಿರ್ಮಿಸುವುದಕ್ಕಿಂಥ ವಿಶೇಷವಾದ ಒತ್ತು ವಸತಿ ಶಾಲೆಗಳಿಗೆ ನೀಡಿ Hostels ಬದಲಿಗೆ ವಸತಿ ಶಾಲೆಳನ್ನು ನಿರ್ಮಾಣ ಮಾಡಿ. ಬಜೆಟ್ ನಲ್ಲಿ ಇನ್ನಷ್ಟು ಹೆಚ್ಚಿಗೆ ಪ್ರಾಶಸ್ತ್ಯ ಕೊಡಿ. ಎಷ್ಟು ತೆರೆಯುತ್ತೀರಿ, ಅಷು Residnetial Schools ಅನ್ನು ತೆರೆಯಿರಿ. ಏಕೆಂದರೆ, ಸರ್ಕಾರದ Residential Schools ಏನಿದೆ, ನನಗೆ ಗೊತ್ತಿರುವ ಹಾಗೆ ರಾಜ್ಯದಲ್ಲಿ SSLC pass percentage 96% ಇದೆ. ಅಂಥ percentage ಅನ್ನು hostel ನಲ್ಲಿ ಓದುವ ಮಕ್ಕಳಿಂದ ತೆಗೆಯುವುದಕ್ಕಾಗುವುದಿಲ್ಲ. ಕೇವಲ High School ನಲ್ಲಿ ಓದುವ ಮಕ್ಕಳಿಂದಲೂ ತೆಗೆಯುವುದಕ್ಕಾಗುವುದಿಲ್ಲ. ಆ ವಿದ್ಯಾರ್ಥಿಯನ್ನು ನಾವು ನಿಜವಾಗಿ ಒಳ್ಳೆಯ ಪ್ರಜೆಯಾಗಿ, ವಿದ್ಯಾರ್ಥಿ ಯಾಗಿ ೧೦ನೇ ತರಗತಿಯಿಂದ ಹೊರಗೆ ತರಬೇಕಾದರೆ, ಒಳ್ಳೆಯ ವಸತಿ ಶಾಲೆಗಳನ್ನು ಮಾಡಿದರೆ ಅವರು ನಿಜವಾಗಿ ಜ್ಞಾನವನ್ನು ಪಡೆದುಕೊಳ್ಳುತ್ತಾರೆ. ಹಗಲು ರಾತ್ರಿ ಅಲ್ಲಿಯೇ ಓದಿ ಅಲ್ಲಿಯೇ ಇದ್ದುಕೊಂಡು ವಿಷಯಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುತ್ತಾರೆ.

ಶ್ರೀ ಸಿದ್ಧರಾಮಯ್ಯ : Quality education ಕೊಡಬೇಕೆಂದೇ Residential Schools ಅನ್ನು ತೆರೆದಂಥ ಉದ್ದೇಶವಾಗಿದೆ. ನಿರ್ಗತಿಕ

ಮಕ್ಕಳಿಗು ಕೂಡ ಕೊಡಬೇಕೆಂದು ಮೊರಾರ್ಜಿ ದೇಸಾಯಿ ಹೆಸರಿನಲ್ಲಿ ೧೯೯೪-೯೫ ರಲ್ಲಿ ಪ್ರಾರಂಭ ಮಾಡಲಾಯಿತು. ನಾನು ಮೊದಲನೇ ಸಲ ಹಣಕಾಸಿನ ಮಂತ್ರಿಯಾಗಿದ್ದಾಗ ಇದನ್ನು ಮಾಡಲಿಕ್ಕೆ ಪ್ರಾರಂಭ ಮಾಡಿದೆ. ಹೆಚ್ಚು Residential Schools ಅನ್ನು ತೆರೆಯುತ್ತಿದ್ದೇವೆ. ಆದರೆ, hostel ಗಳನ್ನು ನಿಲ್ಲಿಸಿಬಿಟ್ಟರೆ, Residential Schools ಮಾಡುವುದುರ ಜೊತೆಗೆ ಶಾಲೆಗಳಲ್ಲಿ quality education ಆಗಬೇಕು. Hostels ನಲ್ಲಿ ಪಾಠ ಹೇಳುವುದಿಲ್ಲ. Residential Schools ನಲ್ಲಿ ಪಾಠ ಹೇಳಿಕೊಡುತ್ತಾರೆ. ಆದರಿಂದ, hostels ನಲ್ಲಿ ಮಕ್ಕಳಿಗೆ ಊಟ ಕೊಡುತ್ತಾರೆ ಹೊರತು ಪಾಠ ಹೇಳುವುದಿಲ್ಲ. Residential Schools ನಲ್ಲಿ ಊಟ ಮತ್ತು ಪಾಠ ಎರಡೂ ಇದೆ. ಆದರಿಂದ, hostels ನಲ್ಲಿ ಅವರಿಗೆ ಒಳ್ಳೆಯ ಊಟ ಕೊಡಬೇಕು. ಶಾಲೆಗಳಲ್ಲಿಯೂ ಗುಣ ಮಟ್ಟದ education ಕೊಡತಕ್ಕಂಥ ಪ್ರಯತ್ನ ಮಾಡಬೇಕು. ಅದನ್ನು Education Department ನವರು ಮಾಡಬೇಕು. Residential Schools ನಲ್ಲಿ ಯಾವ ಮಟ್ಟದಲ್ಲಿ ಶಿಕ್ಷಣ ಕೊಡುತ್ತಿದ್ದಾರೆ ಅದೇ ಮಟ್ಟದ ಶಿಕ್ಷಣವನ್ನು ಪ್ರಾಥಮಿಕ ಶಾಲೆಗಳಲ್ಲಿ ಕೂಡ ಕೊಡುವುದಕ್ಕೆ ಪ್ರಯತ್ನ ಮಾಡಬೆಕು.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ : ಮಾನ್ಯ ಬೈರೇಗೌಡರು ಹೇಳಿದ ಹಾಗೆ, ೯೫% ಬದಲಿಕ್ಕೆ ಇನ್ನೊಂದು ಕಾರಣವಿದೆ. ಅಲ್ಲಿ ನಾವು ಎಂಥ ಮಕ್ಕಳನ್ನು ಸೇರಿಸಿದ್ದೇವೆಂದರೆ , creamy layer ಮಕ್ಕಳನ್ನು ಮಾತ್ರ ವಸತಿ ಶಾಲೆಗೆ select ಮಾಡಿ ಸೇರಿಸಿದ್ದೇವೆ. ಒಂದು ತಾಲ್ಲೂಕಿನಿಂದ ೮-೧೦ ಮಕ್ಕಳನ್ನು ಮಾತ್ರ ಅಲ್ಲಿಗೆ ಸೇರಿಸಿದ್ದೇವೆ. ಅದು ಕೂಡ roaster ಪದ್ಧತಿ ಮೇಲೆ ಮಾಡಿರುತ್ತೇವೆ. ಆದ್ದರಿಂದ ಅಷ್ಟು percent ಬರುವುದಕ್ಕೆ ಸಾಧ್ಯತೆ ಇದೆ.

ಶ್ರೀ ಸಿದ್ದರಾಮಯ್ಯ : ತಾಲ್ಲೂಕುವರು ಮಾಡಬೇಕು. Pilot programme ಮಾಡಿ, ಎಲ್ಲ ಕಡೆ ಮಾಡುವ ಹಾಗೆ ಪ್ರಯತ್ನ ಮಾಡಬೇಕು.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ : ಅಲ್ಲಿ ಗುಣಮಟ್ಟದ ಶಿಕ್ಷಣ ನಾವು ನಿರೀಕ್ಷೆ ಮಾಡಿದ ಮಟ್ಟದಲ್ಲಿ ಇಲ್ಲವೇ ಇಲ್ಲ.

ವಸತಿ ಶಾಲೆಯಲ್ಲಿಯ ಸಹ ಶಿಕ್ಷಣದ ಗುಣಮಟ್ಟ ನಿರೀಕ್ಷಿತ ಮಟ್ಟದಲ್ಲಿಲ್ಲ. ಹೌದು ಅತ್ಯಂತ ಗುಣಮಟ್ಟದ ಮಕ್ಕಳನ್ನು ಮಾತ್ರ select ಮಾಡಿರುತ್ತೇವೆ.

ಶ್ರೀ ಸಿ.ಬಿ. ಕೃಷ್ಣ ಬೈರೇಗೌಡ : ಆದರೆ, ಇರತಕ್ಕಂಥ ವ್ಯವಸ್ಥೆಯಲ್ಲಿ ವಸತಿ ಶಾಲೆಗಳಲ್ಲಿ ನಮ್ಮ regular High Schools ಏನಿದೆ, ಅವುಗಳಿಗಿಂತ ಉತ್ತಮವಾದ ಶಿಕ್ಷಣವನ್ನು ಕೊಡುತ್ತಿದ್ದಾರೆ. ಅದನ್ನು ಇನ್ನೂ improve ಮಾಡುವುದಕ್ಕೆ ಸಾಕಷ್ಟು ಅವಕಾಶವಿದೆ. ಏಕೆಂದರೆ, ಮಕ್ಕಳು ಅಲ್ಲಿಯೇ ಇರುವುದರಿಂದ ಅವರಿಗೆ ವಸತಿ ಶಾಲೆಗಳಲ್ಲಿ library ಇದೆ, computer facility ಇದೆ. ಹಾಗಾಗಿ, ನಾನ ಹೇಳತಕ್ಕಂಥದ್ದು, ವಸತಿ ಶಾಲೆಗಳಿಗೆ ಹೆಚ್ಚು ಆದ್ಯತೆ ಕೊಡಿ. ಆದರಿಂದ ಹಿಂದುಳಿದ ಮಕ್ಕಳಾಗಬಹುದು, ಪರಿಶಿಷ್ಟ ವರ್ಗದ ಮಕ್ಕಳಾಗಬಹುದು, ಅವರಿಗೆ ನಿಜ ವಾಗಿಯು ಸಹ ಎಲ್ಲ ರೀತಿಯಲ್ಲಿ ತಯಾರು ಮಾಡಲಿಕ್ಕೆ ಸಾಧ್ಯವಾಗುತ್ತದೆನ್ನುವ ಮಾತನ್ನು ಹೇಳುತ್ತೇನೆ. ಇನ್ನು transport ಬಗ್ಗೆ ಹೇಳುತ್ತೇನೆ. ಇವತ್ತು ಕೆಲವು vehicles ಮೇಲೆ Transport Tax ಜಾಸ್ತಿ ಮಾಡಿದ್ದೀರಿ. BMTC ಯವರು ಬೆಂಗಳೂರಿನಲ್ಲಿ ೧೧೪ ಕೋಟಿ ರೂಪಾಯಿಗಳ profit ಮಾಡಿದ್ದಾರೆ. KSRTC ಯವರು ಕಳೆದ ವರ್ಷ ಸುಮಾರು ಇನಪ್ಪತ್ತಾರೂವರೆ ಕೋಟಿ ರುಪಾಯಿ profit ಮಾಡಿದ್ದಾರೆ. ನಾನು ಹೇಳುತಕ್ಕಂಥದ್ದೇನೆಂದರೆ, especialy, Urban Transportation ನಲ್ಲಿ ನಾವು profit ಅನ್ನು ಮಾತ್ರ ಗುರಿಯಾಗಿಟ್ಟುಕೊಂಡು ನಮ್ಮ ಕಂಪನಿಗಳನ್ನು ನಡೆಸತಕ್ಕಂಥದ್ದು ಒಳ್ಳೆಯ ಉದ್ದೇಶ ಅಲ್ಲ. ಇವತ್ತು ಕೇವಲ ಅನ್ನು ಗುರಿಯಾಗಿಟ್ಟುಕೊಂಡರೆ ಆಗುವುದಿಲ್ಲ. Urban Transportation ನಲ್ಲಿ ಇವತ್ತು ಬೆಲೆ ಜಾಸ್ತಿ ಇದೆ. ದೇಶಕ್ಕೆ ಹೋಲಿಸಿದರೆ ನಮ್ಮ ಸಂಸ್ಥೆಗಳು ತುಂಬಾ competitive ಆಗಿ ನಡೆಯುತ್ತಿವೆ. ಅದರ ಬಗ್ಗೆ ನಮಗೆ ಸಂತೋಷವಿದೆ. ಆದರೆ, ಅಂತರರಾಷ್ಟ್ರೀಯ ಮಟ್ಟಕ್ಕೆ ಹೋಲಿಸಿದಾಗ ಆ ಬೆಲೆಗಳನ್ನು ಸ್ವಲ್ಪ ಕಡಿಮೆ ಮಾಡುವುದರಿಂದ ಬೇರೆ ಗಾಡಿಗಳಲ್ಲಿ ಓಡಾಡುವ ಜನ ಬಸ್ಸಿನಲ್ಲಿ ಓಡಾಡುತ್ತಾರೆ. ವಾಯು ಮಾಲಿನ್ಯ ಕಡಿಮೆಯಾಗುತ್ತದೆ. Road congestion ಕಡಿಮೆಯಾಘುತ್ತದೆ. ಈ ಅಂಶಗಳನ್ನೂ ನೀವು Urban Transportaion ನಲ್ಲಿ ವಿಶೇಷವಾಗಿ ತೆಗೆದುಕೊಂಡು Urban

Transportation ಗೆ ಇನ್ನಷ್ಟು ಒತ್ತು ಕೊಡಬೇಕೆನ್ನುವ ಮಾತನ್ನು ಹೇಳುತ್ತೇನೆ. ಇನ್ನೂ ಸಾಕಷ್ಟು ವಿಷಯಗಳ ಬಗ್ಗೆ ಮಾತನಾಡತಕ್ಕಂಥದ್ದು ಇದ್ದರು ಸಹ, ಈಗಾಗಲೇ ಸಾಕಷ್ಟು ಸಮಯವಾಗಿದೆ. ಈಗಾಗಲೇ ಚರ್ಚೆಯೂ ಸಾಕಷ್ಟು ನಡೆದಿರುವುರಿಂದ, ಕೊನೆಯದಾಗಿ ಒಂದು ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ. ಇಲ್ಲಿ targeted subsidies ಗೆ ಹೆಚ್ಚು ಒತ್ತು ಕೊಡುತ್ತಿದ್ದೇವೆಂದು ಹೇಳುತ್ತಿದ್ದೀರಿ. ನಿಜವಾಗಿ targeted subsidies ಯಾವುದೂ ಇಲ್ಲ. ಯಾರ್ಯಾರು ಕೇಳಿದ್ದಾರೆ, ಅವರಿಗೆಲ್ಲ ಒಂದೆಷ್ಟು ಕೊಟ್ಟಿದ್ದೀರಿ. ಹಾಗಾಗಿ, ನಾವೂ ನಿಂತುಕೊಂಡು ಕೋಲಾರಕ್ಕೂ ಒಂದಿಷ್ಟು ಕೊಡಿ ಎಂದು ಕೇಳುವಂಥ ಮಟ್ಟಕ್ಕೆ ಬಂದಿದ್ದೇವೆ. Targetted subsidies ತುಂಬಾ ಒಳ್ಳೆಯ ಉದ್ದೇಶವಿದೆ. ನಿಖರವಾದಂಥ, ನಿರ್ದಿಷ್ಟ ವಾದಂಥ subsidies. ಆದರೆ, ಇವತ್ತು ಅದನ್ನು ತಾವು ಈಡೇರಿಸಿಲ್ಲ. Borrowings ಕಳೆದ ಬಜೆಟ್ ನಲ್ಲಿ ಶೇಕಡಾ ೬೦ರಷ್ಟಿದ್ದಿದ್ದು ಇವತ್ತು ೯ಕ್ಕೆ ಹೋಗಿದೆ. ಇದರ ಬಗ್ಗೆ ಬೆಳಗ್ಗೆ ದೇಶಪಾಂಡೆಯವರು ಸಾಕಷ್ಟು ಮಾತನಾಡಿದವು. Central Grants ೧೧ ಇದ್ದಿದ್ದು ೧೨%ಗೆ ಹೆಚ್ಚಾಗಿದೆ. ಆದರು ಸಹ ನಾವು borrowings ಜಾಸ್ತಿ ಮಾಡಿಕೊಂಡಿದ್ದೇವೆ. Targeted Subsidies ಅನ್ನು ನಾವು ಮಾಡುತ್ತಿಲ್ಲ. ನಿಜವಾಗಿ ಯಾರಿಗೆ subsidies ಮುಟ್ಟಬೇಕೋ ಅವರಿಗೆ ಕೊಡತಕ್ಕಂಥ ಪ್ರಯತ್ನದಲ್ಲಿ ಈ ಬಜೆಟ್ ವಿಫಲವಾಗಿದೆ ಎನ್ನುವುದನ್ನು ನಾನು ಹೇಳಬಯಸುತ್ತಿದ್ದೇನೆ. Recruitments ಬಗ್ಗೆ ಹೇಳುವುದಾದರೆ, ಎಸ್. ಎಂ. ಕೃಷ್ಣರವರ ಸರ್ಕಾರದ ಕಾಲದಲ್ಲಿ ಜನ ಒಪ್ಪದೇ ಇರಬಹುದು, ಆದರೆ ಒಳ್ಳೆಯ ಕ್ರಮವನ್ನು ಮಾಡಿದರು. Recruitments ನಿಲ್ಲಿಸಿದರು. ಕೆಲವು service ಮಾಡಿ. Education, Veterinary services, Health services ಇವುಗಳಿಗೆ ನಾವು ಸದಾಕಾಲ freeze ನಿಂದ excemptions ಕೊಡಬೇಕು. ನಾನು ಒಪ್ಪುತ್ತೇನೆ, ಆದರೆ, ಇವತ್ತು ಎಲ್ಲಾ ಕಡೆಯೂ recruitment ನಡೆಯುತ್ತಿಲ್ಲ. ಇದರಿಂದ ಮುಂದಿನ ಪ್ರಭಾವ ಏನು ಎನ್ನುವುದನ್ನು ಬಹುಶಃ ನಾನು ತಮಗೆ ಹೇಳಬೇಕಾಗಿಲ್ಲ. ತಮಗೆಲ್ಲ ವಿಷಯ ಗೊತ್ತಿರುತ್ತದೆ. ಆದರೆ, ಅನ್ನು ನಾವು ಎಲ್ಲಿಯೋ ಎಳೆ ತಪ್ಪಿ ಮುಂದೆ ಇದರ ಪರಿಣಾಮಗಳು ೩–೪

ವರ್ಷಗಳ ನಂತರ ನಮಗೆ ಗೊತ್ತಾಗುತ್ತದೆ. Fiscal responsibillity ಯನ್ನು ನಾವು maintain ಮಾಡುತ್ತಿಲ್ಲ. ದಯವಿಟ್ಟು, ಅದನ್ನು ಹತೋಟಿಗೆ ತೆಗೆದುಕೊಳ್ಳಬೇಕು. ಇವತ್ತು ನಮ್ಮ ಗ್ರಾಮಾಂತರ ಪ್ರದೇಶಗಳ ನಮ್ಮ distress ಬಗ್ಗೆ ಸಾಕಷ್ಟು ಮಾತನಾಡಿದೆ. ಶೇಕಡಾ ೬೫ರಷ್ಟು ಜನ ಗ್ರಾಮಾಂತರ ಪ್ರದೇಶದಲ್ಲಿದ್ದಾರೆ. ನಮ್ಮ GDP ಯಲ್ಲಿ ಅವರು ಉತ್ಪಾದನೆ ಮಾಡುತ್ತಿರುವುದು ಶೇಕಡಾ ೧೯ ರಷ್ಟು ಮಾತ್ರ. ಇನ್ನುಳಿದಿರತಕ್ಕಂಥ ಶೇಕಡಾ ೩೫ ಏನಿದ್ದಾರೆ, ಅವರು ನಮ್ಮ ಉತ್ಪಾದನೆಯ್ಲಿ ಶೇಕಡಾ ೮೦ ರಷ್ಟನ್ನು ಕೊಡುತಗೆಯಾಗಿ ಕೊಡುತ್ತಿದ್ದಾರೆ. ಅಲ್ಲಿಗೆ, ನಮ್ಮ ಗ್ರಾಮಾಂತರ ಪ್ರದೇಶದಲ್ಲಿ surplus labour ಇದೆ. ಆ surplus labour ಅನ್ನು ಉಪಯೋಗಿಸಿಕೊಳ್ಳಲಿಕ್ಕೆ ನಿಮ್ಮ ಸರ್ಕಾರ ಒಳ್ಳೆಯ ಯೋಜನೆಯನ್ನು ಮಾಡಿದೆ. ಉದ್ಯೋಗ ಕಾಯಕ ಯೋಜನೆ ನಿಮ್ಮಲ್ಲಿದೆ. ಅದು ಒಳ್ಳೆಯ ಯೋಜನೆ. ಗ್ರಾಮಾಂತರ ಪ್ರದೇಶದಲ್ಲಿ recruitment ಮಾಡಿ ತರಬೇತಿ ಕೊಡುವುದು ಅಷ್ಟು ಮಾಡಿದರೆ ಸಾಲವುದಿಲ್ಲ. ಇವತ್ತು ಕೈಗಾರಿಕೆಗಳನ್ನು ಗ್ರಾಮಾಂತರ ಪ್ರದೇಶಕ್ಕೆ ಕೊಂಡೊಯ್ಯತಕ್ಕಂಥ ಅವಶ್ಯಕತೆ ಇದೆ. ಹಾಗಾಗಿ ಏನು ನೀವು SEZ ಗಳಿಗೆ ಇತರೆಗಳಿಗೆ opposition ಮಾಡುತ್ತಿದ್ದೀರಿ, ಅದಕ್ಕೆ ವೈಯಕ್ತಿಕವಾಗಿ ನನ್ನ ಸಹಕಾರವಿದೆ. ಆದರೆ ಅಲ್ಲಿ ನೀವು ಯಾವ ಜಮೀನನ್ನು acquire ಮಾಡುತ್ತಿದ್ದೀರಿ, ಅವರಿಗೆ ನಿಜವಾಗಿ ಆ project ನಲ್ಲಿಯೂ ಒಂದು stake ಇರಬೇಕು. ಅವನಿಗೆ ಆರ್ಥಿಕವಾಗಿ ನಷ್ಟವಾಗದ ಹಾಗೆ ಮಾಡಿ ಅವನಿಗೆ ಉದ್ಯೋಗವನ್ನು ಸೃಷ್ಟಿ ಮಾಡಿ, ಗ್ರಾಮಾಂತರ ಪ್ರದೇಶದಲ್ಲಿ ಉದ್ಯೋಗಗಳನ್ನು ಸೃಷ್ಟಿ ಮಾಡದೇ ಹೋದರೆ, ನಮ್ಮ ಯುವಕರು ಎಲ್ಲೋ ಒಂದು ಕಡೆ ನಕ್ಸಲ್ ವಾದಕ್ಕೆ ಯಾರು ಹೋಗತಕ್ಕಂಥ ಚಿಹ್ನೆಗಳು ನಮಗೆ ಇವತ್ತು ಕಾಣಿಸುತ್ತಿವೆ. ಗ್ರಾಮಾಂತರ ಪ್ರದೇಶದಲ್ಲಿ ಉದ್ಯೋಗ ಸೃಷ್ಟಿಗೆ ಈ ಬಜೆಟ್ ನಲ್ಲಿ ಆದ್ಯತೆ ಇಲ್ಲ. ಮುಂದಿನ ದಿನಗಳಲ್ಲಿ ನಮಗೆ revenue ಬರಬೇಕಾದರೆ. economic growth ಆಗಬೇಕು. rural employment generate ಆಗಬೇಕು, ಇವತ್ತೇನೋ ಆರ್ಥಿಕ resources ಚೆನ್ನಾಗಿದೆ. mobilize ಆಗುತ್ತಿದೆ. ಇನ್ನು ೫ ವರ್ಷಗಳಾದರೂ ಹೀಗೇ ಆಗಬೇಕು ಎಂದರೂ industrial growht ಚೆನ್ನಾಗಿ ಆಗಬೇಕು,

ಕೃಷಿ ಬೆಳೆಯಬೇಕು. ಅದಕ್ಕೆ ನೀವು ಸರಿಯಗಿ ಒತ್ತು ಕೊಟ್ಟಿಲ್ಲವೆನ್ನುವ ಮಾತನ್ನು ಹೇಳುತ್ತೇನೆ. ಬಜೆಟ್ ಎಂದು ಹೇಳಿದರೆ, ನಾನು ಒಪ್ಪುತ್ತೇನೆ, ಯಾರೂ ಸಾಚಾ ಅಲ್ಲ. ಬಜೆಟ್ ಒಂದು ಆರ್ಥಿಕ staement ಹೇಗಾಗುತ್ತದೆಯೋ, political statement ಸಹ ಹೌದು. ನಾವು ಕೇವಲ ಇದನ್ನು ಆರ್ಥಿಕ ದೃಷ್ಟಿಯಲ್ಲಿ ಕಂಡರೆ, ಆದರಿಂದ ನಾವು ನಿಜವಾಗಿಯೂ ಏನು ಒಂದು ಸ್ಪಷ್ಟವಾದಂಥ ಚಿತ್ರವನ್ನು ರೂಪಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಆದರೆ, ಎಲ್ಲೋ ಒಂದು ಕಡೆ ಏನೊಂದು ಲಯವನ್ನು ನಾವು ಕಾಪಾಡಿಕೊಂಡು ಹೋಗಬೇಕು, ಆ ಲಯ ತಪ್ಪಿದೆ. ಆರ್ಥಿಕ ವ್ಯವಸ್ಥೆಯನ್ನು ಕಾಪಾಡತಕ್ಕಂಥ ಜವಾಬ್ದಾರಿ ಏನು ಬಜೆಟ್ ಮೇಲಿದೆ, ಅದನ್ನು ನೀವು ತಪ್ಪಿಸಿ, ಕೇವಲ ಇದನ್ನು ಒಂದು political statement ಆಗಿ ಮಾಡಿಕೊಂಡಿದ್ದೀರಿ. ಇದರಿಂದ ಮುಂದಕ್ಕೆ ನಮ್ಮ ರಾಜ್ಯಕ್ಕೆ ಹಾನಿ ಯಾಗುತ್ತದೆ. ಆಯಿತು, ಏನು, ಮಾಡಿಕೊಂಡರೆ ತಪ್ಪೇನು ಎಂದು ಕೇಳಬಹುದು. ನಮ್ಮ ರಾಜ್ಯದ ಭವಿಷ್ಯಕ್ಕೆ ಹಾನಿಯಾಗುತ್ತದೆ. ಬೆಳವಣಿಗೆಗೆ ನವು ಪೂರಕವಾಗಿ ಕೆಲಸ ಮಾಡಲಿಲ್ಲವೆಂದರೆ, ಹಿಂದೆ ಬಿಕ್ಕಟ್ಟಿತ್ತು, ಪ್ತಿ ಬಜೆಟ್ ಬಂದರೂ budgetary cut backs ಇರುತ್ತಿದ್ದವು ಮಾತೆತ್ತಿದರೆ budgetary cut backs. ಆ ಪರಿಸ್ಥಿತಿಗೆ ಹೋಗಬೇಕಾಗುತ್ತದೆ. ಈಗೆ summary ಹೇಳಿ ಮುಗಿಸುತ್ತಿದ್ದೇನೆ. ಹಾಗಾಗಿ, ನಮ್ಮ ಮುಂದಿನ ಭವಿಷ್ಯದ ಉತ್ಪಾದನೆಯ ದೃಷ್ಟಿಯಿಂದ ಈ ಬಜೆಟ್ ಸಮಾಧಾನವನ್ನು ತಂದಿಲ್ಲ. Industrial growth ಆಗಿರಬಹುದು, agricultural growth ಆಗಿರಬಹುದು, ನೀವು ಒತ್ತನ್ನು ಕೊಟ್ಟಿಲ್ಲ. ಇದರಿಂದ ಮುಂದಕ್ಕೆ ನಮ್ಮ ಆದಾಯಕ್ಕೆ ಸಹಾಯ ಆಗಬುದು, ರಾಜ್ಯದ ಆರ್ಥಿಕ ವ್ಯವಸ್ಥೆಗೆ ಇದರಿಂದ ಕುಂದಾಗತಕ್ಕಂಥ ಅವಕಾಶಗಳಿವೆ ಅನ್ನತಕ್ಕಂಥ ಮಾತನ್ನು ಹೇಳುತ್ತೇನೆ. ನಮ್ಮ ರಾಜ್ಯದ ಒಂದು ಪ್ರತಿಷ್ಠಿತ ದಿನ ಪತ್ರಿಕೆಯವರು ಬಜೆಟ್ ಬಗ್ಗೆ ಏನು ಹೇಳಿದ್ದಾರೆ ಎನ್ನುವುದನ್ನು ಹೇಳುತ್ತೇನೆ. ಏಕೆಂದರೆ, ನಾವು ಹೇಳಿದರೆ, ನಾನೊಂದು ಪಕ್ಷಕ್ಕೆ ಸೇರಿದವನು ಎಂದು ಹೇಳಬಹುದು. ನಮ್ಮ ವಿಶ್ವನಾಥ್ ರವರು, ಅವರು ಇವರು ಎಲ್ಲ ಕೇವಲ political ಆಗಿ ಮಾತನಾಡುತ್ತಾರೆಂದು ಹೇಳುತ್ತಾರೆ. ಬೇಡ ನಮ್ಮ ಪಕ್ಷದ್ದಲ್ಲ, ಯಾರ

ಪಕ್ಷದ್ದೂ ಅಲ್ಲ. ಆ neutrial ಪತ್ರಿಕೆಯಲ್ಲಿ ಬಜೆಟ್ ಬಗ್ಗೆ ಏನು ಹೇಳಿದ್ದಾರೆನುವುದನ್ನು ಹೇಳುತ್ತೇನೆ. "ರಾಜ್ಯದ ಸಮ್ಮಿಶ್ರ ಸರ್ಕಾರ ಅಗ್ಗದ, ಜನಪ್ರಿಯತೆಯ ದಾರಿಯನ್ನು ಈ ವರ್ಷವೂ ಬಿಟ್ಟಿಲ್ಲ. ಉಪಮುಖ್ಯಮಂತ್ರಿ ಮತ್ತು ಹಣಕಾಸು ಮಂತ್ರಿಗಳಾದ ಶ್ರೀ ಬಿ.ಎಸ್.ಯಡಿಯೂರಪ್ಪರವರು ಶುಕ್ರವಾರ ಮಂಡಿಸಿದ ಬಜೆಟ್ ಒಂದು ರೀತಿಯಲ್ಲಿ ವಿವಿಧ ಜಾತಿ ವರ್ಗ, ಸಂಸ್ಥೆಗಳಿಗೆ ಹಾಗೂ ತಲೆಗೆ ಹೊಳೆದದ್ದಕ್ಕೆಲ್ಲ ಹಂಚಿನ ಹುಂಡಿಯ ಹಣದ ಪಟ್ಟಿಯಂತಿದೆ. ವಿವಿಧ ಇಲಾಖೆಯಗಳು ಆಂತರಿಕವಾಗಿ ಮಾಡಬೇಕಾದ ಕೆಲಸವನ್ನು ಹಣಕಾಸು ಸಚಿವರೇ ಮಾಡಿರುವುದು ಒಂದು ದೊಡ್ಡ ತಮಾಷೆ. ರಾಜ್ಯದ ಅಭಿವೃದ್ಧಿಯ ಮುನ್ನೋಟವನ್ನು ಬಜೆಟ್ ನೀಡಬೇಕೆಂಬ ಪರಿಕಲ್ಪನೆಯ ಮಾನ್ಯ ಯಡಿಯೂರಪ್ಪರವರಿಗೆ ಇದ್ದಂತಿಲ್ಲ. ಯಾವುದೇ ದೀರ್ಘಾವಧಿ ಯೋಜನೆಗೆ ಆದ್ಯತೆ ನೀಡಿಲ್ಲ. ರಾಜ್ಯವನ್ನು ಕಾಡುತ್ತಿರುವ ವಿದ್ಯುತ್, ಕುಡಿಯುವ ನೀರಿನ ಅಭಾವ, ಮೂಲಸೌಲಭ್ಯಗಳ ಕೊರತೆ, ಕೃಷಿ ವಲಯದ ಬಿಕ್ಕಟ್ಟು ಮುಂತಾದ ಗಂಭೀರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವ ದಿಕ್ಕಿನಲ್ಲಿ ಅರು ಹೆಜ್ಜೆ ಇಡುತ್ತಾರೆ ಎಂದು ಜನರು ನಿರೀಕ್ಷಿಸಿದ್ದರು. ಆದರೆ, ಅವರು ಅಗ್ಗದ ಜನಪ್ರಿಯತೆಯ ದಾರಿ ಹಿಡಿದ್ದು ದುರಂತ. ಈಗ ಪ್ರಕಟಿಸಿರುವ ಸಾಲ ಮನ್ನಾ ರೈತರನ್ನು ಇನ್ನೂ ಕಷ್ಟದ ಸ್ಥಿತಿಗೆ ತಳ್ಳುವುದರಲ್ಲಿ ಅನುಮಾನವಿಲ್ಲ. ಸರಿಯಾಘಿ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳದೇ ಸಾಲ ಮನ್ನಾದಂಥ ಕಾರ್ಯಕ್ರಮವಗಳನ್ನು ಪ್ರಕಟಿಸುವುದು ಜನರಿಗೆ ಮಾಡುವ ಮೋಸ, ರೈತರಿಗೆ ಮೂಗಿಗೆ ತುಪ್ಪ ಹಚ್ಚಿ, ಚುನಾವಣೆ ಲಾಭ ಗಳಿಸುವ ಹುನ್ನಾರವಿದು, ಸರ್ಕಾ ಇಂಥ ಜನಪ್ರಿಯ ತಂತ್ರಗಳನ್ನು ಕೈಬಿಟ್ಟು ಜನರ ಏಳಿಗೆಗಗಿ ಮತ್ತು ರಾಜ್ಯದ ಅಭಿವೃದ್ಧಿಗಾಗಿ ಪ್ರಾಮಾಣಿಕವಾಗಿ ಯತ್ನಿಸಬೇಕು. ಇಲ್ಲದಿದ್ದರೆ, ಜನರು ಚುನಾವಣೆಗಳಲ್ಲಿ ಸರಿಯಾಘಿ ಪಾಠ ಕಲಿಸುತ್ತಾರೆ ಎನ್ನುವುದನ್ನು ಆಡಳಿತಾರೂಢರು ಮೊದಲು ತಿಳಿಯಬೇಕು ಎಂದು ಹೇಳಿದೆ.

(ಗೊಂದಲ)

ಅಧ್ಯಕ್ಷರು : ಮತ್ತೆ, answer ಮಾಡಬೇಕಲ್ಲ, conclude ಮಾಡಿ.

ಶ್ರೀ ಧರ್ಮಸಿಂಗ್ : ಮಾನಯ ಕೃಷ್ಣ ಬೈರೇಗೌಡರವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದಾರೆ.

(ಗೊಂದಲ)

ಮಾನ್ಯ ಕೃಷ್ಣ ಬೈರೇಗೌಡರು ತಮ್ಮ ಅಭಿಪ್ರಾಯ ಹೇಳುತ್ತಿಲ್ಲ.

(ಗೊಂದಲ)

ಶ್ರೀ ಸುನಿಲ್ ವಲ್ಲಾಪುರೆ : ಅವರು ರಾಜಕೀಯ ಭಾಷನ ಮಾಡಿದೆ ಹಾಗೆ ಮಾಡಿದರೆ ಹೇಗೆ?

ಶ್ರೀ ಧರ್ಮಸಿಂಗ್ : ಎಲ್ಲ ರಾಜ್ಯದಲ್ಲಿ ಎಲ್ಲ ಜನ ಓದಿದ್ದಾರೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಇದು political ಭಾಷಣ.

(ಗೊಂದಲ)

ಅಧ್ಯಕ್ಷರು : ಎಲ್ಲ ಕುಳಿತುಕೊಳ್ಳಿ.

ಶ್ರೀ ಸುನಿಲ್ ವಲ್ಲ್ಯಾಪುರೆ : ಮಾನ್ಯ ಬೈರೇಗೌಡರವರು ರಾಜಕೀಯ ಭಾಷಣ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಕೃಷ್ಣ ಬೈರೇಗೌಡರವರು ಪತ್ರಿಕೆಯಲ್ಲಿ ಓದಿದ್ದು ನಿಜ ಹಿಂದಿನ ೫ ವರ್ಷದ ಬಗ್ಗೆ ಪತ್ರಿಕೆಯಲ್ಲಿ ಏನು ಬರೆದರು, ಜನ ಏನು ಪಾಠ ಕಲಿಸಿದರು ಎಂಬುದನ್ನು ಅವರು ಮರೆಯಬೇಕಾಗಿಲ್ಲ. ಈ ಸರ್ಕಾರ ಮಾನ್ಯ ಯಡಿಯೂರಪ್ಪರವರು ಬಂದ ಮೇಲೆ ಅದರಲ್ಲೂ ಗ್ರಾಮೀಣ ಪ್ರದೇಶಕ್ಕೆ ಏನು ಮಾಡಿದ್ದಾರೆಂದು ಅವರೊಬ್ಬರೆ ಕುಳಿತುಕೊಂಡು ಸ್ವಲ್ಪ ಯೋಚನೆ ಮಾಡಲಿ. ಏಕೆಂದರೆ, ಸಭೆಯಲ್ಲಿ ಭಾಷಣ ಮಾಡುವುದಿಲ್ಲ. ಇರಲಿ ಅವರು ಹೇಳಲಿ ಈ ಸರ್ಕಾರ ಬಂದ ಮೇಲೆ ಮಾನ್ಯ ಯಡಿಊರಪ್ಪರವರು ರೈತರಿಗೆ ಸರಾಯಿ ತೆಗಿದಿದ್ದು

ತಪ್ಪೆ? ಲಾಟರಿ ತೆಗೆದಿದ್ದು ತಪ್ಪೆ? ರೈತರ ಸಾಲ ಮನ್ನಾ ಮಾಡಿದ್ದು ತಪ್ಪೆ? ನಂಜುಡಪ್ಪನವರ ವರದಿಗನುಗುಣವಾಗಿ ರೂ. ೧೫೦೦ ಕೋಟಿ ಇಟ್ಟಿರುವುದು ತಪ್ಪೆ? ಉದಾಹರಣೆಗೆ ಹೇಳುವುದಾದರೆ, ಅಂಗವಿಕಲರಿಗೆ, ಹೊಟ್ಟೆಗೆ ಹಿಟ್ಟು ಇಲ್ಲದವರಿಗೆ ಹಿಂದೆ ಏನು ಪೆನ್ ಷನ್ ೧೦೦ ರೂಪಾಯಿಗಳು ಕೊಡುತ್ತಿದ್ದರೂ ಅದನ್ನು ೫೦೦ ರೂಪಾಯಿಗಳಿಗೆ ಹೆಚ್ಚಿಸಿ ಅದಕ್ಕಾಗಿ ೭೫೦ ಕೋಟಿ ರೂಪಾಯಿಗಳು ಇಟ್ಟಿದ್ದು ತಪ್ಪೆ? ಅದೇ ರೀತಿಯಾಗಿ ನಮ್ಮ ಸಾವಿರ ಹಳ್ಳಿಗಳಿಗೆ ಮೂಲಭೂತ ಸೌಕರ್ಯ ಕಲ್ಪಸಲಿಕ್ಕೆ ಹಿಂದಿನ ಸರ್ಕಾರಗಳು ಏಕೆ ಮಾಡಲಿಕ್ಕೆ ಆಗಿಲ್ಲ? ಅದನ್ನು ಮಾನ್ಯ ಯಡಿಯೂರಪ್ಪರವರು ಮಾಡಿದ್ದೇ ತಪ್ಪೆ? ಯಾವುದಕ್ಕೆ ಯಾವ್ಯಾವ ಇಲಾಖೆಯಲ್ಲಿ ಕಡಿಮೆ ಇದೆ ಎಂದು ಸ್ವಲ್ಪ ಬಿಡಿಸಿ ಹೇಳಿ. ಬರಿ ಪತ್ರಿಕೆಯಲ್ಲಿರುವುದನ್ನು ಹೇಳುತ್ತೀರಿ, ಆಯಿತು, ಮಠಮಾನ್ಯಗಳಿಗೆ ಕೊಡಬಾರದೆಂದು ಎಲ್ಲಿದೆ.

ಶ್ರೀ ಸಿ. ಹೆಚ್. ಪುಟ್ಟೇಗೌಡ : ಹಿಂದೆ ಸರ್ಕರದ ಬಗ್ಗೆ ಇದೇ ಪತ್ರಿಕೆಗಳು, ಚುನಾವಣೆಗಿಂತ ಹಿಂದೆ ಮಾನ್ಯ ಭೈರೇಗೌಡರವರ ಪಕ್ಷದ ಮುಖ್ಯ ಮಂತ್ರಿಯೊಬ್ಬರನ್ನು ನಂಬರ್ ಒನ್ ಮುಖ್ಯಮಂತ್ರಿ ಎಂದು ಬರೆದಿದ್ದವು. ಏನಾಯಿತು ಸ್ವಾಮಿ ಭೈರೇಗೌಡರೆ, ಈ ರಾಜ್ಯದ ದೊಡ್ಡ ದೊಡ್ಡ ಪತ್ರಿಕೆಗಳು ನಂಬರ್ ಒನ್ ಮುಖ್ಯಮಂತ್ರಿ ಎಂದು ಬರೆದಿದ್ದವು. ಬರೆದಿದ್ದರೋ ಬರೆಸಿದ್ದರೋ ಗೊತ್ತಿಲ್ಲ.

(ಗೊಂದಲ)

ಶ್ರೀ ಕೃಷ್ಣ ಭೈರೇಗೌಡ : ನಾನು ಮುಗಿಸಿಬಿಡತ್ತೇನೆ ಬಿಡಿ ಸಾರ್.

(ಗೊಂದಲ)

ಆಯಿತು ಕುಳಿತುಕೊಳ್ಳಿ, ನಾನು ಮುಗಿಸುತ್ತಿದ್ದೇನೆ. ಏಕೆ ಟೆನ್‌ಷನ್ ತೆಗೆದುಕೊಳ್ಳುತ್ತಿದ್ದಿರಾ? ಯಾರು ಮಾತನಾಡುವ ಹಾಗೆ ಇಲ್ಲವೆ ?

(ಗೊಂದಲ)

ಶ್ರಿ ಎಂ.ಪಿ. ರೇಣುಕಾಚಾರ್ಯ : ಇಷ್ಟು ದಿವಸ ಆಡಳಿತ ನಡೆಸಿದದರಲ್ಲಾ, ನೀವು ಆತ್ಮಾವಲೋಕನ ಮಾಡಿಕೊಳ್ಳಿ. ಸರ್ಕಾರದ ಬಜೆಟ್ ಬಗ್ಗೆ ಪ್ರಶಂಸೆ ಮಾಡಲಿ.

ಅಧ್ಯಕ್ಷರು : ಆಯಿತು ಅವರು ಕನ್‌ಕ್ಲೂಡ್ ಮಾಡುತ್ತಾರೆ ಬಿಡಿ, ಮುಗಿಸಿ.

ಶ್ರೀ ಕೃಷ್ಣ ಭೈರೇಗೌಡ : ಮಾತನಾಡುವುದಕ್ಕೆ ಸ್ವಾತಂತ್ರ್ಯ ಬೇಡವೆ? ಏಕೆ ಟೆನ್ ಷನ್ ತೆಗೆದುಕೊಳ್ಳುವುದು? ಅಪೋಜಿಷನ್ ನಲ್ಲದ್ದುಕೊಂಡು ನನ್ನ ಕೆಲಸ ನಾನು ಮಾಡುತ್ತಿದ್ದೇನೆ. ಒಳ್ಳೆಯ ಅಂಶಗಳನ್ನು ಮಾಡಿದ್ದೀರಿ. ಅದನ್ನು ನಾನು ಇಲ್ಲವೆಂದು ಹೇಳಲಿಲ್ಲ. ಅದನ್ನು ಹೊಗುಳುವುದಕ್ಕೆ ಜನ ನನ್ನನ್ನು ಇಲಲಿ ಕೂರಿಸಿರುವುದು.

ಶ್ರೀ ಎಂ.ಪಿ.ರೇಣುಕಾಚಾರ್ಯ: ಆತ್ಮಾವಲೋಕನ ಮಾಡಿಕೊಳ್ಳಿ.

(ಗೊಂದಲ)

ಶ್ರೀ ಸಿ.ಎಸ್. ಪುಟ್ಟೇಗೌಡ : ನೀವು ಹೇಳುವುದನ್ನು ಮೂಕ ಪ್ರೇಕ್ಷಕರಾಗಿ ಕೇಳಿಕೊಂಡು ಕುಳಿತುಕೊಳ್ಳುವುದಕ್ಕೆ ನಮ್ಮನ್ನು ಜನ ಇಲ್ಲಿಗೆ ಕಳುಹಿಸಿಲ್ಲ ಸ್ವಾಮಿ.. ನೀವು ಹೇಳಿದ್ದರಿಲ್ಲ. ಕೇಳುವುದಕ್ಕೆ ನವು ಇಲ್ಲಿ ಕುಳಿತಿಲ್ಲ. ವೇದಾಂತಗಳನ್ನು ಕೇಳಲಿಕ್ಕೆ ನಾವು ಈ ವಿಧಾನ ಸೌಧಕ್ಕೆ ಬಂದಿಲ್ಲ. ನಾನು ಜನರ ಮತ್ತು ನಮ್ಮ ಮನಸ್ಸಿನ ಭಾವನೆಗಳನ್ನು ಹೇಳಿದ್ದನ್ನು ಕೇಳುವುದಕ್ಕೆ ಇಲ್ಲಿಗೆ ಬಂದಿರುವುದು.

(ಗೊಂದಲ)

ಅಧ್ಯಕ್ಷರು : ಆಯಿತು, ಗೌಡರೇ, ಅವರು ಕನ್ ಕ್ಲೂಡ್ ಮಾಡುತ್ತಿದ್ದಾರೆ ಕುಳಿತುಕೊಳ್ಳಿ..

ಶ್ರೀ ಕೃಷ್ಣ ಭೈರೇಗೌಡ : ಏಕೆ ಜನ ಇಷ್ಟು ತೆಗೆದುಕೊಳ್ಳುತ್ತಾರೋ ಅರ್ಥವಾಗುತ್ತಿಲ್ಲ. ಆರೋಗ್ಯಕ್ಕೆ ಟೆನ್‌ಷನ್ ಒಳ್ಳಯದಲ್ಲ.

ಅಧ್ಯಕ್ಷರು : ಆರೋಗ್ಯಕ್ಕೆ ಒಳ್ಳೆಯದಲ್ಲ, ನೀವು ಮೊದಲು ಮುಗಿಸಿರಿ.

ಶ್ರೀ ಕೃಷ್ಣ ಭೈರೇಗೌಡ : ಬಜೆಟ್ ನಲ್ಲಿ ಸಾಕಷ್ಟು ಒಳ್ಳೆಯ ಕಾರ್ಯಕ್ರಮಗಳಿವೆ, ನಿಮಗೆ ಒಳ್ಳೆಯ ಪ್ರಚಾರ ಕೂಡ ತಂದಿದೆ. ಇಲ್ಲವೆಂದು ನಾನೂ ಹೇಳುವುದಿಲ್ಲ. ನಾನು ಏನೊಂದು ಅಂಶವನ್ನು ಇಲ್ಲಿ ಹೇಳುವುದಕ್ಕೆ ಬಯಸಿದೆ ಎಂದರೆ, (ಗೊಂದಲ) ಸಾರ್ ದಯವಿಟ್ಟು ಮುಗಿಸಿಬಿಡುತ್ತೇನೆ. ಅಧ್ಯಕ್ಷರು ಗರಂ ಆಗಿಬಿಡುತ್ತಾರೆ.

ಅಧ್ಯಕ್ಷರು : ನೀವು ದಯಮಾಡಿ ಕುಳಿತುಕೊಂಡು ಬಿಡಿ. ಮಾನ್ಯ ಅಶೋಕ್ ರವರೆ ಸಾಕು ಬಿಡಿ ಸುಮ್ಮನೆ ಏಕೆ ಹೇಳುತ್ತೀರಿ?

ಶ್ರೀ ಆರ್.ಅಶೋಕ : ನೀವು ಸರಿಯಾಗಿ ಮಾತನಾಡಿದಿರಿ. ಬಹಳ ಚೆನ್ನಾಗಿ ಮಾತನಾಡಿದಿರಿ. ಕರ್ನಾಟಕದಲ್ಲಿ ಒಂದು ಪತ್ರಿಕೆಯಲ್ಲ. ೫೦ ಪತ್ರಿಕೆಗಳು ಇವೆ. ೫೦ ಪತ್ರಕೆಯಲ್ಲಿ ಏನು ಬಂದಿದೆ ಎಂದು ಹೇಳಿದ್ದರೆ, ನೀವು ಪಾರ್ಶ್ಯಾಲಿಟಿ ಇಲ್ಲವೆಂದು ನಾವು ಹೇಳುತ್ತಿದ್ದೆವು. ನೀವು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಬಗ್ಗೆ ಮಾತನಾಡಿದಿರಿ.

(ಗೊಂದಲ)

ಶ್ರೀ ಹೆಚ್. ಆಂಜನೇಯ : ಅದು ಯಾವುದೋ ಹಳಸಲು ಪೇಪರ್ ಇರಬೇಕು.

(ಗೊಂದಲ)

ಶ್ರೀ ಕೃಷ್ಣ ಭೈರೇಗೌಡ : ಉಪ ಮುಖ್ಯಮಂತ್ರಿಗಳು ಕೊಟ್ಟಿರತಕ್ಕಂಥ ಬಜೆಟ್ ನಲ್ಲಿ ಸಾಕಷ್ಟು ಜನಪ್ರಿಯ ಕಾರ್ಯಕ್ರಮಗಳು ಇವೆ, ಇಲ್ಲವೆಂದಲ್ಲ, ಅವುಗಳನ್ನು ಹೋಗಳಲಿಕ್ಕಿಲ್ಲ. ಅವುಗಳಲ್ಲಿ ಏನೇನು ನ್ಯೂನತೆಗಳಿವೆ ಎನ್ನುವುದನ್ನು ತೋರಿಸಲಿಕ್ಕಾಗಿ ನಾವು ಇಲ್ಲಿ ನಿಂತಿರುವುದು. ನಿಮಗೆ ಅಗ್ಗದ ಪ್ರಚಾರ ಸಿಕ್ಕಿರಬಹುದು. ಆದರೆ ನಾನು ಒತ್ತು ಕೊಟ್ಟಿದ್ದೇನೆಂದರೆ, ನಿಮ್ಮ ಅಗ್ಗದ ಪ್ರಚಾರ ರಾಜ್ಯಕೆಕ ಮುಂದಿನ ದಿನಗಳಲ್ಲಿ ಮಾರಕವಾಗಬಹುದು, ರಾಜ್ಯದ ಭವಿಷ್ಯಕ್ಕೆ ಮಾರಕವಾಗಬಹುದು, ಎನ್ನುವ ಅಂಶಗಳನ್ನು ಒತ್ತಿ ಹೇಳಿದನೇ ಹೊರತು, ನಾನು ಬೇರೆ ಏನೂ ಹೇಳಲಿಲ್ಲ. ನಾನೇನು ನೀವು ಅದು ಮಾಡಬೇಡಿ. ಇದು ಮಾಡಬೇಡಿ ಎಂದು

ರಾಜಕೀಯ ಭಾಷಣ ಮಾಡುತ್ತಿಲ್ಲ. ಮುಂದಿನ ದಿನಗಳಲ್ಲಿ ಇದರ ಪರಿಣಾಮ ರಾಜ್ಯಕ್ಕೆ ಬೀರಬಹುದ, ನೀವು ಮುಂದೆ ಉತ್ತರ ಕೊಡುವ ಸಂದರ್ಭದಲ್ಲಿ ರಾಜ್ಯದ ಕೃಷಿ ರಂಗ ಏನು ಬಿಕ್ಕಟ್ಟಿನಲ್ಲಿ ಸಿಕ್ಕೆ ಹಾಕಿ ಕೊಂಡಿದೆ distress ನಲ್ಲಿದೆ, crisis ನಲ್ಲಿದೆ, ಅದರಿಂದ ಹೊರತರಲಿಕ್ಕೆ ದಯವಿಟ್ಟು ಏನಾದರೂ ಮಾಡಿ. ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿನ ಯುವಕರಿಗೆ ಉದ್ಯೋಗವನ್ನು ಸೃಷ್ಟಿಸಿತಕ್ಕಂಥದ್ದಕ್ಕೆ ವಿಶೇಷ ಕಾರ್ಯಕ್ರಮಗಳನ್ನು ತಾವು ಹಾಕಿ ಕೊಳ್ಳಿ. ಇದು ಕೇವಲ political statement ಆಗುವುದು ಬೇಡ. ರಾಜ್ಯದ ಅಭಿವೃದ್ಧಿಗು ಸಹ ಇದು ಪೂರಕವಾದ statement ಅಗಲಿ ಯೆಂದು ಹೇಳಿ ನಾನು ಒತ್ತಾಯ ಮಾಡಿ ತಮಗೂ ವಂದಿಸಿ ನನ್ನ ಎರಡೂ ಮಾತುಗಳನ್ನು ಮುಗಿಸಿತ್ತೇನೆ.

ಅಧ್ಯಕ್ಷರು : ಮಾನ್ಯ ವಿಜಯಲಕ್ಷ್ಮಿ ಬಂಡಿಸಿದ್ದೇಗೌಡ ರವರು ಮಾತನಾಡಿ. ತಾವು ಐದು ನಿಮಿಷದಲ್ಲಿ ಮುಗಿಸಬೇಕಮ್ಮ.

(ಗೊಂದಲ)

ಶ್ರೀ ಸಿ.ಹೆಚ್. ಪುಟ್ಟೇಗೌಡ : ಆ ಕಡೆ ಗಂಟೆಗಟ್ಟಲೆ ಮಾತನಾಡಬಹುದು, ಈ ಕಡೆ ಅಪರೂಪಕ್ಕೊಮ್ಮೆ ಹೆಣ್ಣುಮಗಳು ನಿಂತರೆ ಐದು ನಿಮಿಷ ಮಾತನಾಡಿ ಎಂದು ಹೇಳುವುದರಲ್ಲಿ ಏನು ಅರ್ಥ ಇದೆ? ಈ ಸರ್ಕಾರದಲ್ಲಿ ಹೆಣ್ಣುಮಕ್ಕಳಿಗೆ ಅವಕಾಶ ಇಲ್ಲವೆ?

ಶ್ರೀಮತಿ ವಿಜಯ ಲಕ್ಷ್ಮಿ ಬಂಡಿಸಿದ್ದೇಗೌಡ (ಶ್ರೀರಂಗ ಪಟ್ಟಣ) : ಮಾನ್ಯ ಅಧ್ಯಕ್ಷರೆ, ಅಗ್ಗದ ಪ್ರಚಾರವೆಂದು ಹೇಳುತ್ತಿದ್ದಾರೆ, ಅಗ್ಗದ ಪ್ರಚಾರದಲ್ಲಿ ಈ ಭಾಗ್ಯಲಕ್ಷ್ಮಿ ಯೋಜನೆ ಇರಬಹುದು, ವಿಧವಾ ವೇತನ ಇರಬಹುದು, ಅಂಗವಿಕಲರ ವೇತನ ಇರಬಹುದು, ಸಂಧ್ಯಾ ಸುರಕ್ಷಾ ಯೋಜನೆ ಇರಬಹುದು, ವೃದ್ಯಾಪ್ಯ ಯೋಜನೆ ಇರಬಹುದು, ಆದರ್ಶ ವಿವಾಹ ಇರಬಹುದು. ಕೊನೆಯಲ್ಲಿ ಶವ ಸಂಸ್ಕಾರಕ್ಕು ಕೂಡ, ಈಗಾಗಲೇ ಸಾವಿರ ರೂ[ಆಯಿ ಕೊಡುತ್ತಿದ್ದಾರೆ. ಅವೆಲ್ಲವೂ ಅಗ್ಗದ ಪ್ರಚಾರಗಳೇನು ಆಗುವುದಿಲ್ಲ. ವಿರೋಧ ಪಕ್ಷದಲ್ಲಿದ್ದೇವೆಂದು ನೀವು ಅದನ್ನು ವಿಶ್ಲೇಷಣೆ ಮಾಡಬೇಕಾಗಿಲ್ಲ. ಅದರಲ್ಲಿ ಇರುವುದನ್ನು ಹೇಳಬಹುದು. ನೀರಾವರಿಯ

ಬಗ್ಗೆ ತಾವು ಹೇಳಿದಿರಿ ನಾವು ಅದನ್ನು ಒಪ್ಪುತ್ತೇವೆ. ನೀರಾವರಿ ಇಲಾಖೆಗೆ ಇನ್ನೂ ಹೆಚ್ಚಿನ ಹಣ ಕೊಡಬೇಕು. ಎಲ್ಲಾ ಕಡೆಗೂ ಇನ್ನೂ ಹೆಚ್ಚಿನ ಸೌಲಭ್ಯ ಕೊಡಬೇಕೆಂದು ನಾವು ಕೂಡ ಕೇಳಿಕೊಳ್ಳುತ್ತೇವೆ. ಅಂಗನವಾಡಿ ಟೀಚರ್ಸ್ ಗಳಿಗೆ ಕೊಡುತ್ತಿರುವ ಸಂಬಳ ಸಾಲುತ್ತಿಲ್ಲ ಅವರಿಗೆ ಕೊಡುತ್ತಿರುವ ಗೌರವಧನ ಸಕಾಗುತ್ತಿಲ್ಲ ಹೀಗಾಗಿ ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಮಾನ್ಯ ಮುಖ್ಯಮಂತ್ರಿಗಳು ಸೇರಿ ಇವರಿಗೆ ಗೌರವ ಧನವನ್ನು ಜಾಸ್ತಿ ಮಾಡಬೇಕೆಂದು ಕೇಳಿಕೊಳ್ಳುತ್ತೇವೆ. ಸ್ತ್ರೀ ಶಕ್ತಿ ಸಂಘಗಳಿಗು ಕೂಡ ಹೆಚ್ಚಿನ ಸೌಲಭ್ಯಗಳನ್ನು ಕೊಡುತ್ತಿದ್ದಾರೆ. ೪% ಬಡ್ಡಿ ದರದಲ್ಲಿ ಕೊಡುತ್ತಿದ್ದಾರೆ. ಸ್ತ್ರೀ ಶಕ್ತಿ ಯೋಜನೆಯಲ್ಲಿ ಸುತ್ತು ನಿಧಿಯನ್ನು ಜಾಸ್ತಿ ಕೊಟ್ಟರೆ ಎಲ್ಲರಿಗೂ ಕೊಡುವುದಕ್ಕೆ ಆಗುತ್ತದೆ. ಏಕೆಂದರೆ , ಸುತ್ತು ನಿಧಿಯ ಬಗ್ಗೆ ನಾವು ಎಲ್ಲೇ ಹೋದರೂ ಕೂಡ ೨,೩,೫, ವರ್ಷವಾಗಿದೆ, ಆದ್ದರಿಂದ ನಮಗೆ ಸುತ್ತು ನಿಧಿ ಕೊಡಿ ಎಂದು ಅವರು ಕೇಳುತ್ತಿರುವುದರಿಂದ ಸರ್ಕಾರದವರು ಸುತ್ತು ನಿಧಿಯನ್ನು ಜಾಸ್ತಿ ಕೊಡ ಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈ ಸಂಘ ದವರಿಗೆ ಮಾರಾಟದ ವ್ಯವಸ್ಥೆಯನ್ನು ಕೂಡ ಒದಗಿಸಿ ಕೊಡಬೇಕು. ಸ್ತ್ರೀ ಶಕ್ತಿ ಸಂಘದವರು ಉಪ್ಪಿನ ಕಾಯಿ ಮುಂತಾದವುಗಳನ್ನು ತಯಾರು ಮಾಡಿರುತ್ತಾರೆ. ಹೀಗಾಗಿ ಅವುಗಳನ್ನು ಮಾರಾಟ ಮಾಡುವುದಕ್ಕೆ ಸೂಕ್ತ ವೇದಿಕೆಯನ್ನು ಕಲ್ಪಿಸಬೇಕು. ಎಲ್ಲ ಹಾಸ್ಟೆಲ್ ಗಳಿಗೂ ಇವರು ತಯಾರಿಸುವ ವಸ್ತುಗಳನ್ನು ತೆಗೆದುಕೊಳ್ಳುವ ರೀತಿಯ ವ್ಯವಸ್ಥೆ ಮಾಡಬೇಕೆಂಬ ಕೋರುತ್ತೇನೆ. ಮಹಿಳಾ ಭವನವನ್ನು ಮಾಡಬೇಕಾಗಿದೆ. ಏಕೆಂದರೆ, ಈ ಸಂಘದವರು ಅವರಿವರ ಜಗಲಿಯ ಮೇಲೆ ಅಂದರೆ ನಮ್ಮ ಕಡೆಗೆ ಪಡಸಾಲೆ ಎಂದೇನು ಕರೆಯುತ್ತೇನೆ ಅದರ ಮೆಲೆ ಈ ಸಂಘದವರು ಕುಳಿತುಕೊಂಡು ಮೀಟಿಂಗ್ ಮಾಡುತ್ತಾರೆ. ಆದುದರಿಂದ, ಆ ಸಂಘಗಳಿಗೆ ಸ್ತ್ರೀ ಶಕ್ತಿ ಭವನಗಳನ್ನು ಕಟ್ಟಲಿಕ್ಕೆ ಅನುಕೂಲ ಮಾಡಬೇಕೆಂದು ಕೋರುತ್ತೇನೆ. ಎಸ್ ಸಿ ಎಸ್ ಟಿ ಮತ್ತು ಅಲ್ಪ ಸಂಖ್ಯಾತರುಗಳಿಗೆ ಈಗ ಸಬ್ಸಿಡಿ ನೀಡಿ ಲೋನ್ ಗಳನ್ನು ಕೊಡುತ್ತಿದೆ. ಇದರ ಪ್ರಮಾಣವನ್ನು ಜಾಸ್ತಿ ಮಾಡಬೇಕೆಂದು ಕೋರುತ್ತೇನೆ. ಆಶ್ರಯ ಮನೆಗಳ ಬಗ್ಗೆ ಈಗಾಗಲೇ ವಿರೋಧ ಪಕ್ಷದ ಹಾಗೂ ಆಡಳಿತ ಪಕ್ಷದ ಬಹುತೇಕ ಸದಸ್ಯರು ಆ

ಸಮಿತಿಗೆ ಶಾಸಕರನ್ನೇ ಅಧ್ಯಕ್ಷರನ್ನಾಗಿ ಮಾಡಿ ಎಂದು ಮಾತನಾಡಿದ್ದಾರೆ. ಹೀಗಾಗಿ ಆ ಸಮಿತಿಗೆ ಶಾಸಕರನ್ನೇ ಅಧ್ಯಕ್ಷರಾಗಿ ಮಾಡಬೇಕೆಂದು ವಿನಂತಿಸುತ್ತೇನೆ. ಅಂಗನವಾಡಿಯ ಮಕ್ಕಳಿಗೆ ಕುಡಿಯುವ ನೀರು ಕೊಡಲು, ಫಿಲ್ಟರ್ ವ್ಯವಸ್ಥೆಯನ್ನು ಕೊಡುವುದರ ಜೊತೆಗೆ ಅವರಿಗೆ ಒಂದು ಗ್ಯಾಸ್ ಸಂಪರ್ಕದ ಅನುಕೂಲತೆಗಳನ್ನು ಮಾಡಿ ಕೊಡಬೇಕು. ಏಕೆಂದರೆ, ಚಿಕ್ಕಮಕ್ಕಳಿಗೆ ಅಡುಗೆ ಮಾಡಲಿಕ್ಕೆ ಬಹಳಷ್ಟು ಅನಾನುಕೂಲವಾಗುತ್ತಿದೆ ಎಂದು ಅನೇಕ ಕಡೆ ಕೇಳಿ ಬರುತ್ತಿರುವ ಹಿನ್ನಲೆಯಲ್ಲಿ ಅಂಗನವಾಡಿಗಳಿಗೆ ಗ್ಯಾಸ್‌ನ ವ್ಯವಸ್ಥೆಯನ್ನು ಮಾಡಿ ಕೊಡಬೇಕೆಂದು ಕೋರುತ್ತೇನೆ. ಆರೋಗ್ಯ ಇಲಾಖೆಯಲ್ಲಿ ಕಿಟ್ಸ್ ಗಳನ್ನು ಕೊಡುವ ವ್ಯವಸ್ಥೆ ಮಾಡಿದ್ದಾರೆ. ನಿಜಕ್ಕೂ ಕೂಡ ಇದು ಬಹಳ ಸಂತನದ ವಿಚಾರ. ಏಕೆಂದರೆ, ಮಕ್ಕಳಿಗೆ ಸೊಳ್ಳೆ ಪರದೆ ಕಟ್ಟುವುದು, ಅವರಿಗೆ ಪೌಡರ್ ಕೊಡುವುದು, ಅದರ ಜೊತೆಗೆ ಬೇರೆ ವಿಧವಾದ ಸಾಮಾನುಗಳನ್ನು ಕೊಡುವ ವ್ಯವಸ್ಥೆ ಇವೆಲ್ಲಾ ಶ್ಲಾಘಿಸಬೇಕಾದ ಅಂಶಗಳಾಗಿವೆ. ಈಗಾಗಲೇ ನಾವು ಮಾನ್ಯ ಮುಖ್ಯಮಂತ್ರಿ ಮಾನ್ಯ ಉಪ ಮುಖ್ಯಮಂತ್ರಿ ಮಾನ್ಯ ಆರೋಗ್ಯ ಸಚಿವರಿಗೆ, ನಮಗೆ ಇನ್ನು ಹೆಚ್ಚಿನ ಪಿಹೆಚ್ ಸಿ ಗಳನ್ನು ಕೊಡಬೇಕೆಂದು ಪಟ್ಟಿಯನ್ನು ಕೊಟಿದ್ದೇವೆ. ನಾವೇನು ಪಟ್ಟಿ ಕೊಟ್ಟಿದ್ದೇವೆ ಇಷ್ಟನ್ನೂ ಕೊಡಲಿಕ್ಕಾಗಲಿಲ್ಲವೆಂದರೆ, ೮೦೦ ರಿಂದ ೧೦೦೦ ಜನಸಂಖ್ಯೆಯಿರುವ ಗ್ರಾಮಗಳಿಗೆ ಎ.ಎನ್.ಎಂ ಸೆಂಟರ್ ಗಳನ್ನು ಕೊಟ್ಟರೆ ಸ್ಥಳದಲ್ಲೇ ವಸತಿ ನಿಲಯ ಇರುವುದರಿಂದ, ಕೂಡಲೇ ಸಣ್ಣ ಪುಟ್ಟ ಕಾಯಿಲೆ ಬಂದಾಗ, ಗರ್ಭಿಣಿಯರಿಗೆ, ಬಾಣಂತಿಯರಿಗೆ, ಇವರಿಗೆಲ್ಲಾ ಚಿಕಿತ್ಸೆ ನೀಡಲು ಅನುಕೂಲವಾಗುತ್ತದೆ. ಆದುದರಿಂದ ಇದನ್ನು ತಾವು ಮಾಡಬೇಕೆಂದು ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಕ್ರೀಡಾ ಇಲಾಖೆಗೆ ಕಡಿಮೆ ಹಣವನ್ನು ಕೊಟ್ಟಿದ್ದಾರೆ. ನಾವು ಎಲ್ಲಿಗೆ ಹೋದರೂ ಭಾಷಣ ಮಾಡುವುದಕ್ಕೆ ಹೋಗುತ್ತೇವೆ. ಶಿಕ್ಷಣಕ್ಕೆ ನಾವೆಷ್ಟು ಒತ್ತನ್ನು ಕೊಡುತ್ತೇವೆ ಅದೇ ರೀತಿ ಕ್ರೀಡೆಗಳಿಗೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಸರ್ಕಾರ ಆಟದ ಮೈದಾನಗಳ ಬಗ್ಗೆಯೂ ಸರ್ಕಾರ ಹೆಚ್ಚಿನ ಗಮನ ಕೊಡಬೇಕಾಗಿದೆ. ಇಂಧನ ಇಲಾಖೆಗೆ ಸಮೀಕೆಯ ಪ್ರಕಾರ ಹೋದ ಸಲ ಬಜೆಟ್ ಗೂ ಈ ಸಲ ಬಜೆಟ್ ಗೂ ಎಷ್ಟು ಕೊಟ್ಟಿದ್ದಾರೆಂದು

ಕೇಳಿದಾಗ ನಿಜಕ್ಕೂ ಕೂಡ ಇಂಧನ ಇಲಾಖೆಗೆ ಹೆಚ್ಚಿನ ಒತ್ತು ಕೊಟ್ಟು ಹಣವನ್ನು ಜಾಸ್ತಿ ಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ನಮ್ಮ ರಾಜ್ಯದಲ್ಲಿನ ಗ್ರಾಮೀಣ ಪ್ರದೇಶಗಳ ರಸ್ತೆ ಅವ್ಯವಸ್ಥೆಗಳಿಂದ ಕೂಡಿದೆ. ಬಸ್ ಸಂಚಾರಕ್ಕೂ ಯೋಗ್ಯವಾಗಿಲ್ಲವೆಂದು ಬಸ್ ಗಳನ್ನು ನಿಲ್ಲಿಸುತ್ತಿದ್ದಾರೆ. ಆದುದರಿಂದ ಹೆಚ್ಚಿನ ಹಣವನ್ನು ಗ್ರಾಮೀಣಾಭಿವೃದ್ಧಿ ಇಲಾಖೆಗೆ ಮತ್ತು ಲೋಕೋಪಯೋಗಿ ಇಲಾಖೆಗೆ ಕೊಟಟು ಹೆಚ್ಚು ಒತ್ತು ಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ದೇವದಾಸಿಯರ ಮಕ್ಕಳ ಬಗ್ಗೆ ಈಗಾಗಲೇ ಮಾನ್ಯ ಆಂಜನೇಯರವರು ಮತ್ತು ಶ್ರೀಮತಿ ಶಕುಂತಲಾ ಶೆಟ್ಟಿಯವರು ಮಾತನಾಡಿದ್ದಾರೆ. ಆದ್ದರಿಂದ ಇದರ ಬಗ್ಗೆ ನಾನು ಹೇಳುವುದೇನೆಂದರೆ, ದೇವದಾಸಿ ಮಕ್ಕಳು ಎನ್ನುವ ಪದವನ್ನು ತೆಗೆದು ಬೇರೆ ಯಾವುದಾದ ರೊಂದು ಒಳ್ಳೆಯ ಹೆಸರನ್ನಿಟ್ಟು ಆ ಮಕ್ಕಳನ್ನು ಕರೆಯ ಬೇಕೆಂದು ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಎಲ್ಲಾ ಇಲಾಖೆಗಳ ಬಗ್ಗೆ ಈಗಾಗಲೇ ವಿರೋಧಪಕ್ಷದ ಸದಸ್ಯರು ಕೆಲವರು ವಿಷಯಗಳ ಬಗ್ಗೆ ಮಾತನಾಡಿದ್ದಾರೆ. ವಿರೋಧ ಪಕ್ಷದವರು ಮಾತನಾಡಿದ್ದಾರೆಂದು ನಾನು ಹೇಳುತ್ತಿಲ್ಲ. ಆದರೆ , ಅವರು ಯಾವ ರೀತಿಯಾಗಿ ಹೇಳಿದ್ದಾರೋ ಅದೇ ರಈತಿಯಾಗಿ ನಾವು ಗಮನಕ್ಕೆ ತೆಗೆದು ಕೊಳ್ಳಬೇಕಾಗುತ್ತದೆ. ಏಕೆಂದರೆ, ಈಗಾಗಲೇ ನೀರಾವರಿ, PWD ಇಂಧನ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಗಳಿಗೆಲ್ಲಾ ಇನ್ನೂ ಹೆಚ್ಚು ಒತ್ತು ಕೊಟ್ಟು ಅವುಗಳ ಅಭಿವೃದ್ಧಿಗೆ ಹೆಚ್ಚು ಗಮನ ಹರಿಸಬೇಕೆಂದು ನಾನಾದರೂ ಕೇಳಿಕೊಳ್ಳುತ್ತೇನೆ. ತಾಲ್ಲೂಕುಗಳಿಗೆ ಒಂದು ಫೈರ್ ಸ್ಟೇಷನ್ ಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ಆದ್ದರಿಂದ, ಈ ರೀತಿಯಾದ ಒಂದು ಯೋಜನೆಯನ್ನು ತರುತ್ತಿರುವುದು ನಿಜವಾಗಿಯೂ ನಮಗೆ ಸಂತೋಷ ತಂದಿದೆ. ಬಜೆಟ್ ಮೇಲೆ ಮಾತನಾಡತಕ್ಕಂಥವರು ಇನ್ನೂ ಬಹಳಷ್ಟು ಜನ ಸದಸ್ಯರಿದ್ದಾರೆ. ಈ ಸಾರಿಯ ಬಜೆಟ್ ಒಳ್ಳೆಯ ಮತ್ತು ಅನುಕೂಲವಾದಂಥ ಕೆಲಸಗಳನ್ನು ಮಾಡಿಕೊಟ್ಟಿದೆ. ಮತ್ತೆ ಗ್ರಾಮಾಂತರ ಮತ್ತು ನಗರ ಪ್ರದೇಶಗಳಿಗೆ ಹೆಚ್ಚಿನ ಒತ್ತನ್ನು ಕೊಟ್ಟಿದ್ದಾರೆ. ಇದರ ಜೊತೆಗೆ ಮಂಡ್ಯ ಜಿಲ್ಲೆಗೆ ಸಂಬಂಧಪಟ್ಟಂಥ ಕಬ್ಬಿನ ವಿಚಾರವನ್ನು ಮಾತನಾಡ ಬೇಕಾಗಿದೆ. ಇವತ್ತಿನ ದಿವಸ ಕಬ್ಬಿನ ಕಾರ್ಖಾನೆಗಳು ನಿಂತಿವೆ. ಮಾನ್ಯ ಕೃಷ್ಣ

ಬೈರೇಗೌಡರು ಈಗಾಗಲೇ ಹೇಳಿದ ಹಾಗೆ ರೈತರನ್ನ ಹೆಚ್ಚು ಗಮನಿಸಬೇಕು. ಇವತ್ತಿನ ದಿವಸ ಆಲೆ ಮನೆಗಳು ಕೂಡ ಮುಚ್ಚಿವೆ. ಈಗ ರೇಟ್ ಇಲ್ಲದೇ ಇರುವುದರಿಂದ ಕಾರ್ಖಾನೆಗಳನ್ನು ನಿಲ್ಲಿಸಬೇಕೆಂದು ಅವರು ಮಾತನಾಡು ತ್ತಿರುವುದರಿಂದ, ಇದರ ಬಗ್ಗೆ ಸರ್ಕಾರ ಗಮನ ಹರಿಸಿ ಕಬ್ಬನ್ನು ಮುರಿಸಲು ಏನಾದರು ವ್ಯವಸ್ಥೆ ಮಾಡಬೇಕು. ಅದೇ ರೀತಿಯಾಗಿ ಈಗ ಕಾವೇರಿ ವಿಷಯ ಮಾತನಾಡುವುದಾದರೆ, ಈಗಾಗಲೇ ನಮ್ಮ ಸರ್ಕಾರ ಕಾವೇರಿ ನೀರು ಹಂಚಿಕೆಯಲ್ಲಿ ರಾಜ್ಯಕ್ಕೆ ಆಗಿರುವ ಅನ್ಯಾಯವನ್ನು ಸರಿಪಡಿಸಕೊಳ್ಳಲು ನಾಡ ಜನರ ಅಭಿಪ್ರಾಯದಂತೆ ಕಾನೂನು ಮತ್ತು ನೀರಾವರಿ ತಜ್ಞರ ಸಲಹೆ ಪಡೆದು ಸರ್ವಪಕ್ಷಗಳ ಮುಖಂಡರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಾನೂನು ಕ್ರಮ ಕೈಗೊಳ್ಳುವಲ್ಲಿ ಎಚ್ಚರಿಕೆಯಿಂದ ಹೆಜ್ಜೆ ಮುಂದಿಟ್ಟದೆ ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ, ಕಾವೇರಿ ಗಲಾಟೆಯ ಬಗ್ಗೆ ವಿರೋಧ ಪಕ್ಷದವರು ಮತ್ತು ನಮ್ಮ ಪಕ್ಷದವರು ಮಾತನಾಡಿದ್ದೇವೆ. ಅದರ ಜೊತೆಗೆ ಎಲ್ಲಯು ಕೂಡ ಯಾವುದೇ ಒಂದು ರೀತಿಯ ಅನಾಹುತ ಆಗದೇ ಇರತಕ್ಕಂಥ ರೀತಿಯಲ್ಲಿ ನಾವು, ಈಗ ಕಾವೇರಿ ಸಮಸ್ಯೆಗೆ ಇನ್ನೂ ಪರಿಹಾರ ಕಂಡು ಹಿಡಿಯದಿದ್ದದು ಕೂಡ ಕಾವೇರಿಯು ನೀರು ಹಂಚಿಕೆ ವಿಚಾರದಲ್ಲಿ ಸರ್ಕಾರ ಇನ್ನೂ ಹೆಚ್ಚು ಗಮನ ಹರಿಸಬೇಕೆಂದು ಮತ್ತು ಇದರ ಜೊತೆಗೆ ಕೆರೆಗಳ ಅಭಿವೃದ್ಧಿಗೆ ಕೂಡ ಹೆಚ್ಚು ಗಮನ ಹರಿಸಬೇಕೆಂದು ಹೇಳುತ್ತಾ, ನಾನು ಮಾತನಾಡುವುದಕ್ಕೆ ಮಾನ್ಯ ಸಭಾಧ್ಯಕ್ಷರು ೫ ನಿಮಿಷ ಅವಕಾಶ ಕೊಟ್ಟಿದ್ದಕ್ಕಾಘಿ ಅವರಿಗೆ ಧನ್ಯವಾದಗಳನ್ನರ್ಪಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ರಾಜುಗೌಡ (ಸುರಪುರ) : ಮಾನ್ಯ ಅಧ್ಯಕ್ಷರೆ, ೨೦೦೭-೦೮ನೇ ಸಾಲಿನ ಆಯವ್ಯಯದ ಬಗ್ಗೆ ಮಾತನಾಡುವುದಕ್ಕೆ ಅವಕಾಶಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಒಂದು ಒಳ್ಳೆಯ ಆಯವ್ಯಯವನ್ನು ಮಾನ್ಯ ಯಡಿಯೂರಪ್ಪರವರು ಮಂಡಿಸಿದ್ದಾರೆ. ಈಗ ಇಲ್ಲಿ ಮಾನ್ಯ ಸಿದ್ದರಾಮಯ್ಯರವರು ಮತ್ತು ಮಾನ್ಯ ರಮೇಶ್ ಕುಮಾರ್ ರವರು ಇಲ್ಲಿದ್ದಾರೆ. ಮಾನ್ಯ ಸಿದ್ದರಾಮಯ್ಯರವರು ಮಂತ್ರಿ ಗಳಾಗಿದ್ದಂತಹ ಸಂದರ್ಭದಲ್ಲಿ ನಾನು ಕೇಳಿದ್ದೆ, ಮಾನ್ಯ ವಾಟಾಳ್

ನಾಗರಾಜ್ ರವರು ಈಗಾಗಲೇ ಹೋಗಿದ್ದಾರೆ. ಅವರು ನನಗೆ ಮೋಸ ಮಾಡಿದರು. ಏನೆಂದರೆ, ನನಗೆ ಹೆಲಿಕಾಪ್ಟರ್ ಕೊಡುಸುತ್ತೇನೆಂದು ಅವರು ಮಾತು ಕೊಟ್ಟಿದ್ದರು. ಮಾನ್ಯ ರಮೇಶ್ ಕುಮಾರ್‌ರವರು ನನ್ನ ಸಹಾಯಕ್ಕೆ ಬರಬೇಕು ಇದುವರೆವಿಗೂ ನಮಗೆ ಹೆಲಿಕಾಪ್ಟರ್ ಕೊಡಿಸಿಲ್ಲ. ಆದ್ದರಿಂದ, ಈಗ ಮಾನ್ಯ ಯಡಿಯೂರಪ್ಪರವರಲ್ಲಿ ಮನವಿ ಮಾಡುವುದೇನೆಂದರೆ, ಹೆಲಿಕಾಪ್ಟರ್ ಕೊಡಿಸಬೇಕೆಂದು ಅಂದಿನಿಂದ ಕೇಳಿಕೊಂಡು ಬಂದಿದ್ದೇನೆ. ಆದರೆ, ಇದುವರೆವಿಗೂ ಕೊಡಿಸಿಲ್ಲ. ನಿಮ್ಮ ಪಕ್ಷದವರಾದ ಮಾನ್ಯ ಅನಿಲ್ ಲಾಡ್ ರವರು ಹೆಲಿಕಾಪ್ಟರ್ ತೆಗೆದುಕೊಂಡಿದ್ದಾರೆ. ಆದ್ದರಿಂದ ನನ್ನ ಕ್ಷೇತ್ರಕ್ಕೆ ಹೋಗುವುದಕ್ಕೆ ಅವರಿಗೆ ರೆಕಮಂಡ್ ಮಾಡಿ ಮತ್ತೆ ಆಗಾಗ ನಾನು ಓಡಾಡುವುದಕ್ಕೆ ಕೊಡಲೆಂದು ನಿಮ್ಮ ಮೂಲಕ ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರಿ ಡಿ.ಕೆ.ಶಿವಕುಮಾರ್ : ಅಂದರೆ, ನಿಮ್ಮಲ್ಲಿ ರೋಡ್ ಅಷ್ಟು ಚನ್ನಾಗಿವೆ ಎಂದು ಗೊತ್ತಾಗುತ್ತದೆ, ರೋಡ್ ನಲ್ಲಿ ಓಡಾಡುವುದಕ್ಕೆ ಆಗುವುದಿಲ್ಲವೆಂದು ಹೆಲಿಕಾಪ್ಟರ್ ಬೇಕೆಂದು ಕೇಳುತ್ತಿದ್ದೀರಾ?

ಶ್ರೀ ರಾಜುಗೌಡ : ರಸ್ತೆ ಚೆನ್ನಾಗಿರುವುದಕ್ಕೆ ನಾನು ಕೇಳ:ಇರತಕ್ಕಂಥದು. ಒಂದು ತಿಂಗಳು ಪೇಮೆಂಟ್ ಕೊಡುತ್ತೇನೆಂದು ಮಾನ್ಯ ವಾಟಾಳ್ ನಾಗರಾಜ್ ರವರು ಹೇಳಿದ್ದರು. ಆದರೆ ಅವರು ಕೊಟ್ಟಿಲ್ಲ. ಇವತುತ ಅವರಿಂದ ಪಡೆದುಕೊಳ್ಳಬೇಕೆಂದು ಇದ್ದೆ. ಆದರೆ, ಅವರು ಈಗ ಹೋಗಿಬಿಟ್ಟಿದ್ದಾರೆ.

ಶ್ರೀ ಸುನಿಲ್ ವಲ್ಲಾಪುರೆ : ೩೦ ವರ್ಷಗಳಿಂದ ಅವರು ಅಧಿಕಾರದಲ್ಲಿದ್ದರು. ಆದರಿಂದ, ನಮ್ಮ ರಸ್ತೆಗಳು ಅಷ್ಟು ಚೆನ್ನಾಗಿವೆ.

ಶ್ರೀ ರಾಜುಗೌಡ : ಈ ಬಜೆಟ್ ನಲ್ಲಿ ಸಾಕಷ್ಟು ಒಳ್ಳೆಯ ಮತ್ತು ಅದ್ಭುತವಾದಂಥ ವಿಷಯಗಳನ್ನು ತಾವು ಮಂಡಿಸಿದ್ದೀರಿ. ನಿಜಕ್ಕೂ ನಾನು ನಿಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ನಮ್ಮ ಭಾಗದವರು ಎರಡು – ಮೂರು ಸಾರಿ ಮುಖ್ಯ ಮಂತ್ರಿಗಳಾಗಿದ್ದಾರೆ. ನಜುಂಡಪ್ಪ ವರದಿಯ ಬಗ್ಗೆ ಯಾರಿಗೆ ಕಮಿಟ್ಮೆಂಟ್ ಇತ್ತೊ ಅವರು ಈ ಒಂದು ದಿಟ್ಟ ಹೆಜ್ಜೆಯನ್ನು

ತೆಗೆದುಕೊಳ್ಳಲಿಲ್ಲ. ಆದರೆ, ನೀವು ನಿಜಕ್ಕೂ ಒಂದು ಒಳ್ಳೆಯ ಮತ್ತು ಅದ್ಭುತವಾದಂಥ ದಿಟ್ಟ ಹೆಜ್ಜೆಯನ್ನು ತೆಗೆದುಕೊಂಡಿದ್ದೀರಿ. ಹೈದರಾಬಾದ್ – ಕರ್ನಾಟಕ ಪ್ರದೇಶಗಳನ್ನು ಬೇರೆ ರಾಜ್ಯ ಮಾಡಬೇಕೆಂದು ಕೇಳೋಣ ಎಂಬ ಕೂಗು ನಮ್ಮ ಭಾಗದಲ್ಲಿ ಇತ್ತು. ಆದರೆ ನಿಮ್ಮ ಬಜೆಟ್ ನೋಡಿದ ಮೇಲೆ ೫೦% ನಷ್ಟು ಮಟಿಗೆ ಅಸಮತೋಲನ ಹೋಗಲಾಡಿಸಿ ಒಂದು ರೀತಿಯಿಂದ ಈ ಭಾಗದ ಲೆವಲ್ಗೆ ನಾವು ಬರುವುದಕ್ಕೆ ತಾವು ದಾರಿ ಮಾಡಿಕೊಟ್ಟಿದ್ದೀರಿ. ರೂ. ೧೫೭೧ ಕೋಟಿ ಪ್ರತಿ ವರ್ಷ ಖರ್ಚು ಮಾಡಬೇಕೆಂದು ತಾವು ಈಗ ಅನುದಾನ ಕೊಟ್ಟಿರತಕ್ಕಂಥದ್ದು ನಿಜವಾಗಿಯು ಕೂಡ ಅದ್ಭುತ. ೫೦:೩೦:೨೦ ಅನುಪಾತವನ್ನು ತಾವು ಹೊರಡಿಸಿದ್ದೀರಿ. ಇದಕ್ಕೆ ನಾನು ಎಷ್ಟು ಅಭಿನಂದನೆ ಸಲ್ಲಿಸಿದರು ಸಹ ಕಡಿಮೆ. ಆದರೆ, ನಾನು ತಮ್ಮಲ್ಲಿ ರಿಕ್ವೆಸ್ಟ್ ಮಾಡಿಕೊಳ್ಳುವುದೇನೆಂದರೆ, ಈಗ ಹೊರಡಿಸಿರ ತಕ್ಕಂಥ ಪದ್ಧತಿಯನ್ನು ಆದಷ್ಟು ಬೇಗ ಜಾರಿಗೆ ತಂದು ಪೂರ್ಣ ಗೊಳಿಸುವಂಥ ಕೆಲಸವನ್ನು ಮಾಡಿದರೆ ಮೈಸೂರು – ಕರ್ನಾಟಕ ಭಾಗ ದಂತೆ ನಮ್ಮ ಹೈದರಾಬಾದ್ – ಕರ್ನಾಟಕ ಆಗತಕ್ಕಂಥದರಲ್ಲಿ ಸಂದೇಹ ವಿಲ್ಲ. ಇವತ್ತಿನ ದಿವಸ ನೀವು ಕೃಷಿ ಬಗ್ಗೆ ಹೆಚ್ಚು ಗಮನಕೊಟ್ಟಿದ್ದೀರಿ. ಆದರೆ, ಸರ್ಕಾರಕ್ಕೆ ನನ್ನದೊಂದು ಮನವಿ, ಏನೆಂದರೆ ನಮ್ಮ ರಾಜ್ಯದಲ್ಲಿ ಸುಮಾರು ೬೨% ಕೃಷಿ ಮೂಲಕ ರೈತರು ಜೀವನ ಮಾಡುತ್ತಿದ್ದಾರೆಂದು ತಾವು ಹೇಳಿಕೆ ನೀಡಿದ್ದೀರಿ. ಆದ್ದರಿಂದ, ಇದರ ಬಗ್ಗೆ ಒಂದು ವಿಚಾರ ಮಾಡಿದರೆ ಅನುಕೂಲವಿರುತ್ತದೆ. ಅದೇನೆಂದರೆ, ಕೃಷಿ ಬಗ್ಗೆ ನಮ್ಮ ಮಕ್ಕಳಿಗೆ ಹೆಚ್ಚಿನ ಒಂದು ಮಾಹಿತಿ ಸಿಗಬೇಕು. ಇವತ್ತು ನಮ್ಮ ಮಕ್ಕಳು ೧ನೇ ತರಗತಿಯಿಂದ ೧೦ನೇ ತರಗತಿಯವರೆಗೆ ಶಾಲೆಗೆ ಹೋಗುತ್ತಾರೆ. ಆದರೆ, ಮುಂದಿನ ಉಪ ಜೀವನ ಮಾಡಬೇಕೆಂದುಬುದು ಅವರಿಗೆ ಗೊತ್ತಿಲ್ಲ. ಅವರಿಗೆ ಸಮಾಜ ಮತ್ತು ವಿಜ್ಞಾನದ ಬಗ್ಗೆ ತಿಳಿದುಕೊಂಡರೂ, ಮುಂದಿನ ಜೀವನದಲ್ಲಿ ಅದು ಅವರಿಗೆ ಮಾರ್ಗವಾಗುವುದಿಲ್ಲ. ೨% ಜನರಿಗೆ ಮಾತ್ರ ಒಳ್ಳೆಯ ಮಾರ್ಗದರ್ಶನವಾಗಿ ಮುಂದಕ್ಕೆ ಓದಿ ಸೌಕರ ವಂತರಾಗುತ್ತಾರೆ. ಮತ್ತು ಮುಂದೆ ಅವರು ಉನ್ನತ ಸ್ಥಾನಕ್ಕೆ ಹೋಗುತ್ತಾರೆ. ಆದರೆ, ಬಹಳಷ್ಟು ಜನ ಕೃಷಿಗೆ ಹೋಗಿ ಅದಕ್ಕೆ ಅವಲಂಬಿತರಾಗುತ್ತಾರೆ.

ಆದರೆ, ಹಳ್ಳಿ ಭಾಗದ್ಲಿ ಏನಾಗುತ್ತದೆಂದರೆ, ಹಳ್ಳಿಯ ಕೂಲಿ ಕಾರ್ಮಿಕರ ಮಗ ೧೦ನೇ ತರಗತಿ ಪಾಸ್ ಆಗಲಿ ಅಥವಾ ಫೇಲ್ ಆಗಲಿ ಅವರ ಮನೆಗೆ ಆತ ಡಿ.ಸಿ.ಆಗಿರುತ್ತಾರೆ. ಆದರೆ, ಹಳ್ಳಿ ಭಾಗದಲ್ಲಿ ಏನಾಗುತ್ತದೆಂದರೆ, ಹಳ್ಳಿಯ ಕೂಲಿ ಕಾರ್ಮಿಕರ ಮಗ ೧೦ನೇ ತರಗತಿ ಪಾಸ್ ಆಗಲಿ ಅಥವಾ ಫೇಲ್ ಆಗಲಿ ಅವರ ಮನೆಗೆ ಆತ ಡಿ.ಸಿ.ಆಗಿರುತ್ತಾನೆ. ಆತನಿಗೆ ಕೃಷಿ ಬಗ್ಗೆ ಹೇಳಿದರೆ, ನಾನು ೧೦ನೇ ತರಗತಿ ಪಾಸ್ ಆಗಿದ್ದೇನೆ, ನನ್ನಿಂದ ಕೃಷಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲವದೆಂದು ಹೇಳುತ್ತಾನೆ. ಆದ್ದರಿಂದ ಸರ್ಕಾರ ಮುಂದಾಲೋಚನೆ ಮಾಡಿಕೊಂಡು ಇವತ್ತಿನ ದಿವಸ ೨% ಜನರಿಗೆ ಅನುಕೂಲ ಮಾಡಿಕೊಡುವುದಕ್ಕಿಂಥ ೬೪% ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಅವರಿಗೆ ಕೃಷಿಯ ಬಗ್ಗೆ ಒಂದು ಪಾಠ ಮಾಡಿ ಪಠ್ಯ ಪುಸ್ತಕದಲ್ಲಿಟ್ಟರೆ, ಆತ ಅದನ್ನು ಓದುತ್ತಾ ಹೋಗುವಾಗ ಇದರ ಬಗ್ಗೆ ಆತನಿಗೆ ಗೊತ್ತಾಗುತ್ತದೆ. ಇವತ್ತಿನ ದಿವಸ ಇಲ್ಲಿಯ ಕಾನ್ವೆಂಟ್ ಶಾಲೆಯಲ್ಲಿ ಶೇಂಗಾ ಯಾವ ರೀತಿಯಾಗಿ ಬೆಳೆಯುತ್ತದೆಂದು ಕೇಳಿದರೆ, ಮಾವಿನ ಹಣ್ಣು ಬೆಳೆಯುವ ಹಾಗೆ ಶೇಂಗಾ ಕೂಡ ಬೆಳೆಯುತ್ತದೆಂದು ಹೇಳುತ್ತಾರೆ. ಶೇಂಗಾ ಎಲ್ಲಿಂದ ಬರುತ್ತದೆಂದು ಬಹಳಷ್ಟು ಜನರಿಗೆ ಗೊತ್ತಿಲ್ಲದಂತಹ ಪರಿಸ್ಥಿತಿ ಸಿಟಿಯಲ್ಲಿ ಓದತಕ್ಕಂಥ ಹುಡುಗರಿಗೆ ಇದೆ. ಆದ್ದರಿಂದ ೧ ನೇ ತರಗತಿಯಿಂದ ೧೦ನೇ ತರಗತಿಯವರೆಗೆ ಕೃಷಿ ಬಗ್ಗೆ ಒಂದು ಶಿಕ್ಷಣವನ್ನು ಕಡ್ಡಾಯವಾಗಿ ಮಾಡಿದರೆ ಅವರು ೧೦ನೇ ತರಗತಿ ಮುಗಿದ ಮೇಲೆ ಒಂದು ವೇಳೆ ನೌಕರಿ ಮಾಡುವುದಕ್ಕೆ ಆಗಿದೇ ಇದ್ದಾಗ ಮತ್ತು ಮುಂದಕ್ಕೆ ಓದುವುದಕ್ಕೆ ಆಗದೇ ಇದ್ದಾಗ ಒಕ್ಕಲುತನವಾದರು ಮಾಡಬಹುದಾಗಿದೆ. ಮತ್ತೆ ಯಾವ ಸೀಸನ್ ನಲ್ಲಿ ಶೇಂಗಾ, ಸೂರ್ಯಪಾನ, ಸಜ್ಜೆ ಬಿತ್ತನೆ ಮಾಡಬೇಕೆಂಬುದು ಆ ಜನರಿಗೆ ಗೊತ್ತಾಗುತ್ತದೆ. ಆದ್ದರಿಂದ ಕೃಷಿ ಬಗ್ಗೆ ಒಂದು ಸಬ್ ಜೆಕ್ಟ್ ಆಗಿ ಇಡಬೇಕೆಂದು ಕೇಳಿಕೊಳ್ಳುತ್ತೇನೆ. ಕ್ರೀಡೆ ಬಗ್ಗೆ ತಮಗೆಲ್ಲಾ ಗೊತ್ತಿದೆ. ಒಲಪಿಕ್ ನಲ್ಲಿ ಒಂದು ಗೋಲ್ಡ್ ಮೆಡಲ್ ತೆಗೆದುಕೊಳ್ಳಬೇಕಾದರೆ ಬಹಳ ಕಷ್ಟವಿದೆ ಚಿಕ್ಕ ದೇಶವಾದ ಕೀನ್ಯಾ ಗೋಲ್ಡ್ ಮೆಡಲ್ ತೆಗೆದುಕೊಂಡರೆ ನಾವು ಎಲ್ಲಿಲ್ಲದವರಿಗೆ ಸನ್ಮಾನ ಮಾಡುತ್ತೇನೆ. ಸಾವಿರಾರು ಕೋಟಿ ರೂಪಾಯಿಗಳನ್ನು ಅವರಿಗೆ ಕೊಡುತ್ತೇವೆ. ಮತ್ತೆ

ಅವರ ಅಡ್ವರ್ ಟೈಸ್ ಮೆಂಟ್ ಕೂಡ ಎಲ್ಲಾ ಕಡೆ ಮಾಡುತ್ತೇವೆ. ೨೦ ವರ್ಷದಿಂದ ಚೈನಾ ದೇಶ ಒಲಂಪಿಂಕ್ ನಲ್ಲಿ ಭಾಗವಹಿಸುತ್ತಿದೆ. ಒಲಂಪಿಕ್ ನಲ್ಲಿ ಮೆಡಲ್ ತೆಗೆದುಕೊಳ್ಳುವುದರಲ್ಲಿ ಚೈನಾ ದೇಶ ಎರಡನೇ ಸ್ಥಾನಕ್ಕೆ ಬಂದಿದೆ. ಆದರೆ, ನಮ್ಮ ಭಾರತ ದೇಶ ಏಕೆ ಅಲ್ಲಿಗೆ ರೀಚ್ ಆಗುತ್ತಿಲ್ಲ. ನಾವು ಇವತ್ತಿನ ದಿವಸ ಕ್ರೀಡೆ ಬಗ್ಗೆ ಹೆಚ್ಚು ಅಭಿಲಾಷೆಯನ್ನು ತೋರಿಸುತ್ತಿಲ್ಲ. ಇವತ್ತಿನ ದಿವಸ ಶಾಲೆಯಲ್ಲಿ ಮಕ್ಕಳು ಚೆನ್ನಾಗಿ ಆಟವಾಡುತ್ತಿದ್ದರೆ ತಂದೆ-ತಾಯಿಗಳು ಬೈಯುತ್ತಾರೆ. ಏನು ಆಟವಾಡುತ್ತೀರಿ, ಆಟದಿಂದ ನಿಮಗೆ ಏನು ಬರುತ್ತದೆ ಮೊದಲು ಓದಿ ಎಂದು ಹೇಳುತ್ತಾರೆ. ಓದಿನ ಜೊತೆಯಲ್ಲಿ ಆಟವನ್ನು ಒಂದು ಪಾಠವನ್ನಾಗಿ ಪರಿಗಣಿಸಿ ಅದಕ್ಕೆ ಸ್ವಲ್ಪ ಅಂಕಗಳನ್ನು ಇಟ್ಟರೆ ಮುಂದಿನ ದಿನಗಳಲ್ಲಿ ಮೆಡಲ್ ಪಡೆದುಕೊಳ್ಳುವ ಬಗ್ಗೆ ಒಂದು ಆಸೆಯನ್ನು ಇಟ್ಟುಕೊಳ್ಳಬಹುದಾಗಿದೆ. ಮತ್ತೆ ಹೆಚ್ಚಿನ ಮೆಡಲ್ ತೆಗೆದುಕೊಂಡು ಬರುವುದಕ್ಕೆ ಅವಲಂಬನೆ ಇಟ್ಟುಕೊಳ್ಳಬಹುದಾಗಿದೆ. ಮತ್ತೆ ನಮ್ಮ ರಾಜ್ಯ ಮತ್ತು ದೇಶದಲ್ಲಿ ಒಳ್ಳೆಯ ಗುಣಮಟ್ಟದ ಆಟವಾಡುವುದಕ್ಕೆ ಸಹಕಾರವಾಗುತ್ತದೆ. ಆದ್ದರಿಂದ, ಇದನ್ನು ಕೂಡ ತಾವು ಪಠ್ಯ ಪುಸ್ತಕದಲ್ಲಿ ಸೇರಿಸಬೇಕೆಂದು ಸರ್ಕಾರಕ್ಕೆ ನಾನು ಮನವಿ ಮಾಡಿಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ಇನ್ನೊಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ನಮ್ಮ ಸ್ನೇಹಿತರಾದ ಮಾನ್ಯ ರೇಣುಕಾಚಾರ್ಯ ಮತ್ತು ಮಾನ್ಯ ಸುನಿಲ್ ರವರು ಇಲ್ಲಿ ಕುಳಿತುಕೊಂಡಿದ್ದಾರೆ. ಅವರಲ್ಲಿ ನಾನು ಕೇಳುವುದೇನೆಂದರೆ, ಎಲ್ಲಿಯೋ ಒಂದು ಕಡೆ ನೀವು ರಾಮನಿಗೆ ಅನ್ಯಾಯ ಮಾಡುತ್ತಿದೀರೆಂದು ನನಗೆ ಅನಿಸುತ್ತದೆ. ನಮಗೆ ಏಕೆ ಅನ್ಯಾಯ ಮಾಡಿದ್ದಾರೆಂದರೆ, ರಾಮಾಯಣ ಗ್ರಂಥವನ್ನು ವಾಲ್ಮೀಕಿ ಋಷಿಗಳು ಬರೆದಿದ್ದಾರೆ. ಒಂದು ವೇಳೆ ವಾಲ್ಮೀಕಿ ಋಷಿಗಳು ರಾಮಾಯಣ ಬರೆಯುವಾಗ ರಾಮನನ್ನು ರಾವಣನ್ನಾಗಿ ಮಾಡಿ, ರಾವಣ್ಣನನ್ನು ರಾಮನಾಗಿ ಮಾಡಿದದ್ದರೆ, ನಾವು ರಾಮನಿಗೆ ೧೦ ತಲೆ ಇಟ್ಟು ಪೂಜೆ ಮಾಡುತ್ತಿದ್ದೆವು. ಈ ಸಾರಿ ಬಜೆಟ್ ನಲ್ಲಿ ಕನಕ ಪೀಠಕ್ಕೆ ರೂ. ೩ ಕೋಟಿ ಕೊಟ್ಟಿದ್ದೀರಿ, ಅದಕ್ಕೆ ನಾವು ಅಭಿನಂದಿಸುತ್ತೇನೆ. ಆದರೆ, ತಾವು ವಾಲ್ಮಿಕಿ ಮಹಾ ಋಷಿಗಳನ್ನೇ ಮರೆತ್ತಿದ್ದೀರಿ, ಆದ್ದರಿಂದ ನೀವು ಎಲ್ಲಿಯೋ ಒಂದು

ಕಡೆ ರಾಮನಿಗೆ ಅನ್ಯಾಯ ಮಾಡಿದೀರೆಂದು ನಾನು ಮಾನ್ಯ ಸಿ.ಟಿ.ರವಿ ಯವರೆಗೆ ಹೇಳುತ್ತಿದ್ದೇನೆ. ಏಕೆಂದರೆ, ನೀವುಗಳು ರಾಮನ ಪ್ರಿಯರು, ಮತ್ತೆ ರಾಮನಿಂದ ನಿಮ್ಮ ಹೋರಾಟವನ್ನು ಪ್ರಾರಂಭ ಮಾಡಿ ಒಂದು ಮೂಲ ಉದ್ದೇಶವನ್ನು ಇಟ್ಟುಕೊಂಡಿರುವವರು ನೀವು. ಆದ್ದರಿಂದ ನೀವು ಮಹಾಋಷಿ ವಾಲ್ಮೀಕಿಗೆ ಅನ್ಯಾಯ ಮಾಡಿದರೆ ರಾಮನಿಗೆ ಅನ್ಯಾಯ ಮಾಡಿದಂತೆ ಅನಿಸುತ್ತದೆ.

ಅದಕ್ಕೋಸ್ಕರ ತಾವು ಮಾತನಡುವಾಗ ರಾಜನಳ್ಳಿ ಗುರುಪೀಠದ ಬಗ್ಗೆ ಮಾತನಾಡಿ, ಅದರ ಬಗ್ಗೆ ತಾವು ಲಕ್ಷ್ಯವನ್ನು ವಹಿಸಬೇಕೆಂದು ಕೇಳುತ್ತೇನೆ. ಸದ ಗುಲ್ಬರ್ಗಾ ವಿಶ್ವವಿದ್ಯಾನಿಲಯದ ಬಗ್ಗೆ ಮಹರ್ಷಿ ವಾಲ್ಮೀಕಿ ಗುರುಪೀಠ ಸ್ಥಾಪನೆ ಮಾಡಿದರೆ ಅಧ್ಯಯನ ಮಾಡುವುದಕ್ಕೆ ಹುಡುಗರಿಗೆ ಅನುಕೂಲವಾಗುತ್ತದೆ.ಇವತ್ತು ತಾವು ಹಲವಾರು ಕೆಲಸಗಳನ್ನು ಮಾಡಿದ್ದೀರಿ. ಅದರ ಜೊತೆಗೆ ತಾವು ಇದನ್ನು ಸೇರಿಸಿಕೊಳ್ಳಬೇಕೆಂದು ಹೇಳುತ್ತೇನೆ. ಸಂಧ್ಯಾ ಸುರಕ್ಷ ಎಂದು ತಾವು ಒಳ್ಳೆಯ ಕಾರ್ಯಕ್ರಮವನ್ನು ಮಾಡತುತ್ತಿದ್ದೀರಿ. ಇವತ್ತು ನಿಜಕ್ಕು ವೃದ್ಯಾಪ್ಯ ವೇತನ, ಅಂಗವಿಕಲರ ವೇತನ ಮತ್ತು ವಿಧವಾ ವೇತನ ಇವೆಲ್ಲವೂ ಸಾಮಾನ್ಯವಾದ ಕೆಲಸವಲ್ಲ. ಇದು ಮಹಾನ್ ದೊಡ್ಡ ಕೆಲಸವಾಗಿದೆ. ಮೊದಲು ೧೦೦ ರೂಪಾಯಿಗಳು ಸಿಗುತ್ತಿದ್ದರೆ ನಮ್ಮ ಹಳ್ಳಿಯ ಜನರು ಏನು ಹೇಳುತ್ತಿದ್ದರು ಎಂದರೆ ಇಂದಿರಾಗಾಂಧಿ ರೊಕ್ಕ ವೆಂದು ಹೇಳುತ್ತಿದ್ದರು. ಇದು ಸರ್ವೆಸಾಮಾನ್ಯವಾಗಿ ರೂಢಿಗೆ ಬಂದಿರು ವಂತಹದ್ದು. ಆದರೆ ಇವತ್ತಿನ ದಿವಸ ಈ ಕೆಲಸವನ್ನು ತಾವು ಅದ್ಭುತವಾಗಿ ಮಾಡಿರುವುದರಿಂದ ಮುಂದಿನ ದಿನಗಳಲ್ಲಿ ಇದು ಮಾನ್ಯ ಕುಮಾರಣ್ಣನ ಹಗು ಮಾನ್ಯ ಯಡಿಯೂರಪ್ಪರವರ ರೊಕ್ಕವೆಂದು ನಮ್ಮ ಜನರು ಹೇಳುತ್ತಾರೆ. ಅಂತಹ ಒಳ್ಳೆಯ ಕೆಲಸವನ್ನು ತಾವು ಮಾಡಿದ್ದೀರಿ. ಇದರಿಂದಾಗಿ ಪ್ರತಿಯೊಂದು ಕುಟುಂಬಕ್ಕೆ ತಾವು ಸಹಾಯವನ್ನು ಮಾಡುವ ತರಹ ಆಗಿದೆ. ಇವತ್ತು ೧೦೦ ರೂಪಾಯಿಗೋಸ್ಕರ ಆ ಜನರು ಅಡ್ಡಾಡಿ ಬಹಳ ಖರ್ಚು ಮಾಡಿರುವಂತಹದ್ದು ಇದನ್ನು ೨೦೦ ರೂಗಳಿಂದ ೪೦೦ ರೂಪಾಯಿಗಳವರೆಗೆ ಮಾಡಿರುವುದರಿಂದ ಇದರಿಂದ ಬಹಳಷ್ಟು ಜನರಿಗೆ ಅನುಕೂಲವಾಗಿದೆ. ಇದರಿಂದ ಅವರ ಕುಟುಂಬಕ್ಕೆ ನೇರವಾಗಿ ಒಂದು

ಸಹಾಯ ಮುಟ್ಟಿದ ಹಾಗೆ ಆಗುತ್ತದೆ. ಅದರ ಜೊತೆಗೆ ಸಮಾಜ ಕಲ್ಯಾಣ ಇಲಾಖೆಗೆ ಇದ್ದೆ ಸ್ವಲ್ಪ ಕಡಿಮೆ ಅನುದಾನವನ್ನು ಕೊಟ್ಟಿದ್ದೀರೆಂದು ಅನಿಸುತ್ತದೆ. ಯಾವುದೋ ಒಂದು ಬಜೆಟ್ ನಲ್ಲಿ ೧೮%, ೨೨.೫% ಈ ಇಲಾಖೆಗೆ ಕೊಡಬೇಕೆಂದು ಇರುತ್ತದೆ. ಈ ಬಗ್ಗೆ ತಾವು ವಿಚಾರ ಮಾಡಿ ನೋಡಬೇಕು. ನಿಮ್ಮ ಅನುದಾನದಲ್ಲಿ ಅದಕ್ಕೆ ಎಷ್ಟು ಕೊಟ್ಟಿದ್ದೀರಿ, ಇವತ್ತು ಮನುಷ್ಯನ ಆಸೆಗೆ ಮಿತಿಯೇ ಇಲ್ಲ, ನೀವು ಎಷ್ಟು ಹಣವನ್ನು ಕೊಟ್ಟರೂ ನಾವು ಕೇಳಿಯೇ ತೀರುತ್ತೇವೆ, ತಾವು ವಿಧಾನ ಸೌಧ ಕೊಡುತ್ತೇವೆಂದರೆ, ಅದರ ಜೊತೆಗೆ ವಿಕಾಸ ಸೌಧವನ್ನು ಕೊಡಿ ಎಂದು ಕೇಳುವಂತಹ ಆಸೆ ಮನುಷ್ಯನಿಗೆ ಇದೆ. ಆದರೆ ಅವರಿಗೆ ಸಂಬಂಧಿಸಿದಂತೆ ಎಷ್ಟು ಕೊಬೇಕೆಂದು ತಮಗೆ ಗೊತ್ತಿದೆ. ಆ ತರಹ ತಾವು ಕೊಟ್ಟರೆ ಅನುಕೂಲವಾಗುತ್ತದೆ. ಇನ್ನೊಂದು ವಿಷಯವನ್ನು ನಾನು ನೊಂದು ಹೇಳುತ್ತಿದ್ದೇನೆ. ತಾವು ಮಾತನಾಡುವಾಗ ೪ ಜನರಿಗೆ ಬಹಳ preference ನ್ನು ಕೊಡುತ್ತೀರಿ, ನಮ್ಮಂತಹ ಯುವಕರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕು. ಇವತ್ತು ನಮ್ಮ ಮಾನ್ಯ ಕೃಷ್ಣ ಬೈರೇಗೌಡರು ಬಹಳ ಅದ್ಭುತವಾಗಿ, ಚೆನ್ನಾಗಿ ಮಾತನಾಡಿದರು. ಆ ರೀತಿಯಾಗಿ ನಮಗೆ ಮಾತನಾಡುವುದಕ್ಕೆ ತಾವು ಅವಕಾಶವನ್ನು ಕೊಟ್ಟರೆ ನಮಗೆ ಬಹಳ ಅನುಕೂಲವಾಗುತ್ತದೆ. ನಾವು ಜೀವನದಲ್ಲಿ ಹೆಚ್ಚು ಕಲಿಯಬೇಕೆಂದು ಮತ್ತು ತಿಳಿದುಕೊಳ್ಳಬೇಕೆಂಬ ಆಸೆ ಇರುತ್ತದೆ. ನಿಮ್ಮ ಎದುರಿಗೆ ನಾವು ಮಾತನಾಡಿದರೆ ನಮಗೆ ಏನೋ ಆನೆಬಲ ಬಂದಂತೆ ಆಗುತ್ತದೆ. ಆದ್ದರಿಂದ ನಮಗೆಲ್ಲರಿಗೂ ತಾವು ಮಾತನಾಡುವಾಗ ಹೆಚ್ಚಿನ ಅವಕಾಶವನ್ನು ಕೊಡಬೇಕು. ನೀವು ಇಂತಿಂಥ ಸಮಯ ಅಂದರೆ ೧೦ ನಿಮಿಷ ಎಂದರೆ, ಇವತ್ತು ನಮಗೆ ಮಾತನಾಡುವುದಕ್ಕೆ ತಾವು ೧೦ ನಿಮಿಗಳು ಕೊಟ್ಟಿದ್ದೀರಿ, ೧೧ ನಿಮಿಷಕ್ಕೆ ತಾವು ಕುಳಿತುಕೊಳ್ಳಿ ಎಂದರೆ ನಮಗೆಲ್ಲರಿಗೂ ಅವಕಾಶ ಸಿಗುತ್ತದೆ. ಮಾನ್ಯ ಯಡಿಯೂರಪ್ಪರವರ ಹತ್ತಿರ ನಾವು ಪರ್ಸನಲ್ ಆಗಿ ರಿಕ್ವೆಸ್ಟ್ ಮಾಡುವುದೇನೆಂದರೆ, ತಾವು ೫-೬ ಕ್ಯಾಮರಾಗಳನ್ನು ದಯಮಾಡಿ ಖರೀದಿ ಮಾಡಿಕೊಡಬೇಕು. ನಮ್ಮ ಸರ್ಕಾರದಿಂದ ಒಂದು ೫-೬ ಪತ್ರಿಕೆಗಳನ್ನು ತಾವು ದಯಮಾಡಿ ಇಡಬೇಕು. ಏಕೆಂದರೆ ಹುಡುಗರು ಒಳ್ಳೆಳ್ಳೆಯ ಮಾತನಾಡುವವರಿಗೆ

ಯಾವುದೂ ಕೂಡ ಅವಕಾಶ ಸಿಗುವುದಿಲ್ಲ. ಇವತ್ತು ನಾನು ಗಟ್ಟಿ ಧೈರ್ಯದಿಂದ ಹೇಳಬಹುದು, ಈ ಟೈಮ್ ನಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ರವರು ಸದನಲದಲಿ ಇದ್ದರೆ ಮಾತನಾಡು ಎಂದರೆ ಬೇಡ ನಾನು ಬೆಳಿಗ್ಗೆ ಮಾತನಾಡುತ್ತೇನೆ ಎಂದು ಹೇಳುತ್ತಿದ್ದರು. ಅವರು ನಮಗನಿಸಿದ ಮಟ್ಟಿಗೆ ನಿಮಗಿಂತ ಹೆಚ್ಚಿಗೆ ನಮ್ಮ ಕಡೆ ನೋಡಿ ಮಾತನಾಡುತ್ತಿರುತ್ತಾರೆ. ಏಕೆಂದರೆ ಅಲ್ಲಿ ನೋಡಿದರೆ ಕರ್ನಾಟಕದ ಜನತೆ ನೋಡುತ್ತಿರುತ್ತಾರೆ. ನಿಮ್ಮನ್ನು ನೋಡಿದರೆ ಎಲ್ಲಿ ತಾವು ಕುಳಿತುಕೊಳ್ಳಿ ಎಂದು ಹೇಳುತ್ತಿರೋ ಎಂದು ಅದೊಂದು ಅವರಿಗೆ ಅಂಜಿಕೆ ಇರುತ್ತದೆ. ಅದಕ್ಕೋಸ್ಕರ ನಾನು ಮಾನ್ಯ ಯಡಿಯೂರಪ್ಪವರಲ್ಲಿ ವಿನಂತಿಯನ್ನು ಮಾಡಿಕೊಲ್ಲುತ್ತೇನೆ. ಸುಮ್ಮನೆ ೫-೬ ಕಾಮಗಾರಗಳನ್ನು ಇಟ್ಟು ಸುಮ್ಮನೆ ಫ್ಲಾಪ್ ಹೊಡೆದುಕೊಂಡು ಕುಳಿತುಕೊಂಡೆರೆ ಪಾಪ ಅವರು ಇಲ್ಲಿ ಕುಳಿತಿರುತ್ತಾರೆ.

ಶ್ರೀ ಹೆಚ್. ಆಂಜನೇಯ : ಯಾರು ಫೋಟೋಗ್ರಾಫರ್ ಎಂದು ಅವರಿಗೆ ಗೊತ್ತಿರುವುದಿಲ್ಲ. ಯಾರು ಫೋಟೋಗ್ರಾಫರ್ ಮತ್ತು ಯಾರು ಪ್ರೆಸ್ ನವರು ಎಂದು ಅವರಿಗೆ ಗೊತ್ತಿಲ್ಲವೇ?

ಶ್ರೀ ರಾಜುಗೌಡ : ಆ ಫ್ಲಾಪ್ ಆಗುವಾಗ ಏನು ಎಂದು ಗೊತ್ತೆ ಆಗುವುದಿಲ್ಲ.

ಶ್ರೀ ಹಎಚ್. ಆಂಜನೇಯ : ಮಾನ್ಯ ಅಧ್ಯಕ್ಷರೆ, ನಮಗೆಲ್ಲಾ ಫೋಟೋಗ್ರಾಫರ್ ಮತ್ತು ಪ್ರೆಸ್ ಗ್ಯಾಲರಿ ಖಾಲಿಯಾದ ಮೇಲೆ ಕೊಡುತ್ತೀರಿ. ಅಲ್ಲಿ ದಿನಗಟ್ಟಲೆ ಮಾತನಾಡುವವರಿಗೆ ಪ್ರೆಸ್ ಗ್ಯಾಲರಿ ಫುಲ್ ಇರಬೇಕು. ಕ್ಯಾಮರಾಮ್ಯಾನ್ಗಳು ಸಹ ಇರಬೇಕು. ಅವಾಗ ಅವರಿಗೆ ಮಾತನಾಡುವುದಕ್ಕೆ ಕೊಡುತ್ತೀರಿ. ಇದು ಯಾವ ನ್ಯಾಯ ಸ್ವಾಮಿ?

ಅಧ್ಯಕ್ಷರು : ಈಗ ಹಿರಿಯರು ಇದ್ದಾರಲ್ಲಾ, ಅವರೆಲ್ಲರೂ ಟ್ರೈನ್ ಆಫ್ ಆಗಿ ಕುಳಿತು ಗಂಟೆಗಟ್ಟಲೆ ಕುಳಿತುಕೊಂಡು ಕೇಳುತ್ತಿದ್ದು, ಈಗ ಮಾತನಾಡುತ್ತಾರೆ.

ಶ್ರೀ ಜಿ.ಚಂದ್ರಣ್ಣ : ಮಾನ್ಯ ಅಧ್ಯಕ್ಷರೆ, ನಮ್ಮನ್ನೆಲ್ಲಾ ಯಾವಾಗ ಮಾತನಾಡುವುದಕ್ಕೆ ಕರೆಯುತ್ತೀರಿ?

ಶ್ರೀ ಸಿ.ಎಸ್. ಪುಟ್ಟೇಗೌಡ : ಸದನಕ್ಕೆ ಯಾರು ಅಡ್ಡಿ ಮಾಡಿ, ಯಾರು ಸದನದ ಸಮಯವನ್ನು ಹಾಳು ಮಾಡುತ್ತಾರೋ ಅವರಿಗೆ ತಾವು ಹೆಚ್ಚು ಅವಕಾಶವನ್ನು ಕೊಡುತ್ತೀರಿ. ಅಪರೂಪಕ್ಕೆ ಯಾವತ್ತಾದರೂ ಕೇಳಿದರೆ ಅವರಿಗೆ ನೀವು ಅವಕಾಶವನ್ನು ಕೊಡುವುದಿಲ್ಲ.

ಶ್ರೀ ಹೆಚ್. ಆಂಜನೇಯ : ನಾವು ಅವರ ಮಾತನ್ನು ಕೇಳಬೇಕು, ಅದರ ಬಗ್ಗೆ ನನ್ನ ಆಕ್ಷೇಪಣೆ ಇಲ್ಲ. ಅದರ ಮಧ್ಯದಲ್ಲಿ ನಮಗೂ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ..

ಅಧ್ಯಕ್ಷರು : ಮಾನ್ಯ ಆಂಜನೇಯವರವರೆ ತಾವು ದಯಮಾಡಿ ಕುಳಿತುಕೊಳ್ಳಿ. ಇನ್ನು ಕೆಲವರು ಮಾತನಾಡುವವರು ಇದ್ದಾರೆ.

ಶ್ರೀ ರಾಜುಗೌಡ : ನಾನು ಇಲ್ಲಿ ಮಾತನಾಡಿದರೆ ನಮ್ಮ ಕ್ಷೇತ್ರದವರಿಗೆ ಗೊತ್ತಾಗುವುದಿಲ್ಲ ಏಕೆಂದರೆ ಎಲ್ಲರೂ ಕೂಡ ಹೊರಟು ಹೋಗಿರುತ್ತಾರೆ. ಮುಂದಿನ ಬಜೆಟ್ ನಲ್ಲಿ ತಾವು ದಯಮಾಡಿ ಮೊದಲು ಗೆದ್ದು ಬಂದವರಿಗೆ ಅವಕಾಶವನ್ನು ತಾವು ಕೊಡಬೇಕು.

ಅಧ್ಯಕ್ಷರು : ಮುಂದಿನ ಸಾರಿಯಿಂದ ಹಿಂದುಗಡೆ ಕುಳಿತವರಿಂದ ಆರಂಭ ಮಾಡೋಣ. ಈ ಕಡಯಿಂದಲ್ಲಾ ಆ ಕಡೆಯಿಂದಲೇ ಆರಂಭ ಮಾಡೋಣ.

ಶ್ರೀ ರಾಜುಗೌಡ : ನಾವು ಮಾತನಾಡಬೇಕೆಂದು ಧೈರ್ಯ ಮಾಡಿರುವುದೇ ದೊಡ್ಡದಾಗಿರುತ್ತದೆ. ಅದರಲ್ಲಿ ತಾವು ಸುಮ್ಮನೆ ಕುಳಿತುಕೊಳ್ಳಿ ಎಂದರೆ ನಾವು ಅರ್ಧ ಪಂಕ್ಚರ್ ಆಗಿರುತ್ತೇವೆ. ನಾವು ಸಣ್ಣ ಹುಡುಗರು ಮಾತನಾಡುವಾಗ ನೀವು ಇನ್ನು ಹೆಚ್ಚು ಮಾತನಾಡಿ ಎಂದು ತಾವು ಪ್ರೋತ್ಸಾಹವನ್ನು ಕೊಡಬೇಕು. ಮಾನ್ಯ ಸಿದ್ದರಾಮಯ್ಯರವರು ನಾನು ಲಾಸ್ಟ್ ನಲ್ಲಿ ಮಾತನಾಡುತ್ತೇವೆಂದು ಹೇಳಿದ್ದಾರೆ. ಇವತ್ತು ಒಂದು ನಿಜಕ್ಕೂ ಕೂಡ ಒಳ್ಳೆಯ ಬೆಳವಣಿಗೆ. ಹುಡುಗರು ಮಾತನಾಡುವಾಗ ತಪ್ಪು

ಮಾಡಿದರೆ ಅಳುಕು ಹುಳುಕು ಇದ್ದರೆ ಎಲ್ಲವನ್ನು ಸೇರಿಸಿ ನಾನು ಕೊನರೆಗೆ ಮಾತನಾಡುತ್ತೇನೆಂದು ಅವರು ಹೇಳಿದರು. ನಾಳೇ ಮಾತನಾಡುತ್ತೇನೆಂದು ಹೇಳಿರುವುದಕ್ಕೋಸ್ಕರವೇ ಸಮಯ ನಮಗೆ ಸಿಕ್ಕಿದೆ ಎಂದು ಕಾಣಿಸುತ್ತದೆ. ಇಲ್ಲದಿದ್ದರೆ ನಮಗೂ ಕೂಡ ಸಮಯ ಸಿಗುತ್ತಿರಲಿಲ್ಲ. ತಾವು ಇದೇ ತರಹ ಮುಂದಿನ ಸಾರಿ ಮಾನ್ಯ ರಮೇಶ್ ಕುಮಾರ್‌ರವರು, ಮಾನ್ಯ ಡಿ.ಕೆ. ಶಿವಕುಮಾರಣ್ಣನವರು ಮಾನ್ಯ ಸಿದ್ದರಾಮಯ್ಯರವರ ತರಹ ಲಾಸ್ಟ್ ನಲ್ಲಿ ಮಾತನಾಡಿದರೆ ನಮ್ಮಂತಹ ಯುವಕರಿಗೆ ಅವಕಾಸ ಮಾಡಿಕೊಟ್ಟಂತೆ ಆಗುತ್ತದೆ.

ಅಧ್ಯಕ್ಷರು : ಆಯಿತಪ್ಪಾ ಇನ್ನು ಮುಂದೆ ಫಸ್ಟೇ ಕೊಟ್ಟುಬಿಡೋಣ.

ಶ್ರೀ ಡಿ.ಕೆ.ಶಿವಕುಮಾರ್ : Young star ಪ್ರೋತ್ಸಾಹವನ್ನು ಕೊಡಬೇಕೆಂದು ನಾವು ಇದ್ದೇವೆ. ನಾವು ನಿಮಗೆ ಮಾತನಾಡುವುದಕ್ಕೆ disturb ಮಾಡುತ್ತಿಲ್ಲ. ತಾವು ಮಾತನಾಡಿ. ನಿಮಗೆ ಬೆಂಬಲವನ್ನು ಕೊಡುವುದಕ್ಕೆ ನಾವು ಇದ್ದೇವೆ.

ಅಧ್ಯಕ್ಷರು : ಮಾನ್ಯ ಚಂದ್ರಣ್ಣನವರೆ, ತಾವು ಮಾತನಾಡಿ.

ಶ್ರೀ ಜಿ. ಚಂದ್ರಣ್ಣ : ಮಾನ್ಯ ಅಧ್ಯಕ್ಷರೆ,. ನಮಗೆಲ್ಲರಿಗೂ ತಾವು ಮಾತನಾಡಿ ಎಂದು ಹೇಳಿದದೀರಿ. ಯಾವುದೊಂದು ಒಂದು ವಿಚಾರದ ಬಗ್ಗೆ ಮಾತನಾಡಿರುತ್ತೇವೆ. ದಯವಿಟ್ಟು ನಾನು ಈಗ ಮಾತನಾಡುವುದಿಲ್ಲ. ನೀವು ನನಗೆ ಮಾತನಾಡುವುದಕ್ಕೆ ಸಮಯ ಕೊಟ್ಟರೂ ಪರವಾಗಿಲ್ಲ ಇದ್ದದಿದ್ದರು ಕೂಡ ಪರವಾಗಿಲ್ಲ. ತಾವು ನಾಳೆ ಮಾತನಾಡಿ ಎಂದರೆ ಮಾತನಾಡುತ್ತೇನೆ. ದಯಮಾಡಿ ನಿಮಗೆ ವಂದನೆಗಳು.

ಅಧ್ಯಕ್ಷರು : ಅವರು ಕನ್ ಕ್ಲೂಡ್ ಮಾಡಲಿ.

ಶ್ರೀ ರಾಜುಗೌಡ : ಕೆಲವರು ಮಾತನಾಡುತ್ತಾರೆಂದು ಇಲ್ಲಿ ನಾವು ಹಿಂದೆ ನೋಡಿ ನಮಗೆ ಅಭ್ಯಾಸವಾಗಿ ಹೋಗಿದೆ. ನಾನು ಹೇಳುವುದೇನೆಂದರೆ ನಮ್ಮ ನಾರಾಯಣಪುರ ಡ್ಯಾಂ, ನಮಗೆ ಮಹಾರಾಷ್ಟ್ರದಿಂದ ಬಂದಂತಹ ನೀರನ್ನು ಈ ಬಗೆ ನಮ್ಮ ಹಿರಿಯರು

ಹೇಳುತ್ತಿರುತ್ತಾರೆ. ಪುಣ್ಯದ ಊರಿನಲ್ಲಿ ಮಳೆಯಾದರೆ, ಪಾಪದ ಊರಿನಲ್ಲಿ ನದಿಯು ಹರಿಯುತ್ತದೆ ಎಂದು ಹೇಳುತ್ತಾರೆ. ಆ ಪಾಪದ ಊರಿನವರು ನಾವಾಗಿದ್ದೇವೆ. ೪-೫ ಲಕ್ಷ ಕ್ಯೂಸೆಕ್ಸ್ ನೀರು ನಮ್ಮಿಂದ ಹರಿದು ಹೋಗುತ್ತಿರುತ್ತದೆ. ನಾವು ಅದರ ಬಗ್ಗೆ ಗಮನವನ್ನೇ ಕೊಡುವುದಿಲ್ಲ. ಈ ಸಾರಿ ಸುಮಾರು ೪೦೦ ಟಿಎಂಸಿ ನೀರನ್ನು ನಮ್ಮ ಡ್ಯಾಂನಿಂದ ಬಿಟ್ಟಿದ್ದೇವೆ. ಇದರ ಬಗ್ಗೆ ಮಾತನಾಡುವಾಗ ನಮ್ಮದು ರೂ.೮೦ ಕೋಟಿ, ನೀರಿನ ವಿಚಾರದಲ್ಲಿ ದಯವಿಟ್ಟು ರಾಜಕೀಯ ಬೇಡ ಇದಕ್ಕಾಗಿ ರೂ.೮೦ ಕೋಟಿ ಅಲ್ಲ ರೂ.೧೦೦ ಕೋಟಿ ಆಗಲಿ, ಆ ನೀರನ್ನು ಸಂರಕ್ಷಣೆ ಮಡುವುದನ್ನು ನಾವು ನೋಡೋಣ. ಇವತ್ತು ಮಾನ್ಯ ಸಚಿವರಾದ ಈಶ್ವರಪ್ಪನವರು ಒಂದು ದೊಡ್ಡ ಹೆಜ್ಜೆಯನ್ನು ಇಟ್ಟಿದ್ದಾರೆ. ಬಿಜಾಪುರ ಭಾಗದ ಎಲ್ಲಾ ಜನರಿಗೆ ಇವತ್ತು ಅಲ್ಲಿ ಕೆರೆಯನ್ನು ತುಂಬಿಸಿ ಅಲ್ಲಿ ನೀರಾವರಿಯನ್ನು ಮಾಡಬೇಕೆಂತೆ, ಆದರೆ, ಬಿಜಾಪುರದ ಜನರ ಕಷ್ಟ ಯಾರಿಗೆ ಗೊತ್ತಿದೆ? ಇವತ್ತು ನಮ್ಮ ನಾರಾಯಣಪುರ ಡ್ಯಾಂ ಆಗುವುದಕ್ಕೋಸ್ಕರ ಸುಮಾರು ಲಕ್ಷಾಂತರ ಎಕರೆ ಆ ಬಿಜಾಪುರದಲ್ಲಿ ಜಮೀನು ಹಾಳಾಗಿದೆ. ಅವರ ಪುಣ್ಯದಿಂದ ನಾವು ಸುರಪುರ ತಾಲ್ಲೂಕಿನವರು ಶಹಪೂರ, ಯಾದಗಿರಿ, ಜೇವರ್ಗಿ, ರಾಯಚೂರು, ಲಿಂಸುಗೂರು ನಮ್ಮದು ನೀರಾವರಿಯಾಗಿದೆ. ಆದರೆ ನಮಗೆ ನೀರು ಕೊಟ್ಟಂತಹವರದು ಅಲ್ಲಿ ಅವರ ಪರಿಸ್ಥಿತಿ ಏನು ಇದೆ? ಆ ಕಡೆ ಜಮೀನು ಕೂಡ ಹೋಗಿದೆ. ಅವರಿಗೆ ಮಾತ್ರ ನೀರು ಇಲ್ಲ. ಅದಕ್ಕೋಸ್ಕರ ಮಾನ್ಯ ಈಶ್ವರಪ್ಪ ಮಾಡುತ್ತಾರೆಂದು ಹೇಳುತ್ತೇನೆ. ರೂ. ೮೦ ಕೋಟಿಯಲ್ಲ, ಈ ಮೂಲಕ ಮಾನ್ಯ ಯಡಿಯೂರಪ್ಪನವರಲ್ಲಿ ವಿನಂತಿಯನ್ನು ಮಾಡುತ್ತೇನೆ. ರೂ. ೮೦೦ ಕೋಟಿ ಕೊಟ್ಟರು ಕೂಡ ಇಂತಹ ಕೆಲಸ ಮಾಡುವುದಕ್ಕೆ ಕೊಟ್ಟರೆ ತಪ್ಪಿಲ್ಲವೆಂದು ಹೇಳುತ್ತೇನೆ. ನಾನು ಇನ್ನೊಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಹುಟ್ಟು ಅನಿರಿಕ್ಷೀತ, ನಾವು ನಿಶ್ಚಿತ, ನೆನಪು ಮಾತ್ರ ಶಾಶ್ವತ, ಹುಟ್ಟು ಅನಿರಿಕ್ಷೀತ, ಹುಟ್ಟುತ್ತೇವೆಂದು ಯಾರು ಹುಟ್ಟುವುದಿಲ್ಲ, ಮಾವು ಮಾತ್ರ ನಿಶ್ಚಿತ, ಹುಟ್ಟಿದಂತಹ ಮನುಷ್ಯ ಸಾಯಲೇ ಬೇಕು. ಆದರೆ ನೆನಪು ಏನು ಇರುತ್ತದೆ, ದು ಶಾಶ್ವತವಾಗಿರುತ್ತದೆ. ಈ ಒಂದು ಆಯವ್ಯಯ ಮಾನ್ಯ

ಯಡಿಯೂರಪ್ಪರವರಿಗೆ ಯಾರು ಏನಾದರೂ ಹೇಳಲಿ ಒಂದು ಪತ್ರಿಕೆಯವರು ಬೈದು ಬರೆದರೆ ೯೯ ಪತ್ರಿಕೆಯವರು ಹೊಗಳಿ ಬರೆದಿದ್ದಾರೆ ಇದು ರೈತರಿಗೆ ಅನುಕೂಲವಾಗುವಂತಹ ಬಜೆಟ್. ಈ ಮಾತು ಮಾನ್ಯ ಯಡಿಯೂರಪ್ಪರವರ ಬಜೆಟ್ ಶಾಶ್ವತವಾಗಿ ನೆನಪು ಇರುತ್ತದೆಂದು ನಾನು ಹೇಳಲು ಇಷ್ಟ ಪಟ್ಟು ನನಗೆ ಒಂದೆರಡು ಮಾತನಾಡುವುದಕ್ಕೆ ಅವಕಾಶವನ್ನು ಮಾಡಿ ಕೊಟ್ಟಿದ್ದಕ್ಕಾಗಿ ತಮಗೆಲ್ಲರಿಗೂ ಧನ್ಯವಾದಗಲನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರ್. ಧ್ರುವನಾರಾಯಣ್ (ಸಂತೇಮರಳ್ಳಿ) : ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡುವುದಕ್ಕೆ ಸಮಯವನ್ನು ಕೊಟ್ಟಿರುವುದಕ್ಕಾಗಿ ತಮಗೆ ಧನ್ಯವಾದಗಳನ್ನು ಅರ್ಪಿಸಿ ಮಾತನಾಡುತ್ತೇನೆ. ನಾನು ಸಮಾಜ ಕಲ್ಯಾಣ ಇಲಾಖೆ ಸಂಬಂಧಪಟ್ಟ ಹಾಗೆ ಒಂದೆರೆಡು ವಿಷಯಗಳನ್ನು ನಾನು ಮಾನ್ಯ ಉಪಮುಖ್ಯಮಂತ್ರಗಳ ಗಮನಕ್ಕೆ ತರುವುದಕ್ಕೆ ಇಚೆಪಡುತ್ತೇನೆ. ಮಾನ್ಯ ಮಂತ್ರಿಗಳು ಕೂಡ ಇದ್ದಾರೆ. ಪತ್ರಿಕೆಯಲವರು ಯಾರು ಇಲ್ಲದಿದ್ದರು ಕೂಡ ಪರವಾಗಿಲ್ಲ. ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಮಾಜ ಕಲ್ಯಾಣ ಇಲಾಖಾ ಸಚಿವರು ಕೂಡ ಇದ್ದಾರೆ. ಸಮಸ್ಯೆಗಳಿಗೆ ಪರಿಹಾರವಾಗಬೇಕೆಂಬುದೆ ನನ್ನ ಭಾವನೆಯಾಗಿದೆ. ಆ ನಿಟ್ಟಿನಲ್ಲಿ ಇವತ್ತು ಜನಸಂಖ್ಯೆಗೆ ಅನುಗುಣವಾಗಿ ಅನುದಾನವನ್ನು ಕೊಡಬೇಕೆಂದು ನಾನು ಅವರಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೆನೆ. ೨೨-೨೩% ಪರಿಶಿಷ್ಟ ಜಾತಿ ಮತ್ತು ವರ್ಗದವರು ಇರುವುದರಲ್ಲಿ ಅನುದಾನವು ಇನ್ನು ಹೆಚ್ಚಿಗೆ ಆ ಇಲಾಖೆಗೆ ಒದಗಿಸಿಕೊಡಬೇಕೆಂದು ನನ್ನ ಮೊದಲನೆಯ ಮನವಿಯಾಗಿದೆ. ಈಗಾಗಲೆ ನಮ್ಮ ಮಾನ್ಯ ಆಂಜನೇಯರವರು ರೂ.೨೫ ಸಾವಿರ ರೈತರಿಗೆ ಸಾಲವನ್ನು ಮನ್ನಾ ಮಾಡಿದ್ದಾರೆ ಅದನ್ನು. ಪರಿಶಿಷ್ಟ ಜಾತಿ ನಿಗಮದವರಿಗು ಕೂಡ ಹರಿಜನ ಮತ್ತು ಗಿರಿಜನರು ತೆಗೆದುಕೊಂಡಿರುವಂತಹ ಸಾಲವು ಕೂಡ ಮನ್ನಾ ಮಾಡಬೇಕೆಂಬುದರಲ್ಲಿ ನಾನು ಅವರಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ. ಆ ರೂ. ೨೫ ಸಾವಿರ ಏನು ರೈತರಿಗೆ ತಾವು ಮನ್ನಾ ಮಾಡಿದ್ದೀರಿ, ಅದರಲ್ಲಿ ಶೇಕಡ ೧% ಮಾತ್ರ. ಪರಿಶಿಷ್ಟರು ಸಾಲವನ್ನು ತೆಗೆದುಕೊಂಡಿರಬಹುದು ಪರಿಶಿಷ್ಟ ಜಾತಿ ವರ್ಗದ ನಿಗಮ ಮತ್ತು

ಹಿಂದುಳಿದ ವರ್ಗದ ನಿಗಮವು ಕೂಡ ಎರಡು ಕಡೆ ರೈತರು ಎಲ್ಲಿ ತೆಗೆದುಕೊಂಡಿದ್ದಾರೋ ಆ ಸಾಲವನ್ನು ಕೂಡ ತಾವು ಮನ್ನಾ ಮಾಡಿ ಕೊಡಬೇಕೆಂಬ ಮನವಿಯನ್ನು ನಾನು ಮಾಡುತ್ತೇನೆ.

ಜೊತೆಗೆ ತಾವು ಶಾಶ್ವತವಾಗಿ ಬಹಳ ಅನುಕೂಲ ಮಾಡುವಂಥ ಕೆಲಸವೆಂದರೆ ಈ ಒಂದು ಲ್ಯಾಂಡ್ ಪರ್ಚೇಸ್ ಗೆ ಹಣವನ್ನು ಜಾಸ್ತಿ ಒದಗಿಸಿ. ಪರಿಶಿಷ್ಟ ಜಾತಿ ವರ್ಗದವರು ಈ ಭೂಮಿಯನ್ನು ಖರೀದಿ ಮಾಡಲಿಕ್ಕೆ ಅನುದಾನವನ್ನು ತಾವು ಹೆಚ್ಚಿಗೆ ಒದಗಿಸಿಕೊಡಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ. ಏಕೆಂದರೆ ಈಗಿರತಕ್ಕಂಥ ಸುತ್ತಮುತ್ತ ಇದರಲ್ಲಿ ದೊಡ್ಡ ದೊಡ್ಡ ಶ್ರೀಮಂತರು ಭೂಮಿಯನ್ನು ವಶಪಡಿಸಿಕೊಂಡು ಯಾರು ಆ ಭೂಮಿಯನ್ನು ವಶಪಡಿಸಿಕೊಂಡಿರುತ್ತಾರೋ ಅವರೇ ಅಲ್ಲಿ ಕೂಲಿಗಾಗಿ ಹೋಗುವ ಪ್ರಕರಣಗಳು ಬಹಳಷ್ಟಿವೆ, ಆದ್ದರಿಂದ ದಯಮಾಡಿ ತಾವು SC/ST ನಿಗಮಕ್ಕೆ ಈ ಭೂಮಿಯನ್ನು ಖರೀದಿ ಮಾಡಲಿಕ್ಕೆ ಹೆಚ್ಚಿನ ಅನುದಾನವನ್ನು ಒದಗಿಸಿಕೊಡಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ. ಜೊತೆಗೆ ಮುರಾರ್ಜಿ ವಸತಿ ಶಾಲೆಗಳನ್ನು ಒದಗಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ನೇರವಾಗಿ ಮೊರಾರ್ಜಿ ವಸತಿ ಶಾಲೆಯನ್ನು ಜಿಲ್ಲಾ ಪಂಚಾಯತ್‌ಗೆ ತಾವು ವಹಿಸಬಾರದೆಂದು ಕೇಳಿ ಕೊಳ್ಳುತ್ತೇನೆ. ಸಮಾಜಕಲ್ಯಾಣ ಸಚಿವರು ಇದ್ದೀರಿ, ನವೋದಯ ಕೇಂದ್ರದ ಶಾಲೆ ಯಾವ ರೀತಿ ಇದೆಯೋ, ಕೇಂದ್ರ ಸರ್ಕಾರ ಯಾವ ರೀತಿ ನೇರವಾಗಿ ಅದನ್ನು ನಿರ್ವಹಣೆ ಮಾಡುತ್ತಾರೋ, ಅದೇ ರೀತಿ ಮೊರಾರ್ಜಿ ವಸತಿ ಶಾಲೆಯನ್ನು Directorate of Morarji ಕೂಡ ವಸತಿ ಶಾಲೆ ಎಂದಿದೆ. ಆದ್ದರಿಂದ ಜಿಲ್ಲಾ ಪಂಚಾಯತ್‌ಗೆ ಹೊರತುಪಡಿಸಿ ನೇರವಾಗಿ ಆ ಮೊರಾರ್ಜಿ ಶಾಲೆಗಳನ್ನು ರಾಜ್ಯ ಸರ್ಕಾರವೇ ವಹಿಸುವಂಥಾದ್ದು ಮೊರಾರ್ಜಿ ವಸತಿ ಶಾಲೆಯವರೇ ನಡೆಸುವಂತಾಗಬೇಕು. ಜೊತೆಗೆ rural developmentನಲ್ಲಿ ಲೋಕೋಪಯೋಗಿ ಇಲಾಖೆಗೆ ಹೆಚ್ಚಿನ ಹಣವನ್ನು ಒದಗಿದ್ದೀರಿ, ಗ್ರಾಮೀಣ ಪ್ರದೇಶದಲ್ಲಿ ಬಹಳಷ್ಟು ರಸ್ತೆಗಳು ಹಾಳಾಗಿವೆ. ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಹೆಚ್ಚಿನ ಹಣವನ್ನು ತಾವು ಬಜೆಟ್ಟಿನಲ್ಲಿ ಒದಗಿಸಿ ಕೊಡಬೇಕು. ಮತ್ತೆ ಈ ಒಂದು ಸಮಾಜ ಕಲ್ಯಾಣ ಇಲಾಖೆಯಲ್ಲಿ

SC/ST ನಿಗಮಕ್ಕೆ ಹೆಚ್ಚಿನ ಕೊಳವೆ ಬಾವಿಗಳನ್ನು ತಾವು ಒದಗಿಸಿ ಕೊಟ್ಟಿದ್ದೀರಿ. ಒಂದು ಕ್ಷೇತ್ರಕ್ಕೆ ನೂರು ಕೊಳವೆ ಬಾವಿಗಳು ಬರುತ್ತಿವೆ. ಆದರೆ ಹಿಂದುಳಿದ ವರ್ಗದ ನಿಗಮದಲ್ಲಿ ಕೊಳವೆ ಬಾವಿಗಳ ಸಂಖ್ಯೆ ಬಹಳ ಕಡಿಮೆ. ಒಂದು ಕ್ಷೇತ್ರಕ್ಕೆ ೫-೧೦ ಮಾತ್ರ. ಆದರೆ ಪ್ರತಿಯೊಂದು ಕ್ಷೇತ್ರದಲ್ಲಿ ಹಿಂದುಳಿದವರ ವರ್ಗದವರ ಸಂಖ್ಯೆ ಗಣನೀಯವಾಗಿದೆ. ದಯಮಾಡಿ, ಕೊಳವೆಬಾವಿಗಳನ್ನು ಹೆಚ್ಚಿಗೆ ಒದಗಿಸಿಕೊಡಬೇಕೆಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಜೊತೆಗೆ ಶಿಕ್ಷಣದಲ್ಲಿ, ಮೊನ್ನೆ ಟಿ.ವಿ. ಮಾಧ್ಯಮಗಳಲ್ಲಿ ತೋರಿಸಿದರು. SSLC ಪರೀಕ್ಷೆ ನಡೆಯುವ ಸಂಧರ್ಬದಲ್ಲಿ ಹೆಣ್ಣುಮಕ್ಕಳು, ಗಂಡು ಮಕ್ಕಳು ನೆಲದ ಮೇಲೆ ಕುಳಿತು ಪರೀಕ್ಷೆ ಬರೆಯುವ ವಾತಾವರಣ ಸರ್ಕಾರಿ ಶಾಲೆಯಲ್ಲಿದೆ. ಆದ್ದರಿಂದ ಮೂಲಭೂತವಾಗಿ desk benches ಅನ್ನು ರಾಜ್ಯದಾದ್ಯಂತ ಎಲ್ಲಾ ಹೈಕೂಲುಗಳಿಗು ಕೂಡ, ಪ್ರೌಢ ಶಿಕ್ಷಣದಲ್ಲಿ ಹೆಣ್ಣುಮಕ್ಕಳು ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನ ಕೆಳಗೆ ಕುಳಿತುಕೊಂಡು ಬರೆಯತಕ್ಕಂಥದ್ದು ಕಣ್ಣಾರೆ ನೋಡತಕ್ಕಂಥ ಪ್ರಸಂಗ ಗ್ರಾಮೀಣ ಪ್ರಸಂಗ ದಲ್ಲಿದೆ. ದಯಮಾಡಿ ಆ desk bench ಗಳನ್ನು ಎಲ್ಲಾ ಸರ್ಕಾರಿ ಶಾಲೆಗಳಿಗೆ ಒದಗಿಸಲು ಕ್ರಮ ಕೈಗೊಳ್ಳಬೇಕೆಂದು ತಿಳಿಸುತ್ತಾ ಜೊತೆಗೆ ನಮ್ಮ ಚಾಮರಾಜನಗರ ಜಿಲ್ಲೆಗೆ ವಿಶೇಷವಾದಂಥ ಪ್ಯಾಕೇಜನ್ನು ದಯಮಾಡಿ ತಾವು ಕೊಡಬೇಕು. ಏಕೆಂದರೆ ಉದಾಹರಣೆಗೆ ನಮ್ಮ ಉಪ್ಪಾರ ಸಮಾಜ ಇರತಕ್ಕಂಥ ಬಡಾವಣೆಗಳಲ್ಲಿ ಗುಡಿಸಲುಗಳ ಅಗರವಾಗಿದೆ. ಮಾನ್ಯ ಅಧ್ಯಕ್ಷರೆ ಇದು ತಮಗೂ ಗೊತ್ತಿದೆ, ಆದ್ದರಿಂದ ಒಂದು ಪಂಚಾಯಿತಿಗೆ ಬರೇ ಅರವತ್ತು ಮನೆಗಳನ್ನು ಕೊಟ್ಟಾಗ ೧೦ ಗ್ರಾಮ ಇರುತ್ತದೆ, ಒಣದು ಗ್ರಾಮಕ್ಕೆ ಕೇವಲ ೨-೩ ಮನೆಗಳು ಬರುತ್ತದೆ. ಆದ್ದರಿಂದ ಆ ಗುಡಿಸಲುಗಳು ಹೋಗಿ ಮನೆ ಕೊಡುವಂಥದ್ದಾಗಬೇಕು. ಆ ನಿಟ್ಟಿನಲ್ಲಿ ಉಪ್ಪಾರರಿಗೆ ವಿಶೇಷವಾಗಿ ಒಂದು ಸ್ಪೆಷಲ್ ಪಾಕೇಜನ್ನು ಕೊಟ್ಟು ಅವರಿಗೆ ಮನೆಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಒದಗಿಸಿ ಕೊಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ತಿಳಿಸುತ್ತಾ ನನಗೆ ತಾವು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್.ಯೋಗೀಶ್ ಭಟ್ (ಮಂಗಳೂರು) : ಚಾರಿತ್ರಿಕವಾದ, ಜನಪ್ರಿಯವಾದ, ಜನಪರವಾದ ಬಜೆಟ್ಟನ್ನು ಮಂಡನೆ ಮಾಡಿರುವಂಥದ್ದು ಬಿಜೆಪಿ ಮತ್ತು ಜೆಡಿಎಸ್ ಪಕ್ಷದ ಮೈತ್ರಿ ಸರ್ಕಾರ, ಕರ್ನಾಟಕ ಅಭಿವೃದ್ಧಿ ರಂಗ ಯಾವುದಿದೆ, ಅದರ ಆಶಯಕ್ಕೆ ಅನುಗುಣವಾಗಿ ಮಂಡನೆಯಾಗಿರುವಂಥದ್ದು ನಮಗೆಲ್ಲರಿಗೂ ಸಂತೋಷವನ್ನು ತಂದಿದೆ. ನಾನು ಸನ್ಮಾನ್ಯ ಶ್ರೀ ಯಡಿಯೂರಪ್ಪನವರನ್ನು ಮತ್ತೆ ಕುಮಾರಸ್ವಾಮಿ ಯವರನ್ನು ಈ ಸಂದರ್ಭದಲ್ಲಿ ವಿಶೇಷವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಕ್ಷೌರಕದಿಂದ ಬಡಗಿ, ಕುಂಬಾರರು ಇತ್ಯಾದಿ ಟೈಲರ್ಸ್ ಇರಬಹುದು, ವೃತ್ತಿನಿರತ ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕೋಸ್ಕರ ಬಹುಶಃ ಇಲ್ಲಿಯವರೆಗೆ ಯಾವುದೇ ಸರ್ಕಾರ ಯೋಚನೆ ಮಾಡದೇ ಇದ್ದುದನ್ನು ನಮ್ಮ ಸರ್ಕಾರ ಮಾಡಿದೆ ಎನ್ನುವುದನ್ನು ಒಂದು ಕಲ್ಯಾಣ ನಿಧಿಗೆ ರೂ. ೩.೦೦ ಕೋಟಿ ಹಾಗು ಅಷ್ಟು ಮಾತ್ರವಲ್ಲ, ಮುಂದಿನ ದಿವಸಗಳಲ್ಲಿ ವಿಶೇಷವಾದ ಮಂಡಳಿಗಳನ್ನು ಮಾಡಿ ಕ್ಷೇಮ ನಿಧಿಯನ್ನು ಕೊಡಬೇಕೆಂದು ಚಿಂತನೆ ಮಾಡಿರುವುದು ನಿಜವಾಗಿ ಅಭಿನಂದನೆಯನ್ನು ಸಲ್ಲಿಸಬೇಕಾಗಿದೆ. ವೃದ್ಧಪ್ಯದ ಅಂಚಿನಲ್ಲಿರುವ ಗೋವಾ ಸ್ವಾತಂತ್ರ್ಯ ಹೋರಾಟಗಾರರಿಗೆ ಇಷ್ಟು ವರ್ಷಗಳಿಂದ ಅವರ ಆಕ್ರಂಧನ, ನೋವು ಯಾರು ಕೇಳಿರಲಿಲ್ಲ. ಪ್ರಥಮ ಬಾರಿ ಅವರಿಗೆ ರೂ.೨,೦೦೦೦೦ ಮಾಸಿಕ ವೇತನವನ್ನು ಗೌರವಧನವಾಘಿ ಕೊಟ್ಟಿರುವುದು, ವಿಧವಾ, ಅಂಗವಿಕಲರ ವೇತನ ಇದನ್ನು ರೂ.೨೦೦ ರಿಂದ ರೂ.೪೦೦ ಏರಿಸಿರುವುದು ಅನೇಕ ಸಾಮಾಜಿಕ ಭದ್ರತೆ ವೇತನವನ್ನು ರೂ.೪೦೦-೦೦ ಕ್ಕೆ ಏರಿಸಿರುವುದು ಇತ್ಯಾದಿ ಅನೇಕ ಯೋಜನೆಗಳ ಬಗ್ಗೆ ಹೇಳಲಿಕ್ಕೆ ಹೋದರೆ ಅಧ್ಯಕ್ಷರೇ, ಪ್ರಥಮಬಾರಿ ಈ ತರಹ ಜನಪರವಾದ ಬಜೆಟ್ ಮಂಡನೆಯಾಗಿರುವ ಸಂತೋಷವಿದೆ. ಪ್ರವಾಸೋದ್ಯಮ ಕ್ಷೇತ್ರದಲ್ಲಿ ಸುಮಾರು ರೂ.೧೪೪.೦೦ ಕೋಟಿ ವಿಶೇಷವಾಗಿರುವಂಥ ಯೋಜನೆಗಳನ್ನು ಇದರಲ್ಲಿ ಕೂಡ ಕರಾವಳಿಗೆ ಸಂಬಂಧಪಟ್ಟು, ಬೀಚ್ ಟೂರಿಸಂಗೆ ಸಂಬಂಧಪಟ್ಟ ಹಾಗು ರಾಜ್ಯದಲ್ಲಿರುವಂಥ ಚಾರಿತ್ರಿಕ ಪ್ರವಾಸೋದ್ಯಮಗಳನ್ನು ಅಭಿವೃದ್ದಿಗೊಳಿಸುವ ನಿಟ್ಟಿನಲ್ಲಿ ಪ್ರಥಮ ಬಾರಿ ಆದ್ಯತೆಯನ್ನು ಕೊಡಲಾಗಿದೆ. ಬಹುಶಃ ಈ ರೀತಿ

ಕೇರಳ, ಗೋವಾದಲ್ಲಿ ಆದ್ಯತೆಯನ್ನು ಕೊಡುವುದು, ಕರ್ನಾಟಕದಲ್ಲಿ ಆದ್ಯತೆಯನ್ನು ಕೊಟ್ಟಿರುವುದು ರೂ.೧೪೪೮.೦೦ ಕೋಟಿ ಅದಕ್ಕೋಸ್ಕರವಾಗಿ ಇಟ್ಟಿರುವುದು, ಬಹಳಷ್ಟು ಶ್ಲಾಘನೀಯವಾದ ಸಂಗತಿ, ಐ.ಟಿ ಬಿ.ಟಿ ಸೆಕ್ಟರ್ ಗಳಲ್ಲಿ ಕೇವಲ intellectual class ಅಥವಾ educated class ಗೆ ಮಾತ್ರ ಇದ್ದರೆ, ಇಲ್ಲಿ ಸಾಮಾನ್ಯ ಸ್ತರದ ವ್ಯಕ್ತಿಗಳಲ್ಲಿ ಕೂಡ, ಒಬ್ಬ ಕೂಲಿ, ರಿಕ್ಷಾ ಡ್ರೈವರ್ಸ್, ಟ್ಯಾಕ್ಸಿ ಡ್ರೈವರ್ಸ್ ಇರಬಹುದು, ಎಲ್ಲಾ ಸ್ತರಗಳಲ್ಲಿ ಉದ್ಯೋಗಾವಕಾಶಗಳು ಸಿಗುವಂಥ ಹಿನ್ನಲೆಯಲ್ಲಿ ಬಹಳ ಈ ಒಂದು ಯೋಚನೆ ತಂದಿರುವುದು ಸ್ವಾಗತಾರ್ಹ, ಕರ್ನಾಟಕ ರಾಜ್ಯಕ್ಕೆ ಹೆಮ್ಮೆಯನ್ನು ತರುವಂಥ ಯೋಜನೆ. ಬಹುಶಃ ಮುಂದಿನ ದಿವಸಗಳಲ್ಲಿ ಲಕ್ಷಾಂತರ ಕೋಟಿ ರೂಪಾಯಿಗಳ ಬಂಡವಾಲ ಹೂಡಿಕೆಯನ್ನು ಈ ಸ್ಥಳದಲ್ಲಿ ಆಕರ್ಷಣೆ ಮಾಡುವಂಥ ಒಂದು ವೈಶಿಷ್ಟ್ಯ ಪೂರ್ಣವಾದಂಥ ಯೋಜನೆ, ಪೆಟ್ರೋಲಿಯಮ್, ಕೆಮಿಕಲ್ಸ್ ಗೆ ಸಂಬಂಧಿಸಿದಂತೆ ಪೆಟ್ರೋ ಕೆಮಿಕಲ್ ಇನ್ವೆಸ್ಟ್ಮೆಂಟ್ ರೀಜನ್ ಎಂದು ಹೇಳಿಕೊಂಡು ಗುರುತಿಸುವಂಥ ನಿಟ್ಟಿನಲ್ಲಿ ಇವತ್ತು ಐದು ರಾಜ್ಯಗಳು, ದೇಶದಲ್ಲಿ ಸ್ಪರ್ಧೆಯನ್ನು ಮಾಡುತ್ತಿವೆ. ವೆಸ್ಟ್ ಬೆಂಗಾಲ್, ಆಂಧ್ರ, ಗುಜರಾತ್, ಒರಿಸ್ಸಾ ಇರಬಹುದು, ಅದೇ ರೀತಿ ನಮ್ಮ ಕರ್ನಾಟಕವೂ ಸ್ಪರ್ಧೆ ಮಾಡುತ್ತದೆ. ಈ ಹಿನ್ನಲೆಯಲ್ಲಿ ಸಮಗ್ರವಾಗಿ ೨೫೦ sq. k.m ಯಾವ ರೀತಿ ಈ ಯೋಜನೆ ತರಬೇಕು ; ಅದರಲ್ಲಿ 100 sq.k.m ವ್ಯಾಪ್ತಿಯಲ್ಲಿ ಈ processing unit ತರಬೇಕೆನ್ನುವ ಹಿನ್ನಲೆಯಲ್ಲಿ ಸಮಗ್ರವಾದ ಅಧ್ಯಯನ ಮಾಡುವ ನಿಟ್ಟಿನಲ್ಲಿ K.S.I.I.D.C ಒಂದು ವಿಶೇಷವಾದ ಸಭೆಯನ್ನು ಪ್ರಾರಂಭ ಮಾಡಿದೆ, ಬಹಶಃ ಮುಂದಿನ ದಿನಗಳಲ್ಲಿ ಆ ವರದಿಯ ಆಧಾರದಲ್ಲಿ ಕೇಂದ್ರ ಸರ್ಕಾರದ ಈ ಒಂದು ವರದಿಯಲ್ಲಿ ನಮ್ಮ ಕರ್ನಾಟಕ ರಜ್ಯ ಎಲ್ಲಾ ರೀತಿಯಲ್ಲಿಯೂ ಎಲಿಜಬಲ್ ಇದೆಯೆಂದು ಹೇಳುವಂಥ ನಿಟ್ಟಿನಲ್ಲಿ ನಾವು ಮಂಡನೆ ಮಾಡಲಿಕ್ಕೆ ಸಾಧ್ಯವಾದಾಗ ಈ ಯೋಜನೆ ಬಂದಾಗ ಒಂದು ಲಕ್ಷ ಕೋಟಿ ರೂಪಾಯಿಗಳಿಗಿಂತ ಹೆಚ್ಚು ಬಂಡವಾಳ ಹೂಡಿಕೆ ಈ ಒಂದು ಕರಾವಳಿ ಭಾಗದಲ್ಲಿ ವಿಶೇಷವಾದ ಆರ್ಥಿಕ ಶಕ್ತಿ ಬರಲಿಕ್ಕೆ ಸಾಧ್ಯವಿದೆ. ಮತ್ತೆ infrastructure ಕ್ಷೇತ್ರದಲ್ಲಿಯು ಕೂಡ ಸುಮಾರು ಐದಾರು ಸಾವಿರ

ಕೋಟಿ ರೂಪಾಯಿಗಳಷ್ಟು ಹಣ ಈ ಕ್ಷೇತ್ರದಲ್ಲಿ ಹರಿದು ಬರಲಿಕ್ಕೆ ಸಾಧ್ಯವಾಗುತ್ತದೆ. ಈ ಹಿನ್ನಲೆಯಲ್ಲಿ ಒಂದು ಕಡೆ OnGc, MRPL capacity ಇವತ್ತು ೧೫ ಮಿಲಿಯನ್ ಟನ್ ಗೆ ಏರಿದೆ, ಹಿಂದೆ ೬.೯ ಇದ್ದದ್ದು ೧೫ ಮಿಲಿಯನ್ ಟನ್ ಗೆ ಏರಿದೆ. ಒಂದು ಕಡೆಯಲ್ಲಿ SEZ ಗಳಿಗೆ ಸಂಬಂಧಿಸಿರುವ ವ್ಯವಸ್ಥೆಗಳು ಎಲ್ಲಾ ದೃಷ್ಟಿಯಲ್ಲಿ ಅದಕ್ಕೆ ಪೂರಕವಾಗಿರುವಂಥ ದೃಷ್ಟಿಯಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ, ಬಂದರು ಪ್ರದೇಶ ಎಲ್ಲ ಇರುವುದರಿಂದ ಇದಕ್ಕೆ ಸಂಬಂಧಪಟ್ಟಿರುವ ಯೋಜನೆ ಈ ರಾಜ್ಯಕ್ಕೆ ಬರಲಿದೆ. ಆದರೆ ಈ ಸಂದರ್ಭದಲ್ಲಿ ಎಲಿಜಬಿಲಿಟಿ ಜೊತೆಯಲ್ಲಿ ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿರುವಂಥದು, ಬಹುಶಃ ಬಹಳ ದೊಡ್ಡ ಯೋಜನೆಗಳು ಬರುವ ಸಂದರ್ಭದಲ್ಲಿ, ಕುಡಿಯುವ ನೀರಿಗೆ ಸಂಬಂಧಪಟ್ಟಿರುವ ಅಥವಾ ನದಿಗಳಿಗೆ ಸಂಬಂಧಪಟ್ಟ ಜಲಸಂಪನ್ಮೂಲಗಳನ್ನು ಸಂಪರ್ಕವಾಗಿ ಬಳಕೆ ಮಾಡುವಂಥ ನಿಟ್ಟಿನಲ್ಲಿ ತಮ್ಮ ಸರ್ಕಾರ ಸಾಕಷ್ಟು ಯೋಜನೆ ಮಾಡಬೇಕಾಗಿದೆ. ನಾವು ಕಾವೇರಿ ಬಗ್ಗೆ ಯೋಚನೆ ಮಾಡುತ್ತೇವೆ, ೮೦೦ tmc ಅಷ್ಟು ನೀರು ಕರ್ನಾಟಕದಲ್ಲಿ ಹರಿದು ಹೋಗುತ್ತದೆ ; ೧೨೦೦ ಟಿ.ಎಂ.ಸಿ. ನೀರು ಕರಾವಳಿ ಜಿಲ್ಲೆಗಳಲ್ಲಿ ಸುಮಾರು ೧೩ ನದಿಗಳ ಮೂಲಕ ಸಮುದ್ರವನ್ನು ಸೇರುತ್ತದೆ. ೨.೫೦% ಮಾತ್ರ ಸದುಪಯೋಗವಾಗುತ್ತಿದೆ. ಉಳಿದದ್ದನ್ನು ಸದ್ಬಳಕೆ ಮಾಡಬೇಕು ಮತ್ತು ಈ ಎಲ್ಲಾ ಯೋಜನೆಗಳು ಅನುಕೂಲವಾಗುವಂಥ ನಿಟ್ಟಿನಲ್ಲಿ ಚೆಕ್ ಡ್ಯಾಂಗಳು, vented dam ಗಳನ್ನು ಹಾಕುವ ನಿಟ್ಟಿನಲ್ಲಿ ಪಶ್ಚಿಮ ವಾಹಿನಿಯ ಯೋಜನೆಗಳಿಗೆ ಚಾಲನೆ ಕೊಡಬೇಕು. ಈ ಹಿನ್ನಲೆಯಲ್ಲಿ ಕನಿಷ್ಟ ರೂ.೪೦೦-೫೦೦ ಕೋಟಿ ರೂ.ಗಳು ಈ ವರ್ಷ ಕಾದಿರಿಸಬೇಕೆಂಬ ವಿಶೇಷವಾದ ಬೇಡಿಕೆಯ ಬಗ್ಗೆ ನಮ್ಮ ನೀರಾವರಿ ಕೂಡ ಚಿಂತನೆ ಮಾಡಬೇಕು. ಈ ನಿಟ್ಟಿನಲ್ಲಿ ರಾಜ್ಯದ ಹಿತಾಸಕ್ತಿಯ ದೃಷ್ಟಿಯಿಂದ ಬೃಹತ್ ಯೋಜನೆಗಳು ಬರುವ ಹಿನ್ನಲೆಯಲ್ಲಿ ಮಾನ್ಯ ಸಚಿವರು ಚಿಂತನೆ ಮಾಡಿ, ಮಾನ್ಯ ನಾಯ್ಡುರವರು ಕೂಡ ಇಲ್ಲಿದ್ದಿರಿ, ಈ ಯೋಜನೆಗೆ ಸಂಬಂಧಪಟ್ಟು ತಾವು ಶಕ್ತಿಯನ್ನು ಕೊಡಬೇಕೆಂಬ ವಿನಂತಿಯನ್ನು ನಾನು ಮಾಡುತ್ತೇನೆ. ಬಹುಶಃ ಕರಾವಳಿ ಜಿಲ್ಲೆಯ ಪರಿಸರದ

ಸಂರಕ್ಷಣೆಯ ಬಗ್ಗೆ ವಿಶೇಷ ಕಾಳಜಿ eco-sensitivity ಇರುವಂಥ ಜಿಲ್ಲೆ, ಇಲ್ಲಿ ಅಭಿವೃದ್ಧಿ ಚಟುವಟಿಕೆಗೆ ಸ್ವಾಗತವನ್ನು ಮಾಡಿದರು ಕೂಡ ವಿಶೇಷವಾಗಿ ಈ ಸ್ತರದಲ್ಲಿ ಯೋಚನೆ ಮಾಡುವಂಥ ಸಂದರ್ಭದಲ್ಲಿ ಕರಾವಳಿ ಜಿಲ್ಲೆಗಳಲ್ಲಿ ಬರುವಂಥ ವಿದ್ಯುತ್ ಯೋಜನೆಗಳನ್ನು ಅಖಿಲ ಆಧಾರಿತವಾಗಿ ಮಾಡಿದ್ದಲ್ಲಿ ಬಹುಶಃ ಅದಕ್ಕೆ ಹೆಚ್ಚು resistance ಬರಲಿಕ್ಕೆ ಇಲ್ಲ. ಇವತ್ತು ವಿದ್ಯುತ್ ಕೂಡ ಬೇಕಾಗಿತ್ತು. ಈ ಹಿನ್ನಲೆಯಲ್ಲಿ LNG & CNG ಆಧಾರವಾಗಿರುವಂತಹ ಪವರ್ ಪ್ರಾಜೆಕ್ಟ್ ಗಳು ಬರುವಂಥ ಹಿನ್ನಲೆಯಲ್ಲಿ coal based ಖಂಡಿತ ಬೇಡ. CNG ಅಥವಾ LNG ಅನಿಲ ಆಧಾರಿತ ಯೋಜನೆಗಳು ಬಂದಲ್ಲಿ ಖಂಡಿತವಾಗಿ ಜನ ಸ್ವಾಗತ ಮಾಡಬಹುದು, ಈ ಹಿನ್ನೆಲೆಯಲ್ಲಿ ಕೂಡ ನಾವು ಯೋಚನೆ ಮಾಡಬೇಕಾಗಿದೆ. ಇದರಲ್ಲಿ ಬಹುಶಃ ಸರ್ಕಾರದ ಸ್ತ್ರೀ ಶಕ್ತಿ, ಸ್ವಸಹಾಯ ಗುಂಪುಗಳಿಗೆ ಶೇ.೪ ರಷ್ಟು ಬಡ್ಡಿ ದರದಲ್ಲಿ ಸಾಲ ಕೊಡುವುದು, ಸ್ತ್ರೀಶಕ್ತಿಯ ಭವನಗಳು ಇತ್ಯಾದಿ ಅನೇಕ ಯೋಜನೆಗಳು ಪ್ರಕಟಿಸಿರುವುದನ್ನು ಸ್ವಾಗತಿಸುತ್ತೇನೆ. ಆಎದರೆ ಈ ಎಲ್ಲಾ ಯೋಜನೆಗಳಿಗೆ ಶಕ್ತಿಯನ್ನು ಕೊಡುವಂಥ ಪ್ರಥಮ ಲಿಂಗ ಆಧಾರಿತ ಬಜೆಟ್ ಇದ್ದರು ಕೂಡ, ನನ್ನ ಒಂದು ಆಕ್ಷೇಪಣೆ ಈ ಸಂದರ್ಭದಲ್ಲಿದೆ, ಇವೆಲ್ಲವನ್ನು ಕ್ರೋಢೀಕರಿಸುವಂಥ ನಿಟ್ಟಿನಲ್ಲಿ ಅಂಗನವಾಡಿ ಶಿಕ್ಷಕಿಯರು ಯಾರು ಇದ್ದಾರೆ, ಸಹಾಯಕಿಯರು ಯಾರಿದ್ದಾರೆ, ಅವರ ಬಗ್ಗೆ ಸರ್ಕಾರ ಚಿಂತನೆ ಮಾಡುವುದು ಅವಶ್ಯಕವಿದೆ, ಬಹುಶಃ ಅನೇಕ ಯೋಜನೆಗಳು ಸ್ತ್ರೀ ಶಕ್ತಿಗೆ ಸಂಬಂಧಿಸಿರುವುದು ಇರಬಹುದು ಅಥವಾ ವಿಶೇಷವಾಗಿ ಮಹೀಳಾ ಮತ್ತು ಶಿಶುಕಲ್ಯಾಣ ಅಭಿವೃದ್ಧಿ ಯೋಜನೆಗೆ ಸಂಬಂಧಪಟ್ಟಂತೆ ಯೋಚನೆ ಮಾಡಿ ಅನುಷ್ಠಾನಕ್ಕೆ ತರುವಂಥ ಏಜೆನ್ಸಿಗಳು ಅಥವಾ ಕಾರ್ಯ ಮಾಡುವಂಥವರು. ಅಂಗನವಾಡಿ ಶಿಕ್ಷಕಿಯರು. ಅವರಿಗೆ ಸಿಗುವಂಥ ಗೌರವಧನವನ್ನು ಕನಿಷ್ಟ ವೇತನಕ್ಕೆ ಅನುಸಾರವಾಗಿ ಮಾಡಿದಲ್ಲಿ ಲಾಭವಾಗುತ್ತದೆ. ಈ ಹಿನ್ನಲೆಯಲ್ಲಿ ಬೇರೆ ಬೇರೆ ಯೋಜನೆಗಳಿಗೆ ಸಂಬಂಧಪಟ್ಟಂತೆ ಇನ್ಸೆಂಟಿವ್ ಗಳನ್ನು ಜೋಡಿಸಿದಲ್ಲಿ, ಅದರಿಂದ ಬಹಳಷ್ಟು ಲಾಭವಾಗುತ್ತದೆಂದು ಹೇಳುವತ್ತ ನಿಟ್ಟಿನಲ್ಲಿ, ಅಂಗನವಾಡಿ ಶಿಕ್ಷಕರ ಬಗ್ಗೆ, ಸಹಾಯಕರ ಬಗ್ಗೆ ನಮ್ಮ ಸರ್ಕಾರ

ಕಾಳಜಿ ವಹಿಸಬೇಕೆಂದು ಕಳಕಳಿ ವಿನಂತಿಯನ್ನು ಮಾಡತುತ್ತೇನೆ. ಮೀನುಗಾರಿಕಾ ಕ್ಷೇತ್ರದಲ್ಲಂತೂ ನಮಗೆ ಸಾಕಷಟು ಸಂತೋಷವಾಗಿದೆ. ೪% ಬಡ್ಡಿ ದರ ಮಾತ್ರವಲ್ಲ, ರೂ. ೨೫,೦೦೦ ಸಾಲ ಮನ್ನಾ ಕೃಷಿಕರಿಗೆ, ನೇಕಾರರಿಗೆ ಕೊಟ್ಟ ಹಾಗೆ ಮೀನುಗಾರರಿಗೂ ಕೊಟ್ಟಿರುವುದು ; ಆದರೂ ಕೂಡ ಅಪಘಾತದ ಸಂದರ್ಭದಲ್ಲಿ ಸಾಮೂಹಿಕವಾತಿರುವಂಥ ವಿಮಾ ಸೌಲಭ್ಯವನ್ನು ಕೊಡಬೇಕೆಂಬ ಬೇಡಿಕೆಯನ್ನು ಇಡುತ್ತಿದ್ದೇನೆ. ಇದೇ ರೀತಿಯಲ್ಲಿ dredging ಸಂಬಂಧಪಟ್ಟ ಹಾಗೆ, ಸಮಗ್ರವಾಗಿ ನದಿಗಳು ಸೇರುವಂಥ ಕಡೆಗಳಲ್ಲಿ dredging ಆಗುವುದು ಅವಶ್ಯಕತೆ ಇದೆ. ಹಲವು ದಶಕಗಳಿಂದ ಇದರ ಬಗ್ಗೆ ಯಾರೂ ಗಮನ ವಹಿಸಿಲ್ಲ. ಇದನ್ನು ಮಾಡಬೇಕು, ಅದರೊಂದಿಗೆ ಸರ್ವಋತು ಮೀನುಗಾರಿಕಾ ಬಂದರು ಆಗುವಂಥ ನಿಟ್ಟಿನಲ್ಲಿ ಕೂಡ ನಾವು ಸರ್ಕಾರದಿಂದ ವಿಶೇಷ ಚಾಲನೆ ಕೊಡಬೇಕು. ಕೇಂದ್ರ ಸರ್ಕಾರದ ಅನೇಕ ಯೋಜನೆಗಳಿವೆ, ಅದನ್ನು ಜೋಡಿಸಿಕೊಂಡು ನಮಗೆ ಮಾಡಲಿಕೆಕ ಬರುತ್ತದೆಂದು ನಾನು ಹೇಳಲಿಚ್ಚಿಸುತ್ತೇನೆ. ಸನ್ಮಾನ್ಯ ಉಪ ಮುಖ್ಯಮಂತ್ರಿಗಳು, ಮಾನ್ಯ ಅರ್ಥಸಚಿವರು ಸಕಷ್ಟು ಯೋಜನೆಗಳನ್ನು ಪ್ರಕಟ ಮಾಡಿದ್ದಾರೆ. ಈ ಎಲ್ಲಾ ಯೋಜನೆಗಳಿಗೆ ಬೇಕಾಗಿರುವಂಥ ಹಣವನ್ನು ಕೂಡ ಕ್ರೋಢೀಕರಿಸುವಂಥ ನಿಟ್ಟಿನಲ್ಲಿ ಬಹುಶಃ ವಾಣಿಜ್ಯ ಇಲಾಖೆಯಲ್ಲಿ ತೆರಿಗೆ ಸಂಪನ್ಮೂಲಗಳನ್ನು ಸೋರಿಕೆಯಾಗುವುದನ್ನು ತಡೆಗಟ್ಟುವುದು ಬಹಳ ಅವಶ್ಯಕತೆಯಿದೆ. ಬಹುಶಃ ಅದನ್ನು ತಮ್ಮ ಗಮನಕ್ಕೆ ನೀಡಲಿಕ್ಕೆ ಇಚ್ಛಿಸುತ್ತಿದ್ದೇನೆ. ಹೊರ ರಾಜ್ಯಕ್ಕೆ ಹೋಗುವಂಥ ಅಡಿಕೆ, ದಕ್ಷಿಣ ಕನ್ನಡದ ಸೂರತ್ಕಲ್ ರೈಲ್ವೇ ಸ್ಟೇಷನ್ ನಿಂದ ರೋರೋಗೆ ಹೋಗುವಂತಹ ಯಾವ ಒಂದು ರೈಲ್ವೇ ವ್ಯವಸ್ಥೆ ಇದೆ, ಇವತ್ತಿನವರೆಗೂ ಹಲವಾರು ಲಾರಿಗಳು ಯಾವುದೇ ಬಿಲ್ ಆಗದೇ ಹೋಗುವುದನ್ನು ತಡೆ ಮಾಡುವುದಕ್ಕೆ ಅಧಿಕಾರಿಗಳಿಗೆ ಆಗಿಲ್ಲ. ಬಹುಶಃ ನಾನು ಇದನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನಾಗರಿಕರು ನಮ್ಮ ಆಯುಕ್ತರ ಗಮನಕ್ಕೆ ತಂದಾದ ಮರುದಿವಸ ಒಂದು ಪ್ರಕರಣದ ಮೇಲೆ ಕೇಸ್ ಆಗುವುದು ಮಾತ್ರ ಆಗುತ್ತದೆ, ಉಳಿದ ಕಡೆಗಳಲ್ಲಿ ಆಗುತ್ತಿಲ್ಲ. ಹಿರಿಯ ಅಧಿಕಾರಿಗಳ ಗಮನಕ್ಕೆ ತಂದಾಗ ಮಾತ್ರ ಎಲ್ಲೋ ಒಂದು ಕಡೆಯಲ್ಲಿ ಕೇಸ್

ಹಾಕುವುದು ಆಗುತ್ತಿದೆ. ಈ ಹಿನ್ನಲೆಯಲ್ಲಿ ವಿಶೇಷವಾಗಿ ಕೇವಲ ರೋರೋಗೆ ಸಂಬಂಧಪಟ್ಟಂತೆ ಅಲ್ಲ, ಶಿರು, ನಿಪ್ಪಾಣಿ ಚೆಕ್ ಪೋಸ್ಟ್ ಇರಬಹುದು, ಝಳಕಿ ಚೆಕ್ ಪೋಸ್ಟ್ ಇರಬಹುದು, ಈ ಕಡೆಗಳಿಂದ ಸೋರಿಕೆ ಆಗುವುದನ್ನು ತಡೆಹಿಡಿಯುವ ನಿಟ್ಟಿನಲ್ಲಿ ವಿಶೇಷವಾದಂಥ ಇಂಟಲಿಜೆನ್ಸ್ ವಿಭಾಗ ಈ ಬಗ್ಗೆ ಒಂದು ಎಚ್ಚರಿಕೆ ವಹಿಸಿ, ಸೋರಿಕೆಯನ್ನು ತಡೆಗಟ್ಟಬೇಕೆನ್ನುವುದರತ್ತ ನಿಗಾ ವಹಿಸಬೇಕೆಂದು ವಿನಂತಿಸುತ್ತೇನೆ. ಬಸ್ ಟ್ರಾನ್ಸ್ ಪೋರ್ಟ್‌ಗಳ ಮುಖಾಂತರ ಆಗುವಂತಹ ಸಾಕಷ್ಟು ಗೂಡ್ಸಗಳು ಹೋಗುತ್ತಿವೆ. ಇದರ ಬಗ್ಗೆಯೂ ನಿಗಾ ವಹಿಸಬೇಕಾಗುತ್ತದೆ . ಹೆಬ್ರಿ, ಕಾಕಳದ ಮಾರ್ಗವಾಗಿ ಗೋಡಂಬಿ, ತೆಂಗಿನಕಾಯಿ ಪೌಡರ್ ಇತ್ಯಾದಿ ಅನೇಕ ಸರಕುಗಳು ಕೂಡ ಬಿಲ್ ಇಲ್ಲದೆ ಹೋಗುವಂಥದ್ದು ಕೂಡ ಗಮನಕ್ಕೆ ಬಂದಿದೆ. ಈ ಹಿನ್ನೆಲೆಯಲ್ಲಿ ಕೂಡ ವಿಶೇಷವಾಗಿರುವಂಥ ನಿಟ್ಟಿನಲ್ಲಿ ಅದರ ಬಗ್ಗೆ ಮುತುವರ್ಜಿ ವಹಿಸಿ ವಾಣಿಜ್ಯ ಇಲಾಖೆ ಕ್ರಮ ಕೈಗೊಳ್ಳುವುದು ಅವಶ್ಯಕತೆ ಇದೆ ಎನ್ನುವಂಥ ವಿನಂತಿಯನ್ನು ಮಾಡುತ್ತಿದ್ದೇನೆ. ಬಹುಶಃ ಇನ್ನು ಹೊಸ ಆಯಾಮ ಕೊಡುವಂಥ ನಿಟ್ಟಿನಲ್ಲಿ ನಿನ್ನೆ ತಾನೇ ಸಾಕಷ್ಟು ಚರ್ಚೆಯಾಯಿತು. ಈ artificially created light energy ಯಾವುದಿದೆ. optic fiber cable ಮೂಲಕ ಹೋಗುವಂಥ ನಿಟ್ಟಿನಲ್ಲಿ ಈಗಾಗಲೇ ವಾಣಿಜ್ಯ ಇಲಾಖೆ ರೂ. ೨೬.೦೦ ಕೋಟಿ ತೆರಿಗೆಯನ್ನು ವಿಧಿಸುವಂಥ ಮೂಲಕ ಒಂದು invention ಮಾಡಿದೆ. ಬಹುಶಃ ನಾನು ಈ ಸಂಧರ್ಬದಲ್ಲಿ ಎಲ್ಲಾ ಅಧಿಕಾರಿಗಳು ಹೆಚ್ಚಿನ ಚಾಲನೆ ಕೊಟ್ಟು ಈ ಸಂಪನ್ಮೂಲಗಳನ್ನು ಕ್ರೋಢೀಕರಿಸಲಿಕ್ಕೆ ಸಾಧ್ಯವಾದಲ್ಲಿ ಹತ್ತಿರ ಹತ್ತಿರ ರೂ.೨,೦೦೦-೦೦ ಕೋಟಿ ಎಂಟು ವರ್ಷಗಳಲ್ಲಿ ಅದನ್ನು ಬಾಕಿ ಇರುವಂಥ ಎಲ್ಲವನ್ನೂ ಸಂಗ್ರಹ ಮಾಡಲಿಕ್ಕೆ ಸಾಧ್ಯವಾದಲ್ಲಿ ನಮ್ಮ ಅನೇಕ ಯೋಜನೆಗಳಿಗೆ ಶಕ್ತಿಯನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ. ಈ ಹಿನ್ನಲೆಯಲ್ಲಿ ತಕ್ಷಣ ಹಿರಿಯ ಅಧಿಕಾರಿಗಳು ಇದಕ್ಕೆ ಇನ್ನಿತರ ರೀತಿಯಲ್ಲಿ ಕಾರ್ಯರೂಪಕ್ಕೆ ಬರುವಂಥ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ತೆಗೆದು ಕೊಳ್ಳಬೇಕು ಎಂದು ವಿನಂತಿಸಿ, ಈಗಾಗಲೇ ಅಧೀನ ಶಾಸನ ರಚನಾ ಸಮಿತಿ ಸಾಕಷ್ಟು ಶಿಫಾರಸ್ಸುಗಳನ್ನು ಮಾಡಿದೆ. ಸಮಯಾವಕಾಶ ಇಲ್ಲ,

ಅದರ ಬಗ್ಗೆ ವಿಶೇಷವಾಗಿ ಹೇಳುವಂಥದು, ಈ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ ಕಾರ್ಯ ನಿರ್ವಹಿಸಿದಲ್ಲಿ ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡಲಿಕೆಕ ಸಾಧ್ಯವಾಗುತ್ತದೆ. ಬಹುಶಃ ರಾಜ್ಯದಲ್ಲಿ ೬೦ ಸೀನಿಯರ್ ಕಾಲೇಜುಗಳ ಬಗ್ಗೆ ಪ್ರಕಟಣೆಯಾಗಿತ್ತ. ಆದರೆ ಇಷ್ಟರವರೆಗೆ ಕೂಡ ಒಂದೇ ಒಂದು ಸೀನಿಯರ್ ಕಾಲೇಜುಗಳಿಗೆ ಬೇಕಾಗುವಂಥ ಗ್ರಾಂಟ್ ಗಳನ್ನು ಇಡದಿರುವುದು ನನ್ನ ಗಮನಕ್ಕೆ ಬಂದಿದೆ, ಈ ಹಿನ್ನೆಲೆಯಲ್ಲಿ ಸೀನಿಯರ್ ಕಾಲೇಜಿಗೆ ಸಂಬಂಧಪಟ್ಟ ಗ್ರೂಪ್ ಗಳನ್ನು ಕೊಡುವ ಅವಶ್ಯಕತೆ ಇದೆಯೆಂದು ಒತ್ತಾಯಿಸಿ, ವಿಶೇಷವಾಗಿ ಬೆಳೆಯುತ್ತಿರುವ ನಗರವಾದ ಮಂಗಳೂರಿನಲ್ಲಿ Police Commissionerate ಅವಶ್ಯಕವಾಗಿದೆ. ಮಾನ್ಯ ಎಂ.ಪಿ. ಪ್ರಕಾಶ್ ರವರು ಇದ್ದಾರೆ, Police Commissionerate , ಬಗ್ಗೆ ನಾನು ಸಾಕಷ್ಟು ಒತ್ತಾಯ ಮಾಡಿದ್ದೇನೆ. ವಿಶೇಷವಾಗಿ ಟ್ರಾಫಿಕ್ ಅಥವಾ ಇನ್ನಿತರ ದೃಷ್ಟಿಯಿಂದ ಆದ್ಯತೆಯನ್ನು ಕೊಡಬೆಕೆಂದು ವಿನಂತಿಸಿ ಇವತ್ತು ನಮ್ಮ ನ್ಯಾಯಾಲಯ ಕಟ್ಟಡಕ್ಕೆ, ಕೇವಲ ಹುಬ್ಬಳ್ಳಿ ಬೆಂಗಳೂರಿಗೆ ಮಾತ್ರ ಆದ್ಯತೆ ಕೊಡುತ್ತಿದ್ದೇವೆ, ಮಂಗಳುರಿನಲ್ಲಿ ದಶಕಗಳಿಂದ ನಿರ್ಲಕ್ಷಿಸಲ್ಪಟ್ಟ ಈ ನ್ಯಾಯಾಲಯ ಕಟ್ಟಡಕ್ಕೆ ರೂ. ೪೫೦೦ ಕೋಟಿ ರೂಪಾಯಿಗಳನ್ನು ಈ ವರ್ಷ ಇಡಬೇಕೆಂದು ವಿನಂತಿಸುತ್ತೇನೆ. ಅನೇಕ ಕೆರೆಕಟ್ಟೆಗಳು, ಬೇರೆ ಬೇರೆ ರೀತಿಯಲ್ಲಿ ಜಲಾನಯನ ಪ್ರದೇಶಗಳನ್ನು ಅಭಿವೃದ್ಧಿಗೊಳಿಸುವಂಥ ಅನೇಕ ವ್ಯವಸ್ಥೆಗಳು ನಮ್ಮಲ್ಲಿವೆ. ಅದನ್ನು ಮಾಡಿದರೆ ಕನಿಷ್ಟ ಅಂತರ್ಜಲ ಮಟ್ಟ ಜಾಸ್ತಿಯಾಗುವಂಥ ಸಾಧ್ಯತೆಯಿರುವುದರಿಂದ ಈ ಹಿನ್ನಲೆಯಲ್ಲಿ ಕೂಡ ವಿಶೇಷ ಮುತುವರ್ಜಿ ವಹಿಸಬೇಕೆಂದು ವಿನಂತಿಸುತ್ತೇನೆ. ಡಾ: ನಂಜುಂಡಪ್ಪ ವರದಿ ಅನುಷ್ಠಾನ, ಸಾರಾಯಿ, ನಿಷೇಧ, ಲಾಟರಿ ನಿಷೇಧ ಹಾಗು ರೈತರ ಸಾಲ ಮನ್ನಾ, ವಿಶೇಷವಾಗಿ ಸರ್ಕಾರಿ ನೌಕರರಿಗೆ ೫ ನೇ ವೇತನ ಆಯೋಗದ ಬಗ್ಗೆ ಅನೇಕ ದಿಟ್ಟ ನಿಧಾರಗಳನ್ನು ಈ ನಮ್ಮ ಸರ್ಕಾರ ತೆಗೆದುಕೊಮಡಿದೆ. ಯಾವುದೇ ಒಂದೊಂದು ಯೋಜನೆಯನ್ನು ಡಿಕ್ಲೇರ್ ಮಾಡಿದಬೇಕಾದರೂ ಸಾಕಷ್ಟು ಯೋಜನೆ ಮಾಡಬೇಕು. ಇಂಥ ದಿಟ್ಟ ನಿರ್ಧಾರಗಳನ್ನು ತೆಗೆದುಕೊಂಡಿರುವುದಕ್ಕೆ ಸಂಪನ್ಮೂಲಗಳನ್ನು ಕ್ರೋಢೀಕರಿ ಸುವ ದೃಷ್ಟಿಯಿಂದ ಸರ್ಕಾರ ವಿಶೇಷವಾದಂಥ ಯೋಜನೆಗಳನ್ನು

ಹಾಕಿಕೊಂಡು ಸೋರಿಕೆಯನ್ನು ತಡೆಗಟ್ಟುವಂಥ ನಿಟ್ಟಿನಲ್ಲಿ ಕೂಡ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂಬ ವಿನಂತಿಯನ್ನು ಈ ಸಂದರ್ಭದಲ್ಲಿ ಮಾಡಲಿಚ್ಛಿಸುತ್ತೇನೆ. ಮೀನುಗಾರಿಕೆ ಸಂಬಂಧಪಟ್ಟ ಹಾಗೆ ಈಗಾಗಲೇ ಪ್ರಸ್ತಾಪ ಮಾಡಿದ್ದೇವೆ. ಸರ್ವಋತು ಮೀನುಗಾರಿಕ ಬಂದರುಗಳನ್ನು ಮಾಡುವ ಮೂಲಕ ಹಾಗೂ ವಿಶೇಷವಾಗಿ ಬಂದರು ಪ್ರದೇಶಗಳಲ್ಲಿ ತದಡಿ ಇರಬಹುದು, ತದಡಿಯಲ್ಲಿಯೂ ಕೂಡ ಅಂತರರಾಷ್ಟ್ರೀಯ ಮಟ್ಟದ port ಅನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಹಜ್ಮಾಡ್ ನಲ್ಲಿ ಕೂಡ ಒಂದು ಒಳ್ಳೆಯ ಕಮರ್ಷಿಯಲ್ ಪೋರ್ಟ್ ಅನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಎಲ್ಲೆಲ್ಲಿ ಬಂದರು ಪ್ರದೇಶಗಳನ್ನು ಅಭಿವೃದ್ಧಿ ಮಾಡಲಿಕೆಕ ಸಾಧ್ಯವಾಗುತ್ತದೆ, ಅವುಗಳನ್ನು ಕೂಡ ಅಭಿವೃದ್ಧಿ ಪಡಿಸುವಂಥದ್ದು, ಈಗಾಗಲೇ ಏರ್ ಪೋಟ್ ್ಗಳನ್ನು ಹೆಲಿಪ್ಯಾಡ್ ಗಳನ್ನು ಬೇರೆ ಬೇರೆ ರೀತಿಯಲ್ಲಿ ಎಲ್ಲೆಲ್ಲಿ ಟೂರಿಸಂಗಳ ಪಾಯಿಂಟ್‌ಗಳನ್ನು ಅಭಿವೃದ್ಧಿಗೊಳಿಸಬೇಕೆಂದು ಹೇಳುವಂಥ ನಿಟ್ಟಿನಲ್ಲಿ ೯೫ ಕೋಟಿ ರೂಪಾಯಿಗಳನ್ನು ಇಟ್ಟುಕೊಂಡಿರುವುದು, ಬೇರೆ ಬೇರೆ ಪ್ಯಾಕೇಜ್ ಗಳನ್ನು ಈಗಾಗಲೇ ಘೋಷಣೆ ಮಾಡಿರುವುದು, ಎಲ್ಲವನ್ನು ನಾನು ಈ ಸಂದರ್ಭದಲ್ಲಿ ಸ್ವಾಗತ ಮಾಡಿ ವಿಶೇಷವಾಗಿ ಪಟ್ಟದಕಲ್ಲು, ಬೇಲೂರು, ಮರವಂತೆ, ಕೊಡಚಾದ್ರಿ, ತಲಕಾಡು, ಹಂಪಿ, ಬಿಜಾಪುರ , ಹೊರನಾಡುಗಳನ್ನು ಗುರುತಿಸಿರುವುದನ್ನು ನಾನು ಸ್ವಾಗತಿಸುತ್ತಿದ್ದೇನೆ, ವಿಶೇಷವಾಗಿ ಮಂಗಳುರಿನಲ್ಲಿರುವಂಥ Aquamarine, ಡಾಲ್ಫ್ ಕ್ಲಬ್ ಮತ್ತು ಮಂಗಳೂರು ಸಮೀಪವಿರುವ ತಣ್ಣೀರುಬಾವಿ ಸುಲ್ತಾನ ... ನಡುವೆ ಇರುವ rope way ಬಿಡ್ಜ್ ಇರಬಹುದ ಬೇರೆ ಬೇರೆ ನಂದಿಬೆಟ್ಟ ಹಾಗು ಕೆಮ್ಮಣ್ಣುಗುಂಡಿಯಲ್ಲಿರುವ ಪ್ರವಾಸೋದ್ಯಮ ಕೇಂದ್ರಗಳನ್ನು ಅಭಿವೃದ್ಧಿ ಗೊಳಿಸುವುದು ಹತ್ತು ಹಲವು ಪ್ರವಾಸೋದ್ಯಮ ಯೋಜನೆಗಳನ್ನು ಘೋಷಣೆ ಮಾಡಿ ಅದಕ್ಕೆ ವಿಶೇಷ ಚಾಲನೆಯನ್ನು ಈ ಸಂದರ್ಭದಲ್ಲಿ ಸರ್ಕಾರ ಕೊಡಬೇಕೆಂದು ವಿನಂತಿಸುತ್ತೇನೆ. ಹಾಗೂ ಕ್ಲುಪ್ತ ಸಮಯದಲ್ಲಿ ಬಜೆಟ್ ಅಲೋಕೇಷನ್ ಕೂಡ ಮಾಡಿ ಬಿಲಿಕುಲ ಟ್ರಸ್ಟ್ ಕೂಡ, ಅದಕ್ಕೆ ಸಂಬಂಧಪಟ್ಟಿದ್ದು ಚಾರಿತ್ರಿಕವಾದ ಟ್ರಸ್ಟ್ ಗಎ ಸಂಬಂಧಪಟ್ಟ ಸಾಕಷ್ಟು

ಯೋಜನೆಗಳಾಗುತ್ತಿವೆ. ಬಿಳಿಕುಲ ಟ್ರಸ್ಟ್ ಎನ್ನುವಂಥ ಟ್ರಸ್ಟ್ ಗೆ ಡಾ: ಶಿವರಾಮಕಾರಂತರ ಹೆಸರನ್ನು ಇಡಬೇಕೆಂಬ ಬೇಡಿಕೆಯನ್ನು ಸಹ ಜಿಲ್ಲೆಯ ಜನತೆ ಆದೇಶವಾಗಿದೆ, ಆದರೆ ಆ ಆದೇಶವನ್ನು ಅನುಷ್ಠಾನಕ್ಕೆ ತರಬೇಕೆಂದು ಈ ಸಂದರ್ಭದಲ್ಲಿ ವಿನಂತಿಸಿ, ವಿಶೇಷವಾಗಿ ಉಡುಪಿ ಹಾಗು ದಕ್ಷಿಣ ಕನ್ನಡ ಜಿಲ್ಲೆ ಒಂದು ರೀತಿಯಲ್ಲಿ ಇದು ಹುಬ್ಬಳ್ಳಿ ಧಾರವಾಡ ಇದ್ದ ಹಾಗೆ twin city ಆಗಿ ಬೆಳೆಯುವಂಥ ಎಲ್ಲಾ ಲಕ್ಷಣಗಳು ಇವೆ. ಇದನ್ನು ಅಭಿವೃದ್ಧಿಗೊಳಿಸುವುದಕ್ಕೆ ನಾಲ್ಕು ಪಥ ರಸ್ತೆಗಳಲ್ಲ, ವಿಶೇಷವಾಗಿ ಯೋಜನೆ ಕೂಡ ಅನುಷ್ಠಾನಕ್ಕೆ ಬರಲಿಕ್ಕೆ ಪೂವಭಾವಿಯಾಗಿ ಆದಯ್ಯನ ಮಾಡಲಿಕ್ಕೆ ರೂ. ೧.೦೦ ಕೋಟಿ ಬಿಡುಗಡೆ ಮಾಡ ಬೇಕೆಂದು ವಿನಂತಿಸಿ ಬಹುಶಃ ಮುಂದಿನ ದಿವಸಗಳಲ್ಲಿ ಕರ್ನಾಟಕ ರಾಜ್ಯದ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ದೃಷ್ಟಿಯಲ್ಲಿ ವಿಶೇಷ ಆದ್ಯತೆ ಸನ್ಮಾನ್ಯ ಸಚಿವರು ಉಪಮುಖ್ಯಮಂತ್ರಿಗಳು ಕೊಡಬೇಕೆಂದು ಹೇಳಿ ವಿನಂತಿಸಿ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತೇನೆ.

ಶ್ರೀ ಹೆಚ್. ಎಂ. ವಿಶ್ವನಾಥ್ (ಸಕಲೇಶಪುರ) : ಸನ್ಮಾನ್ಯ ಅಧ್ಯಕ್ಷರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳು, ನಾಳೆ ನಿವೇನಾದರೂ ಅವಕಾಶ ಕೊಡುತ್ತೇವೆಂದರೆ ಮಾನ್ಯ ಸಿದ್ಧರಾಮಯ್ಯನವರು ೧೦ ನಿಮಿಷ ಬಿಟ್ಟುಕೊಡುತ್ತಾರೆಂದರೆ ಬೆಳಿಗ್ಗೆ ಮಾತನಾಡುತ್ತೇನೆ. ಬೆಳಿಗ್ಗೆ ಸಿಗುವುದಿಲ್ಲವೆಂದು ನನಗೆ ಗೊತ್ತು. ಈಗ ಬಹುಶಃ ಕರ್ನಾಟಕದಲ್ಲಿ ಅತ್ಯುತ್ತಮವಾದ ಬಜೆಟ್ ಅನನು ಕೊಟ್ಟಿದ್ದಾರೆ. ಹಣಕಾಸು ಸಚಿವರು ಇದ್ದರೆ ಸಾಕು ನಮಗೆ, ಇನ್ಯಾರು ಬಡ, ಪ್ರೆಸ್, ಕ್ಯಾಮರಾದವರು ಬೇಡ, ನಮ್ಮ ಭಾಗದ ಕೆಲಸ ಮಾಡಿಕೊಟ್ಟರೆ ಈ ಬಜೆಟ್ ನೊಳಗೆ ನಮಗೆ ಬೇಕಾದಂಥ ವಿಚಾರಗಳನ್ನು ಕೇಳಿಕೊಂಡರೂ ಅದಕ್ಕೆ ಹಣ ಬಿಡುಗಡೆ ಮಾಡಿದರೆ ಸಾಕಾಗುತ್ತದೆ. ನಾನು ಬೇರೆ ಏನು ವಿಚಾರಗಳನ್ನು ಮಾತನಾಡಲಿಕ್ಕೆ ಹೋಗುವುದಿಲ್ಲ. ಬಹುಶಃ ಅತ್ಯುತ್ತಮವಾದ ಬಜೆಟ್‌ಅನ್ನು ಮಂಡಿಸಿದ್ದಾರೆ. ವಿರೋಧ ಪಕ್ಷದವರು ಕೂಡ ಇವತ್ತು ಸಂತೋಷವಾಗಿ ಒಪ್ಪಿಕೊಳ್ಳುವಂಥ ಸ್ಥಿತಿಗೆ ಬಂದಿದೆ ಎಂದರೆ ಈ ಬಜೆಟ್ ಒಳಗಡೆ ಸನ್ಮಾನ್ಯ ಯಡಿಯೂರಪ್ಪರವರು ಮತ್ತೆ ಮುಖ್ಯಮಂತ್ರಿಗಳೂ ಸೇರಿ. ಈ ಸಮಿಶ್ರ

ಸರ್ಕಾರಕ್ಕೆ ಅತ್ಯಂತ ಗೌರವ ಬರುವ ಹಾಗೆ, ಈ ಕರ್ನಾಟಕ ಸರ್ಕಾರಕ್ಕೆ ಗೌರವ ಬರುವಂಥ ರೀತಿಯಲ್ಲಿ ಬಜೆಟ್ ಮಂಡಿಸಿದ್ದಾರೆ. ಆದರೆ ನನ್ನ ಒಂದು ವಿಚಾರವೇನೆಂದರೆ ವಿಶೇಷವಾಗಿ ಪಶ್ಚಿಮ ಘಟ್ಟದಲ್ಲಿರುವ ಜನರ ಬಗ್ಗೆ.

ಈಗ ಮಾನ್ಯ ಭೈರೇಗೌಡರು ಮಾತನಾಡುತ್ತಾ ಒಂದು ಮಾತನ್ನು ಹೇಳಿದರು, ಕೋಲಾರದಲ್ಲಿ ನಾವು ನೀರಿಗೋಸ್ಕರ ಒಂದೊಂದು ಕಿಲೊಮೀಟರ್ ಹೋಗಬೇಕೆಂದು ಹೇಳಿದರು. ಆದರೆ ನಾವು ಒಂದೊಂದು ಕಿಲೊಮೀಟರ್ ಹೊರಗೆ ಹೋದರೂ ನಮಗು ಕೂಡ ನೀರಿಲ್ಲ. ಮಲೆನಾಡಿನವರು ನಾವು ನಮ್ಮ ಪಶ್ಮಿಮ ಘಟ್ಟದೊಳಗೆ ೩೦ ತಾಲ್ಲೂಕುಗಳೇನು ಬರುತ್ತದೆ, ಈ ಭಾಗದಲ್ಲಿ ಇವತ್ತು ಕುಡಿಯುವ ನೀರಿನ ಸಮಸ್ಯೆ ಭೀಕರವಾಗಿದೆ. ಆದರೆ ಯಾರಿಗಾದರೂ ಇದನ್ನು ಹೇಳಿದರೆ ಒಪ್ಪುವುದಿಲ್ಲ, ಏಕೆಂದರೆ ಮಲೆನಾಡಿನವರು ಕುಡಿಯುವ ನೀರಿನ ಸಮಸ್ಯೆ ಇದೆ ಎಂದು ಹೇಳುತ್ತಾರಲ್ಲ ಎನ್ನುತ್ತಾರೆ. ಆದರೆ ನಾನು ಅರ್ಥ ಮಂತ್ರಿಯವರ ಹತ್ತಿರ ಕೇಳಿಕೊಳ್ಳುವುದೇನೆಂದರೆ, ಇಷ್ಟು ಒಳ್ಳೆಯ ಬಜೆಟ್ ಒಳಗಡೆ ಮಲೆನಾಡು ಭಾಗಕ್ಕೆ ನೀವು ಒಂದು ವಿಶೇಷವಾದ ಆಲೋಚನೆಯನ್ನು ಮಾಡಬೆಕು, ಅದರಲ್ಲೂ ವಿಶೇಷವಾಗಿ ಕುಡಿಯುವ ನೀರಿನ ಬಗ್ಗೆ. ಕೋಲಾರದವರು ನೀರಿಗಾಗಿ ಭೂಮಿಯ ಒಳಗಡೆ ಹೋಗಬೇಕೆನ್ನುತ್ತಾರೆ. ಆದರೆ ನಮಗೆ ಭೂಮಿಯ ಮೇಲುಗಡೆ ನೀರಿದೆ. ಇಡೀ ಪಶ್ಮಿಮ ಘಟ್ಟದ ಗುಡ್ಡಗಳಲ್ಲಿ ಭಾರೀ ಎತ್ತರದ ಜಾಗದಲ್ಲಿ ಭಾರೀ ದೊಡ್ಡ ಪ್ರಮಾಣದಲ್ಲಿ ನೀರು ಹರಿದು ಕೆಳಗಡೆ ಹೋಗುತ್ತಿದೆ. ಅವುಗಳು ಪಶ್ಚಿಮ ಘಟ್ಟಗಳು. ನಾನು ಈ ರೀತಿಯ ಒಂದು ಯೋಜನೆಯನ್ನು ತಯಾರು ಮಾಡಬೇಕೆಂದು ಹೇಳಿ ನಮ್ಮ ಸಕಲೇಶಪುರದಲ್ಲಿ ಉದಾಹರಣೆಯಾಗಿ ಆಮ್ನನಳಲಿ ಅಗ್ನಿಗುಡ್ಡ ಎನ್ನುವ ಗುಡ್ಡಕ್ಕೆ ಒಂದು ಕಡೆ ಸುಮಾರು ರೂ. ೪೦ ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ಈಗ ಎರಡು ವರ್ಷದಲ್ಲಿ ಹಿಂದೆ ಮಾಡಿದೆವು. ಅದರ ಪ್ರಯೋಗ ಎಷ್ಟು ಚೆನ್ನಾಗಿದೆ ಎಂದರೆ ಸುಮಾರು ೧೧ ಕಿಲೋ ಮೀಟರ್ ದೂರಕ್ಕೆ ನಾವು ಭಾರೀ ಎತ್ತರದ ಜಾಗದಿಂದ ನೀರನ್ನು ತೆಗೆದುಕೊಂಡು ಬಂದು ಸುಮಾರು

ಮೂರು ಸಾವಿರ ಜನ ಸಂಖ್ಯೆ ಇರುವ ಒಂದು ಗ್ರಾಮಕ್ಕೆ ಇವತ್ತು ಒಳ್ಳೆಯ ನೀರನ್ನು ಕೊಡತ್ತಿದ್ದೇವೆ. ೩೬೫ ದಿನ ಒಂದೇ ಸಮನೆ ನೀರು ಬರುತ್ತದೆ. ಆ ನೀರು ಸ್ಫಟಿಕ ಇದ್ದ ಹಾಘೆ ಇದೆ. ನಿಮ್ಮ ಯಾವ mineral water ಕೂಡ ಅದರ ಮುಂದೆ ಇಲ್ಲ. ಅಷ್ಟು ಒಳ್ಳೆಯ ನೀರನ್ನು ನಾವು ಇವತ್ತು ಜನರಿಗೆ ಕೊಡುತ್ತಿದ್ದೇವೆ. ೧೧ ಕಿಲೋ ಮೀಟರ್ ನ ನಾವು ಭೂಮಿಯೊಳಗಡೆ ಪೈಪನ್ನು ಹಾಕಿಕೊಂಡು ಮಾಡಿದ್ದೇವೆ. ಅಲ್ಲೊಂದು filter tank ಅನ್ನು ಮಾಡಿದ್ದೇವೆ ಅಷ್ಟೇನೆ. ಸುಮಾರು ರೂ. ೪೦ ಲಕ್ಷದಲ್ಲಿ ಈ ಕೆಲಸವಾಗಿದೆ. ಇದಾದ ನಂತರ ನಮಗೆ ಈ ಗ ಸುಮಾರು ಅಂಥವು ೪೫ ಯೋಜನೆಗಳನ್ನು ತಯಾರು ಮಾಡಿ ಅದಕ್ಕೆ line estimate ಅನ್ನು ಮಾಡಿ ಅದು ಈಗ ಸರ್ಕಾರದ ಮುಂದೆ ಬಂದು ನಿಂತಿದೆ. ಅದಕ್ಕೆ ಸುಮಾರು ರೂ. ೫ ರಿಂದ ೬ ಕೋಟಿ ಹಣ ಸಾಕು. ಇಷ್ಟು ಹಣವನ್ನು ಖರ್ಚು ಮಾಡಿದರೆ ಸಕಲೇಶಪುರ ತಲ್ಲೂಕಿನ ಗಡಿ ಭಾಗದಲ್ಲಿರತಕ್ಕ ಯಾವುದು ಪಶ್ಮಿಮ ಘಟ್ಟದ ಭಾಗದಲ್ಲಿರುವುದಕ್ಕೆ ನಾವು ಸುಮಾರು ೭೦ ಹಳ್ಳಿಗಳಿಗೆ ಪೂರ್ಣ ಪ್ರಮಾಣದ ನೀರನ್ನು ಕೊಡುತ್ತೇವೆ. ವಿದ್ಯುತ್ ಸಮಸ್ಯೆಯೂ ಇಲ್ಲ. ಮತ್ತೆ ಯಂತ್ರವೂ ಬೇಕಾಗಿಲ್ಲ. ಇಂಥ ಒಂದು ಒಳ್ಳೆಯ ಯೋಜನೆ ಬಹುಶಃ ನನಗನಿಸುತ್ತದೆ. ನಾನು ಸಕಲೇಶಪುರಕ್ಕೆ ಸೀಮಿತವಾಗಿ ಹೇಳುತ್ತಿಲ್ಲ. ಈ ೩೦ ತಾಲ್ಲೂಕಿನ ಗಡಿ ಭಾಗದಲ್ಲಿರತಕ್ಕ ಜನರಿಗೆ ಅದು ಪಶ್ಚಿಮ ಘಟ್ಟದ ಕೆಳಗಡೆ ಇರುವ ಜನರಿಗೆ ಇರಬಹುದು, ಅಥವಾ ಘಟ್ಟದ ಮೇಲೆ ಇರುವ ನಮಗೆ ಇರಬಹುದು, ಸುಮಾರು ೩೦ ತಾಲ್ಲೂಕಿನೊಳಗಡೆ ನೀವು ರೂ. ೧೫-೨೦ ಕೋಟಿ ಖರ್ಚು ಮಾಡಿದರೆ ನೂರಾರು ಹಳ್ಳಿಗಳಿಗೆ ನೀರನ್ನು ಕೊಡುವ ಯೋಜನೆಯನ್ನು ಮಾಡಬಹುದು. ಅದಕ್ಕೋಸ್ಕರ ಈ ಸಾರಿ ಹಣವನ್ನು ಈ ಆಯವ್ಯಯದಲ್ಲಿ ಇಟ್ಟಿಲ್ಲ. ಅದರಿಂದ ನಾನು ಹಣಕಾಸು ಮಂತ್ರಿಯವರಲ್ಲಿ ಕೇಳಿಕೊಳ್ಳುವುದೇನೆಂದರೆ ದಯಮಾಡಿ ನೀವು ಪ್ರಾಯೋಗಿಕವಾಗಿ ಸಕಲೇಶಪುರಕ್ಕೆ ಐದಾರು ಕೋಟಿ ರೂಪಾಯಿಗಳನ್ನು ಇಡಿ. ಅದಾದ ಮೇಲೆ ಮಿಕ್ಕ ಭಾಗದ ಎಲ್ಲದಕ್ಕೂ ನೀವು ಹಣವನ್ನು ಕೊಡಬಹುದು. ಅದನ್ನು ಈ ಆಯವ್ಯಯದಲ್ಲಿ ಸೇರಿಸಿಕೊಳ್ಳಬೇಕೆಂದು ತಮ್ಮಲ್ಲಿ

ಕೇಳಿಕೊಳ್ಳುತ್ತೇನೆ. ಇನ್ನು ಎರಡನೆಯದು, ಇಡೀ ಪಶ್ಚಿಮ ಘಟ್ಟ ಸುಂದರವಾದಂಥ ಜಾಗ ಬಹುಶಃ ಇಲ್ಲಿ ೨೨೪ ಜನ ಶಾಸಕರು ಅಲ್ಲಿಗೆ ಒಂದು ಸಾರಿ ಪ್ರವಾಸವನ್ನು ಮಾಡುವುದು ಒಳ್ಳೆಯದು. ಭಾಗಮಂಡಲದಿಂದ ಶಿರಸಿ ಸಿದ್ದಾಪುರದ ತನಕ ಹೋದರೆ ಇಷ್ಟು ಸುಂದರವಾದ ಜಾಗ ನಿಮಗೆಲ್ಲೂ ಸಿಕ್ಕುವುದಿಲ್ಲ. ಒಂದು ಕಡೆ dam ಗಳಿವೆ. ಗಾಜನೂರು dam ಎಂದು ಅಲ್ಲಿ ಒಂದು ಕಡೆ ಪ್ರಾರಂಭವಾದರೆ ಇಲ್ಲಿ ನಮ್ಮ ಕೊಡಗಿನಲ್ಲಿರತಕ್ಕ ಹಾರಂಗಿ dam ಇದೆ. ಅಲ್ಲಿಯತನಕ, ಸುಮಾರು ಆರೇಳು dam ಗಳು ಬರುತ್ತವೆ. ಭಾರೀ ಸುಂದರವಾದ ಜಾಗಗಳಿವೆ. ವಿಶೇಷವಾಗಿ ನನ್ನ ತಾಲ್ಲೂಕಿನಲ್ಲಿ ಪಶ್ಮಿಮ ಘಟ್ಟದೊಳಗೆ ಚಾರಣಕ್ಕೆ ಹೋದವರು ಮೂರು ಜನರು ಸತ್ತು ಹೋದರು. ಅದು ಭೀಕರವಾದಂಥ ಕಾಡು. ಆದರೆ ಅಲ್ಲಿ ಭಾರೀ ಸುಂದರವಾದ ಜಾಗಗಳು ಕೂಡ ಇವೆ. ಪ್ರವಾಸೋದ್ಯಮಕ್ಕೆ ತಾವೇನು ಹಣವನ್ನು ಈ ದೊಡ್ಡ ಪ್ರಮಾಣದಲ್ಲಿ ಇಟ್ಟಿದ್ದೀರಿ, ಇನ್ನು ಸ್ವಲ್ಪ ಹೆಚ್ಚು ಹಣವನ್ನು ಈ ಭಾಗಕ್ಕೆ ಇಟ್ಟು ಈ ಭಾಗವನ್ನು ನೀವೇನಾದರೂ ಪ್ರವಾಸೋದ್ಯಮದಲ್ಲಿ ಅಭಿವೃದ್ಧಿ ಪಡಿಸಿದರೆ ನಮಗೆ ಇರಡು ರೀತಿ ಅನಕೂಲವಾಗುತ್ತಿದೆ ಒಂದು, ಪ್ರವಾಸಿಗರು ಆ ಕಡೆ ಬರುತ್ತಾರೆ. ಎರಡನೆಯದು, ನಮ್ಮ ರಸ್ತೆಗಳು ಅಭಿವೃದ್ದಿಯಾಗುತ್ತದೆ. ಪಶ್ಚಿಮ ಘಟ್ಟದ ರಸ್ತೆಗಳು ಅಭಿವೃದ್ಧಿಯಾಗಲೇಬೇಕಾಗಿದೆ. ಕಾರಣ ಇದು ನಿಮಗೆ ಗೊತ್ತಿದೆ. ಇವತ್ತು ಶಿರಾಡಿ ಮತ್ತು ಚಾರ್ಮುಡಿ ಘಾರ್ಟ್‌ನೊಳಗೆ ಬಹುಶಃ ನಾವು ಜೂನ್ ತಿಂಗಳಿನಿಂದ ತಿರುಗಾಡದೇ ಇರುವ ಸ್ಥಿತಿಯಾಗುತ್ತದೆ. ಆ ಕಾರಣಕ್ಕೆ ಪ್ರವಾಸೋದ್ಯಮಕ್ಕೆ ನೀವು ಹೆಚ್ಚು ಹಣವನ್ನು ಇಟ್ಟು ಈಗ ಇಟ್ಟಿರುವ ಹಣವನ್ನು ಹೆಚ್ಚು ವಿನಿಯೋಗ ಮಾಡಬೇಕು. ಇದರಲ್ಲಿ ಕೆಲವು ಊರುಗಳು ಸೇರಿಕೊಂಡಿಲ್ಲ. ಸಕಲೇಶಪುರದಲ್ಲಿ ಒಂದನ್ನೂ ಸೇರಿಸಿಲ್ಲ. ಕೊಡಗಿನ ಕೆಲವು ಭಾಗಗಳೂ ಸೇರಿಕೊಂಡಿಲ್ಲ. ಮೂಡಿಗೆರೆ ಕೆಲವು ಭಾಗಗಳೂ ಸೇರಿಕೊಂಡಿಲ್ಲ. ಇವುಗಳನ್ನು ನೀವು ಸೇರಿಕೊಂಡರೆ ಬಹಶಃ ಒಂದು ಪ್ರವಾಸಿಗರು ಬರುತ್ತಾರೆ. ಎರಡನೆಯದು, ಆ ರಸ್ತೆಗಳು ಕೂಡ ಅಭಿವೃದ್ದಿಯಾಗುತ್ತದೆ ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಮೂರನೆಯದು, ಬಹುಶಃ MADB ಎಂದರೆ

ಅದು ಬೇಡದೇ ಇರುವ ಒಂದು ಸಂಸ್ಥೆಯಾಗಿತ್ತು. ಹಿಂದೆ ಮೂಡಿಗೆರೆ ತಾಲ್ಲೂಕಿನ ಡಿ.ಎ. ಪುಟ್ಟೇಗೌಡ ಎನ್ನುವವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದರು. ಚಂದ್ರೇಗೌಡ ಎನ್ನುವವರನ್ನು ಅಧ್ಯಕ್ಷರನ್ನಾಗಿ ಮಾಡಿದ್ದರು. ಅವುರ charge ತೆಗೆದುಕೊಂಡಿರಲಿಲ್ಲ. ಇದು ನಮಗೆ ಚೆನ್ನಾಗಿ ಗೊತ್ತಿದೆ. ಹಿಂದಿನ ಸರ್ಕರ ಮಲೆನಾಡು ಅಭಿವೃದ್ಧಿಗೆ ಹಣವನ್ನು ಇಟ್ಟಿರಲಿಲ್ಲ. ಆದರೆ ನಮ್ಮ ಸರ್ಕಾರ ಹೇರಳವಾಗಿ ಹಣವನ್ನು ಇಟ್ಟಿದೆ. ಆದರೆ ಇದ್ದ ಹಣದ ಬಗ್ಗೆ ನನಗೆ ಒಂದು ಬೇಸರದ ಸಂಗತಿ ಎಂದರೆ ಮಲೆನಾಡನ್ನು ಗುರುತಿಸಬೇಕಾದರೆ ತಪ್ಪು ಮಾಡುತ್ತಿದೇವೆ,ತಪ್ಪು ಮಾಡಿದ್ದಾರೆ. ಈಗಲಾದರೂ ಇದನ್ನು ಸರಿಪಡಿಸಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ೭೧ ತಾಲ್ಲೂಕುಗಳನ್ನು ಮಲೆನಾಡು ಎಂದು ಹೇಳುತ್ತಾರೆ. ಇರುವುದು ಕೇವಲ ೩೦ ತಾಲ್ಲೂಕುಗಳು ಮಲೆನಾಡು, ಮಲೆನಾಡಿನ ಅಂಚಿನಲ್ಲಿರುವುದು ಸುಮಾರು ೩೦ ತಾಲ್ಲೂಕುಗಳು ಮಲೆನಾಡು, ಮಲೆನಾಡಿನ ಅಂಚಿನಲ್ಲಿರುವುದು ಸುಮಾರು ೩೦ ರಿಂದ ೪೦ ತಾಲ್ಲೂಕುಗಳು ಬರುತ್ತವೆ. ಆದರೆ ನಮಗೆ ಈಗೇನಾಗಿದೆ. ಉದಾಹರಣೆಗೆ ಮೂಡಿಗೆರೆ, ಸಕಲೇಶಪುರ, ಅಥವಾ ಕೊಡಗಿನ ಮೂರು ತಾಲ್ಲೂಕು ಇರಬಹುದು, ಅದರ ಪಕ್ಕದಲ್ಲಿ ಶೃಂಗೇರಿ, ಕೊಪ್ಪ ಬರಬಹುದು. ನನಗೆ ೯ ಹೋಬಳಿಗಳೂ ಬರುತ್ತದೆ. ದರ ಕೆಳಗೆ ತಗ್ಗಿನಲ್ಲಿ ಬರುವ ಪಶ್ಚಿಮ ಘಟ್ಟದಲ್ಲಿ ಬರುವ ಕೆಳಗಿನ ತಾಲ್ಲೂಕುಗಳಿರಬಹುದು. ಒಂಗತ್ತು ತಾಲ್ಲೂಕು ನನ್ನದು hundred percent ಮಲೆನಾಡು. ಆದರೆ ನನಗೂ ೩೦ ಲಕ್ಷ ಒಂದು ಹೋಬಳಿ ಇರುವ ಒಂದು ತಾಲ್ಲೂಕಿಗೆ ರೂ. ೩೦ ಲಕ್ಷ ನೀವು ಕೊಡುತ್ತೀರಿ. ಇದರಿಂದ ಮಲೆನಾಡು ಅಭಿವೃದ್ಧಿಯ ಮೂಲ ಉದ್ದೇಶವೇ ಈಡೇರುವುದಿಲ್ಲ. ಮಲೆನಾಡು ಅಭಿವೃದ್ಧಿ ಮಂಡಳಿಯೊಳಗಡೆ ನಮ್ಮ ರಸ್ತೆಗಳ ಕೆಲಸವನ್ನು ಮಾಡಲು ಸಾದ್ಯವೇ ಇಲ್ಲ. ಒಂದು ಸಣ್ಣ ಉದಾಹರಣೆಯನ್ನು ಕೊಡುತ್ತೇನೆ. ಒಂದು ಕಾಗೇರಿ ಎನ್ನುವ ಊರಿದೆ. ಅಲ್ಲಿ ೪೬ ಪೋಟು ಇದೆ. ಅಲ್ಲಿ ಸುಮಾರು ಈ ವರ್ಷವೇ ರೂ. ೬೦ ಲಕ್ಷ ರಸ್ತೆಗೆ ಕೊಟ್ಟಿದ್ದೀರಿ. ಅಲ್ಲಿಗೆ ಹಣ ಸಾಕಾಗುವುದಿಲ್ಲ. ಆದರೆ ಅನಿವಾರ್ಯವಾಗಿ ಅಲ್ಲಿಗೆ ಕೊಡಬೇಕಾದ ಸ್ಥಿತಿ ಇರುತ್ತದೆ. ಇಂಥ ಸ್ಥಿತಿಯೊಳಗೆ ರೂ. ೩೦ ಲಕ್ ಕೊಟ್ಟಿರುವುದು ಸಾಕಾಗುವುದಿಲ್ಲ. ಅದರಿಂದ ವಿಶೇಷವಾಗಿ ನಮ್ಮ ೩೦

ತಾಲ್ಲೂಕುಗಳು ಏನಿದ್ದಾವೆ. ಅವುಗಳನ್ನು ಗುರುತಿಸಿ, ಅದಕ್ಕೆ ಒಂದು ಲಕ್ಷ ರೂಪಾಯಿಗಳನ್ನು ನೀವು ನೇರವಾಗಿ ಮಲೆನಾಡು ಅಭಿವೃದ್ಧಿ ಮಂಡಳಿಯಿಂದ ಕೊಡುವುದಕ್ಕೆ ಇನ್ನು ಹೆಚ್ಚು ಹಣವನ್ನು ಮಲೆನಾಡು ಅಭಿವೃದ್ಧಿಯಲ್ಲಿಟ್ಟುಕೊಂಡು ಈಗ ಹಣವನ್ನು ಬಿಡುಗಡೆ ಮಾಡಿಕೊಂಡಬೇಕೆಂದು ಹೇಳಿ ಈ ಆಯವ್ಯಯದಲ್ಲಿ ಅದನ್ನು ಕೂಡ ಹೆಚ್ಚುವರಿಯಾಗಿ ಸೇರಿಸಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ. ನನ್ನ ಸಮಸ್ಯೆ ಇನ್ನೊಂದು ಎಂದರೆ ಸುವರ್ಣ ಗ್ರಾಮಕ್ಕೆ ನಾವು ಈಗ ದೊಡ್ಡ ಒತ್ತನ್ನು ಕೊಟ್ಟಿದ್ದೇವೆ. ನಮ್ಮ ಸರ್ಕಾರದ ದೊಡ್ಡ ಸಾಧನೆ ಎಂದರೆ ಇದ್ಕೋಸ್ಕರ ಬಹುಶಃ ಒಂದು ಸಾವಿರ ಗ್ರಾಮಗಳನ್ನು ತೆಗೆದುಕೊಂಡು ನಾವೇನು ಮಾಡುತ್ತಿದ್ದೇವೆ, ಇದು ಅತ್ಯಂಂತ ಗೌರವಯುತವಾದ ಒಂದು ಕೆಲಸ. ಇದು ಆಗಲೇಬೇಕಾದಂಥ ಕೆಲಸ. ಆದರೆ ಮಲೆನಾಡಿನವರಿಗೆ ಒಂದು ಸಮಸ್ಯೆ ಇದೆ. ಒಂದು ಸಾವಿರ ಜನಸಂಖ್ಯೆಯ ಗ್ರಾಮ ಎಲ್ಲಿಂದ ಸಿಗುತ್ತದೆ? ಅದನ್ನು ಐದು ನೂರಕ್ಕೆ ಸೀಮಿತ ಮಾಡಿ. ಆ ಐದು ನೂರು ಜನಸಂಖ್ಯೆಯನ್ನು ತೆಗೆದುಕೊಳ್ಳುವಂತೆ, ಮಲೆನಾಡಿಗೆ ಸೀಮಿತವಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ಇನ್ನೊಂದು ಸಮಸ್ಯೆ ನಮ್ಮ ಮಲೆನಾಡು ಭಾಗದೊಳಗಡೆ ಒಂದು ದಿನಂಪ್ರತಿ ಸಮಸ್ಯೆ ಇದೆ. ಇವತ್ತು ಮತ್ತು ನಿನ್ನೆಯಿಂದ ನಾನು ಕೇಳುತ್ತಿದ್ದೇನೆ, ಮೂರು ದಿವಸದಿಂದ ಮಲೆನಾಡಿನಲ್ಲಿ ಆನೆಗಲ ಕಾಟ ಭಾರೀ ದೊಡ್ಡ ಪ್ರಮಾಣದಲ್ಲಿವೆ, ಕೇವಲ ಸಕಲೇಶಪುರಕ್ಕೆ ನಾನು ಹೇಳುತ್ತಿಲ್ಲ. ಅದರಲ್ಲಿ ಹೆಚ್ಚು ಸಮಸ್ಯೆಯನ್ನು ಅನುಭವಿಸುತ್ತಿರುವವರು ಮಲೆನಾಡಿನಲ್ಲಿ ವಿಶೇಷವಾಗಿ ಸಕಲೇಶಪುರ, ಆಲೂರು, ಅರಕಲಗೂಡು, ನಮ್ಮ ಮಾನ್ಯ ರಾಮಸ್ವಾಮಿಯವರು ಕೂಡ ಇಲ್ಲೇ ಇದ್ದಾರೆ. ನಮ್ಮ ಭಾಗದಲ್ಲಿ ಒಟ್ಟು ೩೪ ಜನರು ಸತ್ತು ಹೋಗಿದ್ದಾರೆ. ೧೬೦ ಜನರಿಗೆ ಗಾಯಗಳಾಗಿದೆ. ೨೫೦ ಪ್ರಾಣಿಗಳು ಸತ್ತು ಹೋಗಿದೆ. ಒಂದು ವರ್ಷಕ್ಕೆ ಕನಿಷ್ಟ ಏನಿಲ್ಲವೆಂದರೂ ರೂ.೪೦ ರಿಂದ ೫೦ ಕೋಟಿ ಎಷ್ಟು ನಮಗೆ ನಷ್ಟವಾಗುತ್ತದೆ. ಮನೆಗಳನ್ನೇ ಉರುಳಿಸುವಂಥ ಪುಂಡಾನೆಗಳು ಬಂದು ಕೂತಿವೆ. ನಾನು ಕೇಳುತ್ತಿರುವುದು ಇಂಥ ಆನೆಗಳನ್ನು ಕಾಡಲ್ಲಿ ಇರುವ ಆನೆಗಳನ್ನೆಲ್ಲ ಪಳಗಿಸಿ. ನೀವು ಅದರ ಮೇಲೆ ಕ್ರಮವನ್ನು ತೆಗೆದುಕೊಳ್ಳಿ ಎಂದು ನಾನು ಹೇಳುವುದಿಲ್ಲ.

ಅದಕ್ಕೋಸ್ಕರವಾಗಿ ವಿಶೇಷತವಾಗಿ ಬಜೆಟ್ ನಲ್ಲಿ ಹಣವನ್ನು ಇಡಬೇಕಾಗಿದೆ. ಕಾರಣವೇನೆಂದರೆ ಯಾವುದು ಊರಿನ ಒಳಗಡೆ ಬಂದು ಆನೆಗಳು ಕುಳಿತಿವೆ, ಅವುಗಳನ್ನು ಹಿಡಿಯಲೇಬೇಕಾಗುತ್ತದೆ. ಉದಾಹರಣೆ ಸಕಲೇಶಪುರ ತಾಲ್ಲೂಕಿನ ಹೇಮಾವತಿ ಹಿನ್ನೀರಿನ ಒಳಗಡೆ ಸುಮಾರು ೨೨ ಆನೆಗಳನ್ನು ಹಿಡಿಯಬೇಕೆಂದು ರಾಜ್ಯ ಸರ್ಕಾರಕ್ಕೆ ಬಂದಿದೆ. ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆನ್ನುತ್ತಾರೆ. ಇದುವರೆಗೆ ಹಿಡಿದಿಲ್ಲ. ಅಲ್ಲಿ ಒಂದು ಆನೆಗೆ ವೈಜ್ಞಾನಿಕವಾಗಿ ಹೇಳಬೇಕೆಂದರೆ ಒಂದು ಸಾವಿರ ಎಕರೆಗೆ ಒಂದು ಆನೆ ವಾಸ ಮಾಡಬಹುದು ಅಷ್ಟೆ ಅಂಥದ್ದರಲ್ಲಿ ೨೨ ಆನೆಗಳಿವೆ, ಇದು ನಮಗೆ ಮಾತ್ರವಲ್ಲ, ಕೊಡಗು, ಕೊಡಗಿನ ಮೂರು ತಾಲ್ಲೂಕಿಗೆ, ಹಾಸನ ಜಿಲ್ಲೆಯ ಮೂರು ತಾಲ್ಲೂಕುಗಳಿಗೆ ಭಾರೀ ಸಮಸ್ಯೆಯಾಗುತ್ತಿದೆ. ಇವು ಕಾಡಿನೊಳಗಡೆ ಪಶ್ಚಿಮ ಘಟ್ಟದಲ್ಲಿರುವ ಆನೆಗಳಲ್ಲ. ಪಶ್ಚಿಮ ಘಟ್ಟದಲ್ಲಿರುವ ಆನೆಗಳು ಬರುತ್ತವೆ, ಹೋಗುತ್ತವೆ. ಆದರೆ ಈ ಆನೆಗಳು ಎಲ್ಲ ಇರುವಂಥದ್ದು ಪಶ್ಚಿಮ ಘಟ್ಟ ಅಲ್ಲದೇ ಇರುವ ಆಲೂರು, ಸಕಲೇಶುರ, ಮತ್ತೆ ಅರಕಲಗೂಡು ಭಾಗಗಳಲ್ಲಿ. ಆದ್ದರಿಂದ ಇವುಗಳನ್ನು ಹಿಡಿಯಲಿಕ್ಕೆ ಸರ್ಕಾರದವರು ಒಂದು ಯೋಜನೆಯನ್ನು ಹಾಕಿಕೊಳ್ಳಬೇಕು. ಅದಕ್ಕಾಗಿ ಬಜೆಟ್‌ನಲ್ಲಿ ನೀವು ಈಗಲೇ ಹಣವನ್ನು ಕೊಡಬೇಕಾಘುತ್ತದೆ. ಕಾರಣವೇನೆಂದರೆ ಇದನ್ನು ಶ್ರೀಲಂಕಾದಲ್ಲಿ ಈಗಾಗಲೇ ಈ ರೀತಿಯ ಒಂದು ಯೋಜನೆಯನ್ನು ಮಾಡಿದ್ದರೆ. ಏನೆಂದರೆ ರೈತರಿಗೆ ಆಗುವ ಸಮಸ್ಯೆಯನ್ನು ತಪ್ಪಿಸುವುದು, ಜೊತೆಗೆ ಪ್ರವಾಸೋದ್ಯಮದಲ್ಲಿ ಆ ಆನೆಗಳನ್ನು ತೆಗೆದುಕೊಂಡು ಒಂದು ಆನೆಧಾಮ ಎಂದು ಮಾಡಿ ಸುಮಾರು ೫೦ ಎಕರೆ ಜಾಗವನ್ನು ತೆಗೆದುಕೊಂಡು ಅದಕ್ಕೆ ಸುಮಾರು ಡರಡು ಕೋಟಿ ರೂಪಾಯಿಗಳಷ್ಟು ಹಣವನ್ನು ಅಲ್ಲಿ ಈಗ ವಿನಿಯೋಗಿಸಿ ಆನೆಗಳನ್ನು ಹಿಡಿದು ಪಳಗಿಸಿ ಅಲ್ಲಿ ಪ್ರವಾಸಿಗರನ್ನು ಆಕರ್ಷಣೆ ಮಾಡುವುದು ಮತ್ತು ಅಲ್ಲಿಯ ರೈತರಿಗೆ ಅನುಕೂಲ ಮಾಡತಕ್ಕ್ದ, ಪುಂಡಾನೆಗಳನ್ನು ಹಿಡಿದು ಬೇರೆ ಕಡೆ ಬಿಟ್ಟು ಸಮಸ್ಯೆ ಮಾಡುವುದನ್ನು ತಪ್ಪಿಸುವುದಕ್ಕೆ ಒಂದು ಆನೆಧಾಮ ಎಂದು ಮಾಡಿದ್ದಾರೆ. ಬಹುಶಃ ಅದರ ಬಗ್ಗೆ ಸರ್ಕಾರ ಒಂದು ನಿಯೋಗವನ್ನು ಅಥವಾ ಏನಾದರೂ ಮಾಡಿ ಅದರ ಬಗ್ಗೆ ತಿಳಿದುಕೊಂಡು

ಆ ರೀತಿ ಪಶ್ಚಿಮ ಘಟ್ಟದೊಳಗಡೆ ಇಲ್ಲಿಂದ ದಾಂಡೇಲಿ ತನಕ ನಾವು ಇಂಥ ಒಂದು camp ಗಳನ್ನು ಮಾಡಿದರೆ ಬಹುಶಃ ರೈತರಿಗೂ ಸಮಸ್ಯೆ ಬಗೆಹರಿಯುತ್ತದೆ. ಎರಡನೆಯದು, ಆ ಆನೆಗಳನ್ನು ಕೂಡ ಹಿಡಿದು ತೆಗೆದುಕೊಂಡು ಹೋಗುವ ಸಮಸ್ಯೆಗಳು ನಿಲ್ಲುತ್ತವೆ. ಇಲ್ಲದಿದ್ದರೆ ನಾವು ದಿನಂಪ್ರತಿ ಈ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಅದಕ್ಕೋಸ್ಕರ ಈ ಬಜೆ ಟ್‌ನಲ್ಲಿ ಅದಕ್ಕೆ ಬೇಕಾಧ ಹಣವನ್ನು ಕೂಡ ಇಟ್ಟುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಹೀಗೆ ಇನ್ನೊಂದು ವಿಚಾರವನ್ನು ಏಕೆ ಗಮನಿಸಲಿಲ್ಲವೆಂದು ನನಗೆ ಒತ್ತಿಲ್ಲ. ತುಂಬಾ ಹುಡುಕಿದೆ. ಎಲ್ಲೂ ಕಾಣಲಿಲ್ಲ. ಈಗ ಪಶ್ಚಿಮಘಟ್ಟದೊಳಗೆ naxalites movements ಶುರುವಾಗಿದೆ. ನಕ್ಸಲ್ ವಾದ ಇರುವಂತಹ ಜನರು ಇವತ್ತು ಅಲ್ಲಿಗೆ ಬಂದು, ಅಲ್ಲಿಯ ಯುವಕರನ್ನು ಆಕರ್ಷಿಸಿ, ಅಲ್ಲಿ ಸಂಘಗಳನ್ನು ಮಾಡಿಕೊಂಡು ಈಗಾಗಲೇ ಶೃಂಗೇರಿ, ಕೊಪ್ಪ ಮತ್ತು ಉಡುಪಿ ಭಾಗಗಳಲ್ಲಿ ಹೆಚ್ಚು – ಕಡಿಮೆಯಾದರೂ ಪ್ರಭಾವಿಯಾಗಿದ್ದಾರೆ. ಈಗಾಗಲೇ ಸಕಲೇಶಪುರ ಮತ್ತು ಕೊಡಗು ಭಾಗಗಳಲ್ಲಿದ್ದಾರೆ. ಇವರೆಲ್ಲರೂ ಕೂಡ ಇವತ್ತಲ್ಲ ನಾಳೆ ಇಡೀ ಪಶ್ಚಿಮಘಟ್ಟವನ್ನು ವ್ಯಾಪಿಸುವಂತಹ ಸ್ಥಿತಿ ಇದೆ. ಕಾರಣ, ಅಲ್ಲಿ ಸಮಸ್ಯೆ ಗಳಿವೆ. ಒತ್ತುವರಿ ಸಮಸ್ಯೆ ಇದೆ. ಆ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಕೂಡ ನಮ್ಮಲ್ಲಿ ಏನಾದರೂ ಯೋಜನೆ ಇಟ್ಟುಕೊಳ್ಳಬೇಕಾಗುತ್ತದೆ. ನಕ್ಸಲೀಯರನ್ನು ಹತ್ತಿಕ್ಕುವುದಾಗಲಿ, ಅವರನ್ನು ಗುಂಡಿಟ್ಟು ಕೊಲ್ಲುವುದಾಗಲಿ ಅಥವಾ ಕಾನೂನು ರೀತ್ಯಾ ಕ್ರಮಕೈಗೊಳ್ಳುವುದು ಬೇರೆ. ಆದರೆ, ಅಲ್ಲಿರುವ ಸಮಸ್ಯೆಗಳು ನಮ್ಮ ಯುವಕರನ್ನು ಅದರತ್ತ ಆಕರ್ಷಿಸದಂತೆ ನೋಡಿಕೊಳ್ಳಬೇಕು. ಈಗ ನೀವು ಮನೆಗಳನ್ನು ಕೊಡುತ್ತೀರಿ. ಆದರೆ, ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಜಾಗವಿಲ್ಲ. Plantation ಒಳಗಡೆ ಇರುವವರೆಲ್ಲರೂ ಕಾಫಿ ತೋಟ ಮಾಡಿಕೊಂಡಿದದಾರೆ. ಅವರು ತಮ್ಮ ಹಿಡುವಳಿ ಬಿಟ್ಟುಕೊಂಡುವುದಿಲ್ಲ. ಆದರೆ, ಇವತ್ತು C&D Land ಒಳಗಡೆ ನಾವು ಹೇರಳವಾಗಿ ಮರಗಳನ್ನು ನೆಟ್ಟಿದ್ದೇವೆ. ಕನಿಷ್ಠ ಒಂದು ಹಳ್ಳಿಗೆ ೧೦ ರಿಂದ ೧೫ ಎಕರೆಗಳಷ್ಟು ಜಾಗವನ್ನು ನಾವು ವಶಕ್ಕೆ ತೆಗೆದುಕೊಂಡು ಅದರೊಳಗೆ ಮನೆಗಳನ್ನು ಕಟ್ಟಿಸಿಕೊಡುವಂಥದ್ದು ಮತ್ತು ಅಲ್ಲಿಯ ಬಡ

ಜನರಿಗೆ ನಿವೇಶನ ಮಾಡಿಕೊಡುವಂತಹ ಕೆಲಸ ಮಾಡಬೇಕಾಗುತ್ತದೆ. ಅದಕ್ಕೆ ವಿಶೇಷ ಪ್ಯಾಕೇಜ್ ಮಾಡಬೇಕಾಗುತ್ತದೆ. ನಕ್ಸಲ್ ವಾದವನ್ನು ನೀವು ಹತ್ತಿಕ್ಕುವುದಕ್ಕೆ ಕೇವಲ ಮಿಲಿಟರಿ, ಅರೆ ಮಿಲಿಟರಿ ಮುಖಾಂತರ ಏನೂ ಮಾಡುವುದಕ್ಕೆ ಸಾಧ್ಯವಿಲ್ಲ. ಇಡೀ ಪಶ್ಚಿಮಘಟ್ಟಕ್ಕೆ ಒಂದು ಹೊಸ ಪ್ಯಾಕೇಜ್ ಅನ್ನು ನೀವು ಬಿಡುಗಡೆ ಮಾಡಬೇಕಾಗುತ್ತದೆ. ಅದನ್ನೂ ಕೂಡ ಈ ಬಜೆಟ್ ನಲ್ಲಿ ಸೇರಿಸಬೇಕಾಗುತ್ತದೆ. ಅಲ್ಲಿಯ ಸಮಸ್ಯೆಯ ಪರಹಾರಕ್ಕೋಸ್ಕರ ನೀವು ಒಂದು ಹೊಸ ಪ್ಯಾಕೇಜ್ ಬಿಡುಗಡೆ ಮಾಡದೇ ಹೋದರೆ, ಮುಂದೆ ಯಾವುದೇ ಕಾರಣಕ್ಕೂ ಅಲ್ಲಿ ನಡೆಯುವ ರಕ್ತಪಾತವನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಸನ್ಮಾನ್ಯ ಯಡಿಯೂರಪ್ಪನವರು ಇದರ ಬಗ್ಗೆ ಗಮನ ಹರಿಸಬೇಕು. ಇದಕ್ಕೆ ವಿಶೇಷವಾದ ಒಂದು ಪ್ಯಾಕೇಜ್ ಬಿಡುಗಡೆ ಮಾಡ ಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಬಹುಶಃ ಅತ್ಯುತ್ತಮವಾದ ಒಂದು ಬಜೆಟ್ ಬಗ್ಗೆ ನಾವು ಪ್ರಶ್ನೆ ಮಾಡಬೇಕು, ಕೇಳಬೇಕು ಎನ್ನುವುದಕ್ಕಿಂತಲೂ ನಾವು ಇದರ ಲಾಭ ಪಡೆಯುವುದಕ್ಕೆ ಹೆಚ್ಚು ಪ್ರಯತ್ನ ಮಾಡಲೇಬೇಕಾಗು ತ್ತದೆ. ಕರ್ನಾಟಕಕ್ಕೆ ಅತ್ಯುತ್ತಮವಾಧ ಬಜೆಟ್ ಕೊಟ್ಟಿದ್ದೀರಿ. ಅಭಿವೃದ್ಧಿ ರಂಗ ಕೊಟ್ಟಂಥ ಈ ಬಜೆಟ್ ಗೆ ನಾವೆಲ್ಲರೂ ಉಪ ಮುಖ್ಯಮಂತ್ರಿಗಳಿಗೆ ಮತ್ತು ಮುಖ್ಯಮಂತ್ರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇವೆ. ಸನ್ಮಾನ್ಯ ಯಡಿಯೂರಪ್ಪನವರು ನಾವು ಹೇಳಿದಂತಹ ವಿಚಾರಗಳನ್ನು ದಯಮಾಡಿ ಗಮನದಲ್ಲಿಟ್ಟುಕೊಂಡು ತಮ್ಮ ಹೇಳಿಕೆ, ಭಾಷಣದೊಳಗಡೆ ಇದನ್ನೆಲ್ಲಾ ಸೇರಿಸಬೇಕೆಂದು ಕೇಳಿಕೊಳ್ಳುತ್ತೇನೆ, ಹಾಗೆಯೇ COMARK ಗೆ ಈಗಾಗಲೇ ೧೦ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೀರಿ. ಆಧರೆ, ಕೆಲವರು ಅನದನು ಕೊಟ್ಟಿದ್ದು ಸರಿಯಲ್ಲವೆಂಬ ಮಾಥನ್ನು ಹೇಳಿದ್ದಾರೆ. ಇದು ತಪ್ಪಾಗುತ್ತದೆ. ದೊಡ್ಡ ದೊಡ್ಡ ಉದ್ದಿಮೆಗಳು, ದೊಡ್ಡ ದೊಡ್ಡ ವ್ಯಾಪಾರಿಗಳ ಮಧ್ಯ ನಮ್ಮ ಬೆಳೆಗಾರರು ತುಂಬಾ ತೊಂದರೆಗೊಳಗಾಗಿದ್ದಾರೆ. ಅದನ್ನು ತಪ್ಪಿಸುವುದಕ್ಕೋಸ್ಕರ ನಾವು ಈಗಾಗಲೇ COMARKಗೆ ೧೦ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವುದಕ್ಕೆ ನೀವು ಒಪ್ಪಿಕೊಂಡಿದ್ದೀರಿ, ಖಂಡಿತವಾಗಿಯೂ ಅದಕ್ಕೆ ಇನ್ನೂ ೫ ಕೋಟಿ ರೂಪಾಯಿಗಳನ್ನು ಸೇರಿಸಿಕೊಟ್ಟರೆ ಅನುಕೂಲವಾಘುತ್ತದೆ. ಇಲ್ಲದಿದ್ದರೆ, ಸಣ್ಣ ಬೆಳೆಗಾರರು

ದೊಡ್ಡ ಬೆಳೆಗಾರರ ಜೊತೆ ಅಥವಾ ದೊಡ್ಡ ವ್ಯಾಪಾರಿಗಳ ಜೊತೆ ನಾವು ನಮ್ಮ ಒಳ್ಳೆಯ ಬೆಲೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ದಯಮಾಡಿ ಏನು ಕೊಡುತ್ತಿದ್ದೀರಿ, ಅದನ್ನು ಮುಂದುವರೆಸಬೇಕೆಂದು ಕೇಳಿಕೊಳ್ಳುತ್ತೇನೆ. ಸಾಲದ ವಿಚಾರದಲ್ಲೂ ಅಷ್ಟೆ. ೨೫,೦೦೦ ರೂಪಾಯಿ ನೀವೇನು ಈಗ ಕೊಡುತ್ತಿದ್ದೀರಿ, ಅದನ್ನು ಎಲ್ಲಾ ಜನರಿಗೂ ಕೂಡ ಅನುಕೂಲವಾಗುವಂತೆ ವಿಸ್ತರಿಸಬೇಕು. ಇದರಿಂದ ಮಲೆನಾಡು ಭಾಗದ ಕೆಲವು ಜನರಿಗೆ ಅನುಕೂಲವಾಗುತ್ತದೆಂದು ಕೇಳಿಕೊಂಡು, ಇಷ್ಟು ಹೊತ್ತು ನನಗೆ ಮಾತನಾಡಲು ಅವಕಾಶ ಕೊಟಟ ಮಾನ್ಯ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಲಾಲಾಜಿ ಆರ್. ಮೆಂಡನ್ (ಕಾಪು) : ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಕರ್ನಾಟಕದ ಮೈತ್ರಿ ಸರ್ಕಾರ ೨೦೦೭-೦೮ ರ ಸಾಲಿನ ಬಜೆಟ್ ಅನ್ನು ಸನ್ಮಾನ್ಯ ಉಪ ಮುಖ್ಯಮಂತ್ರಿ ಹಾಗೂ ಹಣಕಾಸು ಸಚಿವರಾದ ಸನ್ಮಾನ್ಯ ಯಡಿಯೂರಪ್ಪರವರು ಮಂಡಿಸಿ, ಸುವರ್ಣ ಕರ್ನಾಟಕ ವರ್ಷದ ಮುಂದುವರೆದ ಭಾಗವಾಗಿ ಈ ವರ್ಷದಲ್ಲಿ ಅದ್ಭುತವಾದ ಬಜೆಟ್ ಅನ್ನು ಅವರು ಪ್ರಕಟಿಸಿ ಸನ್ಮಾನ್ಯ ಮುಖ್ಯಮಂತ್ರಿಗಳಾದ ಹೆಚ್. ಡಿ. ಕುಮಾರಸ್ವಾಮಿ ಹಾಗೂ ಉಪ ಮುಖ್ಯಮಂತ್ರಿಯಾದ ಯಡಿಯೂರಪ್ಪರವರಿಗೆ ಹೊಸ ಸುವರ್ಣ ಕಿರೀಟದ ಗರಿ ಮೂಡಿದೆ ಎಂದು ನಾನು ಭಾವಿಸುತ್ತೇನೆ. ಸರ್ವವ್ಯಾಪಿ, ಸರ್ವ ಸ್ಪರ್ಶಿಯಾದ ಉತ್ತಮ ಬಜೆಟ್ ಈ ಬಾರಿ ಮಂಡನೆಯಾಗಿದ್ದು, ಕಳೆದ ಬಾರಿಯ ಬಜೆಟ್ ಗಿಂತಲೂ ಈ ಬಾರಿಯ ಬಜೆಟ್ ಉತ್ತಮವೆಂಬ ಅಭಿಪ್ರಾಯವನ್ನು ಎಲ್ಲಾ ಜನರಲ್ಲೂ ಮೂಡಿಸು ವಂತಹ ಪ್ರಯತ್ನವಾಗಿದೆ. ಈಗಾಗಲೇ ಕೃಷಿ ಕಾರ್ಮಿಕರಿಗೆ, ನೇಕಾರರಿಗೆ, ಮೀನುಗಾರರಿಗೆ, ಕುಲಕಸುಬು ಮಾಡುವಂತಹ ದರ್ಜಿಗಳಿಗೆ ಕ್ಷೌರಿಗು ಕೂಡ ಸೌಲಭ್ಯ, ಸಬ್ಸಿಡಿ ಸೌಲಭ್ಯ ಒದಗಿಸಿಕೊಡುವುದರ ಜೊತೆಗೆ ಪ್ರೋತ್ಸಾಹ ದಾಯಕವಾದ ಕೆಲವು ಯೋಜನೆಗಳು ಬಂದು ಅವರಿಗೆ ಮುಟ್ಟಿದೆ. ಸುವರ್ಣ ಕಾಯಕ ಯೋಜನೆ ಮೂಲಕ ನಿರುದ್ಯೋಗಿಗಳಿಗೂ ಉದ್ಯೋಗ ಒದಗಿಸುವ ಅವಕಾಶ ಸನ್ಮಾನ್ಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರ ಕೈಗಾರಿಕೆ ಇಲಾಖೆಯಿಂದ ಸಿಕ್ಕಿರುವುದು ಬಹಳ ಸಂತೋಷವಾಗಿದೆ. ಈಗಾಗಲೇ

ಅಂಗವಿಕಲರಿಗೆ, ವಿಧವಾ ವೇತನ ಮತ್ತು ವೃದ್ಧಾಪ್ಯ ವೇತನದ ಹಣವನ್ನು ಸುಮಾರು ೪೦೦ ರೂಪಾಯಿಗಳಿಗೆ ಏರಿಸಿರುವುದು ಕೂಡ ಬಹಳ ಶ್ಲಾಘನೀಯವಾಗಿದೆ. ಇದರಿಂದ ಜನ ಸಾಮಾನ್ಯರಲ್ಲಿ ಬಹಳಷ್ಟು ಆತ್ಮವಿಶ್ವಾಸ ಹೆಚ್ಚಿಸಿದೆ. ಈಗಾಗಲೇ, ಶಾಸಕ ಮಿತ್ರರಾದ ಸನ್ಮಾನ್ಯ ಯೋಗೀಶ್ ಭಟ್ ರವರು ಕರಾವಳಿಯ ಬಗ್ಗೆ ತುಂಬಾ ವಿಶ್ಲೇಷಣೆ ಮಾಡಿದ್ದಾರೆ. ನಮ್ಮ ಕರಾವಳಿಯಲ್ಲಿ ವಿಪರೀತ ಮಳೆ ಇರುವುದರಿಂದ ಅಲ್ಲಿನ ಗ್ರಾಮೀಣ ರಸ್ತೆಗಳು, ಮೀನುಗಾರಿಕೆ ರಸ್ತೆಗಳು ತುಂಬಾ ಹಾಳಾಗುತ್ತಿವೆ. ಹಾಗಾಗಿ, ಅದಕ್ಕೂ ಹೆಚ್ಚು ಅನುದಾನ ಬೇಕೆಂಬ ಬೇಡಿಕೆಯನ್ನು ಈಗಾಗಲೇ ನಾವು ಇಟ್ಟಿದ್ದೇವೆ. ಇದಕ್ಕೆ ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಮೀನುಗಾರಿಕಾ ಸಚಿವರೆಲ್ಲರೂ ನಮ್ಮೊಂದಿಗೆ ಸ್ಪಂದಿಸಬೇಕೆಂದು ಕೇಳಿಕೊಳ್ಳುತ್ತಿದ್ದೇವೆ. ಅದರಲ್ಲೂ ಮುಖ್ಯವಾಗಿ ನಮ್ಮ ಕಾಪು ಕ್ಷೇತ್ರದಲ್ಲಿ ಹೆಜಮಾಡಿಯ ಬಂದರು ಮಂಗಳೂರು ಮತ್ತು ಮಲ್ಪೆ ಬಂದರುಗಳ ಮಧ್ಯ ಆಗಬೇಕೆಂಬ ಸಂಕಲ್ಪ ಹಲವಾರು ವರ್ಷಗಳಿಂದಲೂ ಇದೆ. ಈಗಾಗಲೇ ಕಳೆದ ೪-೫ ವರ್ಷಗಳಿಗೂ ಮುಂಚೆ ಅದಕ್ಕೆ ಒಂದೂವರೆ ಕೋಟಿ ರೂಪಾಯಿಗಳಷ್ಟು ಹಣ ಕೂಡ ಖರ್ಚಾಗಿದೆ. ಆ ಯೋಜನೆಯನ್ನು ಅನುಷ್ಠಾನಗೊಳಿಸಬೇಕಾಗಿದೆ. ಸನ್ಮಾನ್ಯ ಉಪಮುಖ್ಯಮಂತ್ರಿಯಾದಿಯಾಗಿ ಹಾಗೂ ಸಂಬಂಧಪಟ್ಟ ಎಲ್ಲಾ ಮಂತ್ರಿಗಳಲ್ಲು ಕೂಡ ನಾನು ಬೇಡಿಕೊಳ್ಳುತ್ತಿದ್ದೇನೆ. ಏಕೆಂದರೆ, ಈಗಾಗಲೆ, ಕಳೆದ ಬಾರಿ ಅನಿವಾರ್ಯ ಪರಿಸ್ಥಿತಿಯಲ್ಲಿ ಮೀನುಗಾರಿಕೆ ಮಾಡುತ್ತಿದ್ದಾಗ ೪-೫ ಬೋಟುಗಳಲ್ಲಿದ್ದ ಸುಮಾರು ೪-೫ ಜನರು ರೀರಿಕೊಂಡಿದ್ದಾರೆ. ಸುಮಾರು ೨೦೦ ಕ್ಕಿಂತಲೂ ಹೆಚ್ಚು ಬೋಟುಗಳು ಮಲ್ಪೆಯಲ್ಲಿ ಬಿರುಗಾಳಿಗೆ ಸಿಲುಕಿ ದುರಂತಕ್ಕೆ ಬಲಿಯಾಗಿವೆ. ಹಾಗಾಗಿ, ಹತ್ತಿರದಲ್ಲಿ ಯಾವುದಾದರೂ ಬಂದರು ಇದ್ದರೆ, ಹೆಜಮಾಡಿಯಂತಹ ಪ್ರದೇಶ ಮಂಗಳೂರು ಮತ್ತು ಮಲ್ಪೆಯ ಮಧ್ಯಭಾಗದಲ್ಲಿದೆ. ನನ್ನ ಕಾಪು ಕ್ಷೇತ್ರ ಅಲ್ಲಿ ಬರುವುದರಿಂದ ಅನದನು ಅಭಿವೃದ್ಧಿಪಡಿಸಬೇಕು. ಆ ಮೀನುಗಾರಿಕೆ ಬಂದರನ್ನು improve ಮಾಡಿದರೆ, ಎಲ್ಲರಿಗೂ ಇದರಿಂದ ಅನುಕೂಲವಾಗುತ್ತದೆ. ನಾನು ಕೂಡ ಮಾನ್ಯ ಉಪಮುಖ್ಯಮಂತ್ರಗಳಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಈಗಾಗಲೇ ನಮ್ಮ

ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆ ರಸ್ತೆಗಳಿಗೆ ಸಾಕಷ್ಟು ಅನುದಾನ ಬರುತ್ತಿದೆ, ಆದರೆ, ಗ್ರಾಮೀಣ ರಸ್ತೆಗಳಿಗೆ ಇನ್ನಷ್ಟು ಸ್ವಲ್ಪ ಅನುದಾನ ಬಂದರೆ, ನಮ್ಮ ಗ್ರಾಮೀಣ ರಸ್ತೆಗಳನು ನಾವು ಇನ್ನಷ್ಟು ಉತ್ತಮಗೊಳಿಸುವುದಕ್ಕೆ ಸಾಧ್ಯವಿದೆ. ಆ ದೃಷ್ಟಿಯಿಂದ ಕೂಡ ನಮಗೆ ಸಹಕಾರಿಯಾಗಬೇಕು. ಈಗಾಗಲೇ ಸಣ್ಣ ನೀರಾವರಿ ಇಲಾಖೆಯಿಂದ ಸನ್ಮಾನ್ಯ ಯಡಿಯೂರಪ್ಪನವರು ಸಾಕಷ್ಟು ಕೆಲಸ-ಕಾರ್ಯಗಳಿಗೆ ಚಾಲನೆ ಕೊಟ್ಟಿದ್ದಾರೆ. ಬಹಳ ಕೆಲಸಗಳು ಕೂಡ ಆಗುತ್ತಿದೆ. ಅದನ್ನು ಮುಂದುವರೆಸಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಮತ್ತೆ ಪ್ರವಾಸೋದ್ಯಮ ಇಲಾಖೆಯಿಂದ ಈಗಾಗಲೇ ನಮ್ಮ ಕಾಪು ಕ್ಷೇತ್ರದಲ್ಲಿ ಸುಮಾರು ೬೦-೭೦ ವರ್ಷಗಳ ಹಿಂದೆ ಬ್ರಿಟಿಷರು ಕಟ್ಟಿದಂತಹ ಒಂದು ದೀಪ ಸ್ತಂಭವಿದೆ. ಅದು ಪ್ರವಾಸೋದ್ಯಮವನ್ನು ಬಹಳವಾಗಿ ಆಕರ್ಷಿಸುತ್ತಿದೆ. ಅದನ್ನು improvement ಮಾಡಬೇಕಾಗಿದೆ. ಆ ದೃಷ್ಟಿಯಿಂದ ಕುಡ ಪ್ರವಾಸೋದ್ಯಮಕ್ಕೂ ಉತ್ತಮವಾದ ಸಹಕಾರ ಈ ಬಜೆಟ್‌ನಲ್ಲಿರುವುದ ರಿಂದ ನಮಗೆ ಈಗಾಗಲೇ ಬಂದಿದೆ. ಅದನ್ನು ಯೋಗ್ಯವಾದ ರೀತಿಯಲ್ಲಿ ಅನುಷ್ಠಾನವಾಗುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಅದೇ ರೀತಿ ಹೆಜಮಾಡಿ ಬಂದರಿನ ವ್ಯಾಪ್ತಿ ಕಾಪು ಕ್ಷೇತ್ರದ ಸುಮಾರು ೨೫ರಿಂದ ೩೦ ಸಾವಿರದಷ್ಟು ಜನರು ಅದನ್ನೇ ನೇರವಾಗಿ ನಂಬಿಕೊಂಡಿರುವಂತಹ ಬಂದರು ಆಗಿದೆ. ಅದನ್ನು ಕೂಡ ಅಭಿವೃದ್ಧಿಪಡಿಸಬೇಕು. ಜೊತೆಗೆ, ಈಗಾಗಲೇ ಬಜೆಟ್ ನ್ಲಲಿ ಪ್ರಕಟಿಸಿದಂತೆ ವಿಮಾನ ನಿಲ್ದಾಣಗಳು ಹೆಚ್ಚೆಚ್ಚು ಆಗುತ್ತಿವೆ. ಸಂಪರ್ಕ ಮಾಧ್ಯಮ ಒಳ್ಳೆಯ ರೀತಿಯಲ್ಲಿ ಬರುತ್ತಿದೆ. ಅದೇ ರೀತಿ ಅಲ್ಲಲ್ಲಿ ಮೀನುಗಾರಿಕಾ ಬಂದರುಗಳನ್ನು ಮತ್ತು ಬಂದರುಗಳಲ್ಲಿ ಹೂಳೆತ್ತುವ dredging ವ್ಯವಸ್ಥೆಯನ್ನು ಕೂಡ ಮಾಡಬೇಕಾಗಿದೆ. ಅದೇ ರೀತಿ ಮೀನುಗಾರಿಕೆಗೆ ಸಂಬಂಧಿಸಿದಂತೆ ಮಾರುಕಟ್ಟೆ ವ್ಯವಸ್ಥೆಗು ಕೂಡ ಈಗಾಗಲೇ ಮಾರುಕಟ್ಟೆ ಸಚಿವರಿಂದ ಭರವಸೆ ಸಿಕ್ಕಿದೆ. ಅದನ್ನು ಇನ್ನಷ್ಟು ವೃದ್ಧಿಸಿಕೊಂಡು ಮಹಿಳಾ ಮೀನುಗಾರಿಕೆಗು ಕೂಡ ಯೋಗ್ಯವಾದ ಒಂದು ಮೀನು ಮಾರಾಟ ವ್ಯವಸ್ಥೆಗೆ ಅನುಕೂಲ ವಾಗಬೇಕು. Insurance ಬಗ್ಗೆ ಹೇಳುವುದಾದರೆ ಈಗಾಗಲೇ ಕಳೆದ

ಬಾರಿಗಿಂತಲೂ ಈ ಬಾರಿ ನಮಗೆ ಜಾಸ್ತಿ ಕೊಟ್ಟಿದ್ದಾರೆ. ಅಪಘಾತವಾದಾಗ, ಅಂತಹವರಿಗೆ ನೇರವಾಗಿ ಸಾಲ ಸೌಲಭ್ಯ ಸಿಗುತ್ತದೆ ಮತ್ತು ಮತ್ಸ್ಯಾಶ್ರಯ ಯೋಜನೆಯಲ್ಲಿ ನಮಗೆ ಈಗಾಲೇ ೪೦,೦೦೦ ರೂಪಾಯಿಗಳು ಮಂಜೂರಾಗುತ್ತಿತ್ತು. ಕಳೆದ ೨-೩ ವರ್ಷಗಳಿಗಿಂತ ಮೊದಲು ಈ ಮತ್ಸ್ಯಾಶ್ರಯ ಯೋಜನೆಯ ಸೌಲಭ್ಯಗಳು ಸರಿಯಾಗಿ ನಮಗೆ ಸಿಗುತ್ತಿರಲಿಲ್ಲ. ಅಂತಹವರು ಅರ್ಜಿ ಹಾಕಿದರು ಕೂಡ ಆ ಸೌಲಭ್ಯ ಸಿಗುವಂತಾಗಬೇಕೆಂದು ಈ ಸಂದರ್ಭದಲ್ಲಿ ಆಗ್ರಹಪಡಿಸುತ್ತಿದ್ದೇನೆ. ಅದೇ ರೀತಿ ನಿಮ್ಮ ಕ್ರೀಡಾಂಗಣ ವ್ಯವಸ್ಥೆಯಲ್ಲು ಕೂಡ ಕ್ರೀಡಾಪಟುಗಳಿಗೆ ಯೋಗ್ಯವಾದ ಕ್ರೀಡಾಂಗಣ ಕೆಲವು ಕಡೆ ಈಗಾಗಲೇ ಸಿಕ್ಕಿದರು ಕೂಡ ಇನ್ನಷ್ಟು ಕ್ರೀಡಾಂಗಣವನ್ನು ಗ್ರಾಮಾಂತರ ಪ್ರದೇಶಗಳಿಗೂ ಕೊಡುವಂತಹ ವ್ಯವಸ್ಥೆಯಾಗಬೇಕು. ಶಾಲೆಗಳಲ್ಲಿ ಕೂಡ ಮಕ್ಕಳಿಗೆ ಪಾಠದ ಜೊತೆಗೆ ಅವರುಗಳು ಕ್ರೀಡಾಪಟುಗಳಾಗಿದ್ದಲ್ಲಿ, ಅವರುಗಳಿಗೆ ಶೇಕಡ ೫ರಷ್ಟಾದರೂ grace marks ಸಿಕ್ಕಿದರೆ ಇನ್ನಷ್ಟು ಪ್ರೋತ್ಸಾಹ ಕೊಟ್ಟಂತಾಗುತ್ತದೆ. ಅದೇ ರೀತಿಯಲ್ಲಿ ನಮ್ಮಲ್ಲಿ ನಾಗಾರ್ಜುನ ಉಷ್ಣ ವಿದ್ಯುತ್ ಸ್ಥಾವರ ಘಟಕ ಬರುತ್ತಿದೆ. ಅದನ್ನು ಕೈಬಿಟ್ಟು ಅನಿಲ ಆಧಾರಿತವಾಗಿ ಬರುವಂತಹ ಯೋಜನೆಯನ್ನು ನಾವು ಸ್ವಾಗತಿಸುತ್ತಿದ್ದೇವೆ. ಈಗಾಗಲೇ ಗಾಳಿ ಯಂತ್ರ ತಯಾರಿಸುವ ಪುರ್ಝಲಾನ್ ಸಂಸ್ಥೆಯೊಂದು ನಮ್ಮಲ್ಲಿಗೆ ಬರುತ್ತಿದೆ. ಅದಕ್ಕೆ ಈಗಾಗಲೇ ನಮ್ಮ ಗ್ರಾಮೀಣ ಜನರು ಸ್ವಾಗತ ಕೂಡ ಮಾಡಿದ್ದಾರೆ. ಅದೇ ರೀತಿ Petroleum and Natural Gas Commission ರವರಿಂದ ತೈಲ ಸಂಸ್ಕರಣಾ ಘಟಕದ ಸಂಸ್ಥೆಯೊಂದು ನಮ್ಮ ದೇಶಕ್ಕೆ ೧೫ ದಿವಸಗಳಿಗೆ ಬೇಕಾದಷ್ಟು crude oil ಅನ್ನು storage ಮಾಡುವಂತಹ ವ್ಯವಸ್ಥೆಗೆ ನಮ್ಮ ಕಾಪು ಕ್ಷೇತ್ರದ ಪಾದೂರಿನಲ್ಲಿ ಜಾಗ ಸರ್ವೆ ಆಗಿದೆ. ಅದಕ್ಕೆ ಕೂಡ ನಮ್ಮ ಎಲ್ಲಾ ಜನರ ಸಹಕಾರ, ಬೆಂಬಲವನ್ನು ಈಗಾಗಲೇ ಅಲ್ಲಿ ಕ್ರೋಢೀಕರಿಸಿಕೊಂಡು, ಅದು ನಮ್ಮ ರಕ್ಷಣಾ ಖಾತೆಯ ಇಲಾಖೆಯಿಂದ ಬರುತ್ತಿದೆ. ಅದಕ್ಕೂ ಕೂಡ ನಾವು ಸ್ವಾಗತ ಮಾಡಿದ್ದೇವೆ. ಕಾಪು ಕ್ಷೇತ್ರದ ಆಸ್ಪತ್ರೆಗಳ ಬಗ್ಗೆ ಈಗಾಗಲೇ ನಮ್ಮ ಶಿರ್ವ ಸಮುದಾಯ ಆಸ್ಪತ್ರೆಯನ್ನು upgrade ಮಾಡಿ ಉತ್ತಮಪಡಿಸುವ ಬಗ್ಗೆ ನಮ್ಮ ಆರೋಗ್ಯ ಸಚಿವರು ಸಹಕಾರ ಕೊಟ್ಟಿದ್ದಾರೆ. ಆದರೆ, ಕಾಪು ಮತ್ತು ಪಡುಬಿದ್ರೆಯ

ಪ್ರಮುಖ ಆರೋಗ್ಯ ಕೇಂದ್ರವನ್ನು ಕೂಡ ಇನ್ನಷ್ಟು ಒಳ್ಳೆಯ ಮಟ್ಟಕ್ಕೆ ತರಬೇಕೆಂಬ ಪ್ರಯತ್ನವಾಗುತ್ತಿದೆ. ಅದೇ ರೀತಿ ಕೆಲವು ಕಡೆ ವಾಹನ ಸೌಲಭ್ಯಗಳ ಕೊರತೆಯೂ ಇದೆ. ೨೦೦೭-೦೮ರ ಬಜೆಟ್ ಬಗ್ಗೆ ಮಾತನಾಡಲು ಅವಕಾಶ ಕೊಟಟ ಸನ್ಮಾನ್ಯ ಅಧ್ಯಕ್ಷರಿಗೆ ಹಾಗು ಉತ್ತಮ ಬಜೆಟ್ ನೀಡಿದ ಸಕಾರಕ್ಕೆ ಕೃತಜ್ಞತೆ ಹಾಗು ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಅಧ್ಯಕ್ಷರು : ಯಾರಾದರು ಮಾತನಾಡುತವವರಿದ್ದೀರಾ?

ಶ್ರೀ ವಿಶ್ವೇಶ್ವರ ಹಗಡೆ ಕಾಗೇರಿ : ನಾನು ಮಾತನಾಡುತ್ತೇನೆ. ಆದರೆ, ನಾಳೆ ಬೆಳಿಗ್ಗೆ ಮಾತನಾಡುತ್ತೇನೆ.

ಶ್ರೀ ಎ.ಟಿ.ರಾಮಸ್ವಾಮಿ : ಬಜೆಟ್ ಮೇಲಿನ ಚರ್ಚೆಯನ್ನು ಈಗಲೇ ಮುಗಿಸುವುದಾದರೆ ಈಗಲೇ ಮಾತನಾಡುತ್ತೇವೆ. ನಾಳೆಗೆ ಚರ್ಚೆ ಮುಂದುವರೆಯುತ್ತದೆಂದರೆ ನಮಗೆಲ್ಲ ಒಂದು ಹತ್ತು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು : ನಾಳೆ ಖಾತರಿ ಹೇಳಲು ಆಗುವುದಿಲ್ಲ.

ಶ್ರೀ ಎ.ಟಿ.ರಾಮಸ್ವಾಮಿ : ಇವತ್ತೇ ಚರ್ಚೆಮಾಡಿ ಮುಗಿಸುವುದಾದರೆ ತೊಂದರೆ ಇಲ್ಲ. ಚರ್ಚೆ ನಾಳೆಗೆ ಸ್ವಲ್ಪ ಮುಂದುವರೆಯುತ್ತದೆಂದರೆ ನಮಗೆ ಹತ್ತತ್ತು ನಿಮಿಷ ಕೊಡಿ ಸಾಕು. ಅವರೂ ಹತ್ತು ನಿಮಿಷ ಕೇಳುತ್ತಿದ್ದಾರೆ, ನಮಗೂ ಹತ್ತು ನಿಮಿಷ ಕೊಡಿ.

ಅಧ್ಯಕ್ಷರು : ನಾಳೆ ಹೇಗಾಗುತ್ತದೋ ಹೇಳಲು ಬರುವುದಿಲ್ಲ. ನಾನು ನಾಳೆ ಕೊಡುವ ಬಗ್ಗೆ ಖಾತ್ರಿ ಮಾಡಲು ಸಾಧ್ಯವಾಗುವುದಿಲ್ಲ. ಅವಕಾಶ ಸಿಕ್ಕಿದರೆ ಕೊಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ನಾಳೆ ೧೨ ಗಂಟೆಗೆ ಸರ್ಕರದಿಂದ ಉತ್ತರವಿದೆ. ಆದ್ದರಿಂದ ೩-೪ ಮಂದಿಗೆ ಅವಕಾಶ ಕೊಡಿ.

ಅಧ್ಯಕ್ಷರು : ನಾಳೆಯ ಪರಿಸ್ಥಿತಿ ಹೇಗೆ ಬರುತ್ತದೋ ನೋಡೋಣ.

ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಧಾರ್ಮಿಕದತ್ತಿ ಇಲಾಖೆಯ ಸಚಿವರು ಬಂದಿದ್ದಾರೆ. ಅವರು ನಿನ್ನೆ ಇರಲಿಲ್ಲ. ದೇವಸ್ಥಾನಕ್ಕೆ ಬಿಡುಗಡೆ ಮಾಡಿರುವ ದುಡ್ಡನ್ನು ವಾಪಸ್ ತೆಗೆದುಕೊಳ್ಳಲು ಆದೇಶ ಮಾಡಿರುವ ಬಗ್ಗೆ ನಿನ್ನೆ ಶೂನ್ಯ ವೇಳೆಯಲ್ಲಿ ಚರ್ಚೆಯಾಯಿತು. ತಾವು ಇರಲಿಲ್ಲ. ತಮ್ಮನ್ನು ಕೇಳಿ ಅದನ್ನು ಮಾಡುತ್ತೇವೆಂದು ಮಾನ್ಯ ಜಗದೀಶ್ ಶೆಟ್ಟರ್ ರವರು ಹೇಳಿದ್ದರು. ಆದ್ದರಿಂದ ಆ ಹಣವನ್ನು ದಯವಿಟ್ಟು ವಾಪಸ್ ತೆಗೆದುಕೊಳ್ಳಬಾರದು.

ಶ್ರೀ ವಿಶ್ವೇಶ್ವರ ಹಗಡೆ ಕಾಗೇರಿ : ಮಾನ್ಯ ಅಧ್ಯಕರೆ, ಬಜೆಟ್ ಚರ್ಚೆ ಪೂರ್ಣವಾಗದೇ ಇರುವುದರಿಂದ, ನಾಳೆಯೂ ಚರ್ಚೆ ಮುಂದುವರೆಯುತ್ತಿರುವುದರಿಂದ ನಾಳೆ ನಮಗೆ ಅವಕಾಶ ಕೊಡಿ.

ಅಧ್ಯಕ್ಷರು : ಮುಂದುವರೆಯುತ್ತದೆ, ಆದರೆ, ನಾಳೆ ಪರಿಸ್ಥಿತಿ ಹೇಗೆ ಬರುತ್ತದೆಂದು ಹೇಳಲು ಬರುವುದಿಲ್ಲ. ನೋಡೋಣ.

ಶ್ರೀ ಎ.ಟಿ. ರಾಮಸ್ವಾಮಿ : ನಾಳೆ ಹತ್ತತ್ತು ನಿಮಿಷ ಕೊಡಿ.

ಶ್ರೀ ಹೆಚ್. ಆಂಜನೆಯ : ಯಾರಾದರೂ ಮಾತನಾಡುವವರಿದ್ದೀರಾ ಎಂದು ತಾವು ಕೇಳುತ್ತಿದ್ದೀರಿ, ಎಂಥ ಒಳ್ಳೆಯ ಕಾಲ ಬಂತು !.

ಅಧ್ಯಕ್ಷರು : ಇನ್ನೇನು ಮಾಡುವುದು. ಮಾತನಾಡುವುದಕ್ಕೆ ಇಲ್ಲಿ ಹೆಸರು ಕೊಟ್ಟಿದ್ದಾರೆ. ಕರೆದರೆ ಕೆಲವರು ಇಲ್ಲ. ಇನ್ನೇನು ಮಾಡುವುದು? ಯಾರಾದರು ಮಾತನಾಡುವವರಿದ್ದೀರ ಎಂದು ಕೇಳಬೇಕಾಗುತ್ತದೆ.

ಶ್ರೀ ಹೆಚ್. ಆಂಜನೆಯ : ಯಾರಾದರೂ ಮಾತನಾಡುವವರಿದ್ದೀರಾ ಎಂದು ತಾವು ಕೇಳುತ್ತಿದ್ದೀರಿ. ಎಂಥ ಒಳ್ಳೆಯ ಕಾಲ ಬಂತು!

ಅಧ್ಯಕ್ಷರು : ಇನ್ನೇನು ಮಾಡುವುದು. ಮಾತನಾಡುವುದಕ್ಕೆ ಇಲ್ಲಿ ಹೆಸರು ಕೊಟ್ಟಿದ್ದಾರೆ. ಕರೆದರೆ ಕೆಲವರು ಇಲ್ಲ. ಇನ್ನೇನು ಮಾಡುವುದು? ಯಾರಾದರು ಮಾತನಾಡುವವರಿದ್ದೀರ ಎಂದು ಕೇಳಬೇಕಾಗುತ್ತದೆ.

ಶ್ರೀ ಹೆಚ್. ಆಂಜನೇಯ: ಪತ್ರಕರ್ತರಿಲ್ಲ. ಫೋಟೊ ಸೆರೆಹಿಡಿಯುವ ಕ್ಯಾಮೆರಾಮೆನೆಗಳೂ ಇಲ್ಲ.

ಅಧ್ಯಕ್ಷರು : ಮಾನ್ಯ ಆಂಜನೇಯರವರೆ, ತಾವು ಮಾತನಾಡಿದ್ದೀರಲ್ಲ, ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ : ಕೋರಂ ಬೇರೆ ಇಲ್ಲ.

ಅಧ್ಯಕ್ಷರು : ಒಂದು ಸಲ ಸಭೆ ಪ್ರಾರಂಭವಾದರೆ ಮಧ್ಯದಲ್ಲಿ ಕೋರಂ ಪ್ರಶ್ನೆ ಬರುವುದಿಲ್ಲ. ಈಗ ಸಭೆಯು ಮುಕ್ತಾಯವಾಗಿ ನಾಳೆ ಬೆಳಿಗ್ಗೆ ೯ ಗಂಟೆಗೆ ಸೇರುವುದು.

(ಸದನವು ರಾತ್ರಿ ೯ ಗಂಟೆ ೨೫ ನಿಮಿಷಕ್ಕೆ ಮುಕ್ತಾಯಗೊಂಡು ಪುನಹ ದಿನಾಂಕ ೩೦ನೇ ಮಾರ್ಚ್ ಮಾಹೆ ೨೦೦೭ರ ಶುಕ್ರವಾರದೆಂದು ಬೆಳಿಗ್ಗೆ ೯ ಗಂಟೆಗೆ ಸೇರಲು ನಿಶ್ಚಯಿಸಿತು).

ಕಾ.ಸೂ.. 03243 - ದಿನಾಂಕ 21-09-2013, 350 ಪುಸ್ತಕಗಳು, ಸ.ಕೇ.ಮು., ಘಟಕ-2 ಬೆಂಗಳೂರು-59